# ಬಾದಾಮಿ ಬನಶಂಕರಿ : ಚಾರಿತ್ರಿಕ ಅಧ್ಯಯನ

ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಮಹಾಪ್ರಬಂಧ





ಸಂಶೋಧಕರು
…ತಿ ಉಮಾದೇವಿ

ಮಾರ್ಗದರ್ಶಕರು
ಡಾ. ವಾಸುದೇವ ಬಡಿಗೇರ
ಸಹ ಪ್ರಾಧ್ಯಾಪಕರು



ಸಮಾಜ ವಿಜ್ಞಾನಗಳ ನಿಕಾಯ
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬
೨೦೦

# ಬಾದಾಮಿ ಬನಶಂಕರಿ : ಚಾರಿತ್ರಿಕ ಅಧ್ಯಯನ

ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಮಹಾಪ್ರಬಂಧ


ಸಂಶೋಧಕರು
**ಶ್ರೀಮತಿ ಉಮಾದೇವಿ**

ಮಾರ್ಗದರ್ಶಕರು
**ಡಾ. ವಾಸುದೇವ ಬಡಿಗೇರ**
ಸಹ ಪ್ರಾಧ್ಯಾಪಕರು
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ



ಸಮಾಜ ವಿಜ್ಞಾನಗಳ ನಿಕಾಯ
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬
೨೦೧೨

# ಪ್ರಮಾಣ ಪತ್ರ

**"ಬಾದಾಮಿ ಬನಶಂಕರಿ : ಚಾರಿತ್ರಿಕ ಅಧ್ಯಯನ"** ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು **ಡಾ. ವಾಸುದೇವ ಬಡಿಗೇರ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯ, ಸಮಾಜ ವಿಜ್ಞಾನಗಳ ನಿಕಾಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಸಲ್ಲಿಸಲಾಗಿದೆ.

ಪ್ರಸ್ತುತ ಈ ಮಹಾಪ್ರಬಂಧದ ವಿಷಯ ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿ ಅಥವಾ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಪ್ರಮಾಣಿಕರಿಸುತ್ತೇನೆ.

Umadevi

ದಿನಾಂಕ : 26/09/2012
ಸ್ಥಳ : ವಿದ್ಯಾರಣ್ಯ

(ಶ್ರೀಮತಿ ಉಮಾದೇವಿ)

ಸಹಾಯಕ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಬಾದಾಮಿ

# ದೃಢೀಕರಣ ಪತ್ರ

**ಶ್ರೀಮತಿ ಉಮಾದೇವಿ** ಇವರು **"ಬಾದಾಮಿ ಬನಶಂಕರಿ : ಚಾರಿತ್ರಿಕ ಅಧ್ಯಯನ"** ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಕನ್ನಡ ವಿಶ್ವವಿದ್ಯಾಲಯ, ಸಮಾಜ ವಿಜ್ಞಾನಗಳ ನಿಕಾಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಪಿಎಚ್.ಡಿ ಪದವಿಗಾಗಿ ಈ ಮಹಾಪ್ರಬಂಧವನ್ನು ಸಲ್ಲಿಸಲಾಗಿದೆ.

ಪ್ರಸ್ತುತ ಈ ಮಹಾಪ್ರಬಂಧದ ವಿಷಯ ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿ ಅಥವಾ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

**ದಿನಾಂಕ :** 26-9-2012

**ಸ್ಥಳ : ವಿದ್ಯಾರಣ್ಯ**

**(ಡಾ. ವಾಸುದೇವ ಬಡಿಗೇರ)**

ಮಾರ್ಗದರ್ಶಕರು ಹಾಗೂ
ಸಹ ಪ್ರಾಧ್ಯಾಪಕರು
ಪ್ರಾ.ಇ. ಮತ್ತು ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

# ಪರಿವಿಡಿ

# ಅಧ್ಯಾಯ : ಒಂದು

## ಪ್ರಸ್ತಾವನೆ

### ೧. ೧. ಅಧ್ಯಯನದ ಉದ್ದೇಶ, ವ್ಯಾಪ್ತಿ, ಮಹತ್ವ, ವಿಧಾನ ಮತ್ತು ಸ್ವರೂಪ

ಸಮಾಜದಲ್ಲಿ ಜನರು ತಮಗೆ ಒದಗಿಬರುವ ಕಷ್ಟಕಾರ್ಪಣ್ಯಗಳನ್ನು ಬಗೆಹರಿಸಿಕೊಳ್ಳಲು ತಾವು ನಂಬಿಕೊಂಡುಬಂದ ದೇವಾನುದೇವತೆಗಳಿಗೆ ಹಲವು ವಿಧಗಳಲ್ಲಿ ನಡೆದುಕೊಳ್ಳುತ್ತಾರೆ. ಭೂಮಿ, ಉಸಿರಾಡುವ ಗಾಳಿ, ಕುಡಿಯುವ ನೀರು, ಉರಿಯುವ ಬೆಂಕಿ, ಸುತ್ತಲಿರುವ ಸಸ್ಯ ಮತ್ತು ಪ್ರಾಣಿಗಳು, ಮೇಲಿರುವ ಸೂರ್ಯ, ಚಂದ್ರ, ನಕ್ಷತ್ರಗಳು ಇವೆಲ್ಲವೂ ಸೇರಿ ಒಂದು ಜಗತ್ತು. ಇದು ಯಾವಾಗ ಹುಟ್ಟಿತು? ಹೇಗೆ ಹುಟ್ಟಿತು? ಹುಟ್ಟಿದಾಗ ಅದು ಹೇಗೆ ಇತ್ತು? ಅಥವಾ ನಾವು ಹುಟ್ಟಿದ ಬಳಿಕ ಬೆಳೆಯುತ್ತಾ ಬಂದಂತೆ ಅದು ಸೂಕ್ಷ್ಮ ರೂಪದಲ್ಲಿ ಹುಟ್ಟಿ ಅನಂತರ ಈಗಿರುವ ಸ್ಥಿತಿ ಬೆಳೆದದ್ದೇ? ಎಂಬ ಪ್ರಶ್ನೆಗಳು ಎಲ್ಲಾ ಕಾಲಘಟ್ಟಗಳಲ್ಲಿಯೂ ಜನರನ್ನು ಕಾಡುತ್ತಿದ್ದ ಪ್ರಶ್ನೆಗಳಾಗಿವೆ.

ಹಾಗೆಯೇ ಒಂದು ಆರಾಧನಾ ಸಂಪ್ರದಾಯ ಯಾವಾಗ ಹುಟ್ಟಿತು? ಹೇಗೆ ಹುಟ್ಟಿತು? ಹೇಗೆ ಇದು ಸಮಾಜದ ಮೇಲೆ ತನ್ನ ಗಾಢವಾದ ಪ್ರಭಾವ ಪಡೆದುಕೊಂಡಿತೆಂಬುದು ಕುತೂಹಲಕಾರಿಯಾದ ಪ್ರಶ್ನೆಗಳಾಗಿ ಉಳಿದಿವೆ. ಸಮಾಜದಲ್ಲಿ ಬಳಕೆಯಲ್ಲಿರುವ ದೇವತಾರಾಧನೆಗೂ ಮನುಷ್ಯನಿಗೂ ಇರುವ ಸಂಬಂಧವನ್ನು ಪ್ರಸ್ತುತ ಪ್ರಬಂಧದಲ್ಲಿ ಚರ್ಚಿಸಲಾಗಿದೆ. ದೇವತಾರಾಧನೆಯಿಂದ ಸಮಾಜದಲ್ಲಿನ ಜನಪದರ ಮಾನಸಿಕ ತುಮುಲಗಳನ್ನು ಕಂಡುಕೊಳ್ಳಬಹುದು. ಜೊತೆಗೆ ಸಾಂಸ್ಕೃತಿಕವಾಗಿ ಜನಪದರ ಆಲೋಚನಾ ಕ್ರಮಗಳನ್ನು ಅವಲೋಕಿಸಿಕೊಳ್ಳಬಹುದು.

ಜನಸಾಮಾನ್ಯರು ಪ್ರತಿನಿತ್ಯ ಯಾವುದೇ ಕೆಲಸ ಮಾಡಬೇಕಾದರೂ ದೇವತೆಯ ಪ್ರಸಾದವನ್ನು ತೆಗೆದುಕೊಳ್ಳುವುದು ರೂಢಿಯಲ್ಲಿದೆ. ಆ ಪ್ರಸಾದದ ಮೂಲಕ ದೇವತೆಯ ಅನುಮತಿಯನ್ನು ಪಡೆಯುತ್ತಾರೆ. ಆ ಪ್ರಸಾದ ದುಡಿಮೆ ಮಾಡಲು ಶಕ್ತಿಯನ್ನೊದಗಿಸುತ್ತದೆಂಬ ಭಾವನೆ ಲೋಕರೂಢಿಯಲ್ಲಿರುವುದು ಕಾಣಿಸುತ್ತದೆ. ತಮ್ಮ ತಮ್ಮ ದುಡಿಮೆಯ ಸಂದರ್ಭದಲ್ಲಿ ಯಾವುದೇ ತೊಂದರೆಗಳಾಗದೇ ಇರಲು ತಾವು ನಂಬಿಕೊಂಡ ದೇವತೆಯನ್ನು ಸ್ಮರಿಸುತ್ತಾರೆ.

ಅಂತಹ ದೇವತೆಯರಲ್ಲಿ ಬನಶಂಕರಿಯೂ ಕೂಡ ಒಬ್ಬಳಾಗಿದ್ದಾಳೆ. ಜನಪದರು ನಿರ್ವಹಿಸುವ ಯಾವುದೇ ಮುಖ್ಯ ವ್ಯವಹಾರದಲ್ಲಿ ತಾವು ನಂಬಿಕೊಂಡು ಬಂದ ದೈವವೇ ಸಾಕ್ಷಿಯಾಗಿ ನಿಲ್ಲುತ್ತದೆ. ಒಂದು ಗ್ರಾಮದ ಎಲ್ಲಾ ಜಾತಿ ಸಮುದಾಯದವರ ನಡುವೆ ಪರಸ್ಪರ ಪ್ರೀತಿ, ಸೌಹಾರ್ದತೆ, ಭ್ರಾತೃತ್ವ, ಭಾವೈಕ್ಯತೆಯ ಬೆನ್ನೆಲುಬಾಗಿರುವ ಈ ಬನಶಂಕರಿ ಇಡೀ ಗ್ರಾಮ ಸಮುದಾಯವನ್ನು ನಿಯಂತ್ರಿಸುವ ಸಾಧನವಾಗಿ ಪ್ರಕಟವಾಗುತ್ತದೆ.

ಜನಪದರ ಬದುಕಿನಲ್ಲಿ ದೈವಗಳ ಪಾತ್ರ ಮಹತ್ವವಾದುದು. ಜನಸಾಮಾನ್ಯರ ಎಲ್ಲಾ ರೀತಿಯ ವ್ಯವಹಾರಗಳಲ್ಲಿ ದೇವರುಗಳು ಒಂದಲ್ಲ ಒಂದು ರೀತಿಯ ಪ್ರವೇಶವನ್ನು ಪಡೆದೇ ಇರುತ್ತವೆ. ಊರಿನ ಒಳಿತು, ಕೆಡುಕುಗಳು, ತಾವು ಆಚರಿಸುವ ಹಬ್ಬ, ಹುಣ್ಣಿಮೆಗಳು, ಅನುಸರಿಸುವ ರೀತಿ ನೀತಿಗಳನ್ನು ಅವಲಂಬಿಸಿರುತ್ತೆಂದೂ, ತಮ್ಮ ಪಾಪ – ಪುಣ್ಯಗಳನ್ನು, ನಡೆ ನುಡಿಗಳನ್ನು ಗ್ರಾಮದೇವರು ಸದಾ ನೋಡುತ್ತಿರುತ್ತವೆಂದು ನಂಬಿದ್ದಾರೆ. ನಂಬಿಕೆಯ ಬೇರು ಜೀವನದ ಎಲ್ಲಾ ಕ್ಷೇತ್ರದಲ್ಲೂ ಬಲವಾಗಿ ಆವರಿಸಿರುತ್ತದೆ. ಊರಿನಲ್ಲಿ ದನಕರುಗಳಿಗೆ, ಮಕ್ಕಳಿಗೆ, ಕೃಷಿಗೆ ಯಾವುದಾದರೂ ರೋಗ ಸಂಭವಿಸಿದರೆ, ಆಕಸ್ಮಾತ್ ಸಾವು, ನೋವುಗಳುಂಟಾದರೆ ಅವೆಲ್ಲವೂ ತಾವು ಆಚರಿಸದಿರುವ ಯಾವುದೋ ದೇವರ ಕಾಟವೆಂದು ನಂಬಿ ಅವುಗಳ ಮೊರೆ ಹೋಗುತ್ತಾರೆ. ಕರ್ನಾಟಕದ ಹಲವಾರು ಭಾಗಗಳಲ್ಲಿ ಬನದಬ್ಬೆ, ತೋಟದಮ್ಮ, ಈಚಲ ಮರದವ್ವ, ಲಕ್ಕವ್ವ (ಸೀಮೆ ದೇವತೆ), ಮರಗಮ್ಮ, ಕಾಳಮ್ಮ, ವನದುರ್ಗ, ಬನಶಂಕರಿ, ಶಾಖಂಭರಿ ಇಂತಹ ಹತ್ತು ಹಲವಾರು ಹೆಸರುಗಳಿಂದ ಆರಾಧನೆಗೊಳ್ಳುತ್ತಿರುವುದು ಕಂಡುಬರುತ್ತದೆ. ಅವುಗಳು ಜನಪದರ ಮೇಲೆ ಭಾವನಾತ್ಮಕವಾದ ಪ್ರಭಾವ ಬೀರಿವೆ. ಇಂಥ ಶಕ್ತಿದೇವತೆಗಳಲ್ಲಿ ಪ್ರಭಲ ಶಕ್ತಿಯನ್ನು ಪಡೆದುಕೊಂಡಿರುವ ಬನಶಂಕರಿಯು ಉತ್ತರ ಕರ್ನಾಟಕ ಭಾಗದಲ್ಲಿ ಹೆಚ್ಚು ಹೆಸರುವಾಸಿಯಾಗಿದ್ದಾಳೆ.

ಮಾನವರು ತಮಗೆ ಒದಗಿಬರುವ ಹಲವಾರು ತೊಂದರೆಗಳಿಗೆ ಅಲೌಕಿಕವಾದ ಶಕ್ತಿಯೇ ಮೂಲವೆಂದು ನಂಬುತ್ತಾರೆ. ಅದನ್ನು ಆರಾಧಿಸುವ ಮೂಲಕ ಹತೋಟಿಯಲ್ಲಿ ಇಟ್ಟುಕೊಳ್ಳಲು ಪ್ರಯತ್ನಿಸಿರುವುದು ಕಂಡುಬರುತ್ತದೆ. ಇಂತಹ ಅಲೌಕಿಕ ಶಕ್ತಿಗಳ ಆರಾಧನೆ ಜನರ ಬದುಕಿನ ಭಾಗವಾಗಿವೆ. ಒಂದು ದೇವತೆಗೆ ಸಂಬಂಧಿಸಿದ ಹಾಡು, ಕಥೆ, ಐತಿಹ್ಯ, ದಂತಕಥೆ, ಪುರಾಣಗಳು ಆಯಾ ಜನಾಂಗದ ಹಲವಾರು ಸಮಸ್ಯೆಗಳಿಗೆ ಉತ್ತರಗಳನ್ನು ಕಂಡುಕೊಳ್ಳಲು ಸಾಧ್ಯವಿದೆ. ಒಂದು ನಿರ್ದಿಷ್ಟ ದೇವತೆಗೆ ಸಮಗ್ರ ಅಧ್ಯಯನದಿಂದ ಆ ದೇವತೆಯನ್ನು ಆರಾಧಿಸುವ ಜನರ ಜೀವನ ರೀತಿ, ಚಿಂತನ ವಿಧಾನಗಳು ಅನಾವರಣಗೊಳ್ಳುತ್ತಾ ಹೋಗುತ್ತವೆ. ಜ್ಞಾನದ ವಿವಿಧ ಶಾಖೆಗಳು ಅಂದರೆ ಇತಿಹಾಸ, ಮಾನವಶಾಸ್ತ್ರ, ಮನಃಶಾಸ್ತ್ರ, ಸಮಾಜಶಾಸ್ತ್ರ ಇನ್ನಿತರ ಅಂತರಶಿಸ್ತುಗಳ ಈ ಬಗೆಯ ಅಧ್ಯಯನದಿಂದ ನೆರವನ್ನು ಪಡೆಯಬಹುದು.

ದೇವತೆಗಳ ಮೇಲೆ ನಡೆಯುವ ಅಧ್ಯಯನ ಜನಾಂಗ ಒಂದರ ಚಾರಿತ್ರಿಕ ಅಥವಾ ಸಾಂಸ್ಕೃತಿಕ ಅಧ್ಯಯನವೂ ಆಗಬಲ್ಲವೆಂದು ತಿಳಿಸುತ್ತಾರೆ. ಪ್ರಸ್ತುತ ಬನಶಂಕರಿ ಅಧ್ಯಯನವೂ ಉತ್ತರ ಕರ್ನಾಟಕ ಪ್ರದೇಶದ ಬನಶಂಕರಿಯ ಚಾರಿತ್ರಿಕ ಅಧ್ಯಯನವಾಗಿ ರೂಪುಗೊಂಡಿದೆ. ಭಾರತದ ಹಿಂದೂ ಸಮಾಜದಲ್ಲಿ ಮಾತೃದೇವತೆಗಳ ಆರಾಧನೆಯು ಬಹಳ ಪ್ರಾಮುಖ್ಯತೆಯನ್ನು ಪಡೆದುಕೊಂಡಿರುವುದು. ಪ್ರಪಂಚದಲ್ಲಿ ಎಲ್ಲಾ ಕಡೆ ಪ್ರಾಚೀನ ಕಾಲದಿಂದಲೂ ಕಂಡುಬಂದರೂ, ಇಂದಿಗೂ ವಿಶಿಷ್ಟವಾಗಿ ಆಚರಣೆಯಲ್ಲಿರುವುದು ಭಾರತದಲ್ಲಿ ಮಾತ್ರ. ಶಕ್ತಿ ಆರಾಧನೆಯು ಗ್ರಾಮದೇವತೆಗಳ ಹಾಗೂ ಶಿಷ್ಟ ದೇವತೆಗಳ ರೂಪದಲ್ಲಿ ವಿಭಿನ್ನ ಬಗೆಯಲ್ಲಿ ವಿಸ್ತೃತ ಪಡೆದಿವೆ. ಪ್ರಪಂಚದಲ್ಲಿ ಮಾತೃ ಆರಾಧನೆ ಬೆಳೆದುಬಂದದ್ದು, ಮಾತೃಪ್ರಧಾನ ಕುಟುಂಬ ವ್ಯವಸ್ಥೆಯಿಂದ ಎಂಬುದು ಗಮನಾರ್ಹ. ಪ್ರಾಚೀನ ಕಾಲದ ಕುಟುಂಬ ವ್ಯವಸ್ಥೆಯಲ್ಲಿ ತಾಯಿಯೇ ಪ್ರಧಾನ ಪಾತ್ರವಹಿಸಿದ್ದಳು. ಆಕೆಯು ಪರಿವಾರವನ್ನು ಸಂರಕ್ಷಿಸುವ ಹೊಣೆಯನ್ನು ಹೊತ್ತು, ಮುಂದೆ ಕೃಷಿಯ ಆವಿಷ್ಕಾರಕ್ಕೆ ಕಾರಣವಾಗಿದ್ದರಿಂದ ಹೆಣ್ಣಿಗೆ ಕುಟುಂಬದಲ್ಲಿ ಪ್ರಮುಖ ಸ್ಥಾನವನ್ನು ಕಲ್ಪಿಸಲಾಯಿತು. ಕೃಷಿ ಆವಿಷ್ಕಾರವು ಮಾನವನು ವಲಸೆ ಜೀವನಕ್ಕೆ ಮುಕ್ತಿ ದೊರಕಿಸಿಕೊಟ್ಟಿತ್ತಲ್ಲದೆ, ಒಂದು ಕಡೆ ನೆಲೆನಿಲ್ಲಲು ಕಾರಣವಾಗಿದೆ.

ಪ್ರಕೃತಿಯಲ್ಲಿರುವ ಬೆಂಕಿ, ನೀರು, ಗಾಳಿ ಮುಂತಾದ ಪ್ರಮುಖ ಶಕ್ತಿಗಳು ಮೂಲದಲ್ಲಿ ನಾಶ ಮಾಡುವ ಗುಣವನ್ನು ಹೊಂದಿರುವಂತಹವು. ಆದರೆ ಅವುಗಳನ್ನು ಸರಿಯಾದ ರೀತಿಯಲ್ಲಿ ಬಳಸಿಕೊಂಡಾಗ ಅವು ರಕ್ಷಿಸುವ ಹಾಗೂ ಬದುಕನ್ನು ಹಸನು ಮಾಡುವ ಚೈತನ್ಯಗಳಾಗುತ್ತವೆ. ಅಂತೆಯೇ ತಾಯಿಯು ಸಹ ಅವಳಿಂದಲೇ ಹುಟ್ಟು, ಅವಳಿಂದಲೇ ರಕ್ಷಣೆ ಹಾಗೂ ಅವಳಲ್ಲಿಯೇ ಸೇರಿ ಮತ್ತೇ ಅವಳಿಂದಲೇ ಹುಟ್ಟಿಬರುವ ಈ ಹಂತಗಳು ಅವಳನ್ನು ಒಂದು ರೀತಿಯ ದೈವಿಕ ಗುಣಗಳನ್ನು ಹೊಂದಿರುವ ಶಕ್ತಿಯನ್ನಾಗಿ ನೋಡುವಂತೆ ಮಾಡಿತ್ತು.

ಕೃಷಿಯ ಅವಿಷ್ಕಾರದ ನಂತರ ಭೂಮಿಯನ್ನು ಹೆಣ್ಣಿನ ರೀತಿಯಲ್ಲಿಯೇ ಫಲವಂತಿಕೆಯ ಸಂಕೇತವೆಂದು ಕಾಣಲಾಗಿದೆ. ಹೆಣ್ಣು ಹಾಗೂ ಭೂಮಿಯು ಸಮಾನವಾದ ಗುಣಗಳನ್ನು ಹೊಂದಿರುವುದರಿಂದ ಅವುಗಳನ್ನು ದೇವತೆಯ ರೂಪದಲ್ಲಿ ಆರಾಧಿಸಲು ತೊಡಗಿದರು. ಈ ಕಲ್ಪನೆ ವಿಸ್ತಾರವಾಗುತ್ತಾ ಹೋದಂತೆ ಪ್ರಕೃತಿಯ ಸೃಷ್ಟಿಯಲ್ಲಿ ಪ್ರತಿಯೊಂದನ್ನು ದೈವದ ರೂಪವಾಗಿ ಕಾಣಲಾಯಿತು. ಹೀಗೆ ದೈವದ ಪರಿಧಿ ವಿಸ್ತಾರಗೊಂಡಂತೆ ಆಚರಣೆಗಳು, ನಂಬಿಕೆಗಳು ಹುಟ್ಟಿಕೊಳ್ಳತೊಡಗಿದವು. ಮುಂದೆ ಪುರುಷ ಪ್ರಧಾನ ವ್ಯವಸ್ಥೆ ಸಾಮಾಜಿಕ ಪದ್ಧತಿಗಳಲ್ಲಿ ಕೆಲವು ಬದಲಾವಣೆಗಳಾದರೂ ಮೂಲ ನಂಬಿಕೆಗಳು ಮರೆಯಾಗಲಿಲ್ಲ, ಅವು ಹಾಗೆಯೇ ಉಳಿದುಕೊಂಡು ಬಂದವು. ಭಾರತದ ಧಾರ್ಮಿಕ ಇತಿಹಾಸದಲ್ಲಿಯಂತೂ ಇದು ನಿಜ. ಪುರುಷ ಪ್ರಧಾನ್ಯ ದೈವಗಳ ಮಧ್ಯೆದಲ್ಲಿಯೂ ಮಾತೃದೇವತೆಯರು ಶಿಷ್ಟ

ರೂಪದಲ್ಲಿ ಇಲ್ಲವೆ ಗ್ರಾಮದೇವತೆಗಳ ರೂಪದಲ್ಲಿ ತಮ್ಮ ಸ್ಥಾನವನ್ನು ಉಳಿಸಿಕೊಂಡು ಬಂದಿವೆ.

ದಕ್ಷಿಣ ಭಾರತದಲ್ಲಿ ಪ್ರಧಾನವಾಗಿ ಕಂಡುಬರುವ ದೈವವೆಂದರೆ ದೇವಿಯರು. ಇಲ್ಲಿ ಸೌಮ್ಯರೂಪದಲ್ಲಿ ಹಾಗೂ ರೌದ್ರರೂಪದಲ್ಲಿಯೂ ನೋಡಲಾಗಿದೆ. ಸೌಮ್ಯ ರೂಪದಲ್ಲಿ ಕಾಮಾಕ್ಷಿ, ಸರಸ್ವತಿ, ಮೀನಾಕ್ಷಿ ಎಂದು, ಚಾಮುಂಡಿ, ಕಾಳಿ, ಮೂಕಾಂಬಿಕಾ ಮೊದಲಾದವು ರೌದ್ರರೂಪದ ದೇವತೆಗಳೆಂದು ಗುರುತಿಸಲಾಗುವುದು. ಕೇರಳದಲ್ಲಿ ಭಗವತಿ ಅಥವಾ ಭದ್ರಕಾಳಿ ರೌದ್ರ ರೂಪದಲ್ಲಿ ಆರಾಧಿಸುವ ದೇವತೆಯಾಗಿದ್ದಾಳೆ. ಕರ್ನಾಟಕವೊಂದನ್ನೇ ತೆಗೆದುಕೊಂಡರೆ ಜನಪದರ ಬದುಕಿನಲ್ಲಿ ಮೂಲಶಕ್ತಿಯ ನೂರೆಂಟು ರೂಪಗಳು ಆಯಾ ಸಮುದಾಯದ ಹಿನ್ನೆಲೆಯಲ್ಲಿ ಆರಾಧನೆಗೊಳ್ಳುತ್ತಾ ಬಂದಿವೆ. ದೇವತೆ ಇಲ್ಲದ ಹಳ್ಳಿಗಳನ್ನು ಗುರುತಿಸುವುದು ಬಹಳ ಕಷ್ಟ. ವ್ಯಾಪಕವಾಗಿ ಪ್ರಭಾವ ಬೀರುವ ಒಂದೊಂದು ದೇವತೆ ಇಲ್ಲಿನವರ ಬದುಕಿನ ಒಂದೊಂದು ಎಳೆಗಳ ಪ್ರತೀಕ ಹಾಗೂ ನಿಯಂತ್ರಣಕಾರರು. ಊರದೇವರು, ಸೀಮೆದೇವರು, ಗ್ರಾಮದೇವರು, ಕುಲದೇವರು, ಮನೆದೇವರು ಅಲ್ಲದೇ ಪರ ಊರಿನ ಪ್ರಭಾವಿ ದೇವತೆಗಳು ಕೂಡ ಇವರಿಗೆ ಬೇಕು. ಬದುಕಿನ ನೋವು-ನಲಿವುಗಳ ಸಹಭಾಗಿತ್ವದಲ್ಲಿ ಗ್ರಾಮದೇವತೆಗಳನ್ನು ಕಾಣಲಾಗಿದೆ. ಈ ಸಾಲಿನಲ್ಲಿ ಕೊಲ್ಹಾಪುರದ ಮಹಾಲಕ್ಷ್ಮೀ, ಮೈಸೂರಿನ ಚಾಮುಂಡಿ, ಶಿರಸಿಯ ಮಾರಿಕಾಂಬೆ, ಕೊಲ್ಲೂರು ಮೂಕಾಂಬಿಕೆ, ಶಿರಸಂಗಿಯ ಕಾಳಮ್ಮ, ಹುಲಿಗಿಯ ಹುಲಿಗೆಮ್ಮೆ, ಸವದತ್ತಿಯ ಎಲ್ಲಮ್ಮ, ಬಾದಾಮಿಯ ಬನಶಂಕರಿ, ಊರಮ್ಮ, ಚೌಡಮ್ಮ ಮುಂತಾದ ದೇವತೆಗಳ ಸಂಖ್ಯೆ ಹೆಚ್ಚುತ್ತಾ ಹೋಗುತ್ತದೆ.

ಈ ದೇವತೆಗಳು ಸಾಮಾನ್ಯವಾಗಿ ಮಂಗಳವಾರ, ಶುಕ್ರವಾರ, ಅಮಾವಾಸ್ಯೆ, ಹುಣ್ಣಿಮೆಯೆಂದು ವಿಶೇಷವಾಗಿ ಆರಾಧಿತರಾಗುತ್ತಾರೆ. ಹೀಗೆ ನಂಬಿಕೆ, ಸಂಪ್ರದಾಯಗಳ ಹಿನ್ನೆಲೆಯಲ್ಲಿ ನೂರಾರು ದೇವತೆಗಳು ಜನಪದರ ಬದುಕಿನಲ್ಲಿ ಹಾಸುಹೊಕ್ಕಾಗಿವೆ. ಇಂತಹ ಪ್ರಮುಖ ದೇವತೆಗಳ ಸಾಲಿನಲ್ಲಿ ನಿಲ್ಲುವ ಬಾದಾಮಿ ಬನಶಂಕರಿಯ ಮಹತ್ವವನ್ನು ಇಲ್ಲಿ ನಿರ್ವಾಚಿಸಲಾಗಿದೆ. ಉತ್ತರ ಕರ್ನಾಟಕದ ಪ್ರಭಾವಿ ದೇವತೆಗಳಲ್ಲಿ ಅತೀ ಮುಖ್ಯವಾದ ದೇವತೆ ಎಂದರೆ ಬನಶಂಕರಿ. ಬಾದಾಮಿಯ ಬನಶಂಕರಿಯು ಪುರಾಣ ಪ್ರಸಿದ್ಧವಾಗಿದ್ದು, ಈಕೆಯ ಮಹಾತ್ಮೆಯನ್ನು ಸ್ಕಂದ ಪುರಾಣದಲ್ಲಿ, ಶ್ರೀದೇವಿಯ ಭಾಗವತ, ಪದ್ಮ ಪುರಾಣ ಹಾಗೂ ಭವಿಷತ್ ಪುರಾಣ (ಸಪ್ತಶತೀ) ಮುಂತಾದ ಗ್ರಂಥಗಳಲ್ಲಿ ಕಾಣಬಹುದು. ಬನಶಂಕರಿಯ ಈ ಕ್ಷೇತ್ರವು ದೇವಿಯ ಮೂಲಸ್ಥಾನ ಎಂಬುವುದನ್ನು ಪುರಾಣ ಉಲ್ಲೇಖಿಸುತ್ತದೆ.

ಕರ್ನಾಟಕದಲ್ಲಿ ಬಾದಾಮಿ ತಾಲೂಕಿಗೆ ಮಹತ್ವದ ಸ್ಥಾನವಿದೆ. ಪೌರಾಣಿಕ, ಐತಿಹಾಸಿಕ, ಸಾಂಸ್ಕೃತಿಕ, ಧಾರ್ಮಿಕ ಹಾಗೂ ಕಲಾತ್ಮಕ ಅಂಶಗಳನ್ನೊಳಗೊಂಡ ಬಾದಾಮಿಯು ಇತಿಹಾಸ ಪುಟಗಳಲ್ಲಿ ಚಿರಸ್ಮರಣೀಯ. ಬಾದಾಮಿ ಪರಿಸರವು ಬೆಟ್ಟ, ಗುಡ್ಡ ಹಾಗೂ

ಹಚ್ಚಹಸಿರುಳ್ಳ ಪ್ರದೇಶವಾಗಿದೆ. ಇಂತಹ ಬನಸಿರಿಯ ಮಧ್ಯೆ ನೆಲೆಸಿರುವಳೇ ಬನಸಿರಿಯ ಅಧಿದೇವತೆ 'ಬನಶಂಕರಿ' ಎನ್ನಬಹುದು. ಈ ಹಿಂದೆ ಬಾದಾಮಿಯು ಬಿಜಾಪುರ ಜಿಲ್ಲೆಗೆ ಸೇರಿತ್ತು. ೧೯೯೭ರಲ್ಲಿ ಬಿಜಾಪುರ ಜಿಲ್ಲೆಯನ್ನು ವಿಭಾಗಿಸಿದಾಗ ಬಾದಾಮಿಯು ಬಾಗಲಕೋಟೆ ಜಿಲ್ಲೆಗೆ ಒಳಪಟ್ಟಿತು. ಬಾದಾಮಿಯು ತಾಲೂಕು ಕೇಂದ್ರವಾಗಿದೆ. ಬಾದಾಮಿ ತಾಲೂಕಿಗೆ ಬಾದಾಮಿ, ಗುಳೇದಗುಡ್ಡ, ಕೆರೂರು, ಕುಳಗೇರಿ ಹೋಬಳಿಗಳು ಒಳಪಡುತ್ತವೆ.

ಬಾದಾಮಿಯು ಪ್ರಾಗಿತಿಹಾಸ ಕಾಲದ ಅವಶೇಷಗಳ ಮುಖ್ಯ ನೆಲೆಯಾಗಿದೆ. ಶಿಲಾಯುಗಕ್ಕೆ ಸಂಬಂಧಿಸಿದ ಕುರುಹುಗಳು ಇಲ್ಲಿ ಲಭ್ಯವಾಗಿವೆ. ಈ ತಾಲೂಕಿನ ಇತಿಹಾಸ ರಚನೆಯಲ್ಲಿ ಪ್ರಾಗಿತಿಹಾಸ ಆಕರಗಳ ಜೊತೆಗೆ ಅನೇಕ ಶಿಷ್ಟ ಆಕರಗಳು ಮಾತ್ರವಲ್ಲದೇ ಪರಿಶಿಷ್ಟ ಆಕರಗಳು (ಐತಿಹ್ಯ, ನಂಬಿಕೆ) ಕೂಡ ಸಹಾಯಕವಾಗಿವೆ. ಈ ಹಿನ್ನೆಲೆಯಿಂದ ಬಾದಾಮಿಯು ಶ್ರೀಮಂತ ಇತಿಹಾಸವನ್ನು ಹೊಂದಿರುವುದು ಗಮನಾರ್ಹ.

ಇಂತಹ ವಿಶಿಷ್ಟ ಐತಿಹಾಸಿಕ ಮಹತ್ವವನ್ನು ಪಡೆದಿರುವ ಈ ಪರಿಸರದಲ್ಲಿ ಬನಶಂಕರಿ ಪರಿಸರ ಪ್ರಾಗಿತಿಹಾಸ ಹಾಗೂ ಐತಿಹಾಸಿಕ ದೃಷ್ಟಿಯಿಂದ ಮಹತ್ವ ಪಡೆದುಕೊಂಡ ಪ್ರಮುಖ ಪ್ರದೇಶವಾಗಿದೆ. ಪ್ರಸ್ತುತ ಅಧ್ಯಯನದ ಮೂಲಕ ಈ ಪ್ರದೇಶದ ಚಾರಿತ್ರಿಕ ಹಿನ್ನಲೆಯನ್ನು ಕಟ್ಟಿಕೊಡುವ ಪ್ರಯತ್ನ ಮಾಡಲಾಗಿರುವುದು. ಬನಶಂಕರಿ ಕ್ಷೇತ್ರವು ಬಾದಾಮಿಯಿಂದ ಸುಮಾರು ೫ ಕಿ.ಮೀ ಅಂತರದಲ್ಲಿದೆ. ಇದರ ಪರಿಸರದಲ್ಲಿ ಮಲಪ್ರಭಾ (ಸರಸ್ವತಿ ಹಳ್ಳ) ನದಿಯು ಹರಿಯುತ್ತಿರುವುದು ಗಮನಾರ್ಹ.

**ಅಧ್ಯಯನದ ಉದ್ದೇಶ**

ಪ್ರಾಚೀನ ಕಾಲದಿಂದಲೂ ಭಾರತದ್ಯಾಂತ ಪ್ರತಿ ಗ್ರಾಮದಲ್ಲಿಯು ಗ್ರಾಮದೇವತೆಯ ಆರಾಧನೆ ಪ್ರಚಲಿತವಿದೆ. ಬೇರೆ ಬೇರೆ ಹೆಸರಿನಿಂದ ಮತ್ತು ವಿಭಿನ್ನ ರೂಪಗಳಲ್ಲಿ ಕಾಣಿಸಿಕೊಳ್ಳುವ ದೇವತೆಗಳಲ್ಲಿ ಬಾದುಬ್ಬೆ, ಬನದ ದೇವತೆ, ಬಾದುಂಬೆ, ಬನಶಂಕರಿ ದೇವಿಯು ಒಬ್ಬಳಾಗಿದ್ದಾಳೆ. ಇಂಥ ವಿಶಿಷ್ಟ ಬನದೇವತೆಯ ಬಗೆಗೆ ಅಧ್ಯಯನದ ಅವಶ್ಯಕತೆಯಿದ್ದಿದ್ದರಿಂದ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ ಬನಶಂಕರಿ ಕ್ಷೇತ್ರ ಪರಿಚಯದಿಂದ ಆರಂಭವಾಗಿ ನಂಬಿಕೆ ಮತ್ತು ಆಚರಣೆಗಳೊಂದಿಗೆ ಮುಕ್ತಾಯವಾಗಿರುವುದು. ಬನಶಂಕರಿ ಇಲ್ಲಿ ಹೇಗೆ ನೆಲೆಗೊಂಡಳು ಎಂಬುದರ ಜೊತೆಗೆ ಬೆಳೆದುಬಂದ ರೀತಿಯಲ್ಲಿ ಅಂದರೆ ವಿವಿಧ ಕಾಲಘಟ್ಟಗಳಲ್ಲಿ ಬೇರೆ ಬೇರೆ ಪಂಥಗಳೊಂದಿಗೆ ನಡೆದ ಸಂಘರ್ಷ ಹಾಗೂ ಸಾಮರಸ್ಯ ಮಾಡಿಕೊಂಡ ಅಂಶಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಬನಶಂಕರಿಗೆ ನಿತ್ಯ ಹಾಗೂ ವಾರ್ಷಿಕ ಸಂದರ್ಭಗಳಲ್ಲಿ ನಡೆಯುವ ಆಚರಣೆಗಳ ಬಗ್ಗೆ ಲಿಖಿತ, ಮೌಖಿಕ ಸಾಹಿತ್ಯ ಮುಂತಾದವುಗಳನ್ನು ಸಂಗ್ರಹಿಸುವುದರ ಜೊತೆಗೆ ಅಲ್ಲಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಭಾರತದಲ್ಲಿ ಅನೇಕ ಗ್ರಾಮದೇವತೆಗಳ ಬೆಳವಣಿಗೆಗೆ ಐತಿಹಾಸಿಕ ಕಾರಣಗಳು ಉಂಟು. ಅಲ್ಲದೇ ಉನ್ನತ ವರ್ಗಗಳ ಸಂಪ್ರದಾಯದ ಕಥೆಗಳ ಜೊತೆಗೆ ಸಂಪರ್ಕವನ್ನು ಪಡೆದು ವಿಸ್ತಾರವಾದ ಪ್ರದೇಶದಲ್ಲಿ ಪ್ರಭಾವಶಾಲಿ ಶಕ್ತಿಗಳಾಗಿ ಬೆಳವಣಿಗೆ ಹೊಂದಿರುವ ದೇವತೆಗಳಲ್ಲಿ ಬನಶಂಕರಿಯು ಒಬ್ಬಳಾಗಿದ್ದಾಳೆ. ಈ ದೇವಿಗೆ ಗ್ರಾಮದೇವತೆಗೆ ಸಲ್ಲಿಸುವ ಪೂಜೆ – ಪುನಸ್ಕಾರಗಳು, ನಂಬಿಕೆ – ಆಚರಣೆ ಮತ್ತು ಶಿಷ್ಟದೇವತೆಗಿರುವ ವೈದಿಕ ಪದ್ಧತಿಯ ಆರಾಧನೆ ಇರುವುದರಿಂದ ಈ ಪರಂಪರೆಯನ್ನು ಸವಿವರವಾಗಿ ಅರಿತುಕೊಳ್ಳಲು ಪ್ರಯತ್ನಿಸಲಾಗಿದೆ. ಬನಶಂಕರಿಗೆ ಸಂಬಂಧಿಸಿದ ಆಚರಣೆಗಳು ಪುರಾಣ ಕಥೆಗಳಲ್ಲೂ ಆವರಿಸಿಕೊಂಡಿವೆ. ಪ್ರಸ್ತುತ ಅಧ್ಯಯನದಿಂದ ವಸ್ತುನಿಷ್ಠವಾದ ಅಂಶಗಳನ್ನು ತಿಳಿದುಕೊಳ್ಳುವ ಪ್ರಯತ್ನವನ್ನು ಮಾಡಲಾಗಿರುವುದು. ಬಾದಾಮಿ ಬನಶಂಕರಿಯ ಕುರಿತ ಐತಿಹ್ಯ, ಸ್ಥಳೀಯ ಚರಿತ್ರೆ ಮತ್ತು ಚಾರಿತ್ರಿಕ ಹಿನ್ನೆಲೆಯನ್ನು ಗಮನಿಸಲಾಗಿದೆ. ಅಲ್ಲದೆ ನಾಡಿನ ವಿವಿಧ ಭಾಗಗಳಲ್ಲಿ ದೊರೆತ ದೇವಿಯ ವಿವಿಧ ನಾಮಗಳ ಕುರಿತು ಉಲ್ಲೇಖಗೊಂಡಿರುವ ಶಾಸನಗಳನ್ನು ಪೂರಕವಾಗಿ ಈ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ. ದೇವಾಲಯ, ಮೂರ್ತಿಶಿಲ್ಪ, ತೀರ್ಥ, ಮಂಟಪ, ಬಾವಿ ಹಾಗೂ ಇತರೆ ಸ್ಮಾರಕಗಳನ್ನು ವಿಶ್ಲೇಷಣಾತ್ಮಕವಾಗಿ ಅಧ್ಯಯನ ಮಾಡಲಾಗಿದೆ.

ಬನಶಂಕರಿಯು ಸ್ತ್ರೀ ದೇವತೆಯಾಗಿ ಹಲವು ಸಮುದಾಯಗಳ ಸಾಂಸ್ಕೃತಿಕ ಬದುಕಿನ ಒಂದು ಭಾಗವಾಗಿದ್ದಾಳೆ. ಮೂಲತಃ ಜನಪದ ದೈವವಾದ ಮಾತೃಮೂಲೀನ ಅಂಶಗಳನ್ನು ಎತ್ತಿಹಿಡಿಯುವ ಬನಶಂಕರಿಯನ್ನು ಮನೆ ದೈವವನ್ನಾಗಿ ಹೊಂದಿರುವ ಸಮುದಾಯಗಳಲ್ಲಿ ದೇವಿಗೆ ನೀಡಲಾಗಿರುವ ವಿಶೇಷವಾದ ಮಹತ್ವವನ್ನು ಅರಿಯುವ ಪ್ರಯತ್ನವನ್ನು ಬನಶಂಕರಿ ಅಧ್ಯಯನದ ಮುಖಾಂತರ ಮಾಡಲಾಗಿದೆ.

ಜನಪದ ಸಾಹಿತ್ಯದ ಮಜಲುಗಳು ಹುಟ್ಟಿಕೊಂಡ ಬಗ್ಗೆ, ಕಾಲಾಂತರದಲ್ಲಿ ಆದ ಪರಿವರ್ತನೆಗಳು, ಸಾಹಿತ್ಯದ ಭಾಷೆ, ಬದಲಾದ ರೀತಿ, ಆಧುನಿಕ ಪ್ರಭಾವ, ಆ ಮೂಲಕ ಜನಪರ ಮೇಲಾದ ಪರಿವರ್ತನೆ ಇವುಗಳನ್ನು ತಿಳಿಯುವ ಪ್ರಯತ್ನ ಮಾಡಲಾಗಿದೆ. ಕರ್ನಾಟಕದ ಮಾತೃದೇವತೆಯ ಪರಿಕಲ್ಪನೆಯಲ್ಲಿ ಬನಶಂಕರಿಯ ಸ್ಥಾನ, ಆರಾಧನೆಯ ಬೆಳವಣಿಗೆ, ನಂಬಿಕೆ, ಸಂಪ್ರದಾಯ, ಜಾತ್ರೆ, ಉತ್ಸವಗಳ್ನು ಅಂತರಶಿಸ್ತೀಯ ಅಧ್ಯಯನದ ಮೂಲಕ ಕಟ್ಟಿಕೊಡಲಾಗಿರುವುದು. ಬನಶಂಕರಿ ದೇವಾಲಯಕ್ಕೆ ಅರಸು ಮನೆತನದವರ, ಅಧಿಕಾರಗಳ ಕೊಡುಗೆಗಳು, ದಾನ-ದತ್ತಿಗಳು ಹಾಗೂ ಜೀರ್ಣೋದ್ಧಾರ ಕಾರ್ಯವನ್ನು ವಿವೇಚಿಸಲಾಗಿದೆ. ಬನಶಂಕರಿಗೆ ಸಂಬಂಧಿಸಿದ ಧಾರ್ಮಿಕ ಆಚರಣೆಗಳ ವೈಶಿಷ್ಟ್ಯತೆಗಳು ಈ ಹಿನ್ನೆಲೆಯಾಗಿ ಬೆಳೆದುಕೊಂಡಿರಬಹುದಾದ ಮೂಢನಂಬಿಕೆಗಳನ್ನು ಕುರಿತು ಚರ್ಚಿಸಲಾಗಿದೆ.

## ವ್ಯಾಪ್ತಿ

ಯಾವುದೇ ಒಂದು ಸಂಶೋಧನೆಯು ಯಶಸ್ವಿಯಾಗಬೇಕಾದರೆ ಅದರ ವ್ಯಾಪ್ತಿ ಬಹುಮುಖ್ಯವಾದುದು. ಒಂದು ಉದ್ದೇಶಪೂರಿತ ಹಾಗೂ ನಿರ್ದಿಷ್ಟವಾದ ಸಂಶೋಧನೆಯು ಯಶಸ್ವಿಯಾಗಲೂ ಇದು ತುಂಬಾ ಸಹಾಯಕ. ಪ್ರಸ್ತುತ ಅಧ್ಯಯನದ ಶೀರ್ಷಿಕೆಯು "ಬಾದಾಮಿ ಬನಶಂಕರಿ : ಚಾರಿತ್ರಿಕ ಅಧ್ಯಯನ" ಎಂಬುದಾಗಿದ್ದು, ಆರಂಭದಿಂದ ಇಂದಿನವರೆಗೆ ಬೆಳವಣಿಗೆ ಕಂಡಿರುವ ಸಾಂಸ್ಕೃತಿಕ ಮೌಲ್ಯಗಳ ವ್ಯಾಪ್ತಿಯನ್ನು ಒಳಗೊಂಡಿದೆ. ಅಧ್ಯಯನದ ಭೌಗೋಳಿಕ ವ್ಯಾಪ್ತಿಯನ್ನು ಸಮಗ್ರ ಅಧ್ಯಯನದ ದೃಷ್ಟಿಯಿಂದ ಬಾದಾಮಿ ಪರಿಸರದ ಚೊಳಚಗುಡ್ಡ, ಬನಶಂಕರಿ ಕ್ಷೇತ್ರದವರೆಗೆ ಮಾತ್ರ ವಿಸ್ತರಿಸಿಕೊಳ್ಳಲಾಗಿದೆ. ಆದರೆ ಸಾಂದರ್ಭಿಕವಾಗಿ ನಾಡಿನ ಇತರೆ ಪ್ರದೇಶಗಳನ್ನು ವಿಷಯದ ವ್ಯಾಪ್ತಿಗೆ ಸೇರಿಸಿಕೊಳ್ಳಲಾಗಿದೆ. ಹಾಗೆಯೇ ಕಾಲಾವಧಿಯ ದೃಷ್ಟಿಯಿಂದ ಪ್ರಾಗಿತಿಹಾಸದಿಂದ ಪ್ರಚಲಿತ ಕಾಲದವರೆಗೂ ಇದರ ಅಧ್ಯಯನವನ್ನು ವಿಸ್ತರಿಸಿಕೊಳ್ಳಲಾಗಿದೆ.

## ಅಧ್ಯಯನದ ಮಹತ್ವ

ಪ್ರಸ್ತುತ ಅಧ್ಯಯನದ ಕ್ಷೇತ್ರವು ಮತ್ತು ಬಾದಾಮಿ ಚಾಲುಕ್ಯರ ಸ್ಥಳವಾಗಿ, ರಾಜಧಾನಿಯಾಗಿ ಮಹತ್ವ ಪಡೆದಿರುವಂತಹದ್ದು. ಇಂತಹ ಕ್ಷೇತ್ರದ ಕುರಿತು ಇದುವರೆಗೂ ಬಿಡಿ ಲೇಖನಗಳು ಮತ್ತು ಸ್ಮರಣ ಸಂಚಿಕೆಗಳು, ಕೆಲವು ಟಿಪ್ಪಣಿಗಳು ಪ್ರಕಟಗೊಂಡಿವೆ. ಇದನ್ನು ಹೊರತುಪಡಿಸಿದರೆ ವಿವರವಾಗಿ ಪ್ರಸ್ತುತಪಡಿಸುವ ಸಮಗ್ರವಾದ ಐತಿಹಾಸಿಕ ಅಧ್ಯಯನಗಳಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಪ್ರಕಟಗೊಂಡಿರುವ ಲೇಖನ, ಗ್ರಂಥಗಳನ್ನು ಅವಲೋಕಿಸಿ ಮುಂದೆ ಕೈಗೊಳ್ಳಬೇಕಾದ ಅಂಶಗಳನ್ನು ಮನಗಂಡು ಪ್ರಸ್ತುತ ಪ್ರಬಂಧವನ್ನು ರೂಪಿಸಿ ವಿಸ್ತರಿಸಲಾಗಿದೆ.

ಅಧ್ಯಯನ ಕೈಗೊಂಡಿರುವ ಪರಿಸರವು ಸಾಂಸ್ಕೃತಿಕವಾಗಿ ಹಾಗೂ ಪ್ರಾಚ್ಯಾ ವಸ್ತುಗಳಿಂದ ಶ್ರೀಮಂತವಾಗಿದೆ. ಲಭ್ಯವಿರುವ ಆಧಾರಗಳನ್ನು ಸಂಗ್ರಹಿಸಿ, ಅಧ್ಯಯನಕ್ಕೆ ಒಳಪಡಿಸುವ ಪ್ರಯತ್ನವನ್ನು ಮಾಡಲಾಗಿದೆ. ಅಲ್ಲದೆ ಈ ಪರಿಸರದಲ್ಲಿ ದೊರೆತಿರುವ ಮೌಖಿಕ ಕಥನಗಳು ಹಾಗೂ ಐತಿಹ್ಯಗಳನ್ನು ಉಪಯೋಗಿಸಿಕೊಂಡು ಪ್ರಸ್ತುತ ಇತಿಹಾಸದ ಅಧ್ಯಯನದ ಮಹತ್ವವನ್ನು ಹೆಚ್ಚಿಸಲಾಗಿದೆ. ಈ ಅಧ್ಯಯನದ ಮೂಲಕ ಕಂಡುಕೊಳ್ಳುವ ಫಲಿತಾಂಶಗಳನ್ನು ಒಗ್ಗೂಡಿಸಿಕೊಂಡು ವಿಷಯ ವ್ಯಾಪ್ತಿಯನ್ನು ವಿಸ್ತರಿಸಲಾಗಿದೆ.

## ಅಧ್ಯಯನದ ವಿಧಾನ

ಬಾದಾಮಿ ಬನಶಂಕರಿ : ಚಾರಿತ್ರಿಕ ಅಧ್ಯಯನವು ಮುಖ್ಯವಾಗಿ ಕ್ಷೇತ್ರಕಾರ್ಯ ಆಧಾರಿತವಾಗಿದೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಮಾಹಿತಿ ಸಂಗ್ರಹಕ್ಕೆ ಅವಲೋಕನ, ಪ್ರಶ್ನಾವಳಿ ಹಾಗೂ ಸಂದರ್ಶನ ವಿಧಾನಗಳನ್ನು ಅಳವಡಿಸಲಾಗಿದೆ. ಬನಶಂಕರಿಯ

ಮಾಹಿತಿ ಸಂಗ್ರಹಣೆಯಲ್ಲಿ ಮಾಹಿತಿದಾರರೊಂದಿಗೆ ಪ್ರಶ್ನೆಗಳನ್ನು ಕೇಳುವ ಮುಖಾಂತರ ಹಾಗೂ ಅದರೊಂದಿಗೆ ಚರ್ಚಿಸುವ ಮೂಲಕ ಕ್ರೋಢೀಕರಿಸಲಾಗಿರುವುದು. ಕೆಲವೊಂದು ಆಚರಣೆ ಹಾಗೂ ಜಾತ್ರೆಯ ಆಚರಣೆಗಳಲ್ಲಿ ಭಾಗವಹಿಸುವ ಮುಖಾಂತರ ಮಾಹಿತಿ ಸಂಗ್ರಹಿಸಲಾಗಿದೆ. ಹೀಗೆ ಆಚರಣೆಗಳಲ್ಲಿ ಭಾಗವಹಿಸುವಾಗ ಆಚರಣೆ ಹಿನ್ನೆಲೆ, ಉದ್ದೇಶ, ಪ್ರಸ್ತುತ ಸಂದರ್ಭದ ಬದಲಾವಣೆ ಮೊದಲಾದವುಗಳನ್ನು ಭಾಗವಹಿಸಿದ್ದ ಮಾಹಿತಿದಾರರೊಂದಿಗೆ ಚರ್ಚಿಸಲಾಗಿದೆ. ವಿವಿಧ ಸಂದರ್ಭಗಳ ಆಚರಣೆಗಳನ್ನು ಛಾಯಾಚಿತ್ರಣ ಹಾಗೂ ಧ್ವನಿಗ್ರಹಣ (ರೆಕಾರ್ಡ್)ಮಾಡುವ ಮೂಲಕ ಮಾಹಿತಿ ಪಡೆಯಲಾಗಿದೆ.

ಈ ಮಾಹಿತಿಗಳು ಕ್ಷೇತ್ರ ಹಾಗೂ ಬನಶಂಕರಿಯ ಕುರಿತಾಗಿವೆ. ಒಟ್ಟಾರೆ ಕ್ಷೇತ್ರಕಾರ್ಯವು ಈ ಅಧ್ಯಯನಕ್ಕೆ ಪ್ರಧಾನವಾದ ಮಾಹಿತಿಯನ್ನು ಒದಗಿಸಿದೆ. ಇದರ ಜೊತೆಗೆ ಬನಶಂಕರಿಯ ಕುರಿತಂತೆ ಪೂರಕವಾಗಿ ದೊರೆಯುವ ಗ್ರಂಥಗಳ ದಾಖಲೆ, ಶಾಸನ, ಅಪ್ರಕಟಿತ ಗ್ರಂಥಗಳು, ಮೌಖಿಕ ಚರಿತ್ರೆ, ನಿಯತಕಾಲಿಕೆಗಳು, ವರ್ತಾ ಪತ್ರಿಕೆಗಳು ಹಾಗೂ ಛಾಯಾಚಿತ್ರಣ, ನಕ್ಷೆಗಳು ಇನ್ನೂ ಮುಂತಾದವುಗಳನ್ನು ಬಳಸಿಕೊಳ್ಳಲಾಗಿರುವುದು. ಹೀಗೆ ಸಂಗ್ರಹಿಸಿದ ಮಾಹಿತಿಗಳನ್ನು ವೈಜ್ಞಾನಿಕವಾಗಿ ವರ್ಗೀಕರಿಸಿಕೊಂಡು ಅಧ್ಯಯನ ಮಾಡಲಾಗಿದೆ. ಒಟ್ಟಾರೆ ಸಮಾಜ ವಿಜ್ಞಾನಗಳ ವೈಧಾನಿಕತೆಯು ಇಲ್ಲಿ ಬಳಕೆಯಾಗುತ್ತದೆ.

**ಅಧ್ಯಯನಗಳ ಸಮೀಕ್ಷೆ**

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದ ಪರಿಸರ ಮತ್ತು ಬನಶಂಕರಿ ದೇವಿಯ ಬಗೆಗೆ, ಮಾತೃ ಆರಾಧನೆ ಹಿನ್ನೆಲೆ, ಗ್ರಾಮದೇವತೆ ಹುಟ್ಟು, ಬೆಳವಣಿಗೆ, ಗ್ರಾಮಗಳ ಮೇಲಾದ ಪ್ರಭಾವ, ಪ್ರೇರಣೆಗೆ ಸಂಬಂಧಿಸಿದಂತಹ ಗ್ರಂಥಗಳು, ಸಂಶೋಧನ ಲೇಖನಗಳನ್ನು ಗುರುತಿಸುವುದು ಸೂಕ್ತವೆನಿಸುತ್ತದೆ. ಇವುಗಳಲ್ಲದೆ ಬಾದಾಮಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಹಾಗೂ ಆನುಷಂಗಿಕ ಆಧಾರಗಳಲ್ಲಿ ಸಾಕಷ್ಟು ಮಾಹಿತಿಗಳು ದೊರಕುತ್ತವೆ. ಪ್ರಾಥಮಿಕ ಆಕರಗಳಲ್ಲಿ ಮುಖ್ಯವಾಗಿ ಭಾರತೀಯ ಪುರಾತತ್ವ ಶಾಸನಶಾಸ್ತ್ರದ ವಾರ್ಷಿಕ ವರದಿಗಳಲ್ಲಿ ದಕ್ಷಿಣ ಭಾರತೀಯ ಶಾಸನಶಾಸ್ತ್ರದ ವರದಿಗಳಲ್ಲಿ, ಚಾಲುಕ್ಯರ ಸಂಶೋಧನ ಸಂಪುಟಗಳಲ್ಲಿ, ಶಾಸನಗಳ, ಉತ್ಖನನಗಳ ಹಾಗೂ ಸ್ಮಾರಕಗಳ ಕುರಿತು ಮಾಹಿತಿಗಳು ದೊರೆಯುತ್ತವೆ. ಕೆ.ಡಿ. ಬ್ಯಾನರ್ಜಿ, ಆರ್.ಎಸ್. ಪಂಚಮುಖಿ, ರಾಬರ್ಟ್ ಬ್ರೂಸ್‌ಪೂಟ್, ಅ. ಸುಂದರ., ವಿಷ್ಣು ವಾಕರಣಕರ ಮೊದಲಾದವರು ಬಾದಾಮಿಯ ಇತಿಹಾಸ ಪೂರ್ವ ನೆಲೆಗಳನ್ನು, ಅಲ್ಲಿ ದೊರೆತ ಅವಶೇಷಗಳನ್ನು ಗುರುತಿಸುವ ಕಾರ್ಯವನ್ನು ಮಾಡಿದ್ದಾರೆ. ಕೆ.ಬಿ.ಶಿವತಾರಕ ಅವರ 'ಕರ್ನಾಟಕದ ಪುರಾತತ್ವ ನೆಲೆಗಳು', (೨೦೦೧) ಕೃತಿಯಲ್ಲಿ ಇತಿಹಾಸ ಪೂರ್ವಕಾಲದ ನೆಲೆಗಳನ್ನು, ಅಲ್ಲಿ ದೊರೆತ ಅವಶೇಷಗಳನ್ನು ವರದಿ ಮಾಡಿದ್ದಾರೆ.

ಮಾಲ್ಹಾರಭಟ್ಟ ಬನಂಭಟ್ಟ ಪೂಜಾರ, ವೇ.ಮೂ. ರವರ 'ಶ್ರೀ ಬನಶಂಕರಿ ಲಘು ಚರಿತ್ರೆ' ಹಾಗೂ ಮಾರ್ತಾಂಡ ಚಿದಂಬರ ದೀಕ್ಷಿತ್, ಬಡ್ಲಿರವರ (ಅನು), 'ಶ್ರೀ ಬನಶಂಕರಿ ಮಹಾತ್ಮ್ಯಂ', ಕೃತಿಗಳಲ್ಲಿ ಬನಶಂಕರಿ ಕ್ಷೇತ್ರದ ಮಹಿಮೆ, ದೇವಿಯು ಇಲ್ಲಿ ನೆಲೆ ನಿಂತ ಬಗೆಗೆ, ದೇವಿಯ ಅವತರಗಳ ಕುರಿತು, ಪುರಾಣ ಹಿನ್ನೆಲೆಯನ್ನು ನೀಡುವ ಕೃತಿಗಳಾಗಿವೆ.

ಎ.ಕೆ. ಶಾಸ್ತ್ರೀಯವರ 'ಶೃಂಗೇರಿ ಮಠದ ಕಡತಗಳಲ್ಲಿಯ ಆಯ್ದ ಚಾರಿತ್ರಿಕ ದಾಖಲೆಗಳು', ಸಂಪುಟ ೨, (೨೦೦೬) ಕೃತಿಯಲ್ಲಿ ಬನಶಂಕರಿ ದೇವಿಗೆ ಸಂಬಂಧಿಸಿದ ಕ್ರಿ.ಶ. ೧೮೫೫ ಮತ್ತು ಕ್ರಿ.ಶ. ೧೮೫೭೭ರ ಕಡತಗಳ ಬಗ್ಗೆ ಮಾಹಿತಿಯನ್ನು ನೀಡಿದ್ದಾರೆ. ಕಡತಗಳಲ್ಲಿ ಶೃಂಗೇರಿ ಮಠದ ಗುರುಗಳಾದ ಶ್ರೀ ನರಸಿಂಹ ಭಾರತಿ ಸ್ವಾಮಿಗಳು ಸಂದರ್ಶಿಸಿ, ಪೂಜೆ ಸಲ್ಲಿಸಿದ ಬಗ್ಗೆ ಉಲ್ಲೇಖವಿದೆ. ಅಲ್ಲದೆ ಕಡತಗಳಲ್ಲಿ ಶೃಂಗೇರಿ ಮಠದಿಂದ ಬನಶಂಕರಿ ಗುಡಿಗೆ ಪೂಜಾ ಕಾರ್ಯಗಳಿಗಾಗಿ ವಾರ್ಷಿಕ ಕಾಣಿಕೆಯನ್ನು ನೀಡುತ್ತಿದ್ದ ಬಗೆಗೆ, ಅಂದಿನ ಅರ್ಚಕ ವರ್ಗದವರ ಹೆಸರು, ಅರ್ಚಕರು ದೇವಿಯ ಪೂಜಾಕಾರ್ಯಗಳನ್ನು ನಿಷ್ಠೆಯಿಂದ ಶೃಂಗೇರಿ ಮಠದಿಂದ ನೀಡುವ ಹಣವನ್ನು ದೇವಿಯು ಪೂಜಾಕಾರ್ಯಗಳಿಗೆ ಬಳಸಿಕೊಳ್ಳಲಾಗುವುದು ಎಂದು ಭಿನ್ನವತ್ತಳೆಯನ್ನು ನೀಡಿದ್ದ ಬಗೆಗೆ ವಿವರಿಸಲಾಗಿದೆ. ಹಾಗೆಯೇ ದೇವಿಯು ನೆಲೆಸಿರುವ ಚೊಳಚಗುಡ್ಡ ಗ್ರಾಮವನ್ನು ದಾಖಲೆಗಳಲ್ಲಿ ತೊಳಚಗೊಡು, ಕೊಳಚಿಗೊಡು ಎಂದು ಕರೆದಿರುವುದನ್ನು ಗಮನಿಸಬಹುದು. ಈ ದಾಖಲೆಗಳಿಂದಲೇ ಚೊಳಚಗುಡ್ಡದ ಪ್ರಾಚೀನತೆಯನ್ನು ಕಂಡುಕೊಳ್ಳಲಾಗಿದೆ.

ಶೀಲಾಕಾಂತ ಪತ್ತಾರ ಅವರ 'ಬಾದಾಮಿ ಸಾಂಸ್ಕೃತಿಕ ಅಧ್ಯಯನ', (೨೦೦೦) ಕೃತಿಯಲ್ಲಿ ಬಾದಾಮಿ ಪರಿಸರದ ಪ್ರಾಗಿತಿಹಾಸ, ಇತಿಹಾಸ ಕಾಲ, ಚಾಲುಕ್ಯರ ಹಿನ್ನೆಲೆ, ಚಾಲುಕ್ಯರ ಸಾಂಸ್ಕೃತಿಕ ಸಾಧನೆಗಳನ್ನು ಪರಿಚಯಿಸಿದ್ದಾರೆ. ಎಸ್. ರಾಜಶೇಖರ ಅವರ 'ಕರ್ನಾಟಕದ ವಾಸ್ತುಶಿಲ್ಪ ಮತ್ತು ಚಿತ್ರಕಲೆ', (೧೯೮೮) ಕೃತಿಯಲ್ಲಿ ಬಾದಾಮಿ ಚಾಲುಕ್ಯರ ವಾಸ್ತುಶಿಲ್ಪದ ಬಗೆಗೆ ಹಾಗೂ ಎ.ಎಂ. ಅಣ್ಣಿಗೇರಿಯವರ 'ಬಾದಾಮಿ ಶಿಲ್ಪಕಲೆ', ಕೃತಿಯಲ್ಲಿ ದೇವಾಲಯಗಳು ಮತ್ತು ಶಿಲ್ಪಗಳನ್ನು ಪರಿಚಯಿಸಿದ್ದಾರೆ. ಎಂ. ಚಿಂದಾನಮೂರ್ತಿ ಅವರ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಹಾಗೂ ಎಚ್. ತಿಪ್ಪೇರುದ್ರಾಸ್ವಾಮಿ ಇವರ 'ಕರ್ನಾಟಕ ಸಾಂಸ್ಕೃತಿಕ ಸಮೀಕ್ಷೆ' ಕೃತಿಗಳು ಕರ್ನಾಟಕ ಸಂಸ್ಕೃತಿಯುನ್ನು ಅನಾವರಣಗೊಳ್ಳಿಸುವ ಮೇರು ಕೃತಿಗಳಾಗಿವೆ.

ಎ. ಮುರಿಗೆಪ್ಪ ಅವರ (ಪ್ರ.ಸಂ), 'ಬಾದಾಮಿ ಚಾಲುಕ್ಯರು', ಲೇಖನ ಸಂಪುಟ, (೨೦೦೯) ಕೃತಿಯು ಬಾದಾಮಿ ಪರಿಸರದ ಇತಿಹಾಸ ಪೂರ್ವ ಕಾಲ, ಭೌಗೋಳಿಕ ಪರಿಸರವನ್ನು ವಿವರಿಸಿದ್ದಾರೆ. ಅಲ್ಲದೆ ಚಾಲುಕ್ಯರ ರಾಜಕೀಯ, ಧರ್ಮ, ಸಮಾಜ, ಅರ್ಥವ್ಯವಸ್ಥೆ, ಆಡಳಿತ ವ್ಯವಸ್ಥೆ, ವಾಸ್ತುಶಿಲ್ಪಗಳಿಗೆ ಸಂಬಂಧಿಸಿದಂತೆ ಒಟ್ಟಾರೆ ಬಾದಾಮಿ ಚಾಲುಕ್ಯರ ಕುರಿತು ಸಮಗ್ರವಾದ ಮಾಹಿತಿಯನ್ನು ನೀಡಿದ್ದಾರೆ.

ಎಸ್.ಕೆ. ರಾಮಚಂದ್ರರಾವ್‌ರವರ 'ಭಾರತದ ದೇವಾಲಯ ನೆಲೆ – ಹಿನ್ನೆಲೆ', (೨೦೧೦) ಕೃತಿಯಲ್ಲಿ ದೇವಾಲಯ ಕಲ್ಪನೆ, ಹುಟ್ಟಿನ ಹಿನ್ನೆಲೆ, ಅವುಗಳ ಬೆಳವಣಿಗೆಯ ವಿವಿಧ ಹಂತಗಳನ್ನು ವಿವರಿಸಲಾಗಿದೆ. ಮಾನವನ ಬುದ್ಧಿವಂತಿಕೆಯು ಬೆಳದಂತೆ ಹೇಗೆ ದೇವಾಲಯ ಕಲ್ಪನೆ, ಮೂರ್ತಿಕಲ್ಪನೆ ವಿಕಾಸಗೊಂಡಿತು ಎಂಬುದನ್ನು ಚರ್ಚಿಸಿದ್ದಾರೆ. ಶಾಸ್ತ್ರಗ್ರಂಥಗಳಿಂದ ಅಪಾರ ಮಾಹಿತಿಯನ್ನು ಸಂಗ್ರಹಿಸಿಕೊಂಡು, ದೇವಾಲಯಗಳ ರಚನಾಕ್ರಮ ಯಾವ ರೀತಿಯಲ್ಲಿ ರಚನೆಯಾಗಿರಬೇಕು. ಮತ್ತು ಆಗಮಗಳು ಅಂತಹ ಯಾವ ಸಾಂಪ್ರದಾಯಗಳನ್ನು ಹೊಂದಿವೆ ಎಂಬುದನ್ನು ವಿವರಿಸಿರುವರು. ಭಾರತದಲ್ಲಿ ದೇವಾಲಯಗಳ ವಿಕಾಸ, ಶೈಲಿಗಳ ಕುರಿತು ಚರ್ಚಿಸಿದ್ದಾರೆ. ದೆವಾಲಯವು ಅವಶ್ಯಕವಾಗಿ ಹೊಂದಿರಬೇಕಾದ ಭಾಗಗಳ ಬಗ್ಗೆಯು ಕೃತಿಯಲ್ಲಿ ವಿವೇಚಿಸಲಾಗಿದೆ. ದೇವಾಲಯಗಳಿಗೂ ಮತ್ತು ವೃಕ್ಷ ಪೂಜೆಗೂ ಇರುವ ನಂಟಿನ ಕುರಿತು ಪುಸ್ತಕದಲ್ಲಿ ಚರ್ಚಿಸಿರುವರು. ಮನುಷ್ಯನ ದೇಹ ರಚನೆ ಮತ್ತು ದೇವಾಲಯದ ವಾಸ್ತುವಿನ್ಯಾಸ ಇವೆರಡರ ನಡುವೆ ಇರುವ ಕಲ್ಪನೆಯನ್ನು ಸ್ವಾರಸ್ಯವಾಗಿ ವಿವರಿಸಿದ್ದಾರೆ. ದೇವಾಲಯಲ್ಲಿರುವ ಗರ್ಭಗುಡಿ, ಧ್ವಜಸ್ತಂಭ, ಬಲಿಪೀಠದ ಪ್ರಾಮುಖ್ಯತೆಯನ್ನು ತಿಳಿಸಿರುವರು. ದೇವಾಲಯದ ಕುರಿತು ಇರುವ ಸಂಪ್ರದಾಯಿಕ ಚೌಕಟ್ಟನ್ನು ಮಂಡಲದ ಅವಶ್ಯಕತೆ, ದೇವಾಲಯಗಳ ಕುರಿತು ಬದಲಾಗುತ್ತಿರುವ ಕಲ್ಪನೆ, ಸ್ವರೂಪಗಳ ಬಗ್ಗೆ ಕೃತಿಯಲ್ಲಿ ಚರ್ಚಿಸಿದ್ದಾರೆ.

ವಾಸುದೇವ ಬಡಿಗೇರ ಅವರ 'ಶಿರಸಿಂಗಿ ಕಾಳಮ್ಮ ಸಾಂಸ್ಕತಿಕ ಅಧ್ಯಯನ', (೨೦೦೨) ಕೃತಿಯಲ್ಲಿ ಶಿರಸಂಗಿ ಪರಿಸರದ ಪೂರ್ವ ಇತಿಹಾಸ, ಇತಿಕಾಸ ಕಾಲ, ಭೌಗೋಳಿಕ ಹಿನ್ನೆಲೆಯನ್ನು ವಿವರಿಸಿದ್ದಾರೆ. ಶಕ್ತಿದೇವತೆಯ ಉಗಮ ಮತ್ತು ವಿಕಾಸದ ಬಗೆಗೆ ಕೃತಿಯಲ್ಲಿ ಚರ್ಚಿಸಿದ್ದಾರೆ. ಪಾಶ್ಚಾತ್ಯ, ದೇಶಿಯ ಮಾತೃದೇವತೆಗಳ ಪರಿಕಲ್ಪನೆಗಳ ಚಾರಿತ್ರಿಕ ಹಿನ್ನೆಲೆಯನ್ನು ವಿವರಿಸಲಾಗಿದೆ.

ಎಂ.ಎಸ್. ಪ್ರಭಾಕರ ಅವರ 'ದೇವಾಲಯ ವಾಸ್ತು', (೨೦೧೧) ಕೃತಿಯಲ್ಲಿ ದೇವಾಲಯಗಳ ಪ್ರಾಚೀನತೆ, ವಾಸ್ತುಶಾಸ್ತ್ರ ಮತ್ತು ವಾಸ್ತುಶಿಲ್ಪಗಳ ಅರ್ಥವನ್ನು ವಿವೇಚಿಸಿದ್ದಾರೆ. ದೇವಾಲಯಗಳ ಉಗಮ ಮತ್ತು ವಿಕಾಸ, ವಿಭಿನ್ನ ವಾಸ್ತುಶೈಲಿಗಳ ಉಗಮ, ಬೆಳವಣಿಗೆಯನ್ನು ಕೃತಿಯಲ್ಲಿ ಚರ್ಚಿಸಿದ್ದಾರೆ. ವಿಠ್ಠಲರಾವ್ ಗಾಯಕ್ವಾಡ, (ಅನು), 'ಲಜ್ಜಾಗೌರಿ', (೨೦೦೩) ಕೃತಿಯಲ್ಲಿ ಹೊಸ ದೃಷ್ಟಿಕೋನಗಳ ಹಿನ್ನೆಲೆಯಲ್ಲಿ ವಿಶ್ವ ಸೃಷ್ಟಿಯ ಆದಿದೇವತೆಯ ಸ್ವರೂಪ ಮತ್ತು ಉಪಾಸನೆಯ ಬಗ್ಗೆ ಚರ್ಚಿಸಲಾಗಿದೆ. ಲಜ್ಜಾಗೌರಿಯ ಉಪಾಸನೆಯನ್ನು ಭಾರತದ ಹಲವೆಡೆಗಳಲ್ಲಿ ಹೇಗೆ ಆಚರಣೆಯಲ್ಲಿತ್ತು. ಇಂದಿನ ಸ್ವರೂಪವೆಂತಹದ್ದು? ಎಂಬುದನ್ನು ಲೇಖಕರು ಲಜ್ಜಾಗೌರಿಯ ಉಪಾಸನೆಯ ಕುರಿತು ನೈಜ ದರ್ಶನವನ್ನು ಕೃತಿಯಲ್ಲಿ ನೀಡಿದ್ದಾರೆ. ಲಜ್ಜಾಗೌರಿಯ ವಿಗ್ರಹಗಳು ಹೆಚ್ಚಾಗಿ ದಕ್ಷಿಣ

ಭಾರತದ ಅನೇಕ ಭಾಗಗಳಲ್ಲಿ ಲಭ್ಯವಾಗಿರುವ ಬಗೆಗೆ ಈ ಕೃತಿಯು ಬೆಳಕು ಚೆಲ್ಲಿದೆ. ಇಂದಿಗೂ ಅವುಗಳನ್ನು ರಹಸ್ಯವಾಗಿ ಆರಾಧಿಸುತ್ತಿರುವ ಬಗ್ಗೆ ಅವರು ಮಾಹಿತಿ ನೀಡಿದ್ದಾರೆ.

ಸಿದ್ಧಲಿಂಗಯ್ಯನವರ 'ಗ್ರಾಮದೇವತೆಗಳು', (೧೯೯೭) ಕೃತಿಯಲ್ಲಿ ಮಾತೃದೇವತೆಗಳ ಆರಾಧನಾ ಪ್ರಾಚೀನತೆ, ಪ್ರಪಂಚದ ವಿವಿಧ ಭಾಗಗಳಲ್ಲಿ ಮಾತೃದೇವತೆಗಳ ಆರಾಧನಾ ವಿವರಗಳನ್ನು ಆಧಾರಗಳ ಮೂಲಕ ಚರ್ಚೆ ಮಾಡಿದ್ದಾರೆ. ಚೆನ್ನಣ್ಣ ವಾಲೀಕರ ಅವರ 'ಹೈದ್ರಾಬಾದ್ ಕರ್ನಾಟಕದ ಗ್ರಾಮದೇವತೆಗಳು : ಜಾನಪದೀಯ ಅಧ್ಯಯನ', (೧೯೮೩) ಎಂಬ ಕೃತಿಯಲ್ಲಿ ಹೈದ್ರಾಬಾದ್ ಕರ್ನಾಟಕದ ಭಾಗದಲ್ಲಿ ಪ್ರಚಲಿತವಿರುವ ಎಲ್ಲಾ ಮಾತೃದೇವತೆಗಳನ್ನು ಅಧ್ಯಯನಕ್ಕೊಳಪಡಿಸಿದ್ದಾರೆ. ವಿವಿಧ ರೀತಿಯ ಗ್ರಾಮದೇವತೆಗಳ ಬಗ್ಗೆ ದೊರೆಯುವ ಮೌಖಿಕ ಸಾಹಿತ್ಯಗಳಾದ ಐತಿಹ್ಯ, ಸಂಪ್ರದಾಯ, ಆಚರಣೆ, ದೇವತೆಯರ ವರ್ಗೀಕರಣ, ಕಥೆ, ನಂಬಿಕೆ, ಅವುಗಳ ಪ್ರಾಮುಖ್ಯತೆ ಮುಂತಾದ ವಿಷಯಗಳ ಬಗ್ಗೆ ಸವಿವರವಾಗಿ ಚರ್ಚಿಸಿದ್ದಾರೆ.

ಎನ್.ಆರ್. ನಾಯಕ್ ಅವರ 'ಕರ್ನಾಟಕದ ಶಕ್ತಿದೇವತೆಗಳು', (೧೯೮೩) ಎಂಬ ಕೃತಿಯಲ್ಲಿ ಕರ್ನಾಟಕದಲ್ಲಿ ಆರಾಧನೆಗೊಳ್ಳುತ್ತಿರುವ ಮಾತೃದೇವತೆಗಳ ಆರಾಧನಾ ಪ್ರಭಾವವನ್ನು ಗಮನಿಸಿದ್ದಾರೆ. ಇದರಲ್ಲಿ ಜನಪದರು ತಮ್ಮ ತಮ್ಮ ಗ್ರಾಮದೇವತೆಗಳಿಗೆ ನಡೆದುಕೊಳ್ಳುವ ರೀತಿ, ನಿಯಮಗಳ ಬಗ್ಗೆ ವಿವರಗಳಿವೆ. ಡಿ. ಲಿಂಗಯ್ಯನವರ 'ಕರ್ನಾಟಕದ ಗ್ರಾಮದೇವತೆಗಳು', (೧೯೮೪) ಎಂಬ ಕೃತಿಯಲ್ಲಿ ಗ್ರಾಮದೇವತೆ ಎಂದರೆ ಯಾರು? ಗ್ರಾಮದೇವತೆಯ ಉಪಾಸನೆಯಿಂದ ಜನಪದರಿಗೆ ಲಾಭವೇನು? ಗ್ರಾಮದೇವತೆಯ ಆರಾಧನೆಯ ಹಿನ್ನೆಲೆ, ಮಾತೃದೇವತೆಯ ಪ್ರಾಚೀನತೆ ಹೀಗೆ ಹಲವಾರು ವಿವರಗಳ ಕುರಿತು ವಿಶ್ಲೇಷಣೆ ಮಾಡಿದ್ದಾರೆ. ಗ್ರಾಮದೇವತೆಗಳ ಅಧ್ಯಯನದ ಮೂಲಕ ಗ್ರಾಮಾಂತರ ಪ್ರದೇಶದಲ್ಲಿ ನೆಲೆಯಾಗಿರುವ ಜನಪದರ ಸಂಸ್ಕೃತಿ ಆಚಾರ – ವಿಚಾರಗಳ ಬಗೆಗೆ ವ್ಯವಸ್ಥಿತವಾಗಿ ಮಾಹಿತಿಗಳನ್ನು ಕಲೆ ಹಾಕಿದ್ದಾರೆ. Henry white head ರವರ 'The village god of south India', (1921) ಎಂಬ ಕೃತಿಯಲ್ಲಿ ದಕ್ಷಿಣ ಭಾರತದ ಪ್ರಸಿದ್ಧಿ ಪಡೆದಿರುವ ಶಕ್ತಿದೇವತೆಗಳ ಬಗ್ಗೆ ವಿವರಿಸಿದ್ದಾರೆ. ಜೊತೆಗೆ ಆರ್ಯರ ಪ್ರವೇಶದಿಂದ ದ್ರಾವಿಡ ದೈವ ಸ್ಥಿತಿಯ ಕುರಿತು ಉಲ್ಲೇಖಿಸಲಾಗಿದೆ. ಮಾತೃ ಆರಾಧನೆಯ ಅರ್ಥ, ಹಿನ್ನೆಲೆಯನ್ನು ವಿವರಿಸಿದ್ದಾರೆ. ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು, ಕೇರಳ ಭಾಗಗಳಲ್ಲಿ ಸಂಚರಿಸಿ, ಅಲ್ಲಿ ಪ್ರಚಲಿತದಲ್ಲಿರುವ ಮಾತೃದೇವತೆಗಳ ಆರಾಧನೆಯ ವಿವರಗಳನ್ನು ಸಂಗ್ರಹಿಸಿ ವಿಶ್ಲೇಷಣೆ ಮಾಡಿದ್ದಾರೆ. James .J. Prestin ರವರ 'Cult of the Goddess', (1980) ರ ಕೃತಿಯಲ್ಲಿ ಮಾತೃ ಆರಾಧನೆಯ ಬಗ್ಗೆ ವಿವರಗಳು ಇವೆ. Bhattacharya N.N. ರವರ 'Indian Mother Goddess', (1971) ಕೃತಿಯಲ್ಲಿ ಭಾರತ ಸಂಸ್ಕೃತಿಯಲ್ಲಿ ಮಾತೃದೇವತೆಗಳ ಆರಾಧನಾ ಪಾತ್ರ, ಪ್ರಾಣಿ ಬಲಿಯ

ಪ್ರಾಚೀನತೆ, ದೇವತಾರಾಧನೆಯ ಪ್ರಾಮುಖ್ಯತೆ, ಸಾಮಾಜಿಕವಾಗಿರುವ ಆರಾಧನಾ ಸಂಬಂಧದ ಬಗ್ಗೆ ವಿವರಗಳು ಸಿಗುತ್ತವೆ.

Robert Briffault ರವರ 'The Mother', (Volume-3), (1927) ಕೃತಿಯಲ್ಲಿ ಮಾತೃದೇವತೆಗಳ ಆರಾಧನೆ, ಪ್ರಾಚೀನ ಕಾಲಘಟ್ಟಗಳಲ್ಲಿ ಆರಾಧನಾ ಸ್ವರೂಪ, ಆರಾಧನಾ ನಿಯಮಗಳು ಮತ್ತು ಆರಾಧಿಸುವ ಜನ ಸಮುದಾಯಗಳ ವಿವರಗಳು ಸಿಗುತ್ತವೆ. Swami Harshananda ರವರ 'All about Hindu Temple', (1981) ಕೃತಿಯಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಮಾತೃದೇವತೆಗೆ ನೀಡುತ್ತಿದ್ದ ಪ್ರಾಮುಖ್ಯತೆ ಬಗ್ಗೆ ವಿವರಗಳು ಸಿಗುತ್ತವೆ. ಪ್ರಾಚೀನ ಕಾಲಘಟ್ಟದಲ್ಲಿ ಗ್ರಾಮಗಳಲ್ಲಿ ನಿರ್ಮಿಸಲ್ಪಟ್ಟಿದ್ದ ಗುಡಿಗಳ ರಚನಾವಿನ್ಯಾಸದ ಬಗ್ಗೆ ಮಾಹಿತಿಗಳಿವೆ. Victor W. Turner ರವರ 'The Ritural Process', (1969) ಕೃತಿಯಲ್ಲಿ ಧಾರ್ಮಿಕವಾಗಿ ಶಕ್ತಿದೇವತೆಗಳ ಆರಾಧನಾ ಸಂಪ್ರದಾಯ ಪಡೆದುಕೊಂಡ ಪ್ರಾಮುಖ್ಯತೆ ಹಾಗೂ ಸಾಮಾಜಿಕವಾಗಿ ಜನಪದರು ಆಚರಿಸುತ್ತಿದ್ದ ಹಬ್ಬದ ವಿವರಗಳನ್ನು ಅವರು ದಾಖಲಿಸುತ್ತಾರೆ. Wilber Theodore Elmor ರವರ 'Dravidian Gods in Modern Hinduism', (1925) ಕೃತಿಯಲ್ಲಿ ಮಾತೃದೇವತೆಗಳ ಹಬ್ಬ, ಪ್ರಾಣಿ ಬಲಿ ಆಚರಣೆ, ಗ್ರಾಮಾಂತರ ಪ್ರದೇಶಗಳಲ್ಲಿ ನಡೆಯುವ ಆರಾಧನಾ ಸಂದರ್ಭದಲ್ಲಿ ಜನಪದರು ಭಾಗವಹಿಸುವ ಬಗ್ಗೆ ವಿವರಗಳಿವೆ.

M.C.P. Shrivatusava ರವರ 'Mother Goddes in India', (1987) ಕೃತಿಯಲ್ಲಿ ಭಾರತದ ಸಮಾಜದಲ್ಲಿ ಆರಾಧನೆಗೊಳ್ಳುತ್ತಿರುವ ಮಾತೃದೇವತೆಗಳ ಸ್ವರೂಪ ವಿಧಿ - ವಿಧಾನಗಳ ಬಗ್ಗೆ ಮಾಹಿತಿಗಳು ದೊರಕುತ್ತವೆ. ಚಾರಿತ್ರಿಕ ದೃಷ್ಟಿಕೋನದಿಂದ ಮಾತೃದೇವತೆಯ ಕಲ್ಪನೆಯ ಹುಟ್ಟು, ಬೆಳವಣಿಗೆಯನ್ನು ಸಮಗ್ರವಾಗಿ ದಾಖಲೆಗಳೊಂದಿಗೆ ಪರಿಚಯಿಸುವ ಈ ಕೃತಿ ಅಪರೂಪವಾದದ್ದು. ವಿ.ಆರ್. ರಾಮಚಂದ್ರ ದೀಕ್ಷಿತ್ ಅವರ 'ಲಲಿತ ಕಲ್ಪ', (೧೯೪೨) ಎಂಬ ಕೃತಿಯಲ್ಲಿ ಶಾಕ್ತಪಂಥ ಮತ್ತು ತಂತ್ರ ಪರಂಪರೆಯ ಬಗ್ಗೆ ವಿವರಿಸಿದ್ದಾರೆ. ಶಾಕ್ತಪಂಥದ ಬೆಳವಣಿಗೆಯ ಜೊತೆಗೆ ದೇವಿಯ ಶ್ರೀಚಕ್ರದ ಮಹತ್ವ, ಅವಶ್ಯಕತೆಯ ಬಗ್ಗೆ ವಿವರಿಸಿದ್ದಾರೆ. ವೃಷಭೇಂದ್ರ ಸ್ವಾಮಿಯವರ ಪ್ರಧಾನ ಸಂಪಾದಕತ್ವದ 'ಜಾನಪದ ಹಬ್ಬಗಳು', ಜಾನಪದ ಸಾಹಿತ್ಯ ದರ್ಶನದ ಮಾಲಿಕೆ, ಭಾಗ - ೧೦, (೧೯೮೭) ಕೃತಿಯಲ್ಲಿ ಗ್ರಾಮದೇವತೆಗಳ ಆಚರಣೆಗಳ ಮೂಲವನ್ನು ತಿಳಿಯಲು ಪ್ರಯತ್ನಿಸಲಾಗಿದೆ. ನಮ್ಮ ನಾಡಿನ ಪ್ರಮುಖ ಹಬ್ಬಗಳಾದ ಯುಗಾದಿ, ಮಣ್ಣೆತ್ತಿನ ಅಮಾವಾಸ್ಯೆ, ನಾಗರಪಂಚಮಿ, ಬನ್ನಿಹಬ್ಬ, ಹಟ್ಟಿಯ ಹಬ್ಬ, ಸೀಗಿ ಹುಣ್ಣಿಮೆ, ಗೌರಿ ಹುಣ್ಣಿಮೆ, ಕಾಮನ ಹಬ್ಬ ಮೊದಲಾದ ಹಬ್ಬಗಳ ವಿಶೇಷತೆ, ಅಂದು ನಡೆಯುವ ಆಚರಣೆಗಳಲ್ಲಿ ನಡೆಯುವ ಭಿನ್ನತೆಯನ್ನು ಚರ್ಚಿಸಲಾಗಿದೆ. ಇಲ್ಲಿ ಮುಖ್ಯವಾಗಿ ಪ್ರಕೃತಿಗೆ ಸಂಬಂಧಿಸಿದ ಹಬ್ಬಗಳಾಗಿರುವುದನ್ನು ಗಮನಿಸುವುದು.

ಸುಭಾಷ್ ಭೋಗೇರ ಅವರು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ 'ಬನಶಂಕರಿ ಜಾನಪದೀಯ ಅಧ್ಯಯನ', (೨೦೦೪) ಎಂಬ ಪಿಎಚ್.ಡಿ. ಅಪ್ರಕಟಿತ ಮಹಾ ಪ್ರಬಂಧದಲ್ಲಿ ಬನಶಂಕರಿ ದೇವಿಯ ನಂಬಿಕೆ, ಆಚರಣೆಗಳಿಗೆ ಸೀಮಿತವಾದ ಪ್ರಬಂಧವಾಗಿ ಪರಿಗಣಿಸಲ್ಪಡುತ್ತದೆ. ಪ್ರಬಂಧದಲ್ಲಿ ಬನಶಂಕರಿ ಕ್ಷೇತ್ರದ ಭೌಗೋಳಿಕ ಪರಿಸರ, ಚಾರಿತ್ರಿಕ ಹಿನ್ನೆಲೆಯ ವಿಷಯಗಳು ಗೌಣವಾಗಿವೆ.

ಮಂಜುನಾಥ ಬೇವಿನಕಟ್ಟಿಯವರ 'ಜನಪದ ನಂಬಿಕೆಗಳು', (೧೯೯೬) ಮಾನವನ ಬದುಕಿನಲ್ಲಿ ನಂಬಿಕೆಗಳು ಪ್ರಮುಖ ಪಾತ್ರವನ್ನು ವಹಿಸುತ್ತಾ ಅವು ಹೇಗೆ ಪ್ರಭಾವವನ್ನು ಬೀರಿದೆ ಎಂಬುದನ್ನು ಸೊಗಸಾಗಿ ಚರ್ಚಿಸಿದ್ದಾರೆ. ಇಂತಹ ನಂಬಿಕೆಗಳು ಕೆಲವು ಸಾರಿ ವ್ಯಕ್ತಿಯ ಮುನ್ನಡೆಗೆ ಮಾರಕವಾಗುವುದರ ಬಗ್ಗೆ ವಿವರಿಸಲಾಗಿದೆ.

ಧ್ರುವರಾಜ ನಾ. ಗದಗಕರ ಅವರ 'ದೇಗುಲ ರಥಶಿಲ್ಪ', (೧೯೯೯) ಕೃತಿಯಲ್ಲಿ ರಥಗಳ ಪ್ರಾಚೀನತೆಯ ಕುರಿತು ಹೇಳುತ್ತಾ, ಕರ್ನಾಟಕದ ರಥದ ಸ್ವರೂಪ ಹಾಗೂ ಲಕ್ಷಣಗಳ ಬಗೆಗೆ ಚರ್ಚಿಸಿರುವರು. ರಥಗಳ ನಿರ್ಮಾಣ, ರಥದ ಶಿಲ್ಪ, ರಥೋತ್ಸವ ಬೆಳೆದುಬಂದ ರೀತಿಯನ್ನು ಚರ್ಚಿಸಿದ್ದಾರೆ. ಕೃತಿಯಲ್ಲಿ ಕರ್ನಾಟಕದ ಸಂಸ್ಕೃತಿಯ ಹಿನ್ನೆಲೆಯೊಂದಿಗೆ ಅಧ್ಯಯನ ನಡೆಸಿದ್ದರೂ ಸಾಂದರ್ಭಿಕವಾಗಿ ವಿವಿಧೆಡೆ ಕಂಡುಬರುವ ಅಮೂಲ್ಯ ರಥಗಳ ಹಾಗೂ ರಥೋತ್ಸವದ ವಿವರಣೆಯನ್ನು ಆಯ್ದು ಉಲ್ಲೇಖಿಸಿದ್ದಾರೆ. ಅಂಥ ಪ್ರಮುಖ ರಥಗಳಲ್ಲಿ ಒಂದಾದ ಬನಶಂಕರಿ ರಥ, ರಥೋತ್ಸವದ ಬಗ್ಗೆ ವಿವರಣೆಯನ್ನು ಒದಗಿಸಿರುವರು.

ಎಸ್. ಎಸ್. ಹಿರೇಮಠರವರ ೧೯೯೩, 'ಕರ್ನಾಟಕ ದಲಿತ ಸಂಸ್ಕೃತಿ ಪರಂಪರೆ', ಭಾಗ – ೨, ಜಾತ್ರೆಗಳು (೧೯೯೩) ಕೃತಿಯಲ್ಲಿ ದ್ರಾವಿಡ ಸಂಸ್ಕೃತಿಯ ಹಿನ್ನೆಲೆಯಲ್ಲಿ ಗ್ರಾಮದೇವತೆಗಳನ್ನು ಹಾಗೂ ಕರ್ನಾಟಕ ಸಂಸ್ಕೃತಿಯ ಅಧ್ಯಯನ ನಡೆಸಲಾಗಿದೆ. ಆರ್ಯ ದ್ರಾವಿಡರ ಸಂಘರ್ಷ, ಪುರುಷಪ್ರಧಾನ ಸಮಾಜದ ಬಗ್ಗೆ ಅಧ್ಯಯನ ನಡೆಸಿದ್ದಾರೆ. ಬಿ.ಪಿ. ಪಾಟೀಲರವರು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ (೧೯೯೦), 'ಉತ್ತರ ಕರ್ನಾಟಕದ ಗ್ರಾಮದೇವತೆ', ಅಪ್ರಕಟಿತ ಪಿಎಚ್.ಡಿ., ಮಹಾ ಪ್ರಬಂಧದಲ್ಲಿ ಗ್ರಾಮದೇವತೆಗಳ ಅಸ್ತಿತ್ವವನ್ನು ಗುರುತಿಸುವುದರೊಂದಿಗೆ, ನಾಡಿನ ಅನೇಕ ಗ್ರಾಮದೇವತೆಗಳ ಬಗ್ಗೆ ಪ್ರಬಂಧದಲ್ಲಿ ಚರ್ಚೆ ಮಾಡಲಾಗಿದೆ. ಸಿ.ಎಸ್. ಶಿವಕುಮಾರಸ್ವಾಮಿಯವರ (ಸಂ), 'ಕರ್ನಾಟಕದ ಜಾತ್ರೆಗಳು', (೧೯೮೮) ಕೃತಿಯಲ್ಲಿ ಜಾತ್ರೆಗೆ ಸಂಬಂಧಿಸಿದಂತಹ ಪೂರ್ಣ ಪ್ರಮಾಣದ ವಿವರಗಳನ್ನು ಹಾಗೂ ಗ್ರಾಮದೇವತೆಯ ವೈಶಿಷ್ಟ್ಯ ಚಿತ್ರಣವನ್ನು ಕಾಣಬಹುದಾಗಿದೆ. ಜಾತ್ರೆಗಳೊಂದಿಗೆ ಕಲೆ, ಸಮಾಜ, ಸಾಹಿತ್ಯ, ಧರ್ಮಗಳು ಹೇಗೆ ಹೊಂದಾಣಿಕೆಯನ್ನು ಪಡೆದುಕೊಂಡಿವೆ ಎಂಬುದನ್ನು ತಿಳಿಸುವುದರೊಂದಿಗೆ ಜಾತ್ರೆಯ ಸ್ವರೂಪ, ಪೌರಾಣಿಕ ಹಿನ್ನೆಲೆ, ಆಧುನಿಕ ಸಂದರ್ಭದಲ್ಲಿ ಇವುಗಳಲ್ಲಿ ಆಗುತ್ತಿರುವ ಬದಲಾವಣೆಯ ಬಗ್ಗೆ ಚರ್ಚಿಸಲಾಗಿದೆ.

ಕಲವೀರ ಮನ್ವಾಚಾರ್‌ರವರು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ (೨೦೦೨), 'ಮಾತೃದೇವತೆ ಉಗಮ ಮತ್ತು ವಿಕಾಸ' ಅಪ್ರಕಟಿತ, ಪಿಎಚ್.ಡಿ. ಮಹಾ ಪ್ರಬಂಧದಲ್ಲಿ ಮಾತೃದೇವತೆಯ ಆರಾಧನೆಯ ಹಿನ್ನೆಲೆ, ಉಗಮ ಮತ್ತು ವಿಕಾಸದ ಕುರಿತು ಸುದೀರ್ಘವಾಗಿ ವಿವರಗಳನ್ನು ನೀಡಿದ್ದಾರೆ. ಪಾಶ್ಚಾತ್ಯ ಮತ್ತು ಭಾರತೀಯ ಸಂಸ್ಕೃತಿಯಲ್ಲಿ ಮಾತೃದೇವತೆ ಸ್ವರೂಪ, ವಿಧಾನಗಳ ಬಗ್ಗೆ, ಗ್ರಾಮದೇವತೆಗಳು ಶಿಷ್ಟ ದೇವತೆಗಳಾಗಿ ರೂಪಗೊಂಡ ಬಗೆಗೆ, ಶಕ್ತಿ ಆರಾಧನೆಯ ಕುರಿತು ಪ್ರಬಂಧದಲ್ಲಿ ಅನಾವರಣಗೊಂಡಿದೆ. T.A. Gopinatha Rao ಅವರ 'Elements of Hindu Iconography', (Voll-2), (1993) ಕೃತಿಯಲ್ಲಿ ಮುಖ್ಯವಾಗಿ ದೇವಿ ಆರಾಧನೆಗೆ ಸಂಬಂಧಿಸಿದ ಹಾಗೂ ಶಕ್ತಿಯ ವಿವಿಧ ಸ್ವರೂಪ, ವಿವಿಧ ದೇವಿಯರ ಪ್ರತಿಮಾ ಲಕ್ಷಣ ಕುರಿತು ಸಮಗ್ರ ವಿವರಗಳನ್ನು ಚಿತ್ರಗಳ ಸಹಿತ ಒದಗಿಸಿದ್ದಾರೆ. ಮುಖ್ಯವಾಗಿ ಲಕ್ಷ್ಮೀ, ದುರ್ಗೆ, ಸರಸ್ವತಿಯರ ವಿವಿಧ ಸ್ವರೂಪಗಳ ಪ್ರತಿಮಾ ಲಕ್ಷಣಗಳನ್ನು ಉಲ್ಲೇಖಿಸಿದ್ದಾರೆ.

**ಲೇಖನಗಳು**

ಮೃತ್ಯುಂಜಯ ಹೊರಕೇರಿ ಅವರ (೨೦೦೯) 'ಬಾದಾಮಿ ಬಂಡಾಯ' ಲೇಖನದಲ್ಲಿ ಬಾದಾಮಿಯ ಮೇಲೆ ಬ್ರಿಟಿಷ್ ದಾಳಿಯ ಕುರಿತು ಉಲ್ಲೇಖಿಸಿದ್ದಾರೆ. ಸಾತಾರಾದ ರಾಜ ಪ್ರತಾಸಿಂಹನ ನಿಷ್ಠಾವಂತ ಸೈನಿಕನಾದ ನರಸಿಂಹ ದತ್ತಾತ್ರೇಯ ಪೇಟ್ಕರ ಬ್ರಿಟಿಷರ ವಿರುದ್ಧ ಬಂಡೆದ್ದು ಬಾದಾಮಿಯನ್ನು ವಶಪಡಿಸಿಕೊಂಡಿದ್ದು, ನಂತರ ಎ. ಬಿಟ್ಟಿಂಗ್‌ಟನ್ ನೇತೃತ್ವದ ಬ್ರಿಟಿಷ್ ಸೈನ್ಯ ಬಾದಾಮಿಯನ್ನು ಮತ್ತೆ ವಶಪಡಿಸಿಕೊಂಡಿದ್ದ ಬಗ್ಗೆ ಬರೆದಿರುವರು.

ಜೇಮ್ಸ್ ಬರ್ಜೆಸರವರ 'Antiquities of Belgaum and Kaladagi Districts' ಎಂಬ ೧೮೭೪ರ ವರದಿಯ ಬನಶಂಕರಿ ಮತ್ತು ಅರಳಿ ತೀರ್ಥ ಎಂಬ ಲೇಖನದಲ್ಲಿ ಬನಶಂಕರಿ ಕ್ಷೇತ್ರದ ವರ್ಣನೆ ಹಾಗೂ ದೇವಾಲಯದ ವಾಸ್ತುಶೈಲಿಯ ಕುರಿತು ವಿವರಿಸಿದ್ದಾರೆ.

ದ.ರಾ. ಪುರೋಹಿತರವರ 'ಇತಿಹಾಸದ ಪುಟಗಳಲ್ಲಿ ಬಾದಾಮಿ ಬನಶಂಕರಿ' (೨೦೦೯) ಎಂಬ ಲೇಖನದಲ್ಲಿ ಬನಶಂಕರಿ ದೇವಿಯು ಧಾರ್ಮಿಕವಾಗಿ ಮತ್ತು ಐತಿಹಾಸಿಕವಾಗಿ ಮಹತ್ವವನ್ನು ಪಡೆದುಕೊಂಡಿರುವ ಬಗೆಗೆ ಚರ್ಚಿಸಿದ್ದಾರೆ.

ಶ್ರೀಧರ ಬರದ್ವಾಡರವರ 'ಬನದ ದೇವಿ ಬನಶಂಕರಿ' (೨೦೦೯) ಎಂಬ ಲೇಖನದಲ್ಲಿ ಬನಶಂಕರಿಯ ಪೌರಾಣಿಕ ಹಿನ್ನೆಲೆಯನ್ನು ವಿವರಿಸುತ್ತಾ ಬನದ ದೇವಿಗಿರುವ ವಿವಿಧ ನಾಮಗಳನ್ನು ಸೂಚಿಸಿದ್ದಾರೆ. ಹಾಗೆಯೇ ಬನಶಂಕರಿಯ ವಿವಿಧ ಆಚರಣೆಗಳ ಬಗ್ಗೆ ವಿವರಿಸಿರುವರು.

ಜೋತ್ಸ್ನಾ ಕಾಮತ್‌ರವರ 'ಲಜ್ಜಾಗೌರಿ ಜೀವೋತ್ಪತ್ತಿಯ ಪ್ರತೀಕ' ಎಂಬ ಲೇಖನದಲ್ಲಿ ಲಜ್ಜಾಗೌರಿ ಶಿಲ್ಪಗಳು ಸಿಕ್ಕಿರುವ ಪ್ರಮುಖ ನೆಲೆಗಳ ಕುರಿತು ವಿವರಿಸಿದ್ದಾರೆ. ಈ ಶಿಲ್ಪಗಳು ಹೆಚ್ಚಾಗಿ ನದಿ, ಕೊಳ್ಳ, ನಿರ್ಜನ ಕಣಿವೆ ಪ್ರದೇಶಗಳಲ್ಲಿ ಉಪಾಸನಾಗೊಳ್ಳುತ್ತಿರುವ ಬಗ್ಗೆ

ತಿಳಿಸಿರುವರು. ಮಾತೃದೇವತಾ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಲಜ್ಜಾಗೌರಿಯನ್ನು ಸಮೃದ್ಧಿ, ಫಲದಾಯಿನಿಯ ರೂಪದಲ್ಲಿ ಪೂಜಿಸಲಾಗುತ್ತಿವೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅಲ್ಲದೆ ಲಜ್ಜಾಗೌರಿಯ ತಾಂತ್ರಿಕ ಪೂಜಾ ರೂಪದ ಕುರಿತು ಲೇಖನದಲ್ಲಿ ಚರ್ಚಿಸಿರುವರು.

ಅ. ಸುಂದರ ಅವರ 'ಉತ್ತರ ಕರ್ನಾಟಕದಲ್ಲಿಯ ಕೆಲವು ತಾಂತ್ರಿಕ ಮೂರ್ತಿಗಳು' ಎಂಬ ಲೇಖನದಲ್ಲಿ ತಾಂತ್ರಿಕ ಪಂಥದ ಉಪಾಸನೆಯ ವಿಧಾನಗಳನ್ನು ಮತ್ತು ಸಂಕೇತಗಳ ಬಗೆಗೆ ಚರ್ಚಿಸಿದ್ದಾರೆ. ಅಲ್ಲದೆ ಈ ಭಾಗದ ಲಜ್ಜಾಗೌರಿಯ ಮೂರ್ತಿಗಳಿರುವ ಪರಿಸರ ಹಾಗೂ ಕಾಲಮಾನದ ಕುರಿತು ವಿವರಿಸಿರುವರು. ಮುಖ್ಯವಾಗಿ ಮಹಾಕೂಟ, ಬಳ್ಳಿಗಾವಿ, ಸನ್ನತಿ, ಐಹೊಳೆ, ಬಾದಾಮಿಯ ಹುಲಿಗೆಮ್ಮನಕೊಳ್ಳ, ಸಿದ್ಧನಕೊಳ್ಳ, ನಾಗನಾಥಕೊಳ್ಳ, ಬೀಳಗಿ, ಮಜತಿಗಳಲ್ಲಿ ಸಿಕ್ಕಿರುವ ಲಜ್ಜಗೌರಿ ಶಿಲ್ಪಗಳ ಬಗ್ಗೆ ಚರ್ಚಿಸಿದ್ದಾರೆ. ಲೇಖನದಲ್ಲಿ ಉತ್ತರ ಕರ್ನಾಟಕದಲ್ಲಿ ಇದುವರೆಗೂ ಕಂಡುಬಂದ ತಾಂತ್ರಿಕ ಪೂಜಾ ಮೂರ್ತಿಗಳ ಬಗ್ಗೆ ವಿವೇಚಿಸಿರುವುದು ಗಮನಾರ್ಹ.

ಎಂ.ಎಂ. ಕಲುಬರ್ಗಿಯವರ 'ಬಾದುಬ್ಬೆ' (೧೯೮೮) ಎಂಬ ಲೇಖನದಲ್ಲಿ ಬನಶಂಕರಿಗೆ ಇರುವ ವಿವಿಧ ನಾಮಗಳ ಕುರಿತು, ಪದನಿಷ್ಪತ್ತಿ ಬಗೆಗೆ ತಮ್ಮ ಲೇಖನದಲ್ಲಿ ಚರ್ಚಿಸಿರುವರು. ಅಲ್ಲದೆ ಬಾದುಬ್ಬೆಯೆಂಬ ಪದದ ಮೂಲ ಅರ್ಥವನ್ನು ಭಾಷಾಶಾಸ್ತ್ರೀಯವಾಗಿ ತೋರಿಸುವ ಪ್ರಯತ್ನ ಮಾಡಿದ್ದಾರೆ.

ವಾಸುದೇವ ಬಡಿಗೇರ ರವರ 'ಬಾದುಬ್ಬೆ – ಬನಶಂಕರಿ ಶಿಲ್ಪ' (೧೯೯೬) ಎಂಬ ಲೇಖನದಲ್ಲಿ ವಿವಿಧ ಶಾಸನಗಳಲ್ಲಿ ಉಲ್ಲೇಖವಾಗಿರುವ ಬನಶಂಕರಿ ನಾಮಗಳನ್ನು ಉಲ್ಲೇಖಿಸುತ್ತಾ, ಸ್ತನಗಳು, ಮುಖದ ಮೇಲೆ ಮೀಸೆಯಿರುವ ಬನಶಂಕರಿಯ ಶಿಲ್ಪಗಳ ಪ್ರತಿಮಾ ಲಕ್ಷಣಗಳನ್ನು ತಿಳಿಸುವುದರ ಜೊತೆಗೆ ದೇವಿಯ ವಿಗ್ರಹದ ಇಂತಹ ವೈಲಕ್ಷಣಗಳಿಗೆ ಸೃಷ್ಟಿಕರ್ತೆಯಾದ್ದರಿಂದ ದೇವಿಯನ್ನು ಸ್ತ್ರೀ, ಪುರುಷನ ಸಮ್ಮಿಳನ ರೂಪದಲ್ಲಿ ಆರಾಧಿಸಲು ಪ್ರಾರಂಭಿಸಿರಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಶೀಲಾಕಾಂತ ಪತ್ತಾರ ಅವರ 'ಬನದೇವಿ, ಬನದ ಮಹಾಮಾಯಿ ಮತ್ತು ಬನಶಂಕರಿ' (೨೦೧೦) ಲೇಖನದಲ್ಲಿ ೧೧ನೆಯ ಶತಮಾನದಲ್ಲಿ ಬನದೇವಿಯಾಗಿ, ೧೬ನೇ ಶತಮಾನದಲ್ಲಿ ಬನದ ಮಹಾಮಾಯಿಯಾಗಿ, ೧೮ನೇ ಶತಮಾನದಲ್ಲಿ ಬನಶಂಕರಿಯಾಗಿ ದೇವಿಯು ವಿವಿಧ ಕಾಲಘಟ್ಟದಲ್ಲಿ ವಿವಿಧ ನಾಮಗಳಿಂದ ಆರಾಧಿಸಲ್ಪಟ್ಟಿದ್ದ ಬಗ್ಗೆ ವಿವರಿಸಿದ್ದಾರೆ. ಕ್ಷೇತ್ರದಲ್ಲಿರುವ ದೇವಾಲಯದ ಜೀರ್ಣೋದ್ಧಾರ ಕಾರ್ಯವು ವಿವಿಧ ಅರಸು ಮನೆತಗಳ ಅವಧಿಯಲ್ಲಿ ನಡೆದಿರುವ ಬಗ್ಗೆ ಶಾಸನಗಳನ್ನು ಆಧಾರವಾಗಿಟ್ಟುಕೊಂಡು ವಿವರಿಸಲು ಪ್ರಯತ್ನಿಸಿರುವರು. ಹಾಗೆಯೇ ಪ್ರಸ್ತುತ ಪೂಜೆಗೊಳ್ಳುತ್ತಿರುವ, ಹರಿದ್ರಾತೀರ್ಥದಲ್ಲಿ ಸಿಕ್ಕಿರುವ ಕಾಳಿ ವಿಗ್ರಹದ ಪ್ರತಿಮಾ ಲಕ್ಷಣಗಳ ಬಗೆಗೆ ಲೇಖನದಲ್ಲಿ ಚರ್ಚಿಸಿದ್ದಾರೆ.

ಎಂ. ಚಿದಾನಂದಮೂರ್ತಿ 'ಬಾದುಬ್ಬೆ - ಬಾದುಮಯ್ಯ, ಬನಾಶಂಕರಿ ಪೆಟ್ಟಿಗೆ - ಲಜ್ಜಾಗೌರಿ' (೨೦೦೨) ಎಂಬ ಲೇಖನದಲ್ಲಿ ಬಾದುಬ್ಬೆ ಗ್ರಾಮದೇವಿಯ ಕುರಿತು ಚರ್ಚಿಸುತ್ತಾ, ಅನೇಕ ಶಾಸನಗಳಲ್ಲಿ ಉಲ್ಲೇಖವಾಗಿರುವ ಬಾದಮ್ಮ, ಬಾದುಬ್ಬೆಯ ಪರ್ವ, ಬಾ[ದು]ವೆ, ಬಾದುವುುಂಯ್ಯ, ಬಾದುಂಬೆ, ಹೀಗೆ ದೇವಿಯ ಹೆಸರುಗಳು ಪರ್ವ, ಸ್ಥಳ, ವ್ಯಕ್ತಿನಾಮಗಳಿರುವುದನ್ನು ಗುರುತಿಸಿದ್ದಾರೆ. ಹಾಗೆಯೇ ನಾಡಿನ ವಿವಿಧ ಭಾಗಗಳಲ್ಲಿ ದೊರೆಯುವ ಸ್ತ್ರೀ, ಪುರುಷ ಲಕ್ಷಣಗಳಿರುವ ಬನಶಂಕರಿ ವಿಗ್ರಹಗಳ ಬಗ್ಗೆ ವಿವರಿಸುತ್ತಾ, ಬನಶಂಕರಿ ಮರದ ಪೆಟ್ಟಿಗೆಗಳ ಬಗ್ಗೆ ತಿಳಿಸಿದ್ದಾರೆ. ಪೆಟ್ಟಿಗೆಗಳಲ್ಲಿ ಲಿಂಗಾಕೃತಿಯ ಶಿಲೆಗಳು, ಲೋಹದ ಹಾವಿನ ವಿಗ್ರಹ, ಚಿಕ್ಕ ಲೋಹದ ಕೊಡೆಗಳು, ಲೋಹದ ಕಣ್ಣುಗಳು, ಲೋಹದ ಮೀಸೆಗಳಿರುವುದನ್ನು ಗುರುತಿಸಿ ಅವುಗಳನ್ನು ಪೆಟ್ಟಿಗೆಯಲ್ಲಿಟ್ಟು ಬನಶಂಕರಿ ಎಂದು ಪೂಜಿಸುತ್ತಿರುವುದನ್ನು, ಅವುಗಳ ಸುತ್ತ ಹೆಣೆದುಕೊಂಡಿರುವ ನಂಬಿಕೆಗಳ ಬಗ್ಗೆ ಲೇಖನದಲ್ಲಿ ಚರ್ಚಿಸಿದ್ದಾರೆ. ಅಲ್ಲದೆ ಉತ್ತರ ಕರ್ನಾಟಕದ ಭಾಗದಲ್ಲಿ ದೊರೆಯುವ ಲಜ್ಜಾಗೌರಿ ವಿಗ್ರಹಗಳ ವೈಶಿಷ್ಟ್ಯತೆ, ಆರಾಧನೆಯ ಹಿನ್ನೆಲೆ ಉದ್ದೇಶವನ್ನು ವಿವರಿಸಿರುವರು. ಈ ವಿಗ್ರಹಗಳ ಆರಾಧನೆಯು ಸಮೃದ್ಧಿಯ ಪ್ರತೀಕ ಎಂದಿದ್ದಾರೆ.

ರಹಮತ್ ತರೀಕೆಯವರ 'ಪ್ರತಿ ಸಂಸ್ಕೃತಿ' (೧೯೯೩) ಎಂಬ ಕೃತಿಯಲ್ಲಿ ಗ್ರಾಮದೇವತೆಗಳು : ಫ್ಯೂಡಲ್ ಸಂಸ್ಕೃತಿಯೊಳಗೆ ಎಂಬ ಲೇಖನವಿದೆ. ಸಾಮಾಜಿಕವಾಗಿ ರೂಢಿಯಲ್ಲಿರುವ ಆರಾಧನಾ ಚೌಕಟ್ಟನ್ನು ವಿಮರ್ಶೆಗೊಳಪಡಿಸಿದ್ದಾರೆ. ಇಡೀ ಸಂಸ್ಕೃತಿಯೊಳಗೆ ಮಾತೃದೇವತೆಗಳ ಪಾತ್ರವನ್ನು ತಾತ್ವಿಕವಾಗಿ ವಿವರಿಸಿದ್ದಾರೆ.

ಕೆ. ವಸಂತ ಲಕ್ಷ್ಮೀ ಅವರ 'ವಾಸಂತಿಕಾ ದೇವಿ ಒಂದು ಚಿಂತನೆ' (೧೯೯೬) ಲೇಖನದಲ್ಲಿ ವಾಸಂತಿಕಾ ದೇವಿಯ ಚಾರಿತ್ರಿಕ ಹಿನ್ನೆಲೆಯನ್ನು, ದೇವಿ ಆರಾಧನೆಯ ಬಗ್ಗೆ ಹಾಗೂ ಶಿಲ್ಪಗಳ ಹಿನ್ನೆಲೆಯನ್ನು ಚರ್ಚಿಸಿದ್ದಾರೆ. ವಾಸಂತಿಕಾ ದೇವಿಯು ದುರ್ಗಾಪರಮೇಶ್ವರಿ, ಚಾಮುಂಡೇಶ್ವರಿ, ಚೌಡೇಶ್ವರಿ, ಲಲಿತಪರಮೇಶ್ವರಿ, ವಸಂತಪರಮೇಶ್ವರಿ, ರಾಜರಾಜೇಶ್ವರಿ, ಬನಶಂಕರಿ, ಶಾಖಾಂಭರಿ, ಮಾಹಮಾಯಿ, ಮಹಾಮಾರಿಕಾಂಬಾ ಮೊದಲಾದ ಹೆಸರುಗಳಿಂದ ಆರಾಧಿಸಲ್ಪಡುತ್ತಿರುವುದನ್ನು ಪ್ರಸ್ತಾಪಿಸಿದ್ದಾರೆ. ಈ ದೇವಿಯನ್ನು ಮಲೆನಾಡಿನ ಜನರು ಪೂಜಿಸುತ್ತಿದ್ದು, ಮೂಡಗೇರಿ ತಾಲೂಕಿನ (ಸೊಸೆವೂರು), ಅಂಗಡಿ ಗ್ರಾಮದಲ್ಲಿ ಮತ್ತು ಚಿಕ್ಕಮಗಳೂರು ಜಿಲ್ಲೆಯ ಲಕ್ಕುಂದಾ ಎಂಬ ಗ್ರಾಮಗಳಲ್ಲಿ ಈ ದೇವಿಯನ್ನು ಆರಾಧಿಸುವರು. ಹಾಗೂ ದೇವಿಗಾಗಿ ದೇವಾಲಯಗಳನ್ನು ಕಟ್ಟಿಸಿರುವುದನ್ನು ಉಲ್ಲೇಖಿಸಿದ್ದಾರೆ.

ರಹಮತ್ ತರೀಕೆರೆಯವರ 'ಬನಶಂಕರಿ : ಜಾತ್ರೆಯೋ ನಾಟಕೋತ್ಸವವೋ?' (೨೦೧೧) ಬನಶಂಕರಿಯ ಜಾತ್ರೆಯ ವಿಶೇಷತೆಯನ್ನು ವಿವರಿಸಿದ್ದಾರೆ. ಜಾತ್ರೆಗೆ ಧಾರ್ಮಿಕ

ಉದ್ದೇಶದಿಂದ ಬರುವವರ ಸಂಖ್ಯೆಗಿಂತ ಅಲ್ಲಿನ ಸಿನಿಮಾ, ನಾಟಕಗಳನ್ನು ನೋಡುವವರ ಸಂಖ್ಯೆಯು ಅಧಿಕವಾಗಿದ್ದು, ಜಾತ್ರೆಯು ಬದಲಾಗಿರುವ ಸ್ವರೂಪದ ಬಗ್ಗೆ ಲೇಖನದಲ್ಲಿ ಚರ್ಚಿಸಿದ್ದಾರೆ. ವೆಂಕನಗೌಡ ಬಿ. ಸಣ್ಣಸಕ್ಕರಗೌಡರ, 'ಬನಶಂಕರಿ ಜಾತ್ರೆಯ ಹದಿನಾರು ಎತ್ತಿನ ಹಳಿ ಬಂಡಿಗಳು' (೨೦೦೬) ಲೇಖನದಲ್ಲಿ ಬನಶಂಕರಿ ಜಾತ್ರೆಗೆ ಮಾಡಲಗೇರಿ ಗ್ರಾಮದಿಂದ ರಥದ ಹಗ್ಗವನ್ನು ತರಲಾಗುವುದು. ಮಾಡಲಗೇರಿಯು ಬನಶಂಕರಿಯ ತವರೂರು ಎಂಬುವುದು ಜನಪದರ ನಂಬಿಕೆ. ಇಂದಿಗೂ ರಥದ ಹಗ್ಗವನ್ನು ಈ ಗ್ರಾಮದಿಂದ ಅತ್ಯಂತ ಸಂಭ್ರಮದಿಂದ, ಅಲಂಕೃತಗೊಂಡ ೧೬ ಎತ್ತಿನ ಹಳಿ ಬಂಡಿಯನ್ನು ಶ್ರೀಕ್ಷೇತ್ರದವರೆಗೆ ಮೆರವಣಿಗೆ ಮೂಲಕ ಹಗ್ಗವನ್ನು ತರಲಾಗುವುದು. ಅಂದು ಗ್ರಾಮದಲ್ಲಿ ಹಬ್ಬದ ವಾತಾವರಣ ಸೃಷ್ಟಿಯಾಗಿರುತ್ತದೆ ಎಂದು ಈ ಲೇಖನದಲ್ಲಿ ವಿವರಿಸಿದ್ದಾರೆ. ಮೆರವಣಿಗೆಯು ಬರುವಾಗ ದೇವಿ ಕುರಿತು ಗ್ರಾಮಸ್ಥರು ದೇವಿಯ ಉದ್ಘೋಷಗಳನ್ನು, ಹಾಡುಗಳನ್ನು ಹಾಡುವುದರ ಬಗೆಗೆ ಲೇಖನದಲ್ಲಿ ಪ್ರಸ್ತಾಪಿಸಿದ್ದಾರೆ.

**ಗ್ಯಾಸೆಟಿಯರ್‌ಗಳು**

Suryanath U. Kamath, 1982, Karnataka State Gazetter Part-1 ಮತ್ತು James .M. Campbell, 1884, Gazetter of the Bombay Presidency Vol-xxii, ಇವುಗಳಲ್ಲಿ ಬಾದಾಮಿಯ ಭೌಗೋಳಿಕ, ಪುರಾತತ್ವ ಪರಿಸರ ಮತ್ತು ಚಾರಿತ್ರಿಕ ಹಿನ್ನೆಲೆಯ ಬಗ್ಗೆ ನೀಡಿರುವ ಮಾಹಿತಿಯನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ವೆಂಕಟರಂಗೋ ಕಟ್ಟಿ (ಅನು), ಬಾಂಬೆ ಗ್ಯಾಸೆಟಿಯರ್‌ನಲ್ಲಿ ಬಾದಾಮಿಯ ಭೌಗೋಳಿಕ, ಪುರಾತತ್ವ ಪರಿಸರ, ಚಾರಿತ್ರಿಕ ಹಿನ್ನೆಲೆ, ಈ ಪ್ರದೇಶದಲ್ಲಿ ಆಳ್ವಿಕೆ ಮಾಡಿದ ಅರಸು ಮನೆತನದವರು ನೀಡಿದ ಕೊಡುಗೆ ಬಗ್ಗೆ ವಿವರಿಸಿದ್ದಾರೆ. ಅಲ್ಲದೆ ಬಾದಾಮಿ ಬನಶಂಕರಿ ದೇವಿಯ ಚಾರಿತ್ರಿಕ ಹಿನ್ನೆಲೆಯನ್ನು ಶಾಸನಗಳ ಮಾಹಿತಿಗಳು, ದೇವಿಯ ವಿಗ್ರಹಕ್ಕೆ ಸಂಬಧಿಸಿದ ಪ್ರತಿಮಾ ಲಕ್ಷಣಗಳು ಹಾಗೂ ಈ ಕ್ಷೇತ್ರದಲ್ಲಿರುವ ಇತರೆ ಸ್ಮಾರಕಗಳ ಬಗ್ಗೆ ವಿವರಿಸಿದ್ದಾರೆ.

ಆರ್. ಮುನಿಸ್ವಾಮಿ, (ಸಂ), 'ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಬಿಜಾಪುರ ಜಿಲ್ಲೆ' ಬಾದಾಮಿ ಪರಿಸರದ ಭೌಗೋಳಿಕ, ಪುರಾತತ್ವ ಹಿನ್ನೆಲೆ, ರಾಜಕೀಯ ಚರಿತ್ರೆ ಬಗ್ಗೆ ವಿವರಗಳಿವೆ. ಅಲ್ಲದೆ ಬಾದಾಮಿಯ ಪ್ರೇಕ್ಷಣೀಯ ಸ್ಥಳಗಳಲ್ಲಿ ಒಂದಾಗಿರುವ ಬನಶಂಕರಿ ಕ್ಷೇತ್ರದ ಕುರಿತು ನೀಡಿರುವ ಮಾಹಿತಿಯನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಹೀಗೆ ಬಾದಾಮಿ ಪರಿಸರಕ್ಕೆ ಸಂಬಂಧಿಸಿದಂತೆ ಚಾರಿತ್ರಿಕ ಹಿನ್ನೆಲೆ, ದೇವಾಲಯ, ಶಾಸನ, ನಾಣ್ಯ ಇನ್ನು ಮುಂತಾದ ವಿಚಾರಗಳ ಕುರಿತು ಹಲವಾರು ಸಂಶೋಧನಾ ಲೇಖನಗಳು, ಗ್ರಂಥಗಳು ಪ್ರಕಟವಾಗಿವೆ. ಆದರೆ ಬಾದಾಮಿ ಬನಶಂಕರಿ ಪರಿಸರದಲ್ಲಿ

ಇನ್ನೂ ಪ್ರಕಟವಾಗದೇ ಇರುವ ದೇವಾಲಯಗಳು, ಶಿಲ್ಪಗಳು, ವೀರಗಲ್ಲು, ಶಾಸನ ಇತರೆ ಸ್ಮಾರಕಗಳಿವೆ. ಈ ಹಿನ್ನೆಲೆಯನ್ನು ಆಧರಿಸಿ ಈ ಪರಿಸರದ ಕುರಿತಾದ ವಿಚಾರಗಳನ್ನು ಪ್ರಸ್ತುತ ಅಧ್ಯಯನದಲ್ಲಿ ವಿವೇಚಿಸಲಾಗಿದೆ. ಅಲ್ಲದೆ ಹಲವು ವರ್ಷಗಳಿಂದ ಅನೇಕ ವಿದ್ವಾಂಸರು ಮಾತೃ ಆರಾಧನೆ ಹಿನ್ನೆಲೆಯಲ್ಲಿ ಹಾಗೂ ಗ್ರಾಮದೇವತೆಗಳಿಗೆ ಸಂಬಂಧಿಸಿದ ಅಧ್ಯಯನವನ್ನು ಮಾಡುತ್ತಾ ಬಂದಿದ್ದಾರೆ. ಆದರೆ ಬಾದಾಮಿ ಬನಶಂಕರಿಗೆ ಸಂಬಂಧಿಸಿದಂತೆ ವಿರಳ ಮಾಹಿತಿಗಳು ಲಭ್ಯವಾಗುತ್ತವೆ. ಆದಕಾರಣ ಪ್ರಸ್ತುತದಲ್ಲಿ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

**ಅಧ್ಯಯನದ ಸ್ವರೂಪ**

ಪ್ರಸ್ತುತ "ಬಾದಾಮಿ ಬನಶಂಕರಿ : ಚಾರಿತ್ರಿಕ ಅಧ್ಯಯನ" ಎಂಬ ಪ್ರಬಂಧವನ್ನು ಅಧ್ಯಯನದ ಅನುಕೂಲತೆಗಾಗಿ ಪ್ರಮುಖವಾಗಿ ಆರು ಅಧ್ಯಾಯಗಳಾಗಿ ವಿಂಗಡಿಸಲಾಗಿದೆ. ಅಧ್ಯಾಯಗಳಲ್ಲಿ ಅವಶ್ಯಕತೆಗೆ ತಕ್ಕಂತೆ ಉಪವಿಭಾಗಗಳಾಗಿ ಮಾಡಿಕೊಳ್ಳಲಾಗಿರುವುದು. ಈ ಅಧ್ಯಾಯಗಳು ಒಳಗೊಂಡಿರುವ ವಿಷಯ ಮತ್ತು ಸ್ವರೂಪ ಈ ಕೆಳಗಿನಂತಿವೆ.

**ಅಧ್ಯಾಯ – ಒಂದು : ಪ್ರಸ್ತಾವನೆ**

ಈ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ, ಮಹತ್ವ, ವಿಧಾನ ಮತ್ತು ಸ್ವರೂಪವನ್ನು ಒಳಗೊಂಡಿದ್ದು, ಅಧ್ಯಯನದ ಒಟ್ಟಾರೆ ರೂಪರೇಷೆಯನ್ನು ಕುರಿತು ಚರ್ಚಿಸುತ್ತದೆ.

**ಅಧ್ಯಾಯ – ಎರಡು : ಭೌಗೋಳಿಕ ಪರಿಸರ ಮತ್ತು ಚಾರಿತ್ರಿಕ ಹಿನ್ನೆಲೆ**

ಪ್ರಸ್ತುತ ಬನಶಂಕರಿ ಕ್ಷೇತ್ರವು ಬಾದಾಮಿ ಪರಿಸರದಲ್ಲಿರುವುದರಿಂದ ಅಲ್ಲಿಯ ಭೌಗೋಳಿಕ ಪರಿಸರ, ಭೂ ರಚನೆ, ವಾಯುಗುಣ, ಖನಿಜ ಸಂಪತ್ತು, ನದಿ ಮೂಲಗಳ ಕುರಿತು ಚರ್ಚಿಸಲಾಗಿದೆ. ಈ ಪ್ರದೇಶವು ಮಲಪ್ರಭ ನದಿಯ ದಂಡೆಯ ಮೇಲಿರುವುದರಿಂದ ಈ ಪರಿಸರದ ಸುತ್ತಮುತ್ತಲಲ್ಲಿ ಪ್ರಾಗಿತಿಹಾಸ ಕಾಲದ ನೆಲೆಗಳು ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತವೆ. ಈ ಪರಿಸರವು ಆದಿಮಾನವನು ನೆಲೆಸಲು ಉತ್ತಮ ವಾತಾವರಣ ಕಲ್ಪಿಸಿತ್ತೆಂದು ಇದರಿಂದ ತಿಳಿದುಬರುತ್ತದೆ.

ಅಲ್ಲದೆ ಈ ಅಧ್ಯಾಯದಲ್ಲಿ ಪರಿಸರವು ಚಾರಿತ್ರಿಕ ಯುಗದಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಎಲ್ಲಾ ಅರಸು ಮನೆತಗಳ ಆಳ್ವಿಕೆಗೆ ಒಳಪಟ್ಟಿದೆ. ಇವರಲ್ಲಿ ಪ್ರಮುಖವಾಗಿ ಮೌರ್ಯರು, ಶಾತವಾಹನರು, ಕದಂಬರು, ಬಾದಾಮಿ ಚಾಲುಕ್ಯರು, ಪಲ್ಲವರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ನೊಳಂಬರು, ಕಳಚೂರಿಗಳು, ಸೇವುಣರು, ಸಿಂಧರು, ರಟ್ಟರು, ಚೋಳರು, ವಿಜಯನಗರದ ಅರಸರು, ಆದಿಲ್‌ಷಾಹಿಗಳು, ಬ್ರಿಟಿಷರು ಹಾಗೂ ಪೇಶ್ವೆಗಳು ಮುಂತಾದವರು ಈ ಪ್ರದೇಶದಲ್ಲಿ ಆಳ್ವಿಕೆ ನಡೆಸಿದ್ದರು ಎಂಬುದಕ್ಕೆ ಅವರುಗಳ ಚಾರಿತ್ರಿಕ ಕುರುಹುಗಳ ಬಗ್ಗೆ ಚರ್ಚಿಸಲಾಗಿದೆ. ಹಾಗೆಯೇ ಬನಶಂಕರಿ ದೇವಿಯ ಪುರಾಣ

ಹಿನ್ನೆಲೆಯನ್ನು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ. ಇದಲ್ಲದೆ ಬನಶಂಕರಿ ದೇವಿಗೆ ಸಂಬಂಧಿಸಿದ ಸಾಹಿತ್ಯ, ಮೌಖಿಕ ಚರಿತ್ರೆ, ಶಾಸನ, ಕಡತಗಳು, ದಾನಪತ್ರಗಳು, ಇನಾಮಗಳನ್ನು ಬಳಸಿಕೊಂಡು ದೇವಿಯ ಚಾರಿತ್ರಿಕ ಹಿನ್ನೆಲೆಯನ್ನು ವಿವರಿಸುವ ಪ್ರಯತ್ನವನ್ನು ಮಾಡಲಾಗಿರುವುದು.

**ಅಧ್ಯಾಯ – ಮೂರು : ಮಾತೃದೇವತೆಯ ಪರಿಕಲ್ಪನೆಯಲ್ಲಿ ಬಾದಾಮಿ ಬನಶಂಕರಿ**

ಈ ಅಧ್ಯಾಯದಲ್ಲಿ ಮಾತೃದೇವತೆಯ ಆರಾಧನೆಯ ಹಿನ್ನೆಲೆ, ಭಾರತ, ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಮಾತೃ ಆರಾಧನೆಯ ಪರಿಕಲ್ಪನೆಯ ಪ್ರಾಚೀನತೆಯ ಬಗ್ಗೆ ಚರ್ಚಿಸಲಾಗಿರುವುದು. ಬನಶಂಕರಿ ದೇವಿಗೆ ಇರುವ ವಿವಿಧ ನಾಮಗಳ ಬಗೆಗೆ, ಪದನಿಷ್ಪತ್ತಿ ಕುರಿತು, ಮಾತೃ ಪರಿಕಲ್ಪನೆಯಲ್ಲಿ ಬನದೇವಿಯ ಸ್ಥಾನವನ್ನು ವಿವರಿಸಲಾಗಿದೆ. ಮಾತೃದೇವತೆಯಾದ ಬನಶಂಕರಿಯ ಸ್ವರೂಪ ಮತ್ತು ಆಚರಣೆಗಳಲ್ಲಿ ಕಾಲಕಾಲಕ್ಕೆ ಪರಿವರ್ತನೆಗೊಳ್ಳುತ್ತಾ ಅಥವಾ ಸೇರ್ಪಡೆಯಾಗುತ್ತ ಬಂದಿವೆ. ಗ್ರಾಮದೇವತೆಯಾಗಿದ್ದು ನಂತರ ಶಿಷ್ಟದೇವತೆಯಾಗಿ ಒಳಪಟ್ಟು, ಈಗ ಸಂಕೀರ್ಣ ಸ್ವರೂಪದಲ್ಲಿ ಪೂಜಿತಳಾಗಿದ್ದಾಳೆ ಎಂಬುದನ್ನು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ. ಹಾಗೆಯೇ ಬನಶಂಕರಿಯ ವಿವಿಧ ಸ್ವರೂಪ, ಪರಿಕಲ್ಪನೆ, ಭೌತಿಕ ಲಕ್ಷಣಗಳ ಕುರಿತು ಚರ್ಚಿಸಲಾಗಿದೆ.

**ಅಧ್ಯಾಯ – ನಾಲ್ಕು : ಸ್ಮಾರಕಗಳು**

ಈ ಅಧ್ಯಾಯದಲ್ಲಿ ಚೊಳಚುಗುಡ್ಡ, ಬನಶಂಕರಿ ಕ್ಷೇತ್ರದಲ್ಲಿರುವ ಸ್ಮಾರಕಗಳ ಕುರಿತು ಚರ್ಚಿಸಲಾಗಿದೆ. ಆಯ್ಕೆ ಮಾಡಿಕೊಂಡ ವ್ಯಾಪ್ತಿಗೆ ಅನುಗುಣವಾಗಿ ಇಲ್ಲಿ ಕಂಡುಬಂದಿರುವ ದೇವಾಲಯಗಳನ್ನು ಶಾಕ್ತ, ಶೈವ, ವೈಷ್ಣವೆಂದು ವರ್ಗೀಕರಿಸಿಕೊಂಡು ಚರ್ಚಿಸಲಾಗಿರುವುದು. ಇಲ್ಲಿ ಪ್ರತಿಯೊಂದು ದೇವಾಲಯದ ಕುರಿತು ವಿವರವಾದ ಅಧ್ಯಯನವನ್ನು ಮಾಡಲಾಗಿದೆ. ಅಲ್ಲದೆ ಚೊಳಚಗುಡ್ಡ ಗ್ರಾಮದಲ್ಲಿ ಹಿಂದೂ ದೇವಾಲಯಗಳಂತೆ ಮುಸ್ಲಿಂರ ಪ್ರಾಚೀನ ಜಾಮಿಯಾ ಮಸೀದಿಯ ಚಾರಿತ್ರಿಕ ಹಿನ್ನೆಲೆ, ವಾಸ್ತು ಲಕ್ಷಣಗಳನ್ನು ವಿವರಿಸಲಾಗಿದೆ. ಹಾಗೂ ಈ ಪರಿಸರದಲ್ಲಿರುವ ದೇವಾಲಯಗಳ ಕಲೆ ಮತ್ತು ವಾಸ್ತುಶಿಲ್ಪ ಹಾಗೂ ಇತರೆ ಸ್ಮಾರಕಗಳಾದ ತೀರ್ಥ, ಕೆರೆ, ಬಾವಿ, ದೀಪಸ್ತಂಭ, ಮಂಟಪಗಳು, ಪಾದಗಟ್ಟೆ, ವೀರಗಲ್ಲುಗಳ ಬಗ್ಗೆ ವ್ಯವಸ್ಥಿತವಾಗಿ ಹಾಗೂ ವೈಜ್ಞಾನಿಕವಾಗಿ ವಿಶ್ಲೇಷಿಸಲಾಗಿದೆ. ದೇವಾಲಯದ ಪರಿಸರದಲ್ಲಿರುವ ಮೂರ್ತಿಶಿಲ್ಪಗಳನ್ನು ಧಾರ್ಮಿಕ, ಲೌಕಿಕ ಶಿಲ್ಪಗಳೆಂದು ವರ್ಗೀಕರಿಸಿಕೊಂಡು ಅವುಗಳ ಪ್ರತಿಮಾ ಲಕ್ಷಣಗಳು, ಅವುಗಳ ಇಂದಿನ ಸ್ಥಿತಿಗತಿಯ ಕುರಿತು ಈ ಅಧ್ಯಾಯ ವಿವರಿಸಲಾಗಿದೆ.

**ಅಧ್ಯಾಯ – ಐದು : ನಂಬಿಕೆ ಮತ್ತು ಆಚರಣೆಗಳು**

ಪ್ರಸ್ತುತ ಅಧ್ಯಾಯವು ಬನಶಂಕರಿ ದೇವಿಗೆ ಸಂಬಂಧಿಸಿದ ನಂಬಿಕೆ ಮತ್ತು ಆಚರಣೆಗೆ

ಒಳಪಡುತ್ತದೆ. ಅಧ್ಯಾಯದಲ್ಲಿ ಆಚರಣೆಗಳ ಹಿನ್ನೆಲೆ, ಬನಶಂಕರಿ ದೇವಿಗೆ ಸಂಬಂಧಿಸಿದಂತೆ ನಂಬಿಕೆಗಳು, ಅವುಗಳ ಪ್ರಸ್ತುತತೆ, ಐತಿಹ್ಯಗಳ ವಿವರಗಳಿವೆ. ಬನಶಂಕರಿಗೆ ಸಲ್ಲುತ್ತಿರುವ ಗ್ರಾಮ್ಯ ಮತ್ತು ಶಿಷ್ಟ ಆಚರಣೆಗಳನ್ನು ಇಲ್ಲಿ ವಿವೇಚಿಸಲಾಗಿದೆ. ಬನಶಂಕರಿಯು ಸಸ್ಯಸಂಬಂಧಿ ದೇವಿಯಾಗಿದ್ದರಿಂದ ಈ ಪರಿಸರದಲ್ಲಿ ನಡೆಯುವ ಕೃಷಿ ಸಂಬಂಧಿ ಆಚರಣೆಗಳ ಬಗ್ಗೆ ಅಧ್ಯಾಯದಲ್ಲಿ ಪ್ರಸ್ತಾಪಿಸಲಾಗಿದೆ. ದೇವಿಗೆ ಸಂಬಂಧಿಸಿದ ಆಚರಣೆಗಳನ್ನು, ವಿಧಿ – ವಿಧಾನಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡಿದಾಗ ಫಲವಂತಿಕೆಯ ಸಂಪ್ರದಾಯಕ್ಕೆ ಸೇರಿದ ಕೆಲವು ಆಚರಣೆಗಳು ಇಂದಿಗೂ ಅಸ್ತಿತ್ವದಲ್ಲಿರುವುದನ್ನು ಕಾಣಬಹುದು. ದೇವಿಯ ರಥೋತ್ಸವದ ವಿವರಗಳು, ಜಾತ್ರೆಯ ವಿಧಿ – ವಿಧಾನಗಳು, ವಿಶೇಷತೆ, ಈ ಭಾಗದ ಜನರ ಜೀವನದಲ್ಲಿ ಹೇಗೆ ಜಾತ್ರೆಯು ಪಾತ್ರವಹಿಸಿದೆ ಎಂಬುದರ ಕುರಿತು ವಿವರಿಸಲಾಗಿದೆ. ಅಲ್ಲದೆ ಆಧುನಿಕ ಪ್ರಭಾವದಿಂದ ಜಾತ್ರೆಯ ಸ್ವರೂಪ ಬದಲಾಗುತ್ತಿರುವ ಬಗ್ಗೆ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

**ಅಧ್ಯಾಯ - ಆರು : ಸಮಾರೋಪ**

ಇದು ಕೊನೆಯ ಅಧ್ಯಾಯವಾಗಿದ್ದು, ಇದರಲ್ಲಿ ಒಟ್ಟಾರೆ ಅಧ್ಯಯನದ ಸಂಕ್ಷಿಪ್ತ ರೂಪ ನೀಡಲಾಗಿದೆ. ಪ್ರಸ್ತುತ ಪ್ರಬಂಧದಲ್ಲಿ ಕಂಡುಕೊಂಡ ಪ್ರಮುಖ ಸಂಗತಿಗಳ ಸಮೀಕ್ಷೆಯನ್ನು, ಫಲಿತಾಂಶಗಳನ್ನು ಮತ್ತು ನಿರ್ಧಾರಗಳನ್ನು ಪ್ರಕಟಿಸುವ ಪ್ರಯತ್ನ ಮಾಡಲಾಗಿದೆ.

* * * * *

## ಅಧ್ಯಾಯ : ಎರಡು

### ಭೌಗೋಳಿಕ ಪರಿಸರ ಮತ್ತು ಚಾರಿತ್ರಿಕ ಹಿನ್ನೆಲೆ

೨. ೧. ಬಾದಾಮಿ : ಸ್ಥಳ ಚರಿತ್ರೆ

೨. ೨. ಬನಶಂಕರಿ ಕ್ಷೇತ್ರ ಮತ್ತು ಚೊಳಚಗುಡ್ಡ ಗ್ರಾಮ ಪರಿಚಯ

೨. ೩. ಭೌಗೋಳಿಕ ಹಿನ್ನೆಲೆ

೨. ೪. ಪ್ರಾಗಿತಿಹಾಸ

೨. ೫. ಇತಿಹಾಸ ಆರಂಭ ಕಾಲ

೨. ೬. ಪೌರಾಣಿಕ ಹಿನ್ನೆಲೆ

೨. ೭. ಬನಶಂಕರಿ ಚಾರಿತ್ರಿಕ ಹಿನ್ನೆಲೆ

ಪ್ರಕೃತಿ ಮಡಿಲಲ್ಲಿರುವ ಬನಶಂಕರಿ ಕ್ಷೇತ್ರವು ಕರ್ನಾಟಕದ ಪ್ರಸಿದ್ಧ ಶಕ್ತಿ ಕ್ಷೇತ್ರಗಳಲ್ಲಿ ಒಂದಾಗಿದೆ. ಈ ಕ್ಷೇತ್ರವು ಬಾಗಲಕೋಟ ಜಿಲ್ಲೆಯ ಬಾದಾಮಿಯಿಂದ ಸುಮಾರು ೫ ಕಿ.ಮೀ. ಅಂತರದಲ್ಲಿದೆ. ಕ್ಷೇತ್ರಕ್ಕೆ ಹೊಂದಿಕೊಂಡಿರುವ ಕರ್ನಾಟಕದ ಐತಿಹಾಸಿಕ ತಾಣಗಳಾದ ಬಾದಾಮಿ, ಐಹೊಳೆ, ಪಟ್ಟದಕಲ್ಲು, ಮಹಾಕೂಟ, ಶಿವಯೋಗ ಮಂದಿರ ಮುಂತಾದವುಗಳು ಇಲ್ಲಿವೆ. ಶ್ರೀ ಕ್ಷೇತ್ರವು ಕನ್ನಡ ನಾಡಿನ ಪ್ರಸಿದ್ಧ ಐತಿಹಾಸಿಕ ಸ್ಥಳಗಳಲ್ಲಿ ಒಂದಾಗಿರುವ ಬಾದಾಮಿ ಪರಿಸರದಲ್ಲಿದೆ. ಬಾದಾಮಿಯು ತನ್ನದೇ ಆದ ವಿಶಿಷ್ಟ ಸಾಂಸ್ಕೃತಿಕ ಅಂಶಗಳನ್ನು ತನ್ನ ಒಡಲಿನಲ್ಲಿ ಹುದುಗಿಸಿಕೊಂಡಿರುವುದು ಗಮನಾರ್ಹ. ಬಾದಾಮಿಯು ಪೌರಾಣಿಕ, ಐತಿಹಾಸಿಕ, ಸಾಹಿತ್ಯಿಕ, ಸಾಂಸ್ಕೃತಿಕ, ಧಾರ್ಮಿಕ ಹಾಗೂ ಕಲಾತ್ಮಕ ಅಂಶಗಳನ್ನೊಳಗೊಂಡ ತಾಲೂಕಾಗಿದೆ. ನಿಸರ್ಗ ನಿರ್ಮಿತ ಬೆಟ್ಟಗಳ ಮಧ್ಯೆ ನೆಲೆಸಿರುವ ಬಾದಾಮಿಯು ಭಾರತದ ಇತಿಹಾಸ ಪುಟಗಳಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿರುವುದು ಶ್ಲಾಘನೀಯ. ಭೌಗೋಳಿಕವಾಗಿ ಒಣಹವೆಯನ್ನು ಹೊಂದಿರುವ ಈ ಪರಿಸರವು ಬಯಲು ಸೀಮೆಯ ನಾಡಾಗಿದೆ. ಆದರೂ ಮಾನವನ ವಿಕಾಸದ ವಿವಿಧ ಹಂತಗಳನ್ನು ಗುರುತಿಸುವಲ್ಲಿ, ಸಾಂಸ್ಕೃತಿಕ ಬೆಳವಣಿಗೆಗಳನ್ನು ಅರಿಯುವಲ್ಲಿ ಬಾದಾಮಿಯ ವೈವಿಧ್ಯಮಯ ಇತಿಹಾಸ ನೆರವಾಗುವುದು.

## ೨.೧. ಬಾದಾಮಿ : ಸ್ಥಳ ಚರಿತ್ರೆ

ಸಾಂಸ್ಕೃತಿಕವಾಗಿ ಶ್ರೀಮಂತವಾಗಿರುವ ತಾಲೂಕಿನ ಪೌರಾಣಿಕ ಹಿನ್ನೆಲೆಯೂ ಅಷ್ಟೇ ಸಮೃದ್ಧವಾಗಿದೆ. ಪುರಾಣ ಹಿನ್ನೆಲೆಯುಳ್ಳ ಬಾದಾಮಿಯನ್ನು ಶಾಸನಗಳಲ್ಲಿ 'ವಾತಾಪಿ' ಎಂದು ಉಲ್ಲೇಖಿಸಲಾಗಿದೆ. ಎರಡನೆಯ ಶತಮಾನದಲ್ಲಿ ಈಜಿಪ್ತಿನ ಖ್ಯಾತ ಭೂಗೋಳಶಾಸ್ತ್ರಜ್ಞ ಟಾಲೆಮಿಯು ತಾನು ರಚಿಸಿರುವ A guide to Geography ಎಂಬ ಕೃತಿಯಲ್ಲಿ ಮೊದಲ ಬಾದಮಿಯ (ಬಾದಿಯಾಮಿ) ಹೆಸರಿಸಿರುವುದನ್ನು ಕಾಣಬಹುದು.[೧]

ಈ ಪಟ್ಟಣವು ವಾತಾಪಿ ಎಂಬ ಹೆಸರಿನಲ್ಲಿ ಪ್ರಥಮ ಬಾರಿಗೆ ಒಂದನೆಯ ಪುಲಕೇಶಿಯ ಕ್ರಿ.ಶ. ೫೪೩ರ ಬಂಡೆಶಾಸನದಲ್ಲಿ ಉಲ್ಲೇಖಗೊಂಡಿರುವುದನ್ನು ಕಾಣಬಹುದು.[೨] ಪೂರ್ವದಲ್ಲಿ ಈ ಪರಿಸರದಲ್ಲಿ ಇಲ್ವಲ - ವಾತಾಪಿ ಎಂಬ ದೈತ್ಯ ಸೋದರರು ಇಲ್ಲಿ ನೆಲೆಸಿದ್ದ ಬಗ್ಗೆ ಪೌರಾಣಿಕ ಕಥೆಗಳಿವೆ. ಇಂತಹ ಹಿನ್ನೆಲೆಯಿಂದ ಈ ಪಟ್ಟಣಕ್ಕೆ ವಾತಾಪಿ ಎಂಬ ಹೆಸರು ಬಂದಿರಬಹುದು.

ಭೌಗೋಳಿಕ ಹಿನ್ನೆಲೆಯಲ್ಲಿ ಊರುಗಳಿಗೆ ಹೆಸರು ನೀಡುವ ಪದ್ಧತಿಯನ್ನು ನಾವು ಕಾಣುತ್ತೇವೆ. ಹಾಗೆಯೇ ಬಾದಾಮಿಯ ಪರಿಸರದಲ್ಲಿ ಪ್ರಮುಖವಾಗಿ ಕಾಣಬರುವ ದೃಶ್ಯವೆಂದರೆ ಮೂರು ದಿಕ್ಕುಗಳಲ್ಲಿ ಬೃಹತ್ ಕಲ್ಲು ಬಂಡೆಗಳಿಂದ ಸುತ್ತವರೆದ ಭೂಪ್ರದೇಶ. ಈ ಪ್ರದೇಶದಲ್ಲಿರುವ ಕಲ್ಬೆಟ್ಟಗಳು ಬಾದಾಮಿಯ ಬಣ್ಣದಂತೆ ಇರುವುದರಿಂದ 'ಬಾದಾಮಿ' ಎಂಬ ಹೆಸರು ಬಂದಿರಬಹುದು.

## ೨.೨. ಬನಶಂಕರಿ ಕ್ಷೇತ್ರ ಮತ್ತು ಚೊಳಚಗುಡ್ಡ ಗ್ರಾಮದ ಪರಿಚಯ

ಬಾದಾಮಿಯಿಂದ ೫ ಕಿ.ಮೀ. ಅಂತರದಲ್ಲಿ ಬನಶಂಕರಿ ಕ್ಷೇತ್ರವಿದೆ. ಈ ಕ್ಷೇತ್ರದ ವರ್ಣನೆಯನ್ನು ಸ್ಕಂದ ಪುರಾಣದಲ್ಲಿ ಕಾಣಬಹುದು.[೩] ಶ್ರೀ ಬನಶಂಕರಿ ಮಾಹಾತ್ಮೆಂ ಎಂಬ ಸ್ಥಳ ಪುರಾಣದಲ್ಲಿ ಬನಶಂಕರಿ ಕ್ಷೇತ್ರದ ವರ್ಣನೆ ಇದೆ. ಬನಶಂಕರಿ ಕ್ಷೇತ್ರವು ಚೊಳಚಗುಡ್ಡ ಗ್ರಾಮದ ವ್ಯಾಪ್ತಿಗೆ ಒಳಪಟ್ಟಿದ್ದರೂ ಕೂಡ ಐತಿಹಾಸಿಕ ಹಿನ್ನೆಲೆಯಿಂದ ಬಾದಾಮಿಯ ಬನಶಂಕರಿ ಎಂದು ಪ್ರಸಿದ್ಧಿ ಗಳಿಸಿರುವುದು ಗಮನಾರ್ಹ. ಬನಶಂಕರಿ ನೆಲೆಸಿರುವ ಚೊಳಚುಗುಡ್ಡ ಗ್ರಾಮವನ್ನು ಪೂರ್ವದಲ್ಲಿ ಚೊಳಚಗೊಡು, ತುಳಸಿಗುಡ್ಡ ಎಂದೆಲ್ಲ ಕರೆಯಲಾಗುತ್ತಿತ್ತು. ಈ ಪ್ರದೇಶದಲ್ಲಿ ಹೆಚ್ಚಾಗಿ ತುಳಸಿ ಬೆಳೆಯುತ್ತಿದ್ದರಿಂದ ತುಳಿಸಿಗುಡ್ಡ ಎಂಬ ಹೆಸರು ಬಂದಿದೆ ಎಂಬುದು ಜನಪದರ ನಂಬಿಕೆಯಾಗಿದೆ. ಕಾಲಾಂತರದಲ್ಲಿ ತುಳಸಿಗುಡ್ಡದ ಬದಲು ಕೊಲ್ಲಿಚಗೊಡು, ಕೊಳಜಿಗೊಡು, ತೊಳಚಗೊಡು,[೪] ಚೊಳಚಗುಡ್ಡ ಎಂಬ ಸ್ಥಳನಾಮಗಳಿಂದ ಕರೆಯಲಾಗುತ್ತಿರುವುದು ಗಮನಾರ್ಹ. ಹಾಗೆಯೇ ಈ ಗ್ರಾಮವು ಆದಿ ಹಳೆಯ ಶಿಲಾಯುಗದ ನೆಲೆಯೂ ಆಗಿದೆ.

ಗ್ರಾಮವು ಆದಿ ಹಳೆಶಿಲಾಯುಗ ಮಾನವನ ವಾಸ್ತವ್ಯದಿಂದಿ ಹಿಡಿದು ಇಂದಿನವರೆಗೆ ಅನೇಕ ಬದಲಾವಣೆಗಳನ್ನು ಹೊಂದಿರುವುದನ್ನು ಗಮನಿಸಬಹುದು. ಬನಶಂಕರಿ ದೇವಾಲಯಕ್ಕೆ ಹೊಂದಿಕೊಂಡ ದಕ್ಷಿಣ ಭಾಗದಿಂದ ಸುಮಾರು ೨ ಕಿಲೋ ಮೀಟರ್ ದೂರದಲ್ಲಿ ಈ ಗ್ರಾಮವಿದೆ. ಗ್ರಾಮದ ಒಟ್ಟು ವಿಸ್ತೀರ್ಣ ಸುಮಾರು ೩೨೪ ಎಕರೆ ೧೧ ಗುಂಟೆಗಳು. ಗ್ರಾಮಲೆಕ್ಕಾಧಿಕಾರಿ ನೀಡಿದ ವರದಿಯ ಪ್ರಕಾರ ಗ್ರಾಮದಲ್ಲಿರುವ ಒಟ್ಟು ಜನಸಂಖ್ಯೆಯು ೬೬೫೭ರಷ್ಟಿದೆ. ಅದರಲ್ಲಿ ಮಹಿಳೆಯರ ಸಂಖ್ಯೆಯು ೩೩೦೨ರಷ್ಟು ಹಾಗೂ ಪುರುಷರ ಸಂಖ್ಯೆ ೩೩೬೫ ಆಗಿದೆ. ಈ ಗ್ರಾಮದ ವ್ಯಾಪ್ತಿಗೆ ಬನಶಂಕರಿ, ನಾಗರಾಳ, ಖ್ಯಾಡ ಎಂಬ ಮೂರು ಹಳ್ಳಿಗಳು ಒಳಪಡುತ್ತವೆ. ಪುರಾಣಗಳಲ್ಲಿ

ವರ್ಣನೆಯಾಗಿರುವ ಬನಶಂಕರಿ ಕ್ಷೇತ್ರವು ಚೊಳಚಗುಡ್ಡ ಗ್ರಾಮದ ವ್ಯಾಪ್ತಿಗೆ ಸೇರುವುದು. ಹೇರಳ ವನಸಿರಿಯ ಮಧ್ಯೆ ಬನದೇವಿ ನೆಲೆಸಿದ್ದಾಳೆ. ಆದ್ದರಿಂದ ಈ ಪರಿಸರವನ್ನು ಬನಶಂಕರಿ ಕ್ಷೇತ್ರವೆಂದು ಕರೆಯಲಾಗುತ್ತದೆ. ಈ ಕ್ಷೇತ್ರದ ಒಟ್ಟು ವಿಸ್ತೀರ್ಣ ೬೬ ಎಕರೆ ೧೬ ಗುಂಟೆಗಳಷ್ಟಿರುವುದು.

ಪುರಾಣಗಳಲ್ಲಿ ಉಲ್ಲೇಖವಾದ ಸರಸ್ವತಿ ಹಳ್ಳವು ಹರಿಯುತ್ತದೆ. ಈ ಹಳ್ಳದಿಂದಾಗಿ ಸುತ್ತಮುತ್ತಲ ಕೃಷಿಭೂಮಿಗೆ ಹೆಚ್ಚು ಅನುಕೂಲಕರವಾಗಿರುವುದು. ಸರಸ್ವತಿ ಹಳ್ಳದಿಂದ ೧೨.೯೬ ಹೆಕ್ಟರ್‌ಗಳಷ್ಟು ಭೂಮಿಗೆ ನೀರಾವರಿ ಸೌಲಭ್ಯವನ್ನು ಒದಗಿಸಲಾಗಿದೆ. ಇಲ್ಲಿಯ ಪ್ರಮುಖ ಬೆಳೆಗಳೆಂದರೆ ವೀಳ್ಯದೆಲೆ, ಬಾಳೆಹಣ್ಣು, ದ್ರಾಕ್ಷಿ, ತೆಂಗು, ಭತ್ತ ಮುಂತಾದವುಗಳು. ಶ್ರೀ ಕ್ಷೇತ್ರದಲ್ಲಿ ಕುರುಬರು, ಲಿಂಗಾಯತರು, ಬ್ರಾಹ್ಮಣರು, ಬೇಡರು, ಮುಸ್ಲಿಂರು, ವಡ್ಡರು, ಹರಿಜನರು ಹೀಗೆ ಎಲ್ಲಾ ಜಾತಿಯ ಜನಾಂಗದವರನ್ನು ಕಾಣುತ್ತೇವೆ. ಅಲ್ಲದೆ ಪ್ರತಿಯೊಬ್ಬರ ಪಾಲುದಾರಿಕೆಯು ಈ ದೇವಸ್ಥಾನದಲ್ಲಿದೆ. ಶ್ರೀ ಕ್ಷೇತ್ರದ ಸಮೀಪ ಇರುವ ಶಿವಪುರ ಗ್ರಾಮದ ಹತ್ತಿರ ಸರಸ್ವತಿ ಹಳ್ಳದ ದಂಡೆಯು ಮೇಲೆ ಉದರಪಾದಿ ಚಿಪ್ಪು (Gastropodshall)ಗಳು ದೊರೆಯುತ್ತವೆ. ಸರಸ್ವತಿ ಮಲಪ್ರಭೆಯನ್ನು ಸೇರುವ ಪ್ರದೇಶದಲ್ಲಿ ಬನಶಂಕರಿಯ ಹತ್ತಿರ ಸರಂಧ್ರಿ ಸಣ್ಣಕಲ್ಲು (Calcareo Ustufa) ಹರಡಿದೆ ಮತ್ತು ಭಾಗಶಃ ಸರಂಧ್ರೀಯ ಕೆಂಪು ಮಣ್ಣಿ (Caterite)ನಿಂದ ಕೂಡಿದೆ. ಇದು ಸುಮಾರು ೫ ಚ.ಕಿ.ಮೀ. ವಿಸ್ತೀರ್ಣವುಳ್ಳದ್ದಾಗಿದೆ. ಮಲಪ್ರಭಾ ನದಿಯ ಉತ್ತರ ದಂಡೆಯ ಮೇಲೆ ಕೆಂಪು (ಕಂದು) ಮಣ್ಣು ಕಂಡುಬರುತ್ತದೆ. ದಕ್ಷಿಣ ದಂಡೆಯ ಮೇಲೆ ಕಪ್ಪು ಮಣ್ಣು ಕಾಣಸಿಗುತ್ತದೆ. ಈ ಕಪ್ಪು ಮಣ್ಣು ಭಾಗಶಃ ನದಿಯ ಮತ್ತು ಅದರ ಹಳ್ಳಗಳ ಮರಳಿನಿಂದ ಕೂಡಿರುವುದು. ಪೂರ್ವ ಕಾಲದಲ್ಲಿ ಈ ಪ್ರದೇಶವು ದಟ್ಟ ಕಾಡಿನಿಂದ ಕೂಡಿತ್ತು. ಮಣ್ಣು ಕಪ್ಪಾಗಿರಲು ಇದೇ ಕಾರಣವಾಗಿರಬಹುದು.[೫]

## ೨.೩. ಭೌಗೋಳಿಕ ಹಿನ್ನೆಲೆ

ಮಾನವನ ಸಂಸ್ಕೃತಿ ಮೇಲೆ ಆಯಾ ಪ್ರದೇಶದ ಪರಿಸರದ ಪ್ರಭಾವವಿರುತ್ತದೆ. ಒಂದು ಪ್ರದೇಶದ ಕುರಿತು ಅಧ್ಯಯನ ಕೈಗೊಳ್ಳುವ ಮೊದಲು ಆ ಪ್ರದೇಶದ ಭೌಗೋಳಿಕ ಲಕ್ಷಣಗಳನ್ನು ತಿಳಿದುಕೊಳ್ಳುವುದು ಅತ್ಯವಶ್ಯಕ. ಏಕೆಂದರೆ ಅಲ್ಲಿಯ ಭೌಗೋಳಿಕ ವೈಶಿಷ್ಟ್ಯಗಳು ಆಯಾ ಪ್ರದೇಶದ ಜನರ ಜೀವನ, ಆ ಪರಿಸರ ಸ್ವರೂಪ ಮತ್ತು ಸ್ವಭಾವಗಳನ್ನು ನಿರ್ಮಿಸುತ್ತದೆ. ಹೀಗಾಗಿ ಯಾವುದೇ ಇತಿಹಾಸಕ್ಕೆ ಭೌಗೋಳಿಕ ಪರಿಸರವು ಅತ್ಯವಶ್ಯಕ. ಯಾವುದೇ ಜನಾಂಗದ ಸಂಸ್ಕೃತಿಯು ಅದು ನೆಲೆಯೂರಿದ ಭೌಗೋಳಿಕ ಲಕ್ಷಣಗಳು ಮಾನವ ಸಂಸ್ಕೃತಿ ಮತ್ತು ಇತಿಹಾಸದಲ್ಲಿ ಮಹತ್ವದ ಪಾತ್ರವಹಿಸುತ್ತವೆ.[೬] ಈ ಹಿನ್ನೆಲೆಯಲ್ಲಿ ಬಾದಾಮಿಯು ಪೂರ್ವದಲ್ಲಿ ಬಿಜಾಪುರ ಜಿಲ್ಲೆಗೆ ಒಳಪಟ್ಟಿತು. ಆದರೆ ಪ್ರಸ್ತುತ ಈ ತಾಲೂಕು ಬಾಗಲಕೋಟ ಜಿಲ್ಲೆಗೆ ಸೇರಿದೆ. ಇಂದಿನ ಬಾಗಲಕೋಟ ಜಿಲ್ಲೆಯು ಬಾಗಲಕೋಟ,

ಬಾದಾಮಿ, ಹುನಗುಂದ, ಬೀಳಗಿ, ಜಮಖಂಡಿ ಮತ್ತು ಮುಧೋಳ ಎಂಬ ಆರು ತಾಲೂಕುಗಳನ್ನು ಒಳಗೊಂಡಿದೆ. ಹಳೆಯ ಧಾರವಾಡ ಜಿಲ್ಲೆಯ ಭಾಗವಾಗಿದ್ದ ಈ ತಾಲೂಕುಗಳನ್ನು ಬೇರ್ಪಡಿಸಿ ಬಾಗಲಕೋಟ ಜಿಲ್ಲೆಗೆ ಸೇರಿಸಲಾಗಿದೆ. ೧೯೯೭ರ ಆಗಸ್ಟ್ ೧೫ ರಂದು ಬಾಗಲಕೋಟ ಜಿಲ್ಲೆಯು ಉದಯವಾಯಿತು.[೭] ದಿ. ಜೆ.ಎಚ್. ಪಟೇಲರ್‌ರವರು ಮುಖ್ಯಮಂತ್ರಿಯಾಗಿದ್ದಾಗ ಜಿಲ್ಲಾವಾರು ವಿಂಗಡಣೆ ಮಾಡಿದರು. ಹೀಗೆ ವಿಂಗಡಣೆಯಾದ ಜಿಲ್ಲೆಗಳಲ್ಲಿ ಬಾಗಲಕೋಟ ಜಿಲ್ಲೆಯು ಒಂದಾಗಿದೆ. ಬಾದಾಮಿ ತಾಲೂಕಿಗೆ ಬಾದಾಮಿ, ಗುಳ್ಳೇದಗುಡ್ಡ, ಕೆರೂರು, ಕುಳಗೇರಿ ಹೋಬಳಿಗಳು ಒಳಪಡುತ್ತವೆ.

ತಾಲೂಕು ಕೇಂದ್ರವಾದ ಬಾದಾಮಿ ಉತ್ತರ ಅಕ್ಷಾಂಶ ೧೫°-೫೫', ಪೂರ್ವರೇಖಾಂಶ ೭೫°-೪೫', ಇದರ ಭೌಗೋಳಿಕ ವಿಸ್ತೀರ್ಣ ೧,೩೯೭,೧೯ ಚದರ ಕಿ.ಮೀ. ತಾಲೂಕಿನಲ್ಲಿ ಒಟ್ಟು ೧೫೯ ಗ್ರಾಮಗಳಿವೆ. ಜನಸಂಖ್ಯೆ ೧೯೯೧ ಜನಗಣತಿಯ ವರದಿಯಂತೆ ೨,೨೬,೨೯೦ ಲಕ್ಷ ಆಗಿದ್ದು, ಅದರಲ್ಲಿ ಪುರುಷರ ಸಂಖ್ಯೆ ೧,೨೫,೫೬೯ ಲಕ್ಷ ಹಾಗೂ ಮಹಿಳೆಯ ೧,೨೫,೦೩೧ ಲಕ್ಷ ಆಗಿರುತ್ತದೆ. ಬಾದಾಮಿಯು ಸಮುದ್ರಮಟ್ಟಕ್ಕಿಂತ ೬೯೦ ಮೀಟರ್ ಎತ್ತರವಿರುವುದು. ಅರಣ್ಯದ ವಿಸ್ತೀರ್ಣ ೩೧,೨೬೩ ಹೆಕ್ಟೇರ್‌ಗಳಿಷ್ಟಿದೆ. ಈ ತಾಲೂಕಿನಲ್ಲಿ ಮಲಪ್ರಭ ನದಿಯೊಂದೇ ಹರಿಯುವುದು. ಹೇಳಿಕೊಳ್ಳುವಂತಹ ಖನಿಜ ಸಂಪತ್ತು ಇಲ್ಲಿ ಕಂಡುಬರುವುದಿಲ್ಲ. ಒಣ ಮತ್ತು ಉಷ್ಣ ವಾತಾವರಣದ ಪ್ರದೇಶವಾಗಿದೆ.[೮]

ಭೌಗೋಳಿಕವಾಗಿ ಎತ್ತರವಾದ ಬಾದಾಮಿ ಸಿಸ್ಟ್ ಎಂದು ಕರೆಯಲಾಗುವ ಕೆಂಪು ಮರಳುಗಲ್ಲಿನ ೨ ಬೆಟ್ಟಗಳಿಂದ ಸುತ್ತುವರೆಯಲ್ಪಟ್ಟಿರುವ ಪ್ರದೇಶದಲ್ಲಿ ಈ ನಗರವು ಇರುವುದು ವಿಶೇಷ. ಇದರಿಂದಾಗಿ ಇತಿಹಾಸ ಕಾಲಕ್ಕೂ ಮೊದಲಿನಿಂದಲ್ಲೂ ನೈಸರ್ಗಿಕ ಸಂರಕ್ಷಣೆಗೆ ಒಳಪಟ್ಟಿರುತ್ತದೆ. ಈ ರೀತಿಯ ನೈಸರ್ಗಿಕ ಲಕ್ಷಣಗಳು ಕರ್ನಾಟಕದ ಪ್ರಸಿದ್ಧ ರಾಜಮನೆತನಗಳು ಆಳ್ವಿಕೆ ಮಾಡಲು ಕಾರಣವಿರಬಹುದು. ಬಾದಾಮಿ ಪರಿಸರದ ಈ ಉಸುಕು ಕಲ್ಲುಗಳು ಕಲಾದಗಿ ವರ್ಗದ ಶಿಲೆಗಳಿಂತ ಭಿನ್ನವಾಗಿವೆ. ಇದರಿಂದ ಅವುಗಳನ್ನು ಪ್ರತ್ಯೇಕಿಸಿ ಬಾದಾಮಿ ವರ್ಗಕ್ಕೆ ಸೇರಿಸಲಾಗಿದೆ. ಬಾದಾಮಿ ಶಿಲಾವರ್ಗವು ಕಲಾದಗಿ ಶಿಲಾ ವರ್ಗದ ಮೇಲೆ ಹೊಂದಿಕೊಳ್ಳದೇ ಪ್ರತ್ಯೇಕವಾಗಿರುವುದು. ಬೆಣಚುಕಲ್ಲು ಕೆಂಪು ಬಣ್ಣದಾಗಿರುವುದು ಈ ವರ್ಗದ ಶಿಲೆಯ ವಿಶೇಷತೆಯಾಗಿದೆ. ಕಲಾದಗಿ ಶಿಲಾವರ್ಗಕ್ಕಿಂತ ಬಾದಾಮಿ ಶಿಲಾ ವರ್ಗವು ವಯಸ್ಸಿನಲ್ಲಿ ಕಿರಿಯದಾಗಿದೆ. ಬಾದಾಮಿ ವರ್ಗದ ಶಿಲೆಗಳಲ್ಲಿ ಅನೇಕ ಕಲ್ಲಾಸರೆಗಳು, ನೈಸರ್ಗಿಕ ಗುಹೆಗಳು ರಚನೆಯಾಗಿರುವುವು. ಅಲ್ಲದೆ ಪ್ರಸ್ತುತ ಇವು ಪ್ರಸಿದ್ಧಿಯನ್ನು ಪಡೆದುಕೊಂಡಿವೆ.

ಬನಶಂಕರಿ ಕ್ಷೇತ್ರದ ಭೂರಚನೆಯು ಬೆಟ್ಟ-ಗುಡ್ಡಗಳಿಂದ ಕೂಡಿದ್ದು, ಮಧ್ಯದಲ್ಲಿ ವ್ಯವಸಾಯಕ್ಕೆ ಯೋಗ್ಯವಾದ ಸಮತಟ್ಟಾದ ಭೂಮಿಯು ಕಂಡುಬರುತ್ತದೆ. ಮುಖ್ಯವಾಗಿ

ಇಲ್ಲಿಯ ಮಣ್ಣು ಮರಳು ಮಿಶ್ರಿತ ಕೆಂಪು ಮತ್ತು ಕಪ್ಪು ಮಣ್ಣು ಇರುವುದನ್ನು ಕಾಣಬಹುದು. ಈ ಪ್ರದೇಶದಲ್ಲಿ ಮುಖ್ಯವಾಗಿ ಮಲಪ್ರಭಾ (ಸರಸ್ವತಿ ಹಳ್ಳ) ನದಿಯು ಇಲ್ಲಿ ಹರಿಯುತ್ತದೆ. ಕೃಷಿಯು ಇಲ್ಲಿನ ಜನರ ಮುಖ್ಯ ಉದ್ಯೋಗವಾಗಿದ್ದು, ಮಳೆ ಹಾಗೂ ನೀರಾವರಿಯನ್ನು ಅವಲಂಬಿಸಿದ ಭೂಮಿಯು ಕಂಡುಬರುವುದು. ಅವುಗಳಲ್ಲಿ ನೀರಾವರಿಯನ್ನು ಅವಲಂಬಿಸಿದ ಭೂಮಿಯೇ ಹೆಚ್ಚಾಗಿದೆ. ಆದ್ದರಿಂದ ಇಲ್ಲಿ ಪ್ರಮುಖವಾಗಿ ಬಾಳೆ, ತೆಂಗು, ಎಲೆ, ವಿವಿಧ ಹಣ್ಣು, ಹತ್ತಿ, ಕಬ್ಬು ಇತ್ಯಾದಿ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಾರೆ.

ಜಲ ಸಂಪತ್ತು, ಮಾನವನ ಪ್ರತಿಯೊಂದು ಚಟುವಟಿಕೆಗಳಿಗೆ ಅವಶ್ಯಕವಾಗಿದೆ. ಇಲ್ಲಿ ಪ್ರಮುಖವಾಗಿ ನದಿ, ಕೆರೆ, ಬಾವಿ, ಕೊಳವೆಬಾವಿಗಳು ಮುಖ್ಯವಾಗಿದ್ದು ಕಂಡುಬರುತ್ತವೆ. ಮಲಪ್ರಭಾ (ಸರಸ್ವತಿ ಹಳ್ಳ) ನದಿಯು ಈ ಪ್ರದೇಶದಲ್ಲಿ ಹರಿಯುವ ಏಕೈಕ ನದಿ ಮೂಲವಾಗಿದೆ. ಇವುಗಳು ಪ್ರಾಚೀನ ಕಾಲದಿಂದ ಇಲ್ಲಿನ ಜನಜೀವನಕ್ಕೆ ನೀರಿನ ಆಸರೆಯನ್ನು ಒದಗಿಸಿವೆ. ಅದರಂತೆ ತೆರೆದ ಬಾವಿಗಳು ಸಹ ಇಲ್ಲಿನ ಜನರಿಗೆ ಅನುಕೂಲಕರವಾಗಿವೆ.

### ೧. ಖನಿಜ ಸಂಪತ್ತು

ಬಾದಾಮಿ ತಾಲೂಕಿನಲ್ಲಿ ಹೇಳಿಕೊಳ್ಳುವಂತಹ ಖನಿಜಸಂಪತ್ತು ಲಭ್ಯವಿಲ್ಲ. ಆದರೂ ತಾಲೂಕಿನ ಕೆಲ ಭಾಗಗಳಲ್ಲಾದ ಗುಳ್ಳೇದಗುಡ್ಡಕ್ಕೆ ಸುಮಾರು ೫ ಕಿಲೋಮೀಟರ್ ದಕ್ಷಿಣದಲ್ಲಿರುವ ಪಾರ್ವತಿಗುಡ್ಡ ಮತ್ತು ಮರಡಿಗುಡ್ಡಗಳ ಪ್ರದೇಶದಲ್ಲಿ ಸಿಲಿಕಾ ಅಥವಾ ಮರುಗಳುಗಲ್ಲು ನಿಕ್ಷೇಪಗಳಿವೆ. ಇವು ಸುಮಾರು ೧೫ ಕಿ.ಮೀ. ಆಳದವರೆಗೂ ವ್ಯಾಪಿಸಿದೆ. ಎರಡೂ ಪ್ರದೇಶಗಳಲ್ಲಿ ಸುಮಾರು ೨೨ ದಶಲಕ್ಷ ಟನ್ ದೊರೆಯಬಹುದೆಂದು ಅಂದಾಜು ಮಾಡಲಾಗಿದೆ. ಶೇ. ೬೫ ರಿಂದ ೬೮ ಭಾಗ ಸಿಲಿಕಾ, ಶೇ. ೧.೫ ರಿಂದ ಮೂರು ಭಾಗ ಆಲ್ಯೂಮಿನ ಆಕ್ಸೈಡ್ ಶೇ. ೦.೨೯ ರಿಂದ ೦.೭೩ ಭಾಗ ಕಬ್ಬಿಣದ ಆಕ್ಸೈಡ್ ಇದೆ. ಹಾಗೆಯೇ ಮಹಾಕೂಟ ಪ್ರದೇಶದಲ್ಲಿ ಹೆಮಟೈಟ್ ಅದಿರಿನ ಸಂಗ್ರಹವಿದೆ. ಇಲ್ಲಿಯ ಅದಿರಿನಲ್ಲಿ ಕಬ್ಬಿಣಾಂಶವು ಶೇಕಡ ೬೦ ರಿಂದ ೬೪ ಇರುವುದಾಗಿ ಕಂಡುಬಂದಿರುವುದು.[೯]

### ೨. ಹವಾಮಾನ

ತಾಲೂಕಿನ ಹವಾಮಾನವು ದಖ್ಖನ್ ಪ್ರದೇಶದ ಆಸುಪಾಸಿನ ಇತರೆ ತಾಲೂಕುಗಳಿಗಿಂತ ಸಾಮಾನ್ಯವಾಗಿ ಒಣ ಹಾಗೂ ಆರೋಗ್ಯಕರವಾಗಿದೆ. ವರ್ಷದಿಂದ ವರ್ಷಕ್ಕೆ ಆಗುವ ಮಳೆಯಲ್ಲಿನ ಆಗಾಧ ವ್ಯತ್ಯಾಸವು ತಾಲೂಕು ಬರಗಾಲ ಹಾಗೂ ಕ್ಷಾಮಕ್ಕೆ ತುತ್ತಾಗುತ್ತಿರುವುದಕ್ಕೆ ಮುಖ್ಯ ಕಾರಣವಾಗಿರುವುದು. ತಾಲೂಕಿನಲ್ಲಿ ಬೇಸಿಗೆ ಕಾಲವು ಫೆಬ್ರವರಿ ಮಧ್ಯಭಾಗದಿಂದ ಮೇ ತಿಂಗಳ ಕೊನೆಯವರೆಗೂ ಹಾಗೂ ಕೆಲವು ವರ್ಷಗಳಲ್ಲಿ ಜೂನ್ ತಿಂಗಳ ಮೊದಲನೆಯವಾರದವರೆಗೂ ಇರುತ್ತದೆ. ಈ ಅವಧಿಯಲ್ಲಿ ಹವಾಮಾನವು ತಂಪಾಗಿರುವುದು. ಮುಂಗಾರಿನ ನಂತರದ ಅವಧಿಯಲ್ಲಿ ಅಕ್ಟೋಬರ್

ಮತ್ತು ನವೆಂಬರ್ ತಿಂಗಳಲ್ಲಿರುವ ಚಳಿಗಾಲವು ಡಿಸೆಂಬರ್ ತಿಂಗಳಿಂದ ಫೆಬ್ರವರಿ ತಿಂಗಳವರೆಗೆ ಇರುತ್ತದೆ.

ಬಾದಾಮಿ ಒಟ್ಟು ಭೌಗೋಳಿಕ ಪ್ರದೇಶದಲ್ಲಿ ೩೧.೨೬೩ ಹೆಕ್ಟೇರ್ ಪ್ರದೇಶವನ್ನು ಅರಣ್ಯ ಪ್ರದೇಶವೆಂದು ವರ್ಗೀಕರಿಸಲಾಗಿದೆ. ಇಲ್ಲಿ ಹೆಚ್ಚು ಮಳೆ ಬೀಳದ ಕಾರಣ ಇಲ್ಲಿನ ಅರಣ್ಯಗಳು ದಟ್ಟವಾಗಿಲ್ಲ. ಇಲ್ಲಿ ಹೆಚ್ಚಾಗಿ ಜಾಲಿ ಮರಗಳು, ಬೇವು, ಹುಣಸೆ, ನೇರಳೆ, ಆಲದಮರ ಮುಂತಾದ ಮರಗಳು ಅಲ್ಲಲ್ಲಿ ಕಾಣಸಿಗುತ್ತವೆ. ಬಹುತೇಕ ಸಸ್ಯಗಳು ನದಿಯ ದಂಡೆ ಹಾಗೂ ನೀರಾವರಿ ಪ್ರದೇಶಗಳಲ್ಲಿ ಸೀಮಿತವಾಗಿವೆ. ಆದರೂ ಉತ್ತರ ಕರ್ನಾಟಕದ ಇತರೆ ಪ್ರದೇಶಗಳಿಗೆ ಹೋಲಿಸಿಕೊಂಡರೆ ತಾಲೂಕಿನಲ್ಲಿ ಉತ್ತಮ ಅರಣ್ಯ ಪ್ರದೇಶವನ್ನು ಕಾಣಬಹುದು. ಇಲ್ಲಿ ಪ್ರಮುಖವಾಗಿ ಕಬ್ಬು, ಜೋಳ, ಮೆಕ್ಕೆಜೋಳ, ಸಜ್ಜೆ, ನವಣೆ, ಗೋಧಿ ಮೊದಲಾದವು ಇಲ್ಲಿನ ಮುಖ್ಯ ಬೆಳೆಗಳಾಗಿವೆ. ತಾಲೂಕಿನಲ್ಲಿ ಅರಣ್ಯ ಪ್ರದೇಶ ಕಡಿಮೆ ಇರುವುದರಿಂದ ಇಲ್ಲಿ ಮೃಗ ಮತ್ತು ಪಕ್ಷಿಗಳ ಸಂಖ್ಯೆ ಕಡಿಮೆ. ಇಲ್ಲಿನ ಕಾಡುಗಳಲ್ಲಿ ಕಾಡುಬೆಕ್ಕು, ತೋಳ, ನರಿ, ಮುಳ್ಳುಹಂದಿ, ಕಾಡುಹಂದಿ, ಮೊಲ, ಮಂಗ, ನವಿಲು, ಕೌಜುಗ, ಪಾರಿವಾಳ, ಹೆಬ್ಬಾವು. ಕೆರೆಹಾವು, ನಾಗರಹಾವು, ಮಂಡಲಹಾವು ಮುಂತಾದ ಪ್ರಾಣಿ ಮತ್ತು ಪಕ್ಷಿಗಳನ್ನು ಕಾಣಬಹುದು.

ಬಾದಾಮಿಯಲ್ಲಿ ಮಳೆಮಾಪನ ಕೇಂದ್ರಗಳಿದ್ದು, ಅವುಗಳಲ್ಲಿ ೭೦ ವರ್ಷಗಳಿಗೂ ಹೆಚ್ಚು ಅವಧಿಯ ಅಂಕಿಅಂಶಗಳು ಲಭ್ಯವಾಗಿವೆ. ಒಟ್ಟು ವಾರ್ಷಿಕ ಮಳೆಯ ಪ್ರಮಾಣ ಹೆಚ್ಚಿಲ್ಲದಿದ್ದರೂ, ತಾಲೂಕಿನಲ್ಲಿ ಮುಂಗಾರು ಹಾಗೂ ಹಿಂಗಾರು ಮಾರುತಗಳಿಂದ ಮಳೆಯಾಗುತ್ತಿರುವುದು ಕಂಡುಬರುತ್ತದೆ. ವಾರ್ಷಿಕವಾಗಿ ಮಳೆಯ ಸರಾಸರಿ ೫೦ ಸೆಂ.ಮೀ. ದಿಂದ ೭೦ ಸೆಂ.ಮೀ. ಆಗುವುದು. ವರ್ಷದಿಂದ ವರ್ಷಕ್ಕೆ ಮಳೆಯಾಗುವ ಪ್ರಮಾಣದಲ್ಲಿ ಹೆಚ್ಚಿನ ವ್ಯತ್ಯಾಸವು ಕಂಡುಬರುವುದಿಲ್ಲ.

### ೨.೪. ಪ್ರಾಗಿತಿಹಾಸ

ಗತಕಾಲದ ಮಾನವನ ಇತಿಹಾಸವನ್ನು ಅರಿಯದೇ ನಾವು ಮುಂದಿನ ಚರಿತ್ರೆಯನ್ನು ಅಧ್ಯಯನ ಮಾಡಲು ಸಾಧ್ಯವಿಲ್ಲ. ಮಾನವನ ಹುಟ್ಟು, ಅವನ ಇರುವಿಕೆಯು ಹಂತ ಹಂತವಾಗಿ ಬೆಳೆದುಬಂದ ರೀತಿ, ಜೀವನೋಪಾಯಕ್ಕಾಗಿ ಉಪಯೋಗಿಸಿದಂತ ಉಪಕರಣಗಳ ಬಗೆಗೆ ತಿಳಿಯುವುದು ಅವಶ್ಯಕವಾದುದು. ಆದ್ದರಿಂದ ಪ್ರಸ್ತುತ ಅಧ್ಯಯನದಲ್ಲಿ ಬಾದಾಮಿ ಪರಿಸರದಲ್ಲಿ ಕಂಡುಬಂದಿರುವ ಪ್ರಾಚೀನ ಸಂಸ್ಕೃತಿಗಳನ್ನು ಅಧ್ಯಯನ ಮಾಡಲಾಗಿದೆ. ಇಲ್ಲಿ ಪ್ರಮುಖವಾಗಿ ಹಳೆಶಿಲಾಯುಗ, ಸೂಕ್ಷ್ಮಶಿಲಾಯುಗ, ನೂತನ ಶಿಲಾಯುಗ, ಬೃಹತ್‌ಶಿಲಾಯುಗ ಸಂಸ್ಕೃತಿಗಳ ಸ್ಥೂಲವಾದ ಅವಲೋಕನವಿದೆ.

ಮಾನವನ ಇತಿಹಾಸವನ್ನು ಅಧ್ಯಯನ ಮಾಡಲು ಪೂರ್ವ ಇತಿಹಾಸ ಮತ್ತು ಇತಿಹಾಸ ಕಾಲ ಪ್ರಮುಖವಾದುದು. ಪ್ರಾಗಿತಿಹಾಸ ಕಾಲ ಎಂದರೆ ಅಕ್ಷರ ಜ್ಞಾನವಿಲ್ಲದೆ ಇರುವ ಹಂತ. ಈ ಕಾಲದ ಮಾನವನು ಆಗ ನಿತ್ಯ ಬಳಕೆಯಲ್ಲಿದ್ದ ವಸ್ತುಗಳ ಆಧಾರದಿಂದ ಅಧ್ಯಯನ ಮಾಡಲಾಗುತ್ತದೆ. ಶಿಲಾಯುಗ ಸಂಸ್ಕೃತಿಯಲ್ಲಿ ಹಂತವನ್ನು ಅವಶೇಷ ಹಾಗೂ ಬೆಳವಣಿಗೆಯ ಅನುಸಾರವಾಗಿ ಹಳೆಯ ಶಿಲಾಯುಗದ ಸಂಸ್ಕೃತಿ, ಸೂಕ್ಷ್ಮ ಶಿಲಾಯುಗ ಸಂಸ್ಕೃತಿ ಮತ್ತು ನೂತನ ಶಿಲಾಯುಗ ಸಂಸ್ಕೃತಿ ಎಂದು ವರ್ಗೀಕರಿಸಲಾಗಿದೆ. ಹಳೆಶಿಲಾಯುಗ ಸಂಸ್ಕೃತಿಯಲ್ಲಿ ಆದಿ ಹಳೆಶಿಲಾಯುಗ ಸಂಸ್ಕೃತಿ, ಮಧ್ಯೆಹಳೆ ಶಿಲಾಯುಗ ಸಂಸ್ಕೃತಿ, ಅಂತಿಮ ಹಳೆ ಶಿಲಾಯುಗ ಸಂಸ್ಕೃತಿ ಎಂದು ವಿಭಾಗಿಸಲಾಗುವುದು. ಅನಂತರ ಲೋಹ ಶಿಲಾಯುಗ ಸಂಸ್ಕೃತಿಯ ಆರಂಭದಲ್ಲಿ ಶಿಲೆಯ ಬಳಕೆಯ ಜೊತೆಗೆ ತಾಮ್ರದ ಬಳಕೆಯು ಇದ್ದುದರಿಂದ ಈ ಹಂತವನ್ನು ಶಿಲಾತಾಮ್ರಯುಗ ಸಂಸ್ಕೃತಿ, ಅನಂತರ ಕಬ್ಬಿಣಯುಗದ ಬೃಹತ್ ಶಿಲಾಗೋರಿ ಸಂಸ್ಕೃತಿ ಎಂದು ಕರೆಯಲಾಗಿದೆ.

**೧. ಆದಿ ಹಳೆಶಿಲಾಯುಗದ ಸಂಸ್ಕೃತಿ**

ಬಾದಾಮಿ ಪರಿಸರದಲ್ಲಿ ಆದಿ ಹಳೆಶಿಲಾಯುಗದ ಸಂಸ್ಕೃತಿಯ ನೆಲೆಗಳು, ಈ ಸಂಸ್ಕೃತಿಗಳಿಗೆ ಸಂಬಂಧಿಸಿದ ಉಪಕರಣಗಳ ಬಗ್ಗೆ ರಾಬರ್ಟ್ ಬ್ರೂಸ್‌ಫೂಟ್, ಆರ್.ವಿ. ಜೋಶಿಯರು, ಅ. ಸುಂದರ, ಎಂ.ಎಸ್. ದೇಶಪಾಂಡೆಯವರು, ಶ್ರೀನಿವಾಸ ಪಾಡಿಗಾರರವರು ಸಂಶೋಧನೆ ಕೈಗೊಂಡು ಬೆಳಕಿಗೆ ತಂದಿದ್ದಾರೆ. ಬಾದಾಮಿಯ ಕಾತರಕಿ, ಥಾಣಕ ಶಿರೂರು, ಖ್ಯಾಡ, ಮೆಣಸಗಿ, ತಮಿನಹಾಳ, ಅಕ್ಕರಗಾಳ, ಮಣ್ಣೇರಿ, ಹೊಳೆಆಲೂರು, ಭದ್ರನಾಯಕನ ಜಾಲಿಹಾಳ, ಐಹೊಳೆ, ಆಸಂಗಿ, ಶಿಡ್ಲಪಡಿ, ಪಟ್ಟದಕಲ್ಲು, ನಂದಿಕೇಶ್ವರ, ಚೊಳಚಗುಡ್ಡ, ಕೆಂದೂರ, ಇವು ಆದಿಹಳೆ ಶಿಲಾಯುಗದ ಸಂಸ್ಕೃತಿಯ ನೆಲೆಗಳೆಂದು ಗುರುತಿಸಲಾಗಿದೆ. ಈ ನೆಲೆಗಳಲ್ಲಿ ಶಿಲಾಯುಧಗಳು ಕಂಡುಬಂದಿದ್ದು, ಕೈಗೊಡಲಿ, ಮಚ್ಚುಗಳು, ಅಶ್ಯೂಲಿಯನ್ ಮಾದರಿಯ ಉಪಕರಣಗಳು ಹಾಗೂ ಚೆಕ್ಕೆಗಳು ದೊರೆತಿವೆ.[೧೦]

**೨. ಮಧ್ಯೆ ಹಳೆಶಿಲಾಯುಗದ ಸಂಸ್ಕೃತಿ**

ಈ ಸಂಸ್ಕೃತಿಗೆ ಸೇರಿದ ಅನೇಕ ನೆಲೆಗಳು ಬಾದಾಮಿ ಪರಿಸರದಲ್ಲಿವೆ. ಆಸಂಗಿ, ತಮ್ಮಿನಾಳ, ನಾಗರಾಳ, ನಂದಿಕೇಶ್ವರ, ಬಾದಾಮಿ, ಶಿಡ್ಲಪಡಿ, ಶಿವಯೋಗ ಮಂದಿರ ಇವು ಪ್ರಮುಖ ನೆಲೆಗಳು. ಇವುಗಳಲ್ಲಿ ತಮ್ಮಿನಾಳ ಎಂಬಲ್ಲಿ ಈ ಸಾಂಸ್ಕೃತಿಗೆ ಸಂಬಂಧಿಸಿದ ಉಪಕರಣಗಳು ದೊರೆತಿವೆ. ಬಾದಾಮಿಯ ಗುಹೆ, ಶಿಡ್ಲಪಡಿಯ ಗುಹೆಯ ಒಳಗೆ ಈ ಹಂತದ ವರ್ಣಚಿತ್ರಗಳು ಹಾಗೂ ಗುಹೆಗಳ ಸುತ್ತಮುತ್ತ ಉಪಕರಣಗಳನ್ನು ಶೋಧಿಸಲಾಗಿದೆ.[೧೧]

### ೩. ಅಂತ್ಯ ಹಳೆಶಿಲಾಯುಗ ಸಂಸ್ಕೃತಿ

ಹಳೆಯ ಶಿಲಾಯುಗ ಸಂಸ್ಕೃತಿಯ ಕೊನೆಯ ಹಂತವೇ ಅಂತ್ಯ ಹಳೆಶಿಲಾಯುಗ. ಬಾದಾಮಿ ಪರಿಸರದಲ್ಲಿ ಈ ಸಂಸ್ಕೃತಿಗೆ ಒಳಪಟ್ಟ ನೆಲೆಯಾದ ಕುಟಕನಕೇರಿಯಲ್ಲಿ ಈ ಹಂತದ ಗುಹಾಚಿತ್ರಗಳು ದೊರೆತಿವೆ.[೧೨] ಇಲ್ಲದೆ ಬಾದಾಮಿಯ ಪರಿಸರದಲ್ಲಿರುವ ಕೆಲವು ಗುಹಾಚಿತ್ರಗಳು ಬಹುಶಃ ಈ ಸಂಸ್ಕೃತಿಗೆ ಒಳಪಟ್ಟಿರಬಹುದೆಂದು ವಿದ್ವಾಂಸರು ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

### ೪. ಸೂಕ್ಷ್ಮ ಶಿಲಾಯುಗ ಸಂಸ್ಕೃತಿ

ಈ ಸಂಸ್ಕೃತಿಯ ಹಂತದಲ್ಲಿ ಮಾನವನು ಅಲೆಮಾರಿ ಜೀವನದಿಂದ ಒಂದೆಡೆ ನೆಲೆನಿಂತನು. ಬೇಟೆಯಾಡುವ, ಮೀನುಗಾರಿಕೆ, ಆಹಾರ ಸಂಗ್ರಹಣೆಯ ಜೊತೆಗೆ ಆಹಾರ ಉತ್ಪಾದನೆ ಆರಂಭಿಸಿದ ಕಾಲಮಾನವಾಗಿದೆ. ಅರೆಗುಡ್ಡ, ಕುಟಕನಕೇರಿ, ಬಾದಾಮಿ, ಶಿಡ್ಲಘಡಿ, ಹೀರೆಗುಡ್ಡ, ಹೊಸ ಮಹಾಕೂಟ ಇವು ಈ ಸಂಸ್ಕೃತಿಗೆ ಒಳಪಟ್ಟ ನೆಲೆಗಳಾಗಿವೆ.[೧೩] ಇವುಗಳಲ್ಲಿ ಈ ಹಂತದ ವಿವಿಧ ಉಪಕರಣಗಳು, ವರ್ಣಚಿತ್ರಗಳು ದೊರೆತಿದ್ದು ಇವುಗಳಿಂದ ಈ ಸಂಸ್ಕೃತಿಯ ಮಾನವನ ಕಲಾ ನೈಪುಣ್ಯತೆಯನ್ನು ತಿಳಿದುಕೊಳ್ಳಬಹುದಾಗಿದೆ.

### ೫. ನವಶಿಲಾಯುಗ

ಈ ಸಂಸ್ಕೃತಿಯ ಹಂತದಲ್ಲಿ ಹಲವಾರು ಕ್ರಾಂತಿಕಾರಕ ಬದಲಾವಣೆಗಳಿಗೆ ಕಾರಣವಾಯಿತು. ಈ ಹಂತದಲ್ಲಿ ಮಾನವನ ವಲಸೆ ಜೀವನ ಮುಕ್ತಾಯಗೊಂಡು, ಒಂದು ಕಡೆ ನೆಲೆ ನಿಂತನು. ಕೃಷಿ ಆವಿಷ್ಕಾರವಾದ ಕಾಲಘಟ್ಟವಾಗಿದೆ. ಇದು ಕೇವಲ ಅವನ ಆಯುಧಗಳ ತಯಾರಿಕೆಯಲ್ಲಿ ಮಾತ್ರವಲ್ಲದೆ ಇಡೀ ಜೀವನ ಸ್ವರೂಪದಲ್ಲಿಯೇ ಕ್ರಾಂತಿಯನ್ನು ಉಂಟುಮಾಡಿದೆ. ಅಕ್ಕರಗಾಳ, ಅರೆಗುಡ್ಡ, ಹಿರೇಗುಡ್ಡ, ಐಹೊಳೆ, ಬಾದಾಮಿ, ಹೊಸ ಮಹಾಕೂಟ ಇವು ಈ ಸಂಸ್ಕೃತಿಯ ನೆಲೆಗಳಾಗಿವೆ. ಐಹೊಳೆ, ಬಾದಾಮಿ, ಹೊಸ ಮಹಾಕೂಟ ಬಂಡೆಗಲ್ಲುಗಳ ಮೇಲೆ ಕೆಮ್ಮಣ್ಣಿನ ಬಣ್ಣದ ವಿವಿಧ ಪ್ರಾಣಿ ಹಾಗೂ ಮನುಷ್ಯರ ರೇಖಾಚಿತ್ರಗಳಿವೆ. ಈ ಚಿತ್ರಗಳು ನವಶಿಲಾಯುಗದ ಮಾನವನ ಕಲಾಭಿರುಚಿಯ ಪ್ರತೀಕವಾಗಿದೆ. ಈ ಪರಿಸರದಲ್ಲಿ ಮಣ್ಣಿನ ಪಾತ್ರೆಗಳ ಚೂರು, ಶಿಲಾಮಣಿಗಳು ಲಭ್ಯವಾಗಿವೆ.[೧೪]

### ೬. ಬೃಹತ್‌ಶಿಲಾಯುಗ

ಬೃಹತ್‌ಶಿಲಾಯುಗ ಸಂಸ್ಕೃತಿಯ ಜನರು ಕುತೂಹಲಕರವಾದ ವಿವಿಧ ಮಾದರಿಯ ಬೃಹತ್ ಶಿಲಾಗೋರಿಗಳನ್ನು ನಿರ್ಮಿಸುತ್ತಿದ್ದುದರಿಂದ ಈ ಸಂಸ್ಕೃತಿಯನ್ನು ಬೃಹತ್‌ಶಿಲಾಯುಗ ಸಂಸ್ಕೃತಿ ಎನ್ನುವರು. ಬಾದಾಮಿಯ ಸಮೀಪದ ಅಕ್ಕರಗಾಳ, ಗುಳ್ಳೇದಗುಡ್ಡ, ಪಟ್ಟದಕಲ್ಲು, ಸಿದ್ಧನಕೊಳ್ಳ, ಕ್ಯಾದಿಗೇರಿ ಮತ್ತು ಚಿಲಾಪುರಗಳಲ್ಲಿ ಬೃಹತ್ ಶಿಲಾಸಂಸ್ಕೃತಿಯ ವಿವಿಧ ಮಾದರಿಯ ಕಲ್ಗೋರಿಗಳಿವೆ.[೧೫] ಇವು ಇವರ ವಾಸ್ತು ವೈವಿಧ್ಯತೆಗೆ ಸಾಕ್ಷಿಯಾಗಿದೆ.

## ೨. ೫. ಇತಿಹಾಸ ಆರಂಭ ಕಾಲ

ಬಾದಾಮಿ ತಾಲೂಕು ಕರ್ನಾಟಕದ ಇತಿಹಾಸದಲ್ಲಿ ಒಂದು ಮಹತ್ವದ ಪಾತ್ರವಹಿಸಿದೆ. ಇದು ಇತಿಹಾಸ ಮತ್ತು ಸಂಸ್ಕೃತಿಗಳ ಬೆಳವಣಿಗೆಗೆ ವಿಶಿಷ್ಟ ಕೊಡುಗೆಗಳನ್ನು ನೀಡಿರುವುದು. ಈ ತಾಲೂಕು ಅನೇಕ ರಾಜಮನೆತನಗಳ ಆಡಳಿತಕ್ಕೆ ಒಳಪಟ್ಟಿದ್ದು, ಅದರಲ್ಲಿ ಮುಖ್ಯವಾಗಿ ಮೌರ್ಯರು, ಶಾತವಾಹನರು, ಕದಂಬ, ರಾಷ್ಟ್ರಕೂಟ, ಚಾಲುಕ್ಯ, ದೇವಗಿರಿಯ ಯಾದವರು, ವಿಜಯನಗರ ಅರಸರು, ಬಿಜಾಪುರದ ಸುಲ್ತಾನರು, ಸವಣೂರು ನವಾಬರು, ಪೇಶ್ವೆಗಳು, ಹೈದರಾಲಿ, ಟಿಪ್ಪು ಕೊನೆಗೆ ಬ್ರಿಟಿಷರು ಆಳ್ವಿಕೆ ನಡೆಸಿದ್ದಾರೆ. ಈ ಎಲ್ಲ ಅರಸು ಮನೆತನಗಳ ವಿವರಣೆಯನ್ನು ಲಭ್ಯವಿರುವ ಪುರಾವೆಗಳು, ಅವಶೇಷಗಳು, ಶಾಸನಗಳು, ಸಾಹಿತ್ಯ ಕೃತಿಗಳನ್ನು ಆಧಾರವಾಗಿ ಬಳಸಿಕೊಳ್ಳಲಾಗಿದೆ.

ನಮಗೆ ದೊರೆತಿರುವ ಆಧಾರಗಳ ಪ್ರಕಾರ ಕರ್ನಾಟಕವನ್ನು ಮೊದಲು ಆಳಿದವರು ಮೌರ್ಯರು. ಮೌರ್ಯ ಚಕ್ರವರ್ತಿಯಾದ ಅಶೋಕನ ಪ್ರಾಕೃತ ಭಾಷೆಯ ಹತ್ತು ಶಾಸನಗಳು (ಕ್ರಿ.ಪೂ. ೩ನೇ ಶತಮಾನ) ಕರ್ನಾಟಕದಲ್ಲಿ ದೊರಕಿವೆ. ಇದರ ಆಧಾರದ ಮೇಲೆ ಅಶೋಕನ ಆಳ್ವಿಕೆಯ ಅವಧಿಯಲ್ಲಿ ಮೌರ್ಯ ಸಾಮ್ರಾಜ್ಯ ದಕ್ಷಿಣ ಭಾರತದವರೆಗೂ ವ್ಯಾಪಿಸಿತ್ತು ಎಂದು ತಿಳಿದುಬರುತ್ತದೆ. ಆದರೆ ಅಶೋಕನ ಮರಣದ ನಂತರ ಮೌರ್ಯ ಸಾಮ್ರಾಜ್ಯ ಅವನತಿಯ ಹಾದಿಯನ್ನು ಹಿಡಿಯಿತು. ನಂತರ ಶಾತವಾಹನರು ದಕ್ಷಿಣ ಭಾರತದ ಅಧಿಪತಿಗಳಾದರು.[೧೬] ಬಾದಾಮಿ ಪರಿಸರದಲ್ಲಿ ಮೌರ್ಯರಿಗೆ ಸಂಬಂಧಿಸಿದ ಯಾವುದೇ ಅವಶೇಷಗಳು ಈವರೆಗೆ ಲಭಿಸಿಲ್ಲ. ಆದರೆ ಬಾದಾಮಿ ಪರಿಸರದಲ್ಲಿ ಶಾತವಾಹನರಿಗೆ ಸೇರಿದ ಪ್ರಾಚ್ಯ ಅವಶೇಷಗಳು ದೊರಕಿವೆ. ಐಹೊಳೆಯಲ್ಲಿ ಶಾತವಾಹನರ ನಾಣ್ಯಗಳು, ಮಣ್ಣಿನ ಪಾತ್ರೆಯ ಚೂರುಗಳು ಲಭ್ಯವಾಗಿವೆ.[೧೭] ಅಲ್ಲದೆ ಟಾಲೆಮಿಯು ರಚಿಸಿರುವ 'ಎ ಗೈಡ್ ಟು ದಿ ಜಿಯಾಗ್ರಫಿ', ಎಂಬ ಗ್ರಂಥದಲ್ಲಿ ಶಾತವಾಹನರ ಕಾಲದಲ್ಲೇ ಬಾದಾಮಿಯು ಪ್ರಮುಖ ವ್ಯಾಪಾರ ಕೇಂದ್ರವಾಗಿದ್ದ ಬಗ್ಗೆ ಉಲ್ಲೇಖವಿದೆ.

ಶಾತವಾಹನರ ನಂತರ ಕರ್ನಾಟಕದ ರಾಜಕೀಯ ಕ್ಷೇತ್ರದಲ್ಲಿ ಕದಂಬರು ಕಾಣಿಸಿಕೊಂಡರು. ಕರ್ನಾಟಕವನ್ನು ಆಳಿದ ಮೊದಲ ಅಚ್ಚಕನ್ನಡದ ದೊರೆಗಳೆಂದರೆ ಕದಂಬರು ಎನ್ನಬಹುದು. ಅವರಿಂದ ಕನ್ನಡ ಸಂಸ್ಕೃತಿಗೆ ಒಂದು ರೂಪ ದೊರಕಿತು. ಕಂದಬರ ಆಡಳಿತದ ವ್ಯಾಪ್ತಿಗೆ ಬಾದಾಮಿ ಒಳಪಟ್ಟಿತ್ತು. ಬಾದಾಮಿ ಪರಿಸರದಿಂದ ಇತ್ತೀಚೆಗೆ ಸುಡಾವೆ ಮಣ್ಣಿನ ದ್ವಿಬಾಹುನರಸಿಂಹ, ಗಣಪತಿ ಹಾಗೂ ಪಟ್ಟದಕಲ್ಲಿನ ತೀರ್ಥಂಕರ ಮೂರ್ತಿ ಮುಂತಾದ ಶಿಲ್ಪಗಳು ವರದಿಯಾಗಿದ್ದು, ಅವು ಆದಿ ಕದಂಬರದಿರಬಹುದೆಂಬ ಅಭಿಪ್ರಾಯವಿದೆ.

ಪಟ್ಟದಕಲ್ಲಿನ ಸಂಗಮೇಶ್ವರ ದೇವಾಲಯ ಮುಂಭಾಗದಲ್ಲಿನ ಜೈನ ನಾರಾಯಣನ ಗುಡಿಯ ಎಡಭಾಗದಲ್ಲಿ ಬಾದಾಮಿ ಚಾಲುಕ್ಯರ ಪೂರ್ವಕಾಲಕ್ಕೆ ಸೇರಿದ ಇಟ್ಟಿಗೆಯ ೨ ದೇವಾಲಯಗಳ ಅವಶೇಷಗಳಿವೆ. ಇದೇ ರೀತಿ ಐಹೊಳೆಯಲ್ಲಿರುವ ಬಾದಾಮಿ ಚಾಲುಕ್ಯರ

ಕಾಲದ ಅಂಬಿಗೇರ ಗುಡಿ ಹಾಗೂ ಪಟ್ಟದಕಲ್ಲಿನ ಸಂಗಮೇಶ್ವರ ದೇವಾಲಯವೂ ಕೂಡ ಚಾಲುಕ್ಯ ಪೂರ್ವಕಾಲದ ಇಟ್ಟಿಗೆಯ ರಚನೆಯ ಮೇಲೆ ನಿರ್ಮಿಸಿದ್ದಾರೆ. ಕದಂಬರ ನಂತರ ಸುಮಾರು ೫೪೦ರಲ್ಲಿ ಕರ್ನಾಟಕ ರಾಜಕೀಯ ಕ್ಷೇತ್ರದಲ್ಲಿ ಪ್ರಾಭಲ್ಯ ಸಾಧಿಸಲಿಕ್ಕೆ ಬಾದಾಮಿಯ ಚಾಲುಕ್ಯರಿಗೆ ಸೂಕ್ತ ರಾಜಕೀಯ ವೇದಿಕೆಯನ್ನು ನೀಡಿದ ಕೀರ್ತಿಯು ಈ ತಾಲೂಕಿಗೆ ಸಲ್ಲುತ್ತದೆ. ಈ ಚಾಲುಕ್ಯರೇ ಇಡೀ ಕರ್ನಾಟಕಕ್ಕೆ ಸಾರ್ವಭೌಮರಾಗಿ ಮೊದಲು ಆಳಿದ ಅರಸರು ಎಂದು ಆಲೂರು ವೆಂಕಟರಾಯರು ತಮ್ಮ ಕರ್ನಾಟಕ ಗತ ವೈಭವ ಎಂಬ ಕೃತಿಯಲ್ಲಿ ಅವರು ಯಥಾರ್ಥವಾಗಿಯೇ ಹೇಳಿದ್ದಾರೆ.[೧೮] ಕರ್ನಾಟಕದ ರಾಜಕೀಯ ಮತ್ತು ಸಾಂಸ್ಕೃತಿಕ ಚರಿತ್ರೆಯಲ್ಲಿ ಚಾಲುಕ್ಯರ ಸ್ಥಾನ ಬಹಳ ಹಿರಿದಾದುದು. ಈ ವಂಶ ಇಡೀ ಕರ್ನಾಟಕವನ್ನೆಲ್ಲಾ ವ್ಯಾಪಿಸಿದುದ್ದಲ್ಲದೆ, ಉತ್ತರದ ಕಡೆಗೂ ತನ್ನ ಪ್ರಭಾವವನ್ನು ಬೀರಿತು. ಅಖಿಲ ಭಾರತದ ರಾಜಕೀಯದಲ್ಲಿಯೂ ಮತ್ತು ಸಾಂಸ್ಕೃತಿಕ ಬೆಳವಣಿಗೆಯಲ್ಲಿಯೂ ಕರ್ನಾಟಕಕ್ಕೆ ಒಂದು ವಿಶಿಷ್ಟವಾದ ಸ್ಥಾನವನ್ನು ಚಾಲುಕ್ಯರು ತಂದುಕೊಟ್ಟರು. ಅಲ್ಲದೆ ಇವರ ಕಾಲದಲ್ಲಿ ಕನ್ನಡವನ್ನು ಆಡುವ ಪ್ರದೇಶಗಳೆಲ್ಲ ಒಂದು ಆಳ್ವಿಕೆಗೆ ಒಳಪಟ್ಟವು. ಆಡಳಿತ ವ್ಯವಸ್ಥೆ, ಸೇನಾಬಲ, ಧಾರ್ಮಿಕ ಔದರ್ಯ, ಕಲೆ, ಸಾಹಿತ್ಯ, ಪ್ರಜಾವಾತ್ಸಲ್ಯ ಈ ದೃಷ್ಟಿಗಳಿಂದ ಭಾರತದ ಪ್ರಮುಖ ಚಕ್ರವರ್ತಿ ವಂಶಗಳೊಡನೆ ಬಾದಾಮಿ ಚಾಲುಕ್ಯರನ್ನು ಹೋಲಿಸಬಹುದು.

ಮೂಲತಃ ಕನ್ನಡಿಗರಾದ ಚಾಲುಕ್ಯರ ಮೂಲ ಪುರುಷ ಜಯಸಿಂಹ. ಇವನು ಕದಂಬರ ಒಬ್ಬ ಮಾಂಡಲಿಕನಾಗಿದ್ದನು. ಇವನ ಮೊಮ್ಮಗನೇ ಮೊದಲನೆಯ ಪುಲಕೇಶಿ. ಇವನು ಸ್ವತಂತ್ರವಾಗಿ ಬಾದಾಮಿಯನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಅಲ್ಲಿ ರಾಜ ಒಂದು ಭದ್ರವಾದ ಕೋಟೆಯನ್ನು ಕ್ರಿ.ಶ. ೫೪೩ರಲ್ಲಿ ಕಟ್ಟಿಸಿದನು. ಇವನು ಹಲವು ರಾಜರನ್ನು ಸೋಲಿಸಿ ಅಶ್ವಮೇಧಯಾಗವನ್ನು ಮಾಡಿದ.[೧೯] ಇವನ ಮೊಮ್ಮಗನೇ ಮಹಾಚಕ್ರವರ್ತಿ ಇಮ್ಮಡಿ ಪುಲಕೇಶಿ.

ಪುಲಕೇಶಿಯು ತಂದೆ ಕೀರ್ತಿವರ್ಮನು ಮಡಿದಾಗ, ಅವನು ಇನ್ನೂ ಚಿಕ್ಕವನಾದುದರಿಂದ ಅವನ ಚಿಕ್ಕಪ್ಪ ಮಂಗಲೇಶನು ರಾಜನಾದನು. ಆದರೆ ಪುಲಕೇಶಿಯು ದೊಡ್ಡವನಾಗಿ ರಾಜನಾಗುವ ಶಕ್ತಿ ಸಾಮರ್ಥ್ಯಗಳನ್ನು ಪಡೆದರೂ, ಮಂಗಲೇಶನು ಸ್ವಾರ್ಥದಿಂದ ತನ್ನ ಮಗನನ್ನು ಪಟ್ಟಕ್ಕೆ ತರುವ ಹುನ್ನಾರವನ್ನು ಮಾಡಿದುದರಿಂದ ಕುಪಿತನಾದ ಪುಲಕೇಶಿಯು ಚಿಕ್ಕಪ್ಪನನ್ನು ಅಡಗಿಸಿ ಕ್ರಿ.ಶ. ೬೧೦ರಲ್ಲಿ ಸಿಂಹಾಸನವನ್ನು ಏರಿದನು. ಪುಲಕೇಶಿಯು ಬನವಾಸಿಯ ಕದಂಬರನ್ನು, ಕೊಂಕಣದ ಮೌರ್ಯರನ್ನು ಸೋಲಿಸಿದನು. ಅಲ್ಲದೆ ಮುಂಬಯಿಗೆ ಸಮೀಪದ ಪುರಿ ಎನ್ನುವ ದ್ವೀಪವನ್ನು (ಈಗಿನ ಎಲಿಫೆಂಟಾ) ವಶಪಡಿಸಿಕೊಂಡಿದ್ದು ಅವನ ಸಾಧನೆಯಾಗಿದೆ. ಅವನ ಕಾಲದಲ್ಲಿ ಕನೋಜಿನಲ್ಲಿ ಹರ್ಷವರ್ಧನನೆಂಬ ಚಕ್ರವರ್ತಿಯು ಉತ್ತರಾಪಥಧೀಶ್ವರನಾಗಿ ಮೆರೆಯುತ್ತಿದ್ದನು. ಅವನು ಪುಲಕೇಶಿಯನ್ನು ಲೆಕ್ಕಿಸದೆ ದಂಡೆತ್ತಿ ಬಂದಾಗ ಪುಲಕೇಶಿಯು ಅವನನ್ನು ನರ್ಮದೆಯ

ದಡದಲ್ಲಿ ನಿರ್ಣಾಯಕವಾಗಿ ಸೋಲಿಸಿ ಹಿಂದಕ್ಕೆ ಅಟ್ಟಿದ. ಐಹೊಳೆ ಶಾಸನ, ಚೀನ ಪ್ರವಾಸಿ ಹ್ಯುಯೆನ್‌ತ್ಸಾಂಗ್‌ನ ಬರವಣಿಗೆಗಳು ಇಮ್ಮಡಿ ಪುಲಕೇಶಿಯ ಈ ಮಹಾವಿಜಯವನ್ನು ವರ್ಣಿಸುತ್ತವೆ. ಈ ವಿಜಯವು ಪುಲಕೇಶಿಗೆ ಪರಮೇಶ್ವರ ಎಂಬ ಬಿರುದನ್ನು ತಂದುಕೊಟ್ಟಿತು. ಹರ್ಷನನ್ನು ಸೋಲಿಸಿ ದಕ್ಷಿಣಪಥೇಶ್ವರನಾದ ಪುಲಕೇಶಿಯ ಅಧೀನಕ್ಕೆ ಇಡೀ ದಕ್ಷಿಣಕ್ಕಿರುವ ಭರತಖಂಡವೆಲ್ಲ ಒಳಪಟ್ಟಿತ್ತು.[೨೦]

ಪ್ರಜಾಹಿತ ಚಿಂತಕನಾದ ಪುಲಕೇಶಿಯ ಸೈನ್ಯವು ಅಜೇಯವಾಗಿತ್ತು. ಚಾಲುಕ್ಯರ ಸೈನ್ಯವನ್ನು 'ಕರ್ನಾಟಕ ಬಲಂ' ಎಂದು ಕರೆಯಲಾಗುತ್ತಿತ್ತು. ಪುಲಕೇಶಿಯು ಪಲ್ಲವರೊಂದಿಗೆ ಎರಡು ಬಾರಿ ಯುದ್ಧವನ್ನು ಮಾಡಿದನೆಂದು ತಿಳಿದುಬರುತ್ತದೆ. ಮೊದಲ ಬಾರಿಗೆ ಪಲ್ಲವರ ರಾಜ ಮಹೇಂದ್ರವರ್ಮನನ್ನು ಸೋಲಿಸಿ ಕಂಚಿಯನ್ನು ವಶಪಡಿಸಿಕೊಂಡನು. ಪಲ್ಲವರ ಮಹೇಂದ್ರವರ್ಮನ ನಂತರ ನರಸಿಂಹವರ್ಮನು ಅಧಿಕಾರ ವಹಿಸಿಕೊಂಡ. ಇವನ ಕಾಲದಲ್ಲಿ ಪರಿಯಾಳ, ಮಣಿಮಂಗಳ, ಶೂರಮಾರ ಮೊದಲಾದ ಕಡೆಗಳಲ್ಲಿ ಇಮ್ಮಡಿ ಪುಲಕೇಶಿಯ ಸೈನ್ಯವನ್ನು ಸೋಲಿಸಿ, ಬಾದಾಮಿಯವರೆಗೂ ಪುಲಕೇಶಿಯ ಸೈನ್ಯವನ್ನು ಅಟ್ಟಿಸಿಕೊಂಡು ಬಂದನು. ನಂತರ ಬಾದಾಮಿಯನ್ನು ವಶಪಡಿಸಿಕೊಂಡು ಅಲ್ಲಿ ಒಂದು ವಿಜಯಸ್ತಂಭವನ್ನು ನೆಡಿಸಿದ. ಈ ಯುದ್ಧದಲ್ಲಿಯೇ ಬಹುಶಃ ಇಮ್ಮಡಿ ಪುಲಕೇಶಿ ಮರಣ ಹೊಂದಿರಬಹುದು. ಈತನ ನಂತರ ಬಾದಾಮಿಯು ಸುಮಾರು ೧೩ ವರ್ಷಗಳ ಕಾಲ ಪಲ್ಲವರ ಅಧೀನಕ್ಕೊಳಪಟ್ಟಿತ್ತು.

ಇಮ್ಮಡಿ ಪುಲಕೇಶಿಯ ನಂತರ ಅವನ ಹಿರಿಯ ಮಗ ಆದಿತ್ಯವರ್ಮ ಮತ್ತು ಅವನ ಮಗ ಅಭಿನವಾದಿತ್ಯರು ಸುವ್ಯವಸ್ಥೆಯನ್ನು ಮೂಡಿಸಲು ಪ್ರಯತ್ನಿಸಿದರು. ಆದರೆ ಅದು ಸಾಧ್ಯವಾಗಲಿಲ್ಲ. ಇವರ ನಂತರ ಪುಲಕೇಶಿಯ ಕಿರಿಯ ಮಗನಾದ ೧ನೇ ವಿಕ್ರಮಾದಿತ್ಯನು ಇದುವರೆಗೂ ಚಾಲುಕ್ಯರು ಕಳೆದುಕೊಂಡಿದ್ದನ್ನು ಮರಳಿ ಗಳಿಸುವ ಗುರುತರ ಹೊಣೆಗಾರಿಕೆಯನ್ನು ಹೊತ್ತುಕೊಂಡನು. ರಾಜನಾದ ಮೇಲೆ ಒಂದನೆಯ ವಿಕ್ರಮಾದಿತ್ಯನು ಪಲ್ಲವ, ಕೇರಳ, ಚೋಳ, ಪಾಂಡ್ಯ ಮತ್ತು ಸಿಂಹಳ ರಾಜರನ್ನು ಸೋಲಿಸಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡ. ನಂತರ ಈತನು ಕ್ರಿ.ಶ. ೬೭೦ರಲ್ಲಿ ಪಲ್ಲವ ಅರಸರಾದ ೨ನೆಯ ನರಸಿಂಹವರ್ಮ, ಎರಡನೆಯ ಮಹೇಂದ್ರವರ್ಮ ಮತ್ತು ಒಂದನೆಯ ಪರಮೇಶ್ವರವರ್ಮರನ್ನು ಸೋಲಿಸಿದನು. ಈ ಎಲ್ಲ ಯುದ್ಧಗಳಲ್ಲಿ ಪುತ್ರನಾದ ವಿನಯಾದಿತ್ಯ ಹಾಗೂ ಮೊಮ್ಮಗ ವಿಜಯಾದಿತ್ಯನ ಸಮರ್ಥವಾದ ಬೆಂಬಲ ದೊರಕಿತು. ಹೀಗೆ ಒಂದನೆಯ ವಿಕ್ರಮಾದಿತ್ಯನು ಪಲ್ಲವರನ್ನು ಸೋಲಿಸಿ ತನ್ನ ಆಳ್ವಿಕೆಯನ್ನು ಸ್ಥಾಪಿಸಿದನು.

ಹಿಂದಿನ ರಾಜರು ಬ್ರಾಹ್ಮಣರಿಗೂ, ದೇವಾಲಯಗಳಿಗೂ ನೀಡಿದ್ದ ದಾನದತ್ತಿಗಳನ್ನು ಮುಂದುವರಿಸಿದನು. ವಿಕ್ರಮಾದಿತ್ಯನ ಶಾಸನಗಳು ಚಾಲುಕ್ಯರ ಸಾಮ್ರಾಜ್ಯದ ಎಲ್ಲಾ ಭಾಗಗಳಲ್ಲಿ ದೊರೆತಿವೆ. ಆದ್ದರಿಂದ ಇವನ ಆಳ್ವಿಕೆಂಯು ವಿಶಾಲ ಸಾಮ್ರಾಜ್ಯದ ಮೇಲೆ

ಸ್ಥಾಪಿತವಾಗಿತ್ತೆಂಬುದರಲ್ಲಿ ಸಂಶಯವಿಲ್ಲ. ಈತನ ನಂತರ ಮಗನಾದ ವಿನಯಾದಿತ್ಯನು ರಾಜನಾದ. ವಿನಯಾದಿತ್ಯನು ಕ್ರಿ.ಶ. ೬೮೧ ರಿಂದ ೬೯೬ರವರೆಗೆ ಆಳಿದನು. ಆ ವೇಳೆಗೆ ಅವನಗೆ ೬೩ ವರ್ಷ ವಯಸ್ಸಾಗಿತ್ತು. ಇವನ ಆಳ್ವಿಕೆಯ ಕಾಲವು ಶಾಂತಿಯಿಂದ ಕೂಡಿತ್ತು. ವಿನಯಾದಿತ್ಯನು ಉತ್ತರ ಭಾರತದ ಹಲವಾರು ದೊರೆಗಳನ್ನು ಗೆದ್ದು ಗಂಗಾ, ಯಮುನಾ ಮತ್ತು ಪಾಲಿಧ್ವಜ ಎಂಬ ರಾಜ ಚಿಹ್ನೆಗಳನ್ನು ಸಂಪಾದಿಸಿದನು. ಇವನ ನಂತರ ಮಗನಾದ ವಿಜಯಾದಿತ್ಯ(ಕ್ರಿ.ಶ. ೬೯೬-೭೩೩)ರವರೆಗೆ ಆಳ್ವಿಕೆ ಮಾಡಿದ್ದಾನೆ. ಈತನು ೩೮ ವರ್ಷಗಳ ಸುದೀರ್ಘ ಆಳ್ವಿಕೆ ಅವಧಿಯನ್ನು ಪ್ರಜಾಕಲ್ಯಾಣದ ಕಾಲಾವಧಿ ಎಂದು ವರ್ಣಿಸಲಾಗಿದೆ. ಅನೇಕ ದೇವಾಲಯಗಳಿಗೆ ಉದಾರವಾಗಿ ದಾನ ಮಾಡಿರುವ ಬಗ್ಗೆ ಉಲ್ಲೇಖಗಳಿವೆ. ಆಲಂಪುರ ಪ್ರಶಸ್ತಿಯು ತಿಳಿಸುವಂತೆ ಬಡವರಿಗೆ, ಅಸಹಾಯಕರಿಗೆ, ದಾನ, ಧರ್ಮಗಳನ್ನು ಮಾಡಿದನು. ಧರ್ಮಸಹಿಷ್ಣು ಆದ ಇವನ ಕಾಲದಲ್ಲಿ ಹಲವು ಧರ್ಮಗಳು ಆಶ್ರಯ ಪಡೆದವು.

ಈತನ ಮರಣದ ನಂತರ ಯುವರಾಜನಾದ ಇಮ್ಮಡಿ ವಿಕ್ರಮಾದಿತ್ಯನು (ಕ್ರಿ.ಶ. ೭೩೪ ರಿಂದ ೭೪೩) ಆಳಿದನು. ಪರಾಕ್ರಮಿಯಾಗಿದ್ದ ಇಮ್ಮಡಿ ವಿಕ್ರಮಾದಿತ್ಯನು ತನ್ನ ತಂದೆಯ ಕಾಲದಲ್ಲೇ ಪಲ್ಲವರನ್ನು ಸೋಲಿಸಿದ್ದ. ಈತನ ಕಾಲದಲ್ಲಿಯೂ ಚಾಲುಕ್ಯ ಮತ್ತು ಪಲ್ಲವರ ವೈರತ್ವ ಮುಂದುವರಿದಿತ್ತು. ಈತನ ಆಳ್ವಿಕೆಯ ಅವಧಿಯಲ್ಲಿ ಬಂಡೆದ್ದ ಪಲ್ಲವ ಪರಮೇಶ್ವರವರ್ಮನ ಮೇಲೆ ದಾಳಿ ಮಾಡಲು ಸಕಲ ಸಿದ್ಧತೆಗಳನ್ನು ನಡೆಸಿ ಕರಡಿಯ ಮೇಲೆ ದಾಳಿ ನಡೆಸಿದ. ಈ ದಾಳಿಯನ್ನು ಎದುರಿಸಲಾಗದ ಪಲ್ಲವರು ವಿಕ್ರಮಾದಿತ್ಯನಿಗೆ ಕಪ್ಪ-ಕಾಣಿಕೆಯನ್ನು ನೀಡಿ ಶರಣಾರದರು. ವಿಕ್ರಮಾದಿತ್ಯನ ಈ ಸಾಧನೆಯನ್ನು ಇಲ್ಲಿ ಸ್ಮರಿಸಬೇಕಾಗುತ್ತದೆ. ಇಮ್ಮಡಿ ಪುಲಕೇಶಿಯ ಕಾಲದಲ್ಲಿ ಕಂಚಿಯ ಪಲ್ಲವರು ಬಾದಾಮಿಯನ್ನು ವಶಪಡಿಸಿಕೊಂಡು ಅದನ್ನು ನಾಶಪಡಿಸಿದರು. ವಿಕ್ರಮಾದಿತ್ಯನು ಪಲ್ಲವರನ್ನು ಸೋಲಿಸಿ ಅವರ ರಾಜ ಚಿಹ್ನೆಗಳನ್ನು ವಶಪಡಿಸಿಕೊಂಡು ಕಂಚಿಯನ್ನು ತನ್ನ ವಶಕ್ಕೆ ತೆಗೆದುಕೊಂಡನು. ಹಿಂದೆ ಪಲ್ಲವರು ಬಾದಾಮಿಯನ್ನು ಸೂರೆಗೊಂಡು ನಾಶ ಮಾಡಿದಂತೆ, ವಿಕ್ರಮಾದಿತ್ಯನೂ ಸೇಡು ತೀರಿಸಿಕೊಳ್ಳಲು ಕಂಚಿಯನ್ನು ನಾಶ ಮಾಡಬಹುದಿತ್ತು. ಹಾಗೆ ಮಾಡದೆ, ಅವನು ಕಂಚಿಯ ಸಂಪತ್ತನ್ನು ಅಲ್ಲಿಯ ರಾಜಸಿಂಹೇಶ್ವರ ದೇವಾಲಯಕ್ಕೆ ಬಿಟ್ಟುಕೊಟ್ಟನು. ಈ ವಿಷಯವನ್ನು ಹೇಳುವ ಕನ್ನಡ ಶಾಸನವು ಕಂಚಿಯಲ್ಲಿದೆ. ಇದು ಅವನ ಔದಾರ್ಯತೆಗೆ ಸಾಕ್ಷಿ ಎನ್ನಬಹುದು.[೨೧]

ಕಂಚಿಯು ವಿಜಯದ ಸ್ಮರಣಾರ್ಥವಾಗಿ ಈತನ ಇಬ್ಬರು ರಾಣಿಯರಾದ ಲೋಕಮಹಾದೇವಿ ಮತ್ತು ತ್ರೈಲೋಕ್ಯಮಹಾದೇವಿಯರು. ಪಟ್ಟದಕಲ್ಲಿನಲ್ಲಿ ಲೋಕೇಶ್ವರ ಮತ್ತು ತ್ರೈಲೋಕೇಶ್ವರ ದೇವಾಲಯಗಳನ್ನು ಕಟ್ಟಿಸಿದರು. ಈಗ ಅವುಗಳನ್ನು ವಿರೂಪಾಕ್ಷ ಮತ್ತು ಮಲ್ಲಿಕಾರ್ಜುನ ದೇವಾಲಯಗಳೆಂದು ಕರೆಯಲಾಗುತ್ತಿದೆ. ಇಮ್ಮಡಿ ವಿಕ್ರಮಾದಿತ್ಯನ ನಂತರ ಎರಡನೆಯ ಕೀರ್ತಿವರ್ಮ (ಕ್ರಿ.ಶ. ೭೪೪-೭೫೬)ನು ಅಧಿಕಾರಕ್ಕೆ ಬರುತ್ತಾನೆ.

ಈತನು ಈ ವಂಶದ ಕೊನೆಯ ದೊರೆ. ಈತನ ಕಾಲದಲ್ಲಿ ಚಾಲುಕ್ಯರ ಮಾಂಡಲೀಕರಾದ ರಾಷ್ಟ್ರಕೂಟರ ದಂತಿದುರ್ಗನು ಚಾಲುಕ್ಯ ರಾಜ್ಯದ ಉತ್ತರದ ಭಾಗಗಳನ್ನು ವಶಪಡಿಸಿಕೊಂಡನು. ಮುಂದೆ ದಂತಿದುರ್ಗನ ಮರಣದ ನಂತರ ರಾಷ್ಟ್ರಕೂಟರ ಒಂದನೆಯ ಕೃಷ್ಣನು ಕ್ರಿ.ಶ. ೭೫೬ರಲ್ಲಿ ಕೀರ್ತಿವರ್ಮನನ್ನು ಸಂಪೂರ್ಣವಾಗಿ ಸೋಲಿಸಿ ಚಾಲುಕ್ಯರ ಆಡಳಿತಕ್ಕೆ ಅಂತ್ಯ ಹಾಡಿದನು.

ಕರ್ನಾಟಕನ್ನು ಆಳ್ವಿಕೆ ಮಾಡಿದ ಬಹುದೊಡ್ಡ ಸಾಮ್ರಾಜ್ಯಗಳಲ್ಲಿ ಬಾದಾಮಿಯ ಚಾಲಯಕ್ಯರ ಸಾಮ್ರಾಜ್ಯವು ಒಂದಾಗಿದೆ. ಈ ಸಾಮ್ರಾಜ್ಯದ ಅರಸರು ರಾಜಕೀಯವಾಗಿ ಮತ್ತು ಸಾಂಸ್ಕೃತಿಕವಾಗಿ ನೀಡಿದ ಕೊಡುಗೆ ಅಪಾರ. ವಿಶೇಷವಾಗಿ ಇವರ ಕಾಲದಲ್ಲಿ ನಿರ್ಮಿತವಾದ ವಾಸ್ತುಶಿಲ್ಪ ಕಲೆ ಅಮೋಘವಾದವು. ಇವರ ಕಾಲದ ರಚನೆಯಾದ ಸ್ಮಾರಕಗಳಿಂದ ಕರ್ನಾಟಕ ಇಂದು ವಿಶ್ವಮಟ್ಟದಲ್ಲಿ ಗುರುತಿಸಿಕೊಳ್ಳಲು ಸಾಧ್ಯವಾಗಿದೆ. ಬಾದಾಮಿ ಚಾಲುಕ್ಯರ ನಂತರ ಬಾದಾಮಿಯು ರಾಷ್ಟ್ರಕೂಟರ ಅಧೀನಕ್ಕೆ ಒಳಪಡುತ್ತದೆ. ಚಾಲುಕ್ಯರ ಅವನತಿಯ ನಂತರ ಅಖಿಲ ಭಾರತದ ಖ್ಯಾತವೆತ್ತ ಮತ್ತೊಂದು ಸಾಮ್ರಾಜ್ಯವನ್ನು ರಾಷ್ಟ್ರಕೂಟರು ಸ್ಥಾಪಿಸಿದರು. ಈ ಮನೆತನದ ಆಳ್ವಿಕೆಯು ಕ್ರಿ.ಶ. ೭೫೧ರಲ್ಲಿ ಪ್ರಾರಂಭವಾಗಿ ಕ್ರಿ.ಶ. ೯೭೩ರವರೆಗೂ ಮುಂದುವರೆಯಿತು. ಪ್ರಾರಂಭದಲ್ಲಿ ರಾಷ್ಟ್ರಕೂಟರು ಚಾಲುಕ್ಯರ ಮಾಂಡಲೀಕರಾಗಿದ್ದರು. ನಂತರ ಚಾಲುಕ್ಯ ವಂಶದ ಇಮ್ಮಡಿ ಕೀರ್ತಿವರ್ವನನ್ನು ಸೋಲಿಸಿದ ದಂತಿದುರ್ಗನು ರಾಷ್ಟ್ರಕೂಟ ವಂಶವನ್ನು ಸ್ಥಾಪಿಸಿದರು. ಮೂರನೆಯ ಗೋವಿಂದ, ಅಮೋಘವರ್ಷ ಇವರು ಈ ವಂಶದ ಶ್ರೇಷ್ಠ ದೊರೆಗಳಾಗಿದ್ದಾರೆ. ರಾಷ್ಟ್ರಕೂಟರ ಕಲಿಬಲ್ಲಹ, ಇಮ್ಮಡಿ ಕೃಷ್ಣ, ಖೊಟ್ಟಿಗ, ಅಮೋಘವರ್ಷ ಇವರ ಆಡಳಿತ ವ್ಯಾಪ್ತಿಗೆ ಬಾದಾಮಿಯು ಒಳಪಟ್ಟಿತ್ತು.[೨೨]

ರಾಷ್ಟ್ರಕೂಟರ ಪ್ರಾಭಲ್ಯ ಕುಂಠಿತವಾಗುತ್ತಲೇ ಬಾದಾಮಿ ಚಾಲುಕ್ಯರ ಮನೆತನಕ್ಕೆ ಸೇರಿದ ಇಮ್ಮಡಿ ತೈಲಪನು. ಸುಮಾರು ೯೭೩ರಲ್ಲಿ ರಾಷ್ಟ್ರಕೂಟರ ಕರ್ಕನನ್ನು ಸೋಲಿಸಿ ಚಾಲುಕ್ಯರ ಅಧಿಕಾರವನ್ನು ಎರಡು ಶತಮಾನಗಳ ನಂತರ ಪುನರ್ ಪ್ರತಿಷ್ಠಾಪಿಸುವಲ್ಲಿ ಯಶಸ್ವಿಯಾದನು. ಇವರ ರಾಜಧಾನಿ ಆರಂಭದಲ್ಲಿ ಮಾನ್ಯಕೇಟವಾಗಿತ್ತು. ನಂತರ ಒಂದನೆಯ ಸೋಮೇಶ್ವರನ ಕಾಲದಲ್ಲಿ ಕಲ್ಯಾಣವನ್ನು ಇವರ ರಾಜಧಾನಿಯಾಗಿ ಮಾಡಿಕೊಂಡರು.[೨೩] ಕಲ್ಯಾಣ ಚಾಲುಕ್ಯರ ಕಾಲದ ಇತಿಹಾಸವನ್ನು ರಚಿಸಲಿಕ್ಕೆ ಶಾಸನಗಳು ಉಪಯುಕ್ತ ಮಾಹಿತಿ ನೀಡುತ್ತವೆ. ಇವುಗಳ ನೆರವಿನಿಂದ ಬಾದಾಮಿಯು ಕೂಡ ಇವರ ಆಳ್ವಿಕೆಗೆ ಒಳಪಟ್ಟಿರುವುದನ್ನು ಗಮನಿಸಬಹುದು. ಬನಶಂಕರಿ ಗುಡಿಯ ಪ್ರಾಕಾರದಲ್ಲಿ ಕಲ್ಯಾಣ ಚಾಲುಕ್ಯರ ಮೊದಲನೆಯ ಜಗದೇಕಮಲ್ಲನ ಎರಡು ಶಾಸನಗಳಿವೆ.[೨೪] ಅರಸಿಬೀದಿಯ ಜೈನ ಬಸದಿ ಎದುರು ಮೊದಲನೆಯ ಸೋಮೇಶ್ವರನ ಶಾಸನ[೨೫] ಇವರ ಕಾಲದಲ್ಲಿ ರಚನೆಯಾದ ಅನೇಕ ವಾಸ್ತುನಿರ್ಮಾಣಗಳನ್ನು ಇಲ್ಲಿ ಕಾಣಬಹುದು. ಅವುಗಳೆಂದರೆ ಬಾದಾಮಿಯ ವಿರೂಪಾಕ್ಷ

ದೇವಾಲಯ, ಅಗಸ್ತ್ಯತೀರ್ಥ, ಉತ್ತರ ದಂಡೆಯ ಮೇಲಿರುವ ಮಲ್ಲಿಕಾರ್ಜುನ ಗುಡಿ, ಎಲ್ಲಮ್ಮನ ಗುಡಿ ಮೊದಲಾದವು. ಚಾಲುಕ್ಯರ ಕಲಾಪ್ರೇಮದ ನಿದರ್ಶನಗಳಾಗಿವೆ. ಕಲ್ಯಾಣದ ಚಾಲುಕ್ಯರ ನಂತರ ಅವರ ಸಾಮಂತರಾದ ಸಿಂಧರು ಬಾದಾಮಿಯನ್ನು ಆಳ್ವಿಕೆ ಮಾಡಿದ್ದಾರೆ. ಸಿಂಧರು ಸಿಂಧವಾಡಿಯನ್ನು ಆಳುತ್ತಿದ್ದರು. ಪಟ್ಟದಕಲ್ಲು, ಬಾದಾಮಿ, ಕೆಲವಾಡಿ, ಬಾಗಲಕೋಟೆ, ಧಾರವಾಡ ಜಿಲ್ಲೆಯ ನರೇಗಲ್ಲಿನ ನೆರೆನಾಡು ಇವೆಲ್ಲ ಸೇರಿ ಸಿಂಧವಾಡಿ ನಾಡಾಗಿತ್ತು. ಸಿಂಧರು ಪಶ್ಚಿಮ ಚಾಲುಕ್ಯರ ಸಾಮಂತರಾಗಿದ್ದರು. ಇವರ ಚರಿತ್ರೆಯಲ್ಲಿ ಪ್ರಮುಖನಾದವನು ಎರಡನೆಯ ಅಚುಗಿ. ಇವನು ಆರನೆಯ ವಿಕ್ರಮಾದಿತ್ಯನ ಸಾಮಂತನಾಗಿ ಅವನ ಮಗನಾದ ಒಂದನೆಯ ಪೆರ್ಮಾಡಿ (ಕ್ರಿ.ಶ. ೧೧೪೪) ಇಮ್ಮಡಿ ಜಗದೇಕಮಲ್ಲನ ಸಾಮಂತನಾಗಿ ಆಳ್ವಿಕೆ ಮಾಡಿದನು.[೨೬]

ಕರ್ನಾಟಕವನ್ನು ಆಳಿದ ಅರಸು ಮನೆತನಗಳಲ್ಲಿ ಕಳಚೂರಿ ರಾಜ ಮನೆತನವು ಅತ್ಯಲ್ಪಾವಧಿಯ ಆಡಳಿತ ನಡೆಸಿದರು. ಮಧ್ಯಕಾಲೀನ ಕರ್ನಾಟಕದ ಇತಿಹಾಸದಲ್ಲಿ ಕಲ್ಯಾಣ ಚಾಲುಕ್ಯರ ಸಾಮಂತರಾಗಿ, ನಿಕಟ ಸಂಬಂಧಿಗಳಾಗಿ ರಾಜಕೀಯ ಪ್ರಾಮುಖ್ಯತೆ ಹೊಂದಿದ್ದ. ಇವರು ಮುಮ್ಮಡಿ ತೈಲಪನ ಆಳ್ವಿಕೆಯ ಕಾಲದಲ್ಲಿ ಉಂಟಾದ ರಾಜಕೀಯ ಕ್ಷೋಭೆಯ ಲಾಭ ಪಡೆದು ಚಾಲುಕ್ಯರ ಅಧಿಕಾರವನ್ನು ಕಸಿದುಕೊಂಡರು. ಬಿಜ್ಜಳನ ನೇತೃತ್ವ ಇದು ಸಾಧ್ಯವಾಯಿತು. ಕ್ರಿ.ಶ. ೧೧೭೬ರ ವೇಳೆಗೆ ಕಿಸುನಾಡು ೭೦ ಸಂಕಮನ ಆಡಳಿತ ವ್ಯಾಪ್ತಿಗೆ ಒಳಪಟ್ಟಿತ್ತು.[೨೭]

ಬಿಜ್ಜಳನ ಕಾಲವನ್ನು ಅಶಾಂತಿಯ ಕಾಲವೆಂದು ಗುರುತಿಸುತ್ತೇವೆ. ಅಂದಿನ ರಾಜಕೀಯ ಅಶಾಂತಿಗಳಿಂದ ಬಸವಣ್ಣನವರ ಸಾಮಾಜಿಕ ಆಂದೋಲನಗಳು ಕಳಚೂರಿ ವಂಶವನ್ನು ರಾಜಕೀಯವಾಗಿ ಅಸ್ಥಿರಗೊಳಿಸಲು ಕಾರಣವಾದವು. ಮಧ್ಯಕಾಲೀನ ಕರ್ನಾಟಕವನ್ನು ಆಳಿದ ರಾಜಮನೆತನಗಳಲಿ ಯಾದವರು ಮತ್ತು ಸೇವುಣರು, ಕಲ್ಯಾಣ ಚಾಲುಕರ ಮಂಡಲೀಕರಾಗಿದ್ದರು. ಆದರೆ ನಾಲ್ಕುನೆಯ ಸೋಮೇಶ್ವರನ ಆಳ್ವಿಕೆಯ ಅಂತ್ಯ ಭಾಗದಲ್ಲಿ ಚಾಲುಕ್ಯರ ಉತ್ತರ ಭಾಗದಲ್ಲಿ ಸೇವುಣರು ಸ್ವತಂತ್ರ ಘೋಷಿಸಿಕೊಂಡರು. ಈ ವಂಶದ ಐದನೆಯ ಭಿಲ್ಲಮ (೧೧೭೩-೧೧೯೭) ಸೇವುಣರ ಸ್ವತಂತ್ರ ಆಳ್ವಿಕೆಗೆ ಅಡಿಪಾಯ ಹಾಕಿದನು. ಇವನು ಕಲ್ಯಾಣದ ಚಾಲುಕ್ಯರು, ಆನಂತರ ಕಳಚೂರಿಗಳನ್ನು ಸೋಲಿಸಿ ಕಲ್ಯಾಣವನ್ನು ವಶಪಡಿಸಿಕೊಂಡ ಸೇವುಣರು ಈ ಭಾಗವನ್ನು ತಮ್ಮ ಆಡಳಿತ ವ್ಯಾಪ್ತಿಗೆ ಒಳಪಡಿಸಿಕೊಂಡಿದ್ದರ ಬಗ್ಗೆ ಶಾಸನಗಳ ಉಲ್ಲೇಖಗಳಿವೆ. ಇವರ ನಂತರ ವಿಜಯನಗರ ಸಾಮ್ರಾಜ್ಯದ ಆಳ್ವಿಕೆಗೆ ಬಾದಾಮಿ ಪ್ರದೇಶ ಒಳಪಡುತ್ತದೆ. ಈ ಅಂಶವು ಬಾದಾಮಿಯಿಂದ ವರದಿಯಾಗಿರುವ ವಿಜಯನಗರ ಅರಸರ ಶಾಸನಗಳಿಂದ ವೇದ್ಯವಾಗುತ್ತದೆ. ಸಂಗಮ ಮನೆತನದ ಮೊದಲ ಅರಸ ಒಂದನೆಯ ಹರಿಹರನ (೧೩೩೬-೧೩೫೬) ಕಾಲಕ್ಕೆ ಸೇರಿದ ಬಾದಾಮಿ ಶಾಸನ

ವಿಜಯನಗರ ಆರಂಭಿಕ ಕಾಲಘಟ್ಟವಾಗಿರುವುದರಿಂದ ಇದಕ್ಕೆ ವಿಶೇಷ ಸ್ಥಾನವಿದೆ. ಈ ಶಾಸನದಲ್ಲಿ ಬಾದಾಮಿಯ ಸೀಮೆ ಎಂದು ಉಲ್ಲೇಖವಿರುವುದನ್ನು ಗಮನಿಸಬಹುದು. ಅಲ್ಲದೇ ಒಂದನೆಯ ಹರಿಹರ ದಂಡನಾಯಕ ಚಾಮೆನಾಯಕನ ನೇತೃತ್ವದಲ್ಲಿ ಬಾದಾಮಿ ದುರ್ಗ, ಕೋಟೆ, ಕೊತ್ತಲ, ಅಗಸೆ, ಮುಂತಾದವುಗಳ ಸೇರ್ಪಡೆಯ ವಿವರವನ್ನು ಗಮನಿಸುತ್ತೇವೆ.[೨೮]

ನೆರೆಯ ಬಹುಮನಿ ರಾಜ್ಯಕ್ಕೆ ಗಡಿ ಪ್ರದೇಶವಾಗಿದ್ದ ಬಾದಾಮಿ ಸೀಮೆಯ ಮೇಲೆ ಬಿಗಿ ಹಿಡಿತ ಸ್ಥಾಪಿಸಲು ಮತ್ತು ರಾಜ್ಯದ ಉತ್ತರ ಗಡಿಯ ರಕ್ಷಣೆಗೋಸ್ಕರ ಬಾದಾಮಿ ದುರ್ಗದ ವಿಸ್ತರಣೆಗೆ ಹರಿಹರ ಯೋಜಿಸಿದ್ದ ಬಗ್ಗೆ ಶಾಸನ ವಿವರಿಸುತ್ತದೆ. ಹರಿಹರನ ನಂತರ ಅಚ್ಚುತರಾಯನ ಕ್ರಿ.ಶ. ೧೫೩೨ರ ಶಾಸನವು ಬಾದಾಮಿ ಬನಶಂಕರಿ ದೇವಾಲಯದಲ್ಲಿ ಕಂಡುಬಂದಿದೆ. ಈ ಶಾಸನದಲ್ಲಿ ಅಚ್ಚುತನ ಆದೇಶದ ಮೇರೆಗೆ ಚಿಕ್ಕಚಿನ್ನಪ್ಪ ನಾಯಕನು ಬಾದಾಮಿಯ ಕೋಟೆಯನ್ನು ಸರಿಪಡಿಸಿ, ಬನದದೇವಿಯ ದೇವಾಲಯವನ್ನು ಜೀರ್ಣೋದ್ಧಾರ ಮಾಡಿಸಲಾಯಿತು. ಇವನ ನಂತರ ಕ್ರಿ.ಶ. ೧೫೪೪ರ ಸದಾಶಿವರಾಯನ ಶಾಸನವು ಅದೇ ಗುಡಿಯ ಪ್ರಾಕಾರದಲ್ಲಿ ಲಭ್ಯವಾಗಿದೆ. ಶಾಸನದಲ್ಲಿ ಹಡಪದ ಕೃಷ್ಣಪ್ಪನಾಯಕನು ಬನದ ಮಹಾಮಾಯಿ ಅಂಗರಂಗ ವೈಭವಕ್ಕೆ ಬಾದಾಮಿ ಸೀಮೆಗೆ ಸೇರಿದ ಡಾಣಕ ಶಿರೂರನ್ನು ದಾನವಾಗಿ ನೀಡಿದಂತೆ ತಿಳಿಸುತ್ತದೆ.

ಕ್ರಿ.ಶ. ೧೫೬೫ರಲ್ಲಿ ಐದು ಶಾಹಿ ಮನೆತನಗಳು ಒಗ್ಗಟ್ಟಾಗಿ ಸೇರಿ ಸಾರಿದ ರಕ್ಕಸತಂಗಡಿ ಕದನದ ನಂತರ ಬಾದಾಮಿ ಭಾಗವು ಆದಿಲ್‌ಶಾಹಿಗಳ ಅಧೀನಕ್ಕೆ ಒಳಪಟ್ಟಿತ್ತು. ನಂತರ ಬಾದಾಮಿಯು ಸವಣೂರಿನ ನವಾಬನ ಅಧೀನವಾಯಿತು. ಆಮೇಲೆ ಪೇಶ್ವೆಗಳ ಆಳ್ವಿಕೆಗೆ ಒಳಪಟ್ಟಿತ್ತು. ನಂತರ ಕ್ರಿ.ಶ. ೧೭೭೪-೭೮ರ ಅವಧಿಯಲ್ಲಿ ಹೈದರ್ ವಶಪಡಿಸಿಕೊಂಡನು. ನಂತರ ೧೭೮೬ರವರೆಗೆ ಟಿಪ್ಪುವಿನ ಅಧೀನದಲ್ಲಿತ್ತು. ಮುಂದೆ ೧೮೧೮ರಲ್ಲಿ ನಡೆದ ಮರಾಠಾ ಯುದ್ಧದಲ್ಲಿ ಜನರಲ್ ಮನ್ರೋ ಬಾದಾಮಿಯನ್ನು ವಶಪಡಿಸಿಕೊಂಡ. ಆದ್ದರಿಂದ ಬಾದಾಮಿಯು ಬ್ರಿಟಿಷರ ಆಡಳಿತಕ್ಕೆ ಸೇರಿತು.

ನಂತರ ಸಾತಾರಾದ ರಾಜ ಪ್ರತಾಪಸಿಂಗ್‌ನನ್ನು ಬ್ರಿಟಿಷ್ ಸರ್ಕಾರವು ೧೮೪೧ರಲ್ಲಿ ಪದಚ್ಯುತಿಗೊಳಿಸಿತು. ರಾಜನಲ್ಲಿ ನಿಷ್ಠೆಯುಳ್ಳ ನರಸಿಂಹ ದತ್ತಾತ್ರೇಯ ಪೇಟ್ಕರನು ಬಂಡೆದ್ದನು. ೧೨೫ ಅರಬ್ ಸೈನಿಕರನ್ನು ಕರೆದುಕೊಂಡು ಬಾದಾಮಿಯನ್ನು ವಶಪಡಿಸಿಕೊಂಡ. ಆಗ ತಾನೇ ಅರಸನೆಂದು ಸಾರಿದ್ದ. ಬಾದಾಮಿಯನ್ನು ವಶಪಡಿಸಿಕೊಂಡ ಒಂದು ವಾರದೊಳಗೆ ಎ. ಬೆಟ್ಟಿಂಗ್‌ಟನ ನೇತೃತ್ವದಲ್ಲಿ ಧಾವಿಸಿದ ಬ್ರಿಟಿಷ್ ಸೈನ್ಯವು ಬಾದಾಮಿಯನ್ನು ಮತ್ತೆ ವಶಪಡಿಸಿಕೊಂಡಿತು. ಸಿಡುಬು ರೋಗಕ್ಕೆ ಬಲಿಯಾಗಿ ತನ್ನ ಒಂದು ಕಣ್ಣಿನ ದೃಷ್ಟಿಯನ್ನು ಕಳೆದುಕೊಂಡಿದ್ದ ನರಸಿಂಹನು ಬಾದಾಮಿಯನ್ನು ವಶಪಡಿಸಿಕೊಳ್ಳಲು ಬಂಡಾಯ ಮಾಡಿದ್ದು

ಗಮನಾರ್ಹ. ಇದನ್ನು ಬಾದಾಮಿಯ ಬಂಡಾಯ ಎಂದು ಜನಪದರು ಹೇಳುತ್ತಾರೆ. ಈ ದಾಳಿ ವಿಫಲವಾಗಿದ್ದರಿಂದ ನರಸಿಂಹನು ಬಂಧಿಯಾದನು. ನಂತರ ಈತನನ್ನು ಅಹಮದ್‌ನಗರದ ಜೈಲಿನಲ್ಲಿ ಇಡಲಾಗುತ್ತದೆ. ಅಲ್ಲಿಯೇ ೧೮೬೨ರಲ್ಲಿ ಮರಣ ಹೊಂದಿದನು. ಹೀಗೆ ಒಬ್ಬ ಸಾಮಾನ್ಯ ಪ್ರಜೆಯು ತನ್ನ ರಾಜ್ಯನಿಷ್ಠೆಗಾಗಿ ಬ್ರಿಟಿಷರ ವಿರುದ್ಧ ಹೋರಾಡಿ ತನ್ನ ಪ್ರಾಣವನ್ನೇ ತ್ಯಾಗ ಮಾಡಿದ ಕೀರ್ತಿ ದತ್ತಾತ್ರೇಯ ಪೇಟ್ಕರನಿಗೆ ಸಲ್ಲುತ್ತದೆ. ಇದರ ನಂತರ ಬಾದಾಮಿ ಬ್ರಿಟಿಷರ ಸಂಕೋಲೆಗಳಿಂದ ಭಾರತದ ಸ್ವಾತಂತ್ರ್ಯ ಪಡೆದ ಮೇಲೆ ಮುಕ್ತವಾಯಿತು.[೨೯]

### ೨. ೬. ಪೌರಾಣಿಕ ಹಿನ್ನೆಲೆ

ಬನಶಂಕರಿ ಕ್ಷೇತ್ರವು ಪುರಾಣ ಪ್ರಸಿದ್ಧವಾಗಿದೆ. ಬನಶಂಕರಿ ದೇವಿಯ ಮಹಾತ್ಮೆಯು ಸ್ಕಂದಪುರಾಣ, ಪದ್ಮ ಪುರಾಣ, ಶ್ರೀದೇವಿ ಭಾಗವತ, ಮಹಾಭಾರತ ಮೊದಲಾದ ಗ್ರಂಥಗಳಲ್ಲಿ ಉಲ್ಲೇಖಗಳಿವೆ. ಶ್ರೀ ಶಾಖಾಂಭರಿ ಅಥವಾ ಶ್ರೀ ಬನಶಂಕರಿ ದೇವಿಯ ಮಹಾತ್ಮೆಯು ಸ್ಕಂದ ಪುರಾಣದಲ್ಲಿ ಸವಿವರವಾಗಿ ೧೫ ಅಧ್ಯಾಯಗಳಲ್ಲಿ ವರ್ಣಿಸಲ್ಪಟ್ಟಿದೆ. ಹಾಗೆಯೇ ಶ್ರೀ ಬನಶಂಕರಿ ಮಹಾತ್ಮ್ಯಂ ಗ್ರಂಥದಲ್ಲಿ ೪ನೆಯ ಅಧ್ಯಾಯದ ೩ ರಿಂದ ೬೦ನೆಯ ಶ್ಲೋಕಗಳಲ್ಲಿ ಉಲ್ಲೇಖವಾಗಿರುವ ಪ್ರಕಾರ ಅಗಸ್ತ್ಯ ಋಷಿಯು ತಮ್ಮ ಪತ್ನಿಯಾದ ಲೋಪಮುದ್ರೆಗೆ ಬನಶಂಕರಿಯು ಇಲ್ಲಿ ನೆಲೆ ನಿಂತ ಬಗೆಗೆ ಇರುವ ಕಥೆಯನ್ನು ಹೇಳುತ್ತಾರೆ.

ಭೂಮಂಡಲದಲ್ಲಿರುವ ಮೋಕ್ಷದಾಯಕವಾದವುಗಳು ಎಂದು ಪ್ರಸಿದ್ಧಿ ಪಡೆದಿರುವ ೬ ಕ್ಷೇತ್ರಗಳಿವೆ. ಅವುಗಳಲ್ಲಿ ಕರವೀರ (ಕೊಲ್ಲಾಪುರ), ವಿರೂಪಾಕ್ಷ (ಹಂಪಿ), ಶ್ರೀಶೈಲ, ಪಂಡರಾಪುರ, ತಿಲಕವನ (ಬನಶಂಕರಿ ಕ್ಷೇತ್ರ), ಸೇತುಬಂಧ (ರಾಮೇಶ್ವರ) ಇವು ಮುಕ್ತ ಕ್ಷೇತ್ರಗಳಾಗಿವೆ. ಈ ಎಲ್ಲ ಕ್ಷೇತ್ರಗಳಲ್ಲಿ ಬನಶಂಕರಿ ಕ್ಷೇತ್ರವೇ ಶ್ರೇಷ್ಠವಾದುದು. ತಿಲಕವನವು ಶಿವಶಕ್ತಿಯ ನೆಚ್ಚಿನ ತಾಣವೆಂದು ಹೇಳಲಾಗುತ್ತದೆ.[೩೦]

ಪೂರ್ವದಲ್ಲಿ ತಿಲಕವನವು ದಟ್ಟ ಅರಣ್ಯದಿಂದ ಕೂಡಿತ್ತು. ಇದನ್ನೇ ಲಾಭವಾಗಿ ಪಡೆದು ದುರ್ಗಮಾಸುರ ಮತ್ತು ಧೂಮ್ರಾಕ್ಷರೆಂದ ಹೆಸರಿನ ಕ್ರೂರ ರಾಕ್ಷಸರು ಇಲ್ಲಿ ನೆಲೆಸಿದ್ದರು. ಇವರು ಸರ್ವರಿಗೂ ಉಪಟಳವನ್ನು ಕೊಡುತ್ತಾ, ಹಾಗೆಯೇ ದೇವ ಲೋಕಕ್ಕೂ ದಾಳಿಯನ್ನಿಟ್ಟು, ದೇವತೆಗಳನ್ನು ಹಿಂಸಿಸತೊಡಗಿದರು. ಆಗ ದೇವಿಯು ಭಯಂಕರ ಉಗ್ರ ರೂಪವನ್ನು ಧಾರಣಮಾಡಿ ಅಸುರರನ್ನು ಸಂಹಾರ ಮಾಡಿದಳು. ಹರ್ಷಗೊಂಡ ದೇವತೆಗಳು 'ಜಯ ಬನಶಂಕರಿ ಜಯ ಲೋಕ ಸುಖಂಕರಿ' ಎಂದು ಹಾಡಿ ಜೈಕಾರ ಹಾಕಿದರು. ದೇವಿಯು ಅದೇ ಉಗ್ರ ರೂಪದಿಂದ ತಿಲಕಾರಣ್ಯದಲ್ಲಿ ನೆಲೆ ನಿಂತಳು. ಈ ಉಗ್ರ ರೂಪವು ಅನೇಕ ದಿನಗಳವರೆಗೆ ಉಳಿಯಿತು. ಆದರೆ ಆ ಭಯಂಕರ ರೂಪ ಧಾರಣ ಮಾಡಿದ್ದ ದೇವಿಯ ದರ್ಶನವನ್ನು ಮಾಡಲು ಎಲ್ಲರೂ ಹೆದರುತ್ತಿದ್ದರು. ಆಗ

ಎಲ್ಲ ದೇವತೆಗಳು ದೇವಿಯನ್ನು ಉಗ್ರ ರೂಪದಿಂದ ಶಾಂತ ರೂಪಕ್ಕೆ ತರಬೇಕೆಂದು ಆಲೋಚಿಸತೊಡಗಿದರು.

ದೇವತೆಗಳು ಈ ಕಾರ್ಯ ಸಾಧನೆಗಾಗಿ ದೇವಿಯ ಪರಮಭಕ್ತನಾದ 'ತ್ರಿದಂಡಿ' ಮುನಿಯ ಮೊರೆಹೋದರು. ದೇವತೆಗಳ ಮನವಿಯಂತೆ ಮುನಿಯು ದೇವಿಯನ್ನು ಅನನ್ಯವಾಗಿ ಭಕ್ತಿಯಿಂದ ಸ್ತುತಿಯನ್ನು ಮಾಡಿ, ಪ್ರಾರ್ಥಿಸಿ ಶಾಂತ ರೂಪವನ್ನು ಧಾರಣ ಮಾಡುವಂತೆ ಕೋರಿದನು. ಭಕ್ತನ ಕೋರಿಕೆಯಂತೆ ದೇವಿಯು ಉಗ್ರ ರೂಪವನ್ನು ತೊರೆದು ಸೌಮ್ಯ ರೂಪವನ್ನು ಧಾರಣ ಮಾಡಿದಳು. ಆಗ ದೇವತೆಗಳು ಹಾಗೂ ತ್ರಿದಂಡಿ ಮುನಿಯು ದೇವಿಗೆ ಸಾಷ್ಟಾಂಗ ನಮಸ್ಕಾರ ಮಾಡುತ್ತಾ ಜಯಘೋಷಗಳನ್ನು ಹಾಕಿದರು. ಸೌಮ್ಯ ರೂಪವನ್ನು ಧಾರಣ ಮಾಡಿದ ದೇವಿಯು ಅಲ್ಲಿ ನೆರದಿದ್ದ ಭಕ್ತಸಮೂಹಕ್ಕೆ ಏನಾದರೂ ವರವನ್ನು ಬೇಡುವುದಿದ್ದರೆ ಬೇಡಿ ಎಂದಳು. ಆಗ ಎಲ್ಲರೂ ಲೋಕ ಕಲ್ಯಾಣಕ್ಕಾಗಿ ಈ ತಿಲಕವನದಲ್ಲೇ ಸದಾಕಾಲ ನೆಲೆಸಿ, ಈ ಸ್ಥಳವನ್ನು ಎಲ್ಲ ಕ್ಷೇತ್ರಗಳಿಗಿಂತ ಪವಿತ್ರವಾಗಿ ಮಾಡು ಎಂದರು. ಅಲ್ಲದೆ ಈ ಕ್ಷೇತ್ರದಲ್ಲಿರುವ ತೀರ್ಥಗಳನ್ನು ಪಾವನವನ್ನಾಗಿ ಮಾಡಿ, ಇಲ್ಲಿ ಸ್ನಾನ ಮಾಡಿ ನಿನ್ನ ದರ್ಶನ ಪಡೆಯುವವರಿಗೆ ಪುಣ್ಯ ಲಭಿಸುವಂತೆ ಅನುಗ್ರಹಿಸು ಎಂದು ಬೇಡಿದರು. ಪ್ರತಿ ವರ್ಷ ಪುಷ್ಯ ಮಾಸದಲ್ಲಿ ಆಗಮೋಕ್ತ ಉತ್ಸವವು ಭಕ್ತರ ಸಂತೋಷದ ಸಲುವಾಗಿ ನಡೆಯಲಿ ಎಂದಾಗ ದೇವಿಯು ಭಕ್ತರ ಕೋರಿಕೆಯು ನೆರವೇರುತ್ತೆಂದು ಹೇಳಿ ಅದೃಶ್ಯಳಾದಳು.

ದೇವಿಯು ಜಗತ್ತಿನ ಕಲ್ಯಾಣಕ್ಕಾಗಿ, ದುಷ್ಟರನ್ನು ಶಿಕ್ಷಿಸಿ, ಭಕ್ತರನ್ನು ರಕ್ಷಿಸಲು ಕಾಲ ಕಾಲಕ್ಕೆ ಅನೇಕ ಅವತಾರಗಳನ್ನು ಧಾರಣ ಮಾಡಿದ್ದಾಳೆ. ಅವುಗಳಲ್ಲಿ ಮುಖ್ಯವಾಗಿ ಮಂದಾಸುರನೆಂಬ ದುಷ್ಟ ರಾಕ್ಷಸನ ಮಕ್ಕಳಾದ ಶುಂಭ, ನಿಶುಂಭರು ಹುಟ್ಟಿ ಜಗತ್ತಿನ ಪೀಡಕರಾಗಿದ್ದರು. ಆಗ ದೇವಿ 'ಪಾರ್ವತಿ'ಯಾಗಿ ಜನಿಸಿ ಆ ದೈತ್ಯರನ್ನು ಸಂಹರಿಸಿದಳು. ವಿಪ್ರಚಿತ್ತ ರಾಕ್ಷಸನ ಮಕ್ಕಳಾದವರು ಕೆಟ್ಟ ನಡತೆಯಿಂದ ಜನರನ್ನು ಪೀಡಿಸುತ್ತಾರೆ. ಆದಿಶಕ್ತಿಯು ಉಗ್ರ ರೂಪತಾಳಿ ಹಲ್ಲುಗಳಿಂದ ಕಡೆದು ನಾಶ ಮಾಡುವಾಗ ಆಕೆಯ ಹಲ್ಲುಗಳು ಕೆಂಪಾದವು. ಆದ್ದರಿಂದ ದೇವಿಗೆ 'ರಕ್ತದಂತಾ' ಎಂದು ಹೆಸರು ಬಂದಿತು. ನೂರು ವರ್ಷಗಳವರೆಗೆ ಮಳೆಯಾಗದಿದ್ದರಿಂದ ಜಗತ್ತು ತಲ್ಲಣಿಸಿತ್ತು. ಆಗ ದೇವತೆಗಳು ದೇವಿಯನ್ನು ಸ್ತುತಿಸಿದರು. ಇದರಿಂದ ಪ್ರಸನ್ನಳಾದ ದೇವಿಯು ನೂರು ಕಣ್ಣುಗಳಿಂದ ಕೃಪಾದೃಷ್ಟಿಯನ್ನು ಎಲ್ಲರ ಮೇಲೆ ಬೀರಿದ್ದರಿಂದ ಆಕೆಯು 'ಶತಾಕ್ಷಿ' ಎಂಬ ಹೆಸರಿನಿಂದ ಪ್ರಸಿದ್ಧಿಯನ್ನು ಪಡೆದಳು.

ಜಗತ್ತು ಬರಗಾಲದಿಂದ ತತ್ತರಿಸಿದಾಗ ದೇವಿಯು ತನ್ನ ದೇಹದ ಶಾಖದಿಂದ ಸಸ್ಯ ಸಂಪತ್ತನ್ನು ಉತ್ಪನ್ನ ಮಾಡಿ, ಅವುಗಳಿಂದ ದೇವಿಯು ಎಲ್ಲರನ್ನು ಸಂರಕ್ಷಿಸಿದಳು. ಇದರಿಂದ ಆಕೆಗೆ 'ಶಾಖಾಂಭರಿ' ಎಂಬ ಹೆಸರು ಬಂದಿತು. ಇದೇ ತಿಲಕವನದಲ್ಲಿದ್ದ

ದುರ್ಗಮಾಸುರನನ್ನು ನಾಶ ಮಾಡುವುದರಿಂದ 'ದುರ್ಗಾದೇವಿ' ಎಂದು ಕರೆಯಲಾಯಿತು. ಅನೇಕ ದುಷ್ಟ ರಾಕ್ಷಸರು ಋಷಿಗಳಿಗೆ ತೊಂದರೆ ನೀಡಿದ್ದರಿಂದ ದೇವಿಯು ಭಯಂಕರ ರೂಪವನ್ನು ಧಾರಣ ಮಾಡಿ ಅವರನ್ನು ಸಂಹರಿಸಿದ್ದರಿಂದ 'ಭೀಮಾದೇವಿ' ಎಂದು ಹೆಸರನ್ನು ಪಡೆದಳು. ಮುಂದೆ ಅರಣನಾಮಕ ದೈತ್ಯನು ಜಗತ್ತಿಗೆ ಪೀಡಕನಾಗಿ ಎಲ್ಲರಿಗೂ ತೊಂದರೆಯನ್ನು ಮಾಡಲಾರಂಭಿಸಿದನು. ಇದರಿಂದ ದೇವಿಯು ಈ ದೈತ್ಯನ ಸಂಹಾರಕ್ಕಾಗಿ ಅಸಂಖ್ಯಾತ ಭ್ರಮರಗಳ (ಗುಂಗೆ ಹುಳ) ರೂಪವನ್ನು ಧಾರಣ ಮಾಡಿ ಸಂಹರಿಸಿದ್ದರಿಂದ 'ಭ್ರಮರಾಂಬಾ' ಎಂಬ ಹೆಸರಿನಿಂದ ಪ್ರಸಿದ್ಧಳಾದಳು.

ಸೇತು ದೈತ್ಯನೆಂಬುವನು ಅತಿಯಾದ ಕಾಮುಕನಾಗಿದ್ದನು. ಅವನು ಹೆಣ್ಣುಮಕ್ಕಳ ಮಾನಭಂಗ ಮಾಡಲಾರಂಭಿಸಿದ್ದ. ಇದರಿಂದ ಹೆಣ್ಣುಮಕ್ಕಳ ಮಾನವನ್ನು ರಕ್ಷಿಸಲು ಬ್ರಹ್ಮದೇವರ ಕೋರಿಕೆಯ ಮೇಲೆ ದೇವಿ ಸೇತು ದೈತ್ಯನನ್ನು ಸಂಹರಿಸಲು ಮುಂದಾದಳು. ದೇವಿಯು ಭೀಮಾ ನದಿಯ ದಂಡೆಯ ಮೇಲೆ ಐದು ಭ್ರಮರಗಳ ರೂಪಗಳಿಂದ ದೈತ್ಯನನ್ನು ಸಂಹರಿಸಿದಕ್ಕಾಗಿ 'ಚಂದ್ರಲಾ' ಮತ್ತು 'ಹಿಂಗುಲಾ' ಎಂಬ ಹೆಸರುಗಳು ಬಂದವು. ಸೇತು ದೈತ್ಯನ ನಂತರ ಕೊಲ್ಹಾಸುರನು ಹುಟ್ಟಿ ದೇವಿಯ ಭಕ್ತರಿಗೆ ಪೀಡಿಸತೊಡಗಿದನು. ಆಗ ದೇವಿಯು 'ಮಹಾಲಕ್ಷ್ಮೀ'ಯ ರೂಪವನ್ನು ಧರಿಸಿ ಆ ರಾಕ್ಷಸರನ್ನು ನಾಶ ಮಾಡಿ ಜಗತ್ತಿನಲ್ಲಿ ಶಾಂತಿ ನೆಲೆಸುವಂತೆ ಮಾಡಿದಳು.

ಹೀಗೆ ದೇವಿಯು ಹಲವು ಅವತಾರಗಳನ್ನು ಧಾರಣ ಮಾಡಿ ದೈತ್ಯರನ್ನು ಸಂಹರಿಸಿ ಜಗತ್ತಿನಲ್ಲಿ ಸುಖ, ಸಮೃದ್ಧಿಯನ್ನು ನೀಡಿರುವಳು ಎಂದು ಹೇಳಲಾಗುತ್ತದೆ. ದೇವಿಯು ಭಕ್ತರ ಕೋರಿಕೆಯಂತೆ ತಿಲಕವನದಲ್ಲಿ ನೆಲೆನಿಂತು ಬಾಲಾ, ಲಲಿತಾ, ಷೋಡಸಿ, ಗಾಯಿತ್ರೀ ಹೀಗೆ ಅವತಾರಗಳನ್ನು ಧರಿಸಿ ಭಕ್ತರ ಬೇಡಿಕೆಗಳನ್ನು ಈಡೇರಿಸುತ್ತಿದ್ದಾಳೆ. ಈ ವನದಲ್ಲಿ ಸದಾ ಕಾಲ ಬನಶಂಕರಿಯ ರೂಪದಲ್ಲಿದ್ದು, ಯಾರು ಈ ವನದಲ್ಲಿ ವಾಸ ಮಾಡಿ ದೇವಿಯ ಮಹಾತ್ಮೆಯನ್ನು ಕೇಳುವರೋ ಅವರಿಗೆ ಮುಕ್ತಿ ದೊರೆಯುತ್ತದೆ. ಅಲ್ಲದೆ ಸರ್ವ ರೀತಿಯ ಸಕಲ ಸೌಭಾಗ್ಯಗಳು ಲಭಿಸುತ್ತವೆ ಎಂದು ಹೇಳಲಾಗುವುದು.[೩೧]

### ೨. ೭. ಬನಶಂಕರಿ ಚಾರಿತ್ರಿಕ ಹಿನ್ನೆಲೆ

ಸುಮಾರು ೭, ೮ ನೆಯ ಶತಮಾನದ ರಾಷ್ಟ್ರಕೂಟರ ಕಾಲದಲ್ಲಿ ಬಾದಾಮಿ ಬನಶಂಕರಿ ದೇವಾಲಯ ಅಸ್ತಿತ್ವದಲ್ಲಿರಬಹುದು. ಆ ಕಾಲದಲ್ಲಿ ಈ ದೇವತೆಗೆ ಅಷ್ಟೊಂದು ಪ್ರಾಮುಖ್ಯತೆ ನೀಡಲಾಗಿರಲಿಲ್ಲ. ಹಾಗೆಯೇ ಈ ದೇವಿಯ ಗುಡಿಗೆ ಸಂಬಂಧಿಸಿದಂತೆ ಯಾವುದೇ ಆಸ್ತಿಯೂ ಇರಲಿಲ್ಲ. ಆನಂತರ ಕಲ್ಯಾಣ ಚಾಲುಕ್ಯರ ಅವಧಿಯಲ್ಲಿ ದೇವಿಗೆ ದಾನ ನೀಡಿರುವುದನ್ನು ಶಾಸನಗಳು ಉಲ್ಲೇಖಿಸುತ್ತವೆ. ನಂತರ ೧೫, ೧೬ ಶತಮಾನದಲ್ಲಿ

ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಈ ಗುಡಿ ಜೀರ್ಣೋದ್ಧಾರ ಮಾಡಲಾಗಿದೆ. ಈ ದೇವಿಗೆ ಪೂಜಾಕಾರ್ಯಗಳಿಗೆ ಯಾವುದೇ ನ್ಯೂನತೆಗಳಿಲ್ಲದೆ ನಡೆದುಕೊಂಡು ಹೋಗಬೇಕೆಂದು ಡಾಣಕ ಶಿರೂರ ಗ್ರಾಮವನ್ನು ದತ್ತಿಯಾಗಿ ನೀಡಿದ ಬಗ್ಗೆ ಶಾಸನದಲ್ಲಿ ಉಲ್ಲೇಖವಿದೆ.

ವಿಜಯನಗರ ನಂತರ ಪೇಶ್ವೆಗಳ ಕಾಲದಲ್ಲಿ ಶ್ರೀ ಕ್ಷೇತ್ರ ಸಂಪೂರ್ಣ ಅಭಿವೃದ್ಧಿ ಹೊಂದಿತ್ತು. ಪ್ರಸ್ತುತ ಪೂಜೆಗೊಳ್ಳುತ್ತಿರುವ ಬನಶಂಕರಿಯ ಗುಡಿಯು ಪೇಶ್ವೆಗಳ ಕಾಲದಲ್ಲಿ ರಚನೆಯಾಗಿದೆ. ಹಾಗೆಯೇ ಶೃಂಗೇರಿ ಮಠದಿಂದ ಈ ದೇವಿಗೆ ವಾರ್ಷಿಕ ಕಾಣಿಕೆ ಸಲ್ಲುತ್ತಿದ್ದ ಬಗ್ಗೆ ಕಡತಗಳಲ್ಲಿನ ವಿವರವನ್ನು ಗಮನಿಸಬಹುದು. ಹಾಗೆಯೇ ಬನಶಂಕರಿ ಅರ್ಚಕರಾಗಿದ್ದ ಚೌಡಂಭಟ್ಟರು ೧೮೪೯ರಲ್ಲಿ ಬರೆಸಿರುವ ಇನಾಮದಲ್ಲಿ ದೇವಿಗೆ ಸೇರಿದ ಜಮೀನು, ಆದಾಯದ ಮೂಲಗಳು, ಖರ್ಚು – ವೆಚ್ಚಗಳ ಕುರಿತು ವಿವರಗಳಿವೆ. ಅಲ್ಲದೆ ೧೯೫೧ರಲ್ಲಿ ಶ್ರೀಕ್ಷೇತ್ರಕ್ಕೆ ಮೈಸೂರಿನ ಜಯಚಾಮರಾಜೇಂದ್ರ ಒಡೆಯರು ಭೇಟಿ ನೀಡಿದ್ದರು. ಇವರ ಕಾಲದಲ್ಲಿ ದೇವಿಗೆ ಮಾಸಿಕ ಮತ್ತು ವಾರ್ಷಿಕ ಕಾಣಿಕೆಯನ್ನು ನೀಡಿದ್ದಾರೆ. ವಾರ್ಷಿಕವಾಗಿ ೫೬ ಪೌಂಡ್ ಶ್ರೀಗಂಧ, ನಂದಾದೀಪಕ್ಕೆ ಪ್ರತಿ ತಿಂಗಳು ೯ ರೂ., ೯ ಆಣೆ, ೨ ಪೈಸೆ ನೀಡುತ್ತಿದ್ದ ಬಗ್ಗೆ ಅರ್ಚಕರು ಬರೆಸಿರುವ ೧೯೫೧ರ ಬಿನ್ನವತ್ತಳೆಯಲ್ಲಿ ವಿವರಗಳಿವೆ. ಅಲ್ಲದೆ ಉತ್ತರ ಕರ್ನಾಟಕದ ಅನೇಕ ದೇಸಗತಿಗಳು ದೇವಿಗೆ ಕಾಣಿಕೆ, ದಾನಗಳನ್ನು ನೀಡಿರುವುದನ್ನು ಗಮನಿಸಬಹುದು. ಇವುಗಳಲ್ಲದೆ ಬನಶಂಕರಿಯ ಉಲ್ಲೇಖವಿರುವ ಹಲವು ಶಾಸನಗಳು ನಾಡಿನ ವಿವಿಧ ಭಾಗಗಳಲ್ಲಿ ದೊರೆತಿವೆ. ಅವುಗಳನ್ನು ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಳ್ಳಲಾಗಿದೆ.

### ೧. ಶಾಸನಗಳ ಹಿನ್ನೆಲೆ

ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕಿನ ಕಂದಲಿ ಎಂಬ ಗ್ರಾಮದ ಕ್ರಿ.ಶ. ೧೦೫೦ರ ಶಾಸನದಲ್ಲಿ ಬಾದುಬ್ಬೆಯ ಎಂಬ ಉಲ್ಲೇಖ ಕಾಣಬಹುದು. ಹಾಗೆಯೇ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಆಗರಗ ಗ್ರಾಮದ ಬನಶಂಕರಿ ಗುಡಿಯ ಮುಂದೆ ಕ್ರಿ.ಶ. ೧೪೦೪ ಮತ್ತು ೧೪೦೫ರ ಹರಿಹರನ ಕಾಲದ ಎರಡು ಶಾಸನಗಳು ಲಭ್ಯವಾಗಿವೆ. ೧೪೦೪ರ ಶಾಸನದಲ್ಲಿ ಬನದೇವಿ ಎಂದು, ದೇವಿಯ ಪೂಜಾಕಾರ್ಯಗಳಿಗೆ ೨೪ ಹೊನ್ನು, ದೇವಿಯ ಅರ್ಚಕನಿಗೆ ೧೨ ಹೊನ್ನು ನೀಡಿದ್ದ ಬಗ್ಗೆ ಮಾಹಿತಿ ಇದೆ. ಹಾಗೆಯೇ ಕ್ರಿ.ಶ. ೧೪೦೫ರ ಶಾಸನದಲ್ಲಿ ಬನದೇವಿ ಎಂದು ಹೆಸರಿಸಲಾಗಿರುವುದು. ಹಾಗೇ ಆರಗ ಗ್ರಾಮವನ್ನು ದೇವಿಗೆ ಮತ್ತು ಕೃಷ್ಣಭಟ್ಟ ಎಂಬ ದೇವಿಯ ಅರ್ಚಕನಿಗೆ ದಾನ ನೀಡಿರುವ ಬಗ್ಗೆ ವಿವರವಿದೆ.[೨]

ಬಸವ ಕಲ್ಯಾಣದ ಕೋಟೆಯ ವಸ್ತುಸಂಗ್ರಹಾಲಯದಲ್ಲಿರುವ ಎರಡನೆಯ ಕಲ್ಲಿನ ಮೇಲೆ ೧೯.೦೩.೧೧೪೩ರ ಶಾಸನದಲ್ಲಿ ಶಾಸನೋಕ್ತ ಕಾಲವು ಚಾಲುಕ್ಯ ಜಗದೇಕಮಲ್ಲನ ಆಳ್ವಿಕೆಯ ೯ನೆಯ ರುದಿರೋದ್ಗಾರಿ ಚೈತ್ರ್ಯ ಸು. ೧ ಸೋಮವಾರ ಸಂಕ್ರಾಂತಿಯೆಂದಿದ್ದು,

ಇದು ಕ್ರಿ.ಶ. ೧೯.೦೩.೧೧೪೩ರ ಶುಕ್ರವಾರಕ್ಕೆ ಸಮವಾಗುತ್ತದೆ. ಚಾಲುಕ್ಯ ಜಗದೇಕಮಲ್ಲನು ಕಲ್ಯಾಣದಿಂದ ರಾಜ್ಯಭಾರ ಮಾಡುತ್ತಿದ್ದಾಗ ಕೋಟಕರ ಪಾಳಕ ಸೋಮಯ್ಯ ಎಂಬುವವನು ಪೆಮ್ಮೆ ಎಂಬುವವನಿಗೆ ತಳಾರಿಕೆ ಸಂಪಾದನೆಯಾದ ಮುದ್ರಾವಣದಲ್ಲಿ, ಸಿಂಪಿಗೇರಿಯಲ್ಲಿ ದೇವರ ಮುಂದಿನ ನಾಲ್ಕನೆ ಮನೆ ಹಾಳು ಹಾದಿಯಲ್ಲಿ ಸಿಂಪಿಗರ ಮನೆ ಆರು ಬಿಟ್ಟು ಸಿಂಪಿಗೇರಿಯಲ್ಲಿರುವ ಮನೆ ಹತ್ತನ್ನು ಈ ಮುಂದಿನ ಸಂದರ್ಭಗಳಿಗಾಗಿ ದಾನ ನೀಡುತ್ತಾನೆ. ದೀಪಾವಳಿ, ಬಾದುಮ್ಮೆಯ (ಪರ್ವ) ಹಣವನ್ನು ಸಂಕ್ರಾಂತಿಯ ಕವಡಿಕೆಯನ್ನು ಬ್ರಹ್ಮದೇವರ ಗಂಧ, ಅಕ್ಷತೆ, ಹೂವು, ದೀಪ, ಧೂಪ, ದೀಪದ ಎಣ್ಣೆ, ಕಟ್ಟಡದ ಸುಣ್ಣ ಬಳಿಯುವಿಕೆ ಹಾಗೂ ಜೀರ್ಣೋದ್ಧಾರಕ್ಕಾಗಿ ಸಿಂಗಬಕ್ಕ ಎಂಬುವವನಿಗೆ ಧಾರಾಪೂರ್ವಕವಾಗಿ ಬಿಟ್ಟ ಉಲ್ಲೇಖವಿದೆ.[೩೩] ಶಾಸನದಲ್ಲಿ ಉಲ್ಲೇಖಿಸಿದಂತೆ ಬಾದುಬ್ಬೆ ಪರ್ವದ ಸಂದರ್ಭಕ್ಕಾಗಿ ದಾನ ನೀಡಿರುವುದನ್ನು ಗಮನಿಸಬಹುದು. ಅಂದರೆ ಬಾದುಬ್ಬೆ ಪರ್ವವನ್ನು ಚೈತ್ರ ಮಾಸದಲ್ಲಿ ಪೂರ್ವದಲ್ಲಿ ಮಾಡುತ್ತಿರಬಹುದು. ಆದರೆ ಪ್ರಸ್ತುತದಲ್ಲಿ ಬನಶಂಕರಿ ಪರ್ವವನ್ನು ಪುಷ್ಯ ಮಾಸದಲ್ಲಿ ಮಾಡುತ್ತಿರುವುದನ್ನು ಕಾಣಬಹುದು.

ಬಸವ ಕಲ್ಯಾಣದ ಕೋಟೆಯಲ್ಲಿರುವ ೧೨ನೆಯ ಕಲ್ಲಿನ ಮೇಲಿರುವ ಕ್ರಿಸ್ತಶಕ ೧೧೦೮ರ ಮತ್ತೊಂದು ಶಾಸನವಿದೆ. ಅದು ಚಾಲುಕ್ಯರ ತ್ರೀಭುವನಮಲ್ಲನ ಕಾಲದ್ದಾಗಿದ್ದು, ಶಾಸನದಲ್ಲಿ ಬಿಜ್ಜಳನ ಮನೆ ಕಲ್ಲಿನ ಪಶ್ಚಿಮಕ್ಕಿರುವ ಹೂವಿನಗಲ್ಲಿಯಲ್ಲಿ ಬಾದುಂಬೆಯ (ಊರಿನ ಉಲ್ಲೇಖ) ಸಮೀಪದಲ್ಲಿರುವ ಕೊಪ್ಪೇಶ್ವರ ದೇವರ ಬಳಿಯ ನಾರಾಯಣ ದೇವರಿಗೆ, ಮಹಾದೇವರಿಗೆ, ವಿನಾಯಕನಿಗೆ ದಾನ ನೀಡಿರುವ ವಿವರವಿದೆ.[೩೪] ಶಾಸನ ಉಲ್ಲೇವಿರುವಂತೆ ಬಾದುಂಬೆ ಎಂಬುವುದು ಸ್ಥಳನಾಮವಾಗಿರುವುದನ್ನು ತಿಳಿಯಬಹುದು.

ಮೈಲಾರ ಗ್ರಾಮದ ಮೈಲಾರ ದೇವಾಲಯದ ಪ್ರಾಕಾರದ ಹೆಗ್ಗಪ್ಪ ದೇವರ ಗುಡಿಯ ರಂಗಮಂಟಪದ ಕಂಭದ ಉತ್ತರ ಭಾಗದಲ್ಲಿರುವ ಕ್ರಿ.ಶ. ೧೧೪೪ರ ಶಾಸನದಲ್ಲಿ ಮೈಲಾರವನ್ನು ಮಾಳಚಿ ಪತಿಯೆಂದು ಉಲ್ಲೇಖಿಸಲಾಗಿದೆ.[೩೫] ಜನಪದರ ಐತಿಹ್ಯದಲ್ಲಿನ ದೇವರಾದ ಮೈಲಾರನ ಪಟ್ಟದ ರಾಣಿ ಮಾಳಚಿಯಾಗಿದ್ದಾಳೆ. ಜನಪದರು ಈಕೆಯನ್ನು ಗಂಗೆ ಮಾಳವ್ವ ಎಂತಲೂ ಕರೆಯುತ್ತಿದ್ದರು. ಪೂರ್ವದಲ್ಲಿ ಬನಶಂಕರಿಯನ್ನು ಮಾಳಚಿ ಎಂದು ಕರೆಯುತ್ತಿದ್ದರೆಂದು ಹೇಳಬಹುದು.

ಕೊಪ್ಪಳ ಜಿಲ್ಲೆಯಲ್ಲಿ ದೇವಿಯ ಉಪಾಸನಾ ಕೇಂದ್ರಗಳು ಹಲವಾರು ಇದ್ದರೂ, ಹಿಂದೆ ಶಾಸನೋಕ್ತವಾಗಿ ಕುಕ್ಕನೂರಿನ ಮಹಾಮಾಯಿ ಪ್ರಸಿದ್ಧವಾಗಿತ್ತು. ಇಲ್ಲಿರುವ ಮಹಾಮಾಯಿಯ ಗುಡಿಯಲ್ಲಿರುವ ಕ್ರಿ.ಶ. ೧೧೭೮ರ ಶಾಸನದಲ್ಲಿ ದೇವಿಗಿದ್ದ ಹಲವಾರು ನಾಮಗಳ ಕುರಿತು ಉಲ್ಲೇಖಿಸಲಾಗಿದೆ. ಕುಕ್ಕನೂರಿನ ಮಹಾಮಾಯಿಯನ್ನು ಜೇಷ್ಠಾದೇವಿ, ಪುರಾಣಿದೇವಿ, ಚಾಮುಂಡಿದೇವಿ, ತಡಗಾದಂಬಿಕೆ, ವಸಂತಾದೇವಿ, ಕಾಲ್ಯಂಬೆ, ಶಾಂತಿಕಾರಿ,

ಗುಪ್ತಚಾಮುಂಡಿ ದೇವಿಯರು ನೆಲೆಸಿದ್ದರಂತೆ. ಈ ಶಾಸನದಲ್ಲಿ ಕಾಳಿಕಾಜೇಷ್ಠೆಗೆ ಇದ್ದ ಬೇರೆ ಬೇರೆ ಹೆಸರುಗಳನ್ನು ಅವರ ಗುಣಸ್ವಭಾವಗಳನ್ನು ತಿಳಿಸಲಾಗಿದೆ. ಕಾಳಿರಾಜೇಷ್ಠೆ, ಭದ್ರಕಾಳಿಜೇಷ್ಠೆ, ಮಹಾಕಾಳಿಜೇಷ್ಠೆ, ನೀಲಾಜೇಷ್ಠೆ, ವೃದ್ಧಕುಬ್ಜಿಜೇಷ್ಠೆ, ಮಹಾಜೇಷ್ಠೆ, ಭಂಜಿನೀಜೇಷ್ಠೆ, ಪ್ರಭಂಜನೀಜೇಷ್ಠೆ, ನೀಲಪತಾಕಿಜೇಷ್ಠೆ ಇವು ಜೇಷ್ಠೆಗಿದ್ದ ವಿಶೇಷಣ ರೂಪದ ಹೆಸರುಗಳು ಇವರಿಗೆ ವರ್ಣ ಹಾಗೂ ಬಯಕೆಗಳ ಈಡೆರುವಿಕೆಯನ್ನು ಹೇಳಿದೆ.[೩೬]

ಶಾಸನಗಳಲ್ಲಿ ಬನಶಂಕರಿ ದೇವಿಯನ್ನು ಮಹಾಮಾಯಿ ಎಂದು ಉಲ್ಲೇಖಿಸಲಾಗಿದೆ. ಕುಕ್ಕನೂರಿನ ಮಹಾಮಾಯಿಗೆ ಇರುವ ರೂಪಗಳೆಲ್ಲವು ಬನಶಂಕರಿಗೂ ಇರಬಹದು ಎನ್ನುವ ಅಭಿಪ್ರಾಯ ವ್ಯಕ್ತವಾಗುತ್ತದೆ. ಈ ಇಬ್ಬರು ದೇವಿಯರನ್ನು ಮಹಾಮಾಯಿ ಎಂದು ಉಲ್ಲೇಖಿಸಿರುವುದರಿಂದ ಅವರಿಬ್ಬರೂ ಒಂದೇ ಗುಣ, ಸ್ವಭಾವ, ರೂಪಗಳನ್ನು ಪಡೆದಿರುವ ಸಾಧ್ಯತೆಗಳು ಹೆಚ್ಚಿವೆ. ಅಂದರೆ ಬನಶಂಕರಿಯನ್ನು ಪೂರ್ವದಲ್ಲಿ ಕಾಳಿ ಸ್ವರೂಪದಲ್ಲಿ ಪೂಜಿಸುತ್ತಿರಬಹುದಾದ ಸಾಧ್ಯತೆಗಳಿವೆ.

ಹುನಗುಂದ ತಾಲೂಕಿನ ಅರಸಿಬೀದಿಯ ಸ್ವಯಂಭೂನಗರೇಶ್ವರ ದೇವಾಲಯಕ್ಕೆ ಶಿಸುಕಾಡು ೭೦ರಲ್ಲಿಯ ಬಾದುಬ್ಬೆ ಪಾಳು ಗ್ರಾಮವನ್ನು ದಾನವಾಗಿ ನೀಡಿದ ವಿಷಯ ಕ್ರಿ.ಶ. ೧೦೭೫ರ ಕೊಪ್ಪ ಶಾಸನದಲ್ಲಿ ಬರುತ್ತದೆ.[೩೭] ಈ ಬಾದುದಬ್ಬೆ ಪಾಳು ಗ್ರಾಮವು ಬಾದಾಮಿಯಲ್ಲ. ಏಕೆಂದರೆ ಬಾದಾಮಿ ಪರಿಸರದಲ್ಲಿ ದೊರೆತ ಯಾವುದೇ ಶಾಸನಗಳಲ್ಲಿ, ಸಾಹಿತ್ಯದಲ್ಲಿ ಬಾದಾಮಿಗೆ ಎಲ್ಲಿಯೂ ಬಾದುಬ್ಬೆ ಪಾಳು ಎಂದು ಕರೆದಿಲ್ಲ. ಬನದ ಹುಣ್ಣಿಮೆಯಂದು ಜರುಗುವ ಬನದಬ್ಬೆಯ, ಬಾದುಬ್ಬೆಯ ಉತ್ಸವದ ಬಗ್ಗೆ ೧೦೫೪ರ ಶಾಸನ ವಿವರರಿಸುತ್ತದೆ.[೩೮] ಹಾಗೆಯೇ ಈಗಲೂ ಈ ಉತ್ಸವವು ಬನದ ಹುಣ್ಣಿಮೆಯ ದಿನ ಜರಗುತ್ತಿರುವುದು ವಿಶೇಷ. ಡಾ. ಎಂ.ಎಂ. ಕಲಬುರ್ಗಿಯವರು ಬಾದುಬ್ಬೆ ಅಥವಾ ಬಾದಾಮಿ ಅಮವಾಸ್ಯೆ ಬನದಬ್ಬೆ – ಬನದ ಹುಣ್ಣಿಮೆಗಳು ಇವೆರಡು ಪ್ರತ್ಯೇಕವಾದ ಧ್ವನಿಯನ್ನು ಸೂಚಿಸುತ್ತವೆ ಎಂದಿದ್ದಾರೆ. ವಡ್ಡಾರಧನೆ ಹೇಳುವ ಬಾದುಬ್ಬೆ ಪರ್ವದ ಬಾದುಬ್ಬೆಯೇ ಬೇರೆ. ಈಗಿನ ಬನದ ಹುಣ್ಣೀಮೆಯ ಸಂದರ್ಭದ ಬನದಬ್ಬೆ ಅಥವಾ ಬನಶಂಕರಿಯೇ ಬೇರೆ ಎಂದಿರುವರು.[೩೯]

ದೇವಿ ಹೊಸೂರು ಗ್ರಾಮದ ಇಂದಿನ ಬನಶಂಕರಿ ಗುಡಿಯ ಮಕರ ತೋರಣದ ಮೇಲೆ ಈ ತೋರಣವನ್ನು ಮಾಳಜದೇವಿಗೆ ಅಂಘರಕ್ಕೆ ಇಂದಪಯ್ಯಿ ನಾಯಕ ಮಾಡಿಸಿದನೆಂದು ಕ್ರಿ.ಶ. ೧೬೦೩ರ ಶಾಸನದಲ್ಲಿದೆ. ಇಲ್ಲಿಯೇ ಇರುವ ಇನ್ನೊಂದು ಕ್ರಿ.ಶ. ೧೧೪೯ರ ಶಾಸನದಲ್ಲಿ ಬನಶಂಕರಿಯನ್ನು ಮಾಳಚಿ ಎಂದು ಹೆಸರಿಸಿರುವುದನ್ನು ಗಮನಿಸಬಹುದು.[೪೦] ಧಾರವಾಡ ಜಿಲ್ಲೆಯ ಚಿಕ್ಕಕೆರೂರಿನ ಇಂದಿನ ಬನಶಂಕರಿಯ ಗುಡಿಯ ಕ್ರಿ.ಶ. ೯೫ರ[೪೧] ಶಾಸನದಲ್ಲಿ ಬಳರಿದೇವಿ (ಬಳರಿ ಎಂದರೆ ಕಾಳಿಯ ಇನ್ನೊಂದು ಹೆಸರು) ಪ್ರತಿಷ್ಠಾಪನೆ ಮಾಡಿದ ಉಲ್ಲೇಖವಿದೆ. ಇಲ್ಲಿವೆರೆಗೂ ಗಮನಿಸಿದ ಶಾಸನಗಳಲ್ಲಿ

ಬನಶಂಕರಿಯನ್ನು ಮಾಳಚಿ, ಬಳರಿ ಎಂಬ ಹೆಸರುಗಳಿಂದ ಸ್ಮರಿಸುತ್ತಿದ್ದನ್ನು ಗಮನಿಸಬಹುದು. ಅಲ್ಲದೆ ಬನಶಂಕರಿ ದೇವಿಯು ಹೆಸರನ್ನು ಸ್ಥಳನಾಮ, ಪರ್ವದ ನಾಮವಾಗಿ ಉಲ್ಲೇಖಿಸಿರುವುದನ್ನು ಕಾಣುತ್ತೇವೆ.

ಬಾದಾಮಿ ಶಾಸನಗಳು ಬನದೇವಿ, ಬನದ ಮಹಾಮಾಯಿ ಎಂದು ಕರೆದಿವೆ. ಕ್ರಿ.ಶ. ೧೦೨೪ರ ಜಗದೇಕಮಲ್ಲನ ಶಾಸನದಲ್ಲಿ ಆತನ ಸಾಮಂತನಾದ ಪೆರ್ಗ್ಗಡೆ ಕೇತಿಮಯ್ಯನ ಉಲ್ಲೇಖ ಬರುತ್ತದೆ. ಈತನು ಶಿಲಾಸ್ತಂಭವನ್ನು ಬನದ ದೇವಿಯ ಮುಂದೆ ನಿಲ್ಲಿಸಿದಂತೆ ಶಾಸನ ತಿಳಿಸುವುದು. ಈ ಕೇತನನ್ನು ಶಾಸನದಲ್ಲಿ ಸಾಹಸಭೀಮನೆಂದು ಕರೆದಿದ್ದು, ಅವನು ನಿಲ್ಲಿಸಿದ ಕಂಬವನ್ನು ಸಾಹಸಭೀಮನ ಶಿಲಾಸ್ತಂಭವೆಂದು ಕರೆದಿರುವುದು ಗಮನಾರ್ಹ. ಇದಲ್ಲದೆ ಇವನನ್ನು ನೆಲಗೋಟೆಮಲ್ಲ, ಗಿರಿದುರ್ಗಸಿಂಹ, ಯಿಡುವರಾದಿತ್ಯ ಮುಂತಾದ ಹೆಸರುಗಳಿಂದ ಕರೆಯಲಾಗಿದೆ. ಹಾಗೂ ಶಾಸನದಲ್ಲಿ ಬನಶಂಕರಿಯನ್ನು 'ಶ್ರೀ ಬನದೇವಿ' ಎಂದು ಉಲ್ಲೇಖಿಸಿದೆ. ಅಲ್ಲದೆ ಕೇತಿಮಯ್ಯನು ಸತ್ರ, ವಿದ್ಯಾದಾನ, ಫಲವೃಕ್ಷ, ಷೋಡಶದಾನ ಹಾಗೂ ಬ್ರಾಹ್ಮಣ ಬೀದಿಗಳನ್ನು ಮಾಡಿಸಿದಂತೆ, ಇವು ನಿರಂತರವಾಗಿ ನಡೆಯಲು ಮಾಳಖೇಡ ಮತ್ತು ನರಗುಂದಗಳಲ್ಲಿ ದಾನ ಮಾಡಿದಂತೆ ಶಾಸನ ಅರ್ಥೈಸುತ್ತದೆ.[೮]

ಬಾದಾಮಿ ಬನಶಂಕರಿ ದೇವಾಲಯದ ಎಡಬದಿಗೆ ಇರುವ ಕೇದಾರೇಶ್ವರ ಗುಡಿಯ ಗೋಡೆಗೆ ಸೇರಿಸಿರುವ ಕಂಬಂದ ಮೇಲೆ ಚಾಲುಕ್ಯರ ಜಗದೇಕಮಲ್ಲನ ಶಾಸನವಿದೆ. ಶಾಸನೋಕ್ತಕಾಲವು ಶಕವರ್ಷ ೯೪೧, ಸಿದ್ಧಾರ್ಥಿ ಸಂವತ್ಸರದ ೫, ಆದಿತ್ಯವಾರವೆಂದಿದ್ದು, ಇದು ಕ್ರಿ.ಶ. ೧೦೧೯ಕ್ಕೆ ಸಮನಾಗುತ್ತದೆ. ಶಾಸನವು ಜಗದೇಕಮಲ್ಲನ ಆಳ್ವಿಕೆಯಲ್ಲಿದ್ದ ಮಾಂಡಲೀಕನಾದ ಭೀಮದೇವವನ್ನು ಉಲ್ಲೇಖಿಸುತ್ತದೆ. ಅಲ್ಲದೆ ಭೀಮದೇವನನ್ನು ಮಹಾಮಂಡಳೇಶ್ವರ ರಾಷ್ಟ್ರಕೂಟರ ಕುಲತಿಳಕ, ಅಹವಮಲ್ಲದೇವನ ಪಾದಪಂಕಜ ಭ್ರಮರ, ಮಾವನಗಂಧವಾರಣ, ಶೌಚಗಾಂಗೇಯ, ಪ್ರತಿಪಕ್ಷ ರಾಕ್ಷಸ, ಕಲಿಕಾಲ ಸೂದ್ರಕ, ನಡೆಗೋಟೆಮಲ್ಲ ಮುಂತಾಗಿ ಕರೆದಿದೆ. ಹಾಗೆಯೇ ಭೀಮದೇವನ ಸೇವಕನಾದ ಸೇನಭೋವ ನಾಗವರ್ಮಯ್ಯನು ವೀರ ಸ್ವರ್ಗವನ್ನು ಹೊಂದಿದ್ದರ ಬಗೆಗೆ ತಿಳಿಸುವುದು. ಹಾಗೂ ಶಾಸನದಲ್ಲಿ ಬನಶಂಕರಿಯನ್ನು ಶ್ರೀ ಬನದದೇವಿ ಎಂದು ಉಲ್ಲೇಖಿಸಲಾಗಿದೆ. ಶಾಸನ ಮುಂದುವರೆದು ಚಾವೋಜ, ಗೇತೋಜ, ಅಯ್ಯಾವೊಳೆಗೇತೋಜ, ಬನದ ದೇವಿಯ ದಾಸಿ ದುವ್ವೋಜ ಎಂಬ ನಾಲ್ವರು ಓಜರ ಪ್ರಸ್ತಾಪವಿದೆ. ಇದರಲ್ಲಿ ದುವ್ವೋಜನು ದೇವಿಯ ಅರ್ಚಕನೆಂದು ತಿಳಿಯಬಹುದು. ಓಜರು ಎಂದರೆ ವಿಶ್ವಕರ್ಮಕರು. ಹಾಗಾಗಿ ಪೂರ್ವದಲ್ಲಿ ಬನದೇವಿಯ ಅರ್ಚಕರಾಗಿ ವಿಶ್ವಕರ್ಮರು ಸೇವೆ ಸಲ್ಲಿಸುತ್ತಿದ್ದರು ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ.

ಶಾಸನಾಂತ್ಯದಲ್ಲಿ ವೀರಗಲ್ಲುಗಳಲ್ಲಿ ಜೀತೇನ ಲಭ್ಯತೇ ಲಕ್ಷ್ಮೀ ಮೃತೇನಾಪಿ ಎಂಬ ಶ್ಲೋಕ ಬಂದಿದೆ. ಇದು ವೀರಶಾಸನವೋ ಅಥವಾ ದಾನಶಾಸನವೋ ಎಂಬುದು

ಸ್ಪಷ್ಟವಾಗುವುದಿಲ್ಲ.[೪೩] ದೇವಾಲಯದ ಎದುರಿಗೆ ನಿಲ್ಲಿಸಲಾದ ಶಿಲಾಸ್ತಂಭದ ಮೇಲಿನರುವ ಶಾಸನದಲ್ಲಿ ಅದನ್ನು ನಿಲ್ಲಿಸಿದ ಬಗೆಗೆ ಮಾತ್ರ ಉಲ್ಲೇಖವಿರುವುದರಿಂದ ದೇವಾಲಯವು ಇದಕ್ಕೂ ಪೂರ್ವದಲ್ಲೇ ನಿರ್ಮಿತವಾಗಿರಬೇಕೆಂದು ಅಭಿಪ್ರಾಯಪಡಬಹುದು.

ಬನಶಂಕರಿ ಪರಿಸರದಲ್ಲಿ ಅಚ್ಚುತರಾಯನ ಕಾಲದ ಶಾಸನವು ಲಭ್ಯವಾಗಿದೆ. ಶಾಸನೋಕ್ತ ಕಾಲವು ಶಾಲಿವಾಹನ ಶಕ ವರ್ಷ ೧೪೫೫, ನಂದನ ಸಂವತ್ಸರದ ಜೇಷ್ಠ ಶು. ೫, ಗುರುವಾರವೆಂದಿದ್ದು, ಇದು ಕ್ರಿ.ಶ. ೯-೫-೧೫೩೨ರ ಗುರುವಾರಕ್ಕೆ ಸರಿ ಹೊಂದಿರುತ್ತದೆ. ಆದರೆ ಇದು ಗತ ವರ್ಷವಾಗಿರುವುದು. ಏಕೆಂದರೆ ಶಕ ೧೪೫೫ರಲ್ಲಿ ವಿಜಯಸಂವತ್ಸರ ಬಂದಿರುತ್ತದೆ. ಕ್ರಿ.ಶ. ೧೫೩೨ರ ವಿಜಯನಗರದ ಅಚ್ಚುತರಾಯನ ಶಾಸನದಲ್ಲಿ ಬನಶಂಕರಿಯನ್ನು 'ಬನದ ಮಹಾಮಾಯಿ' ಎಂದು ಹೆಸರಿಸಿರುವುದು ಗಮನಾರ್ಹ. ಇದುವರೆಗೆ ಶಾಸನಗಳಲ್ಲಿ ಬನದದೇವಿ ಎಂದೇ ಹೆಚ್ಚು ಉಲ್ಲೇಖವಾಗಿರುವುದನ್ನು ಗಮನಿಸಿದ್ದೇವೆ. ಅಲ್ಲದೇ ಶಾಸನವು ಅಚ್ಚುತರಾಯನು ಆಳುತ್ತಿದ್ದಾಗ ಮುಸಲ್ಮಾನರಿಂದ (ಮಹಾರಾಜಕರು) ನಾಶವಾಗಿದ್ದ ಬಾದಾಮಿಯ ಬನದ ಮಹಾಮಾಯಿ ದೇವಾಲಯ ಇನ್ನೂ ಮೊದಲಾದ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಬೇಕೆಂದು ತಿಳಿಸುತ್ತಾನೆ. ಈ ಕಾರ್ಯವನ್ನು ತನ್ನ ಸೇನಾಪತಿ ಚಿನ್ನಪ್ಪ ನಾಯಕನು ತನ್ನ ಮಗನಾದ ಚಿಕ್ಕಚಿನ್ನಪ್ಪ ನಾಯಕನಿಗೆ ವಹಿಸಿಕೊಟ್ಟನೆಂದು ಶಾಸನದಲ್ಲಿದೆ. ಆ ಪ್ರಕಾರ ಚಿಕ್ಕಚಿನ್ನಪ್ಪ ನಾಯಕನು ಬಾದಾಮಿಯ ಕೋಟೆಯನ್ನು, ಬನದ ದೇವಿಯ ದೇವಾಲಯವನ್ನು ಜೀರ್ಣೋದ್ಧಾರ ಮಾಡಿಸಿದಂತೆ ಶಾಸನವು ತಿಳಿಸುವುದು.[೪೪]

ಪ್ರಸ್ತುತ ಬನಶಂಕರಿ ದೇವಾಲಯದ ಪ್ರಾಕಾರದ ಹೊರಗಿರುವ ಪ್ರಾಚೀನ ದೇವಾಲಯ ಹೀಗೆ ಜೀರ್ಣೋದ್ಧಾರಗೊಂಡ ಗುಡಿ. ಈಗಲೂ ಅದರ ಶಿಖರ ಭಾಗಗಳಲ್ಲಿ ಗಾರೆಯಿಂದ ದುರಸ್ತಿ ಮಾಡಿರುವುದನ್ನು ಕಾಣಬಹುದು. ಆದ್ದರಿಂದ ಹೀಗೆ ದುರಸ್ತಿಗೊಂಡ ಗುಡಿಯೇ ಶಾಸನದಲ್ಲಿ ಸೂಚಿಸಿದ ಬನದ ಮಹಾಮಾಯಿಯ ಗುಡಿ. ಆದ್ದರಿಂದ ಇದೇ ಮೂಲ ದೇವಾಲಯ ಎನ್ನುವ ಜನಪದರ ಮಾತನ್ನು ಇಲ್ಲಿ ಸ್ಮರಿಸಬಹುದು. ಈ ಗುಡಿಯ ಗರ್ಭಗೃಹದಲ್ಲಿ ಪ್ರಸ್ತುತ ಯಾವ ವಿಗ್ರಹವು ಇಲ್ಲ. ಗುಡಿಯ ಶಿಖರವಿನ್ಯಾಸ, ಕಂಬವಿನ್ಯಾಸ ಹಾಗೂ ಗೋಡೆಗಳ ವಾಸ್ತು ಲಕ್ಷಣಗಳನ್ನು ಆಧರಿಸಿ ಇದು ರಾಷ್ಟ್ರಕೂಟರ ಕಾಲದ ದೇವಾಲಯ ಎಂದು ಗುರುತಿಸಬಹುದು.

ಅದೇ ದೇವಾಲಯದ ಪ್ರಾಕಾರದ ಕಲ್ಲಿನ ಮೇಲೆ ಶಾಲಿವಾಹನ ಶಕ ೧೪೬೬, ಸೋಭಕೃತ್, ಆಶ್ವಿಜಿ, ಶು... ಎಂದಿದ್ದು, ಇದು ಸುಮಾರು ಕ್ರಿ.ಶ. ೧೫೪೪ಕ್ಕೆ ಸಮ. ಶಾಸನದಲ್ಲಿ ತಿಥಿಯ ಭಾಗ ನಷ್ಟವಾಗಿದೆ. ಶಾಸನದಲ್ಲಿ ಸದಾಶಿವರಾಯನ ಆಳ್ವಿಕೆಯಲ್ಲಿ ಇದ್ದ ಹಡಪದ ಕೃಷ್ಣನಾಯಕನ ಉಲ್ಲೇಖವನ್ನು ಗಮನಿಸಬಹುದು. ಈ ಕೃಷ್ಣಪ್ಪನಾಯಕನು

ಬನದ ಮಹಾಮಾಯಿಯ ಅಮೃತಪಡಿ, ಅಂಗರಂಗ ವೈಭವಕ್ಕೆಂದು ಬಾದಾಮಿ ಸೀಮೆಗೆ ಸೇರುವ ಮಲಪ್ರಭಾ ನದಿ ತೀರದ ದಾಣಕ ಸಿರವೂರ(ಡಾಣಕ ಶಿರೂರ)ನ್ನು ದಾನವಾಗಿ ನೀಡಿರುವ ಬಗ್ಗೆ ಉಲ್ಲೇಖವಿದೆ.[೪೫]

ಬಾದಾಮಿಯ ಪರಿಸರದಲ್ಲಿ ದೊರೆತಿರುವ ಬನಶಂಕರಿಯ ಕುರಿತು ಶಾಸನಗಳಲ್ಲಿ ಅರಸರೇ ನೇರವಾಗಿ ಬನದ ದೇವಿಗೆ ಕೊಡುಗೆಗಳನ್ನು ನೀಡಿರುವುದಿಲ್ಲ. ಬದಲಾಗಿ ಅರಸರ ಮಾಂಡಲೀಕರು ದೇವಿಗೆ ಸೇವೆ ಸಲ್ಲಿಸಿರುವುದನ್ನು ಗಮನಿಸುತ್ತೇವೆ.

ಪುರಾಣ ಪ್ರಸಿದ್ಧವಾದ ಈ ದೇವಿಯ ಕುರಿತು ಚಾಲುಕ್ಯರ ಶಾಸನ, ಕಾವ್ಯಗಳಲ್ಲಿ ಎಲ್ಲಿಯೂ ಉಲ್ಲೇಖಗಳಿಲ್ಲ. ಬಾದಾಮಿಯನ್ನೇ ಆಡಳಿತದ ಕೇಂದ್ರವಾಗಿಟ್ಟುಕೊಂಡ ಚಾಲುಕ್ಯರ ಯಾವುದೇ ಶಾಸನ, ಕಾವ್ಯಗಳಲ್ಲಿ ಬನದದೇವಿಯ ಉಲ್ಲೇಖಗಳು ಕಾಣದಿರುವುದು ವಿಷಾದದ ಸಂಗತಿ. ಆದರೆ ಬಾದಾಮಿ ಚಾಲುಕ್ಯರ ಅಧಿದೇವತೆ, ಕುಲದೇವತೆ, ಆರಾಧ್ಯದೇವಿ ಬನಶಂಕರಿಯಾಗಿದ್ದಳು ಎಂದು ಜನಪದರ ನಂಬಿಕೆಯಾಗಿದೆ. ಆದರೆ ಇದನ್ನು ಸಮರ್ಥಿಸಿಕೊಳ್ಳುವಂತಹ ಯಾವುದೇ ವಸ್ತುನಿಷ್ಠ ಆಧಾರಗಳು ಇದುವರೆಗೂ ದೊರೆತಿಲ್ಲ.

ನಮಗೆ ಲಭ್ಯವಾಗಿರುವ ಬಹುತೇಕ ಶಾಸನಗಳಲ್ಲಿ ಬನದೇವಿ ಎಂಬ ಹೆಸರಿಸಿರುವುದು ಕಂಡುಬರುತ್ತದೆ. ಬನಶಂಕರಿ ಎಂಬ ಹೆಸರಿನ ಉಲ್ಲೇಖ ವಿರಳವಾಗಿ ವ್ಯಕ್ತವಾಗಿರುವುದನ್ನು ಗಮನಿಸಬಹುದು. ಅದರಿಂದ ಜನಪದ ದೇವಿಯಾಗಿ ಪೂಜಿಸಲ್ಪಡುತ್ತಿದ್ದ ಅವಧಿಯಲ್ಲಿ ಬನದೇವಿ, ಮಹಾಮಾಯಿ, ಬಳರಿ, ಬನದಬ್ಬೆ, ಮಾಳಚಿ ಎಂಬ ಗ್ರಾಮದೇವಿಯರಿಗಿರುವ ಹೆಸರುಗಳು ಇದ್ದವೆಂಬುದು ತಿಳಿಯಬಹುದು. ಸಂಸ್ಕೃತೀಕರಣದ ಪ್ರಭಾವಕ್ಕೆ ಒಳಗಾದ ಈ ದೇವಿಯ ಶಿಷ್ಟಪರಂಪರಾಗತವಾಗಿ ಆರಾಧನೆ ಆರಂಭವಾದಗಿನಿಂದ ಶಿಷ್ಟ ಹೆಸರಾದ ಬನಶಂಕರಿ ಎಂಬ ನಾಮದಿಂದ ಅರ್ಚಿಸಲಾಗುತ್ತಿದೆ.

**೨. ಶೃಂಗೇರಿ ಮಠ : ಬನಶಂಕರಿ**

ಪೂರ್ವಕಾಲದಿಂದ ಶೃಂಗೇರಿ ಮಠವು ಪ್ರಮುಖ ಧಾರ್ಮಿಕಕ್ಷೇತ್ರ, ಯಾತ್ರಾ ಸ್ಥಳವಾಗಿರುವುದು ಗಮನಾರ್ಹ. ಈ ಮಠದೊಂದಿಗೆ ಅನೇಕ ಧಾರ್ಮಿಕ ಸಂಸ್ಥೆ ಮತ್ತು ದೇವಾಲಯಗಳು ನಿಕಟ ಸಂಬಂಧ ಇದ್ದ ಬಗ್ಗೆ ಕಡತಗಳು ಉಲ್ಲೇಖಿಸುತ್ತವೆ. ಈ ಮಠದ ಯತಿಗಳು ಪೂರ್ವದಿಂದಲೂ ಅನೇಕ ದೇವಾಲಯಗಳಿಗೆ ಯಾತ್ರೆಗಳನ್ನು ಕೈಗೊಂಡು, ಪೂಜೆ ಅರ್ಪಿಸಿ, ಆ ದೇವಾಲಯಗಳಲ್ಲಿ ನಿತ್ಯ ಪೂಜಾಕಾರ್ಯಗಳು ಮುಂದುವರಿಯುವಂತ ವ್ಯವಸ್ಥೆ ಮಾಡುತ್ತಿದ್ದರು. ಹಾಗೆಯೇ ಬಾದಾಮಿ ಬನಶಂಕರಿ ಗುಡಿಗೆ ಮಠದ ಗುರುಗಳಾದ ಶ್ರೀ ನರಸಿಂಹ ಭಾರತಿ ಸ್ವಾಮಿಗಳು ಸಂದರ್ಶಿಸಿ, ಪೂಜೆ ಸಲ್ಲಿಸಿದ ಬಗ್ಗೆ ಕಡತದಲ್ಲಿ ದಾಖಲಾಗಿರುವುದನ್ನು ಗಮನಿಸಬಹುದು. ಬನಶಂಕರಿಗೆ ಸಂಬಂಧಪಟ್ಟಂತೆ ಕಡತಗಳಲ್ಲಿ ನಮೂದಿಸಲಾಗಿರುವ ಪ್ರಮುಖ ವಿಷಯಗಳು ಈ ಕೆಳಗಿನಂತಿವೆ.

ಕೊಪ್ಪಳ ತಾಲೂಕಿನಲ್ಲಿ ಬರೆಸಿಕೊಟ್ಟಿರುವ ಸಾಧನ ಇದು ಶಾಲಿವಾಹನ ಶಕೆ ೧೭೬೬ನೆಯ (ಕ್ರಿ.ಶ. ೧೮೪೪) ಕ್ರೋಧಿ ಸಂವತ್ಸರದ ಚೈತ್ರ, ಶು. ೧ ಮಂಗಳವಾರದಂದು ಇದನ್ನು ಬರೆಸಲಾಗಿದೆ. ಕಡತದ ಮೊದಲ ಸಾಲು ಬಾದಾಮಿ ಬನಶಂಕರಿ ಅಮ್ಮನವರು ಎಂದು ಆರಂಭವಾಗುವುದು. ಈ ದೇವಿಗೆ ಪ್ರತಿನಿತ್ಯ ಪೂಜಾಕಾರ್ಯಗಳು ಯಾವುದೇ ನ್ಯೂನತೆ ಇಲ್ಲದೆ ನಡೆಯುವುದಕ್ಕೂ ಮಠವು ವಾರ್ಷಿಕವಾಗಿ ನೀಡುವ ಕಾಣಿಕೆಯ ಬಗ್ಗೆ ಈ ಕಡತದಲ್ಲಿ ಉಲ್ಲೇಖಿಸಲಾಗಿದೆ. ಶೃಂಗೇರಿಯ ಶ್ರೀ ನರಸಿಂಹ ಭಾರತೀ ಸ್ವಾಮಿಗಳು ಅಮ್ಮನವರ ದೇವಸ್ಥಾನಕ್ಕೆ ಶುಭಕೃತು ಸಂವತ್ಸರದ ಮಾರ್ಗಶಿರ ಶು. ದಶಮಿಯಂದು ಭೇಟಿ ನೀಡಿ ದೇವಿಗೆ ಪೂಜೆ ಮಾಡಿರುವುದು ದಾಖಲೆಯಲ್ಲಿ ವ್ಯಕ್ತವಾಗಿರುವುದು. ಹಾಗೆಯೇ ಅಲ್ಲಿಂದ ಸ್ವಾಮಿಗಳು ತೆರಳುವಾಗ ಪ್ರತಿ ವರ್ಷ ದೇವಿಯ ಪೂಜೆ, ನೈವೇದ್ಯ, ತುಪ್ಪದ ನಂದಾದೀಪ, ಕರ್ಪೂರದ ಆರತಿ, ಹಣ್ಣು, ಎಲೆ, ಅಡಿಕೆ, ಕೊಬ್ಬರಿ ಮುಂತಾದವುಗಳಿಗಾಗಿ ಕಂಪನಿ ರೂಪಾಯಿ ಅರವತ್ತು ಮೂರುವರೆ ಮತ್ತು ಹೂವು, ಗಂಗೆ, ಗಂಧಾಕ್ಷತೆ ಮಾಡಿಕೊಂಡು ಪೂಜೆ ಮಾಡುವುದಕ್ಕೆ, ಸಂಬಳ ತಿಂಗಳಿಗೆ ಎರಡು ರೂಪಾಯಿ, ವರ್ಷಕ್ಕೆ ಇಪ್ಪತ್ನಾಕು ರೂಪಾಯಿಗಳು ಎಂದಿದೆ. ಕೊಪ್ಪಳ ತಾಲೂಕಿನಲ್ಲಿ ಬರೆಸಿಕೊಟ್ಟ ಈ ಸಾಧನದಲ್ಲಿ, ಹೈದರಾಬಾದಿನ ದಪ್ತರದಾರ್ ರಾಮರಾಯನು ಶೃಂಗೇರಿ ಮಠಕ್ಕೆ ವಾರ್ಷಿಕವಾಗಿ ನೀಡುವ ೩೦೦ ರೂಪಾಯಿಯೊಳಗೆ, ೧೦೦ ರೂಪಾಯಿಗಳನ್ನು ತೆಗೆದುಕೊಂಡು ದೇವಿಯ ಪೂಜೆಗಳು ಯಾವುದೇ ಅಡೆತಡೆಗಳಿಲ್ಲದೆ ಶಾಶ್ವತವಾಗಿ ನಡೆಸಿಕೊಂಡು ಬರುವಂತೆ ಶ್ರೀ ನರಸಿಂಹ ಭಾರತಿ ಸ್ವಾಮಿಗಳ ತೊಳಚಗೊಡ ಬಾಳಂಭಟ್ಟನಿಗೆ ಸೂಚಿಸಿದ್ದು ದಾಖಲೆಯಲ್ಲಿದೆ.[೪೬]

ಶೃಂಗೇರಿ ಮಠದ ಕಡತ ೩೪, ದಾಖಲೆ ೬೬ರಲ್ಲಿ ಬನಶಂಕರಿ ದೇವಿಯ ಅರ್ಚಕರು ಶ್ರೀಮಠದ ಭಂಡಾರಕ್ಕೆ ಬಿನ್ನವತ್ತಳೆಯನ್ನು ನಿರ್ಮಿಸಿದರ ಬಗ್ಗೆ ಉಲ್ಲೇಖವಿದೆ. ಈ ಬಿನ್ನವತ್ತಳೆಯು ಶಾಲಿವಾಹನ ಶಕ ವರುಷ ೧೭೭೯ (ಕ್ರಿ.ಶ. ೧೮೫೭) ಪಿಂಗಳ ನಾಮಸಂವತ್ಸರದ ಆಶ್ವಿಜ ಶು. ೧೪ ಶುಕ್ರವಾರದಂದು ಬರೆಸಲಾಗಿರುವುದು. ಬಾದಾಮಿ ತಾಲೂಕು ತೊಳಚಗೊಡು ಬನಶಂಕರಿಯ ಹಲವು ಅರ್ಚಕರ ಹೆಸರುಗಳನ್ನು ದಾಖಲೆಯಲ್ಲಿ ಗಮನಿಸಬಹುದು. ಅವರಲ್ಲಿ ಬಾಪೂಭಟ್ಟನ ಮಗ ಶಂಕ್ರಭಟ್ಟರು, ಶಂಕ್ರಭಟ್ಟರ ಮಗ ದಿಗಂಭರಭಟ್ಟರು, ಬಾಳಂಭಟ್ಟರ ಮಗ ಆಣಭಟ್ಟರು, ಚಿನಂಭಟ್ಟರ ಮಗ ಶಾಂಭಟ್ಟರು, ಚೌಡಂಭಟ್ಟರ ಮಗ ಶಂಕ್ರಭಟ್ಟರು, ಶಾಂಭಟ್ಟರ ಮಗ ನೀಲಕಂಠಭಟ್ಟರು. ಇವರೆಲ್ಲರೂ ಇನ್ನೂ ಮುಂದೆ ಶೃಂಗೇರಿಯಿಂದ ಬಂದ ಆದೇಶದ ಪ್ರಕಾರ ಪ್ರತಿವರ್ಷ ಶೃಂಗೇರಿಗೆ ಹೋಗಿ ೩೦ ರೂಪಾಯಿಗಳನ್ನು ಪಡೆದುಕೊಳ್ಳಬೇಕು. ಈ ಹಣದಲ್ಲಿ ದೇವಿಯ ನಂದಾದೀಪಕ್ಕೆ ೧೨ ರೂಪಾಯಿಗಳು, ಪರಮಾನ್ನ ನೈವೇದ್ಯಕ್ಕೆ ಬಳಸಿಕೊಳ್ಳುವುದರ ಬಗ್ಗೆ ಉಲ್ಲೇಖವಿದೆ.

ಅರ್ಚಕರು ದೇವಿಯ ಸೇವೆಯನ್ನು ಮಾಡಿಕೊಂಡು ಬರುವಲ್ಲಿ ಏನಾದರೂ ತಪ್ಪು ಮಾಡಿದರೆ, ತಾವು ತೆಗೆದುಕೊಂಡ ಹಣಕ್ಕೆ ಬೇಜವಾಬ್ದಾರಿ ಮಾಡಿದರೆ ಶ್ರೀಮಠಕ್ಕೆ ಅಪರಾಧ

ಕೊಟ್ಟು, ಅಪ್ಪಣೆಯ ಪ್ರಕಾರ ನಡೆದುಕೊಳ್ಳುವೆವು ಎಂದು ಅರ್ಚಕರು ತಿಳಿಸಿರುವರು. ಇದು ಬಿನ್ನವತ್ತಳೆಯಲ್ಲಿ ಬರೆದುಕೊಟ್ಟ ಮಾಹಿತಿಯಾಗಿದೆ. ಇದನ್ನು ಬರೆಯುವಾಗ ಕೊಡನಾಡ ಮಾಗಣೆ, ಕುಂಚೂರ ಮಂಜಪ್ಪ, ಲಕ್ಕವಳ್ಳಿ ನಾಗಪ್ಪ, ಬೊಂಬಲಾಪುರದ ದೇವಭಟ್ಟ, ರಾಮಪ್ಪ ಇವರೆಲ್ಲ ಸಾಕ್ಷಿಗಳಾಗಿದ್ದರು. ಕಡತದ ಅಂತ್ಯದಲ್ಲಿ ಮಹಾರಾಷ್ಟ್ರ, ಬಿಳಗಿ, ತಾಲೂಕು ಬಾಗಲಕೋಟೆ ಎಂದು ಉಲ್ಲೇಖಿಸಿದೆ.[೪೭]

ಹಾಗೆಯೇ ಕಡತ ೨೪, ದಾಖಲೆ ೬೦ರಲ್ಲಿ ಬನಶಂಕರಿಯ ಅರ್ಚಕರು ಶೃಂಗೇರಿಯಿಂದ ವರ್ಷವೊಂದಕ್ಕೆ ೩೦ ರೂಪಾಯಿಗಳು ಸಂದಿದ್ದಕ್ಕೆ ರಶೀದಿಯನ್ನು ಸಮರ್ಪಿಸಿದ ಬಗ್ಗೆ ಉಲ್ಲೇಖವಿದೆ. ಅಲ್ಲದೆ ಬಾದಾಮಿ ತಾಲೂಕಿನ, ತೊಳಚಗೊಡುವಿನ ದೇವಿಯ ಅರ್ಚಕರಾದ ಬಾಳಂಭಟ್ಟರು, ಸಾಂಭಟ್ಟರು, ಶಂಕ್ರಭಟ್ಟರು, ನೀಲಕಂಠಭಟ್ಟರು, ಶಂಕ್ರಭಟ್ಟರು ಮತ್ತು ದಿಗಂಭರಭಟ್ಟರು ಇವರೆಲ್ಲರೂ ಶೃಂಗೇರಿ ಮಠದ ಭಂಡಾರಕ್ಕೆ ಶಾಲಿವಾಹನ ಶಕ ವರುಷ ೧೭೬೯ರ (ಕ್ರಿ.ಶ. ೧೮೪೮) ಪಿಂಗಳ ಸಂವತ್ಸರದ, ಆಶ್ವಿಜ. ಬ. ೧ ಭಾನುವಾರದಂದು ರಶೀದಿಯನ್ನು ಸಮರ್ಪಿಸಿದರು.

ಮೇಲ್ಕಾಣಿಸಿದ ದಾಖಲೆಗಳಿಂದ ಬನಶಂಕರಿದೇವಿಯು ನೆಲೆಸಿರುವ ಗ್ರಾಮವಾದ ಚೊಳಚಗುಡ್ಡವನ್ನು ದಾಖಲೆಗಳಲ್ಲಿ ತೊಳಚಗೊಡು, ಕೊಳಚಿಗೊಡು ಎಂದು ಕರೆದಿರುವುದನ್ನು ಗಮನಿಸಬಹುದು. ಚೊಳಚಗುಡ್ಡದಲ್ಲಿ ಅಧಿಕ ಪ್ರಮಾಣದಲ್ಲಿ ತುಳಸಿ ಬೆಳೆಯುತ್ತಿತ್ತು. ಅದರಿಂದ ಈ ಗ್ರಾಮಕ್ಕೆ ತುಳಿಸಿಗುಡ್ಡ ಎಂದು ಹೆಸರು ಬಂದಿತ್ತು. ನಂತರದ ದಿನಗಳಲ್ಲಿ ತುಳಸಿಗುಡ್ಡದ ಬದಲು ತೊಳಚಗೊಡು, ಕೊಳಚಗೊಡು, ಚೊಳಚಗುಡ್ಡ ಎಂದು ಹೆಸರು ಬಂದಿದೆ ಎಂಬುವುದು ಜನಪದರ ನಂಬಿಕೆ. ಶೃಂಗೇರಿಯ ಮಠದಲ್ಲಿರುವ ಬನಶಂಕರಿಗೆ ಸಂಬಂಧಿಸಿದ ಕಡತಗಳು ದೇವಿಯ ಚರಿತ್ರೆಯ ದೃಷ್ಟಿಯಿಂದ ಮಹತ್ವವೆಂದು ಹೇಳಬಹುದು. ಅಲ್ಲದೆ ಶೃಂಗೇರಿ ಮಠದ ಔಧಾರ್ಯವನ್ನು ಕಡತಗಳಿಂದ ಅರಿಯಬಹುದಾಗಿದೆ.

**೩. ದೇವಸ್ಥಾನದ ಪೂಜಾರ ಸಂಘದ ಬಿನ್ನವತ್ತಳೆ**

ಮೈಸೂರು ದೊರೆಗಳಾಗಿದ್ದ ಶ್ರೀ ಜಯಚಾಮರಾಜೇಂದ್ರ ಒಡೆಯರು ೧೨.೯.೧೯೫೧ರಂದು ಬನಶಂಕರಿ ಕ್ಷೇತ್ರಕ್ಕೆ ಆಗಮಿಸಿದ್ದರು. ಈ ಸಂದರ್ಭದಲ್ಲಿ ದೇವಸ್ಥಾನದ ಪೂಜಾರ ಸಂಘವು ಒಡೆಯರಿಗೆ ಅರ್ಪಿಸಿದ ಬಿನ್ನವತ್ತಳೆಯಲ್ಲಿ ಒಡೆಯರನ್ನು ಕರ್ನಾಟಕ ರತ್ನಸಿಂಹಾಸನಾಧೀಶ್ವರ, ಯದುವಂಶಕ್ಕೆ ಕೀರ್ತಿಚಂದ್ರ ಎಂದು ಉಲ್ಲೇಖಿಸಿದೆ. ಹಾಗೆಯೇ ಅಗಸ್ತ್ಯ ಮುನಿಗಳಿಂದ ಸ್ಥಾಪಿತವಾಗಿ, ಚಾಲುಕ್ಯರ ಪುಲಕೇಶಿ ಮೊದಲಾದ ನರೇಂದ್ರರ ಕುಲದೈವವೂ, ಮೈಸೂರು ಅರಸರ ಇಷ್ಟ ದೇವತೆಯಾದ ಜಗನ್ಮಾತೆ ಶ್ರೀ ಬನಶಂಕರಿಯ ಪವಿತ್ರ ದೇವಾಲಯಕ್ಕೆ ಒಡೆಯರಿಗೆ ಹೃತ್ಪೂರ್ವಕ ಸ್ವಾಗತವನ್ನು ಕೋರಿದ್ದ ವಿವರವಿದೆ. ಅಲ್ಲದೆ ಒಡೆಯರ ದರ್ಶನ ಭಾಗ್ಯದಿಂದ ಉತ್ತರ ಕರ್ನಾಟಕದ ಜನತೆಯ ಮಹಾಭಾಗ್ಯವಾಗಿದೆ

ಎಂದು ಬರೆದಿರುವರು. ಬಿನ್ನವತ್ತಳೆಯಲ್ಲಿ ಬನಶಂಕರಿಯನ್ನು ಚಾಲುಕ್ಯರ ಕುಲದೈವ ಎಂದು ಉಲ್ಲೇಖವಾಗಿದೆ. ಆದರೆ ಚಾಲುಕ್ಯರ ಯಾವುದೇ ಆಧಾರಗಳಲ್ಲಿ ಬನಶಂಕರಿಯ ಉಲ್ಲೇಖಗಳಿಗಿಲ್ಲ. ದೇವಿಯ ಗುಡಿಯು ಕೂಡ ಚಾಲುಕ್ಯರ ಕಾಲದ್ದಲ್ಲ. ಬಿನ್ನವತ್ತಳೆಯ ಈ ವಿವರಗಳು ಭಾವನಾತ್ಮಕತೆಯಿಂದ ಕೂಡಿವೆ ಎಂದು ಹೇಳಬಹುದು.

೧೮೭೦ರ ಡಿಸೆಂಬರ್ ೨ರಂದು ಮೈಸೂರಿನ ಇನಾಮ ಕಮಿಷನರರು ಹಾಕಿಕೊಟ್ಟ ಸನದಿನಂತೆ ಮೈಸೂರಿನ ಸರ್ಕಾರ ಗುಡಿಗೆ ಕಾಣಿಕೆಯನ್ನು ನೀಡುತ್ತಿತ್ತು. ಇದರಿಂದ ಒಡೆಯರಿಗೆ ಕೃತಜ್ಞತೆಗಳನ್ನು ಈ ಸಂದರ್ಭದಲ್ಲಿ ಸಲ್ಲಿಸಲಾಗಿತ್ತು. ಮೈಸೂರು ಸರ್ಕಾರದಿಂದ ದೇವಾಲಯಕ್ಕೆ ವಾರ್ಷಿಕವಾಗಿ ೫೬ ಪೌಂಡ್ ಶ್ರೀಗಂಧ, ಮಾಸಿಕವಾಗಿ ನಂದಾದೀಪಕ್ಕೆ ೯ ರೂ, ೯ ಆಣೆ, ೨ ಪೈಸೆ ನೀಡಲಾಗುತ್ತಿತ್ತು. ಈ ಹಣವು ದಾವಣಗೆರೆ ತಾಲೂಕಿನ ಟ್ರೇಝುರಿಯಿಂದ ಬಾದಾಮಿಯ ಮಾಮಲೇದಾರರ ಮುಖಾಂತರ ಕೊಡುವ ವ್ಯವಸ್ಥೆಯನ್ನು ಮಾಡಿದ್ದರು. ಪೂಜಾರ ಸಂಘವು ಒಡೆಯರ ಸತ್ಕಾರದಲ್ಲಿ ಕಂಡುಬರುವ ನ್ಯೂನತೆಗಳನ್ನು ದುರ್ಲಕ್ಷಿಸಿ ಎಂದು ವಿನಂತಿಸಿಕೊಂಡಿದ್ದಾರೆ. ಬಿನ್ನವತ್ತಳೆಯಲ್ಲಿ ಮಹಾರಾಜರಿಗೆ ಬನಶಂಕರಿ ದೇವಿಯು ದೀರ್ಘವಾದ ಆಯುರಾರೋಗ್ಯ, ಸಂತಾನ ಭಾಗ್ಯವನ್ನು ನೀಡಲೆಂದು ಅರ್ಚಕರು ಆಶೀರ್ವದಿಸಿದ ಉಲ್ಲೇಖಗಳಿವೆ. ಬಿನ್ನವತ್ತಳೆಯ ಕೊನೆಯಲ್ಲಿ ಪೂಜಾರ ಸಂಘದವರಾದ ಬಾಳಂಭಟ್ಟ್ ಶಂಕ್ರಭಟ್ಟ್ ಪೂಜಾರ (ಸಂಘದ ಅಧ್ಯಕ್ಷ), ಮಲ್ಹಾರಭಟ್ಟ ವಿಠ್ಠಲಭಟ್ಟ ಪೂಜಾರ (ಕಾರ್ಯಾಧ್ಯಕ್ಷ), ದತ್ತಂಭಟ್ಟ್ ಮಹಾದೇವಭಟ್ಟ್ ಪೂಜಾರ (ಕಾರ್ಯದರ್ಶಿ), ಸಿ.ಎಂ. ಪೂಜಾರರ ಹೆಸರಗಳಿವೆ.

### ೪. ಚೌಡಂಭಟ್ಟ ಬರೆಸಿರುವ ಇನಾಮ

ಅಣ್ಣಿಭಟ್ಟ, ಬಿನ್ ಬಾಳಂಭಟ್ಟ ಬಿನ್ ಚೌಡಂಭಟ್ಟರು ಬರೆಸಿರುವ ಇನಾಮ ಪತ್ರವು ಮೋಡಿ ಲಿಪಿಯಲ್ಲಿದೆ. ದೇವಿಯ ಈ ಇನಾಮ ಪತ್ರವನ್ನು ೨೬.೦೭.೧೮೪೯ರಂದು ಬರೆಸಿದ್ದಾರೆ. ಇನಾಮ ಪತ್ರದ ವಿವರ ಈ ಕೆಳಕಂಡಂತಿದೆ.

ಚೊಳಚಗುಡ್ಡದ ಶ್ರೀ ಬನಶಂಕರಿದೇವಿಗೆ ೧೨ ಕುರಗಿ ಜಮೀನು, ಈ ಜಮೀನಲ್ಲಿರುವ ಗಿಡಮರಗಳು ದೇವಿಗೆ ಸೇರಿವೆ ಎಂದು ಬರೆಯಲಾಗಿದೆ. ಹಾಗೆಯೇ ಈ ಜಮೀನಿಗಾಗಿ ಸರ್ಕಾರಕ್ಕೆ ಯಾವುದೇ ಪ್ರಕಾರ ತೆರಿಗೆ ಕೊಡುವುದು ಇರುವುದಿಲ್ಲ ಎಂದು ಉಲ್ಲೇಖಿಸಲಾಗುವುದು. ಅಲ್ಲದೆ ದೇವಿಗೆ ಸೇರಿದ ಜಮೀನಿನ ಉತ್ಪನ್ನದ ಆದಾಯದಿಂದ ದೇವಿಯ ನಿತ್ಯಪೂಜೆ, ನಂದಾದೀಪ, ನೈವೇದ್ಯ, ಅಶ್ವಿನ ಪುಷ್ಯಮಾಸದಲ್ಲಿ ನವರಾತ್ರಿ ಉತ್ಸವ ಮಾಡುವ ಸಲುವಾಗಿ ಹಾಗೂ ಹೋಗಿ ಬರುವ ಬ್ರಾಹ್ಮರಿಗೆ ಅನ್ನ ನೀರು ವ್ಯವಸ್ಥೆ ಮಾಡಲು ವಿನಿಯೋಗಿಸಲಾಗುವುದು ಎಂದಿದೆ. ಹಾಗೆಯೇ ಈ ಇನಾಮನಲ್ಲಿ ಆರು ಮಂದಿ ಅರ್ಚಕರ ಹೆಸರುಗಳಿವೆ. ಬಾಪುಭಟ್ಟ ಬಿನ್ ಗಿರಿಭಟ್ಟ, ಬಾನಂಭಟ್ಟ ಬಿನ್ ಬಾಳಂಭಟ್ಟ,

ಶಂಕ್ರಭಟ್ಟ ಬಿನ್ ಬಾಳಂಭಟ್ಟ, ಶಂಕ್ರಭಟ್ಟ ಬಿನ್ ಚೌಡಂಭಟ್, ನೀಲಕಂಠ ಬಿನ್ ಶಾಂಭಟ್ಟ ಈ ಪ್ರಕಾರ ಆರು ಮಂದಿ ಪ್ರತಿ ವರ್ಷ ಒಬ್ಬೊಬ್ಬರಂತೆ ದೇವರ ಸೇವೆಯನ್ನು ಮಾಡುತ್ತಿರುವ ಬಗ್ಗೆ ಉಲ್ಲೇಖವಿದೆ. ಶೃಂಗೇರಿ ಕಡತಗಳಲ್ಲಿ ದೊರೆತ ಮಾಹಿತಿಯಲ್ಲಿ ಈ ಅರ್ಚಕರ ಹೆಸರುಗಳೇ ಇರುವುದನ್ನು ಇಲ್ಲಿ ಗಮನಿಸಬಹುದು.

ದೇವಿಗೆ ಸೇರಿದ ಸದರಿ ಜಮೀನ ಪೈಕಿ ದೇವಾಲಯದ ಹಿಂದಿನ ಭಾಗದ ಸುಮಾರು ೩೦ ಬೀಘೆ ಜಮೀನು ಮೊಘಲರ ಕಾಲದ ಕಿಲ್ಲೇದಾರ ನೀಡಿದ್ದನು. ಆದರೆ ಈ ಕಿಲ್ಲೇದಾರನ ಹೆಸರು ಎಲ್ಲಿಯೂ ಉಲ್ಲೇಖವಾಗಿಲ್ಲ. ಅಲ್ಲದೇ ಈ ಇನಾಮ ಪತ್ರದಲ್ಲಿ ದೇವಿಗೆ ಸಂಬಂಧಿಸಿದ ಜಮಾ ಅಥವಾ ಆದಾಯ, ಖರ್ಚು ಮತ್ತು ಉತ್ಪನ್ನಗಳ ವಿವರಗಳನ್ನು ಗಮನಿಸಬಹುದು. ಹಾಗೆಯೇ ಬಾದಾಮಿ ತಾಲೂಕ ಇನಾಮು ಗ್ರಾಮಗಳಿಂದ ಬರುವ ಬಾಬತ್ತುಗಳ ಉಲ್ಲೇಖವಿದೆ. ೪೩ ರೂಪಾಯಿಗಳು ಜಾಲಿಹಾಳ ದೇಸಗತಿ ಇನಾಮ, ೨೦ ರೂಪಾಯಿ ಹೊಸೂರು ದೇಸಗತಿ, ೮ ರೂಪಾಯಿ ಗಾಡಗೋಳಿ ಇನಾಮ, ೪ ರೂಪಾಯಿ ಅಮರಗೋಳ ಇನಾಮ ಗ್ರಾಮ, ೪ ರೂಪಾಯಿ ಮುಮ್ಮರಡಿಕೊಪ ಇನಾಮ ಗ್ರಾಮ, ೪ ರೂಪಾಯಿ ಖ್ಯಾಡ ಇನಾಮ ಗ್ರಾಮ, ೪ ರೂಪಾಯಿ ಹಡಗಲಿ ಇನಾಮ ಗ್ರಾಮ, ೪ ರೂಪಾಯಿ ಹಣಮದೇವೂರ ಇನಾಮ, ೪ ರೂಪಾಯಿ ಕುರುಬನಕೊಪ ಇನಾಮ, ೪ ರೂಪಾಯಿ ಇನಾಮ ನಾಗರಹಾಳ, ೨ ರೂಪಾಯಿ ಅಕರಕಲ್ಲು ಗ್ರಾಮದಿಂದ ಬರುವ ಬಾಕಿ ಎಂದು ನಮೂದಿಸಲಾಗುವುದು. ಇವುಗಳಲ್ಲದೇ ೪ ರೂಪಾಯಿ ನರಗುಂದ ಇಲಾಖೆಯ ಗ್ರಾಮಗಳಿಂದ, ೬ ರೂಪಾಯಿ ರಾಮದುರ್ಗ ಇಲಾಖೆ ಗ್ರಾಮಗಳಿಂದ ಶ್ರಾವಣ ಅಭಿಷೇಕಕ್ಕೆ ಬರುವ ಹಣ ಎಂದು ಉಲ್ಲೇಖಿಸಲಾಗಿದೆ.

ದೇವಿಗೆ ಸಂಬಂಧಿಸಿದ ಜಮಾ, ಖರ್ಚು, ಸಂಪೂರ್ಣ ಲೆಕ್ಕಚಾರ ಮಾಡಿದಾಗ ಆದಾಯ ಕೊರತೆ ಉಂಟಾಗಿದೆ. ಅದರಿಂದ ಭಕ್ತರ ಕಡೆಯಿಂದ ವಸೂಲಿ ಮಾಡಲಾಗುತ್ತದೆ ಎಂದು ಬರೆಯಲಾಗಿದೆ. ಇದರಿಂದ ಪೂರ್ವದಲ್ಲಿ ದೇವಿಯ ಪೂಜಾ ಕಾರ್ಯಗಳನ್ನು ನೆರವೇರಿಸುವುದಕ್ಕೆ ಆದಾಯದ ಕೊರತೆಯಿತ್ತು ಎಂಬ ಅಂಶ ಸ್ಪಷ್ಟವಾಗುವುದು. ಹಾಗೆಯೇ ಬಿಷ್ಟೋಪಂತ ಸುಭೇದಾರ ಎಂಬುವನು ತನಗೆ ಸೇರಿದ್ದ ದೇವಾಲಯದ ಹಿಂದಿನ ಭಾಗದ ತೋಟ್ಟವನ್ನು ದೇವಿಗೆ ದಾನವಾಗಿ ನೀಡಿದಕ್ಕೆ ದಾನಪತ್ರವನ್ನು ಬರೆಸಿದ್ದ ಬಗ್ಗೆ ಉಲ್ಲೇಖವಿದೆ. ದೇವಿಗೆ ಭೂದಾನವನ್ನು ಕೊಟ್ಟ ಬಿಷ್ಟೋಪಂತ ಅಂದಿನ ಸುಭೇದಾರ ಆಗಿದ್ದ ಎಂದು ತಿಳಿದುಬರುವುದು.

ಹೀಗೆ ಇನಾಮನಲ್ಲಿ ದೇವಾಲಯಕ್ಕೆ ಸಂಬಂಧಿಸಿದ ಜಮೀನು, ಜಮಾ, ಖರ್ಚು, ದಾನ ನೀಡಿದವರ ವಿವರ, ಅಂದಿನ ಅರ್ಚಕರ ಉಲ್ಲೇಖಗಳಿರುವುದು ಗಮನಾರ್ಹ. ಈ ಇನಾಮ ಬರೆಸುವಾಗ ಕೃಷ್ಣರಾವ್ ಭೀಮಾಜಿ ಎಂಬ ಕಾರಕೂನನು ಇದ್ದನೆಂದು

ಉಲ್ಲೇಖಿಸುತ್ತದೆ. ದೇವಿಗೆ ಸೇರಿದ ಜಮೀನು, ಜಮಾ, ಖರ್ಚು, ದಾನ ನೀಡಿದವರ ವಿವರಗಳನ್ನು ಒಳಗೊಂಡಿದ್ದ ಅಸಲಿ ಕಾಗದ ಪತ್ರ ನಾಶವಾಗಿದ್ದರಿಂದ ೧೮೪೯ರ ಅಗಸ್ಟ್ ೧೦ರಂದು ಈ ಇನಾಮನ್ನು ಅಥವಾ ಪತ್ರವನ್ನು ಬರೆಸಲಾಗಿದೆ ಎಂಬ ಮಾಹಿತಿ ಇರುವುದನ್ನು ಗಮನಿಸಬಹುದು.

**೫. ೧೭೮೧ರ ಭೂದಾನ ಪತ್ರ**

ಇಮ್ಮಡಿ ಪವಾಡಿ ನಾಯಕರ ಪುತ್ರರಾದ ಹನುಮಪ್ಪ ನಾಯಕನು ಕ್ರಿ.ಶ. ೧೭೮೧ರಲ್ಲಿ ಶ್ರೀ ದೇವಿಯ ಪೂಜಾರಿಯಾದ ಚೌಡಪ್ಪನವರಿಗೆ ನೀಡಿದ ಭೂದಾನ ಪತ್ರ ಇದಾಗಿದೆ. ಈ ಪತ್ರವು ಕನ್ನಡ ಮೋಡಿಲಿಪಿಯಲ್ಲಿದ್ದು, ಭೂದಾನ ಪತ್ರದ ವಿವರಗಳು ಈ ಕೆಳಗಿನಂತಿವೆ.

ಚಾಮರ ಚಾರವೆ, ತ್ರೈಲೋಕ್ಯ ನಗರಾರಂಭ



ಮೂಲ ಸ್ತಂಭಾಯ ಶಾಂಭವೆ

ಸ್ವಸ್ತಿಶ್ರೀ ಜಯಭುಧ್ಯ ನಾವ ಶಾಲಿವಾಹನ ಶಕೆ ೧೭೦೩ನೆಯ ಮೂರು ಪರ್ವಮಾನೆ ಪ್ಲನಾಮ ಸಂವತ್ಸರ ಶ್ರಾವಣಶುದ್ಧ. ೧ರಲ್ಲಿ ವೆ॥ ರಾಜಶ್ರೀ ಶ್ರೀ ವಚಗೋತ್ರದ ಕಾತ್ಯಾಯನ ಪುತ್ರರಾದ ಶ್ರೀವರ ಪೂಜಾರಿ ಶಂಕರಭಟ್ಟರ ಪುತ್ರರಾದ ಬಾಳಭಟ್ಟರ ಪುತ್ರರಾದ ಚೌಡಪ್ಪನವರಿಗೆ ಕಿಲ್ಲೇ ಬಾದಾಮಿ ಸೀಮೆ ವೆಶಾಯಿ ವ ಸರದೇಸಾಯಿ ಪ॥ (ಪರಗಣೆ) ಯಲಬುರ್ಗಾ ಸೀಮೆ ನಾಡವ ಪಟ್ಟಣ್ಣ ಶೆಟ್ಟಿಗಳಾದ ಮಾ॥ ಬಾಗಡಿಕೋಟ (ಬಾಗಲಕೋಟ) ಸೀಮೆ ಸರನಾಡ ಚಮಡಿಗಳಾದ ಅಚ್ಚಪ್ಪನಾಯಕ ಪುತ್ರರಾದ ಇಮ್ಮಡಿ ಪವಾಡಿ ನಾಯಕರ ಪುತ್ರರಾದ ಹನುಮಪ್ಪ ನಾಯಕರು ಬರೆಸಿಕೊಟ್ಟ ಭೂದಾನ ಪತ್ರ ವಸುಹೀಸನೆ ಸಮಾನೆ ಬನಮಯಾ ತಾಲ್ಪ ತಾವರೆ ನಮ್ಮ ತಿ॥ ಹಿರೆರು ವೈಕುಂಠ ವಾಸವಾದ ಕಾಲದಲ್ಲಿ ನಿಮ್ಮಗೆ ಭೂದಾನ ಕೊಟ್ಟವೆಂದು ಸಂತೃಪ್ತವಾಡಿ ಈ ದಿವಸವಾದ ನೀವು ನಮ್ಮ ಬಳಿಗೆ ಬಂದು ವ. ಬೆನಾಗಿತ್ಯೆ ಮಾಡಬೇಕೆಂದು ತಿಳಿದು ನಿಮಗೆ ಮೆ॥ ಸಂಧಿಗವಾಡ ದೇಸಗತಿ ಮಾನ್ಯದ ಪೈಕಿ ಆರು ಮಾರು ಹೊಲ ಕೃಷ್ಣಭೂಮಿ (ಕಪ್ಪು) ಬೀಘೆ ೧೮ ಜಲ, ನಿಧಿ, ನಿಕ್ಷೇಪ, ವರು ವನಿತ್ರಣ ಕಾಷ್ಟ ಆಗಮ ನಿಧಿಸಾದ್ಯ ಅಷ್ಟ ಸಾಮ್ಯಯುಕ್ತ ನಂದ

ಶ್ರೀ ಕೃಷ್ಣಾಪರ್ಣವಾಗಿ ಭೂದಾನ ಕೊಟ್ಟದ್ದು ಇದೆ. ವೆ..... ನಾವ ಕೊಟ್ಟಿದ್ದ ಸ್ವ ಆಸ್ತಿಯನ್ನು ಸೂರ್ಯಚಂದ್ರರಿರುವರೆಗೆ ನಿಮ್ಮ ವಂಶಪರಂಪರೆ ವಿಶಿಕೊಡು ಶ್ರೀ ದೇವರ ಪೂಜೆ ಮಾಡಿ

ಹೀಗೆ ಭೂದಾನ ಪತ್ರದಲ್ಲಿರುವಂತೆ ಹನುಮಪ್ಪ ನಾಯಕನು ದೇವಿಯ ಅರ್ಚಕರಾದ ಚೌಡಪ್ಪನಿಗೆ ದೇವಿಯ ಪೂಜಾಕಾರ್ಯಗಳು ನಿರಂತರವಾಗಿ ನಡೆಸಿಕೊಂಡು ಹೋಗಲು ಆರು ಮಾರು ಕಪ್ಪು ಭೂಮಿಯನ್ನು ದಾನವಾಗಿ ನೀಡಿರುವುದನ್ನು ಗಮನಿಸಬಹುದು.

## ೬. ೧೮೬೦ರ ಇನಾಮು ಪತ್ರ

ಈ ಇನಾಂ ಪತ್ರದಲ್ಲಿ ಬನಶಂಕರಿ ಅರ್ಚಕರ ಹೆಸರು, ವಯಸ್ಸು, ಜಾತಿ, ದೇವಿಯ ಪೂಜಾಕಾರ್ಯಗಳಿಗೆ, ರಥೋತ್ಸವದ ಸಲುವಾಗಿ ಬರುತ್ತಿದ್ದ ಆದಾಯದ ಮೂಲಗಳನ್ನು ಉಲ್ಲೇಖಿಸಿದ್ದಾರೆ. ಇನಾಮು ಪತ್ರದ ವಿವರ ಈ ಕೆಳಗಿನಂತಿದೆ.

ಬಾದಾಮಿ ತಾಲೂಕ ಮಾಮಲೇದಾರ ಗಿರಿಧರ ನರಸಿಂಹ ಇವರ ಮುಂದೆ ಕಬುಲಾಯಿತ ಜವಾಬಿನ ಚೇಸ್ಮಿ ಎಂಬ ಉಲ್ಲೇಖವಿರುವುದನ್ನು ಕಾಣಬಹುದು. ಅಣಭಟ್ಟ ಬಿನ್ ಬಾಳಂಭಟ್ಟ ಪೂಜಾರಿ, ಶಂಕರಭಟ್ಟ ಬೀನ್ ಬಾಳಂಭಟ್ಟ ಪೂಜಾರಿ ಬಾಪೂಭಟ್ಟ ಬಿನ್ ಗಿರಿಭಟ್ಟ ಪೂಜಾರಿ, ಶಂಕರಭಟ್ಟ ಬಿನ್ ಚೌಡಂಭಟ್ಟ ಪೂಜಾರಿ ಈ ಐದು ಜನರು ಮತ್ತು ನೀಲಕಂಠಭಟ್ಟ ಶಾಮಭಟ್ಟ ಈ ಪ್ರಕಾರ ಆರು ಜನರ ಶ್ರೀ ಬನಶಂಕರಿ ದೇವಿಯ ಪೂಜಾರಿಗಳ ಹೆಸರುಗಳಿವೆ. ಇವರು ಪ್ರತಿವರ್ಷ ಒಬ್ಬರಂತೆ ಪೂಜಾರಿಯ ಕೆಲಸವನ್ನು ಮಾಡುತ್ತಿರುವ ಉಲ್ಲೇಖವಿದೆ. ಶ್ರೀ ದೇವಿಯ ರಥೋತ್ಸವದ ಸಲುವಾಗಿ ಹುಜೂರ ಖಜಾನೆಯಿಂದ ೬೭ ರೂಪಾಯಿಗಳು ಮತ್ತು ನಿತ್ಯ ನೈವೇಧ್ಯಕ್ಕಾಗಿ ಪ್ರತಿ ತಿಂಗಳು ೧೩ ರೀಪಾಯಿ, ೮ ಆಣೆ ೯ ಪೈಸೆಯಂತೆ ಪ್ರತಿ ವರ್ಷ ೧೬೭ ರೂಪಾಯಿಗಳು ಒಟ್ಟು ಪ್ರತಿ ವರ್ಷ ೮೩೪ ರೂಪಾಯಿಗಳನ್ನು ಬಾದಾಮಿ ತಾಲೂಕು ಕಛೇರಿಯಿಂದ ನೀಡಲಾಗುತ್ತಿತ್ತು.

ಈ ರೂಪಾಯಿಗಳನ್ನು ಯಾವ ವರ್ಷ ಯಾರ ಪಾಳಿ ಇರುತ್ತದೆಯೋ ಅವರು ತೆಗೆದುಕೊಂಡು ಖರ್ಚಿನ ವ್ಯವಸ್ಥೆಯಿತ್ತು. ಅದರ ಸಲುವಾಗಿ ಸನ್ ೧೨೬೭ರಲ್ಲಿ ಫಸಲಿ ಪಾಳಿದಾರ ಅವರ ಕಡೆಯಿಂದ ಇನಾಮು ಕಮೀಟಿ ನಮೂನೆಯ ಪ್ರಕಾರ ಕೈಫೆಯತ ತೆಗೆದುಕೊಂಡು ಕಳುಹಿಸಿಕೊಡುವ ಪದ್ಧತಿಯಿದೆ. ಅದಕ್ಕೆ ಸದರೀ ಸಾಲಿನಲ್ಲಿ ನೀಲಕಂಠಭಟ್ಟ ಬಿನ್ ಶಾಮಭಟ್ಟ ಇವರ ಪಾಳೆಯಿತ್ತೆಂದು ವಿವರಿಸಿದ್ದಾರೆ. ಅವರ ಕಡೆಯಿಂದ ನಮೂನೆಯ ಅನ್ವಯ ಕೈಫೆಯತ್ ಮತ್ತು ವಂಶಾವಳಿ ತೆಗೆದುಕೊಳ್ಳಬೇಕೆಂದು ಅವರು ಬರೆದುಕೊಡುತ್ತಾರೆ. ಅದು ನಮಗೆ ಕಬೂಲಯಿದೆ ಎಂದಿದ್ದಾರೆ. ಅದರ ಹುಕುಂ ಬದಲ ಸಾಕ್ಷಿಯ ಕಾಗದ ಪತ್ರ ವಗೈರೆ ಕೊಡುವ ನಮ್ಮ ಹತ್ತಿರ ಏನೂ ಇರುವುದಿಲ್ಲ. ಬರೆದುಕೊಟ್ಟ ಜವಾಬ ಸಹಿ ತಾರೀಖು ೫-೪-೧೮೬೦ ಎಂದು ಉಲ್ಲೇಖಿಸುತ್ತದೆ.

ಈ ಪತ್ರಕ್ಕೆ ತಿಮ್ಮಾಣಿ ನಾರಾಯಣ ಮು : ದೇಶಪಾಂಡೆ ಎಂಬುವವರು ಸಾಕ್ಷಿಯಾಗಿದ್ದಾರೆ. ಅಲ್ಲದೆ ಪತ್ರದ ಕೊನೆಯಲ್ಲಿ ಬಾದಾಮಿ ತಾಲೂಕಿನ ಮಾಮಲೇದಾರನಾಗಿ ಗಿರಿಧರ ನರಸಿಂಹನು ಹಾಗೂ ಕಾರಕೂನನಾಗಿ ವ ದತ್ತಾತ್ರಯ ಜಮಾದಾರನ ಹೆಸರುಗಳು ಉಲ್ಲೇಖವಿದೆ.

## ೭. ಮಾಧವರಾವ ಅನಂತರಾವ ಅವರು ಕ್ರಿ.ಶ. ೧೮೦೪ರಲ್ಲಿ ಬರೆಸಿದ ಇನಾಮು

ಸಿರಹಟ್ಟಿಯ ಮಾದವರಾವ ಅನಂತರಾವ ಅವರು ತಮ್ಮ ಕುಟುಂಬದವರ

ಯೋಗಕ್ಷೇಮಕ್ಕಾಗಿ ದೇವಿಯ ಪೂಜಾಕಾರ್ಯಗಳಿಗಾಗಿ ಇನಾಂಜಮೀನು ನೀಡಿದ್ದ ಬಗ್ಗೆ ವಿವರವಿದೆ. ಈ ಪತ್ರವನ್ನು ಶಕೆ ೧೭೨೬ (ಕ್ರಿ.ಶ. ೧೮೦೪) ರಕ್ತಾಶಿನಾಮ ಸಂವತ್ಸರದಲ್ಲಿ ಬರೆಸಿದ್ದಾರೆ. ಪತ್ರದಲ್ಲಿ ದೇವಿಯ ಪೂಜಾರಿಗಳಾದ ನರಸಿಂಹಭಟ್ಟ ಬಿನ್ ಚೌಡಂಭಟ್ಟ, ಶಂಕರಭಟ್ಟ ಬಿನ್ ಅನಂತಭಟ್ಟ, ಬಾಳಂಭಟ್ಟ ಬಿನ್ ಶಂಕರಭಟ್ಟ, ಗಿರಿಭಟ್ಟ ಬಿನ್ ಬನಂಭಟ್ಟರ ಹೆಸರುಗಳಿವೆ. ಅಲ್ಲದೆ ದೇವಿಯ ಪೂಜೆ, ನವರಾತ್ರಿ ಇತ್ಯಾದಿ ಖರ್ಚಿನ ಸಲುವಾಗಿ ೧೮೧೧ ಮಾರು ಜಮೀನು ನೀಡಿದ್ದಾನೆ.

ಆ ಜಮೀನುಗಳಲ್ಲಿ ಪ್ರಮುಖವಾಗಿ ಬಾದಾಮಿಯ ಪರಿಸರದಲ್ಲಿರುವ ಗ್ರಾಮಗಳು ಹೆಚ್ಚಾಗಿವೆ. ಅವುಗಳಲ್ಲಿ ಮುಖ್ಯವಾಗಿ ಸವಡಿ, ಅಬ್ಬಿಗೇರಿ, ಕಾತರಕಿ, ಕುರುವಿನಕೊಪ್ಪ, ಮಣ್ಣೇರಿ, ಬಸಲಾಪೂರ, ಕೃಷ್ಣಾಪೂರ, ಮಲಕಾಪೂರ, ಹಿರೇ ಬೇವಿನಕಟ್ಟಿ, ಚಿಕ್ಕ ಬೇವಿನಕಟ್ಟಿ, ಜಿಗಳೂರು, ತುರಟಕಿ, ಗುಜಮಾಗಡಿ, ಎರೆಬೇಲರಿ, ಬದಾಮಿ, ತಮಿನಾಳ, ನೀರಟಗಿ ತೋರೆ, ಜಕನೂರು, ಸುಳ್ಳ, ನಳೂರ, ಕಲ್ಲಿಗನೂರ ಯಲಬುರ್ಗಿ, ನೀಲಗುಂದ, ಗೋವನತಿ, ಬಸಲಕೋಟ, ನಾಗರಾಳ, ಬೇಲೂರ, ಜಾಲಿಹಾಳ ಮೊದಲಾದ ಗ್ರಾಮಗಳಲ್ಲಿ ಜಮೀನುಗಳಿಂದ ಬರುವ ಉತ್ಪನ್ನಗಳಿಂದ ದೇವಿಯ ಪೂಜಾ ಕಾರ್ಯಗಳು ತ್ರಿಕಾಲದಲ್ಲಿ ಉತ್ತಮ ರೀತಿಯಲ್ಲಿ ನಡೆದುಕೊಂಡು ಹೋಗುವಂತೆ ತಿಳಿಸಿರುವುದನ್ನು ಗಮನಿಸಬಹುದು.

**೮. ಬಿಷ್ಟೋಲಿಂಗೊ ಕಿಲ್ಲೇ ಬರೆಸಿರುವ ದಾನ ಪತ್ರ**

ಬಿಷ್ಟೋಲಿಂಗೊ ಕಿಲ್ಲೇ ಕ್ರಿ.ಶ. ೧೮೪೪ರಲ್ಲಿ ದೇವಿಯ ಪೂಜಾಕಾರ್ಯಗಳಿಗಾಗಿ ಭೂಮಿಯನ್ನು ದಾನವನ್ನು ನೀಡಿರುವ ಉಲ್ಲೇಖಗಳಿವೆ. ದಾನಪತ್ರದ ವಿವರಗಳು ಹೀಗಿವೆ.

"ಶ್ರೀ ಗಣಪತಿ"

ಶ್ರೀ ಬನಶಂಕರಿ

॥ ನಮಸ್ತುಂಗಿ ಸಿರಸ್ತುಂಬಿ ಚಂದ್ರಚಾಮರ ಚಾರವೇ

ತ್ರೈಲೋಕ್ಯ ನಗರಾರಂಬೆ ಮೂಲಸ್ತಂಭಾಯ ಶಾಂಭವೇ॥

ಸ್ವಸ್ತಿ ಶ್ರೀ ಜಯನಗರಾದಯೇ ನೃಪ ಶಾಲಿವಾಹನ ಶಕೆ ೧೭೦೪ ರೋಭಂಕೃತ ನಾಮ ಸಂವತ್ಸರ ಶ್ರಾವಣ ಶುದ್ಧ ಗುರುವಾರ ಶ್ರೀ ಇವರ ಆರಾಧನೆ ಸಲುವಾಗಿ ದಾನ ಪತ್ರ ಆಜ್ಞಾಪತ್ರ ಬಿಷ್ಟೋಲಿಂಗೊ ಕಿಲ್ಲೇ ಬದಾಮಿ ಸನ್ ೧೭೯೭ ಹಿಜರಿ ಮೌಜೆ ತೋಳಚಗೋಡ ಬದಾಮಿಯಲ್ಲಿಯ ಭೂಮಿಯ ಪೈಕಿ ಶ್ರೀ ದೇವಸ್ಥಾನದ ಸಮೀಪದ ಪಶ್ಚಿಮ ಭಾಗದ ಬಾಗಾಯತ ಮತ್ತು ದೇವಸ್ಥಾನದ ಉತ್ತರ ಭಾಗದಲ್ಲಿ ಮಾವಿನ ಗಿಡ – ಬೀಘೆ ಜಮೀನ ಸುಮಾರು ೭೨ ಇದರಲ್ಲಿ ಎರಡು ಮಾರು ಜಮೀನು ಇನಾಮ ಮಾಡಿ ಕೊಡಲಾಗಿದೆ. ಸೂರ್ಯಚಂದ್ರ ಪರ್ಯಂತ ನಿಧಿ ಪಾಶಾಣ ನಿಕ್ಷೇಪ ಮಾಡಿ ಕೊಡಲಾಗಿದೆ ಎಂದಿದೆ.

ಹಜರತ ನವಾಬ ಅಲಿ ಸಾಹೇಬ ಇವರ ಕಲ್ಯಾಣ ಇಚ್ಚಿಸುವ ಸಲುವಾಗಿ ಈ ದಾನಪತ್ರ ಮಾಡಿಕೊಡಲಾಗಿದೆ. ತೋಟದ ಉತ್ಪನ್ನ ಆಗುವುದನ್ನು ಶ್ರೀ ದೇವರ ಚರಣಕ್ಕೆ ಅರ್ಪಣೆ ಮಾಡಲಾಗಿದೆ. ಈ ಧರ್ಮಾರ್ಥ ಕೆಲಸಕ್ಕೆ ಯಾರು ಅಡ್ಡಿ ಆತಂಕ ಮಾಡುತ್ತಾರೋ ಅವರಿಗೆ ಅವರವರ ಮೂಲ ದೇವರ ಶಪಥ ಇರುವುದು (ಕುಲದೇವತೆಯರ ಶಾಪ ಇರುವುದು) ಮತ್ತು ನರಕಕ್ಕೆ ಪಾತ್ರರಾಗುವರು. ಇದು ಸೂರ್ಯ ಚಂದ್ರ ಇರುವವರೆಗೆ ಚಲಾವಣೆಯಲ್ಲಿರುವುದು ತಿಳಿಯಲಿ ಎಂದಿದೆ.

॥ ಸ್ವದತಾ ದ್ವಿಗುಣಪುರ್ಣ ಪುರ್ಣ ಪರದಾತಾನೋ ಪಾಲನ

ಪರದತಾ ಪಹಾರೇಣ ಸ್ವದತಂ ನಿಷ್ಪಲಂ ಭವೇತಂ ॥

ತಾರೀಖ ೧ ರಮಜಾನ ........

ತಾ, ೧೦. ಅಗಸ್ಟ ೧೮೪೯ ಇಸವಿ

ಹುಕುಮ ಮಾಡುವವರು ಕೃಷ್ಣರಾವ ಭೀಮ ಮಾಜಿ ಕಾರಕೂನ ಕಛೇರಿ ಅಪ್ಪಾಜಿ ಬಾಳಾಜಿ ಕಾರಕೂನ ನಿ : ಕಮೀಟಿ

ಪತ್ರದ ಕೊನೆಯಲ್ಲಿ ವಿಶೇಷ ಸೂಚನೆ : ಮೂಲ ಸನದನ್ನು ಭಾಷಾಂತರ ಮಾಡಿದ ನಕಲು ಎಂದು ಬರೆದಿದ್ದಾರೆ.

**೯. ಮೈಸೂರು ಸಂಸ್ಥಾನದ ಇನಾಂ ಪತ್ರ**

೮-೭-೧೮೭೨ರಲ್ಲಿ ಮೈಸೂರು ಒಡೆಯರು ಬನಶಂಕರಿ ದೇವಿಗೆ ಪೂಜೆಗಾಗಿ ಶ್ರೀಗಂಧವನ್ನು ಕಾಣಿಕೆಯಾಗಿ ನೀಡಿರುವ ಕುರಿತು ಉಲ್ಲೇಖವಿರುವ ಪತ್ರ ಇದಾಗಿದೆ. ಪತ್ರದಲ್ಲಿ ಮೈಸೂರು ದೊರೆಗಳ ಸೀಮೆಯ ರಾಜ್ಯಭಾರದ ಕಮಿಸನರ ಎಂಬ ಕನ್ನಡ, ಇಂಗ್ಲೀಷ್, ಉರ್ದು ಭಾಷೆಯಲ್ಲಿರುವ ಮುದ್ರೆಯನ್ನು ಕಾಣಬಹುದು.

ಹೀಗೆ ಬಾದಾಮಿ ಬನಶಂಕರಿಗೆ ಸಂಬಂಧಿಸಿದಂತೆ ಮೇಲ್ಕಾಣಿಸಿದ ದಾಖಲೆಗಳು ಕರ್ನಾಟಕ ಇತಿಹಾಸವನ್ನು ಬರೆಯುವಲ್ಲಿ ಬಹಳಷ್ಟು ಪ್ರಯೋಜನಕಾರಿ ಎಂದು ಹೇಳಲಾಗದಿದ್ದರೂ, ದಕ್ಷಿಣ ಭಾರತದ ಹೃದಯ ಭಾಗದಲ್ಲಿರುವ ಬಾದಾಮಿಯು ಭಾರತದಲ್ಲಿ ಒಂದು ಐತಿಹಾಸಿಕ ಸ್ಥಳವಾಗಿದೆ. ಹಾಗಾಗಿ ಇತಿಹಾಸ ಸಂಶೋಧಕರಿಗೆ ಅದೊಂದು ಆಸಕ್ತ ಅಧ್ಯಯನ ಕ್ಷೇತ್ರವಾಗಿರುವುದು. ಆದ್ದರಿಂದ ಈ ಪರಿಸರದಲ್ಲಿರುವ ಬನಶಂಕರಿ ಪರಿಸರಕ್ಕೆ ಸಂಬಂಧಿಸಿದ ಕೆಲವೇ ಚಾರಿತ್ರಿಕ ದಾಖಲೆಗಳು ಲಭ್ಯವಿದ್ದರೂ ಕೂಡ, ಬಾದಾಮಿ ಚಾರಿತ್ರಿಕ ಹಿನ್ನಲೆಯ ದೃಷ್ಟಿಯಿಂದ ಈ ದಾಖಲೆಗಳು ಮಹತ್ವವೆಂದು ಹೇಳುವ ಪ್ರಯತ್ನವನ್ನು ಮಾಡಲಾಗಿದೆ.

* * * * *

**ಅಡಿ ಟಿಪ್ಪಣಿಗಳು**

೧. ಮುನಿಸ್ವಾಮಿ. ಆರ್., ೧೯೯೯, (ಪ್ರಸಂ), ವಿಜಾಪುರ ಜಿಲ್ಲಾ, ಗ್ಯಾಸೆಟಿಯರ್, ಪುಟ – ೧೦, ಕರ್ನಾಟಕ ರಾಜ್ಯ ಸರ್ಕಾರ, ಬೆಂಗಳೂರು

೨. EI, xxvii, p - 2

೩. ಮಲ್ಹಾರಭಟ್ಟ ಬನಂಭಟ್ಟ ಪೂಜಾರ, ವೆ.ಮೂ., ಶ್ರೀ ಶಾಖಾಂಭರಿ ಲಘುಚರಿತ್ರೆ, ಪುಟ - II, ಪೂಜಾರ ಬಂಧುಗಳು, ಚೊಳಚಗುಡ್ಡ, ಬಾದಾಮಿ

೪. ಶಾಸ್ತ್ರೀ. ಎ.ಕೆ., ೨೦೦೬, ಶೃಂಗೇರಿ ಮಠದ ಕಡತಗಳಲ್ಲಿ ಆಯ್ದ ಚಾರಿತ್ರಿಕ ದಾಖಲೆಗಳು, ಸಂಪುಟ – ೩, ಪುಟ – ೧೫೦, ೧೫೩, ಕರ್ನಾಟಕ ರಾಜ್ಯ ಪತ್ರಗಾರ ಇಲಾಖೆ, ಬೆಂಗಳೂರು

೫. ಶೀಲಾಕಾಂತ ಪತ್ತಾರ, ೨೦೦೨, ಬಾದಾಮಿಯ ಸಾಂಸ್ಕೃತಿಕ ಅಧ್ಯಯನ, ಪುಟ – ೧೨, ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ

೬. ಶ್ರೀನಿವಾಸ ಪಾಡಿಗಾರ, ೧೯೯೭, ಪುರಾತತ್ವ ಶಾಸ್ತ್ರ ಪರಿಚಯ, ಪುಟ – ೧೮, ರಾಮಾಶ್ರಮ ಪಬ್ಲಿಕೇಷನ್ಸ್, ಧಾರವಾಡ

೭. ಅನಂತರಾಮರಾವ್. ಕೆ., ೨೦೦೬, ಸುವರ್ಣ ಕರ್ನಾಟಕ ದರ್ಶನ, ಪುಟ – ೪೩, ವಿದ್ಯಾ ಪಬ್ಲಿಷಿಂಗ್ ಹೌಸ್, ಮಂಗಳೂರು

೮. ಮುನಿಸ್ವಾಮಿ. ಆರ್., ೧೯೯೯, (ಪ್ರ.ಸಂ.), ಅದೇ, ಪುಟ – ೩, ೮, ೩೬

೯. ಮುನಿಸ್ವಾಮಿ. ಆರ್., ೧೯೯೯, (ಪ್ರ.ಸಂ.), ಅದೇ, ಪುಟ – ೩೦

೧೦. ಶಿವತಾರಕ್ ಕೆ.ಬಿ., ೨೦೦೧, ಕರ್ನಾಟಕದ ಪುರಾತತ್ವ ನೆಲೆಗಳು, ಪುಟ – ೩೯೦, ೩೯೭, ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ

೧೧. ಶಿವತಾರಕ ಕೆ.ಬಿ., ೨೦೦೧, ಅದೇ, ಪುಟ – ೩೯೧, ೩೯೭

೧೨. ಸುಂದರ ಅ., ೧೯೯೪, ಕರ್ನಾಟಕ ಪ್ರಾಗಿತಿಹಾಸ ಕಾಲದ ಕಲೆ, ಪುಟ – ೬೭, ೬೯, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು

೧೩. ಶಿವತಾರಕ ಕೆ.ಬಿ., ೨೦೦೧, ಅದೇ, ಪುಟ – ೩೯೧, ೩೯೩

೧೪. ಶೀಲಾಕಾಂತ ಪತ್ತಾರ, ೨೦೦೦, ಅದೇ, ಪುಟ – ೧೫

೧೫. ಶೀಲಾಕಾಂತ ಪತ್ತಾರ, ೨೦೦೯, (ಲೇ), ಬಾದಾಮಿ : ನೆಲೆ, ಹಿನ್ನೆಲೆ, ಬಾದಾಮಿ ಚಾಲುಕ್ಯರು, ಲೇಖನ ಸಂಪುಟ, (ಸಂ), ಪುಟ – ೭, ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ

೧೬. ಶರ್ಮ ಆರ್.ಎಸ್., ೨೦೦೭, ಪ್ರಾಚೀನ ಭಾರತ, ಪುಟ – ೧೪೮, ನವಕರ್ನಾಟಕ ಪ್ರಕಾಶನ, ಬೆಂಗಳೂರು

೧೭. IAR, 1959, p - 73

೧೮. ಶ್ರೀನಿವಾಸ ರಿತ್ತಿ, ಸುರೇಂದ್ರದಾನಿ, ೨೦೦೭, (ಸಂ), ಕರ್ನಾಟಕ ಕುಲಪುರೋಹಿತ ಆಲೂರು ವೆಂಕಟರಾಯ, ಸಮಗ್ರ ಕೃತಿಗಳು, ಸಂಪುಟ – ೧, ಪುಟ - xviii, ಆಲೂರು ವೆಂಕಟರಾಯ ಪ್ರತಿಷ್ಠಾನ, ಧಾರವಾಡ

೧೯. ದೇವರಕೊಂಡಾರೆಡ್ಡಿ, ೨೦೦೬, ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ ೯, ಪುಟ - xxx, ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ

೨೦. ಸೂರ್ಯನಾಥ ವಿ. ಕಾಮತ್, ೧೯೮೨, ಕರ್ನಾಟಕ ರಾಜ್ಯ ಗ್ಯಾಸಿಟಿಯರ್, ಭಾಗ – ೧, ಪುಟ, ೨೩೩ ರಿಂದ ೨೩೫, ಕರ್ನಾಟಕ ರಾಜ್ಯ ಸರ್ಕಾರ, ಬೆಂಗಳೂರು

೨೧. ಚಿದಾನಂದಮೂರ್ತಿ. ಎಂ., ೨೦೦೯, ಕರ್ನಾಟಕ ಸಂಸ್ಕೃತಿ, ಪುಟ – ೧೪, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೨೨. ಮೃತ್ಯುಂಜಯ ಹೊರಕೇರಿ, (ಲೇ), ಬಾದಾಮಿ ಬಂಡಾಯ, ಮುರಿಗೆಪ್ಪ. ಎ., ೨೦೦೯, (ಸಂ), ಬಾದಾಮಿ ಚಾಲುಕ್ಯರು ಲೇಖನ ಸಂಪುಟ, ಪುಟ – ೧೬, ೧೭, ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ

೨೩. ಗೋಪಾಲರಾವ್. ಎಚ್.ಎಸ್., ೧೯೯೬, ಕರ್ನಾಟಕ ಏಕೀಕರಣ ಇತಿಹಾಸ, ಪುಟ – ೧೪, ನವಕರ್ನಾಟಕ ಪ್ರಕಾಶನ, ಬೆಂಗಳೂರು

೨೪. ದೇವರಕೊಂಡಾರೆಡ್ಡಿ, ೨೦೦೬, (ಸಂ), ಪೂರ್ವೋಕ್ತ, ಪುಟ – ೩೩೬, ೩೩೭

೨೫. SII, XI (i), P - 88

೨೬. ಸಾಲೆತ್ತೊರೆ, ಬಿ.ಎ., ದೇಸಾಯಿ ಪಾಂಡುರಂಗರಾಯರು, ೨೦೦೮, (ಸಂ), ಕನ್ನಡ ನಾಡಿನ ಚರಿತ್ರೆ, ಭಾಗ – ೧, ಪುಟ – ೪೯. ೫೦, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೨೭. ಮುನಿಸ್ವಾಮಿ. ಆರ್., ೧೯೯೯, (ಪ್ರ.ಸಂ), ಪೂರ್ವೋಕ್ತ, ಪುಟ – ೧೦೬

೨೮. IA, X, p. - 62, 63

೨೯. ಮೃತ್ಯುಂಜಯ ಹೊರಕೇರಿ, (ಲೇ), ಅದೇ, ೨೦೦೬, ಪುಟ – ೪೫೨, ೪೫೩

೩೦. ಮಲ್ಹಾರಭಟ್ಟ ಬನಂಭಟ್ಟ ಪೂಜಾರ, ಪೂರ್ವೋಕ್ತ, ಪುಟ – IV

೩೧. ಮಲ್ಹಾರಭಟ್ಟ ಬನಂಭಟ್ಟ ಪೂಜಾರ, ಪೂರ್ವೋಕ್ತ, ಪುಟ – ೩೮

೩೨. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ೨೦೦೬, ಎಫಿಗ್ರಾಫಿಯ ಕರ್ನಾಟಕ, ಸಂಪುಟ – ೧೩, ಶಾಸನ ಸಂಖ್ಯೆ – ೧೫, ೨೦

೩೩. ದೇವರಕೊಂಡಾರಡ್ಡಿ ೨೦೦೮, (ಸಂ), ಬೀದರ ಜಿಲ್ಲಾ ಶಾಸನ ಸಂಪುಟ – ೮, ಪುಟ – ೨೦, ೨೧, ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ

೩೪. ದೇವರಕೊಂಡಾರೆಡ್ಡಿ, (ಸಂ), ೨೦೦೮, ಅದೇ, ಪುಟ – ೩೫

೩೫. ದೇವರಕೊಂಡಾರೆಡ್ಡಿ, (ಸಂ), ೧೯೯೮, ಬಳ್ಳಾರಿ ಜಿಲ್ಲಾ ಶಾಸನ ಸಂಪುಟ – ೧, ಪುಟ – ೩೩೬, ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ

೩೬. ದೇವರಕೊಂಡಾರೆಡ್ಡಿ, (ಸಂ), ೧೯೯೯, ಕೊಪ್ಪಳ ಜಿಲ್ಲಾ ಶಾಸನ ಸಂಪುಟ – ೨, ಪುಟ – ೨೨೨, ೨೨೯, ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ

೩೭. SII, XI -1, p - 161

೩೮. SII, XVIII, p - 69

೩೯. ಕಲಬುರ್ಗಿ ಎಂ.ಎಂ., ೧೯೮೮, ಮಹಾಮಾರ್ಗ – ೨, ಪುಟ – ೩೧೩, ಕರ್ನಾಟಕ ಬುಕ್ ಏಜನ್ಸಿ, ಬೆಂಗಳೂರು

೪೦. SII, XVII, p - 69, 152

೪೧. EI, XXXIII, p - 131, 133

೪೨. ದೇವರಕೊಂಡಾರೆಡ್ಡಿ, (ಸಂ), ೨೦೦೬, ಪೂರ್ವೋಕ್ತ, ಪುಟ – ೩೩೭, ೩೩೯

೪೩. ದೇವರಕೊಂಡಾರೆಡ್ಡಿ, (ಸಂ), ೨೦೦೬, ಅದೇ, ಪುಟ – ೩೩೬

೪೪. ದೇವರಕೊಂಡಾರೆಡ್ಡಿ, (ಸಂ), ೨೦೦೬, ಅದೇ, ಪುಟ – ೩೩೪, ೩೩೫

೪೫. ದೇವರಕೊಂಡಾರೆಡ್ಡಿ, (ಸಂ), ೨೦೦೬, ಅದೇ, ಪುಟ ೩೩೯, ೩೪೦

೪೬. ಶಾಸ್ತ್ರೀ ಎ.ಕೆ., ೨೦೦೬, ಪೂರ್ವೋಕ್ತ, ಪುಟ – ೧೫೦, ೧೫೧

೪೭. ಶಾಸ್ತ್ರೀ ಎ.ಕೆ., ೨೦೦೬, ಅದೇ, ಪುಟ – ೧೫೧, ೧೫೨

# ಅಧ್ಯಾಯ : ಮೂರು

## ಮಾತೃದೇವತೆಯ ಪರಿಕಲ್ಪನೆಯಲ್ಲಿ ಬಾದಾಮಿ ಬನಶಂಕರಿ

೩. ೧. ಪದನಿಷ್ಪತ್ತಿ

೩. ೨. ಆರಾಧಕರು

೩. ೩. ಮಾತೃದೇವತೆಗಳ ಆರಾಧನಾ ಹಿನ್ನೆಲೆ

೩. ೪. ಪ್ರಪಂಚದಲ್ಲಿ ಮಾತೃದೇತಾರಾಧನೆಯ ಪರಿಕಲ್ಪನೆ

೩. ೫. ಭಾರತದಲ್ಲಿ ಮಾತೃದೇವತಾರಾಧನೆಯ ಹಿನ್ನೆಲೆ

೩. ೬. ಸಾಂಸ್ಕೃತಿಕವಾಗಿ ಮಾತೃದೇವತಾರಾಧನೆಯ ಪ್ರಾಚೀನತೆ

೩. ೭. ಗ್ರಾಮದೇವತೆಯಾಗಿ ಬನಶಂಕರಿ

೩. ೮. ಶಿಷ್ಟದೇವತೆಯಾಗಿ ಬನಶಂಕರಿ

೩. ೯. ಬನಶಂಕರಿಯ ಸ್ವರೂಪ, ಭೌತಿಕ ಲಕ್ಷಣಗಳು

ಮಾನವ ವಿಕಾಸ ತೀರ ಪ್ರಾಚೀನ ಹಂತದಲ್ಲಿಯೇ ಆಗಿದೆ. ಈ ಹಂತದಲ್ಲಿಯೇ ಮಾತೃದೇವತೆಯ ಆರಾಧನೆ ಪ್ರಾರಂಭವಾಗಿರಬೇಕು. ಭೂಮಿಯಿಂದ ಪಡೆದ ಹಣ್ಣುಹಂಪಲು, ಗೆಡ್ಡೆಗೆಣಸು ಮತ್ತು ತಾಯಿಯಿಂದ ಪಡೆಯುವ ಸ್ತನ್ಯಪಾನಗಳಿಗೆ ಹೋಲಿಕೆಯನ್ನು ಕಂಡು, ತಾಯಿಯ ಕಲ್ಪನೆಯಿಂದ ಭೂಮಿಯನ್ನು ಪೂಜಿಸಲು ಮಾನವ ಪ್ರಾರಂಭಿಸಿರಬಹುದು. ಆದ್ದರಿಂದ ಶಕ್ತಿದೇವತೆಯಾದ ಬನಶಂಕರಿಯ ಆರಾಧನಾ ಅನನ್ಯತೆಯನ್ನು ಮಾತೃದೇವತೆಯ ಆರಾಧನಾ ಸ್ವರೂಪ ಮತ್ತು ಪರಿಕಲ್ಪನೆಗಳಲ್ಲಿ ವಿವೇಚಿಸುವುದು ಸೂಕ್ತವೆನಿಸುತ್ತದೆ.

ಭಾರತದ ಪ್ರತಿಯೊಂದು ಗ್ರಾಮಗಳಲ್ಲಿಯೂ ಪ್ರಾಚೀನ ಕಾಲದಿಂದ ಗ್ರಾಮದೇವತೆಗಳ ಆರಾಧನೆ ಇದೆ. ಹೀಗೆ ಪೂಜಿಸಲ್ಪಡುವ ದೇವತೆಗಳ ಅಸಂಖ್ಯಾತ. ಇಂತಹ ಅಗಣಿತವಾಗಿ ಕಂಡುಬರುವ ದೇವತೆಗಳಲ್ಲಿ ಬನದೇವಿಯೂ ಒಬ್ಬಳಾಗಿದ್ದಾಳೆ. ಈ ದೇವಿಯನ್ನು ವಿಭಿನ್ನ ರೂಪಗಳಲ್ಲಿ ಬೇರೆ ಬೇರೆ ಹೆಸರಿನಿಂದಲೂ ಆರಾಧಿಸಲಾಗುತ್ತದೆ. ಹರಿಹರ ಕವಿಯ ಶಂಕರದಾಸಿಮಯ್ಯ ರಗಳೆ, ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರ ಎಂಬ ಕೃತಿಗಳಲ್ಲಿ ಬಾದುಮಯ್ಯ ಎಂದು, ನಯಸೇನನ ಧರ್ಮಾಮೃತದಲ್ಲಿ ಬನದಬ್ಬೆ ಎಂದು, ಶಿವಕೋಟಾಚಾರ್ಯರ ವಡ್ಡಾರಾಧನೆಯ ಕಾರ್ತಿಕ ಋಷಿಯ ಕಥೆಯಲ್ಲಿ ಬಾದುಬ್ಬೆಯ ಪರ್ವ ಹೀಗೆ ಉಲ್ಲೇಖ ಹೊಂದಿವೆ. ಹಾಗೆಯೇ ವ್ಯಕ್ತಿನಾಮವಾಗಿ, ಪರ್ವನಾಮವಾಗಿ ಪ್ರಾಚೀನ ಕೃತಿಗಳಲ್ಲಿ ಉಲ್ಲೇಖಗೊಂಡಿರುವುದು ವಿಶೇಷ. ವಡ್ಡಾರಾಧನೆಯ ಕಾರ್ತೀಕ ಋಷಿಯ ಕಥೆಯಲ್ಲಿ ಉಲ್ಲೇಖವಾಗಿರುವ ಬಾದುಬ್ಬೆಯ ಪರ್ವವು ವಿಶೇಷವಾಗಿ ಅಂದು ಜೈನರಲ್ಲಿ ಆಚರಣೆಯಿತ್ತೆಂಬುದು ಗಮನಾರ್ಹ. ಅಂದರೆ ಜೈನರು ಬನದೇವಿಯ ಆರಾಧಕರಾಗಿದ್ದರೆಂದು ತಿಳಿಯಬಹುದು.

## ೩. ೧. ಪದನಿಷ್ಪತ್ತಿ

ಪ್ರಾಚೀನ ಕಾವ್ಯ ಮತ್ತು ಶಾಸನಗಳಲ್ಲಿ ಹಲವು ನಾಮಗಳಿಂದ ಉಲ್ಲೇಖವಿರುವ ಈ ದೇವಿಯ ನಾಮಗಳ ಕುರಿತು ವಿದ್ವಾಂಸರು ಚರ್ಚಿಸಿದ್ದಾರೆ. ಅದರ ಬಗ್ಗೆ ಡಾ. ಎಂ.ಎಂ. ಕಲಬುರ್ಗಿ, ಡಾ. ಎಂ. ಚಿದಾನಂದಮೂರ್ತಿ, ಪಿ.ಬಿ. ದೇಸಾಯಿ, ಡಾ. ಬೆಟಗೇರಿ ಕೃಷ್ಣಶರ್ಮ, ಡಾ. ಡಿ.ಎಲ್. ನರಸಿಂಹಾಚಾರ್, ಡಾ. ವಾಸುದೇವ ಬಡಿಗೇರ, ಡಾ. ಆರ್.ಎನ್. ಗುರುವ, ಡಾ. ಶೀಲಾಕಾಂತ ಪತ್ತಾರ ಇವೆಲ್ಲರೂ ತಮ್ಮ ಲೇಖನಗಳಲ್ಲಿ ಚರ್ಚಿಸಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆ ಪ್ರಕಾರ ಬಾದುಂಬೆ, ಬಾದುಬ್ಬೆ, ಬನದಬ್ಬೆ, ಬಾಡುಬ್ಬೆ, ಬಾಳುಬೆ, ಬಾದಾಮೆ, ಬಾದುವೆ, ಬಾದುಮಯ್ಯ, ಬನದೇವಿ, ಬನಶಂಕರಿ, ಶಾಕಂಭರೀ ಎಂಬ ಹೆಸರಿನ ಶಬ್ದ ನಿಷ್ಪತ್ತಿಯನ್ನು ಕುರಿತು ಹೀಗೆ ಊಹಿಸಬಹುದು.

ಬಾದುಬ್ಬೆ-ಬಾಡುಬ್ಬೆ-ಬನದಬ್ಬೆ ಎಂಬ ಹೆಸರುಗಳಿರುವುದರಿಂದ ಸಸ್ಯ ಸಂಬಂಧಿ ದೇವತೆಯೆಂಬುದು ಸ್ಪಷ್ಟವಾಗುತ್ತದೆ. 'ಬಾಡು' ಪದಕ್ಕೆ ಕಾಯಿಪಲ್ಲೆ (ತರಕಾರಿ) ಎಂಬ ಅರ್ಥವುಂಟು. ಹಾಗೆಯೇ ಬಾಡೂಟ ಎಂದು ಮಾಂಸಹಾರದ ಊಟಕ್ಕೂ ಕರೆಯವುದು ರೂಢಿಯಲ್ಲಿದೆ. ಆದರೆ ಉತ್ತರ ಕರ್ನಾಟಕ ಭಾಗದಲ್ಲಿ ಕಾಯಿಪಲ್ಲೆಗೆ ಬಾಡು ಎಂಬ ಪದವನ್ನು ಬಳಸುತ್ತಾರೆ. ಸಾಮಾನ್ಯವಾಗಿ ಜನಪದ ಸ್ತ್ರೀ ದೇವತೆಗಳು ಮಾಂಸಾಹಾರಿಗಳು. ಆದರೆ ಈ ದೇವತೆ ಶಾಖಾಹಾರಿಯಾದರಿಂದ ಜನಪದರು ಮಿಕ್ಕ ಮಾಂಸಾಹಾರಿ ದೇವತೆಗಳಿಂದ ಪ್ರತ್ಯೇಕಿಸಲು ಬಾಡುಂಬೆ ಅಥವಾ ಬಾಡುಂಬಬ್ಬೆ (ಬಾಡು+ಎಂಬ+ಅಬ್ಬೆ) ಎಂದು ಕರೆದಿರಬೇಕು. ಈ ರೂಪವೇ ಸವೆದು ಬಾಡುಂಬೆ, ಬಾಳುಬೆ, ಬಾದುಬ್ಬೆ ಎಂದು ರೂಢಿಸಿಕೊಂಡಿರಬಹುದು. ನಂತರ ಇದು ಡ, ಳ ವ್ಯತ್ಯಾಸ ನಿಯಮದ ಪ್ರಕಾರ ಒಂದೆಡೆ ಬಾಳುಂಬೆ>ಬಾಳುಬೆ ಎಂದೂ, ಬಾಡುಂಬೆ-ಬಾದುಂಬೆ ಎಂದು ರೂಪ ತಾಳಿರಬಹುದು. ಹಾಗೆಯೇ ಬಾದುಮಯ್ಯ ಎಂಬುದನ್ನು ಬಾಡು+ಉಂಬ+ಅಯ್ಯ = ಬಾಡುಂಬಯ್ಯ, ಬಾಡುಮ್ಮಯ್ಯ, ಬಾದುಮ್ಮಯ್ಯ, ಬಾದುಮಯ್ಯಿ ಎಂದೂ ಬಿಡಸಬಹುದಾದ ಕಾರಣ ಬಾದುಮಯ್ಯ ಎಂಬ ಪದದ ಅಂಶ ಉಳಿದುಕೊಂಡಿದೆ ಎನ್ನಬಹುದು.[೧]

ಬನದ ಮಧ್ಯೆದಲ್ಲಿ ನೆಲೆಸಿರುವುದರಿಂದ ಬನ ಅಥವಾ ವನದೇವಿಯಾಗಿರುವಳು. ಶಂಕರ ಪತ್ನಿಯಾಗಿದ್ದರಿಂದ ಶಂಕ್ರಿಯಾಗಿ (ಶಂಕರಿ), ಸ್ಕಂದಪುರಾಣದಲ್ಲಿ ಉಲ್ಲೇಖವಾಗಿರುವಂತೆ ನೂರಾರು ವರ್ಷಗಳಿಂದ ಜನರು ಬರಗಾಲದಿಂದ ತತ್ತರಿಸಿ, ಹಸಿವಿನಿಂದ ಬಳಲುತ್ತಿದ್ದರು. ಅಂತಹ ಸಮಯದಲ್ಲಿ ಬನಶಂಕರಿಯು ಪ್ರತ್ಯಕ್ಷಳಾಗಿ ತನ್ನ ದೇಹದ ಶಾಖದಿಂದ ಬಾಡು (ಕಾಯಿಪಲ್ಲೆ) ಉತ್ಪತ್ತಿಸಿ, ಜನರನ್ನು ಸಂತೈಸಿದಳು. ಈ ಹಿನ್ನೆಲೆಯಿಂದ ಈಕೆಗೆ ಶಾಕಂಭರೀ ಎಂಬ ಹೆಸರು ಬಂದಿದೆ ಎಂದು ಸ್ಥಳೀಯರ ಹೇಳಿಕೆಯಾಗಿದೆ. ಹೀಗೆ ಕಾವ್ಯ-ಶಾಸನ, ಶಿಲ್ಪಗಳಿಂದ ಬಾದುಬ್ಬೆ, ಬಾಡುಬ್ಬೆ, ಬಾಳುವೆ, ಬನದ ಬಳಾರಿ, ಬಾದುಂಬೆ, ಬಾದುಮೆ, ಬಾದುಮಯ್ಯ ಇಷ್ಟು ರೂಪಗಳಲ್ಲಿ ಸಿಗುವ ಈ ಪದಗಳು ವ್ಯಕ್ತಿ, ಪರ್ವ, ಸ್ಥಳನಾಮುಗಿರುವುದು ವಿಶೇಷ.

## ೩. ೨. ಆರಾಧಕರು

ಬನಶಂಕರಿ ದೇವಿಯನ್ನು ಎಲ್ಲಾ ವರ್ಗದವರು ಆರಾಧಿಸುತ್ತಾರೆ. ಆದರೆ ದಲಿತ ವರ್ಗದ ಸಂಖ್ಯೆ ಹೆಚ್ಚು. ವಿಶೇಷವೆಂದರೆ ಜೈನರು, ಮುಸ್ಲಿಂ ಸಮುದಾಯದವರು ದೇವಿಯ ಆರಾಧಕರಾಗಿರುವರು. ಈ ಸಮುದಾಯದವರು ದೇವಿಯ ಆರಾಧನೆಯನ್ನು ಪೂರ್ವದಲ್ಲಿ ತಮ್ಮ ಹಿರಿಯರು ಮಾಡಿಕೊಂಡು ಬಂದಿದ್ದರಿಂದ ತಾವು ಕೂಡ ನಡೆಸಿಕೊಂಡು ಬಂದಿರುವುದು. ಅಥವಾ ಈ ಪರಿಸರದಲ್ಲಿರುವುದರಿಂದ ದೇವಿಯ ಆರಾಧನೆಯನ್ನು ಮುಂದುವರೆಸಿಕೊಂಡು ಬಂದಿರುವುದನ್ನು ಗಮನಿಸಬಹುದು. ಈ ಪರಿಸರದಲ್ಲಿ ರಾಷ್ಟ್ರಕೂಟರ ಅವಧಿಯ ಜೈನ ಮತವು ಅಭಿವೃದ್ಧಿ ಕಂಡಿದ್ದರಿಂದ ಇಲ್ಲಿರುವ ಹಿಂದೂಗಳು ಜೈನ ಮತಕ್ಕೆ ಮತಾಂತರಗೊಂಡಿರುವ ಸಾಧ್ಯತೆಗಳಿವೆ. ಹಾಗೆಯೇ ಮುಸ್ಲಿಂ ಪ್ರಭಾವದಿಂದ ಬಲವಂತವಾಗಿ ಅನೇಕ ಹಿಂದೂಗಳು ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡಿರಬಹುದು. ಹೀಗೆ ಮತಾಂತರಗೊಂಡ ಹಿಂದೂಗಳು ಕೂಡ ಪೂರ್ವದಲ್ಲಿ ತಮ್ಮ ಹಿರಿಯರು ಮಾಡಿಕೊಂಡು ಬಂದಿರುವ ದೇವಿಯ ಆರಾಧನೆಯನ್ನು ಮಾಡುತ್ತಿರುವ ಸಾಧ್ಯತೆಗಳಿವೆ. ಹಾಗಾಗಿ ಈ ದೇವಿಯ ಆರಾಧನೆಯಲ್ಲಿ ಎಲ್ಲ ವರ್ಗದವರ ಭಾಗವಹಿಸುವಿಕೆಯು ಸಾಮಾಜಿಕ ಸಮಾನತೆಯ ಅಂಶವನ್ನು ಸೂಚಿಸುತ್ತದೆ.

ದೇವಿಗೆ ಇಲ್ಲಿಯ ಬ್ರಾಹ್ಮಣರು ಅರ್ಚಕರಾಗಿದ್ದಾರೆ. ಈ ಬ್ರಾಹ್ಮಣರ ಕುಲದೈವ ಮೈಲಾರನಾದರೂ ಕೂಡ ಬನಶಂಕರಿ ದೇವಿಯ ಅರ್ಚಕರಾಗಿರುವುದು ಗಮನಾರ್ಹ. ಈ ಅರ್ಚಕರು ತಮ್ಮ ಮನೆಗಳಲ್ಲಿ ಮೈಲಾರನನ್ನು ಇಂದಿಗೂ ಆರಾಧಿಸುತ್ತಿರುವುದನ್ನು ಕಾಣಬಹುದು. ಅಲ್ಲದೆ ಅರ್ಚಕ ವರ್ಗದವರಲ್ಲಿ ಮೈಲಾರನ ಹೆಸರನ್ನು ತಮ್ಮ ಕುಟುಂಬದ ಸದಸ್ಯರಿಗೆ ಇಟ್ಟಿರುವುದನ್ನು ಗಮನಿಸಬಹುದಾಗಿದೆ. ಹಿಂದೆ ಮೈಲಾರಿ ಎಂಬ ಅರ್ಚಕರು ಈ ಪರಿಸರದಲ್ಲಿ ಜನಪ್ರಿಯರಾಗಿದ್ದನ್ನು ಸ್ಥಳೀಯರಿಂದ ತಿಳಿದುಕೊಳ್ಳಲಾಗಿದೆ.

## ೩. ೩. ಮಾತೃದೇವತೆಗಳ ಆರಾಧನಾ ಹಿನ್ನೆಲೆ

ವಿಶ್ವದ ಮಾನವನ ಸುದೀರ್ಘ ಚರಿತ್ರೆಯು ಅನೇಕ ಅವಸ್ಥೆಗಳನ್ನು ದಾಟಿ ಮುಂದೆ ಸಮಸ್ತ ಪೃಥ್ವಿಯಲ್ಲಿ ಪಸರಿಸಿದೆ. ಮಾನವ ಬುದ್ಧಿ ವಿಕಾಸಗೊಳ್ಳುತ್ತಿದ್ದಂತೆ ತನಗೆ ಅನುಕೂಲವಾಗುವಂತಹ ಪ್ರದೇಶಗಳ ಹುಡುಕಾಟವನ್ನು ಆರಂಭಿಸಿದ. ಹೀಗೆ ತನ್ನ ಹುಡುಕಾಟವನ್ನು, ವಲಸೆಯ ಬದುಕನ್ನು ನಿರಂತರವಾಗಿ ಮುಂದುವರೆಸಿದ. ಇಂತಹ ವಲಸೆಯ ಜೀವನದಲ್ಲಿ ಪ್ರಕೃತಿಯಲ್ಲಿ ಸಿಗುವ ಗೆಡ್ಡೆ-ಗೆಣಸುಗಳನ್ನು ತಿನ್ನಲು ಆರಂಭಿಸಿದ. ಹಾಗೆಯೇ ಕ್ರೂರ ಮೃಗಗಳಿಂದ ರಕ್ಷಣೆ ಪಡೆಯಲು ಹಾಗೂ ಮಳೆ, ಬಿಸಿಲು, ಚಳಿಯಿಂದ ರಕ್ಷಣೆಯನ್ನು ಪಡೆಯಲು ಕಲ್ಲಾಸರೆ, ಗುಹೆಗಳನ್ನು ಅವಲಂಬಿಸಿದನು. ಇಂತಹ ಗುಹೆಗಳಲ್ಲಿ ಅಂದು ಮಾನವನು ರಚಿಸಿರುವ ಚಿತ್ರಗಳು ಇಂದಿಗೂ ಅಸ್ತಿತ್ವದಲ್ಲಿವೆ. ಇವುಗಳಿಂದ ಅಂದಿನ ಮಾನವ ಜೀವನ ಚರಿತ್ರೆಯನ್ನು ಅರಿಯಲು ಸಹಾಯಕಾರಿಯಾಗಿದೆ.

ಮನುಷ್ಯನ ಜೀವನ ಕ್ರಮದಲ್ಲಿ ಬೆಂಕಿಯ ಆವಿಷ್ಕಾರ ಮಹತ್ತರ ಬದಲಾವಣೆಗೆ ಕಾರಣವಾಯಿತು. ಇದರಿಂದ ಬೇಟೆಯಾಡಿ ಪದಾರ್ಥಗಳನ್ನು ಸುಟ್ಟು ಅಥವಾ ಬೆಯಿಸಿದ ರುಚಿ ಅವನಿಗೆ ಬಲು ಪ್ರಿಯವಾಗಿದೆ. ಅಲ್ಲದೆ ಬೆಂಕಿಯ ಆವಿಷ್ಕಾರವು ಕಾಡು ಮೃಗಗಳಿಂದ ತನ್ನ ರಕ್ಷಣೆಯೂ ಆಯಿತು. ಹಾಗೆಯೇ ಪ್ರಾಣಿಗಳ ಚರ್ಮಗಳಿಂದ ತನ್ನ ದೇಹವನ್ನು ಮಳೆ, ಬಿಸಿಲಿನಿಂದ ರಕ್ಷಣೆ ಮಾಡಿಕೊಂಡನು. ಹೀಗೆ ತನ್ನ ಸುತ್ತಲೂ ಪರಿಸರದಲ್ಲಿ ಸಿಗುವ ಎಲ್ಲವನ್ನು ಬಳಸತೊಡಗಿದನು. ಪರಿಸರದ ಎಲ್ಲವೂ ತನಗೆ ಅನುಕೂಲವಾದ್ದರಿಂದ ಅವುಗಳನ್ನು ದೈವೀ ಭಾವದಿಂದ ಕಾಣಲು ಆರಂಭಿಸಿದನು. ಹಾಗೆಯೇ ಕಾಡು, ಪ್ರಾಣಿಗಳಿಂದ ತನಗೆ ರಕ್ಷಣೆಯನ್ನು ನೀಡಿದ ಗುಹೆಗಳನ್ನು ದೈವೀಭಾವದಿಂದ ಕಂಡು ಅದು ತಾಯಿಯ ಗರ್ಭವೆಂದು ತಿಳಿದನು.[೨] ಮನುಷ್ಯನ ಈ ಗುಹೆಗಳು ಮುಂದೆ ಗುಹಾ ದೇವಾಲಯಗಳ ಆರಾಧನೆಯ ಕಲ್ಪನೆಗೆ ಕಾರಣವಾಗಿರಬಹುದು.

ಮನುಷ್ಯನು ಗುಹೆಗಳಲ್ಲಿ ವಾಸಿಸುತ್ತಿದ್ದ ಸಮಯದಲ್ಲಿ ಅವನು ಕಂಡು ಬೆರಗಾದ ಹಲವಾರು ಪ್ರಾಣಿಗಳ, ಪ್ರಕೃತಿಯ ಚಿತ್ರಗಳನ್ನು ಬಿಡಿಸಿರುವನು. ಹಾಗೆಯೇ ಆ ಚಿತ್ರಗಳಿಗೆ ನೈಜತೆಯನ್ನು ನೀಡುವುದಕ್ಕಾಗಿ ನಿಸರ್ಗ ನಿರ್ಮಿತ ಬಣ್ಣಗಳನ್ನು ಲೇಪಿಸಿದ್ದಾನೆ. ಇಂತಹ ಚಿತ್ರಗಳಿಂದ ಆತನ ಮನಸ್ಥಿತಿಯನ್ನು ತಿಳಿಯಲು ಸಾಧ್ಯವಾಗಿದೆ. ಗುಹೆ ಚಿತ್ರಗಳಲ್ಲಿ ಸಾಮಾನ್ಯವಾಗಿ ಕಾಣುವ ಚಿತ್ರಗಳೆಂದರೆ, ಪ್ರಾಣಿ ಹಾಗೂ ಸ್ತ್ರೀ. ಇದರಿಂದ ಅಂದಿನ ಮಾನವ ಜೀವನದಲ್ಲಿ ಇವೆರಡು ಅವಿಭಾಜ್ಯಗಳಿದ್ದವು ಎಂದು ತಿಳಿಯಬಹುದು. ಪ್ರಾಣಿಯು ತನ್ನ ಪ್ರಮುಖ ಆಹಾರವಾಗಿಯೂ, ಸ್ತ್ರೀಯು ಕುಟುಂಬದ ಮುಂದುವರಿಕೆಗೆ ಅಗತ್ಯವಾಗಿತ್ತು. ಆದ್ದರಿಂದ ಇವೆರಡನ್ನು ಪೂಜ್ಯನೀಯ ಭಾವನೆಯಿಂದ ಕಾಣಲಾರಂಭಿಸಿದನು.

ಪ್ರಕೃತಿಯ ವೈಪರೀತ್ಯಗಳಿಂದ ಆತನ ಯೋಚನಾಧಾರೆಯು ಬೆಳೆದು, ಮುಂದೆ ತನ್ನ ಜೀವನ ಕ್ರಮದಲ್ಲಿ ಸಾಕಷ್ಟು ಬದಲಾವಣೆಗಳಾದವು. ಈ ಹಂತದಲ್ಲಿ ಈತನಿಗೆ ಬೆಚ್ಚು ಬೀಳಿಸಿದ ವಿಷಯ ತನ್ನ ಜೊತೆಗಾರರ ಸಾವು. ಕೆಲವೊಮ್ಮೆ ಕಾಲು ಜಾರಿ ಬಿದ್ದು ಅಥವಾ ಸಿಡಿಲು ಬಡಿದು ಅಥವಾ ಇತರ ಆಕಸ್ಮಿಕಗಳಿಗೆ ಸಿಕ್ಕು ಮರಣ ಹೊಂದಿರಬಹುದು. ಹೀಗೆ ಸತ್ತವರು ಪ್ರೇತಾತ್ಮಗಳಾಗಿ ಜನರಲ್ಲಿ ಭಯಭಕ್ತಿಯನ್ನು ಹುಟ್ಟಿಸಿ ಅವರಿಂದ ಪೂಜೆಯನ್ನು ಪಡೆಯಬಹುದು.[೩] ಅಥವಾ ಸತ್ತವರು ಮರಳಿ ಬರಬಹುದೆಂದು ಸತ್ತವನ ದೇಹದ ಜೊತೆ ಅವನ ದಿನನಿತ್ಯ ಜೀವನದ ವಸ್ತುಗಳನ್ನು ಇಟ್ಟಿರಬಹುದು. ಹೀಗೆ ಸತ್ತವರೇ ಮುಂದೆ ದೈವ ಶಕ್ತಿಗಳಾಗಿ ಆರಾಧನೆಗೊಳ್ಳುತ್ತಿವೆ.

ಮನುಷ್ಯನು ಬೇಟೆ ಸಂಸ್ಕೃತಿಯಿಂದ ಮುಂದೆ ಕೃಷಿ ಅವಿಷ್ಕಾರ ಮಾಡಿದ ನಂತರ ವಲಸೆ ಜೀವನ ಮುಕ್ತವಾಯಿತು. ನವಶಿಲಾಯುಗದ ಈ ಹಂತದಲ್ಲಿ ಮಾನವನು ಒಂದೆಡೆ ನಿಲ್ಲಲು ಸಾಧ್ಯವಾಗಿದೆ. ಹಾಗೂ ಕೃಷಿ ಅವಿಷ್ಕಾರಕ್ಕೆ ಹೆಣ್ಣೇ ಕಾರಣವಾಗಿರುವುದು ಗಮನಾರ್ಹ. ಮನುಷ್ಯ ಪ್ರಥಮ ಆರ್ಥಿಕ ಚಟುವಟಿಕೆಯಾದ ಸಂಗ್ರಹಣೆಯ ಹಂತದಲ್ಲಿ ಸ್ತ್ರೀಯ ಪಾತ್ರ

ಪ್ರಧಾನವಾಗಿತ್ತು. ಈಕೆಯು ಮಕ್ಕಳನ್ನು ಹೇರುವುದು ಮಾತ್ರವಲ್ಲದೆ ಪಾಲನೆ ಮತ್ತು ಪೋಷಣೆಯ ಹೊಣೆ ಆಕೆಯಾಗಿದೆ. ಜೊತೆಗೆ ಆಹಾರ ಸಂಗ್ರಹಣೆ ಮತ್ತು ಉತ್ಪಾದನೆಯು ಸ್ತ್ರೀಯ ಕರ್ತವ್ಯಗಳಾಗಿದ್ದವು.

ದೇವರ ಮಾತೃತ್ವ ಮತ್ತು ಪ್ರಕೃತಿಯ ದೈವ ಪರಿಕಲ್ಪನೆಗಳು ಪ್ರಪಂಚದ ಪ್ರಾಚೀನ ಜನರಲ್ಲಿ ಸಾಕಷ್ಟು ಸಾಮಾನ್ಯವಾಗಿದ್ದವು. ಹಾಗೂ ಭಾರತದಲ್ಲಿ ವ್ಯಾಪಕವಾಗಿ ಹರಡಿದ್ದು, ಅವು ಆಳವಾಗಿ ಬೇರೂರಿವೆ. ಪ್ರತಿಯೊಂದು ಗ್ರಾಮದಲ್ಲಿಯೂ ಮಾತೃದೇವತೆಯು ಗ್ರಾಮದೇವತೆಯಾಗಿ ಪ್ರತಿನಿಧಿತಳಾಗಿದ್ದಾಳೆ. ಆಕೆಯನ್ನು ಮಾತಾ, ಅಂಬಾ, ಅಮ್ಮ, ಕಾಲೀ, ಕರಾಲೀ ಮುಂತಾದ ವಿವಿಧ ಹೆಸರುಗಳಿಂದ ಕರೆಯುವುದು ರೂಢಿ. ಇವು ಕೆಲವೊಮ್ಮೆ ರೌದ್ರ ರೂಪದಲ್ಲಿ ಮತ್ತೆ ಕೆಲವೊಮ್ಮೆ ದುಷ್ಟಶಕ್ತಿಗಳನ್ನು ನಾಶಪಡಿಸುವ, ಫಲಶಕ್ತಿ ನೀಡವ ಈ ಮೊದಲಾದ ಕೆಲಸಗಳನ್ನು ಮಾಡುವ ದೇವತೆಗಳಾಗಿ ಕಂಡುಬರುತ್ತವೆ. ಮಾತೃ ಆರಾಧನೆಯು ಭಾರತದಲ್ಲಿ ಸಿಂಧೂ ನಾಗರೀಕತೆಯಲ್ಲಿ ದೊರೆತ ಅವಶೇಷಗಳಿಂದ ದೃಢಪಟ್ಟಿದೆ. ಪುರಾತತ್ವ ಆಧಾರಗಳಿಂದ ತಿಳಿದ ಮಾಹಿತಿಯ ಪ್ರಕಾರ ಮಾತೃ ಆರಾಧನೆ ಅಥವಾ ಶಕ್ತಿ ಪರಂಪರೆಯು ಆರ್ಯರಿಗಿಂತ ಮೊದಲೇ ಭಾರತದಲ್ಲಿ ಇತ್ತು ಎಂದು ತಿಳಿಯಬಹುದು.[೪]

ಗಂಡು ಬೇಟೆಗೆ ಹೋದರೆ, ಹೆಣ್ಣು ಆಹಾರ ಸಂಗ್ರಹಣೆ, ಕುಟುಂಬದ ನಿರ್ವಹಣೆ ಮಾಡುತ್ತಿದ್ದಳು. ಕುಟುಂಬದಲ್ಲಿ ಆಕೆಗೆ ಈ ಹಿನ್ನೆಲೆಯಲ್ಲಿ ಪ್ರಮುಖ ಸ್ಥಾನ ದೊರೆಯಿತು. ಹಾಗೆಯೇ ಆಕೆಯಲ್ಲಿ ವಿಶಿಷ್ಟ ಚೈತನ್ಯ ಶಕ್ತಿಯಿರುವುದರಿಂದ 'ಶಕ್ತಿ' ಸ್ವರೂಪದಲ್ಲಿ ಆರಾಧಿಸಲು ಆರಂಭಿಸಿದ್ದಾರೆ. ಆದ್ದರಿಂದ ಕೃಷಿಯ ಹಂತದಲ್ಲೇ ಮಾತೃ ಆರಾಧನೆ ಉಗಮವಾಗಿದೆ. ಮಾತೃಪ್ರಧಾನ ವ್ಯವಸ್ಥೆಯು ವಿಶ್ವದ ಎಲ್ಲಾ ಭಾಗಗಳಲ್ಲಿ ಗಮನಿಸಬಹುದು. ಆದರೆ ಮಾತೃ ಆರಾಧನೆಯ ಪ್ರಮಾಣ ವಿಶ್ವದ ಇತರೆಡೆಗಿಂತ ಭಾರತದಲ್ಲಿ ಅಧಿಕವಾಗಿದೆ ಎನ್ನಬಹುದು.

ಪ್ರಪಂಚದ ಎಲ್ಲಾ ಸಂಸ್ಕೃತಿಯಲ್ಲಿರುವ ಮಾತೃ ಆರಾಧನೆಯ ಧರ್ಮವು ಒಂದೇ ಉದ್ದೇಶವನ್ನು ಹೊಂದಿದೆ. ಆದರೆ ಆಯಾ ಪ್ರದೇಶಕ್ಕೆ ಅನುಗುಣವಾಗಿ ವಿಭಿನ್ನ ಲಕ್ಷಣಗಳನ್ನು ಹೊಂದಿರುವುದು ಗಮನಾರ್ಹ.

### ೩. ೪. ಪ್ರಪಂಚದಲ್ಲಿ ಮಾತೃದೇವತಾರಾಧನೆಯ ಪರಿಕಲ್ಪನೆ

ಮಾತೃದೇವತಾರಾಧನೆಯನ್ನು ಭಾರತ ಅಲ್ಲದೆ ಪ್ರಪಂಚದ ನಾನಾ ಭಾಗಗಳಲ್ಲಿ ಆರಾಧಿಸುವುದನ್ನು ಗಮನಿಸಬಹುದು. ಇಡೀ ಜಗತ್ತಿನಲ್ಲಿ ಪುರುಷ ಪ್ರಧಾನ ವ್ಯವಸ್ಥೆಗಿಂತ ಮಾತೃದೇವತೆಯ ಕಲ್ಪನೆ ಪ್ರಾಚೀನವೆಂಬುದರಲ್ಲಿ ಸಂಶಯವಿಲ್ಲ. ಪ್ರಾಗಿತಿಹಾಸ ಕಾಲದ ಜನವಾಸ್ತವ್ಯದ ನೆಲೆಗಳ ಉತ್ಖನನಗಳನ್ನು ಗಮನಿಸಿದಾಗ ಇದು ಖಚಿತವೆನಿಸುತ್ತದೆ. ಯುರೋಪಿನ ಶಿಲಾಯುಗದ ಉತ್ಖನನಗಳಲ್ಲಿ ಬಹು ಪ್ರಾಚೀನ ಮಣ್ಣು ಮತ್ತು ಕಲ್ಲಿನ

ಪ್ರತಿಮೆಗಳಲ್ಲಿ ಮಾತೃದೇವತೆಗಳೇ ಹೆಚ್ಚಾಗಿವೆ. ಇವು ಸುಮಾರು ಮೂವತ್ತು ಸಾವಿರ ವರ್ಷದ ಹಿಂದೆ ನಿರ್ಮಾಣವಾದವೆಂದು ಪುರಾತತ್ವ ವಿದ್ವಾಂಸರ ಅಭಿಪ್ರಾಯ.[೫]

ಮೆಡಿಟೇರಿಯನ್ ಪ್ರದೇಶದ ಪ್ರಾಚೀನ ಜನಪದ ಸಂಸ್ಕೃತಿಯಲ್ಲಿಯೂ ಮಾತೃದೇವತೆಗೆ ಪ್ರಮುಖ ಸ್ಥಾನವಿತ್ತು. ಅಯರ್ಲೆಂಡ್‌ನ ಸಂಸ್ಕೃತಿಯ ಅವಷೇಶಗಳಲ್ಲಿ ಮಾತೃ ಆರಾಧನೆಯ ಕುರುಹುಗಳಿವೆ. ಅಮೇರಿಕಾದ ರೆಡ್ ಇಂಡಿಯನ್‌ರ ಸಂಸ್ಕೃತಿಯಲ್ಲಿ ಮಾತೃದೇವತೆ ಪೂಜನೀಯಳಾಗಿದ್ದಳು. ಆಫ್ರಿಕಾದ ಪ್ರಾಚೀನ ಸಂಸ್ಕೃತಿಯಲ್ಲಿ ಭೂಮಿತಾಯಿಯನ್ನು ಮಾತೃದೇವತೆಯಂದು ಕಲ್ಪಿಸಿಕೊಂಡು ಪೂಜಿಸುತ್ತಿದ್ದರು. ಇವುಗಳಿಂದ ಮೊದಲ್ಗೊಂಡು ಮುಂದಿನ ಭಾರತದ ಎಲ್ಲ ಬುಡಕಟ್ಟುಗಳಲ್ಲಿ ತಾಯಿಯ ಪೂಜೆ ಸಾರ್ವತ್ರಿಕವಾಗಿದೆ.

ಗೀಕ್‌ರ ಧಾರ್ಮಿಕ ಸಂಸ್ಕೃತಿಯಲ್ಲಿ ದೇವತೆಯರದು ಪ್ರಮುಖ ಸ್ಥಾನವಿದೆ. ನಮ್ಮಲ್ಲಿರುವ ಅರ್ಧನಾರೀಶ್ವರ ದೇವತೆಯಿದ್ದಂತೆ ಅವರಲ್ಲಿ ಉಭಯರಾಗಿ ದೇವತೆಗಳಿದ್ದಾರೆ. ಆರ್ಯಡಿನ್, ಆಯ್ಯೋನಿನ್, ಡಯೋಯಸ್ ಇವೆಲ್ಲ ಗ್ರೀಕ್‌ರ ಸಸ್ಯದೇವತೆಗಳಾಗಿವೆ. ಇಲ್ಲ ಒಂದೊಂದು ಕಾರಣಕ್ಕಾಗಿ ಒಂದೊಂದು ದೇವತೆ ಹುಟ್ಟಿಕೊಂಡವು. ಅದಕ್ಕಾಗಿ ನಮ್ಮಲ್ಲಿಗಿಂತ ಅವರಲ್ಲಿ ಆದಿದೇವತೆಗಳ ಸಂಖ್ಯೆ ಹೆಚ್ಚಾಗಿವೆ. ಸೆಯುನ್ (ಜೀವೆನ್) ಎಂಬ ದೇವತೆ ಗಡ್ಡಧಾರಿಯಾಗಿದ್ದರೂ ಆರು ಮೊಲೆಗಳು, ಹರ್ಕ್ಯುಲೆಸ್ ಗಂಡುದೇವರಿಗೆ ಸ್ತ್ರೀ ದೇವತೆಯ ವೇಷವಿದೆ. ಸೋಪುಸಿನಲ್ಲಿ ಅಪ್ರ್ಯೋಡಾಯ ಹೆಣ್ಣು ದೇವತೆಗೆ ಗಡ್ಡವಿದೆ. ಅದರಲ್ಲಿ ಡಯೋನಿನ್ ಹೆಣ್ಣು, ಗಂಡು ಎರಡು ದೇವತೆಯಾಗಿದ್ದಾಳೆ. ಅಸ್ರೋಮಿಕ್ (ಅಸ್ರೋಮಿಕ್), ತಮಡರ (ಡೊಮೆತೆರ್), ಓಸಿನ್ (ಓಸಿನ್) ಇಲ್ಲಿಯ ಪ್ರಸಿದ್ಧ ದೇವತೆಗಳಾಗಿದ್ದಾರೆ.[೬] ಎಂದು ಮಾತೃಸ್ವರೂಪವನ್ನು ಭಿನ್ನ ಭಿನ್ನವಾಗಿ ನಿರ್ವಾಚಿಸಲಾಗಿದೆ.

ಮಾನವಶಾಸ್ತ್ರಜ್ಞರ ಅಭಿಪ್ರಾಯದಂತೆ ಮಾತೃಪ್ರಧಾನ ವ್ಯವಸ್ಥೆಯ ಸಮಾಜಗಳು ತಮ್ಮ ದೇವರನ್ನು ಹೆಚ್ಚಾಗಿ ಮಾತೃಸ್ವರೂಪದಲ್ಲೇ ಕಾಣುತ್ತಿದ್ದರು. ಮಾನವ ಸಮಾಜ ವಿಕಾಸದ ಹಂತಗಳಲ್ಲಿ ಸಾಮಾನ್ಯವಾಗಿ ಮಾತೃಪ್ರಧಾನ ವ್ಯವಸ್ಥೆಯು ಪಿತೃಪ್ರಧಾನ ವ್ಯವಸ್ಥೆಗಿಂತ ಮೊದಲಿನದ್ದು. ಇಂತಹ ಧಾರ್ಮಿಕ ನಂಬುಗೆಯು ಈ ಭೂಮಿಯಲ್ಲಿ ಪೂರ್ಣರೂಪದ ಮಾನವನ ಉದಯದ ಜೊತೆಗೆ ಹುಟ್ಟಿಬಂದದ್ದು. ರೋಮ್, ಫ್ರಾನ್ಸ್, ಜರ್ಮನ್ ದೇವತೆಗಳಲ್ಲೂ ಮಾತೃದೇವತೆಯ ಕಲ್ಪನೆ ಇದೆ. ಫ್ರಾನ್ಸಿನ ರೋರ್ದ ಕಣಿವೆಯ ಪುರಾತನರು ತಾವು ಬೇಟೆಯಾಡುವ ಮೃಗಗಳ ಸಂತಾನ ಹೆಚ್ಚಲಿ ಎಂದು ಬೇಡಿಕೊಳ್ಳುತ್ತಾರೆ. ಆ ಪ್ರದೇಶದಲ್ಲಿ ಮರದಿಂದ ಮಾಡಿದ ದೇವತಾ ಶಿಲ್ಪವು ನಗ್ನವಾಗಿದೆ. ಜರ್ಮನ್‌ನಲ್ಲಿ ನರಕದ ಬಾಗಿಲು ಕಾಯುವ ದೇವತೆ ಮೃತ್ಯು ದೇವತಾ (ಹೊಲೆ) ಸ್ವರೂಪದಲ್ಲಿ ಆರಾಧಿಸಲ್ಪಡುತ್ತಾಳೆ. ರೋಮನ್ನರು ತಮ್ಮ ಜನಪ್ರೀಯ ದೇವತೆಯನ್ನು ಯುನೊ ಎಂದು ಕರೆದು ಪೂಜಿಸುತ್ತಾರೆ. ಮೆಕ್ಷಿಕೋ ಮತ್ತು ಅರಿಜೋನ ದೇಶಗಳ ಪ್ರಯ ಬೆಲ್ಲೂ ಆದಿವಾಸಿ ಜನಾಂಗದ ದೇವತೆಗಳು ಅವರ ಆರಾಧನೆಗಳಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಈ ಆರಾಧನಾ ವಿಧಿಗಳಲ್ಲೂ ಗ್ರೀಕರ

ಎಲೆಯಾಸಿಸ್ ದೇವತೆಯ ಪೂಜಾ ವಿಧಿಗಳನ್ನು ಹೋಲುತ್ತವೆ. ಈ ಜನಾಂಗದ ಮಹಾಮಾತೃ ಮತ್ತು ಆಕೆಯ ಹೆಣ್ಣು ಮಕ್ಕಳು ಪ್ರಾಚೀನ ಗ್ರೀಕ್ ದೇಶದ ಕೃಷಿ ವಿಧಿಗಳಲ್ಲಿ ಬರುವ ಡೆಮಿಟರ್ ಮತ್ತು ಕೋರೆ ಇವುಗಳ ಪ್ರತಿರೂಪಗಳಾಗಿವೆ. ಆಹಾರ ಧಾನ್ಯದ ಮಾತೃ, ಆಹಾರ ಧಾನ್ಯದ ಹೆಂಗಳೆಯರು ಕಾಳುಗಳ ತಾಯಿ ಎಂದು ಕರೆಯಲಾಗುತ್ತಿರುವ ಈ ದೇವತೆಗಳನ್ನು ಆ ದೇವತೆಗಳ ಉಪಾಸಕರು ತಮ್ಮ ಕುಲದ ಪೂರ್ವಿಕರೆಂದೇ ಪರಿಗಣಿಸುತ್ತಾರೆ.[೭] ನಮ್ಮ ದೇಶದಲ್ಲಿಯೂ ಧಾನ್ಯಗಳನ್ನು ಪೂಜಿಸುವುದನ್ನು ಇಲ್ಲಿ ಸ್ಮರಿಸಬಹುದು.

ದೇವತಾರಾಧನೆಯ ಪ್ರಾಚೀನತೆಯನ್ನು ಮಾನವ ಸಂಸ್ಕೃತಿಯ ಮೊದಲ ಹಂತದಿಂದಲೇ ಗುರುತಿಸಿ ಹೇಳುವುದಿದೆ. ಸುಮಾರು ೩೦ ಸಾವಿರ ವರ್ಷಗಳ ಪೂರ್ವದಲ್ಲೇ ನಿಯಾಂದರ್ ತಾಲ್ ಹಂತದಿಂದ ಧಾರ್ಮಿಕ ಆಚರಣೆಗಳು ಅಸ್ತಿತ್ವಕ್ಕೆ ಬಂದ ದಾಖಲೆಗಳು ನಮಗೆ ಲಭಿಸುತ್ತದೆ. ಗ್ರೀಕ್ ಮತ್ತು ರೋಮನ್‌ರ ದೇವತೆಯರಾದ ಆರ್ತೆಮಿಸ್, ಈಸ್ಟರ್, ಮಿನೇರ್ವಾ, ಡಯನಾ ಮುಂತಾದ ದೇವಿಯ ಗುಡಿಗಳು ಇದ್ದವು. ಆಯಾ ಬುಡಕಟ್ಟುಗಳ ಜನರು ತಮ್ಮದೇ ಆದ ಶೈಲಿಯಲ್ಲಿ ದೇವತೆಯ ರೂಪವನ್ನು ಪರಿಕಲ್ಪಿಸಿಕೊಳ್ಳುತ್ತಿದ್ದರು. ಅಲ್ಲದೆ ಪೂಜಾ ವಿಧಾನಗಳಿಂದ ದೇವತೆಯನ್ನು ಪೂಜಿಸುತ್ತಾರೆ. ಮಾತೃದೇವತಾರಾಧನೆಯು ಜನಪದರ ಮನಸ್ಸಿನಲ್ಲಿ ಹಾಸುಹೊಕ್ಕಾಗಿ ನೆಲೆನಿಂತಿರುವುದನ್ನು ಮೇಲ್ಕಂಡ ವಿವರಗಳಿಂದ ತೆಗೆದುಕೊಳ್ಳಬಹುದಾಗಿದೆ.

ಯುರೋಪ್ ಖಂಡದ ಅನೇಕ ದೇಶಗಳಲ್ಲಿ ದೊರೆತಿರುವ ಸ್ತ್ರೀ ವಿಗ್ರಹಗಳು ಮಾತೃದೇವತಾ ಪಂಥಕ್ಕೆ ಸಂಬಂಧಿಸಿದವುಗಳೆಂದು ಹೇಳಲಾಗಿದೆ. ಇವುಗಳ ಕಾಲವನ್ನು ಹಳೆಯ ಶಿಲಾಯುಗವೆಂದು ಗುರುತಿಸಲಾಗಿರುವುದು. ಈ ವಿಗ್ರಹಗಳನ್ನು ವೀನಸ್‌ಗಳೆಂದು ಕರೆಯುತ್ತಾರೆ. ಲೈಂಗಿಕ ಆಚರಣೆಯ ಸಂಬಂಧದಲ್ಲಿ ಇವುಗಳಿಗೆ ಆದ್ಯ ಸ್ಥಾನವಿತ್ತೆಂದು ನಂಬಿಕೆಯಿದೆ. ವಿಗ್ರಹಗಳ ಸೃಷ್ಟಿ, ಸಮೃದ್ಧಿ ಮತ್ತು ಜೀವನ ಮುಂದುವರಿಕೆಯ ಅಭಿವ್ಯಕ್ತಿಗಳೆಂದು ಹೇಳಲಾಗಿದೆ. ಹಳೆ ಶಿಲಾಯುಗದ ವೀನಸ್ ದೇವತೆಯ ವಿಗ್ರಹಗಳ ಚಿತ್ರಣ ಇಂದ್ರಿಯ ಕೇಂದ್ರಿತವಾಗಿವೆ. ಇದು ಸ್ತ್ರೀ ಶಕ್ತಿಯನ್ನು ಸೂಚಿಸುತ್ತದೆ. ಹಳೆಯ ಶಿಲಾಯುಗದಿಂದ ಇಂದ್ರಿಯಕವಾದ ಪ್ರತಿಕ್ರಿಯೆಯನ್ನು ಸ್ತ್ರೀ ದೇಹದ ಸಂಬಂಧದಲ್ಲಿ ತೋರಿಸಿದರೆ, ಹೊಸ ಶಿಲಾಯುಗದಲ್ಲಿ ಈ ಭಾವನೆ ಕಡಿಮೆಯಾಗಿರುವುದನ್ನು ನೋಡುತ್ತೇವೆ. ಆದರೆ ಹಳೆ ಶಿಲಾಯುಗ ಮತ್ತು ಹೊಸ ಶಿಲಾಯುಗ ಇವೆರಡರಲ್ಲೂ ಸಮೃದ್ಧಿಯ ಆಸಕ್ತಿ ಸಮಾನವಾಗಿರುವುದನ್ನು ಕಾಣುತ್ತೇವೆ. ಹೊಸ ಶಿಲಾಯುಗದಲ್ಲಿ ಮಾತೃದೇವತೆಯ ಆರಾಧನೆ ಪ್ರಚಲಿತದಲ್ಲಿದ್ದುದ್ದಕ್ಕೆ ಸಾಕಷ್ಟು ಆಧಾರಗಳು ದೊರೆತಿವೆ. ಮಣ್ಣಿನ, ಮೂಳೆಯ, ಕಲ್ಲಿನ ಮಾತೃದೇವತೆಗಳ ಚಿತ್ರಗಳು ಗೆರಿಕೊ ಎಂಬ ಪ್ರದೇಶದಲ್ಲಿ ಯಥೇಚ್ಚವಾಗಿ ದೊರೆತಿವೆ. ಪ್ರಪಂಚದಲ್ಲಿ ಆರಾಧನೆಯಾಗುತ್ತಿರುವ ಮಾತೃದೇವತೆಯ ಪರಿಕಲ್ಪನೆಯನ್ನು ಹೀಗೆ ಗಮನಿಸಬಹುದು.

ಪ್ರಪಂಚದ ಜನಪದ ಆರಾಧನೆಯಲ್ಲಿ ಮರಣ ದೇವತೆ ಅಗ್ರ ಸ್ಥಾನವನ್ನು ಪಡೆದಿದ್ದಾಳೆ. ಈ ಮರಣ ದೇವತೆಯನ್ನು ಉಗ್ರದೇವತೆ ಎಂದು ಕರೆಯುತ್ತಾರೆ. ಮೆಕ್ಸಿಕೋದ ಜಾನಪದದಲ್ಲಿ ಇಲಮತೆಚುತ್ಲಿ (Iamatechutli) ಎಂಬ ಸಂಹಾರಿಣಿ ದೇವಿ ಭಾರತೀಯ ಕಾಳಿಗಿಂತ ಅತ್ಯಂತ ಭಯಂಕರವಾಗಿ ಕಂಡುಬರುತ್ತಾಳೆ. ಆಕೆ ಶೂರ ದೇವತೆಯಾದ ತನ್ನ ಮಗನನ್ನು ಕೊಂದು ಆತನ ಹೃದಯವನ್ನು ಕಿತ್ತೊಗೊಯುತ್ತಾಳೆ. ಕೆಲ್ಟ್ ಜಾನಪದದಲ್ಲಿ ಮೊರಿಗನ್ (Morrigan), ನೆಮಾನ್ (Neman) ಮತ್ತು ಮಶಾ (Macha) ಎಂಬ ಉಗ್ರ ಮೃತ್ಯುದೇವತೆಗಳ ಉಲ್ಲೇಖಗಳಿವೆ. ಜರ್ಮನ್ ಜಾನಪದದಲ್ಲಿ ಹಲ್ಲೆ (Halle) ಎಂಬ ಮರಣ ದೇವತೆಯಿದೆ.[೮]

ಉಗ್ರದೇವತೆಗಳ ಸಾಲಿಗೆ ಉತ್ತರ ಕರ್ನಾಟಕ ಭಾಗದ ಮಾತೃದೇವತೆ ಬನಶಂಕರಿಯೂ ಕೂಡ ಸೇರುವ ಸಾಧ್ಯತೆಯಿದೆ. ಆಕೆಯು ಕಾಳಿಯ ರೂಪವನ್ನು ಧರಿಸಿ ದೈತ್ಯರನ್ನು ಸಂಹರಿಸಿದ್ದನ್ನು ಇಲ್ಲಿ ಸ್ಮರಿಸಬಹುದು. ಜೇಮ್ಸ್ ಎ.ಒ. ರವರ 'ದಿ ಏನ್ಷಿಯಂಟ್ ಗಾಡೆಸೆಸ್' ಕೃತಿಯಲ್ಲಿರುವ ಮಾತುಗಳನ್ನು ಡಾ. ಸಿದ್ದಲಿಂಗಯ್ಯನವರು ಉಲ್ಲೇಖಿಸುತ್ತಾ ಕಂಚಿನ ಯುಗಕ್ಕಾಗಲೇ ಮಾತೃದೇವತೆಗಳ ಪಂಥಗಳ ಬೆಳವಣಿಗೆ ದೊಡ್ಡ ಪ್ರಮಾಣದಲ್ಲಾಗಿತ್ತು. ಈಜಿಪ್ಟ, ಮೆಸಪೋಟೋಮಿಯಾ, ಎಗಿಯನ್, ಸಮುದ್ರತೀರ ಮತ್ತು ಇಂಡಿಯಾದಲ್ಲಿ ಇದಕ್ಕೆ ಸಾಕ್ಷ್ಯಾಧಾರಗಳು ದೊರೆತಿವೆ. ಸಿಂಧೂ ಮತ್ತು ನೈಲ್ ನದಿ ತೀರದ ನಾಗರಿಕತೆಯಲ್ಲಿ ಮಾತೃದೇವತೆಯ ಆರಾಧನೆ ಇದ್ದುದ್ದನ್ನು ಎಲ್ಲರೂ ಒಪ್ಪುತ್ತಾರೆ. ಈ ಆರಾಧನೆಯ ಉಗಮದ ಮೂಲ ಸ್ಥಳವನ್ನು ಕುರಿತು ವಿವಾದವಿದ್ದರೂ, ಇದು ಫ್ರಿಜಿಯಾದಿಂದ ಇತರೆಡೆಗಳಿಗೆ ಹಬ್ಬಿರಬಹುದೆಂಬುದು ಇತಿಹಾಸಕಾರರ ಅಭಿಪ್ರಾಯವಾಗಿದೆ. ಫ್ರಿಜಿಯಾದ ಮಾತೃದೇವತೆಯು ಸಿಬಿಲಿಯಾ ಮೂಲದಲ್ಲಿ ಸಮೃದ್ಧಿಯ ದೇವತೆಯಾಗಿದ್ದಾಳೆ. ಈಕೆಯ ಆರಾಧನೆಯು ಏಷ್ಯಾ ಮೈನರ್‌ಗಳಲ್ಲಿ ಆರಂಭವಾಯಿತೆಂದು ಹೇಳಲಾಗಿದೆ. ಇವಳು ಎಲ್ಲ ದುಷ್ಟ ಶಕ್ತಿಗಳ ನೇತಾರಳಲ್ಲದೆ ಮನುಷ್ಯ ಮತ್ತು ಪ್ರಾಣಿಗಳ ಸಂರಕ್ಷಕಳಾಗಿದ್ದಾಳೆ.[೯]

ಚೀನಾದ ಪ್ರಾಚೀನ ಜನರು ಪ್ರಕೃತಿಯ ಪೂಜಕರಾಗಿದ್ದರು. ಅದಕ್ಕಾಗಿ ಚೀನಿಯರು ದೇವರನ್ನು ಮೇಲಿನ ರಾಜ (ಷಾಂಟ್ – ಟಿ) ಎಂದು ಕರೆಯುತ್ತಾರೆ. ವಾಯು, ಚಂದ್ರ, ಸೂರ್ಯ, ಪರ್ವತ, ನದಿಗಳು ಇವುಗಳನ್ನು ದೇವತೆಗಳೆಂದು ಪೂಜಿಸುತ್ತಾರೆ. ಪ್ರಾಚೀನ ಜಪಾನಿಯರು ತಾವು ದೇವತೆಯ ವಂಶಜರೆಂದು ವಿಶೇಷವಾಗಿ ಸೂರ್ಯದೇವರನ್ನು (ಸನ್‌ಗಾಡ್) ಸಂತಾನ ದೇವತೆ ಎಂದು ತಿಳಿಸಿದ್ದರು. ಜಪಾನಿಯರು ಸೂರ್ಯನನ್ನು ಸ್ತ್ರೀ ರೂಪದಲ್ಲಿ ಸ್ವೀಕರಿಸಿದರು. ಪ್ರಾಚೀನ ಜಪಾನಿ ಸಮಾಜದಲ್ಲಿ ಸ್ತ್ರೀಯರು ಸ್ವತಂತ್ರವಾದ ಹಾಗೂ ಮಹತ್ತರವಾದ ಸ್ಥಾನವನ್ನು ಪಡೆದಿದ್ದರು. ಅನೇಕ ಪ್ರಾಚೀನ ಮಿಕಾ ರೋಗಗಳು (ದೇವತಾತ್ಮರು) ಸ್ತ್ರೀಯರೇ ಆಗಿದ್ದಾರೆ. ಪ್ರಾಚೀನ ಚೀನಾದ ಹಳೆಯ ಹೊತ್ತಿಗೆಗಳು ಜಪಾನ್ ದೇಶವನ್ನು ರಾಣಿಯರ ನಾಡು (ಕಂಟ್ರಿ ಆಫ್ ಕ್ವೀನ್ಸ್) ಎಂದು ಕರೆಯುತ್ತಾರೆ.

ಪ್ರಾಚೀನ ಜಪಾನ್ ಸಂಸ್ಕೃತಿಯಲ್ಲಿ ಸ್ತ್ರೀಯರ ಸ್ಥಾನವೇ ಪ್ರಮುಖವಾಗಿರುವುದರಿಂದ ಜಪಾನಿಯರ ದೇವತೆಗಳಲ್ಲಿ ಪ್ರಧಾನವಾದ ಸೂರ್ಯನನ್ನು ಹೆಣ್ಣು ದೇವತೆಯ ರೂಪದಲ್ಲಿ ಸ್ವೀಕರಿಸುತ್ತಾರೆ.[೧೦] ಎಂದು ವಿವೇಚಿಸುತ್ತಾ, ಪ್ರಾಚೀನ ಕಾಲದ ನಾಗರಕತೆಯಲ್ಲಿ ಮಾತೃದೇವತೆಯ ಆರಾಧನೆಯ ಸ್ವರೂಪವನ್ನು ಗುರುತಿಸಿರುವರು.

ಭಾರತದಲ್ಲಿ ಮಾತೃದೇವತಾರಾಧನೆಯ ಸಂಪ್ರದಾಯದ ಮೂಲವನ್ನು ಹುಡುಕಲು ಸಿಂಧೂ ಬಯಲಿನ ಹರಪ್ಪ ಸಂಸ್ಕೃತಿಯ ಇತಿಹಾಸವನ್ನು ಅವಲೋಕಿಸಬೇಕಾಗುತ್ತದೆ. ಈ ಸಂಸ್ಕೃತಿಯಲ್ಲಿ ದೊರೆತ ಮುದ್ರೆಗಳಿಂದ ಇಲ್ಲಿ ಮಾತೃದೇವತಾರಾಧನೆ ಇತ್ತೆಂದು ತಿಳಿಯಬಹುದು. ಆದರೆ ಇತರೆ ದೇಶಗಳಲ್ಲಿದಂತೆ ಆಚರಣೆ ಮತ್ತು ಉತ್ಸವಗಳು ಇಲ್ಲಿ ಸ್ಪಷ್ಟವಾಗುವುದಿಲ್ಲ. ಕಾರಣ ಅಲ್ಲಿನ ಲಿಪಿಯನ್ನು ಇಂದಿಗೂ ಅರ್ಥಮಾಡಿಕೊಳ್ಳಲಾಗಿಲ್ಲ. ಆದರೆ ಅನೇಕ ಕಲ್ಪನೆಗಳಿಗೆ ಗುರಿಯಾಗಿರುವ ಅಲ್ಲಿಯ ಮಾತೃದೇವತೆಗಳು ಎಲ್ಲ ಅನುಕೂಲಗಳನ್ನು ಹೊಂದಿ ಪ್ರಭಲವಾಗಿ ಬೆಳೆದಿದ್ದ ಈ ನಾಗರಿಕತೆಗಳಲ್ಲಿ ಆಚರಣೆ ಮತ್ತು ಉತ್ಸವಗಳು ಇರಲಿಲ್ಲವೆಂದು ಹೇಳಲಿಕ್ಕಾಗದು.[೧೧]

ಇದಲ್ಲದೆ ಸುಮೇರಿಯದ ಜನರು ಪ್ರಕೃತಿ ಪೂಜಕರಾಗಿದ್ದರು. ಇವರ ಶಕ್ತಿದೇವತೆಗಳೆಂದರೆ 'ಅನು' ಎಂಬ ದೇವತೆ ಆಕಾಶಕ್ಕೆ ಒಡೆಯ, 'ಏಗ್ನಿಲ್' ಎಂಬ ದೇವತೆ ವಾಯುಗೆ ಒಡೆಯ, 'ಕೀ' ಎಂಬುವಳು ಭೂಮಿಯ ದೇವತೆಯಾಗಿದ್ದಾಳೆ. ಸುಮೇರಿಯದಲ್ಲಿ ಬೇರೆ ಬೇರೆ ದೇವತೆಗಳಿದ್ದರೂ 'ಈಸ್ಟರ್' ಎಂಬುವಳು ಒಬ್ಬಳೇ ಮಾತೃದೇವತೆಯಾಗಿದ್ದಾಳೆ. ಈಕೆ ಇಲ್ಲಿರುವ ಜನರ ತಾಯಿ ಇವಳು ಭೂಮಿಗೂ ಒಡತಿ, ಯುದ್ಧಕ್ಕೂ ಒಡತಿ, ಯುದ್ಧಕ್ಕೆ ಹೋಗುವವರೆಲ್ಲರೂ ಜಯ ಪಡೆಯಲು ಈ ದೇವತೆಗೆ ಪೂಜಿಸಿ ಹೋಗುತ್ತಿದ್ದರು. ಪಾಶ್ಚಾತ್ಯ ದೇಶಗಳಲ್ಲಿ ಒಂದಾದ ಈಜಿಪ್ತ ದೇಶದಲ್ಲಿ ಈಜಿಸ್ (ಈಸಿಸ್) ದೇವತೆಯನ್ನು ಮಾತೃಶಕ್ತಿ ಎಂದು ಕರೆದು ಆರಾಧಿಸುತ್ತಾರೆ. ಇವಳನ್ನು ಯುದ್ಧದ ದೇವತೆ ಎಂದು ಕರೆಯುವರು. ಕ್ರಿ.ಪೂ. ೩೦೦೦ ವರ್ಷಗಳ ಪೂರ್ವದವಳೆಂದು ಕರೆಯಲಾಗುತ್ತದೆ. ಈಕೆಯನ್ನು ಬಿಲಾಸಿಗಳು ಪೂಜಿಸುತ್ತಾರೆ. ಇಲ್ಲಿನ ಜನಪದ ಕಲ್ಪನೆ ಮಗು ಹುಟ್ಟುವುದು ಹೊಟ್ಟೆಯಿಂದಲ್ಲ, ಸ್ತ್ರೀ ಯೋನಿಯಿಂದೆಂಬ ಅರಿವು ಬಂದಾಗ ಈ ಮೂರ್ತಿಯ ರಚನೆಯಾದಂತೆ ಕಾಣಬಹುದು. ಅದಕ್ಕಾಗಿ ಸ್ತ್ರೀ ಯೋನಿ ತ್ರಿಕೋನ ರೂಪ ಪಡೆದಿರುವುದನ್ನು ಕಾಣುತ್ತೇವೆ. ಯೋನಿಯನ್ನು ಇಲ್ಲಿ ಸ್ಪಷ್ಟವಾಗಿ ತೋರಿಸಲು ಕಾರಣವಲ್ಲದೆ, ಮಗು ಬರುವುದೆಂದು ಇದು ಪವಿತ್ರ ಮತ್ತು ಪೂಜ್ಯ ಸ್ಥಳವೆಂದು ಭಾವಿಸಿದ್ದಾರೆ. ಅಲ್ಲಿಯ ಜನ ಆ ಭಾಗವನ್ನು ಪೂಜಿಸುತ್ತಿದ್ದರು.[೧೨]

ಹೀಗೆ ವಿಶ್ಲೇಷಣೆ ಮಾಡುತ್ತಾ ಮಾತೃ ಆರಾಧನೆಯಲ್ಲಿ ಸ್ತ್ರೀ ಸಂಕೇತವನ್ನು ತೆಗೆದುಕೊಂಡಾಗ ಯಾರಿಗಾದರೂ ಮೊದಲು ನೆನಪಾಗುವುದು ತಾಯಿ. ಏಕೆಂದರೆ ತಾಯಿಯ ಅನುಭವವೇ ಮಾನವನ ಮೊದಲ ಅನುಭವ. ಗರ್ಭಧಾರಣೆಯಾಗಲು

ತಾಯ್ತಂದೆಯರೀರ್ವರೂ ಬೇಕೇ ಬೇಕಾದರೂ ಕೂಸಿಗೆ ತಾನು ಹುಟ್ಟುವ ಪೂರ್ವ ಕಾಲದಿಂದಲೂ ಹತ್ತಿರದವರೆಂದರೆ ತಾಯಿಯು ಒಬ್ಬಳೆ. ಆಕೆಯ ಮೂಲಕವೇ ಅದಕ್ಕೆ ಆಹಾರ ಹಾಗೂ ಬೆಳವಣಿಗೆ. ಆಕೆಯ ಎದೆ ಹಾಲೇ ಅದಕ್ಕೆ ಆಹಾರ, ಆಕೆಯ ತೊಡೆಯೇ ಅದಕ್ಕೆ ಆಧಾರವೆಂದು ಹೇಳಬಹುದು. ತಾಯಿ ಮತ್ತು ಮಗುವಿನ ಸಂಬಂಧವು ಅಪೂರ್ವವಾದುದು. ತಾನು ಹೆತ್ತ ಮಗುಗೆ ಯಾವುದೇ ರೀತಿಯಲ್ಲಿ ತೊಂದರೆಯಾಗಬಾರದೆಂಬ ದೃಢಚಿತ್ತ ಮನಸ್ಸು ಹೊಂದಿರುವುದು ತಾಯಿ ಮಾತ್ರ. ಆದ್ದರಿಂದ ಮಾತೃ ಸ್ಥಾನದಲ್ಲಿ ಮೊದಲು ತಾಯಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿ ಇಡೀ ವಿಶ್ವವೇ ಆಕೆಯನ್ನು ಮಹಾಮಾತೆ (ಗ್ರೇಟ್ ಮದರ್) ದೇವತೆಯರುಗಳ ಹೆಸರನ್ನು ಸಂಭೋಧಿಸಿರುವುದು ಗೋಚರಿಸುತ್ತದೆ. ಆಕೆ ಎಲ್ಲಾ ಜನಾಂಗಗಳ ಮತ್ತು ಬುಡಕಟ್ಟುಗಳ ತಾಯಿ, ಆಕೆ ಸಿಡಿಲಿನ ತಾಯಿ, ಮರಗಳ ತಾಯಿ ಅಂತೆಯೇ ವಿವಿಧ ಪ್ರಾಣಿ, ಪಕ್ಷಿಗಳ ತಾಯಿ, ಆಕೆ ದವಸಧಾನ್ಯಗಳ ತಾಯಿ ಎಂದು ವಿವೇಚಿಸಬಹುದು. ಹೀಗೆ ವಿಶ್ಲೇಷಣೆ ಮಾಡುತ್ತಾ ಆಕೆ ನಿರ್ವಹಿಸುವಂತಹ ಪಾತ್ರ, ಕಾರ್ಯಗಳಿಗೆ ತಕ್ಕಂತೆ ಆಕೆಗೆ ವಿವಿಧ ರೀತಿಯ ಹೆಸರುಗಳಿಂದ ಸಂಭೋಧಿಸುವುದಿದೆ.

### ೩. ೫. ಭಾರತದಲ್ಲಿ ಮಾತೃದೇವತಾರಾಧನೆಯ ಹಿನ್ನೆಲೆ

ನಮ್ಮ ಸಂಸ್ಕೃತಿಯು ದ್ರಾವಿಡ ಹಾಗೂ ಆರ್ಯ ಸಂಸ್ಕೃತಿಯ ಮಿಶ್ರಣವನ್ನು ಹೊಂದಿದೆ. ಹಾಗೆಯೇ ಮಾತೃಪ್ರಧಾನವಾಗಿ ದ್ರಾವಿಡ ಸಂಸ್ಕೃತಿಯ ಜೊತೆಗೆ ಪಿತೃಪ್ರಧಾನವಾದ ಆರ್ಯ ಸಂಸ್ಕೃತಿ ಬೆರೆದುಕೊಂಡಿರುವುದು ಗಮನಾರ್ಹ. ವೇದಪೂರ್ವಕಾಲದಲ್ಲಿಯೇ ಅಸ್ತಿತ್ವದಲ್ಲಿ ಮಾತೃ ಆರಾಧನೆಯ ಸಂಸ್ಕೃತಿಯ ಧಾರ್ಮಿಕ ವಿಧಿವಿಧಾನಗಳು, ಉಪಾಸನೆ, ನಂಬಿಕೆಗಳ ಮೇಲೆ ಆರ್ಯ ಸಂಸ್ಕೃತಿಯ ಪ್ರಭಾವ ಬೀರಿ ಅವೆರೆಡು ನಂತರ ಸಮನ್ವಯ ಸಾಧಿಸಿವೆ. ತಮ್ಮ ಚತುರತೆಯಿಂದ ದ್ರಾವಿಡರ ಮೇಲೆ ಪ್ರಭುತ್ವ ಸಾಧಿಸಲು ಪ್ರಯತ್ನಿಸಿ ಸಾಧ್ಯವಾಗದೇ ಅವರೊಂದಿಗೆ ಧಾರ್ಮಿಕವಾಗಿ ಸಂಬಂಧವನ್ನು ಏರ್ಪಡಿಸಿಕೊಂಡರು. "ದ್ರಾವಿಡರು ಪಶುಪತಿ-ಶಿವನ ಆರಾಧಕರು ಹೌದು, ಆದರೆ ಶಿವನಿಗಿಂತ ಆದಿಶಕ್ತಿಯನ್ನು ಹೆಚ್ಚಾಗಿ ಪೂಜಿಸುವವರಾಗಿದ್ದಾರೆ".[೧೩] ಈ ಹಿನ್ನೆಲೆಯಲ್ಲಿ ಆರ್ಯರಿಗಿಂತ ಪೂರ್ವದಲ್ಲೇ ನಮ್ಮಲ್ಲಿ ಶಕ್ತಿ ಆರಾಧನೆಯಿದೆ.

ಶಕ್ತಿ ಆರಾಧನೆ ಪ್ರಧಾನವಾದ ದ್ರಾವಿಡ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿ ವೈದಿಕ, ಜೈನ, ಬೌದ್ಧರು ಕೂಡ ಶಕ್ತಿಯನ್ನು ಆರಾಧಿಸತೊಡಗಿದರು. ದ್ರಾವಿಡ ಸಂಸ್ಕೃತಿಯಲ್ಲಿ ಸ್ತ್ರೀಗೆ ಪ್ರಧಾನ ಸ್ಥಾನವಿದ್ದು, ಆಕೆಯು ಸಾಕ್ಷಾತ್ ದೇವತೆಯಾಗಿರುವಳು ಎಂದು ನಂಬುತ್ತಾರೆ. ನಮ್ಮ ಸಂಸ್ಕೃತಿಯಲ್ಲದೆ ಇತರೆ ಯಾವುದೇ ಸಂಸ್ಕೃತಿಯಲ್ಲಿ ಹೆಣ್ಣನ್ನು ಸಂಪೂರ್ಣ ನಿರ್ಲಕ್ಷಿಸಿರುವುದು ಕಾಣುವುದಿಲ್ಲ.

ಹಾಗೆಯೇ ನಮ್ಮ ಸಂಸ್ಕೃತಿಯಲ್ಲಿ ಹೆಣ್ಣಿಗೆ ಅತ್ಯಂತ ಗೌರವದ ಸ್ಥಾನವಿದೆ. ಲಾಲನೆ-ಪಾಲನೆ, ಸಂಸಾರದ ರಕ್ಷಣೆ ಅವಳ ಹೊಣೆಯಾಗಿವೆ. ಇವುಗಳನ್ನು ಸಮರ್ಥವಾಗಿ

ನಿಭಾಯಿಸುವ ಶಕ್ತಿಯಿಂದಲೇ ಆಕೆಯನ್ನು ಆರಾಧಿಸತೊಡಗಿದರು. ಅಲ್ಲದೆ ಎಲ್ಲವನ್ನೂ ರಕ್ಷಿಸಬಲ್ಲ ಮಾತೆಯಾದಳು. ಪ್ರಕೃತಿಯ ಶಕ್ತಿಯನ್ನು ಸ್ತ್ರೀ ಶಕ್ತಿಯನ್ನಾಗಿ ಮಾನವನು ಆರಾಧಿಸತೊಡಗಿದ್ದಾನೆ. ಜಗತ್ತಿನ ಉದಯದಲ್ಲಿ ಮೊದಲು ಪ್ರಕೃತಿ, ಆಮೇಲೆ ಪುರುಷ, ಪುರುಷ ಪ್ರಕೃತಿಯ ಮಿಲನವೇ ಸೃಷ್ಟಿ ಕಾರ್ಯ. ಹೀಗಾಗಿ ಹೆಣ್ಣು ಪ್ರಕೃತಿ ತತ್ವವಾಗಿ ಉಪಾಸನಾ ದೇವತೆಯಾಗಿದ್ದಾಳೆ. ಪ್ರಕೃತಿಯು ಮಾನವನ ಸರ್ವಸ್ವವೂ ಆದ್ದರಿಂದ ಭೂಮಿ ತಾಯಿಯಾಗಿ, ಆದಿಶಕ್ತಿಯಾಗಿ ಕಾಣಿಸಿದಳು.

ಸೃಷ್ಟಿಕರ್ತೆಯಾದ ದೇವಿ ಅಥವಾ ಶಕ್ತಿಯು ಜಗತ್ತಿನ ಎಲ್ಲಾ ರಚನೆಗೆ ಸೂತ್ರಧಾರಿಗಳಾಗಿದ್ದಾಳೆ. ಆಕೆಯ ಸಹಕಾರವಿಲ್ಲದೆ ಬ್ರಹ್ಮನೂ ಕೂಡ ಯಾವುದೇ ಕಾರ್ಯ ಸಾಧನೆಯನ್ನು ಮಾಡಲು ಸಾಧ್ಯವಿಲ್ಲ. ಹಾಗೆಯೇ ದೇವಿ ಅಥವಾ ಶಕ್ತಿಯು ಇಲ್ಲದೆ ಜಗತ್ತಿನ ಯಾವುದೇ ಕಾರ್ಯ ಸಾಧನೆ ಸಾಧ್ಯವಿಲ್ಲ. ಆಕೆಯಿಂದಲೇ ಬೆಳಕು, ಗಾಳಿ, ಶಬ್ದ, ನೀರು, ಸಮೃದ್ಧಿ ಇರುತ್ತದೆ.[೧೪] ದೇವಿಗೆ ಇರುವ ಇಂತಹ ವಿಶಿಷ್ಠ ಶಕ್ತಿಗಳಿಂದಲೇ ಆಕೆಯನ್ನು ಆದಿಮಾತೆ, ಜಗದಂಬಾ, ಸೃಷ್ಟಿಕರ್ತೆ, ಆದಿಶಕ್ತಿ ಎಂದೆಲ್ಲ ಕರೆಯಲಾಗುವುದು.

ಹೀಗೆ ಶಕ್ತಿದೇವತೆಯರನ್ನು ಅಸಂಖ್ಯಾತ ಹೆಸರುಗಳಿಂದ ಕರೆಯುತ್ತಾರೆ. ಈ ಶಕ್ತಿ ಪಂಥದ ಜನಪದ ರೂಪಗಳೇ ಗ್ರಾಮದೇವತೆಗಳು. ಇಂಥ ಶಕ್ತಿ ದೇವಿಯರ ಹೆಸರುಗಳಲ್ಲಿ ದ್ರಾವಿಡ ಸಂಸ್ಕೃತಿ ಗಾಢ ಪ್ರಭಾವವಿದೆ. ಅಮ್ಮ, ಅಂಬಾ, ಅಂಬಿಕಾ, ಇವು ತಾಯಿ ಎನ್ನುವ ಶಬ್ದಕ್ಕೆ ಸಮಾನವಾಗಿವೆ.[೧೫]

ದ್ರಾವಿಡ ಸಂಸ್ಕೃತಿಯಲ್ಲಿ ಅವಿಭಾಜ್ಯ ಅಂಗವಾದ ಶಕ್ತಿಯೇ ವೈದಿಕ ದೇವತೆಗಳೆಂದು ಹೆಸರಿಸಿಕೊಟ್ಟ ಬ್ರಹ್ಮ, ವಿಷ್ಣು, ಶಿವನಿಗೂ ಮೂಲವೆಂದು ಗ್ರಹಿಸಲಾಯಿತು. ಶಕ್ತಿಯಿಂದ ಎಲ್ಲವೂ ಎಂಬುವ ನಂಬಿಕೆಯಿದೆ. ಹೀಗಾಗಿ ಉಪಾಸನೆಯಲ್ಲಿ ಬ್ರಹ್ಮನಿಗೆ ಬ್ರಹ್ಮೀಣಿಯು ಶಕ್ತಿದೇವತೆಯಾದಳು. ವಿಷ್ಣುವಿಗೆ ಲಕ್ಷ್ಮೀಯು ಶಕ್ತಿದೇವತೆಯಾದಳು ಮತ್ತು ಶಿವನಿಗೆ ಪಾರ್ವತಿಯು ಶಕ್ತಿದೇವತೆಯೆನಿಸಿದಳು. ಆರ್ಯರು ಹಾಗೂ ದ್ರಾವಿಡರಿಬ್ಬರು ಶಿವನನ್ನು ಆರಾಧಿಸುತ್ತಿದ್ದರಿಂದ ಅವನ ಸತಿಯಾದ ಪಾರ್ವತಿಗೆ ಅತ್ಯಂತ ಪ್ರಾಮುಖ್ಯತೆ ಲಭಿಸಿತು. ಅಲ್ಲದೆ ವೈದಿಕ ಸಂಸ್ಕೃತಿಯಲ್ಲಿ ಅತ್ಯಂತ ಪ್ರಸಿದ್ಧರಾದ ಸಪ್ತಮಾತೃಕೆಯರು ಅಂದರೆ ಬ್ರಹ್ಮಿ, ಮಹೇಶ್ವರಿ, ವೈಷ್ಣವಿ, ಕೌಮಾರಿ, ಇಂದ್ರಾಣಿ, ವರಾಹಿ, ರೌದ್ರಿ ಎಂಬ ದೇವತೆಗಳು ಕೂಡ ಮೂಲತಃ ದ್ರಾವಿಡರಿಂದಲೇ ಸ್ವೀಕೃತವಾದವರು ಎಂದು ವಿದ್ವಾಂಸರು ಭಾವಿಸುತ್ತಾರೆ. ಆದರೆ ಸಪ್ತಮಾತೃಕೆಯಲ್ಲಿ ರೌದ್ರಿ (ಚಾಮುಂಡಿ) ದೇವತೆ ಮಾತ್ರ ದ್ರಾವಿಡ ಸಂಸ್ಕೃತಿಯಲ್ಲಿ ಪ್ರಧಾನ ಪಾತ್ರವಹಿಸಿದಂತೆ ತೋರುತ್ತದೆ. ಹಾಗೆಯೇ ಈ ದೇವಿಯರ ಆರಾಧನೆಯು ದ್ರಾವಿಡ ಕುಲಗಳಿಂದ ಅನಂತರ ಕೆಳಜಾತಿಗಳಿಂದ, ವೈದಿಕರ ಮೇಲ್ಜಾತಿ ಧರ್ಮಗಳಿಗೆ ಪ್ರವೇಶ ಪಡೆಯುವಾಗ ದೇವಿಯ ಅನೇಕ ಬದಲಾವಣೆಗಳನ್ನು ಕಾಣುವಂತಾದುದು

ಸಹಜ. ಹಾಗೆ ವೈದಿಕ ಧರ್ಮಕ್ಕೆ ಪ್ರವೇಶ ಪಡೆದ ನಂತರ ಆಕೆ ವೈದಿಕ ಗಂಡು ದೇವರುಗಳ ಹೆಣ್ಣು ರೂಪವಾಗಿ ಅಂದರೆ ಬ್ರಹ್ಮ-ಬ್ರಾಹ್ಮಿ, ವಿಷ್ಣು-ವೈಷ್ಣವಿ, ಇಂದ್ರಾ-ಇಂದ್ರಾಣಿ, ವರಾಹ-ವಾರಾಹಿ, ಮಹೇಶ್ವರ-ಮಾಹೇಶ್ವರಿ, ರುದ್ರ-ರೌದ್ರಿ, ಕುಬೇರ-ಕೌಬೇರಿ ಎಂದು ಕರೆಯಲಾಯಿತು.

ಒಟ್ಟಾರೆ ಭಾರತೀಯ ಸಂಸ್ಕೃತಿಯಲ್ಲಿ ಶಕ್ತಿದೇವತೆಗಳನ್ನು ವಿವಿಧ ರೂಪುಗಳಲ್ಲಿ ಪೂಜಿಸಲಾಗುತ್ತದೆ. ಪಾರ್ವತಿಯ ಸಾತ್ವಿಕ ಶಕ್ತಿ ಸ್ವರೂಪದಲ್ಲಿಯೇ ಅನೇಕ ದೇವತೆಗಳು ಸೃಷ್ಠಿಯಾಗಿರುವುದು ಗಮನಾರ್ಹ. ಜಾನಪದ ಪರಂಪರೆಯಲ್ಲಿ ಆದಿಶಕ್ತಿ ಸ್ವರೂಪಿಣಿಯೆಂದು ಕರೆಸಿಕೊಂಡ ಪಾರ್ವತಿಯ ರೂಪಗಳಾಗಿ ದುರ್ಗೆ, ಕಾಳಿ, ದ್ಯಾಮವ್ವ, ದುರುಗವ್ವ, ಲಕ್ಕಮ್ಮ, ಬನದವ್ವ, ಕರಿಯವ್ವ ಮುಂತಾದ ದೇವತೆಗಳನ್ನು ಗಮನಿಸಬಹುದು.

ಶಿವ, ಶಕ್ತಿಯ ಕಲ್ಪನೆ ಮೂಲತಃ ಶೈವಧರ್ಮದಕ್ಕೆ ಸೇರಿದೆ. ಸಿಂಧೂ ಸಂಸ್ಕೃತಿಯಲ್ಲಿ ಉತ್ಖನನ ಸಮಯದಲ್ಲಿ ಶಿವ ಇಲ್ಲವೆ ಪಶುಪತಿ ಹಾಗೂ ಕಿರೀಟಧಾರಿ ಹೆಣ್ಣಿನ ವಿಗ್ರಗಳು ದೊರೆತಿವೆ. ಶಿವಲಿಂಗದಲ್ಲಿ ಲಿಂಗ ಮತ್ತು ಯೋನಿ ಸಂಕೇತಗಳಿರುವುದು ಶೈವ ಶಾಕ್ತ ಕಲ್ಪನೆಗೆ ಆಧಾರಿತವಾಗಿದೆ. ದೈವಿಕ ಕಲ್ಪನೆಯನ್ನು ಪುರುಷ ಮತ್ತು ಸ್ತ್ರೀ ಸಂಕೇತಗಳಲ್ಲಿ ಆರಾಧಿಸುವ ಪದ್ಧತಿ ಭಾರತದಲ್ಲಿದೆ. ಆಫ್ರಿಕಾ, ಈಜಿಪ್ತ್, ಏಷಿಯಾ ಮೈನರ್, ಪುರಾತನ ಗ್ರೀಸ್ ಮುಂತಾದ ದೇಶಗಳಲ್ಲಿಯೂ ಪ್ರಚಲಿತವಿತ್ತೆಂದು ಹೇಳುತ್ತಾರೆ. ಆರಂಭದ ವೇದಗಳಲ್ಲಿ ಶಿವ-ಶಕ್ತಿಯ ಕಲ್ಪನೆಯೇ ಇಲ್ಲ. ಆದರೆ 'ಸಿಂಧೂ ಸಂಸ್ಕೃತಿಯಲ್ಲಿ ಶಿವ-ಶಕ್ತಿಯ ದೇವತೆಗಳ ಪಾತ್ರ ಹಿರಿದಾಗಿದೆ'

ಋಗ್ವೇದದಲ್ಲಿ ಪುರುಷ ದೇವತೆಗಳು ಪ್ರಮುಖವಾಗಿದ್ದರೂ ಕೂಡ ಸುಮಾರು ೪೦ಕ್ಕೂ ಅಧಿಕ ದೇವತೆಗಳು ಅಲ್ಲಿ ಬರುತ್ತವೆ. ಅದರಲ್ಲಿ ಅಧಿತಿ, ಪೃಥ್ವಿ, ಉಷನ್, ಸರಸ್ವತಿ, ಕಾಳಿ, ಲಕ್ಷ್ಮೀ ಮುಂತಾದವು ಅತ್ಯಂತ ಪ್ರಮುಖವಾಗಿದ್ದವು. ಇಲ್ಲಿ ಅಧಿತಿಯೇ ಎಲ್ಲ ಇತರ ದೇವತೆಗಳಿಗೂ ಸರ್ವಸ್ವ ಎಂದು ಹೇಳಲಾಗುತ್ತದೆ. ಇಲ್ಲಿ ಉಷನ್ ದೇವತೆಯು ಜೀವನದ ನಿರಂತರ ಸ್ಫೂರ್ತಿ, ಚೈತನ್ಯ, ತಾರುಣಿಗಳಿಗೆ ಪ್ರತೀಕವಾದರೆ, ಸರಸ್ವತಿಯ ಪರಿಕಲ್ಪನೆ, ಜ್ಞಾನ, ತುಷ್ಟಿ, ತೃಪ್ತಿಗೆ ಸಂಕೇತವಾಗಿದ್ದಾಳೆ. ಲಕ್ಷ್ಮೀ ಸಂಪತ್ತು ಸಮೃದ್ಧಿಗಳಿಗೆ ಸಂಕೇತವಾದರೆ ಕಾಳಿಯು ದುಷ್ಟರ ದಮನ ಮಾಡುವ ಉಗ್ರದೇವತೆಯನಿಸಿದ್ದಾಳೆ. ಹೀಗೆ ವೈದಿಕ ಸಂಸ್ಕೃತಿಯ ದೇವತೆಗಳಲ್ಲಿ ಲಕ್ಷ್ಮೀ, ಸರಸ್ವತಿಯರು ಮಾತ್ರ ಇಂದಿಗೂ ಭಾರತೀಯ ಸಂಸ್ಕೃತಿಯಲ್ಲಿ ಪೂಜೆಗೊಳ್ಳುತ್ತಾರೆ. ಆದರೆ ಕಾಳಿ ಮಾತ್ರ ಪಾರ್ವತಿಯ ಉಗ್ರ ರೂಪವೇ ಎಂದು ಭಾವಿಸಲಾಗಿದ್ದು, ಆದಿಶಕ್ತಿಯ ಅವಿರ್ಭಾವದ ಸಂಕೇತವೆಂದು ಮಾತೃದೇವತಾ ಆರಾಧನೆಯಲ್ಲಿ ಮಹತ್ವದ ಸ್ಥಾನ ಹೊಂದಿದ್ದಾಳೆ.

ಇವುಗಳಲ್ಲದೆ ಕೆಲವು ಹೊಸ ರೀತಿಯ ದೇವತಾ ಗುಂಪುಗಳು ಬೆಳಕಿಗೆ ಬಂದಿವೆ. ನಾಗಾರಾಧನೆ, ಯಕ್ಷಾರಾಧನೆ, ಅಪ್ಸರೆ, ಗಂಧರ್ವರ ಕಲ್ಪನೆಗಳು ವೈದಿಕ ಸಾಹಿತ್ಯ ಕಾಣಸಿಗುತ್ತವೆ.

ಯಕ್ಷಿ ಎನ್ನುವುದು ತಾಯ್ತಿನದ ಪ್ರತೀಕ. ಹೆಣ್ಣಿನ ಸ್ವಭಾವಕ್ಕೆ ಮತ್ತು ಪ್ರಕೃತಿಗೆ ಸಹಜವಾದುದು ಮತ್ತು ವಿಶಿಷ್ಟವಾದುದು ತಾಯ್ತಿನ. ತಾಯ್ತಿನವೆಂದರೆ ಯೋನಿ, ಮೊಲೆಗಳು ಹಾಗೂ ಹಿರಿದಾದ ಸೊಂಟದ ಭಾಗ ಇವು ಫಲವಂತಿಕೆಯ ರೂಪಕಗಳು. ಮಾತೃದೇವತೆಯರ ಉಗಮವು ಈ ವಿಶಾಲವಾದ ತಳಹದಿಯ ಮೇಲೆ ಬೆಳೆದುಬಂದಿದೆ. ಬೌದ್ಧ ಹಾಗೂ ಜೈನರಲ್ಲಿ ಯಕ್ಷ ಮತ್ತು ಯಕ್ಷಿಯರು ವ್ಯಾಪಕವಾಗಿ ಕಂಡುಬರುತ್ತಾರೆ.

ಭಾರತದ ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತಗಳೂ ಕೂಡ ಭಾರತೀಯ ಸಂಸ್ಕೃತಿಯ ಮೂಲ ಆಕರಗಳಾಗಿವೆ. ಮಹಾಭಾರತದಲ್ಲಿ ದೇವಿಯ ಉಗ್ರ ರೂಪ ಹಾಗೂ ಸೌಮ್ಯ ರೂಪಗಳನ್ನು ಕಾಣಬಹುದು. ದುರ್ಗಾಳನ್ನು ಪ್ರಾರ್ಥಿಸುವ ಬಗ್ಗೆ ಉಲ್ಲೇಖಗಳಿವೆ. ಧರ್ಮರಾಯ, ಅರ್ಜುನ ದೇವಿಯನ್ನು ಪ್ರಾರ್ಥಿಸಿದ್ದಾರೆ. ಈ ಕಾಲಕ್ಕೆ ದೇವಿಯ ಹಲವಾರು ನಾಮಗಳಾದ ಭದ್ರಕಾಳಿ, ಮಹಾಕಾಳಿ, ಕರಾಳಿ, ಚಂಡಿ, ಚಂಡಾ, ಕಪಾಲಿ, ಕೌಶಕಿ, ಉಮಾ, ಶಾಕಾಂಬರಿ, ವಿರೂಪಾಕ್ಷಿ, ಜಾತವೇದನೆ, ಬ್ರಹ್ಮವಿದ್ಯಾ, ಮಹಾನಿದ್ರಾ, ಸ್ವಾಹಾ, ಸರಸ್ವತಿ, ವೇದಮಾತಾ, ಮಾಯಾ, ಮುಂತಾದ ಹೆಸರುಗಳನ್ನು ಕಾಣಬಹುದು.[೧೬]

ಒಟ್ಟಾರೆಯಾಗಿ ದಕ್ಷಿಣ ಭಾರತದಲ್ಲಿ ಶಕ್ತಿ ಆರಾಧನೆಯು ಅತ್ಯಂತ ಪ್ರಚಲಿತವಾದುದು. ಕರ್ನಾಟಕದ ಸವದತ್ತಿ ಎಲ್ಲಮ್ಮ, ಬಾದಾಮಿಯ ಬನಶಂಕರಿ, ಮೈಸೂರಿನ ಚಾಮುಂಡಿ, ಕೊಲ್ಲೂರು ಮೂಕಾಂಬಿಕೆ, ತಮಿಳಿನಾಡಿನ ಮಾರಿಯಮ್ಮ, ಆಂಧ್ರದ ಬತ್ತಮ್ಮಾ, ಮಹಾರಾಷ್ಟ್ರದ ಅಂಬಾಭಾವನಿ ಆಯಾ ನಾಡಿನ ಪ್ರಮುಖ ದೇವತೆಯರೆನಿಸಿದ್ದಾರೆ. ಆದಿಶಕ್ತಿಗೆ ಭಿನ್ನ ಭಿನ್ನ ರೂಪ ನೀಡಿ ಆ ದೇವತೆಗಳನ್ನು ಅಮ್ಮ, ಅವ್ವ, ಬಾಯಿ ಮುಂತಾದ ಸಂಬೋಧನೆಗಳಿಂದ ಕರೆಯುತ್ತಾರೆ. ಈ ದೇವಿಯರು ಜನಪದ ಸಂಪ್ರದಾಯದಲ್ಲಿ ಬೆರೆತು ಹೋಗಿವೆ.

ಆರ್ಯ ಸಂಸ್ಕೃತಿಯ ಪ್ರಭಾವದಿಂದ ಗ್ರಾಮದೇವಿಯರು ಶಿಷ್ಟರೂಪವನ್ನು ಪಡೆದುಕೊಂಡಿವೆ. ಇದರಿಂದ ಗ್ರಾಮದೇವತೆಗಳ ಹೆಸರುಗಳು ಮಾತ್ರವಲ್ಲದೆ, ಅವುಗಳ ಉಪಾಸನ ವಿಧಿ-ವಿಧಾನಗಳು ವೈಧಿಕ ಪರಂಪರೆಯಂತೆ ಜರುಗಲು ಆರಂಭವಾಯಿತು. ಅಲ್ಲದೆ ಸಾಮಾಜಿಕವಾಗಿ ಸಮಾಜದಲ್ಲಿ ಸ್ತ್ರೀಗೆ ಇದ್ದ ಗೌರವಾದರಗಳ ಏರಿಳಿತಳಾಗಿ ಅಂದಿನಿಂದ ಮಾತೃದೇವತೆಗಳ ಕಲ್ಪನೆ, ಉಪಾಸನೆಗಳ ಮೇಲೆ ಪರೋಕ್ಷವಾಗಿ ಪರಿಣಾಮ ಬೀರಿವೆ.

### ೩. ೬. ಸಾಂಸ್ಕೃತಿಕವಾಗಿ ಮಾತೃದೇವತಾರಾಧನೆಯ ಪ್ರಾಚೀನತೆ

ಜಾನಪದ ಸಾಹಿತ್ಯದಲ್ಲಿ ಧಾರ್ಮಿಕವಾಗಿ ನಡೆಯುವ ವಿವಿಧ ರೀತಿಯ ಮಾತೃ ದೈವಗಳ ಆರಾಧನೆಗೆ ವಿಶೇಷ ಸ್ಥಾನಮಾನವಿದೆ. ಜನಪದ ಸಾಹಿತ್ಯದಲ್ಲಿ ಸಮಸ್ತ ಜನಪದರ ಆಚಾರವಿಚಾರಗಳನ್ನು ಅಗತ್ಯವಾಗಿ ಗಮನಿಸುತ್ತೇವೆ. ಭಾರತವು ಗ್ರಾಮಗಳಿಂದ ಕೂಡಿದ ದೇಶವಾಗಿರುವುದರಿಂದ ಮಾತೃದೇವತೆಗಳ ಆರಾಧನೆಯು ಸಮೃದ್ಧಿಯಾಗಿದೆ. ಗ್ರಾಮದಲ್ಲಿ ವಾಸಿಸುವವರ ಗ್ರಾಮದೇವತೆ, ಗ್ರಾಮಸ್ಥರಿಂದ ಗ್ರಾಮಸ್ಥರಿಗಾಗಿ ಸೃಷ್ಟಿಯಾದ ಈಕೆ ಗ್ರಾಮದ

ಆಧಿದೇವತೆಗಿರುವಳು. ಗ್ರಾಮದೇವತೆ ಇಲ್ಲದ ಊರು ಇಲ್ಲ. ಗ್ರಾಮಕ್ಕೆ ಅಪಾಯ ಬಂದರೆ ಗ್ರಾಮದೇವತೆ ಅದನ್ನು ಕಾಯುವಳು ಎಂಬ ನಂಬಿಕೆಯಿದೆ. ಗ್ರಾಮಸ್ಥರು ಪ್ರತಿಯೊಂದಕ್ಕೂ ಗ್ರಾಮದೇವತೆಗೆ ಶರಣು ಹೋಗುತ್ತಾರೆ. ಗ್ರಾಮದೇವತೆ ಮನುಷ್ಯ ಕಲ್ಪಿಸಿದ ಪ್ರಾಚೀನ ಶಕ್ತಿದೇವತೆಯಾಗಿರುವುದು ಗಮನಾರ್ಹ. ಈ ರೀತಿಯಾಗಿ ಆರಾಧನಾ ಸ್ವರೂಪವನ್ನು ಗುರುತಿಸಬಹುದು. ಹೀಗೆಯೇ ಶಕ್ತಿದೇವತೆಗಳಿಗೆ ನಡೆದುಕೊಳ್ಳುತ್ತಾ ಮಾತೃದೇವತೆಯ ಉಪಾಸನೆ ಮತ್ತು ಅದರ ಪರಿಕಲ್ಪನೆಯಿಲ್ಲದ ಸಂಸ್ಕೃತಿಗಳೇ ಇಲ್ಲವೆಂದರೂ ತಪ್ಪಾಗಲಾರದು.

ಮಾತೃ ಆರಾಧನೆಗೆ ಸಂಬಂಧಿಸಿದಂತೆ ಹರಪ್ಪ ಸಂಸ್ಕೃತಿಯಲ್ಲಿ ಒಂದು ಮುದ್ರೆ ದೊರಕಿದೆ. ಈ ಮುದ್ರಿಕೆಯಲ್ಲಿ ಒಂದು ಸ್ತ್ರೀ ವಿಗ್ರವಿರುವುದು. ಆಕೆಯ ಗರ್ಭದಿಂದ ಒಂದು ಸಸ್ಯ ಹುಟ್ಟುತ್ತಿರುವಂತೆ ಚಿತ್ರಿಸಲಾಗಿದೆ. ಇದು ಇನ್ನೊಂದು ಬದಿಯಲ್ಲಿ ಸ್ತ್ರೀ ಪುರುಷ ಚಿತ್ರಗಳಿವೆ. ಒಬ್ಬ ಮನುಷ್ಯನು ನೇಗಿಲಿನಂಥ ಉಪಕರಣವನ್ನು ಹಿಡಿದ್ದಾನೆ. ಈ ಚಿತ್ರದಲ್ಲಿರುವ ಮನುಷ್ಯ ಉಳಿಮೆ ಮಾಡುವ ರೈತನೆಂದು ಭಾವಿಸಲಾಗಿದೆ. ಗರ್ಭದಿಂದ ಸಸ್ಯವು ಹೊರಹೊಮ್ಮುತ್ತಿರುವ ಚಿತ್ರವನ್ನು ಮಾತೃದೇವತೆಯೆಂದು ಹೇಳಲಾಗುವುದು. ಈಕೆಯನ್ನು ಶಾಕಾಂಬರಿ (ಬನಶಂಕರಿ ಮತ್ತೊಂದು ಹೆಸರು) ಎಂದು ಗುರುತಿಸಲಾಗಿದೆ.[೧೭]

ದೇವತಾರಾಧನೆಯು ಭಾರತದ ಸಂಸ್ಕೃತಿಯಲ್ಲಿ ಬಹುಪ್ರಧಾನ ಪಾತ್ರವಹಿಸುತ್ತದೆ. ಮಾತೃ ಉಪಾಸನೆಯು ತೀರ ಹಿಂದುಳಿದ ಸಮುದಾಯವರಿಂದ ಹಿಡಿದು ಮುಂದುವರೆದ ಸಮುದಾಯದವರಲ್ಲಿಯೂ ಒಂದಲ್ಲ ಒಂದು ರೀತಿಯಲ್ಲಿ ಉಳಿದುಕೊಂಡು ಬಂದಿರುವುದು ಗಮನಾರ್ಹ. ನವಶಿಲಾಯುಗ ಕಾಲದಿಂದಲೂ ಅಂದರೆ ಸುಮಾರು ೨೦,೦೦೦ ವರ್ಷಗಳಿಂದಲೂ ದೇವಿ ಪೂಜೆ ನಡೆದುಕೊಂಡು ಬಂದಿದೆ. ಕ್ರಿಪೂ. ಯುಗದ ಯುರೋಪಿನಲ್ಲಿ ಪ್ರಚಲಿತವಾಗಿದ್ದ ಧರ್ಮಗಳ ಒಂದು ಭಾಗವಾಗಿ ಮಾತೃಪೂಜೆ ನಡೆಯುತ್ತಿತ್ತು. ಯುರೋಪಿನ ಉದ್ದಗಲಕ್ಕೂ ಸಣ್ಣ ಸಣ್ಣ ದೇವಿ ವಿಗ್ರಹಗಳು ವಿಶೇಷವಾಗಿ ಯೋನಿ ಹಾಗೂ ಸ್ತನಗಳ ಮೇಲೆ ವಿಶೇಷ ಒತ್ತು ನೀಡಲಾಗಿದೆ. ಈ ವಿಗ್ರಹಗಳನ್ನು ಸಂತಾನಾಭಿವೃದ್ಧಿಗಾಗಿ ಆಚರಿಸಲ್ಪಡುತ್ತಿದ್ದ ವಿಧಿಗಳ ಸಂಬಂಧವನ್ನು ಸೂಚಿಸುವುದು. ಮಾತೃಪೂಜೆ ವಿಶ್ವದ ಎಲ್ಲೆಡೆಯಲ್ಲೂ ಆಚರಣೆಯಲ್ಲಿದ್ದಿರಬೇಕೆಂದು ಇದರಿಂದ ತಿಳಿಯುತ್ತದೆ. ಪ್ರಾಚೀನ ಗ್ರೀಸ್, ಈಜಿಪ್ಟ್, ರೋಮ್‌ನಲ್ಲೂ ದೇವಿ ಪಂಥಗಳು ಶಕ್ತಿಯುತವಾಗಿತ್ತು ಎಂಬುದು ವಿದ್ವಾಂಸರ ಅಭಿಪ್ರಾಯ. ಮಾತೃ ಆರಾಧನೆಯು ಮಾತೃಪ್ರಧಾನ ಕುಟುಂಬದವರಿಂದ ಉಗಮ ಪಡೆದಿದೆ. ಇತರೆ ದೇಶಗಳಲ್ಲಿ ನಾಗರಿಕತೆ ಬೆಳೆದಂತೆ ಮಾತೃದೇವತೆಗಳ ಆರಾಧನೆಯ ಪದ್ಧತಿ ಕಣ್ಮರೆಯಾಗುತ್ತಿದೆ. ಭಾರತದಲ್ಲಿ ಮಾತ್ರ ಈ ಉಪಾಸನೆಯ ದೃಢವಾಗಿದೆ.[೧೮]

ಮಾತೃಪೂಜೆ, ಕುಲದೇವತೆಯರ ಪೂಜೆ, ನಾಗಪೂಜೆ, ವೃಕ್ಷಪೂಜೆ (ಬನದೇವತೆ), ಧಾನ್ಯದೇವತೆ, ಭೂಮಿಪೂಜೆ, ಸಂತಾನೋತ್ಪತ್ತಿಗಾಗಿ ಪೂಜೆ ಇವು ಭಾರತಕ್ಕೆ ಮಾತ್ರ

ಸೀಮಿತವಾಗಿಲ್ಲ. ಇವು ಪ್ರಾಚೀನ ನಾಗರಿಕತೆಗಳಲ್ಲಿ ವ್ಯಾಪಕವಾಗಿ ಹಬ್ಬಿದ್ದ ಧಾರ್ಮಿಕ ವಿಧಿ ಎಂಬುದು ನಿರ್ವಿವಾದ. The Golden Bough ಕೃತಿಯಲ್ಲಿ ಫ್ರೇಸರ್ ಅವರು The Corn - Mother in America, The rice Mother in East Indies, The double personification of the corn as Mother and daughter ಮೊದಲಾದವುಗಳ ಬಗ್ಗೆ ವಿವರವಾಗಿ ಬರೆದಿದ್ದಾರೆ. ದವಸಧಾನ್ಯಗಳನ್ನು ತಾಯಿಯೆಂದು ಪೂಜಿಸಿದ್ದು ಅತ್ಯಂತ ಸಹಜವಾಗಿದೆ. ಹಾಗೆಯೇ ಬದುಕಿಗೆ ಸಹಾಯಕವಾದುದನ್ನೆಲ್ಲ ದೈವೀಭಾವದಿಂದ ಪೂಜಿಸುವ ಆಶಯವು ಇಲ್ಲಿಯ ಜನಾಂಗದ ವೈಶಿಷ್ಟ್ಯ. ಆ ಕಾಲದಲ್ಲಿ ಮರಗಳು ಈ ಜನಾಂಗದ ಉಪಜೀವನದ ಮುಖ್ಯ ಸಾಧನವಾಗಿರಬೇಕು. ಆದ್ದರಿಂದ ಬನದೇವಿಯ ಉಪಾಸನೆ ಇಂದಿಗೂ ಉಳಿದುಬಂದಿದೆ. ಹೀಗೆ ಪ್ರಪಂಚದಲ್ಲಿ ಬಹುಕಾಲದಿಂದಲೂ ಉಳಿದುಕೊಂಡು ಬಂದಿರುವ ಬನದ ಆರಾಧನೆ ಈಗಲೂ ಪ್ರಚಲಿತವಾಗಿರುವ ಜೀವಂತ ಸಂಪ್ರದಾಯದಾಗಿದೆ.

ಆಚರಣೆ ಮತ್ತು ಆರಾಧನೆಗಳು ಒಂದು ರೀತಿಯಲ್ಲಿ ಸಮಾಜದ ಸಾಮಾಜಿಕ ಮುಖಕ್ಕೆ ಹಿಡಿದ ಕನ್ನಡಿಯೂ ಹೌದು. ಸಾಂಸ್ಕೃತಿಕ ಹಿನ್ನೆಲೆಯ ಇತಿಹಾಸವೂ ಹೌದು. ಈ ಹಿನ್ನೆಲೆಯಲ್ಲಿ ಬನಶಂಕರಿ ದೇವಿಯ ಈ ಅಧ್ಯಯನವು ಕೇವಲ ಸಾಂಸ್ಕೃತಿಕ ಆಶಯುಗಳನ್ನಷ್ಟೇ ಹೊಂದಿರದೆ, ಅದು ಸಮಾಜಶಾಸ್ತ್ರೀಯ ಆಯಾಮುಗಳನ್ನು ಪಡೆದುಕೊಳ್ಳುತ್ತದೆ. ವೈದಿಕ ಪ್ರೇರಿತ ಪುರುಷ ಪ್ರಧಾನ ವ್ಯವಸ್ಥೆಯನ್ನು ಧಿಕ್ಕರಿಸುವ, ಮಾತೃಮೂಲೀನ ಮೌಲ್ಯಗಳನ್ನು ಹಲವು ಸಮುದಾಯಗಳಲ್ಲಿ ಪ್ರತಿಷ್ಠಾಪಿಸುವ ಅಥವಾ ನಿರಂತರ ಮುಂದುವರೆಸಿಕೊಂಡು ಹೋಗುವ ಒಂದು ಜೀವಂತ ವ್ಯವಸ್ಥೆಯಾಗಿ ಬನದೇವಿಯ ಪಂಥವು ಕಾರ್ಯನಿರ್ವಹಿಸುತ್ತಿದೆ ಎಂದರೆ ತಪ್ಪಾಗಲಾರದು.

ವನದ ದೇವತೆಯಾದ ಈಕೆಯ ಮೇಲೆ ಪ್ರಭಾವ ಬೀರುವ ವಿವಿಧ ಪಂಥಗಳು, ವೈದಿಕ ಪ್ರಭಾವ ಮುಂತಾದ ವಿಷಯಗಳನ್ನು ದೇವಿಯ ಆಚರಣೆ ವಿಧಿ ಸಂಪ್ರದಾಯ, ಪೂಜಾವಿಧಾನ ಮುಂತಾದವುಗಳ ಮುಖಾಂತರ ಕಂಡುಕೊಳ್ಳುವ ಒಂದು ಕಿರು ಪ್ರಯತ್ನವನ್ನಿಲ್ಲಿ ಮಾಡಲಾಗಿದೆ.

**೩. ೭. ಗ್ರಾಮದೇವತೆಯಾಗಿ ಬನಶಂಕರಿ**

ಗ್ರಾಮಗಳಲ್ಲಿ ಗ್ರಾಮಸ್ಥರಿಂದ ಸಕಾಲಕ್ಕೆ ಆರಾಧನೆಗೊಳ್ಳುತ್ತಿರುವ ದೇವತೆಗಳನ್ನು ಜನಪದ ದೇವತೆಗಳೆಂದು ಕರೆಯುವುದು ರೂಢಿ. ಮಾನವನ ತನ್ನ ಜೀವಿತಾವಧಿಯಲ್ಲಿ ಅನೇಕ ದೇವರುಗಳಲ್ಲಿ ನಂಬಿಕೆ ಇಟ್ಟು ಪೂಜಿಸುತ್ತಾ, ಆರಾಧಿಸುತ್ತಾ ಬಂದಿದ್ದಾನೆ. ಹೀಗೆ ಸಂಸ್ಕೃತಿ ಬೆಳೆದಾಗಿನಿಂದ ಇಂದಿನವರೆಗೂ ಪಾಲಿಸಿಕೊಂಡು ಬಂದ ಆಚರಣೆ ಸಂಪ್ರದಾಯಗಳಲ್ಲಿ ಸ್ವಲ್ಪ ಬದಲಾವಣೆಯನ್ನು ಪಡೆದುಕೊಂಡಿದ್ದರೂ, ಅವುಗಳ ಮೂಲ ಉದ್ದೇಶಕ್ಕೆ ಭಂಗವಾಗದಂತೆ ಎಚ್ಚರವಹಿಸಿಕೊಂಡೇ ಅವುಗಳನ್ನು ಅನುಸರಿಸಲಾಗುತ್ತಿದೆ.

ಅನಾಗರೀಕ ಅಥವಾ ಗ್ರಾಮ್ಯ ಜನಾಂಗಗಳಲ್ಲಿ ಆದಿಕಾಲದಿಂದಲೂ ಉಳಿದುಬಂದಿರುವ ದೇವತೆಗಳನ್ನು ಜನಪದ ದೇವತೆಗಳೆಂದು ಕರೆಯಬಹುದು. ಕಂಠಸ್ಥ ಪರಂಪರೆಯ ವಿವರಗಳಿಗೆ ಮನ್ನಣೆ ನೀಡುವ ವಿದ್ವಾಂಸರು ಹೀಗೆ ಅಭಿಪ್ರಾಯಪಟ್ಟಿದ್ದಾರೆ ಒಂದು ಊರು ಪ್ರಾರಂಭವಾದಾಗಲೇ ಇದ್ದ ಅಥವಾ ಪ್ರಾರಂಭವಾದಾಗ ಸ್ಥಾಪಿಸಿದ ಆ ಊರಿನ ರಕ್ಷಣಾದೇವತೆ ಅಥವಾ ಅಧಿದೇವತೆ ಅಥವಾ ಮೂಲದೇವತೆಯೇ ಆ ಊರಿನ ಗ್ರಾಮದೇವತೆ[೧೯] ಎಂದು ಮತ್ತೆ ಕೆಲವರು ಅಭಿಪ್ರಾಯಪಡುವರು. ಏನೇ ಆದರೂ ಗ್ರಾಮದೇವತೆ ಗ್ರಾಮೀಣ ಜನಜೀವನದ ಮಾನಸಿಕ ಅಗತ್ಯವಾಗಿದ್ದು, ಅವರ ಸಾಮರಸ್ಯದ ಜೀವಾಳವಾಗಿ ಅವರ ಬದುಕಿನ ಗಾಢ ನಂಬಿಕೆಯ ಪ್ರತೀಕ.

ಗ್ರಾಮದ ಜನರ ಅನೇಕ ಸಂಕಷ್ಟಗಳನ್ನು ನಿವಾರಿಸುವ ಹೊಣೆಯನ್ನು ಗ್ರಾಮದೇವತೆಗಳು ಹೊತ್ತಿವೆ. ಮಳೆ, ಬೆಳೆ, ಮಕ್ಕಳು, ಬರಗಾಲ, ಇಂತಹ ಸಮಸ್ಯೆಗಳನ್ನು ಗ್ರಾಮದೇವಿಯನ್ನು ಸಂತುಷ್ಟಪಡಿಸಿ ಪರಿಹರಿಸಿಕೊಳ್ಳಬಹುದು ಎಂಬ ನಂಬಿಕೆಯಿದೆ. ಹಾಗೆಯೇ ಗ್ರಾಮದೇವತೆಗಳ ಬಗ್ಗೆ ಇರುವ ಭಯ, ಭಕ್ತಿ ಅವುಗಳನ್ನು ಪೂಜಿಸದಿದ್ದರೆ ಕೋಪಗೊಳ್ಳುತ್ತವೆ ಎನ್ನುವ ಭಯ ಜನರಲ್ಲಿದೆ. ಈ ವಿಷಯದ ಕುರಿತು ಹೆನ್ರಿ ವೈಟ್ ಹೆಡ್ ಹೀಗೆ ಉಲ್ಲೇಖಿಸುವರು.

> "Shiva and vishnu represent forces of nature shiva symbloicses the power of dostruction and the idea of life through death, vishau the power of preservation and the idea of salvation. Both these deities and the system of religion connected with them are the out come of philosophic reflection on the universe as a whole but the village deities, on the other hand. have no relation to the universe they symbolize only the facts of village life. They are related not to the great world forces, but to such simple facts as cholera, small pox and cattle diseases".[೨೦]

ಹೀಗೆ ಗ್ರಾಮದೇವತೆಗಳನ್ನು ತಮ್ಮ ಗ್ರಾಮದ ಸಂರಕ್ಷಣೆಗಾಗಿ ಆರಾಧಿಸುವ ಪರಿಪಾಠವಿದೆ. ಅವುಗಳನ್ನು ಭಕ್ತಿಯಿಂದ ಆರಾಧಿಸುವುದು ಅವುಗಳ ಭಯಕ್ಕಾಗಿ, ಅವುಗಳ ಕೋಪವನ್ನು ತಣಿಸುವುದಕ್ಕಾಗಿ ಆರಾಧಿಸುತ್ತಾರೆ.

ಗ್ರಾಮದೇವತೆಗಳ ದೇವಾಲಯಗಳು ಊರಿನ ಪ್ರಮುಖವಾದ ಸ್ಥಳದಲ್ಲಿ ಅಥವಾ ಊರಿನ ಹೊರಭಾಗದಲ್ಲಿ, ಊರಿನ ಮಧ್ಯೆ ಭಾಗದಲ್ಲಿರುತ್ತವೆ. ಏಕೆಂದರೆ ಊರಿನಲ್ಲಿ ದುಷ್ಟಶಕ್ತಿಗಳು ಪ್ರವೇಶ ಮಾಡದೆ, ಅವುಗಳನ್ನು ಹೊರಗಿನಿಂದಲೇ ಓಡಿಸಬೇಕೆಂಬ ನಂಬಿಕೆ ಇದೆ. ಊರಿನ ಮಧ್ಯೆ ನೆಲೆಸಿದಂತಹ ಗ್ರಾಮದೇವತೆಯು ಊರಿನ ಜನರ ರಕ್ಷಣೆಯ ಭಾರ ಹೊತ್ತು ಅವರನ್ನು ಸಂರಕ್ಷಣೆ ಮಾಡುವಂತಹವು. ಅಲ್ಲದೆ ಊರಿನ ಹೊರಭಾಗದಲ್ಲಿ ಬಯಲು ಪ್ರದೇಶದಲ್ಲಿ ಮರದ ಕೆಳಗೆ, ಹಳ್ಳದ, ನದಿ ಮತ್ತು ಕೆರೆಯ ದಂಡೆಯ ಮೇಲೆ

ಕೆಲವು ದೇವತೆಗಳು ಸ್ಥಾಪಿತಗೊಂಡಿರುವುದು. ಈ ಹಿನ್ನೆಲೆಯಲ್ಲಿ ಗಮನಿಸಿದಾಗ ಬಾದಾಮಿಯ ಬನಶಂಕರಿ ಗುಡಿಯು ಮಲಪ್ರಭೆಯು ಹರಿಯುವ ಸರಸ್ವತಿ ಹಳ್ಳದ ದಂಡೆಯಲ್ಲಿದೆ. ಕೆಲವು ಗ್ರಾಮ್ಯದೇವ, ದೇವತೆಗಳು ಐತಿಹಾಸಿಕ ಕಾರಣಗಳಿಂದಾಗಿ ಬೆಳವಣಿಗೆ ಹೊಂದಿ ಭಾರತೀಯ ಶಿಷ್ಟ ಪರಂಪರೆಯ ಸಂಪರ್ಕವನ್ನು ಪಡೆದಿವೆ. ಹಾಗೆಯೇ ಮೇಲ್ವರ್ಗದವರಾದ ಲಿಂಗಾಯಿತ, ವೈಶ್ಯರಲ್ಲದೆ ಬ್ರಾಹ್ಮಣರನ್ನೂ ಅನುಯಾಯಿಗಳನ್ನಾಗಿ ಪಡೆದು ಪ್ರಭಾವಶಾಲೀ ಶಕ್ತಿಗಳಾಗಿ ಬೆಳೆದಿವೆ. ಮೈಸೂರಿನ ಚಾಮುಂಡಿ, ಸವದತ್ತಿ ಎಲ್ಲಮ್ಮ, ಬಾದಾಮಿ ಬನಶಂಕರಿ, ಕೊಲ್ಲೂರಿನ ಮೂಕಾಂಬಿಕೆ, ಶಿರಸಿಯ ಮಾರಿಕಾಂಬಾ ಇದಕ್ಕೆ ಒಳ್ಳೆಯ ನಿದರ್ಶನಗಳು.

ಜನಪದ ದೇವತೆಗಳನ್ನು ಅಮ್ಮ, ತಾಯಿ ಎಂದು ಸಂಬೋಧಿಸಿ ಆರಾಧಿಸುವುದನ್ನು ನೋಡುತ್ತೇವೆ. ದ್ಯಾಮವ್ವ, ಕರಿಯಮ್ಮ, ಕರಿಯವ್ವ, ಬನದಬ್ಬೆ, ಬನದಮ್ಮ, ಶಂಕ್ರವ್ವ, ಕಾಳವ್ವ, ಕಾಳಮ್ಮ, ದುರುಗಮ್ಮ, ಲಕ್ಕವ್ವ, ಎಲ್ಲಮ್ಮ, ಎಲ್ಲವ್ವ, ಬನದ ಮಹಾಮಾಯಿ, ಚೌಡವ್ವ, ಚೌಡಮ್ಮ, ಮಾರಮ್ಮ, ಮಾರವ್ವ, ಮಾರಕ್ಕ, ಪಾಲಕಮ್ಮ, ಗಂಗಮ್ಮ, ಗಂಗವ್ವ, ಗೌರವ್ವ ಹೀಗೆ ನಾನಾ ರೀತಿಯಲ್ಲಿ ಜನಪದ ದೇವತೆಗಳು ಕಾಣಿಸಿಕೊಳ್ಳುತ್ತವೆ. ಅವುಗಳಿಗೆ ಪ್ರತ್ಯೇಕವಾಗಿ ವೈವಿಧ್ಯಮಯವಾದ ಆರಾಧನಾ ಸಂಪ್ರದಾಯಗಳು ಇರುತ್ತವೆ. ಪ್ರತ್ಯೇಕ ಪೂಜಾರರು ಇರುತ್ತಾರೆ. ಈ ಜನಪದ ದೇವತೆಗಳ ಆರಾಧನಾ ಸಂಸ್ಕೃತಿಯು ದ್ರಾವಿಡ ಸಂಸ್ಕೃತಿಯ ಮೂಲದಿಂದ ಬಂದ ದೇವತೆಗಳೆಂದು ಕರೆಯುವ ವಾಡಿಕೆಯಿದೆ. ಸಾಂಸ್ಕೃತಿಕವಾಗಿ ಜನಪದ ದೇವತೆಗಳಿಗೆ ಜನಸಾಮಾನ್ಯರಲ್ಲಿ ಹಿಂದುಳಿದ ಜನಸಮುದಾಯಗಳೇ ಪೂಜಾರಿಗಳಾಗುತ್ತಾರೆ. ಅವರು ಮುಖ್ಯವಾಗಿ ಕುಮ್ರಿ, ಮರಾಠಿಗರು, ಮುಕ್ರಿ, ದಲಿತರು, ನಾಮಧಾರಿಗಳು, ಕುಂಬಾರರು, ಗೊಂಡರು, ಬಡಿಗರು, ಗಾಣಿಗರು, ವಿಶ್ವಕರ್ಮರು ಮುಂತಾದ ಶೂದ್ರರು ಮತ್ತು ದಲಿತರು ಬಹುಸಂಖ್ಯೆಯಲ್ಲಿ ಜನಪದ ದೇವತೆಗಳ ಪೂಜಾರಿಗಳಾಗಿರುತ್ತಾರೆ. ಇಂತಹ ವಿಚಾರಗಳಲ್ಲಿ ಪ್ರದೇಶದಿಂದ ಪ್ರದೇಶಕ್ಕೆ ಪೂಜಾರಿಗಳಲ್ಲಿ ಭಿನ್ನತೆಗಳಿರುತ್ತವೆ. ಜನಪದ ದೇವತಾ ವರ್ಗಕ್ಕೆ ಬನದಬ್ಬೆಯು ಕೂಡು ಸೇರುತ್ತಾಳೆ. ಮಾತೃದೇವತೆಯಾದ ಬನಶಂಕರಿಯ ಅಧ್ಯಯನವೆಂದರೆ ಶಾಕ್ತ ಮೂಲದ ಹೆಣ್ಣು ದೇವತೆಗಳ ಅಧ್ಯಯನವೇ ಆಗಿದೆ. ಈ ಜನಪದ ದೇವತೆಗಳ ಹುಟ್ಟಿಗೆ ದ್ರಾವಿಡ ಸಂಸ್ಕೃತಿಯೇ ಮೂಲ. ಆದ್ದರಿಂದ ದ್ರಾವಿಡ ಸಂಸ್ಕೃತಿಯಲ್ಲಿರುವ ಮಾತೃಪ್ರಧಾನ ಪದ್ಧತಿ ಈ ದೇವತೆಯಲ್ಲಿ ಕಾಣುತ್ತೇವೆ.

ಉತ್ತರ ಕರ್ನಾಟಕದ ಬೆಳಗಾವಿ, ಬಿಜಾಪುರ, ಬಾಗಲಕೋಟೆ ಜಿಲ್ಲೆಗಳಲ್ಲಿ ಮಾತೃಮೂಲಿನ ಪದ್ಧತಿ ಇದೆ. ಇದರಿಂದ ಈ ಭಾಗದಲ್ಲಿ ಮಾತೃಸ್ಥಾನದಲ್ಲಿ ಶಕ್ತಿದೇವತೆಯಾದ ಬನಶಂಕರಿಯನ್ನು ಆರಾಧಿಸುತ್ತಾರೆ. ಉದಾಹರಣೆಗೆ, ಲಜ್ಜಾಗೌರಿ, ದ್ಯಾಮವ್ವ, ದುರುಗವ್ವ, ಎಲ್ಲಮ್ಮ, ಚೌಡವ್ವ, ಮಾರಮ್ಮ, ಕರಿಯಮ್ಮ, ಲಕ್ಕವ್ವ, ಶಂಕರಿ ಇತ್ಯಾದಿಗಳನ್ನು ಗಮನಿಸಬಹುದು. ಉತ್ತರ ಕರ್ನಾಟಕದ ಭಾಗದಲ್ಲಿ ಜನಪದರ ಬದುಕಿನ ಅವಿಭಾಜ್ಯ ಅಂಗವಾಗಿ ಮಾತೃ ಆರಾಧನೆ

ಕಂಡುಬರುತ್ತದೆ. ಜನಪದರು ಇಂತಹ ದೇವತೆಯ ಮೂಲಕ ತಮ್ಮ ಜೀವನದ ವಿಧಾನಗಳನ್ನು ಜೀವಂತವಾಗಿಟ್ಟಿದ್ದಾರೆ. ಆದ್ದರಿಂದ ಜನಪದ ದೇವತೆಗಳ ಅಧ್ಯಯನವೆಂದರೆ ಅದು ಪರೋಕ್ಷವಾಗಿ ದ್ರಾವಿಡ ಬದುಕಿನ ಭಾಗವೇ ಆಗಿ ಈ ಬನದಬ್ಬೆಯು ರೂಪುಗೊಳ್ಳುತ್ತದೆ.

ಇಂದಿಗೂ ಕೂಡ ಬನಶಂಕರಿಗೆ ಗ್ರಾಮದೇವತೆಗೆ ಸಲ್ಲುವ ಕೆಲವು ಪ್ರಮುಖ ಆಚರಣೆಗಳನ್ನು ನೆರವೇರಿಸಲಾಗುವುದು. ಬನಶಂಕರಿಯ ಅಷ್ಟೋತ್ತರ ನಾಮವಳಿಯಲ್ಲಿ 'ಗ್ರಾಮ ದೇವತಾಭ್ಯೋ ನಮಃ' ಎಂಬ ಮಂತ್ರದೊಂದಿಗೆ ಈಗಲೂ ದೇವಿಗೆ ಪೂಜೆ ಸಲ್ಲುತ್ತದೆ. ಹಾಗೆಯೇ ನವರಾತ್ರಿಯ ದುರ್ಗಾಷ್ಟಮಿ ದಿನದಂದು ದೇವಿಗೆ, ಶ್ರೀಚಕ್ರಕ್ಕೆ ಮದ್ಯವನ್ನು ನೈವೇದ್ಯವಾಗಿ ಅರ್ಪಿಸುವ ಆಚರಣೆಯಿದೆ. ಇದನ್ನು ಅರ್ಚಕರು ಬಿಂದುತರ್ಪಣ ಎಂದು ಕರೆಯುತ್ತಾರೆ. ಪೂರ್ವದಲ್ಲಿ ಬನಶಂಕರಿಯು ನೆಲೆಸಿರುವ ವನದಲ್ಲಿ ಹೆಚ್ಚು ಪ್ರಮಾಣದಲ್ಲಿ ಈಚಲು ಮರಗಳು ಬೆಳೆಯುತ್ತಿದ್ದವು. ಅವುಗಳಿಂದ ಹೆಂಡವನ್ನು ತಯಾರಿಸಿ ದೇವಿಗೆ ಅರ್ಪಿಸುತ್ತಿದ್ದರು ಎಂಬುವುದು ಗಮನಾರ್ಹ.

ಬನಶಂಕರಿ ಗುಡಿಯ ಹಿಂಭಾಗದಲ್ಲಿರುವ ತೋಟದ ಮಧ್ಯದಲ್ಲಿ ಮಲೆಯಮ್ಮನ ಗುಡಿಯಿದೆ. ಈಕೆಯು ಬನಶಂಕರಿಯ ಸಹೋದರಿ ಎಂಬ ವಾಡಿಕೆಯಿದೆ. ಬನಶಂಕರಿಯ ರಥೋತ್ಸವ ಪ್ರತಿವರ್ಷ ಬನದ ಹುಣ್ಣಿಮೆಯ ದಿನ ನಡೆಯುವುದು. ಈ ರಥೋತ್ಸವ ನಡೆದು ೧೫ ದಿನಗಳ ಒಳಗಾಗಿ ಮಲೆಯಮ್ಮನಿಗೆ ಪ್ರತಿವರ್ಷ ಬಲಿ ಕೊಟ್ಟರೆ ರಥೋತ್ಸವ ನಿರ್ವಿಘ್ನವಾಗಿ ನೇರವೇರುತ್ತದೆ ಎಂಬುವುದು ಜನಪದರ ನಂಬಿಕೆ. ವಿಶೇಷವೆಂದರೆ ಈ ದೇವಿಗೆ ಪ್ರತಿ ವರ್ಷ ಬನಶಂಕರಿ ದೇವಿಯ ಅರ್ಚಕ ವರ್ಗದವರು ಬಂದು ಸೇವೆಯನ್ನು ಸಲ್ಲಿಸುತ್ತಾರೆ. ಹಾಗೆಯೇ ಇಲ್ಲಿ ನಡೆಯುವ ಬಲಿ ಆಚರಣೆಗೆ ಬೇಕಾಗುವ ಎಲ್ಲಾ ಖರ್ಚನ್ನು ಅರ್ಚಕ ವರ್ಗದವರು ನೀಡುತ್ತಾರೆ. ಬನಶಂಕರಿ ಗುಡಿಯ ಸ್ವಚ್ಛತಾ ಕಾರ್ಯವನ್ನು ಅಂಬಿಗ, ಹರಿಜನರು, ಗಾಣಿಗ ಸಮುದಾಯದವರು ಮಾಡುತ್ತಾರೆ. ಇವರು ಮೂಲತಃ ಚೊಳಚಗುಡ್ಡದ ಗ್ರಾಮದವರು. ಇವರು ಅರ್ಚಕರಿಂದ ಬಲಿ ಕಾರ್ಯಕ್ಕೆ ಬೇಕಾಗಿರುವ ಹಣವನ್ನು ಪಡೆದು ಮಲೆಯಮ್ಮ ದೇವಿಗೆ ಬಲಿಯನ್ನು ಅರ್ಪಿಸುತ್ತಾರೆ. ಮೇಲಿನ ಅಂಶವನ್ನು ಗಮನಿಸಿದರೆ ಪೂರ್ವದಲ್ಲಿ ಬನಶಂಕರಿಯು ಗ್ರಾಮದೇವಿಯಾಗಿದ್ದಾಗ ಬಲಿ ನೀಡುವ ಪದ್ಧತಿ ಇತ್ತು ಎಂದು ಊಹಿಸಬಹುದು. ಪೂರ್ವದಲ್ಲಿ ನಡೆಯುತ್ತಿದ್ದ ಆಚರಣೆಯನ್ನು ಬಿಡಲಾಗದೆ ಅರ್ಚಕರು ಬಲಿಯಾಚರಣೆಯನ್ನು ಬನಶಂಕರಿಯ ಗುಡಿಯ ಬದಲಿಗೆ ಮಲೆಯಮ್ಮನ ಗುಡಿಯಲ್ಲಿ ನೆರವೇರಿಸುತ್ತಿರುವುದು ಗಮನಾರ್ಹ.

ಬನಶಂಕರಿದೇವಿಯು ಸಂಸ್ಕೃತೀಕರಣಕ್ಕೆ ಒಳಗಾಗಿ ಶಾಸ್ತ್ರೋಕ್ತ ಪೂಜೆಗಳು ಸಲ್ಲುತ್ತಿವೆ. ಆದರೆ ಎಷ್ಟೇ ಸಂಸ್ಕೃತೀಕರಣವಾಗಿದ್ದರೂ ಬನದೇವಿಯು ತನ್ನ ಪ್ರಾಚೀನ ಆರಾಧನ ವಿಧಿ-ವಿಧಾನಗಳಲ್ಲಿ ಕೆಲವನ್ನು ಇನ್ನೂ ಉಳಿಸಿಕೊಂಡು ಬಂದಿದೆ. ಶಿವಮೊಗ್ಗದ ಭದ್ರಾವತಿಯ

ಆನವೇರಿ ಗ್ರಾಮ, ಶಿಕಾರಿಪುರ ತಾಲೂಕಿನ ಬಂದಳಿಕೆ ಗ್ರಾಮ, ಹೊಸಪೇಟೆಯ ದರೋಜಿ, ಕರ್ನಾಟಕದ ಇನ್ನಿತರೆ ಸ್ಥಳದಲ್ಲಿ ಬನಶಂಕರಿಯ ವಿಗ್ರಹಗಳು ಕಂಡುಬಂದಿವೆ. ಈ ವಿಗ್ರಹಗಳ ಎದೆಯ ಮೇಲೆ ಸ್ತನಗಳು, ಮುಖದ ಮೇಲೆ ಮೀಸೆಯೂ ಉಂಟು. ಇಂತಹ ವೈಲಕ್ಷಣಕ್ಕೆ ಬನಶಂಕರಿಯ ಆರಾಧಕರ ಪ್ರಕಾರ, ಅವಳೇ ಆದಿಶಕ್ತಿಯಾಗಿದ್ದರಿಂದ ಆಕೆಯು ಪುರುಷ – ಸ್ತ್ರೀ ಸಮೀಕರಣ ಹೊಂದಿದ್ದಾಳೆ. ಇಂತಹ ಶಿಲ್ಪಗಳನ್ನು ಗಮನಿಸಿದರೆ ಜನಪದರ ಗಾಢ ನಂಬಿಕೆಯು ಪ್ರಭಾವ ಬೀರಿರಬಹುದೆಂದು ಊಹಿಸಬಹುದು. ಹಾಗೆಯೇ ನಾಡಿನ ಇತರೆ ಗ್ರಾಮದೇವತೆಗಳಿಗೆ ಲೋಹದ ಮೀಸೆಗಳನ್ನು ಇಡುವ ಪದ್ಧತಿಯಿದೆ. ಉದಾಹರಣೆಗೆ, ಸುಂಕಮ್ಮ, ಗಾಳೆಮ್ಮ, ದುರ್ಗಮ್ಮ, ಎಲ್ಲಮ್ಮ, ಹುಲಿಗೆಮ್ಮ ಮುಂತಾದವುಗಳನ್ನು ಹೆಸರಿಸಬಹುದು.

ಹಾಗೆಯೇ ಬನಶಂಕರಿಯನ್ನು ಪೆಟ್ಟಿಗೆಯಲ್ಲಿಟ್ಟು ಆರಾಧಿಸುವವರು ಇದ್ದಾರೆ. ವಿಶೇಷವಾಗಿ ಶಿವಮೊಗ್ಗ, ದಾವಣಗೆರೆ, ಕೊಡಗಿನ ಮಡಿಕೇರಿಯಲ್ಲಿ ಬನಶಂಕರಿಯ ಪೆಟ್ಟಿಗೆಗಳು ಕಂಡುಬರುತ್ತವೆ. ಅಂತಹ ಪೆಟ್ಟಿಗೆಗಳಲ್ಲಿ ಲೋಹದ ವಿಗ್ರಹ, ಸಣ್ಣದಾದ ಲೋಹದ ಕೊಡೆಗಳು, ಲೋಹದ ಕಣ್ಣು, ಲೋಹದ ಮೀಸೆ, ಲಿಂಗಾಕೃತಿಯ ಶಿಲೆಗಳನ್ನು ಇಡುತ್ತಾರೆ.

ಎಲ್ಲ ಕಡೆಗಳಲ್ಲೂ ಇಂತಹ ಪೆಟ್ಟಿಗೆಗಳನ್ನು ಬಟ್ಟೆಯಲ್ಲಿ ಸುತ್ತಿಡಲಾಗುವುದು. ಅವುಗಳನ್ನು ಹೆಂಗಸರು ಮುಟ್ಟುವಂತಿಲ್ಲ ಹಾಗೂ ಯಾರು ತೆರೆಯಕೂಡದು ಎಂಬ ನಂಬಿಕೆಯಿದೆ. ಒಂದು ವೇಳೆ ತೆರೆದು ಒಳಗಿರುವುದನ್ನು ನೋಡಲು ಪ್ರಯತ್ನಿಸಿದರೆ ಆ ಊರಿಗೆ ಅಪಾಯವಾಗುವುದಲ್ಲದೆ, ನೋಡಿದ ವ್ಯಕ್ತಿಯು ನಾಶನಾಗುತ್ತಾನೆ ಎಂದು ಹೇಳುತ್ತಾರೆ. ಇಂತಹ ಪೆಟ್ಟಿಗೆಗಳನ್ನು ಮರದಿಂದ ಮಾಡಲಾಗುತ್ತದೆ. ಆದರೆ ವರ್ಷಕ್ಕೊಮ್ಮೆ ಕಣ್ಣಿಗೆ ಬಟ್ಟೆಯನ್ನು ಕಟ್ಟಿಕೊಂಡು ತೆಗೆದು, ಪೆಟ್ಟಿಗೆಯಲ್ಲಿರುವ ವಸ್ತುಗಳೆಲ್ಲ ತೆರೆದು ಶುಭ್ರಗೊಳಿಸಿ, ಪೂಜೆ ಮಾಡಿ ಮತ್ತೆ ಆ ಪೆಟ್ಟಿಗೆಯಲ್ಲಿ ಇಟ್ಟು, ಪೆಟ್ಟಿಗೆಯನ್ನು ಅಲಂಕರಿಸಿ ಊರಿನಲ್ಲಿ ಮೆರವಣಿಗೆಯನ್ನು ಮಾಡುತ್ತಾರೆ.[೨೧] ಇಂತಹ ಆಚರಣೆಗಳು ಇಂದಿಗೂ ಉಳಿದುಬಂದಿರುವುದು ವಿಶೇಷವಾಗಿದೆ. ಈ ಉಪಾಸನೆಯಲ್ಲಿ ಜಾನಪದ ನಂಬಿಕೆ ಕೆಲಸ ಮಾಡಿರುವುದು ಸ್ಪಷ್ಟವಾಗುವುದು.

ಕರ್ನಾಟಕದಲ್ಲಿ ಹಲವು ಗ್ರಾಮದೇವಿಗಳಿಗೆ ವಿವಿಧ ತರಕಾರಿಗಳಿಂದ ತಯಾರಿಸಿದ ಹಾರವನ್ನು ಹಾಕುವಂತಹ ಪದ್ಧತಿಯಿದೆ. ಅಥವಾ ಪೂಜೆಯ ಸಮಯದಲ್ಲಿ ವಿವಿಧ ತರಕಾರಿಗಳನ್ನು ಇಟ್ಟು ಆರಾಧಿಸುವ ಪದ್ಧತಿಯಿದೆ. ಸವದತ್ತಿಯ ಎಲ್ಲಮ್ಮ, ಹುಲಿಗಿಯ ಹುಲಿಗೆವ್ವನಿಗೆ, ಬಾದಾಮಿಯ ಬನಶಂಕರಿಗೆ ಇವು ಒಳ್ಳೆಯ ನಿದರ್ಶನಗಳಾಗಿವೆ. ಬಾದಾಮಿಯ ಬನಶಂಕರಿದೇವಿಗೆ ಬನದ ಹುಣ್ಣಿಮೆಯ ದಿನ ವಿವಿಧ ತರಕಾರಿಗಳಿಂದ ತಯಾರಿಸಿದ ಪಲ್ಲೆಯನ್ನು ನೈವೇದ್ಯವನ್ನು ಇಡುವ ರೂಢಿಯಿದೆ. ಇಂತಹ ಅಂಶಗಳನ್ನು ಗಮನಿಸಿದರೆ ದೇವಿಯು ಸಸ್ಯ ದೇವತೆಯಾದ್ದರಿಂದ ಈ ರೀತಿಯ ಆಚರಣೆಯಿರಬಹುದು.

ದೇವಿಯ ಆರಾಧಕರು ಹೇಳುವಂತೆ ಬನಶಂಕರಿಯ ಅವತಾರದಲ್ಲಿ ಆಕೆಯು ಅವಿವಾಹಿತೆ. ಈ ದಿಸೆಯಿಂದ ದೇವಿಯ ಸುತ್ತ ಅನೇಕ ವಿಧಿ ನಿಷೇಧಗಳು ಆವರಿಸಿಕೊಂಡಿವೆ. ಅವುಗಳಲ್ಲಿ ಮುಖ್ಯವಾಗಿ ದೇವಿಯ ಅರ್ಚಕರ ಕುಟುಂಬದ ಸದಸ್ಯರಲ್ಲಿ ವಿವಾಹವಾದರೆ, ದಂಪತಿಗಳಿಬ್ಬರು ಏಕಕಾಲದಲ್ಲಿ ಒಟ್ಟಿಗೆ ಗರ್ಭಗೃಹದ ಪ್ರವೇಶವು ನಿಷೇಧ. ಅವರು ಒಬ್ಬರಾದ ಮೇಲೆ ಒಬ್ಬರು ಹೋಗಿ ದೇವಿಯ ದರ್ಶನ ಪಡೆಯಬೇಕು. ದೇವಿಯು ಅವಾಹಿತೆಯಾದ್ದರಿಂದ ದಂಪತಿಗಳಿಬ್ಬರು ಒಟ್ಟಿಗೆ ಹೋಗಬಾರದೆಂಬ ನಿಯಮವಿದೆ. ಹಾಗೆಯೇ ಬಾದಾಮಿಯ ಬನಶಂಕರಿಯ ಜಾತ್ರೆಯ ಸಮಯದಲ್ಲಿ ೯ ದಿನಗಳವರೆಗೆ ದೇವಿಗೆ ವಿಭಿನ್ನ ವಿಶೇಷ ಪೂಜೆಗಳನ್ನು ಮಾಡಲಾಗುವುದು. ಆ ದಿನಗಳಲ್ಲಿ ದೇವಿಯ ಅರ್ಚಕರು ದೈಹಿಕ ಸಂಪರ್ಕವನ್ನು ಇಟ್ಟುಕೊಳ್ಳುವಂತಿಲ್ಲ. ಅಲ್ಲದೆ ದೇವಿಯ ವಿಗ್ರಹವನ್ನು ಹೆಂಗಸರು ಮುಟ್ಟಕೂಡದು ಎಂಬ ಪದ್ಧತಿಯಿದೆ.

ಗ್ರಾಮ ದೇವತೆಗಳಿಗೆ ಹೆಚ್ಚಾಗಿ ದಲಿತ ವರ್ಗದವರೇ ಅರ್ಚಕರು ಇರುತ್ತಾರೆ. ಹಾಗೆಯೇ ಬಾದಾಮಿಯ ಬನಶಂಕರಿ ದೇವಿಗೆ ಪೂರ್ವದಲ್ಲಿ ಗಾಣಿಗ, ಓಜರು (ವಿಶ್ವಕರ್ಮ), ಮರಾಠಿ ಸಮುದಾಯದವರು ಪೂಜಿಸುತ್ತಿದ್ದರು. ಕ್ರಿ.ಶ. ೧೦೧೯ರ ಶಾಸನದಲ್ಲಿ ಓಜರ ಪ್ರಸ್ತಾಪ ಬರುತ್ತದೆ.[೨೨] ಓಜರೆಂದರೆ ವಿಶ್ವಕರ್ಮ ಸಮುದಾಯದವರು. ಇದರ ಆಧಾರದ ಮೇಲೆ ಪೂರ್ವದಲ್ಲಿ ಓಜರು ದೇವಿಯ ಅರ್ಚಕರಾಗಿ ಸೇವೆ ಸಲ್ಲಿಸುತ್ತಿದ್ದರು ಎಂಬುವುದು ಸ್ಪಷ್ಟವಾಗುತ್ತದೆ. ಇಂದಿಗೂ ಕೂಡ ನಾಡಿನ ಪ್ರಮುಖ ಶಕ್ತಿ ದೇವಿಯರಾದ ಶಿರಸಂಗಿ ಕಾಳಿಕಾದೇವಿ, ಶಿರಸಿ ಮಾರಿಕಾಂಬಾ, ದ್ಯಾಮವ್ವ ದೇವಿಯರ ಅರ್ಚಕರು ವಿಶ್ವಕರ್ಮದವರೇ ಎಂಬುವುದನ್ನು ಇಲ್ಲಿ ಗಮನಿಸಬಹುದು.

ಬಾದಾಮಿ ವಸ್ತುಸಂಗ್ರಹಾಲಯದಲ್ಲಿ ಒಂದು ಕಾಳಿ ವಿಗ್ರಹವಿದೆ. ಇದು ಬನಶಂಕರಿ ಗುಡಿಯ ಮುಂದಿರುವ ಹರಿದ್ರಾತೀರ್ಥದಲ್ಲಿ ಸಿಕ್ಕಿರುವ ವಿಗ್ರಹ. ಉಸುಕು ಕಲ್ಲಿನಲ್ಲಿ ರಚಿಸಿದ್ದಾರೆ. ಈ ವಿಗ್ರಹವು ಉಗ್ರ ರೂಪದಲ್ಲಿದ್ದು, ವಿಗ್ರಹವು ಮುಕ್ಕಾಗಿದೆ. ಆದ್ದರಿಂದ ಇದನ್ನು ಹೊಂಡದಲ್ಲಿ ವಿಸರ್ಜಿಸಿರಬಹುದು. ಈ ಶಿಲ್ಪವು ಮೂಲ ಬನಶಂಕರಿ ದೇವಾಲಯದು ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ಅಂದರೆ ಪೂರ್ವದಲ್ಲಿ ಗ್ರಾಮದೇವಿಯಾದ ಕಾಳಿಯನ್ನು ಇಲ್ಲಿ ಪೂಜಿಸಲಾಗುತ್ತಿತ್ತು ಎಂದು ತಿಳಿಯಬಹುದು. ಉದಾ : ಯಾದಗಿರಿ ಜಿಲ್ಲೆಯ ಕಾಳಾ ಬೆಳಗುಂದಿಯ ವೀರಭದ್ರನನ್ನು ಮತ್ತು ಆತನ ಹೆಂಡತಿ ಕಾಳಿಯನ್ನು ಸ್ಥಳ ಪುರಾಣದಲ್ಲಿ ಬನದೇಶ್ವರ – ಬನದೇಶ್ವರಿ ಎಂದು ಕರೆಯಲಾಗಿದೆ. ದೇವಿಯು ಶಿಷ್ಟ ರೂಪವನ್ನು ಪಡೆದ ನಂತರ ಶಾಂತ ರೂಪ, ಸೌಮ್ಯ ಬನಶಂಕರಿಯ ಮೂರ್ತಿಯನ್ನು ರಚಿಸಿ, ಪೂಜೆಯನ್ನು ಆರಂಭಿಸಿರಬೇಕು. ಜಾಡರ ಕುಲವರ್ಧಿನಿಯಾದ ಮರದಮ್ಮ ದೇವಿಯನ್ನು ಆರಾಧಿಸುತ್ತಾರೆ. ಮರದಮ್ಮ, ಬನಶಂಕರಿಯನ್ನು ಮಹಾರಾಷ್ಟ್ರದ ಮರಾಠಿ ಹಟಗಾರ-ದನಗಾರ (ಧನಗಾರ)ರು ಬನಾಯಿ-ಬನದ ಆಯಿ ಎಂದು ಹೆಸರಿನಿಂದ ಪೂಜಿಸುತ್ತಾರೆ.

ಕರ್ನಾಟಕ ಹಾಗೂ ಮಹಾರಾಷ್ಟ್ರದಲ್ಲಿ ವೃತ್ತಿಗಾಯಕರೂ, ಕಲಾಕಾರರೂ ಆದ ಗೊಂದಲಿಗರು ವಾಸಿಸುತ್ತಿದ್ದಾರೆ. ಇವರು ಗೊಂದಲವನ್ನು ಹಾಕುವಾಗ ಬನದೇವಿಯನ್ನು ಸ್ಮರಿಸುವರು. ದೇವಿಯ ಹೆಸರನ್ನೇ ಕಲಶಕ್ಕೆ ಇಡುತ್ತಾರೆ. ತುಂಬಿದ ತ್ರಾಮದ ಚರಿಗಿಯ ಬಾಯಲ್ಲಿ ಐದು ಎಲೆಯನ್ನು ಇಟ್ಟು, ಅಲ್ಲಿಯೇ ತೆಂಗಿನಕಾಯಿ ಮೇಲಿಟ್ಟು, ಅರಿಶಿಣ, ಕುಂಕುಮವಿಟ್ಟು, ನತ್ತು ಇಡಿಸಿ, ವಸ್ತ್ರ ಒಡವೆಗಳನ್ನು ತೊಡಿಸುತ್ತಾರೆ. ಇದೇ ಅವರ ರಚಿಸಿರುವ ಕಲಶ. ಈ ಕಲಶದ ಸುತ್ತಮುತ್ತಲೂ ಕಬ್ಬು, ಬಾಳೆ, ತಳಿರುತೋರಣ ಕಟ್ಟಿ ಬನವಾಗಿ ಶೃಂಗರಿಸುತ್ತಾರೆ. ಮುಂದೆ ದೀಪಗಳನ್ನು ಹಚ್ಚುವರು. ದೇವಿಯ ವಿವಿಧ ನಾಮಗಳನ್ನು ಹಾಡಿನೊಂದಿಗೆ ಸ್ಮರಿಸುತ್ತಾರೆ. ಇವರು ಸ್ಮರಿಸುವ ದೇವಿ (ಶಕ್ತಿ)ಯ ನಾಮಗಳೆಲ್ಲ ಈಗಿನ ಗ್ರಾಮದೇವತೆಗಳ ಹೆಸರುಗಳೇ ಆಗಿವೆ. ಅಂಬಾ, ಜಗದಂಬಾ, ಯಲ್ಲಮ್ಮ, ಬನದಮ್ಮಾ, ಬನಶಂಕರಿ, ವನಶಂಕರಿ, ತುಳುಜಾ ಭವಾನಿ, ಮಹಾಲಕ್ಷ್ಮೀ ಮುಂತಾದವುಗಳು. ಶಕ್ತಿದೇವತೆ ಸ್ವರೂಪಗಳಾದ ದುರ್ಗಾ, ಕಾಳಿ, ಕರಾಲೀ ಇತ್ಯಾದಿ ಯಜ್ಞೇಶ್ವರ ಸಂಬಂಧವಾದವು. ತೈತ್ತಿರೀಯ ಸಂಹಿತೆಯಲ್ಲಿ ವೇದಿಯನ್ನು ಆದಿತಿ, ಸಿಂಹೀ, ಮಹಿಷಿ ಇತ್ಯಾದಿಯಾಗಿ ಸಂಬೋಧಿಸಿದೆ. ವೇದಿ ಅಥವಾ ಚಿತೆಯಲ್ಲಿ ಪ್ರತಿಷ್ಠಿತವಾದ ಅಗ್ನಿಯ ಪ್ರಚಂಡ ರೂಪ ದುರ್ಗಾ ದೇವಿಯಾಗಿದ್ದಾಳೆ.[೨೩] ಹೀಗೆ ಶಕ್ತಿನಾಮಗಳು ಅನೇಕ ಬಗೆಯಾಗಿ ಇದ್ದರೂ ಅವುಗಳಿಗೆ ಮೂಲ ಆದಿಶಕ್ತಿಯಾಗಿದ್ದಾಳೆ.

ಹೀಗೆ ಬನಶಂಕರಿಯು ಬೇರೆ ಬೇರೆ ಹೆಸರುಗಳಿಂದ, ಬೇರೆ ಬೇರೆ ರೂಪಗಳಲ್ಲಿ ಇಂದಿಗೂ ಪೂಜಿಸಲ್ಪಡಲಾಗುತ್ತಿದೆ. ಆಧುನೀಕರಣದ ತೀವ್ರತೆ ಎಷ್ಟೇ ಇದ್ದರೂ ಮಾನವ ಮೌಲ್ಯಗಳನ್ನು ತಿದ್ದಿ, ಆತನ ಅಂತರಂಗದಲ್ಲಿ ಗ್ರಾಮದೇವತೆಯಾದ ಬನಶಂಕರಿಯ ಆಚರಣೆ ಇಂದಿಗೂ ತನ್ನ ಅಸ್ತಿತ್ವವನ್ನು ಹೊಂದಿರುವುದು ವಿಶೇಷ.

**೩. ೮. ಶಿಷ್ಟದೇವತೆಯಾಗಿ ಬನಶಂಕರಿ**

ಯಾವ ಬಗೆಯ ಲಿಖಿತಾಧಾರಗಳು ಇಲ್ಲದೆ ಗ್ರಾಮೀಣ ಜನಾಂಗಗಳಲ್ಲಿ ಆದಿಕಾಲದಿಂದಲೂ ಉಳಿದುಬಂದಿರುವ ದೇವತೆಗಳು ಜನಪದ ದೇವತೆಗಳಾದರೆ, ಶಿಷ್ಟ ಪುರಾಣಗಳಲ್ಲಿ, ಶಾಸ್ತ್ರಗ್ರಂಥಗಳಲ್ಲಿ, ಕಾವ್ಯ ಸಮುದಾಯಗಳಲ್ಲಿ ವೈಭವದಿಂದ ಮೆರೆದಿರುವ ಹಾಗೂ ಶಿಷ್ಟ ಜನಾಂಗದಿಂದ ಆರಾಧನೆಗೊಳ್ಳುವ ದೇವತೆಗಳನ್ನು ಶಿಷ್ಟದೇವತೆಗಳು ಎಂದು ಕರೆಯಬಹುದು. ಈ ಹಿನ್ನೆಲೆಯಲ್ಲಿ ಶಿಷ್ಟದೇವತೆಗಳ ಅಸ್ತಿತ್ವ ಅಥವಾ ಉಗಮದ ಚರಿತ್ರೆಯನ್ನು ಗಮನಿಸಿದಾಗ ಗ್ರಾಮದೇವತೆಗಳ ಉಗಮಕ್ಕೂ ಮೊದಲೇ ಶಿಷ್ಟದೇವತೆಗಳ ಕಲ್ಪನೆ ಇಲ್ಲವೆಂದೇ ಹೇಳಬಹುದು.

ಮಾನವ ತಾನು ನಾಗರಿಕನಾದಂತೆಲ್ಲಾ ಬೆಳಕಿಗೆ ಬಂದ ದೇವತೆ ಈ ಶಿಷ್ಟದೇವತೆಗಳು. ಒಟ್ಟಿನಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ಧಾರ್ಮಿಕವಾಗಿ ಮುಂದುವರಿದ ಹಾಗೂ ಮೇಲ್ವರ್ಗಕ್ಕೆ ಸೇರಿದ ದೇವತೆಗಳನ್ನು ನಾವು ಶಿಷ್ಟದೇವತೆಗಳೆಂದು ಗುರುತಿಸಬಹುದು.

ಆದಿಮ ಜನಾಂಗಗಳ ಬೇಟೆಗಿಂತಲೂ ಹಿಂದಿನ ಕಾಲದ ಸಮಾಜ (ಆಹಾರ ಸಂಗ್ರಹಣೆ) ಮಾತೃಪ್ರಧಾನವಾಗಿದ್ದು, ಬೇಟೆ ಮತ್ತು ಪಶುಪಾಲನೆ ಕಾಲ ಪಿತೃಪ್ರಧಾನವಾಗಿತ್ತು. ಕೃಷಿಕರಲ್ಲಿ ಮಾತೃ ಅಧಿಕಾರ ಪುನರುಜ್ಜೀವನಗೊಂಡರೆ, ಪಿತೃ ಅಧಿಕಾರ ಪಶುಪಾಲಕರಲ್ಲಿ ಬಲಗೊಂಡಿರುವುದು ವಿಶೇಷ. ಕೃಷಿಯ ಅವಿಷ್ಕಾರ ಸ್ತ್ರೀಯರಿಂದ ಪುರುಷರಿಗೆ ಹಸ್ತಾಂತರವಾಯಿತು.

ಹೀಗೆ ದೈಹಿಕ ಶ್ರಮದ ಪ್ರಾಶಸ್ತ್ಯ ಹೆಚ್ಚಾದಾಗ ಉಗಮಗೊಂಡ ಪಿತೃಪ್ರಧಾನ ವ್ಯವಸ್ಥೆಯಿಂದ ಕಾಲಾನಂತರದಲ್ಲಿ ಮಾತೃಪ್ರಧಾನ ವ್ಯವಸ್ಥೆ ಸಂಪೂರ್ಣವಾಗಿ ನಶಿಸತೊಡಗಿತು. ಎಲ್ಲಾ ವರ್ಗಗಳಲ್ಲೂ ಪುರುಷ ನೇತೃತ್ವವೇ ಪ್ರಮುಖವಾಗಿ ಧಾರ್ಮಿಕ, ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕ ಕ್ಷೇತ್ರಗಳಲ್ಲೂ ತನ್ನ ಅಸ್ತಿತ್ವವನ್ನು ಸ್ಥಾಪಿಸತೊಡಗಿತು. ಹೀಗೆ ಪುರುಷ ಪ್ರಧಾನ ಸಮಾಜ ಉಗಮವಾಯಿತು. ಆನಂತರ ಆರ್ಯರ ಆಗಮನವಾದ್ದರಿಂದ ದ್ರಾವಿಡರು ದಕ್ಷಿಣ ಕಡೆಗೆ ವಲಸೆ ಬಂದು ನೆಲೆಸಿದರು. ಅಲ್ಲಿ ಅವರ ಬುಡಕಟ್ಟುಗಳು ಬೆಳೆದು, ಆ ಬುಡಕಟ್ಟುಗಳಲ್ಲಿ ಸಂಸ್ಕೃತಿಯ ಬೆಳವಣಿಗೆಯಾಯಿತು. ಇವರು ಮಾತೃದೇವತೆಯ ಆರಾಧಕರಾಗಿ ಮುಂದುವರೆದಿರುವುದನ್ನು ಗಮನಿಸಬಹುದು.

ಹೀಗೆ ಮಾತೃಪ್ರಧಾನ ವ್ಯವಸ್ಥೆಯ ಕಾಲದಲ್ಲಿ ಉತ್ತುಂಗದಲ್ಲಿ ಇದ್ದ ಗ್ರಾಮದೇವತೆಯ ಕಲ್ಪನೆಗಳು ಕಾಲಕ್ರಮೇಣ ಅಂದರೆ, ಆರ್ಯರಾಗಮನದ ನಂತರ ಪುರುಷಪ್ರಧಾನ ವ್ಯವಸ್ಥೆ ತಲೆದೋರಿದಾಗ ಶಿಷ್ಟದೇವತೆಗಳ ಕಲ್ಪನೆ ಎಡೆಮಾಡಿಕೊಟ್ಟವು. ದ್ರಾವಿಡರು ಗ್ರಾಮದೇವತೆಗಳನ್ನು ಶಕ್ತಿಯ ಸ್ವರೂಪದಲ್ಲಿ ಪೂಜಿಸುತ್ತಿದ್ದರು.[೨೪] ಭಾರತೀಯ ಸಂಸ್ಕೃತಿಯಲ್ಲಿ ಪ್ರಧಾನವಾಗಿ ವೈದಿಕ ಹಾಗೂ ದ್ರಾವಿಡ ಎಂಬ ಎರಡು ಪರಂಪರೆಗಳಿವೆ. ದ್ರಾವಿಡರಲ್ಲಿ ಕೃಷಿಕರು ಹಾಗೂ ವಲಸೆಗಾರರು ಎಂಬ ಎರಡು ಪಂಥಗಳನ್ನು ಕಾಣಬಹುದು. ಕೃಷಿಕರಾಗಿದ್ದ ಮಾತೃಪ್ರಧಾನ ಸಮಾಜದ ಹೊಲೆಯರು-ಮಾದಿಗರು ಶಾಕ್ತರಾಗಿದ್ದರು. ಯೋನಿ ಪೂಜಕರು ತಾಂತ್ರಿಕ ಪಂಥೀಯರಾಗಿದ್ದರು. ಹಾಗೇ ವಲಸೆಗಾರ ಕುರುಬ, ಬೇಡ, ಒಕ್ಕಲಿಗ, ಗೊಲ್ಲ, ಕುಲಗಳು ಶಿಶ್ನ ಆರಾಧಕರಾಗಿದ್ದು, ಸಿದ್ಧ ಪರಂಪರೆಯವರಾಗಿದ್ದಾರೆ. ಈ ಎರಡು ವರ್ಗಗಳ ನಡುವೆ ಪ್ರಥಮದಲ್ಲಿ ಸಂಘರ್ಷ ಮತ್ತು ಕೊನೆಯಲ್ಲಿ ಸಮನ್ವಯ ಸಾಧಿತವಾಯಿತು. ಹಾಗೆಯೆ ಅವರಲ್ಲೇ ವರ್ಗ ಸಮಾಜ ಬೆಳೆಯುವ ಲಕ್ಷಣಗಳು ಕಂಡುಬಂದಿದ್ದವು. ಇಡೀ ದೇಶದಲ್ಲಿ ಮಾತೃ ಆರಾಧನೆ ಹರಡಲು ಕಾರಣರಾದರು. ವಲಸೆಗಾರ ದ್ರಾವಿಡರು ಪಶುಪತಿ ಶಿವರಾಧಕರಾಗಿದ್ದರು. ಈ ಎರಡೂ ಸಂಸ್ಕೃತಿ ಸಂಕೇತಗಳು ಸಿಂಧೂಕೊಳ್ಳದಲ್ಲಿ ದೊರಕುತ್ತವೆ. ಒಟ್ಟಿನಲ್ಲಿ ಮಾತೃಪ್ರಧಾನ ವ್ಯವಸ್ಥೆಯನ್ನು ಒಳಗೊಂಡ ಕೃಷಿಕರಲ್ಲಿ ಸ್ತ್ರೀ ಪ್ರಧಾನದೇವತೆಯ ಕಲ್ಪನೆಯಿದೆ. ಪಿತೃಪ್ರಧಾನ ವ್ಯವಸ್ಥೆಯಲ್ಲಿ ಹಾಗೂ ಪಶುಪಾಲಕ ವಲಸೆಗಾರರಲ್ಲಿ ಶಿಷ್ಟದೇವತೆಯ ಕಲ್ಪನೆ ಕಂಡುಬರುತ್ತದೆ. ತದನಂತರದ ಕಾಲದಲ್ಲಿ ಇವೆರಡರ ಸಮನ್ವಯ ಕಾಣಬಹುದು.

ಹೀಗೆ ಪಶುಪಾಲಕರ ವಲಸೆಗಾರರು ಕಾಲಕ್ರಮೇಣ ಕೃಷಿಕರಾಗಿ ತಮ್ಮ ದೇವತೆಗಳಲ್ಲಿ ಸಮನ್ವಯ ಸಾಧಿಸಿದರು. ಆದರೆ ವೈದಿಕರ ಇಂದ್ರ, ಬೃಹಸ್ಪತಿ, ವೆಂಕಟರಮಣ, ಕೃಷ್ಣ, ಧರ್ಮರಾಯ, ಅರ್ಜುನ ಮೊದಲಾದ ಶಿಷ್ಟದೇವತೆಗಳಲ್ಲಿ ಯಾವ ರೀತಿಯ ಸಮನ್ವಯ ಸಾಧಿಸಲು ಸಾಧ್ಯವಿಲ್ಲ. ಕಾರಣ ಇವೆಲ್ಲ ಪುರುಷ ವಾಚಕಗಳು, ಇವು ಸ್ತ್ರೀ ಲಿಂಗಗಳಾಗಲಾರವು. ಆದರೆ ರಾಮಪ್ಪ - ರಾಮವ್ವ, ಭೀಮಪ್ಪ-ಭೀಮವ್ವ, ದ್ಯಾಮಪ್ಪ-ದ್ಯಾಮವ್ವ ಎನ್ನುವ ಪದಗಳಲ್ಲಿ ದ್ರಾವಿಡ ಪ್ರಭಾವ ಎದ್ದು ಕಾಣುತ್ತದೆ.[೨೫]

ಈ ಅಂಶವನ್ನು ಗಮನಿಸಿದಾಗ ದ್ರಾವಿಡ ಪರಂಪರೆಯು ಹೇಗೆ ವೈದಿಕ ಶಿಷ್ಟ ಪರಂಪರೆಯ ಮೇಲೆ ತನ್ನ ಪ್ರಭಾವ ಬೀರಿದೆ ಎಂಬುದನ್ನು ತಿಳಿಯಬಹುದು. ಹೀಗೆ ಗ್ರಾಮದೇವತೆಯ ಅಸ್ತಿತ್ವಕ್ಕೆ ದ್ರಾವಿಡ ಸಾಂಸ್ಕೃತಿಯ ಕೃಷಿಕ ಸಮಾಜ ಕಾರಣವಾದರೆ, ಶಿಷ್ಟದೇವತೆಗಳ ಅಸ್ತಿತ್ವಕ್ಕೆ ವಲಸೆಗಾರ ಪಶುಪಾಲಕರ ಸಮಾಜ ಕಾರಣವಾಯಿತು. ವೈದಿಕರ ಕಾಲದಲ್ಲಂತೂ ಶಿಷ್ಟ ದೇವರ ಆರಾಧನೆಯು ಉತ್ತುಂಗ ಶಿಖರದಲ್ಲಿತ್ತು. ಹೀಗೆ ಮೊದಲಿನಿಂದಲೂ ಗ್ರಾಮದೇವತೆಗೆ ಸಿಗುವ ಸವಲತ್ತುಗಳಿಗಿಂತಲೂ ಹೆಚ್ಚಿನ ಸವಲತ್ತುಗಳು ಶಿಷ್ಟದೇವತೆಗಳಿಗೆ ಇದ್ದರೂ ಅವು ಗ್ರಾಮದೇವತೆಗಳಷ್ಟು ಪ್ರಭಾವಶಾಲಿಗಳಾಗಿರಲಿಲ್ಲ.

ಹಾಗೆಯೇ ಶಿಷ್ಟದೇವತೆಗಳ ದೇವಾಲಯಗಳು ಗ್ರಾಮದೇವತೆಗಳ ದೇವಾಲಯಗಳಿಗೆ ತದ್ವಿರುದ್ಧವಾಗಿದ್ದವು. ಇವು ಸುಂದರವೂ ವ್ಯವಸ್ಥಿತವೂ ಆಗಿದ್ದು, ಒಳ, ಹೊರ ಕೆತ್ತನೆಗಳಿಂದ ಕೂಡಿರುತ್ತವೆ. ಮೇಲ್ನೋಟಕ್ಕೆ ಎಲ್ಲರನ್ನು ಆಕರ್ಷಿಸುವ ಗುಣ ಹೊಂದಿವೆ. ಇಲ್ಲಿಯ ದೇವತೆಗಳು ಉಗ್ರ ರೂಪವಾಗಿರದೆ ಸೌಮ್ಯರೂಪಿ ದೇವತೆಗಳಾಗಿವೆ. ಸಾಮಾನ್ಯವಾಗಿ ಮೇಲ್ವರ್ಗದವರೇ ಪುರೋಹಿತರಾಗಿರುತ್ತಿದ್ದರು. ಆದರೆ ಕೆಲವು ಸಂದರ್ಭಗಳಲ್ಲಿ ಅಪರೂಪವಾಗಿ ಮೇಲ್ವರ್ಗದವರಲ್ಲದ ಪುರೋಹಿತರ ಉದಾಹರಣೆಗಳನ್ನು ಕಾಣಬಹುದು. ಬಾದಾಮಿಯ ಬನಶಂಕರಿಗೆ ಪೂರ್ವದಲ್ಲಿ ಕೆಳವರ್ಗದವರಾದ ಗಾಣಿಗರು ಪೂಜಾರಿಗಳಾಗಿದ್ದ ಬಗ್ಗೆ ಐತಿಹ್ಯಗಳಿವೆ. ವಿಶ್ವಕರ್ಮ ಸಮುದಾಯದವರು ಅರ್ಚಕರಾಗಿದ್ದ ಕುರಿತು ಶಾಸನದಲ್ಲಿ ಮಾಹಿತಿಯಿದೆ. ಪ್ರಸ್ತುತದಲ್ಲಿ ಬ್ರಾಹ್ಮಣರು ಪೂಜಾರಿಗಳಿರುವರು.

ಇದನ್ನು ಹೊರತುಪಡಿಸಿ ಶಿಷ್ಟ ಹಾಗೂ ಗ್ರಾಮದೇವತೆಗಳ ಆರಾಧನೆಗೆ ಬಹಳಷ್ಟು ವ್ಯಾತ್ಯಾಸವಿದೆ. ಅವುಗಳಲ್ಲಿ ಮುಖ್ಯವಾಗಿ ಬಲಿಯ ಆಚರಣೆಯನ್ನು ಕಾಣಬಹುದು. ಈ ಆಚರಣೆ ಶಿಷ್ಟ ಮತ್ತು ಗ್ರಾಮದೇವರನ್ನು ಪ್ರತ್ಯೇಕಿಸುತ್ತದೆ. ಪ್ರಮುಖವಾಗಿ ಎಲ್ಲಾ ವರ್ಗದವರೂ ಗುರುತಿಸುವ ಆಚರಣೆಯಾಗಿದೆ ಎನ್ನಬಹುದು. ಹಾಗೆಯೇ ಬಾದಾಮಿ ಬನಶಂಕರಿಯ ಜಾತ್ರೆಯ ಸಮಯದಲ್ಲಿ ಅನ್ನಕ್ಕೆ ಕುಂಕುಮವನ್ನು ಕಲಿಸುತ್ತಾರೆ. ಅದನ್ನು 'ಬಲಿ ಹರಣ' ಎಂದು ಕರೆಯುವರು. ಜಾತ್ರೆಯ ಹಿಂದಿನ ಒಂಬತ್ತು ದಿನಗಳವರೆಗೆ ವಿವಿಧ ಆಚರಣೆ ಗುಡಿಯಲ್ಲಿ ನಡೆಸಲಾಗುತ್ತದೆ. ಅದರಲ್ಲಿ ಬಲಿಹರಣವು ಒಂದು. ಪ್ರತಿನಿತ್ಯ ದೇವಿಗೆ ವಿಶೇಷ ಪೂಜೆಯನ್ನು ಸಲ್ಲಿಸಿ, ನಂತರ ಶ್ರೀ ಕ್ಷೇತ್ರದ ಅಷ್ಟದಿಕ್ಕುಗಳಿಗೆ ಮತ್ತು ಪರಿವಾರ ದೇವತೆಗಳಿಗೆ

ಹಾಗೂ ರಥಕ್ಕೆ ಕುಂಕುಮ ಬೆರೆಸಿದ ಅನ್ನವನ್ನು ಅರ್ಪಿಸಿ ನಂತರ ಅದರ ಮೇಲೆ ನೀರನ್ನು ಬಿಡುವ ಆಚರಣೆಯಿದೆ. ಈ ರೀತಿಯ ಮಾಡುವುದರಿಂದ ಶ್ರೀ ಕ್ಷೇತ್ರಕ್ಕೆ ಅಷ್ಟದಿಕ್ಪಾಲಕರು ರಕ್ಷಣೆಯನ್ನು ನೀಡಿ, ದುಷ್ಟಶಕ್ತಿಗಳು ಕ್ಷೇತ್ರದ ಒಳಗೆ ಬಾರದಂತೆ ರಕ್ಷಿಸುತ್ತವೆ ಎಂಬ ನಂಬಿಕೆಯಿದೆ.

ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಗ್ರಾಮದೇವತೆಗಳಿಗೆ ಬಲಿಯನ್ನು ನೀಡಿ ನಂತರ ಬಲಿ ನೀಡಲಾದ ಪ್ರಾಣಿಯ ಮೇಲೆ ನೀರನ್ನು ಹಾಕುವ ಪದ್ಧತಿಯಿರುವುದು ವಿಶೇಷ. ಹಾಗೆಯೇ ಬಲಿ ನೀಡಿದ ಪ್ರಾಣಿಯ ರಕ್ತವನ್ನು ಅನ್ನಕ್ಕೆ ಬೆರಸಿ ಊರು ಸುತ್ತಾ ಚೆಲ್ಲುತ್ತಾರೆ. ಇದು ಕೂಡ ಗ್ರಾಮ ರಕ್ಷಣೆಗಾಗಿ ಮಾಡುವ ಆಚರಣೆ. ಬಾದಾಮಿ ಬನಶಂಕರಿಯ ಜಾತ್ರೆಯ ಸಮಯದಲ್ಲಿ ನಡೆಯುವ ಈ ಆಚರಣೆಯನ್ನು ಗಮನಿಸಿದಾಗ ಹಿಂದೆ ಮಾಂಸಾಹಾರಿ ದೇವಿಯಾಗಿದ್ದ ಈಕೆಯು ಈಗ ಶಿಷ್ಟ ರೂಪವನ್ನು ತಾಳಿರುವುದರಿಂದ ರಕ್ತದ ಬದಲಿಗೆ ಕುಂಕುಮ ಬೆರೆಸುವ ಪದ್ಧತಿಯು ಇರಬಹುದು. ಹಿಂದಿನ ಆಚರಣೆಯನ್ನು ಬಿಡಲಾಗದೇ ಅರ್ಚಕರು ಈ ರೀತಿ ಮುಂದುವರೆಸಿಕೊಂಡು ಬಂದಿರುವುದು ಗಮನಾರ್ಹ. ಈ ಮೊದಲೇ ತಿಳಿಸಿದಂತೆ ದುರ್ಗಾಷ್ಟಮಿಯ ದಿನದಂದು ದೇವಿಗೆ ಮದ್ಯವನ್ನು ಅರ್ಪಿಸುವ ಪದ್ಧತಿಯಿದೆ. ಇದು ಗ್ರಾಮದೇವತೆಯ ಆಚರಣೆಯಲ್ಲಿ ಒಂದಾಗಿದೆ.

ಕರ್ನಾಟಕದಲ್ಲಿ ಮಾತೃಮೂಲೀನ ಪದ್ಧತಿಯಿರುವ ಈ ಪರಿಸರದಲ್ಲಿ ೧೨ ವರ್ಷಗಳಿಗೊಮ್ಮೆ ಊರಿನ ದ್ಯಾಮವ್ವ, ದುರುಗವ್ವ ದೇವಿಯರಿಗೆ ಕೋಣವನ್ನು ಬಲಿ ನೀಡುವ ವಿಧಿಯಿದೆ. ಹಾಗೆಯೇ ಮೊದಲೇ ತಿಳಿಸಿದಂತೆ ಬನಶಂಕರಿಯ ಕ್ಷೇತ್ರದ ಹಿಂಭಾಗದಲ್ಲಿರುವ ಮಲೆಯಮ್ಮ (ಬೆಟ್ಟದಲ್ಲಿ ನೆಲೆಸಿರುವ ದೇವಿ ಎಂದರ್ಥ)ನಿಗೆ ಬಲಿ ನೀಡುವ ಪದ್ಧತಿಯಿದೆ. ಈ ಅಂಶವನ್ನು ಗಮನಿಸಿದರೆ ಹಿಂದೆ ಮಾಂಸಾಹಾರಿಯಾಗಿದ್ದ ಬನದೇವಿಯು ಕಾಲಕ್ರಮೇಣ ಶಾಖಾಹಾರಿ ದೇವತೆಯಾಗಿರುವುದು ಕಂಡುಬರುತ್ತದೆ. ಬಾದಾಮಿ ಪರಿಸರದಲ್ಲಿ ದೊರೆತ ಶಾಸನಗಳಲ್ಲಿ ಕೂಡ ಬನದೇವಿ, ಮಹಾಮಾಯಿ ಎಂದು ಉಲ್ಲೇಖಿಸಲಾಗಿದೆ ಹೊರತು, ಬನಶಂಕರಿ ಎಂದಿಲ್ಲ. ಈ ಆಧಾರದಿಂದ ಕೂಡ ಆಕೆಯು ಪೂರ್ವದಲ್ಲಿ ಗ್ರಾಮದೇವತೆಯಾಗಿದ್ದಳು ಎಂಬ ಅಂಶ ಸ್ಪಷ್ಟವಾಗುವುದು. ಅಲ್ಲದೆ ಬನಶಂಕರಿ ನಾಮ ಬಂದಾಗ ಆಕೆ ಶಿಷ್ಟ ದೇವಿಯಾಗಿ ಬದಲಾಗಿರಬಹುದು.

ಪ್ರಸ್ತುತ ದೇವಿಗೆ ಶಿಷ್ಟ ಆಚರಣೆಗಳು, ಪೂಜೆ ವಿಧಾನಗಳು ಆಗಮೋಕ್ತವಾಗಿ ನಡೆಯುತ್ತಿವೆ. ನಿರ್ದಿಷ್ಟವಾದ ತಿಥಿ, ನಕ್ಷತ್ರಗಳಿಗೆ ಅನುಗುಮವಾಗಿ ಪೂಜೆ ಸಲ್ಲುತ್ತದೆ. ಈ ದೇವಿಯ ದೇವಾಲಯವು ಮುಜುರಾಯಿ ಇಲಾಖೆಗೆ ಸೇರಿದ ದೇವಾಲಯವಲ್ಲ. ಆದರೂ ಎಲ್ಲಾ ಸೌಲಭ್ಯಗಳನ್ನು ಹೊಂದಿದೆ. ನೀರು, ಸಾರಿಗೆ ವ್ಯವಸ್ಥೆ, ರಸ್ತೆಗಳು, ಭಕ್ತಾದಿಗಳಿಗೆ ತಂಗುದಾಣ, ಪ್ರಸಾದ ವಿನಿಯೋಗ, ಸುಸೂತ್ರವಾದ ಅಂಗಡಿ ಮುಂಗಟ್ಟುಗಳ ವ್ಯವಸ್ಥೆ, ಮನರಂಜನೆ ಹೀಗೆ ದೇವಾಲಯದ ವಾತಾವರಣವನ್ನು ಶುಭ್ರವಾಗಿರಿಸಿ, ಅದನ್ನು ನೋಡಿಕೊಳ್ಳಲು ಎಲ್ಲ ವ್ಯವಸ್ಥೆಗಳು ಕಲ್ಪಿಸಲಾಗಿದೆ.

ಇಲ್ಲಿ ಮಡಿಮೈಲಿಗೆಯ ಆಚರಣೆಗಳು ಪ್ರಮುಖವಾಗಿವೆ. ದೇವರಿಗೆ ನಿತ್ಯಪೂಜೆ ಸಲ್ಲುವುದು. ಹಬ್ಬಹರಿದಿನಗಳಂದು ವಿಶೇಷ ಸೇವೆಗಳಿಂದ ದೇವರನ್ನು ಪೂಜಿಸಲಾಗುವುದು. ವರ್ಷಕ್ಕೊಮ್ಮೆ ಜಾತ್ರೆ, ಪ್ರತಿ ಹುಣ್ಣಿಮೆಯ ದಿನ ಅನ್ನ ಸಂತರ್ಪಣೆಯನ್ನು ಮಾಡಲಾಗುತ್ತದೆ. ಒಟ್ಟಿನಲ್ಲಿ ಶಿಷ್ಟದೇವರಿಗೆ ಸಿಗುವ ಎಲ್ಲ ಸಲವತ್ತುಗಳು ಸಿಕ್ಕಿವೆ. ಹಾಗೆಯೇ ಕೆಲವು ವಿಧಿ-ನಿಷೇಧಗಳು ತಮ್ಮದೇ ಆದ ರೀತಿ, ನೀತಿಗಳು ಕಂಡುಬರುತ್ತವೆ. ಶಿಷ್ಟ ದೇವಿಯಾದ ಬನಶಂಕರಿಗೆ ಗ್ರಾಮದೇವತೆಗೆ ಸಲ್ಲುವ ಆಚರಣೆಗಳು ಸಲ್ಲುತ್ತಿರುವುದು ಗಮನಾರ್ಹ.

### ೩. ೯. ಬನಶಂಕರಿಯ ಸ್ವರೂಪ, ಭೌತಿಕ ಲಕ್ಷಣಗಳು

ಕರ್ನಾಟಕದ ಪ್ರತಿಯೊಂದು ಭಾಗದಲ್ಲಿ ಸಹ ಗ್ರಾಮ ಮತ್ತು ಶಿಷ್ಟ ದೇವಿತೆಯಾದ ಬನಶಂಕರಿ, ಶಂಕ್ರಿ, ಬನದೇವಿ, ಬನದವ್ವ, ಶಾಖಂಭರೀ, ಬನದ ಮಹಾಮಹಾಯಿ, ತೋಟದಮ್ಮ, ಬಳರಿ, ಮಾಳಚಿ, ಬೇಡತಿ (ಉತ್ತರ ಕನ್ನಡ ಜಿಲ್ಲೆಯ ಕಾಡಿನ ದೇವತೆ). ಹೀಗೆ ನಾನಾ ರೀತಿಯಲ್ಲಿ ಕರೆಸಿಕೊಂಡು ಆರಾಧನೆಗೊಳ್ಳುತ್ತಿದ್ದಾಳೆ. ಜನಪದರು ತಮ್ಮದೇ ಆದ ನೆಲೆಯಲ್ಲಿ ಅವುಗಳನ್ನು ಪರಿಕಲ್ಪಿಸಿಕೊಂಡು ಆರಾಧಿಸುವುದು ಕರ್ನಾಟಕದಾದ್ಯಂತ ರೂಢಿಯಲ್ಲಿದೆ. ಹಾಗೂ ಅವುಗಳ ಭೌತಿಕ ಲಕ್ಷಣಗಳಲ್ಲಿ ಸಹ ಭಿನ್ನತೆಗಳನ್ನು ಕಾಣಬಹುದು. ಬನಶಂಕರಿಗೆ ಸಂಬಂಧಿಸಿದಂತೆ ಕೆಲವು ಮಾಹಿತಿಗಳನ್ನು ದಾಖಲು ಮಾಡುವ ಪ್ರಯತ್ನವನ್ನು ಮಾಡಲಾಗಿದೆ.

### ಬನಶಂಕರಿಯ ಸ್ವರೂಪ

ಗ್ರಾಮ ಮತ್ತು ಶಿಷ್ಟದೇವಿಯಾದ ಬನಶಂಕರಿಯ ಎರಡು ರೂಪಗಳನ್ನು ವಿವೇಚಿಸುವುದು ಸೂಕ್ತ. ಮನುಷ್ಯರ ವಾಸ ಮೂಲತಃ ಅರಣ್ಯದಲ್ಲಿಯೇ ಪ್ರಾರಂಭವಾಯಿತು. ಅದರಿಂದ ತಮಗೆ ಆಶ್ರಯ ನೀಡಿದ ವನದಲ್ಲಿ ಅಮ್ಮನೊಬ್ಬಳು (ಶಕ್ತಿ) ಇದ್ದಾಳೆ ಎಂಬುದು ಅವರಿಗೆ ತಿಳಿದಂತಾಗಿದೆ. ಆದ್ದರಿಂದ ಆಕೆಯನ್ನು ವನದಮ್ಮ (ಬನದಮ್ಮ) ಎಂಬ ಹೆಸರಿನಿಂದ ಕರೆಯಲು ಪ್ರಾರಂಭವಾಯಿತು. ಹೀಗೆ ಆರಂಭವಾದ ಈ ದೇವಿಯು ಕಾಲಕ್ರಮೇಣ ಅನೇಕ ನಾಮ, ರೂಪಗಳಲ್ಲಿ ಉಪಸಾನೆಗೊಳ್ಳುತ್ತಿದ್ದಾಳೆ. ಶಕ್ತಿಯ ರೂಪವಾದ ಬನಶಂಕರಿಯ ಅವತಾರ ಮೊದಲನೆಯದಾಗಿದ್ದು, ನಂತರ ಚೌಡೇಶ್ವರಿಯು ಅದರ ಮುಂದಿನ ಅವತಾರ ಎಂದು ಹೇಳಲಾಗುತ್ತದೆ. ಚೌಡೇಶ್ವರಿ, ಚೌಡಿ, ಚಾಮುಂಡಿ ಎಂಬ ಹೆಸರುಗಳು ಒಂಬತ್ತನೆಯ ಶತಮಾನದಿಂದ ಸಾಮಾನ್ಯವಾಗಿ ಬಳಕೆಯಲ್ಲಿ ಬಂದವು.

ವನದೇವತೆಯನ್ನು ಹಲವು ವಿಧಗಳಲ್ಲಿ ಆರಾಧಿಸುವುದನ್ನು ಗಮನಿಸಬಹುದು. ಒಂದು ಮರದ ಕೆಳಗೆ ದುಂಡಾದ ಕಲ್ಲನ್ನಿಟ್ಟು ಅದನ್ನು ಬನದಮ್ಮ ಎಂದು ಪೂಜಿಸುವ ಸಂಪ್ರದಾಯವಿದೆ. ಈ ಆಚರಣೆಯು ಉತ್ತರ ಕನ್ನಡ ಜಿಲ್ಲೆ, ಮಧ್ಯ ಕರ್ನಾಟಕ, ದಕ್ಷಿಣ ಕನ್ನಡದ ಭಾಗಗಳಲ್ಲಿ ಇನ್ನೂ ರೂಢಿಯಲ್ಲಿರುವುದು ಗಮನಾರ್ಹ. ಮರವನ್ನೇ ಪೂಜಿಸುವ ಪದ್ಧತಿ ನಮ್ಮಲ್ಲಿ ಪೂರ್ವದಿಂದಲೂ ಇದೆ. ಮರಕ್ಕೆ ಸೀರೆಯನ್ನು ಉಡಿಸಿ, ರವಿಕೆ, ಕಣವನ್ನು

ಏರಿಸಿ, ಹಾಗೆಯೇ ರವಿಕೆಯ ಕಣದಿಂದ ಕೈಗಳನ್ನು ಮಾಡಿ ಅದಕ್ಕೆ ಬಳೆಯನ್ನು ತೊಡಿಸಿ, ಅರಿಶಿನ - ಕುಂಕುಮದಿಂದ ಮರವನ್ನು ಶೃಂಗರಿಸಿ ಅದನ್ನು ಬನದಮ್ಮ ಎಂದು ಆಚರಿಸುವ ಪದ್ಧತಿಯು ಇದೆ.

ಈ ಕಾರ್ಯಗಳನ್ನು ನೆರವೇರಿಸಿದ ನಂತರ ಹೋಳಿಗೆ, ಪಾಯಿಸ, ನೈವೇದ್ಯವಾಗುವುದು. ಮತ್ತೆ ಕೆಲವೊಮ್ಮೆ ಪ್ರಾಣಿಗಳನ್ನು ಬಲಿ ಕೊಡುವ ಸಂಪ್ರದಾಯವಿದೆ.[೨೬] ಹಾಗೆಯೇ ಇದೇ ಪದ್ಧತಿಯನ್ನು ಉತ್ತರ ಕನ್ನಡ ಜಿಲ್ಲೆಯ ಕೆಲವು ಪ್ರದೇಶಗಳಲ್ಲಿ ಕಾಣಬಹುದು. ಮೇಲಿನ ಅಂಶದಿಂದ ಜನಪದ ದೇವಿಯಾಗಿರುವ ಬನಶಂಕರಿಯನ್ನು ವೃಕ್ಷಮಾತೆ ಎಂದು ಆರಾಧಿಸುತ್ತಿರುವುದು ಸ್ಪಷ್ಟವಾಗುತ್ತದೆ.

ಪ್ರಸ್ತುತ ಆರಾಧನೆಗೊಳ್ಳುತ್ತಿರುವ ದೇವಿಯ ಶಿಷ್ಟರೂಪವು ಸೌಮ್ಯವಾಗಿದೆ. ಬನಶಂಕರಿ ಗುಡಿಯಲ್ಲಿ ಸಿಂಹಾರೂಢಿಯಾಗಿರುವ ಶಾಂತ ರೂಪದ ವಿಗ್ರಹವನ್ನು ಕಾಣಬಹುದು. ಅಷ್ಟ ಭುಜಗಳನ್ನು ಹೊಂದಿದ್ದು, ಖಡ್ಗ, ಘಂಟೆ, ತ್ರಿಶೂಲ, ಪುಸ್ತಕ, ಡಮರು, ಗುರಾಣಿ, ರುಂಡ ಮತ್ತು ಪಾತ್ರೆಯನ್ನು ಹೊಂದಿರುವಳು. ಹಾಗೆಯೇ ಮೂರ್ತಿಯ ಇಕ್ಕಲಗಳಲ್ಲಿ ಸಂಗೀತ ತಂಡದವರು (ವೀಣೆ ನುಡಿಸುತ್ತಿರುವ), ಚಾಮರಧಾರಿಣಿಯರು ಹಾಗೂ ಗಾಯನ ಮಾಡುತ್ತಿರುವ ಸೇವಕರ ಕಿರುಶಿಲ್ಪಗಳಿವೆ. ಇಂತಹ ಸುಂದರ ಮೂರ್ತಿಯು ಎಂಥವರ ನೋಟವನ್ನು ಒಂದು ಗಳಿಗೆ ತನ್ನತ್ತ ಸೆಳೆಯುವಂತಿದೆ. ಬನಶಂಕರಿಯ ಪ್ರತಿಮಾ ಲಕ್ಷಣಗಳನ್ನು ಗಮನಿಸಿದರೆ ಕಾಳಿ, ಚಾಮುಂಡೇಶ್ವರಿ ಸ್ವರೂಪ ಎನಿಸುತ್ತದೆ.

ಬನದೇವತೆಯಾಗಿ ಪ್ರಖ್ಯಾತಿಯನ್ನು ಪಡೆದಿರುವ ಈ ದೇವಿ ಸಪ್ತಕನ್ನಿಕೆಯರಲ್ಲಿ ಹಿರಿಯಳೆಂದು ಕೆಲವೆಡೆ ಕರೆಯುತ್ತಾರೆ. ಶಿವ ಸೃಷ್ಟಿಗೆ ಬೀಜವಾದರೆ ಅವನ ಹೆಂಡತಿಯಾದ ಪಾರ್ವತಿ ಭೂಮಿ. ನಮ್ಮನ್ನು ಹುಟ್ಟಿಸುವ, ಕಾಯುವ, ಬೆಳೆಸುವ ದೇವರೆ ಪಾರ್ವತಿ ಅಂಶದವಳೆಂದು ಅವಳಿಗೂ ಅವತಾರಗಳನ್ನು ಕಲ್ಪನೆ ತಂದದ್ದು ಆರ್ಯರ ಸಂಪರ್ಕ ಬಂದ ಬಳಿಕವೇ ಈ ಮಾತಿಗೆ ಪೂರಕವಾಗಿ ಪೂಜಾ ಪದ್ಧತಿಗಳನ್ನು ಗಮನಿಸಬಹುದು.[೨೭]

ಶಕ್ತಿಯ ಆರಾಧನೆಯು ಬಹು ವ್ಯಾಪಾಕವಾದುದು. ಶಕ್ತಿಯ ಆರಾಧಕರನ್ನು ಶಾಕ್ತರೆಂದು ಕರೆಯುತ್ತಾರೆ. ಇವರ ಆರಾಧ್ಯದೇವತೆ ದೇವಿ ಅಥವಾ ಶಕ್ತಿ. ಆರ್ಯರ ಆಗಮನಕ್ಕಿಂತ ಮುನ್ನವೇ ಆರಾಧನೆ ಇತ್ತು. ಶಾಕ್ತಮತವೂ ಒಂದಿಲ್ಲೊಂದು ರೂಪದಲ್ಲಿ ಪ್ರಚಲಿತದಲ್ಲಿತ್ತೆಂದೂ ಅಭಿಪ್ರಾಯವಿದೆ. ಕ್ರಿ.ಶ. ೬ನೆಯ ಶತಮಾನದಿಂದ ೧೦ನೆಯ ಶತಮಾನದವರೆಗೆ ಈ ಮತದ ಪ್ರಭಾವವು ಹೆಚ್ಚಾಗಿದ್ದುದನ್ನು ವಿದ್ವಾಂಸರು ಗುರುತಿಸುತ್ತಾರೆ. ಈ ಮತದ ಮುಖ್ಯ ಆರಾಧ್ಯ ದೇವತೆ ಕಾಳಿ ಅಥವಾ ದುರ್ಗಾದೇವಿ. ಇವು ಪಾರ್ವತಿಯ ರೂಪ. ಶಾಕ್ತ ಒಂದು ಸ್ವತಂತ್ರ ಮತವಾಗಿದ್ದು, ಸ್ತ್ರೀ ದೈವವನ್ನು ಪ್ರಧಾನ ದೈವವಾಗಿರುವ ಹಾಗೂ ಸ್ವಲ್ಪಮಟ್ಟಿಗೆ ಶೈವ ಸಂಬಂಧವನ್ನು ಹೊಂದಿರುವುದಾಗಿದೆ.

ಶಾಕ್ತ ಸಂಪ್ರದಾಯ ಎಂದೊಡನೆ ಅದು ಶೈವರದೇ ಎಂಬ ಗ್ರಹಿಕೆ ರೂಢವಾಗಿದೆ. ಶೈವ ದೇವಾಲಯಗಳನ್ನು ಶಕ್ತಿ ಸಹಿತ ಶಿವನ ಹೆಸರಿನಿಂದ ಹೇಳುವ ವಾಡಿಕೆ ಉಳಿದಿಲ್ಲ. ಶಿವ-ಶಕ್ತಿ, ಶಿವ (ಭವಾನಿ) ಇರುವಂತೆ ವಿಷ್ಣು-ಶಕ್ತಿ, ದೇವಿ-ವೈಷ್ಣವಿಯು ಇದ್ದಾಳೆ. ಶಕ್ತಿ ಸಹಿತ ಪರಮೇಶ್ವರನಂತೆ ಲಕ್ಷ್ಮೀ ಸಹಿತ ನಾರಾಯಣನನ್ನು ಮಂತ್ರಗಳಿಂದ ಸ್ವಾಗತಿಸಿ ಪೂಜಿಸುವುದುಂಟು. ಉಮಾ-ಮಹೇಶ್ವರ, ಲಕ್ಷ್ಮೀ-ನಾರಾಯಣ ಎಂಬ ಬಗೆಯ ಸಮಸ್ತ ದ್ವಂದ್ವ ಪದದಲ್ಲಿ ಸ್ತ್ರೀಯ ಹೆಸರಿಗೆ ಪ್ರಥಮ ಪ್ರಾಶಸ್ತ್ಯವಿದೆ. ಉಚ್ಛಾರ ಸೌಕರ್ಯದಿಂದಾಗಿ ಇದು ವಾಡಿಕೆಯಲ್ಲಿ ಬಂದಿರುವ ಶಕ್ಯತೆಯನ್ನು ಒಪ್ಪಿದರೂ, ದೇವಪತಿಯರಿಗಿದ್ದ ಅರ್ಧಾಸನವು ಕ್ರಮವಾಗಿ ತಪ್ಪಿ ಹೋದದ್ದು ವಿಚಾರಾರ್ಹವಾಗಿದೆ.

ಉಮಾಪತಿ, ಲಕ್ಷ್ಮೀಪತಿ ಎಂಬ ರೂಪದಲ್ಲಿ, ಪುರುಷರಿಗೆ ಪ್ರಾಧಾನ್ಯವುಂಟು. ಇದು ಇನ್ನೊಂದು ಬಗೆಯ ದೃಷ್ಟಿ. ಪ್ರಕೃತಿಯು ಪುರುಷರಿಗೆ ಅಧೀನ ಎಂಬ ಪಂಥ ಮತ್ತು ದೇವಿ ವಿಶ್ವದ ಆದಿಶಕ್ತಿ ಎಂಬ ಪಂಥ ಇವು ಒಂದೇ ಎನ್ನಲು ಆಗುವುದಿಲ್ಲ. ಇವುಗಳಲ್ಲಿ ಯಾವುದು ಮೊದಲು ಈ ನಡಾವಳಿಗಳು ಒಂದೇ ಬಗೆಯ ಸಾಮಾಜಿಕ ಸನ್ನಿವೇಶದಲ್ಲಿ ಬಂದಿರಲಾರವು. ಒಂದರಲ್ಲಿ ಪುರುಷ ಪ್ರಧಾನ ಸಂಸ್ಕೃತಿಯ ಸಾಮಾಜಿಕ ಆವರಣವು ಕಂಡುಬರುತ್ತದೆ. ಇನ್ನೊಂದು ಮಾತೃಪ್ರಧಾನ ಸಾಮಾಜಿಕ ಹಿನ್ನೆಲೆಯು ಇರುವುದನ್ನು ಕಾಣಬಹುದು.[೨೮]

ಕರ್ನಾಟಕದ ಹೊರಗೂ ಪೂಜೆಗೊಳ್ಳುತ್ತಿರುವ ಈ ದೇವಿಯು ವಿಭಿನ್ನ ಹೆಸರು ಸ್ವರೂಪಗಳಿವೆ. ಅವುಗಳಲ್ಲಿ ಕೆಲವೊಂದು ಮಾತ್ರ ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗಿದೆ. ಭೂದೇವಿ, ವೃಕ್ಷದೇವತೆ, ಬೆಳೆಯ ದೇವತೆ, ಬನದೇವಿ, ಮಹಾಮಾಯಿ, ಅಡವಿ ಅಮ್ಮ, ಕಾಳಿ, ಈಚಲ ಮರದವ್ವ, ಕಾತ್ಯಾಯಿನಿ, ಬನದಬ್ಬೆ, ಶಾಖಂಭರಿ, ಆದಿಶಕ್ತಿ, ತ್ರಿಪುರಸುಂದರಿ, ಸತಿ, ಪಾರ್ವತಿ, ಅಪರ್ಣಾ, ವನಶಂಕರಿ, ಭವನಿ, ಭಗವತೀ, ಬನಶಂಕರಿ, ಅಂಬಿಕಾದೇವಿ, ಗಿರಿಜೆ, ಕ್ಷೇಮಂಕರಿ, ಅಭಯಂಕರಿ, ತನ್ವೀ, ಭದ್ರಕಾಳಿ, ಶಾಂಭವಿ, ಲಕ್ಕವ್ವ, ಲಜ್ಜಾಗೌರಿ, ಬನ್ನಿಮಹಾಕಾಳಿ, ಶ್ರೀದೇವಿ, ಭ್ರಮರಾಂಭ, ದುರ್ಗಾದೇವಿ, ಚೋದುಂಬೆ, ಬನದ ಬಳಾರಿ, ಮಾಳಚಿ, ತೋಟದಮ್ಮ, ಪರಮೇಶ್ವರಿ ಮೊದಲಾದವುಗಳಾಗಿವೆ.

### ಭೂದೇವಿ

ಆಹಾರೋತ್ಪಾದನೆ ಮತ್ತು ಸಂತಾನೋತ್ಪತ್ತಿ ಹೆಣ್ಣಿಗೆ ಇರುವ ಮಾಂತ್ರಿಕ ಶಕ್ತಿ ಎಂದು ಪ್ರಾಚೀನ ಮಾನವರ ತಿಳುವಳಿಕೆಯಾಗಿತ್ತು. ಹೆಣ್ಣಿನ ಗರ್ಭದಿಂದ ಶಿಶುವೊಂದು ಹೊರಬರುವ ರೀತಿಗೂ, ಭೂಮಿಯೊಳಗಿನಿಂದ ಸಸ್ಯ ಮೊಳಕೆ ಒಡೆದು ಬರುವ ರೀತಿಗೂ ಹೋಲಿಕೆ ಮಾಡಿ ಅವೆರೆಡರ ಮಧ್ಯೆ ಅವರಿಗೆ ವ್ಯತ್ಯಾಸವೇ ಕಾಣಲಿಲ್ಲ. ಆದ್ದರಿಂದ ಹೆಣ್ಣನ್ನು ಭೂಮಿಗೆ ಹೋಲಿಸಿ ಭೂಮಿ ತಾಯಿ ಎಂದು ಸಂಬೋಧಿಸಿ ಆರಾಧಿಸುವ, ಪೂಜಿಸುವ ಪರಿಪಾಠ ಬೆಳೆಯಿತು.

ಜಗತ್ತಿನಾದ್ಯಂತ ಭೂಮಿಯನ್ನು ಭೂಮಾತೆ ಅಥವಾ ಭೂದೇವಿ ಎಂದು ತಿಳಿದು ಪೂಜಿಸುವುದು. ಬಹುಶಃ ಯಾವುದೇ ವಿಧದ ಪೂಜೆಯಷ್ಟೇ ವಿಶಾಲಾರ್ಥವನ್ನು ಒಳಗೊಂಡಿದೆ. ಇವರ ಮೂಲ ಉದ್ದೇಶ ಬಿತ್ತನೆ ಅಥವಾ ಬೆಳವಣಿಗೆಯ ಮಾಂತ್ರಿಕ ಸ್ವರೂಪ. ಬೀಜವನ್ನು ಸ್ವೀಕರಿಸುವ ಭೂಮಿಯನ್ನು ದೈವತ್ವದ ಕಲ್ಪನೆಯಿಂದ ಆರಾಧಿಸುತ್ತಾರೆ. ಫಲವನ್ನು ಕೊಡುವ ಈ ಭೂಮಿಯನ್ನು ಸಾಮಾನ್ಯವಾಗಿ ಸ್ತ್ರೀ ಅಂದರೆ ಮಾತೃದೇವತೆ ಎಂದೇ ತಿಳಿಯುತ್ತಾರೆ. ಹಾಗೆಯೇ ಬನಶಂಕರಿ ಕಾಡಿನ ದೇವತೆ, ಸಸ್ಯಗಳ ದೇವತೆ, ಬೆಳೆಯ ದೇವತೆಯೂ ಆಗಿದ್ದಾಳೆ. ಜೊತೆಗೆ ಅವಳು ಆದಿಶಕ್ತಿ, ಏಕಕಾಲಕ್ಕೆ ಗಂಡೂ, ಹೆಣ್ಣೂ ಆಗಿ ಸೃಷ್ಟಿಗೆ ಜನ್ಮದಾತೆಯಾಗಿರುವವಳು ಎಂಬ ನಂಬಿಕೆಯಿದೆ.[೨೯]

**ವೃಕ್ಷದೇವತೆ ಹಾಗೂ ಬೆಳೆಯ ದೇವತೆ**

ಅಗಸ್ತ್ಯಮುನಿಯ ಲಿಖಿತವೆಂದು ಹೇಳಲಾಗುವ ಸ್ತೋತ್ರಗಳಲ್ಲಿ ಹಾಗೂ ಎಂಟನೆಯ ಶತಮಾನಕ್ಕೆ ಸೇರಿದ ಶಾಸನಗಳಲ್ಲಿ ಬನಶಂಕರಿ ನಿಜಾರ್ಥದಲ್ಲಿ ಪ್ರಕೃತಿ ದೇವತೆಯೆಂದು ಉಲ್ಲೇಖಿಸಿವೆ. ಬನಶಂಕರಿಯಿಂದ ಸಂರಕ್ಷಿಸಲ್ಪಟ್ಟ ಅರಣ್ಯದಿಂದ ಮಳೆ, ಬೆಳೆಯೊಂದಿಗೆ ಸಮೃದ್ಧಿ ಒದಗಿಬಂದಿದೆ. ಎಂಬ ಕಾರಣಕ್ಕಾಗಿ ಆಕೆಯನ್ನು ಕಾಡುಗಳ ಅಧಿದೇವತೆಯಾದ ಅರಣ್ಯಕನ ಪತ್ನಿಯಾಗಿ ಪರಿಗಣಿಸಲಾಗಿದೆ. ಈ ಸಂಬಂಧವನ್ನು ಮಹಾಭಾರತದಲ್ಲಿ ವಿವರಿಸಿರುವ ಅರಣ್ಯಕರಾದ ಶಿವ, ಪಾರ್ವತಿಯ ಸಂಬಂಧಕ್ಕೆ ಹೋಲಿಸಲಾಗಿದೆ. ಮಧ್ಯಕಾಲೀನ ಕನ್ನಡ ಸಾಹಿತ್ಯವು ಬನಶಂಕರಿಯನ್ನು ಬನದದೇವಿ, ಬನದ ಮಹಾಮಾಯಿ, ಬನದುಬ್ಬೆ ಎಂದು ವರ್ಣಿಸಿವೆ. ಇವುಗಳ ಪೈಕಿ ಬನದುಬ್ಬೆಯನ್ನು ಉತ್ತಮ ಫಸಲಿಗಾಗಿ ಪೂಜಿಸಲಾಗುತ್ತಿತ್ತು. ಬನಶಂಕರಿಯನ್ನು ಶಾಖಾಂಭರಿ, ಶತಾಕ್ಷಿ, ಅನ್ನಪೂರ್ಣೆ ಎನ್ನುವ ಹೆಸರಿನಿಂದಲೂ ಸ್ತುತಿಸಲಾಗುತ್ತಿರುವುದು ವಿಶೇಷ.

ಬನಶಂಕರಿಯು ವೃಕ್ಷ ದೇವತೆಯಾಗಿದ್ದಾಳೆ. ಪೂರ್ವದಲ್ಲಿ ಕಲ್ಲಿನ ಮೂರ್ತಿಯ ಬದಲಿಗೆ ಮರದ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗುತ್ತಿತ್ತು. ನಮ್ಮ ನಾಡಿನಲ್ಲಿ ವೃಕ್ಷದೇವತೆಯನ್ನು ಮರೆವ್ವ, ಮರಗವ್ವ, ಬನದೇವಿ, ಬನಶಂಕರಿಯೆಂದು ಗ್ರಾಮ ದೇವತೆಯೊಡನೆ ಅಭೇದ ಕಲ್ಪಿಸಿ ಪೂಜಿಸುವುದಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಕಾಡಿಯಮ್ಮ (ಕಾಡಿನ+ಅಮ್ಮ)ನೂ ಬನದೇವತೆಯೇಯಾಗಿದ್ದಾಳೆ. ಹೀಗೆ ಕಾಡಿನ ಅಮ್ಮ ಬನಶಂಕರಿಯೂ ಹೌದು ಹಾಗೂ ಮಹಾಮಾಯಿಯೂ ಹೌದು. ಅದಕ್ಕಾಗಿಯೇ ಬನಶಂಕರಿಯ ಮೂರ್ತಿಯನ್ನು ಮರದಿಂದ ತಯಾರಿಸುವ ಸಂಪ್ರದಾಯ ಬೆಳೆದು ಬಂದಿರಬೇಕು. ಕರ್ನಾಟಕದ ಹೊರಗೂ ವೃಕ್ಷಪೂಜೆಯ ಸಂಪ್ರದಾಯವಿದೆ.

**ಮಂಕಾಳಮ್ಮ, ಕೆಂಗಳಾ ಪರಮೇಶ್ವರಿ**

ಇವು ಮೂಲತಃ ಕಾನಿನಲ್ಲಿ ಏಕಾಂತದಲ್ಲಿ ನಿಂತಿದ್ದಾರೆ. ಕಾನು ಅಂದರೆ ಸಣ್ಣ

ಅಡವಿ. ಸಂಸ್ಕೃತ ದುರ್ಗಾ ಸ್ತೋತ್ರದಲ್ಲಿಯೂ "ಕಾಂತಾರ ಭಯ ದುರ್ಗೇಷು" ಎಂದು ವರ್ಣನೆ ಬರುತ್ತದೆ.

**ಈಚಲ ಮರದವ್ವ**

ಬನಶಂಕರಿ ಅಮ್ಮನವರೂ ಕಾನಿನಲ್ಲಿ ಗಿಡಮರಗಳ ನಡುವೆ ಇರುವವಳು. ಇವಳನ್ನು ಈಚಲ ಮರದವ್ವ ಎನ್ನುತ್ತಾರೆ. ಸಂಸ್ಕೃತದಲ್ಲಿ ಇದನ್ನೇ 'ಕದಂಬ ವನ ಚಾರಿಣೀ' ಎಂದು ಬಣ್ಣಿಸಲಾಗಿದೆ. ಈಚಲ ಮರದ ಮದ್ಯವು ಈ ಅಮ್ಮನವರ ದೇವಾವೇಶದ ಉನ್ಮಾದಕ್ಕೆ ಸರಿ. (ಅಲ್ಲದೆ ಶಾಕ್ತರ 'ಪಂಚಮಕಾರ'ಗಳಲ್ಲಿ ಮದ್ಯವೂ ಸೇರಿದೆ) ಕದಂಬ ಎಂದರೆ ಈಚಲಮರ.

**ಕಾತ್ಯಾಯನೀ**

ದೇವಿಯ ಹಲವು ನಾಮಗಳಲ್ಲಿ ಕಾತ್ಯಾಯಿನೀ ಎಂಬುದೊಂದು ಹೆಸರು ಪ್ರಸಿದ್ಧ. ಕಾತ್ಯಾಯಿನಿಯೇ ದುರ್ಗೆ, ಗೌರಿ, ಗೌರಿ ಎಂದರೆ ಇನ್ನೂ ಋತುಮತಿಯಾಗದ ಕಿಶೋರಿ (೮-೯ ವರ್ಷದ ಕನ್ನೆ) ಎಂದು ಒಂದು ಅರ್ಥ. ಕಾತ್ಯಾಯಿನೀ ಶಬ್ದಕ್ಕೆ ಒಂದು ವಿಶಿಷ್ಟ ಅರ್ಥವೂ ಇದೆ. ಹರೆಯದ ವಿಧವೆ, ಕೆಂಪು ಬಟ್ಟೆ ಉಡುವವಳು. ಇಲ್ಲಿ ತರುಣ ಪ್ರೌಢ ವಿಧವೆ, ಅತೃಪ್ತಿ ಜೀವಿ ಎಂದು ಬೇರೆ ಹೇಳಬೇಕಾಗಿಲ್ಲ.

ಇನ್ನೂ ಸೂಕ್ಷ್ಮಕ್ಕೆ ಹೋದರೆ ಕಾತ್ಯಾಯಿನನೀ ಈ ಶಬ್ದ ಒಂದು ಮೂಲ ಶಬ್ದವಲ್ಲ. ಅದು ಸಮಸ್ತಪದವೆಂದು ಗೊತ್ತಾಗುತ್ತದೆ. ಕಲೆ + ಅಯನ, ಕಲೆ ಎಂದರೆ ಎಷ್ಟು ಅಥವಾ ಕೆಲವು. ಅಯನ ಎಂದರೆ ಸಂಚಾರ, ಅದರ ಮಾರ್ಗ, ಪಥ, ನಡೆ. ಈ ಕೆಲವು ನಡೆಯುಳ್ಳವನು. ಕಾತ್ಯಾಯಿನ, ಉಳ್ಳವಳು ಕಾತ್ಯಾಯಿನೀ. ಇನ್ನೊಂದು ಅರ್ಥದಲ್ಲಿ ಕತ ಎಂದರೆ ಒಂದು ಬಗೆಯ ರಾಡಿ ನೀರು ಶುದ್ಧ ಮಾಡುವ ಕಾಯಿ (ಕತಕ ವೃಕ್ಷದ ಆ ದುಷ್ಟಾಂತ, ಮನುಸ್ಮೃತಿಯಲ್ಲಿ ಬಂದಿದೆ). ಈ ಕತವೆಂಬ ಮರವನ್ನು ಆಶ್ರಯಿಸಿದ ದೈವ ಕಾತ್ಯಾಯನಿಯಾಗಿರಬಹುದು.

**ದುರ್ಗಾ**

ಮಾತೃ ಆರಾಧನೆ ಹಂತದಿಂದಲೇ ಭಾರತೀಯ ಧಾರ್ಮಿಕ ವ್ಯವಸ್ಥೆಯಲ್ಲಿ ತನ್ನದೇ ಆದ ಸ್ಥಾನವನ್ನು ಗಳಿಸಿದವಳು ಎಂದರೆ ದುರ್ಗೆ. ಸರ್ವಶಕ್ತಿಗೂ ಈಕೆಯೇ ಮೂಲ. ಈ ದೇವಿ ಜನಪದರ ಮೇಲೆ ಗಾಢವಾದ ಪ್ರಭಾವ ಬೀರಿದ ದೇವಿಯಾಗಿದ್ದಾಳೆ. ಸಮಾಜದ ಎಲ್ಲಾ ವರ್ಗದವರು ಈಕೆಯನ್ನು ಆರಾಧಿಸುತ್ತಾರೆ. ದುರ್ಗೆಯ ಕುರಿತು ಉಲ್ಲೇಖಗಳನ್ನು ನಾವು ಮಹಾಭಾರತದ ಮರ್ಕಂಡೇಯ ಪುರಾಣ, ಇತರ ಕಾವ್ಯಗಳಲ್ಲಿ ದುರ್ಗಿಯ ವಿವಿಧ ರೂಪಗಳನ್ನು ಗಮನಿಸಬಹುದು.

ಆಗಮಗಳು ದುರ್ಗಿಯರ ೯ ಪ್ರಕಾರಗಳನ್ನು ಉಲ್ಲೇಖಿಸುತ್ತವೆ. Noless than nine different forms of durga are mentioned in Agamas namely

1. Nilakanthi

2. keshemankari

3. Harasidhi

4. Rudramsa Durga

5. Vana - Durga

6. Agni - Durga

7. Jaya - Durga

8. Vindhyavasi - Durga

9. Ripumari - Durga

To the above must also be added the groug of nine figures of Durga called the nava Durgas.[೩೦]

ಮೇಲೆ ತಿಳಿಸಿದ ನವದುರ್ಗಿಯರಲ್ಲಿ ವನದುರ್ಗಿಯು ಒಬ್ಬಾಳಾಗಿದ್ದಾಳೆ. ಅಂದರೆ ಶಕ್ತಿಯ ವಿವಿಧ ಅವತಾರಗಳಲ್ಲಿ ವನದುರ್ಗಿಯನ್ನು ಆರಾಧನೆ ಮಾಡಲಾಗುತ್ತದೆ. ಆಕೆಯು ವನದೇವಿಯಾಗಿ, ಹಸಿರಿನ ದೇವಿಯಾಗಿ ಆರಾಧನೆಗೊಳ್ಳುತ್ತಿದ್ದಾಳೆ.

Vana - Durga Shold have eight hand in

seven of which should be held the

sankha, chakra, Khadga, Khetaka

bana, dhanus and sula,

The Remaining hand being held in the tarjani pose.

The complexi on this aspect of Durga is grass green.[೩೧]

ಅಷ್ಟಭುಜಗಳನ್ನು ಹೊಂದಿರುವ ವನದುರ್ಗೆಯು ಶಂಖ, ಚಕ್ರ, ಗದೆ, ಖಡ್ಗ, ಬಾಣ, ಧನುಷ್, ಶೂಲ ಈ ಎಲ್ಲ ಆಯುಧಗಳನ್ನು ದೇವಿಯು ಹೊಂದಿರುವುದನ್ನು ಗುರುತಿಸಬಹುದು. ಅಲ್ಲದೆ ಆಕೆಯು ಹಸಿರಿನ ದೇವತೆಯಾಗಿದ್ದಾಳೆ.

## ಲಕ್ಷ್ಮೀ – ಲಕ್ಕವ್ವ

ಹಿಂದೂ ಸಂಸ್ಕೃತಿಯಲ್ಲಿ ಎಲ್ಲರಿಗೂ ಪ್ರಿಯವಾದ ದೇವತೆ ಎಂದರೆ ಲಕ್ಷ್ಮೀ ಮೂಲತಃ ದ್ರಾವಿಡ ಮೂಲದವಳು. ಈಕೆಯು ಆರ್ಯರ ಆಗಮನವಾಗುವವರೆಗೆ ಕೃಷಿ ಕುಟುಂಬದವರು ಆರಾಧಿಸುತ್ತಿದ್ದರು. ರಕ್ಷಣೆಯನ್ನು ಮಾಡುವ ಸೀಮೆ ಲಕ್ಕವ್ವ ಎಂದು ಜನಪದರು ಪೂಜಿಸತೊಡಗಿದರು. ಸಮೃದ್ಧಿಯ ದೇವಿಯಾದ ಈಕೆಗೆ ಸಗಣಿ ಇಟ್ಟು ಪೂಜಿಸುವ ಜನಪದರ ಈ ಆಚರಣೆಯನ್ನು ಹಟ್ಟಿಯ ಲಕ್ಕವ್ವ ಎಂದು ಕರೆಯುತ್ತಾರೆ. ಆಚರಣೆಯಲ್ಲಿ ಸಗಣಿಯು ಪ್ರಧಾನವಾದ ವಸ್ತು. ಕೃಷಿ ಸಂಬಂಧಿ ದೇವಿಯಾದ್ದರಿಂದ ಬೆಳೆಯ ಅಭಿವೃದ್ಧಿಗೆ ಸಗಣಿಯ ಗೊಬ್ಬರವು ಅತ್ಯಂತ ಅವಶ್ಯಕ. ಈ ಹಿನ್ನೆಲೆಯಲ್ಲಿ ಕೃಷಿ ದೇವಿಯಾದ ಲಕ್ಕವ್ವನಿಗೆ ಹಟ್ಟಿಯ ಆಚರಣೆಯನ್ನು ಮಾಡುತ್ತಿರಬಹದು. ಹಾಗೆಯೇ ಹೆಕ್ಕೆ ಅಥವಾ ಲಕ್ಕಿಯ ಗಿಡದಲ್ಲಿ ಲಕ್ಷ್ಮೀಯು ನೆಲಸಿರುತ್ತಾಳೆ ಎಂದು ಭಾವಿಸಿ ಆರಂಭಿಸಲಾಗುತ್ತದೆ. ಆದ್ದರಿಂದ ಲಕ್ಷ್ಮೀಯು ವನದೇವತೆ ಅಥವಾ ವೃಕ್ಷ ದೇವತೆ ಎಂದು ಹೇಳಬಹುದು.[೨೧] ನಂತರ ಈ ದೇವಿಯು ಆರ್ಯರ ಪ್ರಭಾವದಿಂದ ಶಿಷ್ಟ ದೇವಿಯಾಗಿ ಪರಿವರ್ತನೆ ಹೊಂದಿದಳು.

## ಕಾಳಮ್ಮ

ಕಾಳಿ ಎಂದರೆ ಉಗ್ರ ರೂಪದ ದೇವತೆ. ಕಾಳಮ್ಮ ಎಂದರೆ ಕಾಳು+ಅಮ್ಮ ಕೃಷಿದೇವತೆ. ಹಿಂದೂ ಪರಂಪರೆಯಲ್ಲಿ ಉಗ್ರ ಸ್ವರೂಪಕ್ಕೆ ಕಾಳಿಯು ಹೆಸರಾಗಿದ್ದಾಳೆ. ನಮ್ಮಲ್ಲಿರುವ ಅಸಂಖ್ಯಾತ ಗ್ರಾಮದೇವತೆಗಳಲ್ಲಿ ಕಾಳಿಯು ಒಬ್ಬಳು. ಈಕೆಯನ್ನು ಭದ್ರಕಾಳಿ ಎಂತಲೂ ಕರೆಯುತ್ತಾರೆ. ದುಷ್ಟರನ್ನು ಸಂಹಾರ ಮಾಡಲಿಕ್ಕೆ ಹಲವು ಅವತಾರಗಳನ್ನು ಧಾರಣ ಮಾಡಿದ್ದಾಳೆ. ಅವುಗಳಲ್ಲಿ ಕಾಳಿ ಸ್ವರೂಪವು ಒಂದು. ಭೂಲೋಕದಲ್ಲಿ ದುರ್ಗಮಾಸುರರು ದೇವಿಯ ಭಕ್ತಿಗೆ, ದೇವಗಣಗಳಿಗೆ, ಋಷಿಗಳಿಗೆ ಬಹಳ ತೊಂದರೆಯನ್ನು ಕೊಡಲು ಆರಂಭಿಸಿದರು. ಇಂತಹ ಸಮಯದಲ್ಲಿ ಭಕ್ತರು ಸಂಕಷ್ಟಗಳ ನಿವಾರಣೆಗಾಗಿ ದೇವಿಯನ್ನು ಪರಿಪರಿಯಾಗಿ ಬೇಡಿದಾಗ ಬನಶಂಕರಿಯು ಮಹಾಕಾಳಿಯ ಉಗ್ರ ಸ್ವರೂಪದಲ್ಲಿ ಪ್ರತ್ಯಕ್ಷಳಾಗಿ ರಾಕ್ಷಸರನ್ನು ಸಂಹರಿಸಿ, ಅವರ ರಕ್ತವನ್ನು ಕುಡಿದಿದ್ದರಿಂದ ಆಕೆಗೆ ರಕ್ತಾಕ್ಷಿ ಎಂಬ ಹೆಸರು ಬಂದಿದೆ ಎನ್ನುತ್ತಾರೆ.[೨೨]

ಬಾದಾಮಿಯ ಬನಶಂಕರಿ ಕ್ಷೇತ್ರದಲ್ಲಿರುವ ಹರಿದ್ರಾತೀರ್ಥದಲ್ಲಿ ಸಿಕ್ಕಿರುವ ಉಸುಕು ಕಲ್ಲಿನ ಕಾಳಿ ವಿಗ್ರಹವಾಗಿದ್ದು, ಉಗ್ರ ರೂಪದಲ್ಲಿರುವ ಈ ವಿಗ್ರಹದ ಎರಡು ಕೈಗಳು, ಸ್ತನಗಳು ಒಡೆದು ಹೋಗಿವೆ. ಆದರೆ ಪ್ರಸ್ತುತದಲ್ಲಿ ಪೂಜೆಗೊಳ್ಳುತ್ತಿರುವ ಬನಶಂಕರಿ ದೇವಿಯ ಮೂರ್ತಿಯಂತೆಯೇ ಗೋಚರಿಸುತ್ತದೆ. ಹೊಂಡದಲ್ಲಿ ದೊರೆತಿರುವ ಮೂರ್ತಿಯು ಕೂಡ ಬಲಗೈಗಳಲ್ಲಿ ರುಂಡ, ತ್ರಿಶೂಲ, ಖಡ್ಗಗಳನ್ನು ಮತ್ತು ಎಡಗೈಗಳಲ್ಲಿ ಡಮರು,

ಗುರಾಣಿ, ರುಂಡಗಳನ್ನು ಹಿಡಿದಿರುವಳು. ಈ ಮೂರ್ತಿಯು ಮುಕ್ಕಾದ ಕಾರಣಕ್ಕೆ ಹೊಂಡದಲ್ಲಿ ವಿಸರ್ಜನೆ ಮಾಡಿರಬಹುದು. ಆದರೆ ಬಹುಶಃ ಮೊದಲು ಈ ಕಾಳಿಮೂರ್ತಿಯನ್ನು ಬನದೇವಿ ಎಂದು ಆರಾಧಿಸುತ್ತಿದ್ದ ಸಾಧ್ಯತೆಗಳಿವೆ.

**ಲಜ್ಜಾಗೌರಿ**

ಸ್ತನ, ಗರ್ಭ, ಯೋನಿ ಇವುಗಳನ್ನು ಮಾತೃದೇವತೆಯ ಸಂಕೇತಗಳಾಗಿವೆ. ಅವು ಪಾಲನೆ, ಧಾರಣೆ, ಸೃಷ್ಟಿಯ ಕ್ರಿಯೆಗಳನ್ನು ಪ್ರತಿನಿಧಿಸುತ್ತವೆ.[೩೪] ಇದಕ್ಕೆ ಉತ್ತಮ ಉದಾಹರಣೆ ಅಲ್ಲಲ್ಲಿ ಕಂಡುಬರುವ ಲಜ್ಜಾಗೌರಿಯ ಶಿಲ್ಪಗಳು ಸಾಕ್ಷಿಯಾಗಿವೆ. ಮಾತೃದೇವತೆಯ ಪರಿಕಲ್ಪನೆಯ ಸ್ವರೂಪಗಳಲ್ಲಿ ಲಜ್ಜಾಗೌರಿಯು ಒಂದಾಗಿದೆ. ಲಜ್ಜಾಗೌರಿಯ ಆರಾಧನೆಯನ್ನು ಕರ್ನಾಟಕ ಮಾತ್ರವಲ್ಲ. ಮಹಾರಾಷ್ಟ್ರ, ಆಂಧ್ರಪ್ರದೇಶ ಹೀಗೆ ಮುಂತಾದ ರಾಜ್ಯಗಳಲ್ಲಿ ಗಮನಿಸಬಹುದು. ವಿಶೇಷವಾಗಿ ಈ ಆರಾಧನೆಯು ಇಂದಿಗೂ ಜೀವಂತವಾಗಿರುವುದು ಕರ್ನಾಟಕದಲ್ಲಿ. ಅದರಲ್ಲೂ ಉತ್ತರ ಕರ್ನಾಟಕದ ಭಾಗಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಲಜ್ಜಾಗೌರಿಯು ಸೃಷ್ಟಿಕಾರ್ಯದ ಪ್ರತೀಕ. ತಾಂತ್ರಿಕ ಪಂಥದವರು ಈ ಆರಾಧನೆಯನ್ನು ಆರಂಭಿಸಿದರು.

ತಾಂತ್ರಿಕ ಪಂಥದವರು ಸೃಷ್ಟಿ ವಿಕಾಸದ ಸೂಚಕವಾದ ಲಜ್ಜಾಗೌರಿ (ಯೋನಿ) ಮೂರ್ತಿಯನ್ನು ಪೂಜಿಸಿ, ತಮ್ಮ ಕಾರ್ಯಸಾಧನೆಯನ್ನು ಮಾಡಿಕೊಳ್ಳಲು ಪ್ರಯತ್ನಿಸುತ್ತಾರೆ. ಈ ಪಂಥಕ್ಕೆ ಜಾತೀಯತೆಯಿಲ್ಲ. ಸಾಮಾನ್ಯವಾಗಿ ಕೆಳವರ್ಗದವರು ಹೆಚ್ಚಾಗಿರುವರು. ಸ್ತ್ರೀಪುರುಷರಿಬ್ಬರೂ ಈ ಮೂರ್ತಿಯನ್ನು ಆರಾಧಿಸುತ್ತಾರೆ. ಸಾಮಾನ್ಯವಾಗಿ ಇಂತಹ ಮೂರ್ತಿಗಳು ನಿರ್ಜನ ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಲಜ್ಜಗೌರಿಯನ್ನು ಆದಿಮಾತೆಯ ರೂಪವೆಂದು, ಮಳೆ-ಬೆಳೆ ಸಮೃದ್ಧಿ ಹಾಗೂ ಸಂತತಿಯನ್ನೂ ನೀಡುವವಳು ಎಂಬ ಇತ್ಯಾದಿ ಕಲ್ಪನೆಗಳಿಂದ ಈಕೆಯನ್ನು ಆರಾಧಿಸುತ್ತಾರೆ. ಈ ದೇವಿಯ ಆರಾಧನೆಯು ಪ್ರಾದೇಶಿಕ ಭಿನ್ನತೆಗಳನ್ನು ಹೊಂದಿದೆ. ಇಂದಿಗೂ ಈ ಆರಾಧನೆಯು ಉತ್ತರ ಕರ್ನಾಟಕದ ಭಾಗದಲ್ಲಿ ಕೆಲವು ಪ್ರದೇಶಗಳಲ್ಲಿ ಕಾಣಬಹುದು. ಆದ್ದರಿಂದ ಈ ಮಾತೃ ಆರಾಧನೆಯನ್ನು ಗಾಢವಾಗಿ ಇಲ್ಲಿ ಆಚರಿಸಲಾಗುತ್ತಿರುವುದು ಗಮನಾರ್ಹ. ಬಾದಾಮಿಯ ಬನಶಂಕರಿ ಕ್ಷೇತ್ರ, ಮಹಾಕೂಟ ಸ್ಥಳಗಳು ಪುರಾಣ ಪ್ರಸಿದ್ಧ ತಾಣಗಳಾಗಿವೆ. ಈ ತಾಣಗಳು ಶಿವಶಕ್ತಿಯ ಅಚ್ಚುಮೆಚ್ಚು ಎಂಬ ವಿಷಯವನ್ನು ಮತ್ಸ್ಯಪುರಾಣ, ದೇವಿ ಭಾಗಮತ ಹಾಗೂ ಶಾಕಂಭರಿ ಮಹಾತ್ಮೆಗಳಿಂದ ತಿಳಿದುಬರುತ್ತದೆ. ಶಾಕಂಭರಿ ಮಹಾತ್ಮ್ಯಂ ಎಂಬುವುದು ಬಾದಾಮಿ ಬನಶಂಕರಿಯ ಕುರಿತು ಒಳಗೊಂಡ ಕೃತಿಯಾಗಿದೆ. ಈ ಕೃತಿಯಲ್ಲಿ ಮಹಾಕೂಟದ ಉಲ್ಲೇಖಗಳಿವೆ. ಅಲ್ಲದೆ, ವೃಕ್ಷ ರಾಶಿಗಳು, ತೀರ್ಥಗಳು, ಪ್ರಮುಖವಾದ ಶಿವಮಂದಿರಗಳು ಹಾಗೂ ದೇವಿಯನ್ನು ನಿರ್ದೇಶಿಸುವ ಶ್ಲೋಕಗಳು ಮಹತ್ವದಾಗಿವೆ.

ತಟೇ ಮಲಾಪಹಾರಿಣ್ಯಾಃ ಸಂತಿ ಲಿಂಗಾನಿ ಕೋಟಿಶಃ ।
ತಾನಿ ಸರ್ವಾಣಿ ಗದಿಂತುಂ ನಾಲಂ ವರ್ಷಶತಾನ್ಯಪಿ ॥
ಬಿಲ್ವರಾಜೀವನಂ ಚಾತ್ರ ವಿದ್ಯತೇಸುಮನೋಹರಮ್
ಶಿದಯಾ ಸಹಿತಃ ಶಂಭುರ್ವಿಶ್ರ್ಯಾಮತಿ ಸುಖಂತ್ವಿಹ
ವಿಷ್ಣುಪುಷ್ಕರಿಣಿ ತೀರೇ ಮಲ್ಲಿಕಾರ್ಜುನ ಸನ್ನಿಧೌ ।
ಪಾತತೀಶಂ ಪಿನಾಕೀಶಂ ಲಜ್ಜಾಗೌರ್ಯಹ್ವಯಂ ತಥಾ ॥
ಕೋಟಿಲಿಂಗ ವೈಷ್ಣದೇಶಂ ವೀರಭದ್ರೇಶ್ವರ ತಥಾ ॥
ನಾರಸಿಂಹಂ ವಾಮನಾಖ್ಯಂ ಶೃಗಾಲೇಶ್ವರಮೇವಚ ॥
ಏತಾನಿ ನವಲಿಂಗಾನಿ ದುರಿತಘ್ನಾನಿ ತಾಪಸಾಃ ॥
ಪರ್ವತೇ ಕೋಟಲಿಂಗಾನಿ ಬಿಲ್ವಚಂದನರಾಜಿತೇ ॥[೩೫]

ಮಲಪ್ರಭಾ ನದಿ ತೀರದಲ್ಲಿ ಒಂದು ಕೋಟಿ ಲಿಂಗಗಳಿರುವವು. ಅವುಗಳ ಹೆಸರು ಮಾತ್ರ ಹೇಳುವುದಕ್ಕೆ ನೂರಾರು ವರ್ಷಗಳು ಸಾಲದು. ಈ ತಿಲಕವನದಲ್ಲಿ ಬಿಲ್ವ ವೃಕ್ಷಗಳದೊಂದು ದೊಡ್ಡ ವನವಿರುವುದು. ಈ ವನದಲ್ಲಿ ಪಾರ್ವತಿ ಪರಮೇಶ್ವರರು ವಿಶ್ರಾಂತಿಯನ್ನು ಪಡೆಯುವರು. ವಿಷ್ಣು ಪುಷ್ಕರಣಿ ತೀರ್ಥದ ಹತ್ತಿರವಿದ್ದ ಮಲ್ಲಿಕಾರ್ಜುನ ಲಿಂಗದ ಹತ್ತಿರ ಪಾತಾತೇಶ, ಪಿನಾಕೇಶ, ಲಜ್ಜಾಗೌರಿ, ಕೋಟಿಲಿಂಗ, ವೈಷ್ಣವೇಶ, ವೀರಭದ್ರೇಶ್ವರ, ನರಸಿಂಹೇಶ್ವರ, ವಾಮನೇಶ್ವರ, ಶೃಗಾಲೇಶ್ವರ ನಾಮ ಒಂಭತ್ತು ಲಿಂಗಗಳು ಇವೆ. ಬಿಲ್ವ ಮತ್ತು ಚಂದನ ವೃಕ್ಷಗಳಿಂದ ಅಲಂಕೃತವಾದ ಪರ್ವತ (ಬಾದಾಮಿ ಗುಡ್ಡ)ದಲ್ಲಿ ಕೋಟಿ ಲಿಂಗಗಳು ಇವೆ.[೩೬]

ಇಲ್ಲಿರುವ ೯ ಲಿಂಗಗಳಲ್ಲಿ ಒಂದಾದ ಲಜ್ಜಾಗೌರೀಶ್ವರ ಎಂಬುದು ಶಿವಸಹಿತ ಶಕ್ತಿ ಎಂದರ್ಥ. ಮಹಾಕೂಟ ಎಂಬ ಹೆಸರು ಈ ಹಿನ್ನೆಲೆಯಿಂದ ಬಂದಿರಬಹುದು. ಅಂದರೆ ಇಲ್ಲಿ ಲಜ್ಜಾಗೌರಿಯು ಶಕ್ತಿ ದೇವತೆಯ ಮತ್ತೊಂದು ಹೆಸರು ಎಂಬುದು ಸ್ಪಷ್ಟವಾಗುತ್ತದೆ. ಮಹಾಕೂಟಕ್ಕೆ ಕೊಟವಿ ಶಬ್ದಕ್ಕೂ ಸಂಬಂಧವುಂಟು. ಕೊಟವಿ ಎಂದರೆ ದುರ್ಗೆಯ ಇನ್ನೊಂದು ಹೆಸರು. ನಗ್ನಸ್ತ್ರೀ ಎಂದೂ ಮತ್ತೊಂದು ಅರ್ಥವಿದೆ. ಭಾರತದ ಪ್ರಸಿದ್ಧ ಶಕ್ತಿಪೀಠಗಳು, ಕ್ರಮೇಣ ಶೈವ ಪಂಥ ಕೇಂದ್ರಗಳಾಗಿ ಪರಿಣಮಿಸಿದ ಕಾಲದಲ್ಲಿ ಈ ಮಹಾಕೂಟವು ಪೀಠ, ಮಕುಟ, ಮಹಾಕೂಟೇಶ್ವರ ಆಗಿರಬಹುದು. ಅಲ್ಲಿದ್ದ ನಗ್ನ, ಶಿರೋಹೀನ ಸ್ತ್ರೀ ವಿಗ್ರಹ, ಕೊಟವಿಗೆ ಲಜ್ಜಾಗೌರಿ ಎಂಬ ಹೆಸರು ಬಂದಿರಬಹುದಾಗಿದೆ.[೩೭]

ಬಾದಾಮಿಯ ಪರಿಸರದಲ್ಲಿ ಸಿದ್ಧನಕೊಳ್ಳ, ಹುಲಿಗೆಮ್ಮನ ಕೊಳ್ಳ, ಬನಶಂಕರಿಯ ಸಮೀಪವಿರುವ ನಾಗರಾಳ, ಮಹಾಕೂಟಗಳಲ್ಲಿ ಲಜ್ಜಾಗೌರಿಯ ಮೂರ್ತಿಗಳಿರುವುದನ್ನು ಗಮನಿಸುತ್ತೇವೆ. ಈ ಮೂರ್ತಿಗಳನ್ನು ಇಂದಿಗೂ ಆರಾಧಿಸಲಾಗುತ್ತಿದೆ. ಮಕ್ಕಳಾಗದವರು ವ್ರತವನ್ನು ಕೈಗೊಂಡು, ಸೂರ್ಯೋದಯಕ್ಕೆ ಮುಂಚೆ ಹೋಗಿ ಮೂರ್ತಿಯ ಯೋನಿ - ಸ್ತನಗಳಿಗೆ ಬೆಣ್ಣೆ, ಸಿಂಧೂರಗಳನ್ನು ಹಚ್ಚಿ ಪೂಜಿಸುವ ವಿಧಾನವಿದೆ. ಈ ರೀತಿ ಮಾಡುವುದರಿಂದ ಮಕ್ಕಳಾಗುತ್ತವೆ ಎಂಬ ನಂಬಿಕೆಯಿದೆ.

ಬನಶಂಕರಿ ಕ್ಷೇತ್ರದ ಸುತ್ತಮುತ್ತಲೂ ಇಂತಹ ಆಚರಣೆಯನ್ನು ಗಮನಿಸಿದರೆ ಶಾಕ್ತರ ತಾಂತ್ರಿಕ ಪಂಥದ ಪ್ರಭಾವ ಎದ್ದು ಕಾಣುತ್ತದೆ. ಶಾಕ್ತ ಪಂಥದ ಬೆಳವಣಿಗೆಯಿಂದ ಅನೇಕ ಶಕ್ತಿ ಪೀಠಗಳು ಶೈವ ಆರಾಧನಾ ಕೇಂದ್ರಗಳಾಗಿ ಬೆಳೆದಿದ್ದರಿಂದ ಇಂತಹ ಆಚರಣೆಯು ಇಲ್ಲಿ ಕಂಡುಬರುತ್ತವೆ. ಈ ಆಚರಣೆಯಿಂದ ಆದಿಶಕ್ತಿಯ ಪ್ರಭಾವ ಕಡಿಮೆಯಾಗಿ, ಕೇವಲ ಸಂತಾನಧಾತೆಯ ರೂಪದಲ್ಲಿ ಮುಂದುವರೆದಳು ಎಂಬುವುದಕ್ಕೆ ಈ ಲಜ್ಜಾಗೌರಿ ಮೂರ್ತಿಗಳು ಸಾಕ್ಷಿಯಾಗಿವೆ.

**ಬನ್ನಿಮಹಾಕಾಳಿ**

ಕಾಳಿ ದೇವತೆಯು ಪಂಚಾಳದವರ ಆರಾಧ್ಯ ದೇವತೆಯಾಗಿದ್ದಾಳೆ. ಮಹಾಕಾಳಿ ಹಟಯೋಗಿಗಳ ದೇವತೆಯಾದರೆ ಬನ್ನಿಮಹಾಕಾಳಿ ಪಾಂಡವರ, ವಿಯನಗರದ ಅರಸರ ಮತ್ತು ಮೈಸೂರು ಅರಸರ ವಿಜಯ ದೇವತೆಯಾಗಿದ್ದಾಳೆ. ಪಾಂಡವರ ಒಂದು ವರ್ಷ ವನವಾಸದಲ್ಲಿದ್ದಾಗ ತಮ್ಮಲ್ಲಿರುವ ಆಯುಧಗಳನ್ನು ಬನ್ನಿಗಿಡದಲ್ಲಿ ಕಟ್ಟಿಟ್ಟಿದ್ದರು. ನಂತರ ವಿರಾಟನ ಮನೆಯಲ್ಲಿ ಸೇವಕರಾಗಿ ನೆಲೆನಿಂತರು. ಮುಂದೆ ವಿರಾಟನಗರದ ಮೇಲೆ ಕೌರವರು ದಾಳಿ ಮಾಡಿದಾಗ, ಮಹಾಭಾರತ ಯುದ್ಧ ಸಾರಿದಾಗ, ಪಾಂಡವರು ಆ ಬನ್ನಿಗಿಡಕ್ಕೆ ಪೂಜಿಸಿ ಕಟ್ಟಿಟ್ಟ ತಮ್ಮ ಆಯುಧಗಳನ್ನು ತೆಗೆದುಕೊಂಡು ಯುದ್ಧ ಮಾಡಿ ವಿಜಯವನ್ನು ಸಾಧಿಸಿದರು. ಇದರಿಂದಾಗಿ ಬನ್ನಿಗಿಡವು ಮಹಾಕಾಳಿಯಾಗಿ, ಪಾಂಡವರ ಕೀರ್ತಿ ದೇವತೆಯಾದಳು. ಇವರ ನಂತರ ವಿಜಯನಗರದ ಅರಸರು ಮತ್ತು ಮೈಸೂರು ಒಡೆಯರು ವಿಜಯದಶಮಿಯ ದಿನದಂದು ಬನ್ನಿಗಿಡಕ್ಕೆ ಪೂಜೆಯನ್ನು ಮಾಡುತ್ತಿರುವುದು ಗಮನಾರ್ಹ.

ಬನ್ನಿಮಹಾಕಾಳಿ ರೋಗ ನಿವಾರಣೆ ಮಾಡುವ, ಮಕ್ಕಳ ಕೊಡುವ, ಅರಿಷ್ಟ ದೂರ ಮಾಡುವ ದೇವತೆ ಎಂದು ಅಮವಾಸ್ಯೆಯ ರಾತ್ರಿ ದಿವಸ ಜನರು ಪೂಜಿಸುತ್ತಾರೆ.[೩೮] ಹೀಗೆ ನಮ್ಮಲ್ಲಿ ವೃಕ್ಷಪೂಜೆ ಇಂದಿಗೂ ಆಚರಣೆಯಲ್ಲಿರುವುದನ್ನು ಕಾಣಬಹುದು. ಈ ಹಿನ್ನೆಲೆಯಲ್ಲಿ ಬನಶಂಕರಿಯನ್ನು ಬನ್ನಿಮಹಾಕಾಳಿಯ ರೂಪದಲ್ಲಿ ಆರಾಧಿಸುತ್ತಿರುವುದು ವಿಶೇಷವಾಗಿದೆ.

**ಶಾಕಂಭರಿ**

ಬನಶಂಕರಿಯ ಮತ್ತೊಂದು ಹೆಸರು ಶಾಕಂಭರಿ. ಶಾಕ ಎಂದರೆ ಹಸಿರು ಅಥವಾ ವನಸ್ಪತಿ ಎಂಬ ಅರ್ಥವನ್ನು ನೀಡುತ್ತದೆ. ಭರಿ ಎಂದರೆ ಸಮೃದ್ಧಿವುಳ್ಳವಳು ಎಂದರ್ಥ. ಹಾಗೆಯೇ ಭೂಮಿಯನ್ನು ಸೂಚಿಸುತ್ತದೆ. ಶಾಕಂಭರಿ ಮಹಾತ್ಮ್ಯಂನಲ್ಲಿ ಉಲ್ಲೇಖಿಸಿರುವಂತೆ ಭೂಲೋಕದಲ್ಲಿ ನೂರಾರು ವರ್ಷಗಳ ಕಾಲ ಕ್ಷಾಮ, ಬರಗಾಲದಿಂದ ಜನರು ಸಂಕಷ್ಟದಲ್ಲಿ ಇರುವಾಗ ಭಕ್ತರು, ಋಷಿ, ದೇವಗಣಗಳು ದೇವಿಯನ್ನು ಪ್ರಾರ್ಥಿಸಿದರು. ಆಗ ತಿಲಕಾರಣ್ಯದಲ್ಲಿ ದೇವಿಯು ಪ್ರತ್ಯಕ್ಷಳಾಗಿ ತನ್ನ ದೇಹದಿಂದ ಶಾಕ ಉತ್ಪನ್ನಗಳನ್ನು ಸೃಷ್ಟಿಸಿ ಸಕಲ ಪ್ರಾಣಿಗಳನ್ನು ರಕ್ಷಿಸಿದ್ದಾಳೆ. ಈ ಹಿನ್ನೆಲೆಯಲ್ಲಿ ಜಗನ್ಮಾತೆಯಾದ ಬನಶಂಕರಿಯು ಶಾಕಂಭರಿ ಎಂದು ಪ್ರಸಿದ್ಧಳಾದಳು.

ಇವುಗಳಲ್ಲದೆ ಜನಪದರು ಹೇಳುವಂತೆ ಸೋಮವಾರ ಸೋಮಶೇಖರಳೂ, ಮಂಗಳವಾರದಲ್ಲಿ ಸರ್ವಮಂಗಲಕ್ಕೆ ಮಂಗಲ ಸ್ವರೂಪಳೂ, ಬುಧವಾರದಲ್ಲಿ ಬುದ್ಧಿಮತಿಯೂ ಬಾಲಾ ಸ್ವರೂಪಗಳು, ಗುರುವಾರ ಎಲ್ಲ ಗುಣಗಳಿಗೆ ಆಶ್ರಯದಾತಳೂ, ಗಂಗಾಧರ ಪ್ರಿಯಳೂ, ಗಗನ ಮಂಡದಲ್ಲಿ ವಾಸಿಸುವಳಾಗಿ, ಶುಕ್ರವಾರದಂದು ಮಹಾನಂದ ಸ್ವರೂಪಳೂ, ಭದ್ರಕಾಳಿಯೂ ಆದ ಶಾಂಭವಿಯಾಗಿ ಶನಿವಾರದಲ್ಲಿ ಶಾಂತಮೂರ್ತಿಯು, ಸಿದ್ಧಿದಾಯಕಳೂ ಆಗಿದ್ದಾಳೆ. ದುರ್ಗಮಾಸುರನನ್ನು ನಾಶ ಮಾಡಿದ್ದರಿಂದ 'ದುರ್ಗಾದೇವಿ' ಎಂದು ಕರೆಯುವರು. ಋಷಿ ಮುನಿಗಳಿಗೆ ತೊಂದರೆ ಕೊಟ್ಟವರನ್ನು ಭಯಂಕರ ರೂಪವನ್ನು ಧಾರಣ ಮಾಡಿ ಅವರನ್ನು ನಾಶ ಮಾಡಿದ್ದರಿಂದ 'ಭೀಮಾದೇವಿ' ಎಂದು ಹೆಸರು ಬಂದಿದೆ. ಮುಂದೆ ಅರುಣನಾಮಕ ದೈತ್ಯನೂ ಜಗತ್ತಿಗೆ ಪೀಡೆಯನ್ನು ಕೊಟ್ಟಿದ್ದರಿಂದ ಲೆಕ್ಕವಿಲ್ಲದಷ್ಟು ಭ್ರಮರ(ಗುಂಗೆಹುಳ)ಗಳ ರೂಪವನ್ನು ಧಾರಣ ಮಾಡಿ ಸಂಹರಿಸುವುದರಿಂದ 'ಭ್ರಮರಾಂಬ' ಅಂತ ಹೆಸರು ಬಂದಿತು. ಕೋಲ್ಹಾಸುರನು ಹುಟ್ಟಿ ಜಗತ್ತಿಗೆ ತೊಂದರೆ ಕೊಟ್ಟಿದ್ದರಿಂದ 'ಮಹಾಲಕ್ಷ್ಮೀ' ರೂಪದಿಂದ ಸಂಹರಿಸಿದಳು. ಈಕೆಯು ಮೂರು ಲೋಕದ ಸುಂದರಿಯಾದ್ದರಿಂದ 'ತ್ರಿಪುರ ಸುಂದರಿ'ಯಾಗಿದ್ದಾಳೆ. ಬನಶಂಕರಿಯ ಅವತಾರದಲ್ಲಿ ಆಕೆಯು ಅವಿವಾಹಿತೆ. ಆದ್ದರಿಂದ ಆಕೆಯನ್ನು ಬಾಲಾ, ಲಲಿತಾ ಅಥವಾ 'ಕತ್ಯಾಯಿನೀ' ಎಂಬ ರೂಪದಲ್ಲಿ ಆರಾಧಿಸುತ್ತಾರೆ.

ನಮ್ಮ ನಾಡಿನ ಸಂಸ್ಕೃತಿಯಲ್ಲಿ ಮಾತೃದೇವತಾ ಸ್ವರೂಪಿಗಳಾಗಿ ಲಜ್ಜಗೌರಿ, ಗಜಲಕ್ಷ್ಮೀ, ಜೋಗುಳಾಂಬ, ಬನಶಂಕರಿ ಹೀಗೆ ಈ ಎಲ್ಲ ದೇವತೆಗಳನ್ನು ಪೂಜಿಸಲಾಗಿದೆ. ಶಾಕ್ತಪಂಥ ಬೆಳೆದುಬಂದಾಗ ಈ ಮಾತೃದೇವತೆಗಳಿಗೆ ಸಮಾನಾಂತರವಾಗಿಯೇ ಸ್ತ್ರೀ ಶಕ್ತಿ ದೇವತೆಗಳು ಹುಟ್ಟಿಬೆಳೆದವು. ಮಾರ್ಕಂಡೇಯ ಪುರಾಣದ ಒಂದು ಭಾಗವಾದ ದೇವಿ ಮಹಾತ್ಮೆಯಲ್ಲಿ ಶಾಕ್ತಪಂಥದ ವಿಶೇಷತೆಗಳನ್ನು ತಿಳಿಸಲಾಗಿದೆ. ಶಾಕ್ತಪಂಥವು ಹಿಂದೂ ಧರ್ಮದ ಒಂದು

ಅಂಗ. ಶಾಕ್ತರಿಗೆ ಶಕ್ತಿದೇವತೆಯ ಕುಂಡಲಿನಿ ಶಕ್ತಿಯ ಸಂಕೇತವೆನಿಸಿದ್ದಾಳೆ. ಶೈವ, ವೈಷ್ಣವ, ಆಗಮಗಳಂತೆ ಶಾಕ್ತಾಗಮನವೂ ಜ್ಞಾನ, ಕ್ರಿಯಾ, ಯೋಗ ಮತ್ತು ಚರ್ಯಾ ಎಂಬ ನಾಲ್ಕು ಪಾದಗಳನ್ನೊಳಗೊಂಡಿವೆ. ಅದರಲ್ಲಿ ವಿಶೇಷವಾಗಿ ಮಂತ್ರ ತಂತ್ರಗಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗಿದೆ.

ದಕ್ಷಪ್ರಜಾಪತಿಯ ಮಗಳು ಸತಿ, ತಂದೆಯಿಂದ ಅಪಮಾನಿತಳಾಗಿ ಪ್ರಾಣ ಬಿಟ್ಟಳು. ಆಗ ಆಕೆಯ ಪತಿ ಈಶ್ವರನು ಆಕೆಯ ಶವವನ್ನು ಬೆನ್ನ ಮೇಲೆ ಹೊತ್ತು ಹುಚ್ಚನಂತೆ ತಿರುಗುತ್ತಿದ್ದನು. ಇದನ್ನು ಕಂಡು ಭಯಭೀತರಾದ ದೇವತೆಗಳು ಸತಿಯ ಮೃತ ಶರೀರ ಒಳಹೊಕ್ಕು ಅದನ್ನು ಬೇರ್ಪಡಿಸಿದರು. ಆ ದೇಹದ ಭಾಗಗಳು ಬಿದ್ದ ಸ್ಥಳಗಳೆಲ್ಲಾ ಶಕ್ತಿಪೀಠಗಳಾದವೆಂದು ಮತ್ಸ್ಯಪುರಾಣ ತಿಳಿಸುತ್ತದೆ. ಶಾಕ್ತರ ಆರಾಧನೆಗೂ, ವೈದಿಕರ ಸಂಪ್ರದಾಯಕ್ಕೂ ಸಾಕಷ್ಟು ವ್ಯತ್ಯಾಸಗಳಿವೆ. ಮಾಂಸ, ಮೈಥುನ, ಮತ್ಸ್ಯ, ಮದ್ಯ, ಮುದ್ರ ಇವು ಶಾಕ್ತರ ಪಂಚಮಕಾರ ಪೂಜೆಯ ಐದು ಅಂಗಗಳಾಗಿವೆ. ಇಲ್ಲಿ ಮಾನವನ ಸಹಜ ಕ್ರಿಯೆಗಳು ಪೂಜಾ ವಿಧಿಗಳಾಗುತ್ತವೆ. ಮಂತ್ರದ ಮೂಲಕ ದೇವಿ ಆರಾಧನೆ ಸಾತ್ವಿಕ ವಿಧಾನದ್ದಾದರೆ, ತಂತ್ರ ವಿಧಾನದ ಪೂಜೆ ಶಾಕ್ತ ಸಂಪ್ರದಾಯದ್ದು. ಗ್ರಾಮದೇವತೆಗಳಲ್ಲಿ ಸಾಮಾನ್ಯವಾಗಿ ಈ ಶಕ್ತಿ ದೇವತೆಗಳೇ ಆಗಿದ್ದು, ಜನಪದರನ್ನು ಕಾಯುವ, ಶತ್ರುಗಳನ್ನು ಕೊಲ್ಲುವ, ರೋಗ ರೂಜಿನಗಳನ್ನು ತೊಲಗಿಸುವ ಶಕ್ತಿಯನ್ನು ಪಡೆದಿರುತ್ತವೆ. ಇದಕ್ಕೆ ಉದಾಹರಣೆಯಾಗಿ ಕಾಳಮ್ಮ, ದುರ್ಗಮ್ಮ, ಮಾರೆಮ್ಮ, ಪ್ಲೇಗಮ್ಮ, ಸುಂಕಮ್ಮ, ಬನದಮ್ಮ ಇತ್ಯಾದಿ ದೇವತೆಗಳನ್ನು ಕಾಣಬಹುದು.

ಸ್ತ್ರೀ ಶಕ್ತಿದೇವತೆಗಳು ಗ್ರಾಮದೇವತೆಗಳಾಗಿ ಜನಪ್ರಿಯವಾಗತೊಡಗಿದಾಗ ಕೆಲವು ಈಗಾಗಲೇ ಆರಾಧನೆಗೊಳ್ಳುತ್ತಿರುವ ಪ್ರಜನನ ದೇವತೆಗಳಾದ ಮಾತೃದೇವತೆಗಳನ್ನು ಗ್ರಾಮದೇವತೆಗಳನ್ನಾಗಿಯೂ ಪೂಜಿಸತೊಡಗಿದದರು. ಇವರಿಂದ ಫಲವಂತಿಕೆಯನ್ನು ನೀಡುವ ದೇವತೆಗಳಿಗೆ ಸಂರಕ್ಷಣೆ ಕಾರ್ಯವನ್ನು ನೀಡುವಂತಾಯಿತು. ಹೀಗೆ ಮಾತೃದೇವತೆಗಳು ಗ್ರಾಮದೇವತೆಗಳಾದಾಗ ಯಾವುದು ಮೂಲ ಮಾತೃದೇವತೆ, ಯಾವುದು ಶಕ್ತಿದೇವತೆ ಎಂಬ ಭೇದ ತಿಳಿಯದೇ ಒಟ್ಟಾರೆ ಸ್ತ್ರೀ ದೇವತೆಗಳ ಆರಾಧನೆ ಪ್ರಮುಖವಾಗಿದೆ. ಇದನೆಲ್ಲ ಗಮನಿಸಿದಾಗ ಭಾರತೀಯ ಸಂಸ್ಕೃತಿಯಲ್ಲಿ ದ್ರಾವಿಡರ ಮಾತೃದೇವತಾರಾಧನೆಯ ಪ್ರಾಮುಖ್ಯತೆ ಸ್ಪಷ್ಟವಾಗುತ್ತದೆ. ಸಮಾಜದಲ್ಲಿ ಸ್ತ್ರೀಗೆ ಇದ್ದ ಗೌರವಾಧಾರಗಳು ಏರಿಳಿತಗಳಾಗಿ ಅಂದಿನ ಕಾಲದ ಮಾತೃದೇವತೆಯ ಕಲ್ಪನೆ ಉಪಾಸನೆಗಳ ಮೇಲೆ ಪರೋಕ್ಷವಾಗಿ ಪರಿಣಾಮ ಬೀರಿದೆ. ಆರ್ಯ – ದ್ರಾವಿಡರ ಸಂಪರ್ಕದಲ್ಲಿ ಸ್ತ್ರೀ – ಪುರುಷ ತತ್ವದ ಸಮಾಗಮದಿಂದ ಅರ್ಧನಾರೀಶ್ವರ ಪೂಜೆಯು ನಡೆಯುತ್ತಾ ಬಂದಿದೆ.

ಈ ಶಕ್ತಿದೇವತಾರಾಧನೆಯು ಭಾರತದಲ್ಲಿ ವ್ಯಾಪಕವಾಗಿ, ವೈವಿದ್ಯಪೂರ್ಣವಾಗಿ ಪ್ರಮುಖವಾದ ಒಂದು ಪಂಥವೇ ಆಗಿದೆ. ಆದರೆ ಇಂತಹ ವ್ಯಾಪಕ, ವೈವಿದ್ಯಪೂರ್ಣವಾದ ಶಕ್ತಿ ಆರಾಧನೆಯು ಜಗತ್ತಿನ ಇತರ ಯಾವ ದೇಶದಲ್ಲೂ ಕಂಡುಬರುವುದಿಲ್ಲ. ಜಮ್ಮುವಿನ ವೈಷ್ಣೋದೇವಿ, ಆಸ್ಸಾಂನ ಕಮಾಲ್ಯ, ಕಲಕತ್ತಾದ ಮಹಾಕಾಳಿ, ಕಂಚಿಯ ಕಾಮಾಕ್ಷಿ, ಮಧುರೆಯ ಮೀನಾಕ್ಷಿ, ತಮಿಳುನಾಡಿನ ಮಾರಿಯಮ್ಮನ್, ಕನ್ಯಾಕುಮಾರಿಯ ಕುಮಾರಿ, ಮೈಸೂರಿನ ಚಾಮುಂಡಿ, ಕೊಲ್ಲೂರಿನ ಮೂಕಾಂಬಿಕಾ, ಶೃಂಗೇರಿಯ ಶಾರದೆ, ಬೆಂಗಳೂರಿನ ಅಣ್ಣಮ್ಮ, ಬಾದಾಮಿಯ ಬನಶಂಕರಿ, ಸವದತ್ತಿಯ ಯಲ್ಲಮ್ಮ ಹೀಗೆ ಮಾತೃದೇವತೆ, ಗ್ರಾಮದೇವತೆಗಳ ಪರಿಕಲ್ಪನೆಯ ಜೊತೆಗೆ ಜನಪದ ಸಂಸ್ಕೃತಿಯಲ್ಲಿ ಅನೇಕ ಆಚರಣೆಗಳು ಕಂಡುಬರುತ್ತಿದ್ದು, ಅವೆಲ್ಲ ಪ್ರಜಾಜನ ಪ್ರಕ್ರಿಯೆಗೆ ಸಂಬಂಧಿಸಿದವಾಗಿರುವುದು ಗಮನಾರ್ಹ.

ಆ ದಿಸೆಯಲ್ಲಿ ಕರಗದ ಹಬ್ಬ, ಕೊಂತಿಪೂಜೆ, ಜೋಕುಮಾರಹಬ್ಬ, ಗುಳ್ಳವನ ಹಬ್ಬ, ಶೀಗಿ ಆಚರಣೆ, ಗೌರಿ ಆಚರಣೆ ಇತ್ಯಾದಿ ಆಚರಣೆಗಳನ್ನು ಹೆಸರಿಸಬಹುದು. ದಕ್ಷಿಣ ಕರ್ನಾಟಕ ಸಿರಿ ಸಂಪ್ರದಾಯವನ್ನು ಇದರೊಂದಿಗೆ ಸೇರಿಸಬಹುದಾಗಿದ್ದು, ಇವೆಲ್ಲವೂ ಫಲವಂತಿಕೆ ಸಂಪ್ರದಾಯವಾಗಿವೆ. ಅಲ್ಲದೆ ಜನಪದ ಸಂಸ್ಕೃತಿಯು ಎಷ್ಟು ಆಳವಾಗಿ ಹಾಗೂ ವ್ಯಾಪಕವಾಗಿ ನೆಲೆಯೂರಿದೆ ಎಂಬುದನ್ನು ಪ್ರದರ್ಶಿಸುತ್ತದೆ. ಪ್ರಸ್ತುತ ಅಧ್ಯಯನದಲ್ಲಿ ಬನಶಂಕರಿ ದೇವಿಯನ್ನು ಮುಖ್ಯವಾಗಿಟ್ಟುಕೊಂಡು ಫಲವಂತಿಕೆಯ ಸಂಪ್ರದಾಯದೊಂದಿಗೆ ಶಕ್ತಿ ಆರಾಧನೆಯನ್ನು ಗಮನಿಸಲಾಗಿದೆ. ಹಾಗೆಯೆ ಬನಶಂಕರಿ ದೇವಿಯು ಜನಪ್ರಿಯ ದೇವತೆಯಾಗಿ ಹೇಗೆ ಮಾರ್ಪಟ್ಟಿದ್ದಾಳೆ ಎಂಬುದನ್ನು ವಿಶ್ಲೇಷಿಸಿ ನೋಡಲಾಗಿದೆ. ಧಾರ್ಮಿಕತೆಯ ಜೊತೆಗೆ ಆ ಪ್ರದೇಶದ ಸಮಾಜೋ ಆರ್ಥಿಕ ಜೀವನವನ್ನು ಬನಶಂಕರಿ ದೇವಿಯು ನಿರ್ವಹಿಸುತ್ತಿರುವ ಪಾತ್ರ ಗಮನಾರ್ಹ.

* * * * *

ಮಲೆಯಮ್ಮ ದೇವಿಗೆ ಬಲಿ ನೀಡಿರುವುದು





ಮಲೆಯಮ್ಮ
ದೇವಿಗೆ ನೈವೇಧ್ಯೆ



ಪ್ರಸಾಧವನ್ನು ಸ್ವೀಕರಿಸುತ್ತಿರುವ ಭಕ್ತರು

**ಅಡಿ ಟಿಪ್ಪಣಿಗಳು**


೧. ಕಲಬುರ್ಗಿ ಎಂ.ಎಂ., ೧೯೮೮, ಮಹಾಮಾರ್ಗ-೨, ಪುಟ - ೩೧೪, ಕರ್ನಾಟಕ ಬುಕ್ ಏಜನ್ಸಿ, ಬೆಂಗಳೂರು

೨. Anne Baring and Jules Cashford, 1993, The Myth of the Goddess, P - 1

೩. ನಾಗೇಶ್ ಎಚ್.ವಿ., ೧೯೮೧, ಗ್ರಾಮ ವ್ಯಾಸಾಂಗ, ಪುಟ - ೧೪, ೧೫, ಚಂದ್ರನಾಥ ಪ್ರಕಾಶನ, ಧಾರವಾಡ

೪. ಕಲವೀರ ಮನ್ವಾಚಾರ, ೨೦೦೨, ಮಾತೃದೇವತಾ ಆರಾಧನೆ ಉಗಮ ಮತ್ತು ವಿಕಾಸ, ಅ.ಪ್ರ., ಪಿಎಚ್.ಡಿ, ಮ.ಪ್ರ., ಪುಟ - ೪೦

೫. ವಿಲ್ಯಮಂ ಮಾಡ್ತ, ೧೯೯೦, ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಮಾತೃದೇವತೆಯ ಕಲ್ಪನೆ, ಜಾನಪದ ಸಾಹಿತ್ಯ ದರ್ಶನ ಸಂಪುಟ - ೮, ಪುಟ - ೮೧, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿ.ವಿ. ಧಾರವಾಡ

೬. ಚೆನ್ನಣ್ಣ ವಾಲಿಕಾರ, ೧೯೮೩, ಹೈದರಾಬಾದ ಕರ್ನಾಟಕದ ಗ್ರಾಮದೇವತೆಗಳ ಜಾನಪದೀಯ ಅಧ್ಯಯನ, ಪುಟ - ೬೦, ವಾಲೀಕಾರಂ ವೀರಸಂ, ದಲಿತ ಕೇಂದ್ರ, ಗುಲ್ಬರ್ಗಾ

೭. ಸಿದ್ದಲಿಂಗಯ್ಯ, ೧೯೯೭, ಗ್ರಾಮದೇವತೆಗಳು, ಪುಟ - ೨೫, ಮೂಲ ಭಾರತಿ ಪ್ರಕಾಶನ, ಬೆಂಗಳೂರು

೮. ವಿಲ್ಯಮಂ ಮಾಡ್ತ, ೧೯೯೦, ಅದೇ, ಪುಟ - ೯೧

೯. ಸಿದ್ದಲಿಂಗಯ್ಯ, ೧೯೯೭, ಅದೇ, ಪುಟ - ೨೧

೧೦. ಚೆನ್ನಣ್ಣ ವಾಲಿಕಾರ, ೧೯೮೩, ಅದೇ, ಪುಟ - ೫೯

೧೧. ವಾಸುದೇವ ಬಡಿಗೇರ, ೨೦೦೨, ಶಿರಸಂಗಿ ಕಾಳಮ್ಮ ಸಾಂಸ್ಕೃತಿಕ ಅಧ್ಯಯನ, ಪುಟ - ೫೬, ಶ್ವೇತಾ, ಭಾಗೀರತಿ ಪ್ರಕಾಶನ, ಹೊಸಪೇಟೆ

೧೨. ಚೆನ್ನಣ್ಣ ವಾಲಿಕಾರ, ೧೯೮೩, ಅದೇ, ಪುಟ - ೫೯, ೬೦

೧೩. ಸುಂಕಾಪುರ ಎಂ.ಎಸ್., ೧೯೯೦, ಜಾನಪದ ಸಾಹಿತ್ಯ ದರ್ಶನ, ಪುಟ - ೪೪, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿ.ವಿ. ಧಾರವಾಡ

೧೪. Gopinatha Rao T.A., 1985, Elements of Hindu Iconography Vol - 2, P - 328, 329, Motilal banasidass, publisher, private limited, Delhi

೧೫. ಭಂಡರಕರ್ ಆರ್.ಜಿ., ೧೯೬೫, ವೈಷ್ಣವಿಸಮ್, ಶೈವಿಸಮ್ ಅಂಡ್ ಮೈನರ್ ರಿಲೀಜನ್ ಸಿಸ್ಟಮ್, ಪುಟ – ೧೪೨

೧೬. ಕಲವೀರ ಮನ್ವಾಚಾರ, ೨೦೦೨, ಅದೇ, ಪುಟ ೬೫, ೬೬

೧೭. ಸಿದ್ಧಲಿಂಗಯ್ಯ, ೧೯೯೭, ಅದೇ, ಪುಟ – ೨೦, ೨೨

೧೮. ನಾಯಕ ಎನ್.ಆರ್. ೧೯೮೩, ಕರ್ನಾಟಕ ಶಕ್ತಿದೇವತೆಗಳು, ಪುಟ – ೧, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು

೧೯. ಚಿದಾನಂದಮೂರ್ತಿ ಎಂ., ೧೯೯೮, ಹೊಸತು ಹೊಸತು, ಪುಟ – ೩೪೬, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

೨೦. Henry whitehead D.P., 1921, The Village Gods of South India, P - 17, Asian Educational Services, New Delhi

೨೧. ಚಿದಾನಂದಮೂರ್ತಿ ಎಂ., ೧೯೯೮, ಅದೇ, ಪುಟ – ೩೬೯, ೩೭೦

೨೨. ದೇವರಕೊಂಡಾರೆಡ್ಡಿ, ೨೦೦೬, ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ – ೯, ಪುಟ – ೩೩೬, ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ

೨೩. ನಿಂಗಣ್ಣ, ಎನ್. ಸಣ್ಣಕ್ಕಿ, ೨೦೦೧, ಶಂಬಾ ಸಾಹಿತ್ಯದಲ್ಲಿ ಗ್ರಾಮದೇವತೆ, ಪುಟ – ೨೯, ೩೦, ಬಿ.ಎಂ.ಶ್ರೀ, ಸ್ಮಾರಕ ಪ್ರತಿಷ್ಠಾನ, ಬೆಂಗಳೂರು

೨೪. Ramachandra V.R., 1942, Lalitacult, p - 23

೨೫. ಹಿರೇಮಠ ಎಸ್.ಎಸ್., ೧೯೯೩, ಕರ್ನಾಟಕ ದಲಿತ ಸಂಸ್ಕೃತಿ ಭಾಗ ೨, ಪುಟ – ೧೫, ಸಮತಾ ಪ್ರಕಾಶನ, ಹೊಸಪೇಟೆ

೨೬. ಗೀತಾ ಬಿ.ಎಸ್., ೨೦೦೮, ಕರ್ನಾಟಕ ಸಾಂಸ್ಕೃತಿಕ ಸಂಘರ್ಷ ಒಂದು ಅಧ್ಯಯನ, ಪುಟ – ೯೯, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೨೭. ಚೆನ್ನಣ್ಣ ವಾಲೀಕಾರ, ೧೯೮೩, ಪೂರ್ವೋಕ್ತ, ಪುಟ – ೬೯

೨೮. ಶಂಬಾಜೋಶಿ, ೧೯೬೬, ಕರ್ನಾಟಕ ಸಂಸ್ಕೃತಿಯ ಪೂರ್ವ ಪೀಠಿಕೆ ಭಾಗ – ೧, ಪಟ – ೧೮೮, ೧೮೯, ಪ್ರಸಾರಾಂಗ, ಮೈಸೂರು ವಿ.ವಿ. ಮೈಸೂರು

೨೯. ಚಿದಾನಂದಮೂರ್ತಿ ಎಂ., ೨೦೦೨, ಜನ, ಜನಪದ, ಜಾನಪದ, ಪುಟ - ೪೧೫, ಸ್ವಪ್ನ ಬುಕ್‌ಹೌಸ್, ಬೆಂಗಳೂರು

೩೦. Gopinatha Rao T.A., 1985, Elements of Hindu Iconography - Vol - 2, P - 342

೩೧. Gopinatha Rao T.A., 1985, ಅದೇ, P - 343

೩೨. ಕಲವೀರ ಮನ್ವಾಚಾರ್, ೨೦೦೨, ಪೂರ್ವೋಕ್ತ, ಪುಟ - ೧೨೨

೩೩. ಶ್ರೀ ಶೇಷ ದೀಕ್ಷಿತ ಹಿಂಡಸಗಿರಿ, (ಮೂ), ಮಾರ್ತಂಡ ಚಿದಂಬರ ದೀಕ್ಷಿತ. ಬಡ್ಲಿ, (ಅ), ೧೯೯೮, ಶ್ರೀ ಬನಶಂಕರಿ (ಶಾಕಂಭರೀ) ಮಹಾತ್ಮ್ಯಂ, ಪುಟ - ೫೭, ೭೮, ಪೂಜಾರ ಬಂಧುಗಳು, ಅರ್ಚಕರು, ಬನಶಂಕರಿ ಕ್ಷೇತ್ರ, ಬಾದಾಮಿ

೩೪. ಸಿದ್ದಲಿಂಗಯ್ಯ, ೧೯೯೭, ಪೂರ್ವೋಕ್ತ, ಪುಟ - ೧೭

೩೫. ರಾಮಚಂದ್ರ ಢೇರೆ, (ಮೂ), ವಿಠ್ಠಲರಾವ್ ಗಾಯಕವಾಡ, (ಅ), ೨೦೦೩, ಲಜ್ಜಾಗೌರಿ, ಪುಟ - ೩, ೪, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ

೩೬. ಶ್ರೀ ಶೇಷ ದೀಕ್ಷಿತ ಹಿಂಡಸಗಿರಿ, (ಮೂ), ಮಾರ್ತಂಡ ಚಿದಂಬರ ದೀಕ್ಷಿತ. ಬಡ್ಲಿ, (ಅ), ೧೯೯೮, ಪೂರ್ವೋಕ್ತ, ಪುಟ - ೧೨೭

೩೭. ಜ್ಯೋತ್ಸ್ನಾಕಾಮತ್, ೨೦೦೫, ದೇವರನ್ನು ಕುರಿತು ಒಂದು ಬಹುಮುಖಿ ನೋಟ, ಪುಟ - ೨೦೬, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ

೩೮. ವಾಲಿಕಾರ ಚೆನ್ನಣ್ಣ, ೧೯೯೮, ಪೂರ್ವೋಕ್ತ, ಪುಟ - ೧೭೨, ೧೭೩

# ಅಧ್ಯಾಯ : ನಾಲ್ಕು

## ಸ್ಮಾರಕಗಳು

೪. ೧. ದೇವಾಲಯಗಳು

೪. ೨. ದೀಪಸ್ತಂಭಗಳು

೪. ೩. ಮಂಟಪಗಳು

೪. ೪. ತೀರ್ಥಗಳು

೪. ೫. ಮೂರ್ತಿ ಶಿಲ್ಪಗಳು

೪. ೬. ಇತರೆ ಸ್ಮಾರಕಗಳು : ಪಾದಗಟ್ಟೆ, ವೀರಗಲ್ಲು, ಕೆರೆ, ಬಾವಿ

## ೪.೧. ದೇವಾಲಯಗಳು

ಸಮೃದ್ಧವಾದ ಸಾಂಸ್ಕೃತಿಕ ಸಂಪತ್ತನ್ನು ನಮ್ಮ ನಾಡು ಹೊಂದಿದೆ. ಈ ಸಂಸ್ಕೃತಿಯ ಬೆಳವಣಿಗೆಯಲ್ಲಿ ಮಾನವನ ಪಾತ್ರ ಗಮನಾರ್ಹ. ಮನುಷ್ಯನ ಬಂಡವಾಳವೇ ಸಂಸ್ಕೃತಿಯಾಗಿದೆ. ಸಂಸ್ಕೃತಿಯು ಇಲ್ಲದಿದ್ದರೆ ಅವನ ಅಸ್ತಿತ್ವವು ಇರಲು ಸಾಧ್ಯವಿಲ್ಲ. ಜಗತ್ತಿನಲ್ಲಿ ಮನುಷ್ಯನು ಇತರೆ ಪ್ರಾಣಿವರ್ಗಗಳಿಂತ ಉತ್ತುಂಗ ಸ್ಥಾನದಲ್ಲಿರುವುದು ಅವನ ಸಂಸ್ಕೃತಿಯಿಂದಲೇ. ಮನುಷ್ಯನು ತನ್ನ ಉಳಿಯುವಿಗಾಗಿ ತನ್ನ ಮನಸ್ಸಿನಲ್ಲಿ ಮೂಡಿದ ಕಲ್ಪನೆಗಳನ್ನು ತನ್ನ ಬುದ್ಧಿ ಕೌಶಲ್ಯಗಳಿಂದ ಆ ಕಲ್ಪನೆಗಳಿಗೊಂದು ರೂಪ ಕೊಟ್ಟನು. ಇಂತಹ ಕಲ್ಪನೆಗಳು ಧರ್ಮದ ಹುಟ್ಟಿಗೆ, ದೇವಾಲಯಗಳ ರಚನೆಗೆ, ಇತರೆ ಸ್ಮಾರಕರಗಳ ಸ್ಥಾಪನೆಗೆ ಕಾರಣವಾಯಿತು. ಈ ಕಾರಣಗಳಿಂದಲೇ ಮನುಷ್ಯನು ಇತರೆ ಪ್ರಾಣಿ ವರ್ಗಗಳಿಂತ ಶ್ರೇಷ್ಠನೆಂದು ಪರಿಗಣಿಸಲಾಗುತ್ತದೆ. ಮನುಷ್ಯನು ಉಳಿದ ಪ್ರಾಣಿಗಳಿಂತ ಬುದ್ಧಿವಂತ ಎಂದು ಭಾವಿಸಿಕೊಂಡಿರುವ ಧರ್ಮವು ಅವನ ಸಹಾಯಕ್ಕೆ ಬಂದಿರಬಹುದು. ಈ ಅಂಶವು ವಿವಿಧ ಪ್ರಾಕ್ತನ ಸಂಶೋಧನ ಅಧ್ಯಯನಗಳಿಂದ ಸ್ಪಷ್ಟವಾಗಿದೆ.

ಮನುಷ್ಯನು ನಿಸರ್ಗದ ಭಾಗವಾಗಿ ವಲಸೆ ಜೀವಿಯಾಗಿದ್ದನು. ಇದರ ಜೊತೆಗೆ ಪ್ರಕೃತಿಯಲ್ಲಿ ಸಂಭವಿಸುತ್ತಿದ್ದ ಮಳೆ, ಗುಡುಗು, ಸಿಡಲು, ಹುಟ್ಟು, ಸಾವುಗಳು ಅವನಲ್ಲಿ ಭಯವನ್ನು ಹುಟ್ಟಿಸಿದವು. ಅಲ್ಲದೆ ಈ ಭಯದಿಂದ ಪ್ರಕೃತಿಯನ್ನು ಆರಾಧಿಸಲು ಪ್ರಾರಂಭಿಸಿದನು.[೧] ಅಲ್ಲದೆ ಮಾನವನು ತನ್ನ ಬದುಕಿನ ವಿವಿಧ ಆಯಾಮಗಳಲ್ಲಿ ಪ್ರಕೃತಿಯಲ್ಲಿನ ಅಗೋಚರ ಶಕ್ತಿಗೆ ದೇವರ ಸ್ವರೂಪ ಕೊಟ್ಟು ಅದು ಜೀವನದ ಅವಿಭಾಜ್ಯ ಅಂಗವೆಂದು ಒಪ್ಪಿಕೊಂಡನು. ಪ್ರಾರಂಭದಲ್ಲಿ ಮಾನವನು ತನ್ನ ವಾಸಸ್ಥಳವಾದ ಗುಹೆಗಳಲ್ಲಿ ಚಿತ್ರಗಳನ್ನು ಬಿಡಿಸಿ ಅವುಗಳನ್ನು ಆರಾಧಿಸತೊಡಗಿದ. ನಂತರ ಚಿತ್ರಗಳ ಬದಲಿಗೆ ಪ್ರತ್ಯೇಕವಾಗಿ ಪ್ರತಿಮೆಯನ್ನು ಮಾಡಿಕೊಂಡು ಪೂಜಿಸತೊಡಗಿದನು. ಅಲ್ಲದೆ ಅದರ ಸುತ್ತಲೂ ರಕ್ಷಣೆಗಾಗಿ

ಕಟ್ಟಿಕೊಂಡ ಕಟ್ಟಡವೇ ದೇವಾಲಯ ವಾಸ್ತು. ಇದು ನಾಗರಿಕ ಜೀವನದಲ್ಲಿ ಬಹುದೊಡ್ಡ ಹೆಜ್ಜೆಯನ್ನು ಮಾನವನು ಇಟ್ಟಂತಾಯಿತು. ಕ್ರಮೇಣ ಅವನ ಅನುಭವ ಬೆಳೆದಂತೆ, ಸನ್ನಿವೇಶಗಳು ಬದಲಾದಂತೆ ಕಟ್ಟಡ ನಿರ್ಮಾಣದಲ್ಲಿ ಮಹತ್ತರವಾದ ಬದಲಾವಣೆಗಳಾದವು. ಈ ಕಟ್ಟಡಗಳು ಉಪಯುಕ್ತತೆಯ ಜೊತೆಗೆ ಸೌಂದರ್ಯದೃಷ್ಟಿಯು ಬೆಳೆಯತೊಡಗಿತು. ದೇವಾಲಯಗಳು ಆಯಾ ಕಾಲದ ಮತ್ತು ಆಯಾ ಜನಾಂಗದ ಆಂತರಿಕ ಆಕಾಂಕ್ಷೆ, ಅನುಭವಗಳಿಗೆ ಹಿಡಿದ ಕನ್ನಡಿಯಾಗಿದೆ. ಹೀಗೆ ರಚನೆಯಾದ ದೇವಾಲಯಗಳು ಕಾಲಾಂತರದಲ್ಲಿ ಪೂಜಾ ಕೇಂದ್ರಗಳಾಗಿ ಮಾತ್ರ ಉಳಿಯದೆ, ಅನೇಕ ಚಟುವಟಿಕೆಗಳ ತಾಣವಾಗಿ ಮಾರ್ಪಟ್ಟಿವೆ. ಈ ಹಿನ್ನೆಲೆಯಿಂದಲೇ ಡಾ. ಚಿದಾನಂದಮೂರ್ತಿಯವರು ದೇವಾಲಯಗಳು 'ಒಂದು ಸಾಮಾಜಿಕ ಸಂಸ್ಥೆ' ಎಂದಿದ್ದಾರೆ.

ಯಾವುದೇ ಒಂದು ಚರಿತ್ರೆಯ ಅಧ್ಯಯನಕ್ಕೆ ಆಧಾರಗಳು ಬಹುಮುಖ್ಯ. ಅಂತಹ ಆಧಾರಗಳಲ್ಲಿ ದೇವಾಲಯಗಳು ಒಂದು. ಲಿಖಿತ ಆಧಾರಗಳಿಂದ ದೊರಕದೇ ಹೋದ ಅನೇಕ ಸಂಗತಿಗಳನ್ನು ದೇವಾಲಯಗಳಿಂದ ಮಾಹಿತಿಯನ್ನು ಸಂಗ್ರಹಿಸಬಹುದು. ಇವುಗಳಿಂದ ಅಂದಿನ ಬದುಕಿನ ನಡೆ, ನುಡಿ, ವೇಷಭೂಷಣ, ಆರಾಧನಾ ಪದ್ಧತಿ, ಆಚರಣೆ, ಅಭಿರುಚಿ, ಕಲಾ ನೈಪುಣ್ಯತೆಯನ್ನು ತಿಳಿಯಲು ಉಪಯುಕ್ತವಾಗಿದೆ.

ನಮ್ಮ ದೇಶವು ದೇವಾಲಯಗಳಿಗೆ ಪ್ರಸಿದ್ಧಿಯನ್ನು ಪಡೆದಿದೆ. ನಮ್ಮ ನಾಗರಿಕತೆ, ಸಂಸ್ಕೃತಿ ಎಲ್ಲವೂ ಈ ದೇವಾಲಯಗಳಿಗೆ ಸಂಬಂಧಿಸಿವೆ. ಇವುಗಳಿಂದ ನಮ್ಮಲ್ಲಿ ಐಕ್ಯತೆಯ ಭಾವನೆ ಮೂಡಿದೆ. ಹಾಗೆಯೇ ಇವುಗಳಿಂದ ಮತ ದ್ವೇಷಗಳ ಜಗಳವನ್ನು ಮಾಡುತ್ತಿದ್ದೇವೆ. ದೇವಾಲಯಗಳಲ್ಲಿ ಇದ್ದ ಧನಕ್ಕೆ ಆಶೆಪಟ್ಟು ಎಷ್ಟೋ ಮಂದಿ ವಿದೇಶಿಯರು ನಮ್ಮ ಮೇಲೆ ದಂಡೆತ್ತಿ ಬಂದಿದ್ದ ಬಗ್ಗೆ ಇತಿಹಾಸದಿಂದ ತಿಳಿದುಕೊಳ್ಳಬಹುದಾಗಿದೆ. ಸಾವಿರಾರು ಕುಟುಂಬಗಳ ಆಶ್ರಯ ತಾಣಗಳಾಗಿವೆ. ನಮ್ಮಲ್ಲಿರುವ ಶಿಲ್ಪ, ಚಿತ್ರ, ನೃತ್ಯ, ಸಂಗೀತ ಎಲ್ಲಕ್ಕೂ ಈ ದೇವಾಲಯಗಳೇ ನೆಲೆಗಳಾಗಿದ್ದವು. ಇಂತಹ ಭವ್ಯ ಇತಿಹಾಸವನ್ನು ದೇವಾಲಯಗಳು ಹೊಂದಿರುವುದು ವಿಶೇಷ.

ಹಳ್ಳಿಗಳ ದೇಶವಾದ ಭಾರತದ ಪ್ರತಿಯೊಂದು ಹಳ್ಳಿಗಳಲ್ಲೂ ದೇವಾಲಯಗಳು ಇರುವುದು ಸರ್ವೇಸಾಮಾನ್ಯ. ದೇವಾಲಯಗಳಿಲ್ಲದ ಹಳ್ಳಿ, ನಗರಗಳನ್ನು ಊಹಿಸಿಕೊಳ್ಳಲು ಸಾಧ್ಯವಿಲ್ಲ. ಹೀಗೆ ದೇವಾಲಯಗಳು ಬೆಟ್ಟಗಳಲ್ಲಿ, ನದಿದಡ, ಗ್ರಾಮದ ಮಧ್ಯದಲ್ಲಿ, ಗ್ರಾಮದ ಹೊರಗೆ, ಒಟ್ಟಿನಲ್ಲಿ ಒಂದಲ್ಲಾ ಒಂದು ಸ್ಥಳದಲ್ಲಿ ದೇವಾಲಯಗಳ ರಚನೆಯನ್ನು ಕಾಣಬಹುದು. ಅವು ಕುಲದೇವರ, ಗ್ರಾಮದೇವತೆಯ, ಇಷ್ಟ ದೇವತೆಯ ಗುಡಿಯಾಗಿರಬಹುದಾಗಿದೆ. ಒಟ್ಟಿನಲ್ಲಿ ಅವು ಆರಾಧನೆಯ ಹಿನ್ನೆಲೆಯ ಉದ್ದೇಶವನ್ನು ಹೊಂದಿರುವುದು ಗಮನಾರ್ಹ.

ದೇವಾಲಯ ರಚನೆಯಲ್ಲಿ ರಾಜರ, ಅಧಿಕಾರಿಗಳ, ಸಾಮಂತ, ಅರಸರ ಸಹಾಯ, ಪ್ರೋತ್ಸಾಹವು ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಇವರಲ್ಲದೆ ಸ್ಥಳೀಯ ಜನರ ಸಹಾಯದೊಂದಿಗೆ ದೇವಾಲಯಗಳು ಬೆಳೆದುಬಂದವು ಎಂಬುದು ಸ್ಪಷ್ಟ. ಹೀಗೆಯೇ ದೇವಾಲಯಗಳು ಜನರ ಜೀವನದೊಂದಿಗೆ ಅವಿನಾಭಾವ ಸಂಬಂಧದ ಜೊತೆಗೆ ಬೆಳೆದು ಬರುತ್ತಿರುವುದನ್ನು ಗಮನಿಸಬಹುದು. ಆದರೆ ಈ ದೇವಾಲಯಗಳ ಹುಟ್ಟು, ಬೆಳವಣಿಗೆ ಹೇಗೆ ಆಯಿತು ಎಂಬ ವಿಷಯದಲ್ಲಿ ಸ್ಪಷ್ಟವಾದ ನಿಲುವಿಗೆ ಇನ್ನುವರೆಗೂ ಬರುವುದಾಗಿಲ್ಲ. ಮೂರ್ತಿಪೂಜೆ ಆರಂಭ ಮತ್ತು ಬೆಳವಣಿಗೆಗಳ ವಿಷಯವಾಗಿ ಇನ್ನೂ ಕೆಲಸ ನಡೆಯಬೇಕಾಗಿದೆ.

ದೇವಸ್ಥಾನಗಳನ್ನು ಸ್ಥಾಪಿಸುವ ಸಂಪ್ರದಾಯವು ಅಶೋಕನಿಗಿಂತ ಈಚಿನದೆಂದು ಕಾಣುತ್ತದೆ. ಬಹು ಜನರು ನೆರೆಯುತ್ತಿದ್ದ ಯಜ್ಞಗಳ ಸ್ಥಳಗಳಲ್ಲಿ ಕಾಣಿಸಿಕೊಂಡಿರಬಹುದು. ಬೌದ್ಧರ ಭವ್ಯ ದೇವಾಲಯಗಳನ್ನು, ವಿಹಾರಗಳನ್ನು ನೋಡಿದ ಹಿಂದೂಗಳ ಮನಸ್ಸಿನಲ್ಲಿ ಅಂತ ಸಾರ್ವಜನಿಕ ಆರಾಧನಾ ಕೇಂದ್ರಗಳನ್ನು ಸ್ಥಾಪಿಸಬೇಕೆಂಬ ಇಚ್ಛೆ ಉದಯಿಸಿದ್ದರೂ ಇರಬಹುದು. ಕ್ರಿಸ್ತಶಕಕ್ಕೆ ಮುನ್ನ ದೇವಾಲಯಗಳು ರಚನೆಗೊಂಡವು ಎಂದು ಹೇಳಲು ಸಾಧ್ಯವಿದ್ದರೂ ಅವುಗಳ ಸ್ವರೂಪ ವ್ಯಕ್ತವಾಗುವುದಿಲ್ಲ. ಹರಪ್ಪ-ಮೊಹೆಂಜೋದಾರೋ ಉತ್ಖನನಗಳಲ್ಲಿ ಸಾರ್ವಜನಿಕ ಕಟ್ಟಡಗಳನ್ನು ಗುರುತಿಸಬಹುದೇ ಹೊರತು ದೇವಾಲಯಗಳೆನ್ನಬಹುದಾದ ರಚನೆಗಳು ಕಾಣಸಿಗುವುದಿಲ್ಲ ಎಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.[೨]

ದೇವಾಲಯಗಳ ಸಂಸ್ಕೃತಿಯ ತವರು ಎಂಬ ಹೆಗ್ಗಳಿಕೆ ಪಡೆದಿರುವ ಕರ್ನಾಟಕದಲ್ಲಿ ಕ್ರಿಸ್ತಶಕದ ಆರಂಭದಲ್ಲಿ ಕಟ್ಟಿದ ದೇವಾಲಯಗಳು ಉಳಿದಿಲ್ಲವಾದರೂ ಕ್ರಿ.ಶ. ೧೫೦ ರ ಕದಂಬರ ಪ್ರಾಕೃತ ಶಾಸನವು ದೇವಾಲಯಗಳು ರಚನೆಗೊಂಡದ್ದನ್ನೂ ದೃಢಪಡಿಸುತ್ತವೆ. ಕರ್ನಾಟಕದ ಪ್ರಾಚೀನ ದೇವಾಲಯವೆನಿಸಿದ ಕ್ರಿ.ಶ. ೪೫೦ರ ತಾಳಗುಂದ ದೇವಾಲಯ[೩] ಇದು ತನ್ನ ಮೂಲರೂಪವನ್ನು ಕಳೆದುಕೊಂಡಿರುವುದರಿಂದ ದೇವಾಲಯವಿತ್ತೆಂಬ ದಾಖಲೆಯಾಗಿ ಮಾತ್ರ ಗುರುತಿಸಲ್ಪಡುತ್ತದೆ.

ದೇವಸ್ಥಾನಗಳು ಜನರ ಭಕ್ತಿ ಮತ್ತು ನಿಷ್ಠೆಗಳ ಪ್ರತೀಕ. ಪ್ರಾಚೀನ ಕಾಲದಿಂದ ಈಗಿನವರೆಗೆ ದೇವಾಲಯಗಳಿಗೆ ದಾನ ನೀಡಿರುವುದನ್ನು ಗಮನಿಸಿದರೆ, ಆ ಕಾಲದಲ್ಲಿನ ಆದರ್ಶ, ಮಾನವೀಯತೆಯನ್ನು ಪ್ರತಿಬಿಂಬಿಸುತ್ತವೆ. ನ್ಯಾಯವಾದ ರೀತಿಯಲ್ಲಿ ಸಂಪಾದನೆ ಮಾಡಿ. ಆ ಸಂಪಾದನೆಯ ಧನವನ್ನು ದಾನ ಮಾಡಬೇಕು ಅಥವಾ ದೇವಾಲಯಗಳನ್ನು ನಿರ್ಮಿಸಿದರೆ ಪಾಪ ಪರಿಹಾರ, ಮೋಕ್ಷ ಸಿದ್ಧಿಯಾಗುತ್ತವೆ ಎಂಬ ನಂಬಿಕೆ ಭಾರತೀಯರಲ್ಲಿದೆ.

ಈ ಕಾರಣದಿಂದಲೇ ಪ್ರಾಚೀನ ಸಮಾಜದಲ್ಲಿ ಉಳ್ಳವರು ದೇವಾಲಯ ರಚನೆ, ದೇವತಾಮೂರ್ತಿಗಳ ರಚನೆ, ಜನೋಪಯೋಗಿ ಕಟ್ಟಡಗಳು, ಬಾವಿ, ಪುಷ್ಕರಣಿ ಮುಂತಾದ ಸತ್ಕಾರ್ಯಗಳನ್ನು ಮಾಡುತ್ತಿದ್ದರು. ಹೀಗೆ ರಚನೆಗೊಂಡಿರಬಹುದಾದ ಸ್ಮಾರಕಗಳು ನಮ್ಮ ದೇಶದ ಸಾಂಸ್ಕೃತಿಕ ಅಭಿವೃದ್ಧಿಗಾಗಿ ನೀಡಿರುವ ಪ್ರೋತ್ಸಾಹವನ್ನು, ರೂವಾರಿಗಳ ಕೈಚಳಕ ಮತ್ತು ಕಲಾನೈಪುಣ್ಯತೆಯ ಮಹಿಮೆಯನ್ನು ಇಂದಿನ ಹಾಗೂ ಮುಂದಿನ ಜನತೆಗೆ ಸಾರಿ ಹೇಳುವ ಜೀವಂತ ಸಾಕ್ಷಿಯಾಗಿವೆ. ಕರ್ನಾಟಕ ಕಲಾ ಸಿರಿಯ ಅನೇಕ ಶಿಲ್ಪ ಪದ್ಧತಿಗಳನ್ನು ಹಾಗೂ ಅನೇಕ ಬಗೆಯ ಶೈಲಿಯನ್ನು ತನ್ನಲ್ಲಿ ಹುದುಗಿಸಿಕೊಂಡಿದೆ.

ಅರ್ಕಿಟೆಕ್ಚರ್ ಅಥವಾ ವಾಸ್ತುಕೃತಿ ಎಂಬ ಪದ ಪ್ರಯೋಗ ಪರಿಮಿತಿ ಅರ್ಥದಲ್ಲಿ, ಗಾತ್ರದ ದೃಷ್ಟಿಯಿಂದ ಸಣ್ಣದೂ ಇರಬಹುದು ಅಥವಾ ದೊಡ್ಡದಾಗಿಯೂ ಇರಬಹುದಾಗಿದೆ. ಆದರೂ ಕಲ್ಲಿನಿಂದ ಅಥವಾ ಮರಗಳಿಂದ ನಿರ್ಮಿತವಾಗಿರಬಹುದು. ಒಟ್ಟಾರೆ ಇದು ವಾಸ್ತುಕೃತಿ ಎನ್ನಬಹುದಾಗಿದೆ.[೪] ಈ ವಾಸ್ತುಕೃತಿಯು ಚೌಕು, ಆಯತ ಅಥವಾ ವೃತ್ತಾಕಾರವಾಗಿಯೂ ಇರಬಹುದು. ಇವುಗಳ ಜೊತೆಗೆ ಕಟ್ಟಡಗಳು ಸುಂದರವಾಗಿರಬೇಕೆಂಬ ಜ್ಞಾನವು ಬೆಳೆಯತೊಡಗಿತು. ಆರಂಭದಲ್ಲಿ ಮಾನವನು ನೈಸರ್ಗಿಕವಾದ ಗುಹೆಗಳಲ್ಲಿ ತನ್ನ ರಕ್ಷಣೆಗಾಗಿ ವಾಸ ಮಾಡತೊಡಗಿದನು. ಈ ಕಾರಣಕ್ಕಾಗಿ ಗುಹೆಗಳು ಅವನಿಗೆ ಆರಾಧನಾ ಕೇಂದ್ರಗಳಾದವು. ಹೀಗೆ ಗುಹೆಗಳು, ದೇವಾಲಯಗಳು ಅಸ್ತಿತ್ವಕ್ಕೆ ಕಾರಣವಾಗಿರಬಹುದು. ಅಲ್ಲದೆ ಗುಹೆ ಇಲ್ಲದ ಕಡೆ ಜನರೇ ಗುಹೆಗಳನ್ನು ನಿರ್ಮಿಸಬೇಕಾಗುತ್ತಿತ್ತು. ಬಂಡೆಗಳನ್ನು ಕಡೆದು, ಕೊರೆದು ಸಿದ್ಧ ಮಾಡಿದ ಗುಹೆಗಳೊಂದಿಗೆ ಬಿದುರು, ಮರ, ಮಣ್ಣುಗಳಿಂದ ಗುಹೆಯಾಕಾರದಲ್ಲಿ ಮಂದಿರಗಳನ್ನು ಮಾಡುತ್ತಿದ್ದರು ಎನ್ನಬಹುದು.[೫]

ಮಾನವ ಜೀವನ ಪ್ರಜ್ಞೆ, ಅವನ ಅಭಿರುಚಿ, ಬುದ್ಧಿವಂತಿಕೆಯು ಬೆಳೆದಂತೆ ದೇವಾಲಯಗಳ ಬೆಳವಣಿಗೆ ಪೂರ್ಣ ರೂಪ ಪಡೆಯಲು ಸಾಧ್ಯವಾಗಿದೆ. ಆದ್ದರಿಂದ ಮನುಷ್ಯನ ಜೀವನದಲ್ಲಿ ಪ್ರಮುಖ ಪಾತ್ರವಹಿಸುವ ದೇವಾಲಯ, ಪೂಜಾ ಮಂದಿರಗಳು ಬೆಳೆಯುವುದರೊಂದಿಗೆ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ದೇವಾಲಯಗಳು ವಿದ್ಯಾಕೇಂದ್ರಗಳಾಗಿ, ಸಮಾಜ ಕಲ್ಯಾಣಗಳನ್ನು ಮಾಡುವ ಕೇಂದ್ರಗಳಾಗಿರುವುದು ಗಮನಾರ್ಹ. ಇದರ ಜೊತೆಗೆ ಅನೇಕ ಉದ್ದೇಶಗಳನ್ನು ಇಟ್ಟುಕೊಂಡು ಸಾಗಿವೆ. ಅಲ್ಲದೆ ಎಲ್ಲಾ ವರ್ಗಗಳ, ವ್ಯಕ್ತಿಗಳ ಮನ್ನಣೆ ಪಡೆದು ಜನರ ಜೀವನದಲ್ಲಿ ಹಾಸುಹೊಕ್ಕಾಗಿವೆ ಎಂದರೆ ತಪ್ಪಾಗಲಾರದು. ಬಾದಾಮಿ ತಾಲೂಕಿನಲ್ಲಿ ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ವಿಜಯನಗರದ ಅರಸರು ಗುಡಿಗಳನ್ನು ನಿರ್ಮಿಸಿ, ದಾನದತ್ತಿಗಳನ್ನು ನೀಡಿದ ಬಗ್ಗೆ ಶಾಸನಗಳು ಉಲ್ಲೇಖಿಸುತ್ತವೆ.

ಪ್ರಸ್ತುತ ಈ ಅಧ್ಯಯನ ಬಾದಾಮಿ ಬನಶಂಕರಿ ಕ್ಷೇತ್ರ ಹಾಗೂ ಚೊಳಚಗುಡ್ಡ ಗ್ರಾಮಕ್ಕೆ ಒಳಪಟ್ಟಿರುವ ದೇವಾಲಯಗಳ ವಾಸ್ತುವನ್ನು ದಾಖಲಿಸಲಾಗಿದೆ. ಚೊಳಚಗುಡ್ಡ ಗ್ರಾಮದಲ್ಲಿ ಶೈವ, ವೈಷ್ಣವ, ಶಾಕ್ತ ಹಾಗೂ ಗ್ರಾಮ ದೇವತೆಗಳ ದೇವಾಲಯಗಳಿವೆ. ಅವುಗಳಲ್ಲಿ ಮುಖ್ಯವಾಗಿ ಕಲ್ಮೇಶ್ವರ, ಮಾರುತೇಶ್ವರ, ಬನಶಂಕರಿ, ಭದ್ರಕಾಳಿ, ಈರಣ್ಣ, ಲಕ್ಷ್ಮೀ, ದ್ಯಾಮವ್ವ, ಬಯಲು ಬಸವಣ್ಣ ಮೊದಲಾದ ದೇವಾಲಯಗಳನ್ನು ಕಾಣಬಹುದು. ಇವುಗಳಲ್ಲಿ ಕಲ್ಮೇಶ್ವರ ದೇವಾಲಯವು ಪ್ರಾಚೀನ ದೇವಾಲಯವಾಗಿದೆ. ಇನ್ನುಳಿದ ದೇವಾಲಯಗಳೆಲ್ಲವೂ ಆಧುನಿಕ ರಚನೆಗಳಾಗಿವೆ.

ಗ್ರಾಮದಲ್ಲಿ ಹಿಂದೂ ದೇವಾಲಯಗಳಿರುವಂತೆ ಇಸ್ಲಾಂ ಧರ್ಮದ ಪ್ರಾಚೀನ ಜಾಮಿಯಾ ಮಸೀದಿಯನ್ನು ಕಾಣಬಹುದು. ಈ ಮಸೀದಿಯಲ್ಲಿ ಮರಾಠಿ ಮತ್ತು ಉರ್ದು ಬಾಷೆಯ ಶಾಸನಗಳಿವೆ. ಶಾಸನಗಳಲ್ಲಿ ಉಲ್ಲೇಖವಾಗಿರುವಂತೆ ಮಸೀದಿಯನ್ನು ಕ್ರಿ.ಶ. ೧೯೦೫ರಲ್ಲಿ ಹಾಷಮ್ ಪೀರ ಬಿಜಾಪುರ ಇವರು ಶಂಕುಸ್ಥಾಪನೆ ಮಾಡಿದ್ದಾರೆ. ಇವರು ಇಸ್ಲಾಂ ಧರ್ಮದ ಖಾಜಿಗಳಾಗಿದ್ದರು. ಈ ಮಸೀದಿಯನ್ನು ಹಾಗೂ ಇದರ ಬಲಭಾಗದಲ್ಲಿರುವ ಬಾವಿಯನ್ನು ಕ್ರಿ.ಶ. ೧೯೦೫ರಲ್ಲಿ ಕಟ್ಟಲು ಆರಂಭಿಸಿ ಕ್ರಿ.ಶ. ೧೯೦೮ರಲ್ಲಿ ಪೂರ್ಣಗೊಳಿಸಿದ್ದಾರೆ. ಜಾಮಿಯಾ ಮಸೀದಿಯನ್ನು ಹಾಷಮ್ ಪೀರ ಅವರ ಶಿಷ್ಯರಾದ ಸಿದ್ಧಿ ಹುಸೇನ ಸಿದ್ಧಿ ಮೂಹಿಯುದ್ದೀನ ಪಟೇಲ್ ಅವರು ಸ್ವಂತಃ ಖರ್ಚಿನಿಂದ ಕಟ್ಟಿಸಿದ್ದಾರೆ. ಇವರು ಚೊಳಚಗುಡ್ಡ ಗ್ರಾಮದಲ್ಲಿ ಮುಸ್ಲಿಂ ಸಮುದಾಯದ ಮುಖಂಡರಾಗಿದ್ದರು. ಇವರು ಅಲ್ಹಾನ ಕೃಪೆಗೆ ಪಾತ್ರರಾಗಲು ಮಸೀದಿಯನ್ನು ಕಟ್ಟಿಸಿದ್ದಾರೆ. ಅಲ್ಲದೆ ಶಾಸನ ಉಲ್ಲೇಖವಾಗಿರುವಂತೆ ಈ ಊರಿನ ಮುಸಲ್ಮಾನ ಬಂಧುಗಳು, ಹಿರಿಯರು ಕಿರಿಯರು ಐದು ಹೊತ್ತಿನ ಪ್ರಾರ್ಥನೆ ಕಡ್ಡಾಯವಾಗಿ ಮಾಡಬೇಕೆಂದಿದೆ. ಹಾಗೂ ಬೇರೆ ಗ್ರಾಮದ ಮುಸಲ್ಮಾನ ಬಂಧುಗಳು ಇಲ್ಲಿಗೆ ಬಂದು ಐದು ಹೊತ್ತಿನ ಸಾಮೂಹಿಕ ಪ್ರಾರ್ಥನೆ ಮಾಡುವುದರಿಂದ ತಮ್ಮ ಪಾಪ ಪರಿಹಾರವಾಗುತ್ತವೆ ಎಂದು ಶಾಸನ ಉಲ್ಲೇಖಿಸುತ್ತದೆ. ಶಾಸನ ಮುಂದುವರೆದು ಮಸೀದಿಯ ಸ್ವಚ್ಛತಾ ಕಾರ್ಯದಲ್ಲಿ ತಪ್ಪು, ಆಲಸ್ಯತನ ಮಾಡಿದರೆ ಮುಂಬರುವ ಪ್ರಳಯದಲ್ಲಿ ಅಲ್ಹಾನ ಮತ್ತು ಅವನ ಪ್ರತಿನಿಧಿ ಮಹಮ್ಮದ ಪೈಗಂಬರನ ಪಾಪಗಾರರಾಗುವಿರಿ ಎಂದು ತಿಳಿಸಿದೆ. ಹಾಗೂ ಮಸೀದಿಯ ಪಕ್ಕದಲ್ಲಿರುವ ಬಾವಿಯನ್ನು ಪಾರ್ಥನೆಗಾಗಿ ಬರುವ ಜನರ ಸಲುವಾಗಿ ಕಟ್ಟಿಸಲಾಗಿದೆ ಎಂಬ ಉಲ್ಲೇಖವಿರುವುದನ್ನು ಕಾಣಬಹುದು.

ಗ್ರಾಮದಲ್ಲಿ ಹಿಂದೂ ದೇವಾಲಯಗಳಂತೆ ಈ ಮಸೀದಿಯು ಅತ್ಯಂತ ಆಕರ್ಷಕ ಸ್ಮಾರಕವಾಗಿದೆ. ಎತ್ತರದ ಕೋಟೆ ಗೋಡೆಯಂತೆ ಕಾಣಸಿಗುವ ಕಮಾನಿನ ದ್ವಾರದಿಂದ ಮಸೀದಿಯ ಪ್ರಾಂಗಣವನ್ನು ಪ್ರವೇಶಿಸಬಹುದು. ಈ ದ್ವಾರದ ಮೇಲೆ ಎರಡು ಕಿರಿದಾದ ಮಿನಾರ್‌ಗಳಿವೆ. ಮಸೀದಿಯ ಒಳಭಾಗದಲ್ಲಿ ವಿಶಾಲವಾದ ಪ್ರಾರ್ಥನಾ ಸಭಾಂಗಣವಿದೆ.

ಮಸೀದಿಯ ಭಿತ್ತಿಯ ಭಾಗವು ಸರಳವಾಗಿದ್ದು, ಪ್ರವೇಶ ದ್ವಾರದ ಮುಂಭಾಗದಲ್ಲಿ ವಿಶಾಲವಾದ ಆವರಣವಿದೆ. ಮಸೀದಿಯನ್ನು ಪ್ರವೇಶಿಸಲಿಕ್ಕೆ ಮೆಟ್ಟಲುಗಳ ವ್ಯವಸ್ಥೆಯನ್ನು ಮಾಡಿದ್ದಾರೆ.

ಬನಶಂಕರಿ ಕ್ಷೇತ್ರವು ನಮ್ಮ ನಾಡಿನ ಪ್ರಸಿದ್ಧ ಶಕ್ತಿ ಕ್ಷೇತ್ರಗಳಲ್ಲಿ ಒಂದಾಗಿರುವುದು ವಿಶೇಷ. ಬನಶಂಕರಿಯ ಗುಡಿಯನ್ನು ಬಾದಾಮಿ ಚಾಲುಕ್ಯರು ನಿರ್ಮಿಸಿದ್ದಾರೆ ಎನ್ನುವ ಪ್ರತೀತಿ ಇದೆ. ಆದರೆ ಇದಕ್ಕೆ ಯಾವುದೇ ಶಾಸನ, ಸಾಹಿತ್ಯ ಆಧಾರವಾಗಲಿ ಇದುವರೆಗೂ ಲಭ್ಯವಾಗಿಲ್ಲ. ಈಗ ಪೂಜೆಗೊಳ್ಳುತ್ತಿರುವ ಬನಶಂಕರಿ ಗುಡಿಯ ಉತ್ತರ ಭಾಗದಲ್ಲಿ ಪ್ರಾಕಾರದ ಹೊರಗೆ ಸಂಪೂರ್ಣ ಅಧಿಷ್ಠಾನ ಭಾಗವು ನೆಲದಲ್ಲಿ ಹುದಿಗಿರುವ ಪಾಳು ಗುಡಿಯಿದೆ. ಪ್ರಸ್ತುತ ಈ ಗುಡಿಯಲ್ಲಿ ಬನಶಂಕರಿಯ ಮೂರ್ತಿ ಬದಲಿಗೆ ಶಿವಲಿಂಗವನ್ನು ಇಟ್ಟಿರುವುದನ್ನು ಗಮನಿಸಬಹುದು. ಜನಪದರು ಇದೇ ಮೂಲ ಬನಶಂಕರಿ ಗುಡಿ ಎಂದು ನಂಬಿರುವರು. ಗುಡಿಯ ವಾಸ್ತು ಲಕ್ಷಣಗಳನ್ನು ಆಧರಿಸಿ ರಾಷ್ಟ್ರಕೂಟರ ಕಾಲದ ದೇವಾಲಯವೆಂದು ಗುರುತಿಸಬಹುದು.

ಮೂಲ ಗುಡಿಯ ಶಿಖರದ ಭಾಗಗಳಲ್ಲಿ ಗಾರೆಯ ಅವಶೇಷಗಳು ದೊರೆತಿರುವುದರಿಂದ ಇದು ವಿಜಯನಗರ ಅರಸರ ಕಾಲದಲ್ಲಿ ಜೀರ್ಣೋದ್ಧಾರಗೊಂಡಿರಬಹುದು. ಕ್ರಿ.ಶ. ೧೫೩೨ರ ಅಚ್ಚುತರಾಯನ ಕಾಲದ ಶಾಸನದಲ್ಲಿ ಗುಡಿಯನ್ನು ಪುನಶ್ಚೇತನಗೊಳಿಸುವುದನ್ನು ದಾಖಲಿಸಲಾಗಿದೆ. ಹಾಗೆಯೇ ಕ್ರಿ.ಶ. ೧೫೪೪ರ ಸದಾಶಿವರಾಯನ ಕಾಲದಲ್ಲಿ ಬನದ ಮಹಾಮಾಯಿಗೆ ಡಾಣಕ ಶಿರೂರನ್ನು ದಾನವಾಗಿ ನೀಡಿರುವುದು ಗಮನಿಸಬಹುದು. ಇದರಿಂದ ವಿಜಯನಗರ ಅರಸರ ಆಡಳಿತ ಅವಧಿಯಲ್ಲಿ ಬನದೇವಿಯು ಗ್ರಾಮದೇವಿಗೆ ಆರಾಧಿತಳಾಗಿದ್ದಳು ಎಂಬುವುದು ಸ್ಪಷ್ಟವಾಗುತ್ತದೆ. ಹಾಗೆಯೇ ಕಲ್ಯಾಣ ಚಾಲುಕ್ಯರ ಕಾಲದಲ್ಲಿಯೂ ಬನದದೇವಿಯು ಗ್ರಾಮದೇವಿಯಾಗಿ ಪೂಜಿಸಲ್ಪಡುತ್ತಿದ್ದಳು. ಇದಕ್ಕೆ ಆಧಾರವಾಗಿ ಗುಡಿಯ ಎಡಬದಿಗೆ ಇರುವ ಕೇದಾರೇಶ್ವರ ಗುಡಿಯ ಗೋಡೆಗೆ ಸೇರಿಸಿರುವ ಕಂಬದ ಮೇಲೆ ಕ್ರಿ.ಶ. ೧೦೧೯ರ ಕಲ್ಯಾಣದ ಚಾಲುಕ್ಯರ ಜಗದೇಕಮಲ್ಲನ ಕಾಲದ ಶಾಸನದಲ್ಲಿ ಬನದ ದೇವಿಯು ಓಜ (ವಿಶ್ವಬ್ರಾಹ್ಮಣ) ರಿಂದ ಪೂಜಿತಳಾದಳು ಎಂದು ಉಲ್ಲೇಖಿಸುತ್ತದೆ. ಹಾಗೂ ಜಗದೇಕಮಲ್ಲನ ಕಾಲಕ್ಕೆ ಸೇರಿದ ಕ್ರಿ.ಶ. ೧೦೨೪ರ ಮತ್ತೊಂದು ಶಾಸನದಲ್ಲಿ ಜಗದೇಕಮಲ್ಲನ ಸಾಮಂತನಾದ ಪೆರ್ಗ್ಗಡೆ ಕೇತಿಮಯ್ಯ ಎಂಬುವವನು ಶಿಲಾಸ್ತಂಭವನ್ನು ದೇವಿಯ ಗುಡಿಯ ಮುಂದೆ ನಿಲ್ಲಿಸಿದ ಬಗ್ಗೆ ಉಲ್ಲೇಖವಿದೆ.

ಹೀಗೆ ಬನಶಂಕರಿ ದೇವಿಯ ಗುಡಿಯ ಜೀರ್ಣೋದ್ಧಾರ ಮಾಡಿರುವ ಕುರಿತು, ದಾನದತ್ತಿಗಳನ್ನು ನೀಡಿರುವ ಬಗ್ಗೆ ಶಾಸನಗಳ ಮಾಹಿತಿ ಒದಗಿಸುತ್ತವೆ. ಆದರೆ ಬಾದಾಮಿ ಚಾಲುಕ್ಯರ ಆಳ್ವಿಕೆಗೆ ಈ ಪ್ರದೇಶವು ಬಹು ವರ್ಷಗಳ ಕಾಲ ಒಳಪಟ್ಟಿದ್ದರೂ ಆ ಕಾಲಕ್ಕೆ

ಸೇರಿದ ಬನಶಂಕರಿ ದೇವಿಗೆ ಸಂಬಂಧಪಟ್ಟ ಯಾವ ಆಧಾರಗಳು ಲಭ್ಯವಾಗಿಲ್ಲ. ಬನಶಂಕರಿ ಕ್ಷೇತ್ರದಲ್ಲಿರುವ ದೇವಾಲಯಗಳು ಶಾಕ್ತಪಂಥ, ಶೈವಪಂಥ ಹಾಗೂ ವೈಷ್ಣವ ಪರಂಪರೆಗಳಿಗೆ ಸಂಬಂಧಿಸಿದವುಗಳಾಗಿವೆ. ಇವುಗಳ ಪ್ರಸ್ತಾವನೆಯನ್ನು ಇಲ್ಲಿ ಮಾಡಲಾಗಿದೆ.

**೧. ಶಾಕ್ತಪಂಥ ದೇವಾಲಯಗಳು**

ಇದು ಜನಸಾಮಾನ್ಯರಲ್ಲಿ ಬೇರುಬಿಟ್ಟ ಪಂಥ. ಪ್ರಾಚೀನ ಕಾಲದಿಂದಲೂ ಮಾತೃದೇವತಾರಾಧನೆಯು ಮೂಡಿ ಬಹುಮುಖಿಯಾಗಿ ಪ್ರಗತಿ ಹೊಂದಿದೆ. ಪ್ರಾಚೀನ ಸಿಂಧೂ ನಾಗರಿಕತೆಯಲ್ಲಿ ಮಾತೃದೇವತಾ ಆರಾಧನೆಯ ಪ್ರಚಲಿತವಿದ್ದ ಬಗ್ಗೆ ಅನೇಕ ಕುರುಹುಗಳು ದೊರೆತ್ತಿವೆ. ಜನರ ಜೀವನಾಡಿಯಲ್ಲಿ ಬೆರೆತುಹೋದ ಮಾತೃದೇವತೆಯ ಆರಾಧನೆಯ ಪ್ರಭಾವ ಉಳಿದು ಬೆಳೆಯಿತು. ಈಕೆ ಜಗತ್ತನ್ನು ಸೃಷ್ಟಿಸಬೇಕೆಂಬ ಇಚ್ಛೆಗೆ ಮುನ್ನ ಪ್ರಕೃತಿಯಲ್ಲಿ ತಾನೊಬ್ಬಳೇ ಅವ್ಯಕ್ತ ಸ್ವರೂಪದಲ್ಲಿದ್ದಳು. ತನ್ನ ಶರೀರದಿಂದಲೇ ಬ್ರಹ್ಮ, ವಿಷ್ಣು, ಮಹೇಶ್ವರರನ್ನು ಸೃಷ್ಟಿಸಿದಳೆಂಬುದು ಈ ಪಂಥದ ಅಭಿಮತ. ಇದರಿಂದ ನೂರಾರು ಮಾತೃದೇವತಾ ಕಲ್ಪನೆಗೆ ದಾರಿ ಮಾಡಿಕೊಟ್ಟಿತು. ಸಾಂಖ್ಯರ ಪ್ರಕಾರ ಶಕ್ತಿಯು ಪುರುಷ (ಶಿವ)ನೊಡಗೂಡಿ ಸೃಷ್ಟಿಗೆ ಕಾರಣವಾಗಿದ್ದಾಳೆ. ಇದರಿಂದ ಅವಳು ಶಿವನಿಗಿಂತ ಮಿಗಿಲಾದವಳಾಗಿದ್ದು, ಅನ್ಯ ದೈವಗಳ ಮಡದಿಯರೆಲ್ಲ ಶಕ್ತಿಯ ವಿವಿಧ ರೂಪಗಳಾಗಿವೆ. ಶಾಕ್ತಪಂಥದ ತತ್ವಗಳು ಭಾರತೀಯ ಸಂಸ್ಕೃತಿಯ ಸಮಸ್ತ ರೂಪಗಳಲ್ಲಿ ಅಡಕವಾಗಿದೆ. ಬೌದ್ಧರಲ್ಲಿ ತಾರಭಗವತಿ, ಜೈನರಲ್ಲಿ ಪದ್ಮಾವತಿ, ಜ್ವಾಲಾಮುಖಿ, ವೈಷ್ಣವರಲ್ಲಿ ಲಕ್ಷ್ಮೀಯಾಗಿ, ಶೈವರಲ್ಲಿ ದುರ್ಗಿ, ಕಾಳಿ, ಎಲ್ಲಮ್ಮ, ಮಹಿಷಾಸುರಮರ್ದನಿ, ಬನಶಂಕರಿಯಾಗಿ ರೂಪುಗೊಂಡವು. ಈ ಪರಿಸರದಲ್ಲಿರುವ ದೇವಾಲಯುಗಳನ್ನು ಕೆಳಗಿನಂತೆ ವಿಂಗಡಿಸಬಹುದಾಗಿದೆ.

| | | |
|---|---|---|
| ಊರು | : | ಚೊಳಚಗುಡ್ಡ |
| ಸ್ಥಳ | : | ಬನಶಂಕರಿ ಕ್ಷೇತ್ರ |
| ಸ್ಮಾರಕ | : | ಬನಶಂಕರಿ ಗುಡಿ |
| ಅಭಿಮುಖ | : | ಪೂರ್ವ |
| ಕಾಲ | : | ೧೭೫೦ |
| ಶೈಲಿ | : | ಮರಾಠಾ ಶೈಲಿ |

ಪೂರ್ವ ಅಭಿಮುಖವಾಗಿರುವ ಬನಶಂಕರಿಯ ದೇವಾಲಯವು ಚೌಕಾಕಾರವಾಗಿದೆ. ಕ್ರಿ.ಶ. ೧೭೫೦ರಲ್ಲಿ ಸಾತಾರೆಯ ಪರಶುರಾಮ ನಾಯಕ ಅನಗಳೆ ಎಂಬುವನು ಕಟ್ಟಿಸಿದ್ದಾನೆ ಎಂದು ಹೇಳಲಾಗಿದೆ.[೭] ನಾಡೋಜ ಪುರಸ್ಕೃತರಾದ ಜಾರ್ಜ್ ಮೈಕಲ್ ಅವರು ಈ

ದೇವಾಲಯವು ಮರಾಠರ ಶೈಲಿಯಿಂದು ಒಪ್ಪುತ್ತಾರೆ. ಆದರೆ ದೇವಾಲಯದ ರಚನಾಕಾರರ ಬಗ್ಗೆ ಸಂದೇಹವನ್ನು ವ್ಯಕ್ತಪಡಿಸಿರುವರು.[೮] ದೇವಾಲಯವನ್ನು ಮುಖ್ಯವಾಗಿ ನಾಲ್ಕು ಭಾಗಗಳಾಗಿ ವಿಂಗಡಿಸಬಹುದು. ಗರ್ಭಗೃಹ, ಅಂತರಾಳ, ನವರಂಗ ಮತ್ತು ಇತ್ತೀಚೆಗೆ ರಚಿಸಲಾದ ಮುಖಮಂಟಪ ಹೊಂದಿದೆ. ಗರ್ಭಗೃಹ ಅಧಿಷ್ಠಾನವು ಉಪಾನ, ಜಗತಿ ಹೊಂದಿರುವುದು. ಅಧಿಷ್ಠಾನವು ೩ ಅಡಿ ಎತ್ತರವಾಗಿದ್ದು, ಗ್ರಾನೈಟ್‌ನಿಂದ ಕಟ್ಟಿದ್ದ ಚೌಕಾಕಾರದ ಗರ್ಭಗೃಹವು ೧೨ ಅಡಿ ಉದ್ದ, ೧೨ ಅಡಿ ಅಗಲವಾಗಿದ್ದು, ೧೦ ಅಡಿ ಎತ್ತರದ ಸರಳ ಭಿತ್ತಿಯನ್ನು ಹೊಂದಿದೆ. ಗರ್ಭಗೃಹದ ಮೇಲಿರುವ ಗೋಪುರ ಆರು ಹಂತಗಳಲ್ಲಿ ಮೇಲೇರುತ್ತಾ ಕಿರಿದಾಗಿ ಸಾಗುವುದನ್ನು ಕಾಣುತ್ತೇವೆ. ಗೋಪುರದ ಮೇಲೆ ಗುಮ್ಮಟ ರಚನೆಯಿದೆ. ಇದರ ಮೇಲೆ ಕಳಶವನ್ನು ಇಡಲಾಗಿರುವುದು. ಗೋಪುರದ ಹಂತಗಳ ನಾಲ್ಕೂ ದಿಕ್ಕುಗಳಲ್ಲಿ ಸಣ್ಣ ಸಣ್ಣ ಕಳಶವನ್ನು ಇಡಲಾಗಿದೆ. ಗೋಪುರವು ಮೇಲಿನಿಂದ ತಳ ಭಾಗದವರೆಗೆ ಪರದೆ ನೆರಿಗೆ ಇಳಿಬಿಟ್ಟಂತೆ ಉಪಶಾಖೆಗಳನ್ನು ಕಾಣಬಹುದು. ಗರ್ಭಗುಡಿಗೆ ಒಂದೇ ಪ್ರವೇಶ ದ್ವಾರವಿದ್ದು, ನಾಲ್ಕು ಅಡಿ ಎತ್ತರ ಹಾಗೂ ಎರಡು ಅಡಿ ಅಗಲವಾಗಿರುವುದು.

ಗರ್ಭಗುಡಿಯ ಬಾಗಿಲವಾಡ ಸರಳವಾದ ೪ ಶಾಖೆಗಳನ್ನು ಹೊಂದಿದೆ. ಅದರ ಲಲಾಟದಲ್ಲಿ ೬ ಇಂಚು ಎತ್ತರ, ೪ ಇಂಚು ಅಗಲವಿರುವ ಗಣೇಶನ ಉಬ್ಬುಶಿಲ್ಪವನ್ನು ಕಾಣಬಹುದು. ಹೊಸ್ತಿಲಿನಲ್ಲಿ ಕೀರ್ತಿಮುಖವನ್ನು ಕಾಣುತ್ತೇವೆ. ಪ್ರಸ್ತುತ ಗರ್ಭಗುಡಿಯ ಬಾಗಿಲವಾಡವನ್ನು ಪೂರ್ಣವಾಗಿ ಬೆಳ್ಳಿಯ ತಗಡಿನ ಜೋಡಣೆಯನ್ನು ಮಾಡಿದ್ದಾರೆ. ಗರ್ಭಗೃಹದ ಮೇಲ್ಛಾವಣಿಯಲ್ಲಿ ಅಷ್ಟಕೋನಾಕಾರ ರಚನೆಯನ್ನು ಕಾಣಬಹುದು.

ಗರ್ಭಗೃಹದಲ್ಲಿ ಶಾಂತಸ್ವರೂಪ, ಸಿಂಹವಾಹಿನಿಯಾದ ಬನಶಂಕರಿ ದೇವಿಯ ವಿಗ್ರಹವಿದೆ. ಗರ್ಭಗೃಹದ ಮುಂದೆ ಅಂತರಾಳವಿದ್ದು, ಎಡ, ಬಲ ಭಾಗದಲ್ಲಿ ಪ್ರವೇಶ ದ್ವಾರಗಳಿವೆ. ಅಂತರಾಳದಿಂದ ಮುಂದಿರುವ ದ್ವಾರದ ಮೂಲಕ ನವರಂಗವನ್ನು ಪ್ರವೇಶಿಸಬಹುದು. ನವರಂಗದ ಪ್ರವೇಶ ದ್ವಾರವು ೪ ಅಡಿ ಎತ್ತರ, ಎರಡು ಅಡಿ ಅಗಲವಾಗಿದೆ. ನವರಂಗವು ಚೌಕಾಕಾರವಾಗಿದ್ದು, ೨೦ ಅಡಿ ಉದ್ದ, ೨೦ ಅಡಿ ಅಗಲ, ೧೨ ಅಡಿ ಎತ್ತರವಾಗಿದೆ. ನವರಂಗ ೯ ಅಂಕಣಗಳನ್ನು ಹೊಂದಿರುವುದು. ನವರಂಗದಲ್ಲಿ ಕಲಾತ್ಮಕವಾದ ೨೦ ಕಂಬಗಳಿವೆ. ಅವುಗಳಲ್ಲಿ ೧೪ ಅರ್ಧಕಂಬ, ೬ ಪೂರ್ಣ ಕಂಬಗಳಾಗಿವೆ. ಕಂಬಗಳ ರಚನೆಯಲ್ಲಿ ಪೀಠ, ಕಾಂಡದಲ್ಲಿ ಚೌಕು, ದಂಡ, ಘಟ, ಮಂಡಿ, ಫಲಕ, ಬೋದಿಗೆಗಳಿವೆ. ನವರಂಗದ ಬಲಭಾಗ ಭಿತ್ತಿಯ ಕೋಷ್ಟಕದಲ್ಲಿ ಗಣೇಶ, ಎಡಭಾಗದಲ್ಲಿ ವಿಠಲ, ಭೈರವನ ಉಬ್ಬುಶಿಲ್ಪಗಳನ್ನು ಇಡಲಾಗಿದೆ. ನವರಂಗದ ಮಧ್ಯ ಭಾಗದಲ್ಲಿ ಚೌಕಾಕಾರದ ಪೀಠವಿದೆ. ಅದರಲ್ಲಿ ತಾಮ್ರದ ಸುಂದರವಾದ ಆಮೆಯ ಉಬ್ಬುಶಿಲ್ಪವನ್ನು ಕಾಣಬಹುದು. ಇದು ಶಾಂತಿ, ಸಮೃದ್ಧಿಯ ಸಂಕೇತವೆಂದು ಭಾವಿಸಲಾಗುತ್ತದೆ.

ನವರಂಗದಿಂದ ಮುಖಮಂಟಪಕ್ಕೆ ಹೋಗುವ ದ್ವಾರದ ಇಕ್ಕಲಗಳ ಜಗಲಿಯಿದೆ. ಅದರ ಮೇಲೆ ಕಂಬಗಳು ಕಂಡುಬರುತ್ತವೆ. ನವರಂಗದ ಮೇಲ್ಛಾವಣಿಯಲ್ಲಿ ಪದ್ಮದಳ ಅಲಂಕಾರವನ್ನು ಮಾಡಿದ್ದಾರೆ. ನವರಂಗದಿಂದ ಮುಖಮಂಟಪಕ್ಕೆ ಬರಲು ಮೆಟ್ಟಿಲುಗಳ ವ್ಯವಸ್ಥೆಯಿದೆ. ಮುಖಮಂಟಪವು ನವರಂಗದಿಂದ ಪ್ರತ್ಯೇಕವಾಗಿ ರಚನೆಗೊಂಡಿದೆ. ಈ ಮಂಟಪವು ಚೌಕಾಕಾರವಾಗಿದ್ದು, ೨೦ ಅಡಿ ಉದ್ದ, ೨೦ ಅಡಿ ಅಗಲ, ೧೨ ಅಡಿ ಎತ್ತರವಾಗಿದೆ. ಇಲ್ಲಿ ೨೪ ಕಂಬಗಳಿದ್ದು, ಅವು ೧೨ ಅಡಿ ಉದ್ದ, ೧೫ ಇಂಚು ದಪ್ಪದಾಗಿವೆ. ಇಲ್ಲಿರುವ ಕಂಬಗಳು ಪೀಠ, ಪಾದ, ಕಾಂಡದಲ್ಲಿ ಚೌಕು, ದಂಡ, ಘಟ, ಮಂಡಿ, ಫಲಕ, ಸರಳ ಬೋಧಿಗೆಯ ರಚನೆಯನ್ನು ಹೊಂದಿವೆ. ಈ ಮಂಟಪದ ಮುಂದೆ ಭಕ್ತರು ಪೂಜಾಧಿ ಕಾರ್ಯಗಳನ್ನು ನೇರವೇರಿಸಿಕೊಳ್ಳಲು ಸ್ಥಳಾವಕಾಶವನ್ನು ಮಾಡಿಕೊಳ್ಳಲಾಗಿದೆ. ಮಂಟಪಕ್ಕೆ ಇಳಿಜಾರದ ಚಜ್ಜಾಯಿದೆ. ಭಕ್ತರು ಕುರಲು ಮಂಟಪದಲ್ಲಿ ಜಗಲಿಯನ್ನು ಮಾಡಿದ್ದಾರೆ. ಮಂಟಪ, ಕಂಬಗಳ ರಚನೆಯು ವಿಜಯನಗರ ಶೈಲಿಯಲ್ಲಿವೆ. ಅಲ್ಲದೆ ಕೆಲವು ಕಂಬಗಳ ಮೇಲೆ ಮಿಥುನ ಶಿಲ್ಪಗಳಿರುವುದು ಕಂಡುಬರುತ್ತವೆ.

ಮುಖಮಂಟಪದಿಂದ ಮುಂದೆ ಸುಮಾರು ೨ ಅಡಿ ಎತ್ತರದ, ೬ ಅಡಿ ಅಗಲವಾದ, ೬ ಅಡಿ ಉದ್ದವಿರುವ ಜಗಲಿಯಿದೆ. ಇದರ ಮೇಲೆ ೧೦ ಅಡಿ ಎತ್ತರದ ಧ್ವಜ ಸ್ತಂಭವನ್ನು ನಿಲ್ಲಿಸಲಾಗಿದೆ. ಅದರ ತುದಿಯಲ್ಲಿ ಕಳಶವಿದೆ. ಧ್ವಜಸ್ತಂಭದ ಸಮೀಪದಲ್ಲಿ ಧೂಪ ಕುಂಡವನ್ನು ಕಾಣಬಹುದು. ಇದರಲ್ಲಿ ಕರ್ಪೂರ, ಲೋಬಾನ, ಉದಿನಕಡ್ಡಿಗಳನ್ನು ಇಲ್ಲಿ ಹಚ್ಚುವರು. ಈ ಜಗಲಿಯಲ್ಲಿಯೇ ೧ ಅಡಿ ಎತ್ತರದ ವೃತ್ತಾಕಾರದ ಪದ್ಮದಳ ಪೀಠವಿದ್ದು, ಪೀಠದಲ್ಲಿ ಪಾದಗಳಿವೆ. ಹಾಗೆಯೇ ಮತ್ತೊಂದು ಪಾದ ಪೀಠದ ಸುತ್ತಲೂ ಸರ್ಪವೊಂದು ಸುತ್ತುವರೆದಿದೆ. ಇದು ಸ್ತ್ರೀ – ಪುರುಷ ಸಂಕೇತವಾಗಿದೆ.

ದೇವಾಲಯದಿಂದ ೧೫ ಅಡಿ ಅಂತರದಲ್ಲಿ ಮೂರು ದೀಪಸ್ತಂಭಗಳಿವೆ. ಪೂರ್ವದಲ್ಲಿ ಗುಡಿಯ ಒಳ ಆವರಣದಲ್ಲಿ ೫ ದೀಪಸ್ತಂಭಗಳಿದ್ದವು. ಆದರೆ ಸ್ಥಳಾವಕಾಶದ ಅಭಾವದಿಂದ ಒಂದು ದೀಪಸ್ತಂಭವನ್ನು ತೆಗೆದು ಹಾಕಲಾಯಿತೆಂದು ದೇವಸ್ಥಾನದ ಸಮಿತಿಯವರು ಮಾಹಿತಿ ನೀಡಿದ್ದಾರೆ. ಮತ್ತೊಂದು ವೃತ್ತಾಕಾರದ ದೀಪಸ್ತಂಭವನ್ನು ಪ್ರಸ್ತುತ ನೀರಿನ ಟ್ಯಾಂಕಾಗಿ ಪರಿವರ್ತಿಸಿರುವುದನ್ನು ಕಾಣಬಹುದು. ಈಗ ಇನ್ನುಳಿದ ಮೂರು ದೀಪಸ್ತಂಭಗಳನ್ನು ಬಳಸಲಾಗುತ್ತಿದೆ. ಈ ದೇವಾಲಯದಲ್ಲಿ ನಾಲ್ಕು ಪ್ರವೇಶ ದ್ವಾರಗಳಿರುವುದು ವಿಶೇಷ. ಅವು ಕಾಮಾನಿನ ಆಕಾರದ ಪ್ರವೇಶ ದ್ವಾರಗಳಾಗಿವೆ. ಪ್ರಧಾನ ಪ್ರವೇಶ ದ್ವಾರವು ಸುಮಾರು ೩೬ ಅಡಿಗಳಷ್ಟು ಎತ್ತರವಾಗಿದೆ. ದ್ವಾರದ ಬಾಗಿಲು ೧೨ ಅಡಿ ಎತ್ತರವಿದ್ದು, ಅದನ್ನು ಸಂಪೂರ್ಣ ಮರದಿಂದ ರಚಿಸಲಾಗಿದೆ. ಉಳಿದ ಮೂರು ಪ್ರವೇಶ ದ್ವಾರಗಳು ೧೬ ಅಡಿ ಎತ್ತರ, ೧೨ ಅಡಿ ಅಗಲವಾದ ದ್ವಾರಗಳಾಗಿವೆ. ಇತ್ತೀಚೆಗೆ ಈ ದ್ವಾರಗಳಿಗೆ ಕಿರಿದಾದ ಮರದ ಬಾಗಿಲುಗಳನ್ನು ಅಳವಡಿಸಲಾಗಿದೆ.

ಮುಖ್ಯ ಪ್ರವೇಶ ದ್ವಾರದ ಒಳಭಾಗದಲ್ಲಿ ೪ ಅಡಿ ಎತ್ತರದ ಎರಡು ಜಗಲಿಗಳಿವೆ. ಇವುಗಳ ಮೇಲೆ ೧೦ ಅಡಿ ಎತ್ತರವಾದ ೧ ೧/೨ ಅಡಿ ದಪ್ಪ ಕಂಬಗಳನ್ನು ಗಮನಿಸಬಹುದು. ಚೌಕಾಕಾರದ ಈ ಮಂಟಪದಲ್ಲಿ ಒಟ್ಟು ೧೬ ಕಂಬಗಳಿವೆ. ಅವುಗಳಲ್ಲಿ ೧೨ ಅರ್ಧ ಕಂಬಗಳು, ೪ ಪೂರ್ಣ ಕಂಬಗಳಿರುವುದನ್ನು ಕಾಣಬಹುದು. ಅವು ಪೀಠ, ಪಾದ, ದಂಡ, ಘಟ, ಫಲಕ, ಬೋಧಿಗೆ ಹೊಂದಿರುವ ಕಂಬಗಳಾಗಿವೆ. ಜಗಲಿಯ ಎಡಭಾಗದಲ್ಲಿ ೩ ಅಡಿ ಎತ್ತರ, ೨ ಅಡಿ ಅಗಲವಾದ ಗಣೇಶ ವಿಗ್ರಹವನ್ನು ಹಾಗೂ ಬಲಭಾಗದಲ್ಲಿ ೩ ಅಡಿ ಎತ್ತರ, ೨ ಅಗಲವಾದ ಭೈರವನ ಶಿಲ್ಪವಿದೆ. ಪ್ರವೇಶ ದ್ವಾರದ ಮೇಲ್ಭಾವಣಿಯಲ್ಲಿ ೧೨ ಇಂಚು ಸುತ್ತಳತೆಯ ಹಾಗೂ ಮತ್ತೊಂದು ೪ ಇಂಚು ಸುತ್ತಳತೆಯ ಘಂಟೆಗಳನ್ನು ಕಾಣಬಹುದು.

ಗುಡಿಯ ಒಳ ಆವರಣವು ೬೦ ಅಡಿ ಅಗಲ, ೧೦೦ ಅಡಿ ಉದ್ದ ವ್ಯಾಪ್ತಿ ಹೊಂದಿದೆ. ೬ ಅಡಿ ಎತ್ತರದ ಕಮಾನಿನ ಆಕೃತಿಯ ಪೌಳಿಗಳನ್ನು ಆವರಣದ ಸುತ್ತಲೂ ಕಾಣಬಹುದು. ಈ ಪೌಳಿಗಳನ್ನು ಇಂಡೋ-ಇಸ್ಲಾಮಿಕ್ ಶೈಲಿಯಲ್ಲಿ ರಚಿಸಿರುವುದನ್ನು ಗಮನಿಸಬಹುದಾಗಿದೆ. ಸಂಪೂರ್ಣ ಗಾರೆಯನ್ನು ಬಳಸಿ ಪೌಳಿಗಳನ್ನು ರಚಿಸಲಾಗಿರುವುದು ವಿಶೇಷ. ಭಿಷ್ಟೋಪ ಎಂಬ ಭಕ್ತನು ಪೌಳಿಯ ರಚನೆಯನ್ನು ಮಾಡಿಸಿದ್ದಾನೆಂದು ಹೇಳಲಾಗುತ್ತದೆ. ಆದರೆ ಇದರ ಬಗೆಗೆ ಯಾವುದೇ ಆಧಾರಗಳು ಲಭ್ಯವಾಗಿಲ್ಲ. ಹಂಪಿಯ ವಿರೂಪಾಕ್ಷ ದೇವಾಲಯದ ಮುಂಭಾಗದ ಗೋಪುರವನ್ನು ಭಿಷ್ಟೋಪಯ್ಯ ಎಂಬುವನು ಜೀರ್ಣೋದ್ಧಾರ ಮಾಡಿದನೆಂಬ ಪ್ರತೀತಿ ಇದೆ. ಇಲ್ಲಿಯ ಭಿಷ್ಟೋಪ ಮತ್ತು ಹಂಪಿಯ ಭಿಷ್ಟೋಪನು ಒಬ್ಬನೆಯಾಗಿರಬೇಕೆಂಬ ಅನುಮಾನ ವ್ಯಕ್ತವಾಗುತ್ತದೆ. ಪೌಳಿಗಳ ಭಿತ್ತಿಯ ಮೇಲೆ ಮಿಥುನ ಶಿಲ್ಪಗಳನ್ನು, ಹೂವಿನ ಅಲಂಕರಣಗಳನ್ನು ಕಾಣಬಹುದು. ಗುಡಿಗೆ ಬಂದ ಭಕ್ತರು ಇಲ್ಲಿ ತಂಗಲು ಇವುಗಳನ್ನು ನಿರ್ಮಿಸಲಾಗಿದೆ. ಆದರೆ ಪ್ರಸ್ತುತ ಈ ಪೌಳಿಗಳನ್ನು ಸಮಿತಿಯವರು ತಮ್ಮ ವಾಸದ ಮನೆಗಳಾಗಿ, ಆಡಳಿತ ಕಛೇರಿಗಳಾಗಿ, ದೇವಿಗೆ ಸಂಬಂಧಿಸಿದ ವಸ್ತುಗಳನ್ನು ಇಡುವ ಕೋಣೆಗಳನ್ನಾಗಿ ಮಾಡಿರುವುದನ್ನು ಗಮನಿಸಬಹುದು. ಆವರಣದ ಒಳಭಾಗದಲ್ಲಿ ಪದ್ಮ ತೀರ್ಥ, ಕಲ್ಯಾಣ ಮಂಟಪ, ಸಹದೇವಿ ಗುಡಿ, ಕೇದರೇಶ್ವರ ಗುಡಿ, ಹನುಮಂತನ ಗುಡಿಗಳನ್ನು ಕಾಣುತ್ತೇವೆ.

| | | |
|---|---|---|
| ಊರು | : | ಚೊಳಚಗುಡ್ಡ |
| ಸ್ಥಳ | : | ಬನಶಂಕರಿ ಗುಡಿಯ ಒಳ ಆವರಣ |
| ಸ್ಮಾರಕ | : | ಸಹದೇವಿ ಗುಡಿ |
| ಅಭಿಮುಖ | : | ಉತ್ತರ |
| ಶೈಲಿ | : | ರಾಷ್ಟ್ರಕೂಟ |

ಉತ್ತರಾಭಿಮುಖವಾಗಿರುವ ಸಹದೇವಿಯ ಗುಡಿಯು ಬನಶಂಕರಿ ದೇವಾಲಯದ ಬಲಭಾಗದಲ್ಲಿರುವುದು. ಸಹದೇವಿಯನ್ನು ಬನಶಂಕರಿಯ ಗೆಳತಿ ಎಂದು ಹೇಳಲಾಗುತ್ತದೆ. ಸಹದೇವಿಯ ದೇವಾಲಯವು ಚೌಕಾಕಾರವಾಗಿದ್ದು, ಗರ್ಭಗೃಹವನ್ನು ಮಾತ್ರ ಹೊಂದಿದ್ದು, ಗರ್ಭಗೃಹದ ಭಿತ್ತಿಯು ಸರಳವಾಗಿದೆ. ಗರ್ಭಗೃಹವು ೮ ಅಡಿ ಎತ್ತರ, ೧೬ ಅಡಿ ಅಗಲ, ೧೬ ಅಡಿ ಉದ್ದವಾಗಿದೆ. ಗರ್ಭಗೃಹ ಒಳಭಾಗದಲ್ಲಿ ೧೨ ಕಂಬಗಳಿದ್ದು, ಹೊರ ಭಾಗದ ೨ ಅಡಿ ಎತ್ತರ ಜಗಲಿಯ ಮೇಲೆ ೪ ಕಂಬಗಳಿವೆ. ಈ ಕಂಬಗಳು ೬ ಅಡಿ ಎತ್ತರವಾಗಿವೆ. ಕಂಬಗಳ ರಚನೆಯಲ್ಲಿ ಪೀಠ, ಕಾಂಡದಲ್ಲಿ ಚೌಕಾಕಾರ, ಸರಳ ಬೋಧಿಗೆಯನ್ನು ಕಾಣಬಹುದು. ಗರ್ಭಗೃಹದಲ್ಲಿ ಸಹದೇವಿ ಮೂರ್ತಿಯಿದೆ. ಗರ್ಭಗೃಹಕ್ಕೆ ಇಳಿಜಾರಾದ ಚಜ್ಜಾ ಇದ್ದು, ಇದಕ್ಕೆ ಹೊಂದಿಕೊಂಡಂತೆ ಇರುವ ಸರಳವಾದ ಚೌಕಾಕಾರದ ಕಂಬಗಳು ಕಂಡುಬರುತ್ತವೆ. ಈ ಗುಡಿಯ ವಾಸ್ತು ಹಾಗೂ ಕಂಬಗಳ ವಿನ್ಯಾಸವನ್ನು ಗಮನಿಸಿದರೆ ರಾಷ್ಟ್ರಕೂಟರ ಕಾಲದ ರಚನೆಗಿರಬಹುದಾಗಿದೆ. ಸಹದೇವಿಯ ವಿಗ್ರಹದ ಹಿಂಭಾಗದಲ್ಲಿ ಕ್ರಿ.ಶ. ೧೯೭೫ರಲ್ಲಿ ಸ್ಥಾಪಿಸಲಾಗಿರುವ ಶ್ರೀ ಚಕ್ರವನ್ನು ಕಾಣಬಹುದು. ಶ್ರೀ ಚಕ್ರದ ಆರಾಧನೆಯಿಂದ ದೇವಿ ದೈವಿಶಕ್ತಿಯು ಹೆಚ್ಚಾಗುತ್ತದೆ ಎಂಬ ನಂಬಿಕೆಯಿದೆ. ಬನಶಂಕರಿ ಕ್ಷೇತ್ರದಲ್ಲಿರುವ ಪ್ರಾಚೀನ ಗುಡಿಗಳಲ್ಲಿ ಸಹದೇವಿಯ ಗುಡಿಯು ಒಂದಾಗಿದೆ.

| | | |
|---|---|---|
| ಊರು | : | ಚೊಳಚಗುಡ್ಡ |
| ಸ್ಥಳ | : | ಬನಶಂಕರಿ ಕ್ಷೇತ್ರ |
| ಸ್ಮಾರಕ | : | ಬನಶಂಕರಿ ಗುಡಿ |
| ಅಭಿಮುಖ | : | ಪೂರ್ವ |
| ಕಾಲ | : | ಕ್ರಿ.ಶ. ೭ - ೮ನೇ ಶತಮಾನ |
| ಶೈಲಿ | : | ರಾಷ್ಟ್ರಕೂಟ |
| ಸಂರಕ್ಷಣೆ | : | ಭಾ.ಪು.ಇ. |

ಕ್ರಿ.ಶ. ೭ – ೮ನೇ ಶತಮಾನದಲ್ಲಿ ರಚಿತವಾಗಿರಬಹುದಾದ ಈ ದೇವಾಲಯದ ರಚನಕಾರರ ಬಗ್ಗೆ ಮಾಹಿತಿ ಲಭ್ಯವಿಲ್ಲ. ಇದರ ವಾಸ್ತು ಲಕ್ಷಣಗಳನ್ನು ಆಧರಿಸಿ ದೇವಾಲಯವು ರಾಷ್ಟ್ರಕೂಟರ ಕಾಲದಲ್ಲಿ ರಚನೆ ಎನ್ನಬಹುದು. ಪ್ರಸ್ತುತ ಈ ಗುಡಿಯು ಹಾಳಾಗಿದ್ದು, ನೆಲದೊಳಗೆ ಅಧಿಷ್ಠಾನ ಭಾಗ ಸಂಪೂರ್ಣವಾಗಿ ಹುದುಗಿದೆ. ಗರ್ಭಗೃಹದ ಭಿತ್ತಿ ಭಾಗ, ಶಿಖರ ಭಾಗ, ಇದರ ಮುಂದಿರುವ ಛಾವಣಿ ಇಲ್ಲದ ಸಭಾಮಂಟಪ ಮಾತ್ರ ಉಳಿದುಕೊಂಡಿರುವುದನ್ನು ಕಾಣಬಹುದು. ಗುಡಿಯ ಒಳಗೆ ಬನಶಂಕರಿಯ ಮೂರ್ತಿಯ ಬದಲಿಗೆ ಶಿವಲಿಂಗವನ್ನು ಇಡಲಾಗಿದೆ. ಇಲ್ಲಿ ಪೂಜಾದಿ ಕಾರ್ಯಗಳು ನಡೆಯುತ್ತಿಲ್ಲ.

ಆದರೆ ಇದೇ ಪ್ರಾಚೀನ ಬನಶಂಕರಿ ಮಂದಿರ ಎಂದು ಹೇಳಲಾಗುವುದು. ಇತ್ತೀಚಿಗೆ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯವರು ಹರಿದ್ರಾ ತೀರ್ಥದ ಸ್ವಚ್ಛತೆವನ್ನು ಮಾಡುವಾಗ ಒಂದು ಉಸುಕು ಕಲ್ಲಿನ ಕಾಳಿ ವಿಗ್ರಹ ಭಗ್ನಗೊಂಡ ಸ್ಥಿತಿಯಲ್ಲಿ ದೊರೆಯಿತು. ಪ್ರಸ್ತುತದಲ್ಲಿ ಇದು ಬಾದಾಮಿ ವಸ್ತುಸಂಗ್ರಹಾಲಯದಲ್ಲಿದೆ. ಶಾಸನಗಳಲ್ಲಿ ಪ್ರಸ್ತಾಪಿಸುವಂತೆ ಭಗ್ನಗೊಂಡ ದೇವಿ ವಿಗ್ರಹವನ್ನು ಪೂಜಾರ್ಹವಲ್ಲವೆಂದು ಹರಿದ್ರಾ ತೀರ್ಥದಲ್ಲಿ ವಿಸರ್ಜಿಸಿರಬಹುದು. ಈ ಕಾಳಿ ವಿಗ್ರಹದ ಕೈಗಳಲ್ಲಿರುವ ಆಯುಧೋಪಕರಣಗಳು ಮತ್ತು ಪ್ರಸ್ತುತ ಬನಶಂಕರಿಯ ಕೈಗಳಲ್ಲಿರುವ ಆಯುಧೋಪಕರಣಗಳು ಒಂದೆಯಾಗಿವೆ. ಇದರಿಂದ ಈ ಕಾಳಿ ವಿಗ್ರಹವು ಮೂಲ ಬನಶಂಕರಿಯ ವಿಗ್ರಹವಾಗಿರಬಹುದು.

ಕ್ರಿ.ಶ. ೧೦೧೯ರ ಶಾಸನದಲ್ಲಿ ಕಲ್ಯಾಣದ ಚಾಲುಕ್ಯರ ದೊರೆ ಒಂದನೆಯ ಜಗದೇಕಮಲ್ಲನ ಆಳ್ವಿಕೆಯ ರಾಷ್ಟ್ರಕೂಟರ ಮನೆತನದ ಭೀಮದೇವನೆಂಬ ಮಾಂಡಲೀಕನ ಸೇವಕನಾದ ನಾಗವರ್ಮಯ್ಯನ ಪ್ರಸ್ಥಾಪವಿದೆ. ಈತನ ಸ್ಮರಣಾರ್ಥವಿರುವ ಶಿಲಾಶಾಸನದಲ್ಲಿ ಬನದೇವಿಗೆ ದಾನ, ದುವ್ವೋಜನ ಪ್ರಸ್ತಾಪವಿದೆ. ಕಲ್ಯಾಣ ಚಾಲುಕ್ಯರ ಕಾಲದ ಕ್ರಿ.ಶ. ೧೧೨೪ರ ಕಾಲಕ್ಕೆ ಸೇರಿರುವ ಮತ್ತೊಂದು ಶಾಸನದಲ್ಲಿ ಕೇತಿಮಯ್ಯನೆಂಬಾತನು ಬನದದೇವಿಯ ಗುಡಿಯ ಎದುರು ಕೀರ್ತಿ ಸ್ತಂಭವನ್ನು ನಿಲ್ಲಿಸಿರುವುದನ್ನು ಉಲ್ಲೇಖಿಸಿದೆ.

ವಿಜನಯಗರದ ಅರಸ ಅಚ್ಚುತನ ಕಾಲಕ್ಕೆ ಸೇರಿದ ಕ್ರಿ.ಶ. ೧೫೩೫ರ ಶಾಸನದಲ್ಲಿ ಚಿಕ್ಕ ಚಿನ್ನಪ್ಪ ನಾಯಕನೆಂಬಾತನು ಬನದ ಮಹಾಮಾಯಿಯ ದೇವಾಲಯವನ್ನು ಜೀರ್ಣೋದ್ಧಾರ ಮಾಡಿರುವುದನ್ನು ತಿಳಿಸುವುದು. ಹಾಗೆಯೇ ಕ್ರಿ.ಶ. ೧೫೪೪ ರ ಶಾಸನದಲ್ಲಿ ಸದಾಶಿವರಾಯನ ಕಾಲದಲ್ಲಿ ಕೃಷ್ಣಪ್ಪನಾಯಕ ಎಂಬಾತನು ಬನದ ಮಹಾಮಾಯಿಯ ದೇವಾಲಯಕ್ಕೆ ಥಾಣಕ ಶಿರೂರನ್ನು ದಾನವಾಗಿ ನೀಡಿರುವುದನ್ನು ಉಲ್ಲೇಖಿಸಲಾಗಿದೆ. ಈ ದೇವಾಲಯವು ವಿಜಯನಗರ ಅರಸರ ಕಾಲದಲ್ಲಿ ಪುನಶ್ಚೇತನವಾದದು ವಿಶೇಷ. ಮೊದಲೇ ತಿಳಿಸಲಾದ ಅರ್ಧ ಹೂತಿರುವ ರಾಷ್ಟ್ರಕೂಟ ವಾಸ್ತುಶೈಲಿಯ ಗುಡಿಯ ಶಿಖರದಲ್ಲಿ ಗಚ್ಚುಗಾರೆಯ ಅವಶೇಷಗಳು ಕಂಡುಬಂದಿವೆ. ಇದರಿಂದ ಕೃಷ್ಣಪ್ಪ ನಾಯಕನು ಜೀರ್ಣೋದ್ಧಾರ ಮಾಡಿದ ಗುಡಿ ಇದೇ ಇರಬಹುದು ಎಂದು ಊಹಿಸಬಹುದು. ಆದ್ದರಿಂದ ಹೂತಿರುವ ದೇವಾಲಯವು ಬನದ ಮಹಾಮಾಯಿಯ ಗುಡಿಯಾಗಿರಬೇಕು. ಬಾದಾಮಿ ಪುರಾತತ್ವ ವಸ್ತುಸಂಗ್ರಹಾಲಯದ ಕಾಳಿ ವಿಗ್ರಹವು ಮೂಲತಃ ಈ ದೇವಾಲಯದಲ್ಲಿದ್ದ ವಿಗ್ರಹವಾಗಿರಬಹುದು ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ.

ಮೂಲವೆಂದು ಕರೆಯಲ್ಪಡುವ ಬನಶಂಕರಿ ಗುಡಿಯು ೩೪ ಅಡಿ ಉದ್ದ, ೨೨ ಅಡಿ ಅಗಲವಾದ ಆವರಣದ ಒಳಗೆ ದೇವಾಲಯವು ವಿಸ್ತರಿಸಿಕೊಂಡಿದೆ. ಅಧಿಷ್ಠಾನ ಭಾಗವು ಸಂಪೂರ್ಣ ಭೂಮಿಯ ಒಳಗೆ ಹುದುಗಿಕೊಂಡಿರುವುದನ್ನು ಗಮನಿಸಬಹುದು.

ಗರ್ಭಗೃಹವು ೧೩ ಅಡಿ ಉದ್ದ, ೧೧ ಅಡಿ ಅಗಲ, ೬ ೧/೨ ಅಡಿ ಎತ್ತರವನ್ನು ಹೊಂದಿದೆ. ಗರ್ಭಗೃಹದ ಒಳಭಾಗದಲ್ಲಿ ೧೨ ಕಂಬಗಳಿವೆ. ಅವುಗಳಲ್ಲಿ ೧೦ ಅರ್ಧ ಕಂಬಗಳು, ೨ ಪೂರ್ಣ ಕಂಬಗಳಾಗಿವೆ. ಇಲ್ಲಿ ೧ ಅಡಿ ದಪ್ಪ, ೮ ಅಡಿ ಎತ್ತರವಾದ ಕಂಬಗಳನ್ನು ಕಾಣಬಹುದು. ಕಂಬಗಳ ರಚನೆಯಲ್ಲಿ ಪೀಠ, ಕಾಂಡ ಭಾಗ ಚೌಕಾಕಾರವಾಗಿದ್ದು, ಸರಳ ಬೋಧಿಗೆ ಹೊಂದಿವೆ.

ಗರ್ಭಗೃಹದ ಬಾಗಿಲವಾಡವು ಸರಳವಾದ ೬ ಶಾಖೆಗಳನ್ನು ಹೊಂದಿದೆ. ಲಲಾಟದಲ್ಲಿ ಗಜಲಕ್ಷ್ಮೀಯ ಉಬ್ಬು ಶಿಲ್ಪವಿದೆ. ಇದನ್ನು ಗಮನಿಸಿದರೆ ಬಾದಾಮಿ ಚಾಲುಕ್ಯರ ಆಳ್ವಿಕೆಯ ಕೊನೆಯ ಘಟ್ಟದಲ್ಲಿ ವಿರಳವಾದ ಗಜಲಕ್ಷ್ಮೀಯ ಉಬ್ಬುಶಿಲ್ಪಗಳು ರಚನೆಯಾಗಿವೆ. ಈ ಹಿನ್ನೆಲೆಯಿಂದ ಚಾಲುಕ್ಯರ ಆಳ್ವಿಕೆಯ ಕೊನೆಯ ದಿನಗಳಲ್ಲಿ ಅಥವಾ ರಾಷ್ಟ್ರಕೂಟರ ಆರಂಭಿಕ ಹಂತದಲ್ಲಿ ಗುಡಿಯ ರಚನೆಯಾಗಿರಬಹುದು. ಗರ್ಭಗೃಹದ ಭಿತ್ತಿಯ ಹೊರಭಾಗದ ಸುತ್ತಲೂ ಅರೆಗಂಬಗಳು, ಶಿಖರದ ಮಾದರಿಗಳನ್ನು ಹಾಗೇ ದೇವ ಕೋಷ್ಠಕಗಳನ್ನು ಕಾಣಬಹುದು. ಶಾಲಾ, ಕೂಟ, ಪಂಜರಗಳನ್ನು ಒಳಗೊಂಡಿದ್ದು, ದಕ್ಷಿಣಾತ್ಯ ನಾಗರ ಶೈಲಿಯ ಶಿಖರವಿದೆ. ಈ ದೇವಾಲಯವನ್ನು ರಾಷ್ಟ್ರಕೂಟರ ಕಾಲದಲ್ಲಿ ಕಟ್ಟಲಾಗಿದ್ದು, ನಂತರದ ಅರಸುಮನೆತನದವರ ಕಾಲದಲ್ಲಿ ವಿಸ್ತರಿಸಲಾಗಿದೆ ಎಂಬುದನ್ನು ಶಾಸನಗಳಿಂದ ತಿಳಿದುಬರುತ್ತದೆ.

ಗರ್ಭಗೃಹದ ಮುಂಭಾಗದಲ್ಲಿರುವ ಸಭಾ ಮಂಟಪವು ೭ ಅಡಿ ಎತ್ತರ, ೧೪ ೧/೨ ಅಡಿ ಅಗಲ, ೧೩ ಅಡಿ ಉದ್ದವಾದ ವ್ಯಾಪ್ತಿಯಲ್ಲಿದೆ. ಈ ಮಂಟಪಕ್ಕೆ ಮೇಲ್ಛಾವಣಿಯಿಲ್ಲ. ಮಂಟಪಕ್ಕೆ ೨೦ ಕಂಬಗಳ ಆಸರೆ ಇದೆ. ಅವನ್ನು ೧೦ ಜೋಡು ಕಂಬಗಳೆಂದು ಹೇಳಬಹುದು. ಪ್ರತಿಯೊಂದು ಜೋಡಿಯಲ್ಲಿ ಒಂದು ಮೂಲ ಕಂಬವು ಇನ್ನೊಂದು ಸೇರ್ಪಡೆಯಾದ ಕಂಬವು ಇದ್ದದ್ದು ಕಂಡುಬರುತ್ತದೆ. ಮೂಲ ಕಂಬಗಳು ಚೌಕಾಕಾರವಾಗಿದ್ದರೆ, ಸೇರ್ಪಡೆಗೊಂಡ ಕಂಬಗಳು ಆಯಾತಾಕಾರದ್ದಾಗಿವೆ. ಕಂಬಗಳು ೬ ಅಡಿ ಎತ್ತರ, ೧ ೧/೨ ಅಡಿ ದಪ್ಪವಾಗಿವೆ.

| | | |
|---|---|---|
| ಊರು | : | ಚೊಳಚಗುಡ್ಡ |
| ಸ್ಥಳ | : | ಬನಶಂಕರಿ ಗುಡಿಯ ಹಿಂಭಾಗ |
| ಸ್ಮಾರಕ | : | ಮಲೆಯಮ್ಮನ ಗುಡಿ |
| ಶೈಲಿ | : | ಆಧುನಿಕ |
| ಕಾಲ | : | ೧೯೭೧ |
| ಅಭಿಮುಖ | : | ಪೂರ್ವ |

ಈ ದೇವಾಲಯವು ಬನಶಂಕರಿ ಗುಡಿಯ ಹಿಂಭಾಗದ ತೋಟದಲ್ಲಿದೆ. ಇದನ್ನು ವಿಘ್ನೇಶ್ವರ ಭಟ್ಟರು (ಅರ್ಚಕರು) ಕ್ರಿ.ಶ. ೧೯೭೧ರಲ್ಲಿ ಗುಡಿಯನ್ನು ರಚಿಸಿದರು ಎಂದು ಹೇಳಲಾಗುತ್ತದೆ. ಆಧುನಿಕ ಶೈಲಿಯಲ್ಲಿರುವ ಈ ದೇವಾಲಯವು ಚೌಕಾಕಾರದ ಗರ್ಭಗೃಹವನ್ನು ಮಾತ್ರ ಹೊಂದಿದೆ. ೧೨ ಅಡಿ ಉದ್ದ, ೧೦ ಅಡಿ ಅಗಲ, ೧೨ ಅಡಿ ಎತ್ತರವಾಗಿದ್ದು ೧೦ ಅಡಿ ಎತ್ತರದ ಗೋಪುರ ಹೊಂದಿದೆ. ಗರ್ಭಗೃಹ ಮಾತ್ರ ಇರುವ ಈ ಗುಡಿಯ ಭಿತ್ತಿಯ ಭಾಗವು ಸರಳವಾಗಿದೆ. ಗರ್ಭಗೃಹದ ಒಳಭಾಗದಲ್ಲಿ ವಿಗ್ರಹದ ಬದಲಿಗೆ ದುಂಡಾಕಾರದ ಕಲ್ಲುಗಳನ್ನು ಇಟ್ಟು ಪೂಜಿಸಲಾಗುತ್ತಿದೆ. ಈ ದೇವಾಲಯದಲ್ಲಿ ಪೂರ್ವದಿಂದಲೂ ಮಹಿಳೆರು ಪೂಜಾರಿಗಳಾಗಿರುವುದು ವಿಶೇಷ. ಗರ್ಭಗೃಹದ ಮೇಲ್ಭಾಗದಲ್ಲಿ ಪ್ರಾಚೀನ ಕಾಲದ ಶಿಖರದ ಕೆಲವು ವಾಸ್ತು ಅವಶೇಷಗಳನ್ನು ಉಪಯೋಸಿಕೊಂಡು ಆಧುನಿಕ ಶೈಲಿಯ ಶಿಖರವನ್ನು ಆಕರ್ಷಕವಾಗಿ ನಿರ್ಮಿಸಿರುವುದನ್ನು ಕಾಣಬಹುದು. ಶಿಖರದ ಮೇಲೆ ಕಳಶವನ್ನು ಇಡಲಾಗಿದೆ. ಇಲ್ಲಿ ಬನಶಂಕರಿ ರಥೋತ್ಸವವಾದ ೧೫ ದಿನಗಳ ನಂತರ ಬಲಿಯನ್ನು ನೀಡುವ ಪದ್ಧತಿಯಿದೆ.

| | | |
|---|---|---|
| ಊರು | : | ಚೊಳಚಗುಡ್ಡ |
| ಸ್ಥಳ | : | ಗ್ರಾಮದ ಮಧ್ಯಭಾಗ |
| ಸ್ಮಾರಕ | : | ಬನಶಂಕರಿ ಗುಡಿ |
| ಶೈಲಿ | : | ಆಧುನಿಕ |
| ಅಭಿಮುಖ | : | ಪಶ್ಚಿಮ |

ಚೊಳಚಗುಡ್ಡದಲ್ಲಿ ಬನಶಂಕರಿಯ ಅರ್ಚಕ ವರ್ಗದವರು ಪೂರ್ವದಿಂದ ನೆಲೆಸಿದ್ದಾರೆ. ಆದಕಾರಣ ಅರ್ಚಕ ವರ್ಗದವರು ಬನಶಂಕರಿ ಆರಾಧನೆಗಾಗಿ ಈ ಗ್ರಾಮದಲ್ಲಿ ದೇವಿಯ ದೇವಾಲಯವನ್ನು ಕಟ್ಟಿಸಿದ್ದಾರೆ. ಕಲ್ಲು ಮತ್ತು ಸಿಮೆಂಟ್‌ನಿಂದ ಇತ್ತೀಚೆಗೆ ಕಟ್ಟಿದ ಆಯತಾಕಾರ ದೇವಾಲಯವಾಗಿದೆ. ಇದು ಸುಮಾರು ೧೨ ಅಡಿ ಅಗಲ, ೧೦ ಅಡಿ ಉದ್ದವಾದ ವ್ಯಾಪ್ತಿಯನ್ನು ಒಳಗೊಂಡಿದೆ. ಈ ಕಟ್ಟಡದ ಒಳಭಾಗದಲ್ಲಿ ಚೌಕಾಕಾರದ ಒಂದು ಜಗಲಿಯನ್ನು ಸಿಮೆಂಟಿನಿಂದ ಕಟ್ಟಿರುವರು. ಅದು ಸುಮಾರು ಎರಡು ಅಡಿ ಎತ್ತರವಾಗಿದ್ದು, ಅದರ ಮೇಲೆ ಮರದಿಂದ ರಚಿಸಲ್ಪಟ್ಟಿರುವ ಪೀಠವಿದೆ. ಪೀಠದ ಮೇಲೆ ಪಂಚಲೋಹದ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದಾರೆ. ಪ್ರತಿನಿತ್ಯ ಈ ಉತ್ಸವಮೂರ್ತಿಗೆ ಪೂಜೆ ಸಲ್ಲಿಸಲಾಗುವುದು. ವರ್ಷದಲ್ಲಿ ಎರಡು ಬಾರಿ ಅಂದರೆ ನವರಾತ್ರಿ ಮತ್ತು ಜಾತ್ರೆಯ ಸಂದರ್ಭದಲ್ಲಿ ಮಾತ್ರ ಬನಶಂಕರಿ ಕ್ಷೇತ್ರಕ್ಕೆ ತೆಗೆದುಕೊಂಡು ಹೋಗಲಾಗುವುದು. ಗುಡಿಯ

ಭಿತ್ತಿಯು ಸರಳವಾಗಿದ್ದು, ಯಾವುದೇ ಅಲಂಕರಣವನ್ನು ಹೊಂದಿಲ್ಲ. ಹಾಗೆಯೇ ಸರಳವಾದ ಬಾಗಿಲವಾಡವನ್ನು ಹೊಂದಿದ್ದು, ಭಿತ್ತಿಯ ಎರಡು ಬದಿಯಲ್ಲಿ ಕಿಟಕಿಗಳ ವ್ಯವಸ್ಥೆಯನ್ನು ಮಾಡಲಾಗಿದೆ. ಗುಡಿಯನ್ನು ಪ್ರವೇಶಿಸಲು ಮೆಟ್ಟಲುಗಳ ವ್ಯವಸ್ಥೆ ಮಾಡಿರುವರು. ಪ್ರವೇಶ ದ್ವಾರದ ಎರಡು ಬದಿಗಳಲ್ಲಿ ಭಕ್ತರು ಕುರಲು ಕಟ್ಟೆಯನ್ನು ರಚಿಸಿದ್ದಾರೆ.

**೨. ಶೈವಪಂಥದ ದೇವಾಲಯಗಳು**

ಬನಶಂಕರಿ ಕ್ಷೇತ್ರವು ಕರ್ನಾಟಕ ಪ್ರಸಿದ್ಧ ಶಾಕ್ತ ಕ್ಷೇತ್ರಗಳಲ್ಲಿ ಒಂದಾಗಿದೆ. ಶಾಕ್ತ ಕ್ಷೇತ್ರವಾದ ಬನಶಂಕರಿಯಲ್ಲಿ ಶೈವಪಂಥಕ್ಕೆ ಸೇರಿದ ಹಲವು ದೇವಾಲಯಗಳು ಕಂಡುಬರುತ್ತವೆ. ಬನಶಂಕರಿಯನ್ನು ಶಕ್ತಿಯ (ಪಾರ್ವತಿ) ಅವತಾರವೆಂದು ಭಾವಿಸಲಾಗುವುದು. ಆದಕಾರಣ ಶಕ್ತಿ ಇದ್ದ ಸ್ಥಳದಲ್ಲಿ ಶಿವನ ಆರಾಧನೆಯು ಸಾಮಾನ್ಯವಾಗಿರುತ್ತದೆ. ಶಿವನ ಆರಾಧನೆಯಿಲ್ಲದೆ ಶಕ್ತಿಯ ಪೂಜೆಯು ವ್ಯರ್ಥವೆಂದು ಹೇಲಲಾಗುತ್ತದೆ. ಹಾಗೆಯೇ ಶಕ್ತಿಯ ಆರಾಧನೆಯಿಲ್ಲದೆ ಶಿವನ ಪೂಜೆಯು ಸಫಲವಾಗುವುದಿಲ್ಲ ಎಂಬ ನಂಬಿಕೆಯುಂಟು. ಈ ಕಾರಣಕ್ಕಾಗಿಯೇ ಕ್ಷೇತ್ರದಲ್ಲಿ ಶಿವನನ್ನು ವಿವಿಧ ನಾಮಗಳಿಂದ ಆರಾಧಿಸಲಾಗುತ್ತಿದೆ. ಹಾಗೂ ಶಿವನಿಗಾಗಿ ಕ್ಷೇತ್ರದಲ್ಲಿ ದೇವಾಲಯಗಳ ರಚನೆಯಿರುವುದನ್ನು ಗಮನಿಸಬಹುದು. ಶ್ರೀ ಕ್ಷೇತ್ರದಲ್ಲಿ ಶೈವ ಪಂಥಕ್ಕೆ ಸೇರಿದ ಪ್ರಾಚೀನ ದೇವಾಲಯವೆಂದರೆ ಕೇದಾರೇಶ್ವರ ಗುಡಿಯಾಗಿದೆ. ಅಲ್ಲದೆ ಕಾಲಭೈರವ, ಚಂಡಭೈರವ, ರಾಮಲಿಂಗ, ಈಶ್ವರ, ಕಲ್ಮೇಶ್ವರ ಹೀಗೆ ಶೈವ ಗುಡಿಗಳಿರುವುದನ್ನು ಗಮನಿಸಬಹುದು.

| | | |
|---|---|---|
| ಊರು | : | ಚೊಳಚಗುಡ್ಡ |
| ಸ್ಥಳ | : | ಬನಶಂಕರಿ ಗುಡಿಯ ಒಳ ಆವರಣದ ಎಡಬದಿ |
| ಸ್ಮಾರಕ | : | ಕೇದಾರೇಶ್ವರ ಗುಡಿ |
| ಶೈಲಿ | : | ಕಲ್ಯಾಣ ಚಾಲುಕ್ಯ |
| ಅಭಿಮುಖ | : | ದಕ್ಷಿಣ |

ಬನಶಂಕರಿ ಗುಡಿಯ ಒಳ ಆವರಣದಲ್ಲಿರುವ ಪ್ರಾಚೀನ ದೇವಾಲಯಗಳಲ್ಲಿ ಕೇದಾರೇಶ್ವರ ಗುಡಿಯು ಒಂದಾಗಿದೆ. ದಕ್ಷಿಣಾಭಿಮುಖವಾಗಿರುವ ಈ ಗುಡಿಯು ಬನಶಂಕರಿ ದೇವಾಲಯದ ಎಡಭಾಗದಲ್ಲಿ ಕಾಣಬಹುದು. ಆಯಾತಾಕಾರವಾಗಿರುವ ಗರ್ಭಗೃಹವನ್ನು ಹೊಂದಿದ್ದು, ಶಿಖರ ಭಾಗವಿಲ್ಲ. ೧೬ ಅಡಿ ಉದ್ದ, ೧೦ ಅಡಿ ಅಗಲ, ೧೨ ಅಡಿ ಎತ್ತರವನ್ನು ಹೊಂದಿದೆ. ಗರ್ಭಗೃಹದ ಒಳಗೆ ಶಿವಲಿಂಗವಿದ್ದು, ಗುಡಿಯಲ್ಲಿ

ನಿತ್ಯಪೂಜಾಧಿಕಾರ್ಯಗಳು ನಡೆಯುತ್ತವೆ. ಗರ್ಭಗೃಹದ ಒಳಭಾಗದ ಭಿತ್ತಿಯ ಅರ್ಧ ಕಂಬದ ಮೇಲೆ ಕ್ರಿ.ಶ. ೧೦೧೯ರ ಶಾಸನದಲ್ಲಿ ಚಾಲುಕ್ಯರ ಜಗದೇಕಮಲ್ಲನ ಸಾಮಂತನಾದ ಭೀಮದೇವನ ಹಾಗೂ ಆತನ ಬಿರುದುಗಳ ಬಗ್ಗೆ ಉಲ್ಲೇಖಿಸಲಾಗಿದೆ.[೯] ಗುಡಿಯ ಒಳಗೆ ದಕ್ಷಿಣ ಭಾಗದ ಭಿತ್ತಿಯ ಮೇಲೆ ವೀರಗಲ್ಲು ಕಂಡುಬರುತ್ತದೆ. ಸಾಮಾನ್ಯವಾಗಿ ವೀರಗಲ್ಲುಗಳು ಹೊರಭಾಗದಲ್ಲಿರುತ್ತವೆ. ಇಲ್ಲಿ ಒಳಭಾಗದಲ್ಲಿರುವುದನ್ನು ಗಮನಿಸಬೇಕಾಗುತ್ತದೆ. ಗುಡಿಯ ಜೀರ್ಣೋದ್ಧಾರ ಕಾರ್ಯದ ಸಂದರ್ಭದಲ್ಲಿ ವೀರಗಲ್ಲು ಜೋಡಣೆಯಾಗಿರಬಹುದು ಎಂಬ ಅಭಿಪ್ರಾಯ ವ್ಯಕ್ತವಾಗುವುದು. ಗುಡಿಯ ಭಿತ್ತಿ ಭಾಗವು ಸರಳವಾಗಿದ್ದು, ಸುಮಾರು ೩ ಅಡಿ ಎತ್ತರದ ದ್ವಾರವನ್ನು ಹೊಂದಿದೆ. ಗರ್ಭಗೃಹದ ಬಾಗಿಲವಾಡ ೫ ಶಾಖೆಗಳನ್ನು ಹೊಂದಿದ್ದು, ದ್ವಾರವು ಪುಷ್ಪ, ಲತಾ, ಕೀರ್ತಿಮುಖ ಅಲಂಕಾರ ಇರುವುದನ್ನು ಕಾಣಬಹುದು. ಬಾಗಿಲವಾಡದ ಮೇಲೆ ಮುಂಚಾಚಿದ ಸಜ್ಜಾಯಿದೆ. ಈ ದೇವಾಲಯವನ್ನು ಕ್ರಿ.ಶ. ೧೯೬೭ರಲ್ಲಿ ಡಾ. ಎಸ್.ಎಮ್. ಅಂಬಿ ಮತ್ತು ಬಂಧುಗಳು, ಮಹಾಲಿಂಗಪ್ಪ ಇವರ ತಂದೆಯ ಸ್ಮಾರಣಾರ್ಥವಾಗಿ ಜೀರ್ಣೋದ್ಧರ ಮಾಡಿದ್ದಾರೆ.

ಊರು : ಚೊಳಚಗುಡ್ಡ

ಸ್ಥಳ : ಮೂಲ ಬನಶಂಕರಿ ಗುಡಿ ಎದುರು

ಸ್ಮಾರಕ : ಈಶ್ವರನ ಗುಡಿ

ಶೈಲಿ : ಕಲ್ಯಾಣ ಚಾಲುಕ್ಯ

ಅಭಿಮುಖ : ಪೂರ್ವ

ಪೂರ್ವಾಭಿಮುಖವಾಗಿರುವ ಈಶ್ವರ ಗುಡಿಯು ಮೂಲ ಬನಶಂಕರಿ ಗುಡಿ ಎದುರು ಇದೆ. ಚೌಕಾಕಾರ ಗರ್ಭಗೃವನ್ನು ಹೊಂದಿದ್ದು, ಶಿಖರ ಭಾಗವಿಲ್ಲ. ಗುಡಿಯು ೮ ಅಡಿ ಉದ್ದ, ೧೦ ಅಡಿ ಅಗಲವಾಗಿದ್ದು, ೯ ಅಡಿ ಎತ್ತರವಾಗಿದೆ. ಯಾವುದೇ ಅಲಂಕರಣಗಳಿಲ್ಲದ ಸರಳ ಭಿತ್ತಿಯನ್ನು ಹೊಂದಿರುವುದನ್ನು ಕಾಣಬಹುದು. ಬಾಗಿಲವಾಡ ೩ ಶಾಖೆಗಳನ್ನು ಒಳಗೊಂಡಿದ್ದು, ಲಲಾಟದಲ್ಲಿರುವ ಉಬ್ಬು ಶಿಲ್ಪ ಅಸ್ಪಷ್ಟವಾಗಿದ್ದರಿಂದ ಗುರುತಿಸಲು ಸಾಧ್ಯವಾಗುವುದಿಲ್ಲ. ಬಾಗಿಲಿನ ಹೊಸ್ತಿಲು ನಾಶವಾಗಿದೆ. ಇತ್ತೀಚೆಗೆ ನಿರ್ಮಿಸಲಾದ ಮರದ ಬಾಗಿಲನ್ನು ಕೂಡಿಸಲಾಗಿದೆ. ಈ ಗುಡಿಯ ರಚನೆಯ ಬಗ್ಗೆ ಯಾವುದೇ ದಾಖಲೆಗಳು ದೊರಕಿಲ್ಲ. ಗರ್ಭಗೃಹದ ಒಳಗೆ ಶಿವಲಿಂಗವಿದ್ದು, ಗುಡಿಯಲ್ಲಿ ನಿತ್ಯಪೂಜಾಧಿಕಾರ್ಯಗಳು ನಡೆಯುತ್ತವೆ.

ಊರು : ಚೊಳಚಗುಡ್ಡ

ಸ್ಥಳ : ಮೂಲ ಬನಶಂಕರಿ ಗುಡಿಯ ಎಡಬದಿ

ಸ್ಮಾರಕ : ರಾಮಲಿಂಗ ಗುಡಿ

ಶೈಲಿ : ಕಲ್ಯಾಣ ಚಾಲುಕ್ಯ

ಅಭಿಮುಖ : ಪೂರ್ವ

ಪೂರ್ವಾಭಿಮುಖವಾಗಿರುವ ರಾಮಲಿಂಗ ಗುಡಿಯು ಆಯತಾಕಾರವಾಗಿದೆ. ಇದು ಮೂಲ ಬನಶಂಕರಿ ಗುಡಿಯ ಎಡಬದಿಯಲ್ಲಿರುವುದು. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಗುಡಿಯಲ್ಲಿ ನಿತ್ಯಪೂಜಾಧಿಕಾರ್ಯಗಳು ನಡೆಯುತ್ತವೆ. ಶಿವಲಿಂಗದ ಹಿಂಭಾಗದಲ್ಲಿ ಗಣೇಶ ಮತ್ತು ನಂದಿ ವಿಗ್ರಹಗಳಿವೆ. ಈ ವಿಗ್ರಹಗಳು ನಂತರದಲ್ಲಿ ಸೇರ್ಪಡೆಯಾಗಿರುವಂತೆ ಕಂಡುಬರುತ್ತದೆ. ದೇವಾಲಯವನ್ನು ಮರಳು ಕಲ್ಲು ಮತ್ತು ಮಣ್ಣಿನಿಂದ ಕಟ್ಟಿರುವರು. ಗುಡಿಯ ಅಧಿಷ್ಠಾನದ ಭಾಗವು ನೆಲದಲ್ಲಿ ಹುದುಗಿದೆ. ಗುಡಿಯು ೭ ಅಡಿ ಅಗಲ, ೧೨ ಅಡಿ ಉದ್ದ, ೧೧ ಅಡಿ ಎತ್ತರವಾಗಿದ್ದನ್ನು ಕಾಣಬಹುದು. ಗುಡಿಯ ಭಿತ್ತಿಯು ಸರಳವಾಗಿದ್ದು, ಯಾವುದೇ ವಿಶೇಷತೆ ಇಲ್ಲ. ಗುಡಿಯ ಬಾಗಿಲವಾಡವು ೨ ಶಾಖೆಗಳನ್ನು ಹೊಂದಿದೆ. ಈ ಶಾಖೆಗಳ ಮೇಲೆ ಬಣ್ಣ ಹಚ್ಚಿರುವುದರಿಂದ ಯಾವುದೇ ಅಂಲಕಾರಗಳನ್ನು ಗುರುತಿಸಲಾಗುವುದಿಲ್ಲ. ಹಾಗೆಯೇ ಲಲಾಟದಲ್ಲೂ ಬಣ್ಣ ಹಚ್ಚಿರುವ ಕಾರಣ ಶಿಲ್ಪವು ಅಸ್ಪಷ್ಟವಾಗಿದೆ. ಬಾಗಿಲವಾಡದ ಬಲ ಮತ್ತು ಎಡ ಭಾಗಗಳ ಭಿತ್ತಿಯಲ್ಲಿ ಐದು ರಂಧ್ರಗಳನ್ನು ಬೆಳಕಿಕ್ಕಾಗಿ ಮಾಡಿರುವಂತೆ ಇದೆ. ಗುಡಿಯ ಮುಂಭಾಗದ ಭಿತ್ತಿಯಲ್ಲಿ ಎರಡು ಅರ್ಧ ಕಂಬಗಳಿದ್ದು, ಕಂಬಗಳ ಮೇಲ್ಭಾಗದಲ್ಲಿ ಬೋಧಿಗೆಗಳಿವೆ. ಗುಡಿಯ ಮೇಲ್ಛಾವಣಿಯು ಕುಸಿಯುತ್ತಿರುವುದನ್ನು ಕಾಣಬಹುದು. ಈ ಗುಡಿಯ ದ್ವಾರದ ಬಲಬದಿಯಲ್ಲಿ ಸುಮಾರು ೩ ಅಡಿ ಎತ್ತರದ ಕಾಳಿದೇವಿಯ ಪ್ರಾಚೀನ ವಿಗ್ರಹವಿದೆ.

ಊರು : ಚೊಳಚಗುಡ್ಡ

ಸ್ಥಳ : ಹರಿದ್ರಾ ತೀರ್ಥದ ಬಲಬದಿ

ಸ್ಮಾರಕ : ಚಂಡಭೈರವನ ಗುಡಿ

ಶೈಲಿ : ಆಧುನಿಕ

ಅಭಿಮುಖ : ಪೂರ್ವ

ಹರಿದ್ರಾ ತೀರ್ಥದ ತಟದಲ್ಲಿ ಚೌಕಾಕಾರದ ಚಂಡ ಭೈರವನ ದೇವಾಲಯವಿದೆ. ೩ ಅಡಿ ಎತ್ತರದ ಸರಳ ಚೌಕಾಕಾರ ಅಧಿಷ್ಠಾನವಿದ್ದು, ೧೦ ಅಡಿ ಸುತ್ತಳತೆಯ ಗರ್ಭಗೃಹವಿರುವುದನ್ನು ಕಾಣಬಹುದು. ಗರ್ಭಗೃಹದ ಮೇಲೆ ೮ ಅಡಿ ಎತ್ತರದ ತಲಗಳ

ಶಿಖರವಿದೆ. ಈ ದೇವಾಲಯವನ್ನು ಕಲ್ಲು ಮತ್ತು ಸಿಮೆಂಟ್‌ನ್ನು ಬಳಸಿ ಕಟ್ಟಲಾಗಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಕಿರಿದಾದ ದ್ವಾರವನ್ನು ಹೊಂದಿದೆ. ಗುಡಿಯನ್ನು ಪ್ರವೇಶಿಸಲು ಮೆಟ್ಟಲುಗಳ ವ್ಯವಸ್ಥೆಯುಂಟು. ಗರ್ಭಗೃಹದ ಭಿತ್ತಿಯು ಯಾವುದೇ ಅಲಂಕಾರಗಳಿಲ್ಲದೇ ಸರಳವಾಗಿದೆ.

**ಚಂಡ ಭೈರವನಗೆ ಸಂಬಂಧಿಸಿದ ನಂಬಿಕೆಗಳು**

ಹರಿದ್ರಾತೀರ್ಥದ ತಟದಲ್ಲಿ ಶ್ರೀ ಬನಶಂಕರಿಯಿಂದ ಸ್ಥಾಪಿತವಾದ ಅಷ್ಟ ಭೈರವರಲ್ಲಿ ಪ್ರಮುಖನಾದವನು ಚಂಡಭೈರವನಾಗಿದ್ದಾನೆ. ಈತನು ಹರಿದ್ರಾತೀರ್ಥದಲ್ಲಿ ಮಿಂದು ಮಡಿಯಾಗಿ ಶ್ರೀದೇವಿಯನ್ನು ಕುರಿತು ಘೋರ ತಪವನ್ನು ಆಚರಿಸಿದ. ಈ ರೀತಿಯಾಗಿ ದೇಹವನ್ನು ದಂಡಿಸಿ ತಪವನ್ನಾಚರಿಸಿರುವ ಚಂಡೇಶನಿಗೆ ಶ್ರೀ ಬನಶಂಕರಿಯು ಮೆಚ್ಚಿ ಪ್ರಸನ್ನಳಾದಳು. ಆತನ ಮಸ್ತಕದ ಮೇಲೆ ವರದ ಹಸ್ತವನ್ನಿಟ್ಟು ಭೈರವರಲ್ಲಿ ಪ್ರಮುಖನಾದ ಚಂಡೇಶನೇ ನಿನ್ನ ತಪಕ್ಕೆ ಮೆಚ್ಚಿದ್ದೇನೆ ಎಂದಳು. ನಿನಗೆ ಬೇಕಾದ ವರವನ್ನು ಇಚ್ಚಿಸು ಅವುಗಳನ್ನು ಕೊಡುತ್ತೇನೆಂದು ಹೇಳಿದ್ದಾಳೆ. ಆಗ ಚಂಡೇಶನು ದೇವಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿದ. ಜಗಜ್ಜನನಿ ನನಗೆ ನಿನ್ನ ಪಾದ ಕಮಲಗಳ ಪೂಜೆಯೇ ತ್ರಿಕಾಲದಲ್ಲಿ ಸಾಂಗವಾಗುವಂತೆ ಅನುಗ್ರಹಿಸು, ಇದೇ ನನ್ನ ಬೇಡಿಕೆ ಎಂದನು. ಆಗಲಿ ನಿನ್ನ ಇಚ್ಛೆಯಂತೆ ವರವನ್ನು ದಯಪಾಲಿಸುವೆ, ನನ್ನ ಸೇವಕರಲ್ಲಿ ನೀನು ಅಗ್ರಗಣ್ಯನಾಗಿದ್ದು, ಈ ಪವಿತ್ರ ಕ್ಷೇತ್ರದ ರಕ್ಷಕನಾಗಿ ಸದಾಕಾಲ ಇಲ್ಲಿಯೇ ವಾಸವಾಗು ಎಂದು ಆಜ್ಞಾಪಿಸಿದಳು ಎಂಬ ಪ್ರತೀತಿ ಇದೆ.

ಹರಿದ್ರಾ ತೀರ್ಥದ ತಟದಲ್ಲಿ ನಿನ್ನ ಹೆಸರಿನ ಶಿವಲಿಂಗವು ಉದ್ಭವಿಸುವುದು. ಆ ಶಿವಲಿಂಗದ ದರ್ಶನದಿಂದ ಮಾತ್ರ ಸರ್ವಪಾಪಗಳು ಹೋಗುವಂತೆ ನನ್ನ ಆಶೀರ್ವಾದವಿದೆ. ನಿನ್ನ ನಿತ್ಯ ಪೂಜೆಯಿಂದ ಸರ್ವಸಿದ್ಧಿಗಳು ಪ್ರಾಪ್ತವಾಗುವವು. ಶಿವಲಿಂಗ ಪೂಜೆ ಇಲ್ಲದೆ ಯಾರು ನನ್ನನ್ನು ಪೂಜಿಸುವರೋ ಅವರಿಗೆ ನನ್ನ ಪೂಜಾ ಫಲವು ಲಭಿಸುವುದಿಲ್ಲ. ಮೊದಲು ನಿನ್ನ ಹೆಸರಿನಿಂದ ಶಿವಲಿಂಗದ ಪೂಜೆಯ ನಂತರ ನನ್ನ ಪೂಜೆ ನಡೆಯಲಿ ಎಂದು ನುಡಿದು, ಶ್ರೀದೇವಿಯು ಹರಿದ್ರಾತೀರ್ಥದಲ್ಲಿಂದ ಸ್ವಯಂತೇಜದ ಶಿವಲಿಂಗವನ್ನು ಸೃಷ್ಟಿಸಿ ಹರಿದ್ರಾತೀರ್ಥದ ದಂಡೆಯ ಮೇಲೆ ಸ್ಥಾಪಿಸಿದಳು. ಆ ಶಿವಲಿಂಗದಲ್ಲಿ ಚಂಡಭೈರವನನ್ನು ಆಹ್ವಾನಿಸಿ, ಸದಾ ಜಾಗೃತನಾಗಿರುವಂತೆ ಆದೇಶಿಸಿದ್ದಳು ಎಂಬ ಪ್ರತೀತಿಯಿದೆ. ಅಂದಿನಿಂದ ಚಂಡಭೈರವನು ದೇವಿಯ ಅಪ್ಪಣೆಯಂತೆ ಬನಶಂಕರಿಯ ಕ್ಷೇತ್ರವನ್ನು ರಕ್ಷಿಸುತ್ತಾ, ಕ್ಷೇತ್ರ ರಕ್ಷಪಾಲಕನಂತೆ ಕಾರ್ಯ ನಿರ್ವಹಿಸುತ್ತಿದ್ದಾನೆ ಎಂಬ ನಂಬಿಕೆಯುಂಟು.[೧೦] ಪುರಾಣ ಹಿನ್ನೆಲೆಯುಳ್ಳ ಚಂಡಭೈರವನ ಗುಡಿಯನ್ನು ಕಾಲಾಂತರದಲ್ಲಿ

ಜೀರ್ಣೋದ್ಧಾರಗೊಂಡಿದ್ದರಿಂದ ಅದು ಆಧುನಿಕ ಸ್ಮಾರಕವಾಗಿದೆ. ಹಾಗೆಯೇ ಪುರಾಣದಲ್ಲಿ ಉಲ್ಲೇಖವಿರುವಂತೆ ಚಂಡಭೈರವನ ಗುಡಿಯು ಹರಿದ್ರಾ ತೀರ್ಥದ ತಟದಲ್ಲಿರುವುದನ್ನು ಗಮನಿಸಬಹುದು. ಇಂದಿಗೂ ಕ್ಷೇತ್ರಕ್ಕೆ ಬಂದವರು ಚಂಡಭೈರವನನ್ನು ಪೂಜಿಸಿ ನಂತರ ದೇವಿಯ ದರ್ಶನ ಪಡೆಯುತ್ತಿರುವುದನ್ನು ಕಾಣಬಹುದಾಗಿದೆ.

ಊರು : ಚೊಳಚಗುಡ್ಡ

ಸ್ಥಳ : ಸರಸ್ವತಿ ಹಳ್ಳದ ದಡದ ಎಡಬದಿ

ಸ್ಮಾರಕ : ಕಾಲಭೈರವನ ಗುಡಿ

ಶೈಲಿ : ಆಧುನಿಕ

ಅಭಿಮುಖ : ಪೂರ್ವ

ಸರಸ್ವತಿ ಹಳ್ಳದ ಎಡಬದಿಯಲ್ಲಿ ಆಯತಕಾರದ ಕಾಲ ಭೈರವನ ದೇವಾಲಯವಿದೆ. ಇದು ೧೨ ಅಡಿ ಅಗಲ, ೬ ಅಡಿ ಉದ್ದವಾದ ವಿಸ್ತೀರ್ಣವನ್ನು ಹೊಂದಿರುವುದು. ಗರ್ಭಗೃಹವನ್ನು ಹೊಂದಿದ್ದು, ಶಿಖರ ಭಾಗವಿಲ್ಲ. ಕಲ್ಲು ಮತ್ತು ಸಿಮೆಂಟ್‌ನ್ನು ಬಳಸಿ ರಚಿಸಿದ ಆಧುನಿಕ ಸ್ಮಾರಕ ಇದಾಗಿದೆ. ಗರ್ಭಗೃಹದಲ್ಲಿ ಇತ್ತೀಚಿಗೆ ರಚಿಸಿರುವ ಕಾಲಭೈರವನ ವಿಗ್ರಹವನ್ನು ಪ್ರತಿಷ್ಠಾಪಿಸಿದ್ದಾರೆ. ಆದರೆ ಗರ್ಭಗುಡಿಯ ಹೊರಭಾಗದಲ್ಲಿ ಪ್ರಾಚೀನ ತ್ರಿಭಂಗಿಯಲ್ಲಿರುವ ಕಾಲಭೈರವನ ವಿಗ್ರಹವನ್ನು ಗಮನಿಸಬಹುದು. ಆದರೆ ಆ ವಿಗ್ರಹವು ಭಗ್ನಗೊಂಡಿದೆ. ಆದಕಾರಣ ಹಳೆಯ ವಿಗ್ರಹದ ಬದಲಿಗೆ ನವೀನ ಕಾಲಭೈರವನ ವಿಗ್ರಹವನ್ನು ಸ್ಥಾಪಿಸಿರಬಹುದು. ಗರ್ಭಗೃಹದ ದ್ವಾರವು ಕಿರಿದಾಗಿದೆ. ದ್ವಾರದ ಎರಡು ಬದಿಗಳಲ್ಲಿ ಜಾಲಂಧ್ರಗಳು ಕಂಡುಬರುತ್ತವೆ. ಗುಡಿಯ ಅಧಿಷ್ಠಾನದ ಭಾಗವು ನೆಲದೊಳಗೆ ಅಡಗಿದೆ. ಗುಡಿಯ ಭಿತ್ತಿಯು ಸರಳವಾಗಿದ್ದು, ಯಾವುದೇ ಅಲಂಕೃತಗಳಿಲ್ಲ. ದೇವಾಲಯವನ್ನು ಸಿ.ಎಮ್. ಪೂಜಾರ ಮತ್ತು ಸಾ।। ಚೊಳಚಗುಡ್ಡ ಹಾ।। ವ।। ಸೋಲಾಪುರ ಮತ್ತು ಸೌ।। ಶೋಭಾ ಪೂಜಾರ. ವ. ಪರಿವಾರದವರು ೧೯೯೯ರಂದು ಜೀರ್ಣೋದ್ಧಾರ ಮಾಡಿಸಿದ್ದ ಬಗ್ಗೆ ದೇವಾಲಯ ಭಿತ್ತಿಯ ಶಿಲಾ ಫಲಕದಲ್ಲಿ ಮಾಹಿತಿಯಿದೆ. ಬನಶಂಕರಿ ಕ್ಷೇತ್ರದಲ್ಲಿ ಭೈರವನ ಶಿಲ್ಪಗಳು, ದೇವಾಲಯಗಳು ಕಂಡುಬಂದಿವೆ. ಇದರಿಂದ ಭೈರವನು ಶ್ರೀ ಕ್ಷೇತ್ರದ ಕ್ಷೇತ್ರಪಾಲಕನಾಗಿರುವುದು ಸ್ಪಷ್ಟವಾಗುತ್ತದೆ.

ಊರು : ಚೊಳಚಗುಡ್ಡ

ಸ್ಥಳ : ಗ್ರಾಮದ ಹೊರ ಭಾಗ

ಸ್ಮಾರಕ : ಕಲ್ಮೇಶ್ವರನ ಗುಡಿ

ಶೈಲಿ : ಕಲ್ಯಾಣ ಚಾಲುಕ್ಯ

ಅಭಿಮುಖ : ಉತ್ತರ

ಚೊಳಚಗುಡ್ಡ ಗ್ರಾಮದ ಹೊರಭಾಗದಲ್ಲಿ ಉತ್ತರಾಭಿಮುಖವಾಗಿರುವ ಆಯತಾಕಾರದ ಕಲ್ಮೇಶ್ವರ ಗುಡಿಯಿದೆ. ಇದು ೧೮ ಅಡಿ ಉದ್ದ, ೧೨ ಅಡಿ ಅಗಲ, ೧೦ ಅಡಿ ಎತ್ತರವಾದ ದೇವಾಲಯವಾಗಿರುವುದು. ಗರ್ಭಗೃಹವನ್ನು ಮಾತ್ರ ಹೊಂದಿದ್ದು, ಗರ್ಭಗೃಹಕ್ಕೆ ಶಿಖರವಿಲ್ಲ. ಸುಮಾರು ೫೦ ಅಡಿ ಉದ್ದ, ೩೦ ಅಡಿ ಅಗಲವಾದ ಆವರಣದ ಒಳಗಡೆ ಈ ದೇವಾಲಯವನ್ನು ನೋಡಬಹುದು. ಗುಡಿಯ ಪ್ರಾಕಾರವನ್ನು ಇತ್ತೀಚೆಗೆ ಇಟ್ಟಿಗೆ ಮತ್ತು ಸಿಮೆಂಟ್‌ನ್ನು ಬಳಸಿ ರಚಿಸಿದ್ದಾರೆ. ಗರ್ಭಗೃಹದ ಒಳಗೆ ೨ ೧/೨ ಅಡಿ ಎತ್ತರವಾದ ಶಿವಲಿಂಗವನ್ನು ಕಾಣಬಹುದು. ಗರ್ಭಗೃಹದ ಬಾಗಿಲವಾಡವು ೩ ಸರಳ ಶಾಖೆಗಳನ್ನು ಹೊಂದಿದೆ. ದೇವಾಲಯದ ಅಧಿಷ್ಠಾನವು ನೆಲದೊಳಗೆ ಹುದುಗಿದ್ದು, ಗುಡಿಯನ್ನು ಕಲ್ಲು ಮತ್ತು ಮಣ್ಣನ್ನು ಬಳಸಿ ರಚಿಸಿರುವುದನ್ನು ಕಾಣಬಹುದು. ಗುಡಿಯ ಭಿತ್ತಿಯು ಸರಳವಾಗಿದ್ದು, ಯಾವುದೆ ವಿಶೇಷತೆ ಇಲ್ಲ. ದೇವಾಲಯದ ಮುಂಭಾಗದಲ್ಲಿ ಕ್ರಿ.ಶ. ೧೪ನೇ ಶತಮಾನಕ್ಕೆ ಸೇರಿದ ೩ ಪಟ್ಟಿಕೆಗಳಿರುವ ವೀರಗಲ್ಲಿನ ಶಾಸನವಿದೆ.

**೩. ವೈಷ್ಣವ ಪಂಥ**

ಶಾಕ್ತ ಕ್ಷೇತ್ರವಾದ ಬನಶಂಕರಿಯಲ್ಲಿ ವೈಷ್ಣವ ಪಂಥಕ್ಕೆ ಸೇರಿದ ಕೆಲವು ಶಿಲ್ಪಗಳು ಹಾಗೂ ಪ್ರಾಚೀನ ದೇವಾಲಯವನ್ನು ಗಮನಿಸಬಹುದು.

ಊರು : ಬನಶಂಕರಿ ಕ್ಷೇತ್ರ

ಸ್ಥಳ : ಬನಶಂಕರಿ ಗುಡಿಯ ಬಲಬದಿ

ಸ್ಮಾರಕ : ನಾರಾಯಣನ ಗುಡಿ

ಶೈಲಿ : ರಾಷ್ಟ್ರಕೂಟ

ಅಭಿಮುಖ : ಪೂರ್ವ

ಸಂರಕ್ಷಣೆ : ಭಾ.ಪು.ಇ.

ಬನಶಂಕರಿಯಲ್ಲಿರುವ ವೈಷ್ಣವ ಪಂಥದ ಪ್ರಾಚೀನ ದೇವಾಲಯ ಇದೊಂದೆಯಾಗಿದೆ. ಇದು ಕಲ್ಯಾಣ ಚಾಲುಕ್ಯರಿಗಿಂತಲೂ ಹಿಂದಿನದ್ದಾಗಿದ್ದು, ಬಹುಶಃ ರಾಷ್ಟ್ರಕೂಟರ ಕಾಲದ್ದೆಂದು ಹೇಳಬಹುದು. ಈ ದೇವಾಲಯವು ಮರಳುಗಲ್ಲಿನಿಂದ ನಿರ್ಮಾಣಗೊಂಡಿದೆ. ಪೂರ್ವಾಭಿಮುಖವಾಗಿರುವ ನಾರಾಯಣ ದೇವಾಲಯವು ಚೌಕಾಕಾರದ ಗರ್ಭಗೃಹವನ್ನು ಹೊಂದಿದೆ. ಗರ್ಭಗೃಹದಲ್ಲಿ ವಿಗ್ರಹವಿಲ್ಲ. ಲಲಾಟದಲ್ಲಿಯೂ ಉಬ್ಬುಶಿಲ್ಪವು ನಶಿಸಿದೆ.

ಇದರಿಂದ ಮೂಲ ದೇವರ ಬಗ್ಗೆ ಸ್ಪಷ್ಟವಾದ ಮಾಹಿತಿಯಿಲ್ಲ. ಸ್ಥಳೀಯವಾಗಿ ನಾರಾಯಣನ ಗುಡಿ ಎಂದು ಕರೆಯುತ್ತಾರೆ. ದೇವಾಲಯವು ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯಿಂದ ಸಂರಕ್ಷಿಸಲ್ಪಟ್ಟಿದೆ. ಇಲಾಖೆಯ ದಾಖಲೆಗಳಲ್ಲಿಯೂ ಕೂಡ ನಾರಾಯಣ ದೇವಾಲಯವೆಂದು ಹೆಸರಿಸಿರುವರು. ದೇವಾಲಯದ ಗರ್ಭಗೃಹವು ೧೧ ೧/೨ ಅಡಿ ಅಗಲ, ೧೧ ೧/೨ ಅಡಿ ಉದ್ದವಾಗಿದ್ದು, ೫ ಅಡಿ ಎತ್ತರವನ್ನು ಹೊಂದಿದೆ. ಗರ್ಭಗೃಹದ ಭಿತ್ತಿಯು ಸರಳವಾಗಿದ್ದು, ಯಾವುದೇ ಅಲಂಕಾರಗಳಿಲ್ಲ.

ಗರ್ಭಗೃಹದ ಮೇಲ್ಭಾಗದಲ್ಲಿ ಅಲಂಕಾರಾರ್ಥವಾಗಿ ತಲರಚನೆಯ ಗೋಪುರವನ್ನು ಕಾಣಬಹುದು. ಹಾಗೂ ಗೋಪುರದ ಮೇಲೆ ಕಳಶದ ರಚನೆ ಹೊಂದಿರುವ ಔತ್ತರೇಯ ದ್ರಾವಿಡ ಶೈಲಿ ದೇವಾಲಯ ಇದಾಗಿದೆ. ಗರ್ಭಗೃಹದ ಮುಂದೆ ಆಯತಾಕಾರದ ೯ ಅಂಕಣಗಳನ್ನೊಳಗೊಂಡ ಸಭಾಮಂಟಪವನ್ನು ಕಾಣಬಹುದು. ಸಭಾಮಂಟವು ೩೪ ಅಡಿ ಉದ್ದ, ೪೦ ಅಡಿ ಅಗಲವಾಗಿದ್ದು, ೫ ಅಡಿ ಎತ್ತರವನ್ನು ಹೊಂದಿದೆ. ಸಭಾಮಂಟಪದ ಭಿತ್ತಿಯು ಸರಳವಾಗಿರುವುದನ್ನು ಗಮನಿಸಬಹುದು. ಮಂಟಪದ ಒಳಭಾಗದಲ್ಲಿ ೮ ಅರ್ಧಗಂಬಗಳು, ೬ ಪೂರ್ಣಗಂಬಗಳು ಇವೆ. ಕಂಬಗಳ ರಚನೆಯಲ್ಲಿ ಪೀಠ, ಕಾಂಡಭಾಗದಲ್ಲಿ ವೃತ್ತಾಕಾರ, ಸರಳ ಬೋಧಿಗೆಯನ್ನು ಕಾಣಬಹುದು. ಗುಡಿಯ ಕಿರಿದಾದ ಪ್ರವೇಶ ದ್ವಾರವು ೫ ಶಾಖೆಗಳನ್ನು ಒಳಗೊಂಡಿದೆ. ದ್ವಾರಕ್ಕೆ ಹೊಂದಿಕೊಂಡಂತಿರುವ ಇಳಿಜಾರದ ಚಜ್ಜಾ ಗಮನಿಸಬಹುದು. ಇಳಿಜಾರದ ಭಾಗಕ್ಕೆ ಆಧಾರವಾಗಿ ಸುಮಾರು ಎರಡು ಅಡಿ ಎತ್ತರವಾದ ಕಂಬಗಳನ್ನು ನಿಲ್ಲಿಸಲಾಗಿದೆ. ದೇವಾಲಯವು ೫೫ ಅಡಿ ಉದ್ದ, ೮೦ ಅಡಿ ಅಗಲವಾದ ವಿಶಾಲ ಆವರಣವನ್ನು ಹೊಂದಿರುವುದು ವಿಶೇಷ. ಆವರಣದ ಬಲಭಾಗದಲ್ಲಿ ದೇಸಾಯಿ ಮಂಟಪವನ್ನು ಮತ್ತು ಎಡ ಭಾಗದಲ್ಲಿ ವೃತ್ತಾಕಾರದಲ್ಲಿರುವ ಎತ್ತರವಾದ ದೀಪಸ್ತಂಭವನ್ನು ಕಾಣಬಹುದು.

ಊರು : ಚೊಳಚಗುಡ್ಡ

ಸ್ಥಳ : ಬನಶಂಕರಿ ದೇವಾಲಯದ ಒಳ ಆವರಣ

ಸ್ಮಾರಕ : ಹನುಮಂತನ ಗುಡಿ

ಶೈಲಿ : ಆಧುನಿಕ

ಅಭಿಮುಖ : ದಕ್ಷಿಣ

ಬನಶಂಕರಿ ಗುಡಿಯ ಒಳ ಆವರಣದಲ್ಲಿ ದಕ್ಷಿಣಾಭಿಮುಖವಾಗಿರುವ ಈ ಗುಡಿಯು ಗರ್ಭಗೃಹವನ್ನು ಮಾತ್ರ ಹೊಂದಿದೆ. ಗರ್ಭಗೃಹದ ಒಳಗೆ ಇತ್ತೀಚೆಗೆ ರಚಿಸಿರುವ ಹನುಮಂತನ ವಿಗ್ರಹವನ್ನು ಕಾಣಬಹುದು. ಗುಡಿಯನ್ನು ಕಲ್ಲು ಮತ್ತು ಸಿಮೆಂಟ್‌ನ್ನು ಬಳಸಿ ಕಟ್ಟಲಾಗಿದೆ. ಗುಡಿಯ ಭಿತ್ತಿ ಮತ್ತು ಗೋಪುರಕ್ಕೆ ಹೊಳಪು ಕಲ್ಲುಗಳನ್ನು ಅಳವಡಿಸಲಾಗಿದೆ. ಗೋಪುರದ

ಮೇಲೆ ಗೋಲಾಕಾರದ ಶಿಖರವಿದ್ದು, ಇದರ ಮೇಲೆ ಕಳಶವುಂಟು. ಗರ್ಭಗೃಹದ ಬಾಗಿಲು ಅತ್ಯಂತ ಕಿರಿದಾಗಿದ್ದು, ಪ್ರವೇಶವನ್ನು ಪಡೆಯಲು ಸಾಧ್ಯವಿಲ್ಲ. ಹೊರಭಾಗದಲ್ಲಿ ನಿಂತು ಪೂಜೆಯನ್ನು ಸಲ್ಲಿಸುವಂತಹ ವ್ಯವಸ್ಥೆ ಇರುವುದನ್ನು ಗಮನಿಸಬಹುದು.

| | | |
|---|---|---|
| ಊರು | : | ಚೊಳಚಗುಡ್ಡ |
| ಸ್ಥಳ | : | ಸರಸ್ವತಿ ಹಳ್ಳದ ಬಲಭಾಗ |
| ಸ್ಮಾರಕ | : | ಗಣೇಶನ ಗುಡಿ |
| ಶೈಲಿ | : | ಆಧುನಿಕ |
| ಅಭಿಮುಖ | : | ಪೂರ್ವ |

ಸರಸ್ವತಿ ಹಳ್ಳದ ಬಲಭಾಗದಲ್ಲಿರುವ ಗಣೇಶನ ದೇವಾಲಯವು ಪೂರ್ವ ಅಭಿಮುಖವಾಗಿದೆ. ಆಯತಾಕಾರದ ಗುಡಿಯಾಗಿದ್ದು, ೮ ಅಡಿ ಉದ್ದ, ೧೨ ಅಡಿ ಅಗಲವಾದ ವ್ಯಾಪ್ತಿಯಲ್ಲಿದೆ. ಗರ್ಭಗೃಹವನ್ನು ಮಾತ್ರ ಹೊಂದಿದ್ದು, ಶಿಖರಭಾಗ ಇಲ್ಲ. ಗರ್ಭಗೃಹದಲ್ಲಿ ಇತ್ತೀಚೆಗೆ ರಚಿಸಿರುವ ಗಣೇಶ ವಿಗ್ರಹವಿದೆ. ಗರ್ಭಗೃಹದ ಭಿತ್ತಿಯು ಸರಳವಾಗಿದ್ದು, ಭಿತ್ತಿಯ ಎಡಭಾಗದಲ್ಲಿ ಕಿರಿದಾದ ಜಾಲಂದ್ರವನ್ನು ಕಾಣಬಹುದು. ಈ ದೇವಾಲಯವನ್ನು ಸಿ.ಎಮ್. ಪೂಜಾರ ಮತ್ತು ಸಾ।। ಚೊಳಚಗುಡ್ಡ ಹಾ।। ವ।। ಸೋಲಾಪುರ ಮತ್ತು ಸೌ।। ಶೋಭಾ ಪೂಜಾರ. ವ. ಪರಿವಾರದವರು ೧೯೯೯ರಲ್ಲಿ ಆಧುನಿಕ ಈ ಮಂದಿರವನ್ನು ಕಟ್ಟಿಸಿದ್ದ ಬಗ್ಗೆ ಗುಡಿ ಭಿತ್ತಿಯ ಶಿಲಾಫಲಕದಲ್ಲಿ ಮಾಹಿತಿಯಿದೆ. ಗುಡಿಯನ್ನು ಕಲ್ಲು ಮತ್ತು ಸಿಮೆಂಟ್ ಬಳಸಿ ಕಟ್ಟಲಾಗಿರುವುದು. ದೇವಾಲಯಕ್ಕೆ ಕಿರಿದಾದ ಪ್ರವೇಶ ದ್ವಾರವಿದೆ. ದೇವಾಲಯದ ಸುತ್ತಲೂ ಕಬ್ಬಿಣದ ಸಲಾಕೆಗಳ ಪಟ್ಟಿಕೆಗಳನ್ನು ಕಾಣಬಹುದು.

### ೪.೨. ದೀಪಸ್ತಂಭಗಳು

ಭಾರತದ ಎಲ್ಲಾ ಸಂಪ್ರದಾಯದ ಚಟುವಟಿಕೆಯ ಮೂಲ ಕೇಂದ್ರವು ದೇವಾಲಯವಾಗಿದೆ. ಪೂರ್ವದಲ್ಲಿ ದೇವಾಲಯವು ಸಮಾಜದ ಸಾಮಾಜಿಕ ಚಟುವಟಿಕೆಗಳ ಮೂಲ ಬಿಂದುವೇ ಆಗಿತ್ತು. ದೇವಾಲಯದ ಧಾರ್ಮಿಕ ಆಚರಣೆಗಳಲ್ಲಿ ಉಪಯೋಗಿಸುವ ವಸ್ತುಗಳಾಗಲೀ ಅಥವಾ ಅವುಗಳನ್ನು ಬಳಸುವ ವಿಧಾನವಾಗಲೀ ಕಾರಣವಿಲ್ಲದೆ ನಿಯಮಿಸಿದವಲ್ಲ. ಪ್ರತಿಯೊಂದು ಆಚರಣೆಯಲ್ಲಿ ದೊರೆಯುವ ವಸ್ತುಗಳನ್ನು ಕುರಿತು ವಿಶೇಷವಾದ ಅಧ್ಯಯನವನ್ನು ಮಾಡುವಷ್ಟು ವಿಷಯಗಳು ದೊರೆಯುತ್ತವೆ.

ಧರ್ಮಕ್ಕೂ, ಕಲೆಗೂ ಹತ್ತಿರದ ಸಂಬಂಧವಿದೆ. ಮನುಷ್ಯ ಭೂಮಿಯ ಮೇಲೆ ಕಾಣಿಸಿಕೊಂಡಾಗಿನಿಂದಲೂ ಕಲೆಗಳೂ, ಮೂರ್ತಿಗಳೂ ಇದ್ದೇ ಇವೆ. ದೇವಾಲಯದ ಆವರಣವು ಮಾನವನ ಕಲ್ಪನೆ ಮತ್ತು ಆ ಕಲ್ಪನೆಯಿಂದ ಮಾಡಿದ ಮೂರ್ತಿಗಳೆರಡನ್ನೂ

ಒಂದು ಮಾಡಲು ಸಹಕಾರಿಯಾಗಿದೆ ಎಂದು ಹೇಳಬಹುದು. ಇವರಲ್ಲಿ ಧರ್ಮವೂ ಇರುವುದರ ಜೊತೆಗೆ ಕಲೆಯೂ ಇದೆ.[೧೧] ಹೀಗೆ ಧರ್ಮದ ಜೊತೆ ಜೊತೆಗೆ ಕಲೆಗಳು ಕೂಡ ಬೆಳೆದುಕೊಂಡು ಬಂದಿರಬಹುದು. ಮಾನವನ ಬುದ್ಧಿ ವಿಕಾಸವಾದಂತೆ ದೈವಕ್ಕೆ ಹೆಚ್ಚು ಮೊರೆಹೋಗಿ, ದೈವವನ್ನು ಪ್ರಸನ್ನಗೊಳಿಸಲು ವಿವಿಧ ಆಚರಣೆಗಳನ್ನು, ಆಚರಣೆಗಳಿಗೆ ಆಕಾರಗಳನ್ನು ನೀಡುತ್ತಾ ಸಾಗಿದನು. ಅಂತಹವುಗಳಲ್ಲಿ ದೀಪ ಹಚ್ಚುವ ಆಚರಣೆಯು ಒಂದಾಗಿದೆ. ನಮ್ಮಲ್ಲಿರುವ ಅನೇಕ ದೇವಾಲಯಗಳ ಮುಂದೆ ದೀಪಸ್ತಂಭಗಳನ್ನು ಸಾಮಾನ್ಯವಾಗಿ ಗಮನಿಸುತ್ತೇವೆ. ನಮ್ಮಲ್ಲಿ ದೇವಾಲಯಗಳ ಅಧ್ಯಯನ ಸಂಶೋಧನೆಗಳಾದಷ್ಟು ದೀಪಸ್ತಂಭಗಳ ಬಗ್ಗೆ ಅಧ್ಯಯನ ವಿರಳ ಎಂದೇ ಹೇಳಬಹುದು.

ಪ್ರಾಚೀನ ಭಾರತದಲ್ಲಿ ದೀಪಸ್ತಂಭಗಳು ಇದ್ದಂತಹ ಪುರಾವೆಗಳು ದೊರೆಯುತ್ತವೆ. ಪ್ರಾಚೀನ ಭಾರತದ ಮೂಲವೆಂದು ಗುರುತಿಸಲ್ಪಡುವ ಸಿಂಧೂ-ನದಿ ನಾಗರಿಕತೆಯ ತಾಣಗಳಾದ ಹರಪ್ಪಾ ಮತ್ತು ಮೊಹೆಂಜೋದಾರೋಗಳಲ್ಲಿ ಬೀದಿ ದೀಪಗಳು ಇದ್ದವೆಂದು ಉತ್ಖನನದಿಂದ ತಿಳಿದುಬಂದಿದೆ. ಪ್ರತಿಯೊಂದು ಮುಖ್ಯ ಬೀದಿಯಲ್ಲೂ ಒಂದು ದೀಪಸ್ತಂಭವಿರುತ್ತಿತ್ತು ಎಂದು ಅಲ್ಲಿ ದೊರೆತ ಪುರಾವೆಗಳು ತಿಳಿಸುತ್ತವೆ. ಇವು ಬೀದಿ ದೀಪಗಳಂತೆ ಕಾರ್ಯ ನಿರ್ವಹಿಸುತ್ತಿದ್ದವು. ಆನಂತರ ದೊರೆಯುವ ವಾಸ್ತುಶಿಲ್ಪದ ಪ್ರಕಾರ ಮೌರ್ಯರ ಕಾಲದಲ್ಲಿ ಸ್ತಂಭಗಳು ಇದ್ದವೆಂದು ತಿಳಿದುಬರುತ್ತದೆ. ಈ ಕಂಬಗಳು ಯಾವುದೇ ಕಟ್ಟಡದ ಜೊತೆಗಿರದೆ ವಿಶೇಷವಾದ ಸ್ಮಾರಕಗಳಂತೆ ನಿಂತಿರುವುದನ್ನು ಈಗಲೂ ನೋಡಬಹುದು. ದೀಪಸ್ತಂಭಗಳನ್ನು ದೇವಾಲಯದ ಹೊರ ಮತ್ತು ಒಳ ಆವರಣದಲ್ಲಿ ಕಾಣಬಹುದಾಗಿದೆ. ಒಳ ಆವರಣದ ದೀಪಸ್ತಂಭಗಳ ಉದ್ದೇಶ ದೈವ ಆಚರಣೆಗಾಗಿ, ಹೊರ ಆವರಣದಲ್ಲಿರುವ ದೀಪಸ್ತಂಭಗಳು ಬೆಳಕಿನ ಉದ್ದೇಶಕ್ಕಾಗಿ ಮಾಡಿರುವುದನ್ನು ಕಾಣುತ್ತೇವೆ.

**೧. ಬನಶಂಕರಿ ಗುಡಿಯ ಒಳ ಆವಾರಣದಲ್ಲಿರುವ ದೀಪಸ್ತಂಭಗಳು**

ಪ್ರಸ್ತುತ ಪೂಜೆಗೊಳ್ಳುತ್ತಿರುವ ಬನಶಂಕರಿಯ ಗುಡಿಯ ಒಳ ಆವರಣದಲ್ಲಿ ಈ ಮೊದಲೇ ತಿಳಿಸಿರುವಂತೆ ೫ ದೀಪಸ್ತಂಭಗಳಿದ್ದವು. ಅದರಲ್ಲಿ ಸ್ಥಳಾವಕಾಶದ ಅಭಾವದಿಂದ ಒಂದು ದೀಪಸ್ತಂಭವನ್ನು ತೆಗೆದುಹಾಕಿದ್ದು, ಮತ್ತೊಂದು ದೀಪಸ್ತಂಭವನ್ನು ಕೆಲವು ಮಾರ್ಪಾಡುಗಳನ್ನು ಮಾಡಿ ಇಂದು ನೀರಿನ ಟ್ಯಾಂಕ ಆಗಿ ಪರಿವರ್ತಿಸಲಾಗಿದೆ. ಪ್ರಸ್ತುತ ೩ ದೀಪಸ್ತಂಭಗಳನ್ನು ಮಾತ್ರ ಬಳಸಲಾಗುತ್ತಿದೆ. ಎರಡು ಅಡಿ ಎತ್ತರದ ಚೌಕಾಕಾರದ ಕಟ್ಟೆಯ ಮೇಲೆ ೧೦ ಅಡಿ ಸುತ್ತಾಳತೆಯ, ವೃತ್ತಾಕಾರದ ೧೫ ಅಡಿ ಎತ್ತರವಿರುವ ಮೂರು ದೀಪಸ್ತಂಭಗಳುನ್ನು ಕಾಣಬಹುದು. ೬೪ ದ್ವೀಪಗಳನ್ನು ಏಕಕಾಲಕ್ಕೆ ಹಚ್ಚುವಂತಹ ವ್ಯವಸ್ಥೆ ಮಾಡಲಾಗಿದೆ. ದೀಪಸ್ತಂಭಗಳನ್ನು ಸಂಪೂರ್ಣವಾಗಿ ಮರಳುಕಲ್ಲಿನಲ್ಲಿ ನಿರ್ಮಿಸಿರುವುದನ್ನು ಕಾಣುತ್ತೇವೆ. ಬನಶಂಕರಿ ಕ್ಷೇತ್ರದಲ್ಲಿ ಜಾತ್ರೆಯ ಸಂದರ್ಭ, ಕಾರ್ತಿಕ

ಮಾಸನದಲ್ಲಿ, ಇನ್ನೂ ಕೆಲವು ವಿಶೇಷ ಸಂದರ್ಭಗಳಲ್ಲಿ ದೀಪಗಳನ್ನು ಹಚ್ಚುವುದನ್ನು ಕಾಣಬಹುದು. ಬಹುಸಂಖ್ಯೆಯ ಸ್ಥಳೀಯ ಹಿರಿಯರ ಪ್ರಕಾರ ಈ ದೀಪಸ್ತಂಭಗಳನ್ನು ಪೇಶ್ವೆಗಳು ಕಟ್ಟಿಸಿದರು ಎಂದು ಹೇಳುತ್ತಾರೆ.

**೨. ಬನಶಂಕರಿ ಗುಡಿಯ ಹೊರ ಆವಾರಣದಲ್ಲಿರುವ ದೀಪಸ್ತಂಭಗಳು**

ಬನಶಂಕರಿ ದೇವಾಲಯದ ಮುಂಭಾಗದಲ್ಲಿರುವ ಹರಿದ್ರಾತೀರ್ಥದ ಬಲ ಭಾಗದಲ್ಲಿ ಬೃಹತ ದೀಪದ ಮಹಲ್ ಇದೆ. ಈ ಕ್ಷೇತ್ರದಲ್ಲಿ ಬನಶಂಕರಿ ಗುಡಿಯನ್ನು ಬಿಟ್ಟು ಅತ್ಯಂತ ಎತ್ತರವಾದ ಕಟ್ಟಡವೆಂದರೆ ದೀಪದ ಮಹಲ್. ಈ ದೀಪದ ಮಹಲಿಗೆ ಸ್ಥಳೀಯವಾಗಿ ಮಂಗನ ಮಹಲು ಎಂದು ಕರೆಯುತ್ತಾರೆ. ಇದಕ್ಕೆ ಕಾರಣ ಮೂರು ಅಂತಸ್ತಿನ ಈ ಮಹಲವನ್ನು ಏರಲು ವ್ಯವಸ್ಥಿತವಾದ ಮೆಟ್ಟಲುಗಳ ರಚನೆಯಿಲ್ಲದೇ ಒರೆಕೋರೆಯ ಮೆಟ್ಟಲುಗಳ ರಚನೆಯಿದ್ದ ಕಾರಣಕ್ಕಾಗಿ ಇದಕ್ಕೆ ಮಂಗನ ಮಹಲ್ ಎಂದು ಹೆಸರು ಬಂದಿರಬಹುದು. ಈ ದೀಪಸ್ತಂಭವು ೭ ಅಡಿ ಎತ್ತರವಾದ ಅಧಿಷ್ಠಾನವನ್ನು ಹೊಂದಿದೆ. ಇದರ ಮೇಲೆ ೨೫ ಅಡಿ ಎತ್ತರವಾದ ಮೂರು ಅಂತಸ್ತಿನ ಕಟ್ಟಡವಿದ್ದು, ಇವುಗಳ ಮೇಲೆ ೧೫ ಅಡಿ ಎತ್ತರವಾದ ದೀಪಸ್ತಂಭವನ್ನು ನಿಲ್ಲಿಸಲಾಗಿದಿರುವುದು ಗಮನಾರ್ಹ. ಒಟ್ಟಾರೆಯಾಗಿ ಈ ಮಹಲಿನ ಎತ್ತರ ೪೭ ಅಡಿಗಳಷ್ಟಿದೆ.

ದೀಪದ ಮಹಲಿನ ಅಧಿಷ್ಠಾನ ಭಾಗದ ನಾಲ್ಕು ದಿಕ್ಕುಗಳಲ್ಲಿ ಆನೆಗಳನ್ನು, ಆನೆಯ ಮೇಲೆ ಕುಳಿತಿರುವ ವ್ಯಕ್ತಿಯ ಶಿಲ್ಪವನ್ನು ಕಾಣಬಹುದು. ಆ ಆನೆಗಳು ಇಡೀ ಮಹಲನ್ನು ತಮ್ಮ ಮೇಲೆ ಹೊತ್ತಿರುವಂತೆ ಭಾಸವಾಗುತ್ತದೆ. ಹಾಗೆಯೇ ಅಧಿಷ್ಠಾನದಲ್ಲಿ ಎರಡು ಪಟ್ಟಿಕೆಗಳಿವೆ. ಮೊದಲನೆಯ ಪಟ್ಟಿಕೆಯ ಸುತ್ತಲೂ ದೇವ, ದೇವಿಯರ, ಆನೆ ಸವಾರಿ ಉಬ್ಬು ಶಿಲ್ಪಗಳನ್ನು ಕೆತ್ತಲಾಗಿದೆ. ಎರಡನೆಯ ಪಟ್ಟಿಕೆಯ ಸುತ್ತಲೂ ಋಷಿ, ಹಂಸ, ಬೋಧಿಗೆಗಳು, ದಂಪತಿ ಶಿಲ್ಪ, ಭಕ್ತಶಿಲ್ಪ, ಪ್ರಾಣಿ, ಪಕ್ಷಿಗಳ ಶಿಲ್ಪಗಳನ್ನು ಕಾಣಬಹುದು.

ಈ ಮಹಲಿನ ಒಳಭಾಗದಲ್ಲಿ ೬ ಅಡಿ ಸುತ್ತಳೆಯ ಅಷ್ಟಕೋನಾಕಾರದ ಒಂದು ಕಂಬವಿದೆ. ಇದು ೨೫ ಅಡಿ ಎತ್ತರವಾಗಿದೆ. ಈ ಕಂಬಕ್ಕೆ ಹೊಂದಿಕೊಂಡಂತೆ ಅರ್ಧ ಕಂಬಗಳು, ಬೋಧಿಗೆಗಳು, ಸ್ತ್ರೀ – ಪುರುಷರ, ಋಷಿ, ದಂಪತಿಯರ ಉಬ್ಬು ಶಿಲ್ಪಗಳನ್ನು ಕಾಣಬಹುದು. ಮಹಲಿನ ಒಳಭಾಗದಲ್ಲಿರುವ ಈ ಕಂಬವು ಮೂರು ಅಂತಸ್ತಿನವರೆಗೂ ಮುಂದುವರೆಯುತ್ತದೆ. ದೀಪಸ್ತಂಭದ ಮೊದಲನೆಯ ಅಂತಸ್ತಿನ ನಾಲ್ಕು ದಿಕ್ಕುಗಳಲ್ಲಿ ಜಾಲಂದ್ರಗಳು, ಕಮಾನಿನ ರಚನೆಯು ಇಂಡೋ – ಇಸ್ಲಾಮಿಕ್ ಶೈಲಿಯಲ್ಲಿ ಇರುವುದನ್ನು ಕಾಣಬಹುದು. ಜಾಲಂದ್ರಗಳಲ್ಲಿ ಒಬ್ಬಳು ಸ್ತ್ರೀಯು ಎರಡು ಆನೆಗಳ ಸೊಂಡಿಲನ್ನು ತನ್ನ ಕೈಗಳಲ್ಲಿ ಹಿಡಿರುವಂತೆ ಇರುವ ಶಿಲ್ಪಗಳಿವೆ. ನಾಲ್ಕು ದಿಕ್ಕುಗಳಲ್ಲೂ ಇದೇ ರೀತಿಯ ರಚನೆಯನ್ನು ಕಾಣಬಹುದು. ಹಾಗೆಯೇ ಕಮಾನಿನ ಬದಿಗಳ ನಾಲ್ಕು ದಿಕ್ಕುಗಳಲ್ಲಿ

ದ್ವಾರಪಾಲಕರ ಉಬ್ಬು ಶಿಲ್ಪಗಳಿದ್ದು, ಇವುಗಳ ಬದಿಗಳಲ್ಲಿ ನಾಗಬಂಧ ಇರುವ ಅರ್ಧಕಂಬಗಳನ್ನು ರಚಿಸಲಾಗಿದೆ. ಈ ಅಂತಸ್ತಿನ ಒಳಭಾಗದಲ್ಲಿ ಮುಖ್ಯ ಕಂಬಕ್ಕೆ ಹೊಂದಿಕೊಂಡಂತೆ ಇರುವ ಎರಡು ಕಂಬಗಳಿವೆ. ಮುಂಭಾಗದ ಕಂಬದ ಮೆಲೆ ಸ್ತ್ರೀ-ಪುರುಷರ ಉಬ್ಬುಶಿಲ್ಪ ಹಾಗೂ ಹಿಂಭಾಗದ ಕಂಬದಲ್ಲಿ ಎದುರು ಮುಖ ಮಾಡಿ ನಿಂತಿರುವ ಎರಡು ಪುರುಷ ಶಿಲ್ಪಗಳನ್ನು ಕಾಣಬಹುದು. ಇಲ್ಲಿರುವ ಕಂಬದಲ್ಲಿ ೧೨ ಬೋಧಿಗೆಗಳನ್ನು ಜೋಡಿಸಲಾಗಿದೆ.

ಎರಡನೆಯ ಅಂತಸ್ತಿನಲ್ಲಿ ನಾಲ್ಕು ದಿಕ್ಕುಗಳಲ್ಲಿ ಕಮಾನುಗಳ ರಚನೆಗಳಿವೆ. ಕಮಾನುಗಳಲ್ಲಿ ತೋರಣ, ಬೋಧಿಗೆ, ಕೀರ್ತಿಮುಖಗಳ ರಚನೆ ಮಾಡಿದ್ದಾರೆ. ಕಮಾನಿನ ಮೇಲ್ಭಾಗದಲ್ಲಿ ಇಳಿಜಾರಾದ ಚಜ್ಜಾಯಿದೆ. ಈ ಅಂತಸ್ತಿನ ಒಳಭಾಗದಲ್ಲಿರುವ ಕಂಬದ ಮೇಲೆ ಕೈಮುಗಿದು ನಿಂತಿರುವ ಮೂರು ಭಕ್ತ ಶಿಲ್ಪಗಳಿವೆ. ಅವುಗಳಲ್ಲಿ ಎರಡು ಸ್ತ್ರೀ ಶಿಲ್ಪಗಳು, ಒಂದು ಪುರುಷ ಶಿಲ್ಪವಾಗಿದೆ. ಹಾಗೆಯೇ ಕಂಬದ ಮೇಲೆ ೧೧ ಬೋಧಿಗೆಗಳಿವೆ.

ಮಹಲಿನ ಮೂರನೆಯ ಅಂತಸ್ತಿನಲ್ಲಿ ನಾಲ್ಕು ದಿಕ್ಕುಗಳಲ್ಲಿ ಕಮಾನುಗಳ ರಚನೆಯಿದೆ. ಅವುಗಳಲ್ಲಿ ಬೋಧಿಗೆಗಳನ್ನು ಕಾಣಬಹುದು. ಅಂತಸ್ತಿನ ಒಳಭಾಗದಲ್ಲಿರುವ ಕಂಬದಲ್ಲಿ ಕೈಮುಗಿದು ನಿಂತಿರುವ ಸ್ತ್ರೀ-ಪುರುಷರ ಶಿಲ್ಪಗಳಿದ್ದು, ಕಂಬದಲ್ಲಿ ಗೂಡುಗಳನ್ನು ಮಾಡಲಾಗಿದೆ.

ಮೇಲೆ ವಿವರಿಸಿದ ಅಂತಸ್ತುಗಳ ಮೇಲೆ ಗಾರೆಯಿಂದ ಮೇಲ್ಛಾವಣಿಯನ್ನು ಮಾಡಲಾಗಿದ್ದು, ಅದರ ಮೇಲೆ ದೀಪಸ್ತಂಭವನ್ನು ನಿಲ್ಲಿಸಲಾಗಿದೆ. ಈ ದೀಪಮಹಲ್‌ನ ಒಳಭಾಗದಲ್ಲಿ ೩೩ ದೀಪಗಳನ್ನು, ಹೊರಭಾಗದಲ್ಲಿ ೨೯೬ ದೀಪಗಳನ್ನು ಅಂದರೆ ಒಟ್ಟು ೩೨೯ ದೀಪಗಳನ್ನು ಏಕಕಾಲದಲ್ಲೇ ಹಚ್ಚುವ ವ್ಯವಸ್ಥೆಯಿದೆ. ಇಂತಹ ವಿಶೇಷವಾದ ದೀಪಸ್ತಂಭದ ರಚನೆಯ ಹಿನ್ನೆಲೆಯನ್ನು ಗಮನಿಸುವುದಾದರೆ ಪೂರ್ವದಲ್ಲಿ ಬನಶಂಕರಿ ಕ್ಷೇತ್ರವು ದಟ್ಟ ಅರಣ್ಯದಿಂದ ಆವೃತ್ತವಾಗಿತ್ತು. ಆದಕಾರಣ ಕ್ಷೇತ್ರದಲ್ಲಿ ಬೆಳಕಿನ ಅವಶ್ಯಕತೆ ಇರುವುದರಿಂದ ಇಂತಹ ಬೃಹತ್ ದೀಪಸ್ತಂಭವನ್ನು ರಚಿಸಿರಬಹುದು. ಈ ದೀಪದ ಬೆಳಕಿನ ಸಹಾಯದಿಂದ ದೂರದ ಊರುಗಳಿಂದ ಬರುವ ಭಕ್ತರು ಅರಣ್ಯ ಮಾರ್ಗ ದಾಟಿ, ಶ್ರೀ ಕ್ಷೇತ್ರಕ್ಕೆ ಬರಲು ಸಾಧ್ಯವಾಗಿರಬೇಕು. ಆದಕಾರಣ ಪೂರ್ವದಲ್ಲಿ ಈ ದೀಪಸ್ತಂಭವು ವಿಶೇಷ ಮಹತ್ವವನ್ನು ಪಡೆದುಕೊಂಡಿರಬಹುದು. ಪ್ರಸ್ತುತ ಈ ದೀಪಸ್ತಂಭವನ್ನು ಬಳಸಿಕೊಳ್ಳಲಾಗುತ್ತಿಲ್ಲ. ಆದರೆ ಕ್ಷೇತ್ರದ ಆಕರ್ಷಣೀಯ ಸ್ಮಾರಕವಾಗಿ ಉಳಿದು, ಕ್ಷೇತ್ರದ ಸೌಂದರ್ಯವನ್ನು ಹೆಚ್ಚಿಸಿದೆ. ಈ ಸ್ಮಾರಕದ ರಚನೆಯ ಬಗ್ಗೆ ಖಚಿತ ಮಾಹಿತಿ ಲಭ್ಯವಾಗಿಲ್ಲ. ಸ್ಥಳೀಯರು ಇದನ್ನು ಪೇಶ್ವೆಗಳ ಕಾಲದಲ್ಲಿ ರಚಿಸಲಾಗಿದೆ ಎನ್ನುತ್ತಾರೆ. ಮಹಲ್‌ನಲ್ಲಿರುವ ಬಹುತೇಕ ಶಿಲ್ಪಗಳಲ್ಲಿ ಮರಾಠಿ ಶೈಲಿಯ ಉಡುಗೆ-ತೊಡುಗೆಗಳ ಅಲಂಕಾರವಿರುವುದರಿಂದ ಈ ಮಹಲನ್ನು ಪೇಶ್ವೆಗಳ ಕಾಲದಲ್ಲಿ ರಚಿಸಿರಬಹುದಾದ ಸಾಧ್ಯತೆಗಳು ಹೆಚ್ಚಿವೆ. ಈ ದೀಪಮಹಲನ ಮತ್ತೊಂದು ವಿಶೇಷತೆ ಎಂದರೆ ಬನಶಂಕರಿ ಕ್ಷೇತ್ರದಲ್ಲಿಯೇ ಅತಿ ಹೆಚ್ಚು

ಉಬ್ಬುಶಿಲ್ಪಗಳನ್ನು ಹೊಂದಿರುವ ಮತ್ತು ಅತ್ಯಂತ ಆಕರ್ಷಣೀಯ ಸ್ಮಾರಕ ಇದಾಗಿದೆ ಎಂದರೆ ತಪ್ಪಗಲಾರದು.

ನಾರಾಯಣಗುಡಿಯ ಎಡಭಾಗದಲ್ಲಿ ವೃತ್ತಾಕಾರದ ಮತ್ತೊಂದು ದೀಪಸ್ತಂಭವನ್ನು ಕಾಣಬಹುದು. ಇದಕ್ಕೆ ಸುಮಾರು ೫ ಅಡಿ ಎತ್ತರವಾದ ಜಗಲಿ ನಿರ್ಮಿಸಿ, ಅದರ ಮೇಲೆ ಸುಮಾರು ೩೦ ಅಡಿ ಎತ್ತರವಾಗಿರುವ ನೃತ್ತಾಕಾರದ ದೀಪಸ್ತಂಭವನ್ನು ರಚಿಸಿದ್ದಾರೆ. ಇದನ್ನು ಮರಳುಗಲ್ಲಿನಿಂದ ಮಾಡಲಾಗಿದೆ. ಈ ದೀಪಸ್ತಂಭದ ವಿಶೇಷತೆಯೆಂದರೆ ದೀಪಸ್ತಂಭದ ತಳಭಾಗದಿಂದ ತುದಿ ಭಾಗದವರೆಗೂ ವೃತ್ತಾಕಾರವಾಗಿದ್ದು, ತುದಿ ಭಾಗದಲ್ಲಿ ಮಾತ್ರ ದೀಪ ಹಚ್ಚುವ ವ್ಯವಸ್ಥೆ ಮಾಡಲಾಗಿರುವುದನ್ನು ಗಮನಿಸಬಹುದು. ಈ ಮೊದಲೇ ತಿಳಿಸಿದಂತೆ ಬನಶಂಕರಿ ಕ್ಷೇತ್ರ ಪೂರ್ವದಲ್ಲಿ ದಟ್ಟ ಅರಣ್ಯದಿಂದ ಆವೃತ್ತವಾಗಿದ್ದ ಕಾರಣ ಬೆಳಕಿನ ಅವಶ್ಯಕತೆಗಾಗಿ ಇಂತಹದೊಂದು ದೊಡ್ಡ ದೀಪಸ್ತಂಭವನ್ನು ರಚಿಸಿ ಅದರ ತುದಿ ಭಾಗದಲ್ಲಿ ದೀಪ ಹಚ್ಚುವ ವ್ಯವಸ್ಥೆ ಮಾಡಿರುವುದು ಗಮನಾರ್ಹ. ಹಾಗೆಯೇ ಕೆಳಗಿನಿಂದ ಮೇಲೆ ಏರಲು ಸ್ತಂಭದ ಒಳಭಾಗದಲ್ಲಿ ಕಿರಿದಾದ ಮೆಟ್ಟಿಲುಗಳ ವ್ಯವಸ್ಥೆ ಮಾಡಿದ್ದಾರೆ. ಇದರ ನಿರ್ಮಾಣ ಮತ್ತು ಚರಿತ್ರೆಯ ಬಗೆಗೆ ದಾಖಲೆಗಳು ಇದುವರೆಗೂ ಲಭ್ಯವಾಗಿಲ್ಲ.

**೪.೩. ಮಂಟಪಗಳು**

ಮಂಟಪಗಳು ಐತಿಹಾಸಿಕ ಹಿನ್ನೆಲೆಯನ್ನು ಒಳಗೊಂಡಿವೆ. ಅಶೋಕನ ಕಾಲದಲ್ಲಿ ಪ್ರಯಾಣಿಕರು ತಂಗಲು ಊರುಗಳಲ್ಲಿ ಮಂಟಪಗಳನ್ನು ನಿರ್ಮಾಣ ಮಾಡುವ ಪರಿಪಾಠವಿತ್ತೆಂದು ಹೇಳಬಹುದು. ಈ ತಂಗುಧಾಮಗಳ ಹಿನ್ನೆಲೆಯಲ್ಲಿ ಮಂಟಪಗಳ ರಚನೆಯು ರೂಢಿಗೆ ಬಂದಿರಬಹುದಾಗಿದೆ. ಪ್ರಾರಂಭಿಕ ಅರಸು ಮನೆತನಗಳಲ್ಲಿ ಮಂಟಪಗಳ ನಿರ್ಮಾಣ ಸಾಧಾರಣ ಶೈಲಿಯಲ್ಲಿ ಕಂಡುಬಂದಿವೆ. ನಂತರದಲ್ಲಿ ಬಂದ ಹೊಯ್ಸಳ, ಕಲ್ಯಾಣದ ಚಾಲುಕ್ಯರು, ವಿಜಯನಗರ ಅರಸರು ಮನೆತನಗಳ ಕಾಲಕ್ಕೆ ಮಂಟಪಗಳನ್ನು ಕಲಾತ್ಮಕತೆಯಿಂದ ರಚನೆ ಮಾಡಲಾರಂಭಿಸಿದರು. ಹಾಗೆಯೇ ಬನಶಂಕರಿ ಕ್ಷೇತ್ರದಲ್ಲಿ ಕಲಾತ್ಮಕವಾದ ಮಂಟಪಗಳನ್ನು ಕಾಣಬಹುದಾಗಿದೆ. ಅವುಗಳಲ್ಲಿ ನಾಗರಿಮಂಟಪ, ದೇಸಾಯಿ ಮಂಟಪ ಪ್ರಮುಖವಾಗಿವೆ.

**೧. ನಾಗರಿ ಮಂಟಪ**

ಬನಶಂಕರಿ ದೇವಾಲಯದ ಮುಂಭಾಗದಲ್ಲಿ ಆಯತಾಕಾರದ ತೆರೆದ ಮಂಟಪವಿದ್ದು, ಇದು ವಿಜಯನಗರ ಶೈಲಿಯಲ್ಲಿದೆ. ಇದಕ್ಕೆ ನಾಗರಿ ಮಂಟಪವೆಂದು ಕರೆಯುತ್ತಾರೆ. ಪೂರ್ವದಲ್ಲಿ ಬನಶಂಕರಿ ದೇವಿಯ ಉತ್ಸವ ಸಂದರ್ಭದಲ್ಲಿ ಈ ಮಂಟಪದಲ್ಲಿ ವಾದ್ಯಗೋಷ್ಠಿಯನ್ನು ಮಾಡಲಾಗುತ್ತಿತ್ತು. ಆದ ಕಾರಣ ಈ ಮಂಟಪಕ್ಕೆ ನಾಗರಿ ಮಂಟಪ ಎಂದು ಹೆಸರು ಬಂದಿದೆ. ಮಂಟಪವು ೧೮ ಅಡಿ ಉದ್ದ, ೨೬ ಅಡಿ ಅಗಲವಾಗಿದ್ದು,

೧೧ ೧/೨ ಅಡಿ ಎತ್ತರವಾಗಿದೆ. ೨೪ ಕಂಬಗಳನ್ನು ಇಲ್ಲಿ ಕಾಣಬಹುದು. ಇಲ್ಲಿರುವ ಕಂಬಗಳು ೧ ೧/೨ ಅಡಿ ದಪ್ಪ, ೭ ಅಡಿ ಎತ್ತರವಾಗಿವೆ. ಕಂಬಗಳು ಪೀಠ, ಪಾದ, ದಂಡ, ಘಟ, ಮಂಡಿ, ಫಲಕ, ಬೋಧಿಗೆ ಹೊಂದಿರುವದನ್ನು ಕಾಣಬಹುದು. ಪ್ರಸ್ತುತ ಮಂಟಪದಲ್ಲಿ ಪ್ರವಾಸಿಗರಿಗಾಗಿ ಬುಟ್ಟಿಯಲ್ಲಿ ತಂದ ಊಟವನ್ನು ನೀಡುವ ಮಹಿಳೆಯರು ಇಲ್ಲಿ ಕುಳಿತು ವ್ಯಾಪಾರ ಮಾಡುತ್ತಾರೆ. ಹಾಗೂ ಈ ಮಂಟಪವು ಹರಿದ್ರಾತೀರ್ಥಕ್ಕೆ ಹೋಗಲು ಮುಖ್ಯ ಪ್ರವೇಶ ದ್ವಾರವಾಗಿದೆ. ಭಕ್ತರ ಕೆಲ ಪೂಜಾ-ವಿಧಿವಿಧಾನಗಳನ್ನು ಇಲ್ಲಿ ನೆರವೇರಿಸಿಕೊಳ್ಳುವುದನ್ನು ಕಾಣಬಹುದು.

**೨. ದೇಸಾಯಿ ಮಂಟಪ**

ಪೂರ್ವಾಭಿಮುಖವಾಗಿರುವ ಈ ಮಂಟಪವು ನಾರಾಯಣಗುಡಿಯ ಬಲಬದಿಯಲ್ಲಿದೆ. ೫೫ ಅಡಿ ಉದ್ದ, ೮೦ ಅಡಿ ಅಗಲವಾದ ಆವರಣದ ಒಳಗೆ ಈ ಮಂಟಪವಿರುವುದನ್ನು ಕಾಣಬಹುದು. ಮಂಟಪದ ಪಕ್ಕದಲ್ಲೇ ನಾರಾಯಣನಗುಡಿ ಇದೆ. ಈ ಮಂಟಪವನ್ನು ದೇಸಾಯಿ ಮನೆತನದವರು ಕಟ್ಟಿಸಿದರು ಎಂಬುವುದು ಸ್ಥಳೀಯರ ಅಭಿಪ್ರಾಯ. ಆದಕಾರಣ ಈ ಮಂಟಪಕ್ಕೆ ದೇಸಾಯಿ ಮಂಟಪವೆಂದು ಕರೆಯುವರು. ಮಂಟಪವು ೩೪ ಅಡಿ ಅಗಲ, ೨೨ ಅಡಿ ಉದ್ದ, ೧೪ ಅಡಿ ಎತ್ತರವನ್ನು ಹೊಂದಿದೆ. ಮಂಟಪದ ಅಧಿಷ್ಠಾನ ೨ ಅಡಿಯಾಗಿದ್ದು, ಮಂಟಪದಲ್ಲಿ ೧೬ ಅರ್ಧಕಂಬಗಳು, ೧೨ ಪೂರ್ಣ ಕಂಬಗಳಿವೆ. ಕಂಬಗಳು ೭ ೧/೨ ಅಡಿ ಎತ್ತರ, ೧ ೧/೨ ಅಡಿ ದಪ್ಪದಾಗಿವೆ. ಕಂಬಗಳ ರಚನೆಯಲ್ಲಿ ಪೀಠ, ಕಾಂಡ ಭಾಗದಲ್ಲಿ ಚೌಕಾಕಾರವಾಗಿದ್ದು, ಸಾಧಾರಣ ಬೋಧಿಗೆ ಕಾಣಬಹುದು. ಮಂಟಪದ ಭಿತ್ತಿಯು ಸರಳವಾಗಿದ್ದು, ಒಳಭಾಗದ ಭಿತ್ತಿಯಲ್ಲಿ ಗೂಡುಗಳನ್ನು ಕಾಣಬಹುದು. ಮಂಟಪದ ಮಧ್ಯಭಾಗದ ಭಿತ್ತಿಯ ಗೂಡಿನಲ್ಲಿ ಗಣೇಶನ ಉಬ್ಬು ಶಿಲ್ಪವಿದೆ. ಈ ಮಂಟಪದಲ್ಲಿ ಕ್ಷೇತ್ರಕ್ಕೆ ಬಂದ ಭಕ್ತರು ಇಲ್ಲಿ ತಾವು ತಂದ ಬುತ್ತಿಯನ್ನು ಸೇವಿಸಿ, ಕೆಲಕಾಲ ಮಿಶ್ರಮಿಸಿ ನಂತರ ತಮ್ಮ ವಾಸಸ್ಥಳಗಳಿಗೆ ತೆರಳುತ್ತಾರೆ. ಈ ಮಂಟಪವು ಭಾರತೀಯ ಸರ್ವೇಕ್ಷಣ ಇಲಾಖೆಯಿಂದ ಸಂರಕ್ಷಿಸಲ್ಪಟ್ಟಿದೆ.

**೩. ಕಲ್ಯಾಣ ಮಂಟಪ**

ಬನಶಂಕರಿಗುಡಿಯ ಬಲಬದಿಯಲ್ಲಿ ಈ ಮಂಟಪವಿದೆ. ಮಂಟಪವು ೬೦ ಅಡಿ ಉದ್ದ, ೩೦ ಅಡಿ ಅಗಲ, ೧೫ ಅಡಿ ಎತ್ತರವಾದ ಕಟ್ಟಡವಿರುವುದನ್ನು ಕಾಣಬಹುದು. ಕಟ್ಟಡದ ಭಿತ್ತಿಯನ್ನು ಕಲ್ಲು ಮತ್ತು ಮಣ್ಣು ಬಳಸಿ ಕಟ್ಟಲಾಗಿದೆ. ಮೇಲ್ಛಾವಣಿಯನ್ನು ಆಧುನಿಕ ತಗಡುಗಳನ್ನು ಬಳಸಿ ರಚಿಸಿದ್ದಾರೆ. ಪೂರ್ವದಲ್ಲಿ ಬನಶಂಕರಿ ಅರ್ಚಕರ ವಾಸಕ್ಕಾಗಿ ಇಲ್ಲಿ ಮನೆಗಳಿದ್ದವು. ಅವುಗಳನ್ನು ಕೆಡವಿ, ಈ ಮಂಟಪವನ್ನು ಇತ್ತೀಚೆಗೆ ನಿರ್ಮಿಸಲಾಗಿದೆ.

ಮಂಟಪದ ಒಳ ಆವರಣದಲ್ಲಿ ಪಾಕಶಾಲೆಯಿದ್ದು, ಪ್ರತಿ ಹುಣ್ಣಿಮೆಯ ದಿನದಂದು ಬನಶಂಕರಿ ದೇವಸ್ಥಾನದ ಸಮಿತಿಯ ವತಿಯಿಂದ ದಾಸೋಹವನ್ನು ಏರ್ಪಡಿಸಿರುತ್ತಾರೆ. ಹಾಗೆಯೇ ಇಲ್ಲಿ ದೇವಿಯ ಅರ್ಚಕ ವರ್ಗದವರು, ದೇವಾಂಗ ಸಮುದಾಯದವರು ತಮ್ಮ ಕುಟುಂಬದವರ ವಿವಾಹ, ಮುಂಜಿ, ಮುಂತಾದ ಪ್ರಮುಖ ಕಾರ್ಯಕ್ರಮಗಳನ್ನು ಈ ಮಂಟಪದಲ್ಲಿ ನೆರವೇರಿಸುತ್ತಿರುವುದನ್ನು ಗಮನಿಸಬಹುದು. ಮಂಟಪದ ಒಳ ಆವರಣದಲ್ಲಿ ಪ್ರಾಚೀನ ಬಾವಿಯೊಂದು ಇತ್ತು. ಆದರೆ ಇತ್ತೀಚೆ ಆ ಬಾವಿಯನ್ನು ಮುಚ್ಚಲಾಗಿದೆ. ಮಂಟಪಕ್ಕೆ ಎರಡು ಪ್ರವೇಶ ದ್ವಾರಗಳಿವೆ.

**೪. ಚೊಳಚಗುಡ್ಡದಲ್ಲಿರುವ ಬಾವಿ ಮಂಟಪ**

ಮಂಟಪವು ಚೊಳಚಗುಡ್ಡ ಗ್ರಾಮದ ಹೊರಭಾಗದಲ್ಲಿರುವ ಈದ್ಗಾದ ಬಲಬದಿಯಲ್ಲಿ ಬಾವಿಯಿದೆ. ಆ ಬಾವಿಯ ಎಡಭಾಗದಲ್ಲಿ ಈ ಮಂಟಪವನ್ನು ಕಾಣಬಹುದು. ಮಂಟಪವನ್ನು ಕಲ್ಲು ಮತ್ತು ಮಣ್ಣನ್ನು ಬಳಸಿ ರಚಿಸಿದ್ದಾರೆ. ಮಂಟಪದ ಮೇಲ್ಛಾವಣಿಯಲ್ಲಿ ಗಾರೆಯ ಅವಶೇಷಗಳಿವೆ. ಮಂಟಪಕ್ಕೆ ೧೨ ಕಂಬಗಳ ಆಸರೆಯಿದ್ದು, ಅವುಗಳಲ್ಲಿ ೪ ಅರ್ಧ ಕಂಬಗಳು, ೮ ಪೂರ್ಣ ಕಂಬಗಳಿರುವುದನ್ನು ಗಮನಿಸಬಹುದು. ಕಂಬಗಳ ರಚನೆಯಲ್ಲಿ ಪೀಠ, ಕಾಂಡದಲ್ಲಿ ಚೌಕಾಕಾರ, ವೃತ್ತಾಕಾರ, ಸರಳ ಬೋಧಿಗೆಯನ್ನು ಕಾಣಬಹುದು. ತೆರೆದ ಮಂಟಪಕ್ಕೆ ಕಿರಿದಾದ ಪ್ರವೇಶ ದ್ವಾರವಿದೆ. ಈ ಮಂಟಪದ ಪಕ್ಕದಲ್ಲಿರುವ ಬಾವಿಯಲ್ಲಿ ಏತ ನೀರಾವರಿಗೆ ಬಳಸಿದ ಅವಶೇಷಗಳಿವೆ. ಆದ್ದರಿಂದ ಪ್ರಾಚೀನ ಬಾವಿಯ ಪಕ್ಕದಲ್ಲೇ ಇರುವ ಮಂಟಪವನ್ನು ಗಮನಿಸಿದರೆ ಪೂರ್ವದಲ್ಲಿ ರೈತರು ಬಾವಿಯಿಂದ ಎತ್ತುಗಳ ಸಹಾಯದಿಂದ ನೀರನ್ನು ಹೊರ ತೆಗೆಸಿ ತಮ್ಮ ಹೊಲಗಳಿಗೆ ನೀರನ್ನು ಪೂರೈಸುತ್ತಿರಬಹುದು. ರೈತರು ತಮ್ಮ ಬಿಡುವಿನ ಸಮಯದಲ್ಲಿ ಈ ಮಂಟಪದಲ್ಲಿ ವಿಶ್ರಾಂತಿಯನ್ನು ಪಡೆಯುತ್ತಿರಬಹುದು. ಇದಕ್ಕೆ ಪೂರಕವಾಗಿ ಬಾವಿಯ ಸುತ್ತಮುತ್ತಲು ಇಂದಿಗೂ ಹೊಲಗಳು ಇರುವುದನ್ನು ಕಾಣುತ್ತೇವೆ. ಪ್ರಸ್ತುತದಲ್ಲಿ ಈ ಬಾವಿಯ ನೀರನ್ನು ಬಳಸಲಾಗುತಿಲ್ಲ.

**೫. ದಿಪಸ್ತಂಭಕ್ಕೆ ಹೊಂದಿಕೊಂಡಿರುವ ಮಂಟಪ**

ಹರಿದ್ರಾ ತೀರ್ಥಕ್ಕೆ ಹೊಂದಿಕೊಂಡಿರುವ ದೀಪಸ್ತಂಭದ ಬಲಬದಿಯಲ್ಲಿ ಚೌಕಾಕಾರದ ತೆರೆದ ಮಂಟಪವಿದೆ. ಈ ಮಂಟಪವು ೩೫ ಅಡಿ ಉದ್ದ, ೫ ಅಡಿ ಅಗಲ, ೧೦ ಅಡಿ ಎತ್ತರವನ್ನು ಹೊಂದಿರುವುದು. ಮಂಟಪದಲ್ಲಿ ೧೫ ಕಂಬಗಳಿದ್ದು, ೬ ೧/೨ ಅಡಿ ಎತ್ತರ, ೧೮ ಇಂಚು ದಪ್ಪದಾದ ಕಂಬಗಗಳಿವೆ. ಕಂಬಗಳ ರಚನೆಯಲ್ಲಿ ಪೀಠ, ಕಾಂಡ ಭಾಗದಲ್ಲಿ ಚೌಕಾಕಾರವನ್ನು, ಸರಳ ಬೋಧಿಗೆಯನ್ನು ಕಾಣಬಹುದು. ಪ್ರಾಯಶಃ ಈ ಮಂಟಪವು ಪೇಶ್ವೆ ಕಾಲದ ಜೋಡಣೆಯಾಗಿರಬಹುದು.

### ೬. ಯಾಗ ಮಂಟಪ

ಯಾಗ ಮಂಟಪ ಬನಶಂಕರಿ ಗುಡಿಯ ಒಳ ಆವರಣದಲ್ಲಿದ್ದು, ಗುಡಿಯ ಎಡಭಾಗದಲ್ಲಿದೆ. ವಿಶೇಷ ಸಂದರ್ಭಗಳಲ್ಲಿ ಯಾಗಗಳನ್ನು ನೆರವೇರಿಸಲು ಪ್ರತ್ಯೇಕವಾದ ಯಾಗ ಮಂಟಪವನ್ನು ರಚಿಸಿರುವರು. ಆಯತಾಕಾರವಾದ ಈ ಮಂಟಪ ೨೦ ಅಡಿ ಉದ್ದ, ೧೦ ಅಡಿ ಅಗಲ, ೧೮ ಅಡಿ ಎತ್ತರವಾಗಿದೆ. ಯಾಗ ಮಂಟಪದ ಭಿತ್ತಿಯಲ್ಲಿ ಲತಾ ಮತ್ತು ಬಳ್ಳಿಗಳನ್ನು ಒಳಗೊಂಡಿರುವ ಜಾಲಂಧ್ರಗಳಿವೆ. ಯಾಗ ಮಂಟಪದ ಒಳಭಾಗದಲ್ಲಿ ಯಜ್ಞ ಕುಂಡವನ್ನು ಕಾಣಬಹುದು. ಯಾಗ ಮಂಟಪಕ್ಕೆ ಎರಡು ಪ್ರವೇಶ ದ್ವಾರಗಳಿದ್ದು, ಇದೊಂದು ಆಧುನಿಕ ಕಟ್ಟಡವಾಗಿದೆ.

### ೪.೪. ತೀರ್ಥಗಳು

ತೀರ್ಥಗಳು ದೇಹ ಶುದ್ಧಿಗೂ, ಮನಃಶುದ್ಧಿಗೂ, ಅಂತಃಕರಣ ಶುದ್ಧಿಗೂ ಮತ್ತು ಆತ್ಮಶುದ್ಧಿಗೂ ಕಾರಣವಾದವುಗಳು ಎಂಬುವ ಪ್ರತೀತಿಯಿದೆ. ಪುರಾಣ ಪ್ರಸಿದ್ಧವಾದ ತೀರ್ಥಸ್ನಾನ ಮಾಡುವುದರಿಂದ ಮಾನವನು ಸಕಲ ದುರಿತಗಳಿಂದ ದೂರವಾಗಿ ಇಹಪರಗಳಲ್ಲಿ ಸುಖವನ್ನು ಪಡೆಯುತ್ತಾನೆಂದು ಶಂಖ ಸ್ಮೃತಿಯಲ್ಲಿ ಹೇಳಲಾಗಿದೆ. ಮಾನವನನ್ನು ಉದ್ಧರಿಸುವ ಇಂಥ ಪವಿತ್ರ ತೀರ್ಥಗಳನ್ನು ಬನಶಂಕರಿ ಕ್ಷೇತ್ರದಲ್ಲಿ ಕಾಣಬಹುದೆಂಬ ನಂಬಿಕೆಯಿದೆ. ವೈಶಾಖ ಮಾಸದದಲ್ಲಿ ಬರುವ ಅಗಿ ಹುಣ್ಣಿಮೆ, ಬೌದ್ಧ ಪೌರ್ಣಿಮೆ ದಿವಸ ಇಲ್ಲಿರುವ ತೀರ್ಥಗಳಲ್ಲಿ ಸ್ನಾನ ಮಾಡಿದರೆ ಪಂಚ ಮಹಾಪಾತಕಗಳಾದ ಮಾತಾಪಿತೃ ದ್ರೋಹ, ವೇದನಿಂದಾ ಪಾತಕ, ಪರದ್ರವ್ಯ, ಪರಕನ್ಯಾಪಹರಣದ ದೋಷ, ಕನ್ಯಾಶುಲ್ಕ ಇವೆಲ್ಲವುಗಳು ನಾಶವಾಗಿ, ಅಕ್ಷಯವಾದ ಅಜರಾಮರವಾದ ಸ್ಥಾನವು ಪ್ರಾಪ್ತವಾಗುವುದೆಂಬ ನಂಬಿಕೆಯುಂಟು.

ಬಾದಾಮಿ ಪರಿಸರದಲ್ಲಿ ಪ್ರಮುಖವಾಗಿ ೧೨ ತೀರ್ಥಹಳ್ಳಿಗಳಿವೆ. ಅವುಗಳಲ್ಲಿ ಮುಖ್ಯವಾಗಿ ಮಾಲಿನಿ (ಮಲಪ್ರಭಾನದಿ) ತೀರ್ಥ, ರುದ್ರಪಾದತೀರ್ಥ, ತೈಲತೀರ್ಥ, ರಂಗತೀರ್ಥ, ಅಗಸ್ತ್ಯತೀರ್ಥ, ಅಶ್ವತ್ಥತೀರ್ಥ, ಭಾಸ್ಕರ ತೀರ್ಥ, ಕೋಟಿತೀರ್ಥ, ವಿಷ್ಣುತೀರ್ಥ, ನಾಗೇಶ ತೀರ್ಥ, ಭಾನುತೀರ್ಥ ಹಾಗೂ ಪದ್ಮತೀರ್ಥ ಹೀಗೆ ದಕ್ಷಿಣ ಭಾಗದಲ್ಲಿ ೧೨ ಪುಣ್ಯ ತೀರ್ಥಗಳಿವೆ ಎಂದು ಪುರಾಣದಲ್ಲಿ ಉಲ್ಲೇಖಿಸಲಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಬನಶಂಕರಿ ಕ್ಷೇತ್ರದಲ್ಲಿರುವ ಪ್ರಮುಖವಾದ ತೀರ್ಥಗಳನ್ನು ಮಾತ್ರ ವಿವರಿಸಲಾಗಿದೆ.

### ೧. ಸರಸ್ವತಿ ತೀರ್ಥ

ಬನಶಂಕರಿ ಕ್ಷೇತ್ರದ ದಕ್ಷಿಣಕ್ಕೆ ಪುರಾಣ ಪ್ರಸಿದ್ಧವಾದ ಸರಸ್ವತಿ ತೀರ್ಥವಿದೆ. ಇದು ತಿಲಕವನ (ಬನಶಂಕರಿ ಕ್ಷೇತ್ರ)ದ ಪ್ರಮುಖ ತೀರ್ಥ.[೨] ಕ್ಷೇತ್ರದಲ್ಲಿರುವ ಸರಸ್ವತಿ ತೀರ್ಥ (ಹಳ್ಳ)ವು ಮಲಪ್ರಭ ನದಿಯ ಮೂಲದ ಸಂಪರ್ಕ ಪಡೆದಿದೆ. ಆದ್ದರಿಂದ ಈ ತೀರ್ಥಕ್ಕೆ ಮಾಲಿನಿ ತೀರ್ಥವೆಂದು ಕರೆಯುತ್ತಾರೆ. ಪೂರ್ವದಲ್ಲಿ ಪರಮೇಶ್ವರನು ತ್ರಿಪುರಾಸುರನನ್ನು

ನಾಶ ಮಾಡಿ ಅಲ್ಲಿ ತನ್ನ ಪಾದವನ್ನು ಇಟ್ಟನು ಆದ್ದರಿಂದ ಈ ತಿರ್ಥವನ್ನು ರುದ್ರಪಾದ ತೀರ್ಥವೆಂದು ಸಹ ಕರೆಯುತ್ತಾರೆ. ಕ್ಷೇತ್ರದ ಅಧಿದೈವ ಬನಶಂಕರಿಯನ್ನು ಸರಸ್ವತಿಯ ಸ್ವರೂಪವೆಂತಲೂ ಕರೆಯುವುದರಿಂದ ಈ ಕ್ಷೇತ್ರದಲ್ಲಿ ಹರಿಯುವ ಹಳ್ಳಕ್ಕೆ ಸರಸ್ವತಿ ತೀರ್ಥ ಎಂದು ಹೆಸರಿಸಿರುವ ಸಾಧ್ಯತೆಗಳಿವೆ. ಮಲಪ್ರಭಾ ನದಿಯು ಬೆಳಗಾವಿ ಜಿಲ್ಲೆಯ ಖಾನಾಪುರ ತಾಲೂಕಿನ ಜಾಂಬೋಟಿಯಿಂದ ಪಶ್ಚಿಮಕ್ಕೆ ಸುಮಾರು ೧೩ ಕಿಲೋ ಮೀಟರ ದೂರದ ಕಣಕುಂಬಿಯ ಬಳಿ ಸಹ್ಯಾದ್ರಿಯ ಶಿಖರದಲ್ಲಿ ಉಗಮಿಸುತ್ತದೆ. ಈ ನದಿಯ ಒಟ್ಟು ಸುಮಾರು ೩೩೦ ಕಿಲೋ ಮೀಟರಗಳಾಗಿದ್ದು, ಇದರಲ್ಲಿ ಸುಮಾರು ೧೯೩ ಕಿಲೋ ಮೀಟರಗಳ ದೂರ ಬೆಳಗಾವಿ ಜಿಲ್ಲೆಯ ಖಾನಾಪುರ, ಬೈಲಹೊಂಗಲ, ಸವದತ್ತಿ ಮತ್ತು ರಾಮದುರ್ಗ ತಾಲೂಕುಗಳಲ್ಲಿ ಸುಮಾರು ೩೨ ಕಿಲೋ ಮೀಟರಗಳ ದೂರ ಬಿಜಾಪುರ ಮತ್ತು ಧಾರವಾಡ ಜಿಲ್ಲೆಗಳ ಗಡಿಯಾಗಿಯೂ, ಅನಂತರ ಸುಮಾರು ೧೦೫ ಕಿಲೋ ಮೀಟರುಗಳ ಬಾಗಲಕೋಟ ಜಿಲ್ಲೆಯ ಬಾದಾಮಿ ಮತ್ತು ಹುನಗುಂದ ತಾಲೂಕುಗಳಲ್ಲಿ ಹರಿಯುತ್ತದೆ.

ಬೆಳಗಾವಿ ಜಿಲ್ಲೆಯ ರಾಮದುರ್ಗದ ಸಮೀಪದಿಂದ ಹರಿಯುವ ಈ ನದಿಯು ಅದೇ ತಾಲೂಕಿನ ಆಗ್ನೇಯ ಅಂಚಿನಲ್ಲಿ ಹರಿದು ಬಾದಾಮಿ ತಾಲೂಕಿನ ಬನಶಂಕರಿ ಕ್ಷೇತ್ರದ ಅಂಚಿನಿಂದ ಪೂರ್ವಾಭಿಮುಖವಾಗಿ ಹರಿದು, ಬಾದಾಮಿ ತಾಲೂಕಿನ ನಾಗರಾಳದ ಬಳಿ ಪೂರ್ವಕ್ಕೆ ತಿರುಗಿ ಮತ್ತೆ ಉತ್ತರಾಭಿಮುಖವಾಗಿ ನೆಲವಗಿಯವರೆಗೂ ಮುಂದುವರೆಯುತ್ತದೆ. ಅಲ್ಲಿಂದ ಪೂರ್ವಾಭಿಮುಖವಾಗಿ ಹರಿದು ಪಟ್ಟದಕಲ್ಲಿನ ಬಳಿ ವಾಯುವ್ಯಕ್ಕೆ ತಿರುಗಿ, ಜಾಲಿಹಾಳ, ಐಹೊಳೆ, ಕಮತಗಿಯವರೆಗೂ ಹರಿದು ಮುಂದೆ ಸಂಗಮದ ಬಳಿ ಕೃಷ್ಣಾ ನದಿಯನ್ನು ಸೇರುವುದು.[೧೩] ಬಾದಾಮಿ ತಾಲೂಕಿನಲ್ಲಿ ಮಲಪ್ರಭಾ ಒಂದೇ ನದಿ ಮೂಲವಾಗಿದೆ.

ಬನಶಂಕರಿ ಕ್ಷೇತ್ರದಲ್ಲಿ ಹರಿದಿರುವ ಸರಸ್ವತಿ ಹಳ್ಳದಿಂದ ಸುಮಾರು ೧೨.೯೬ ಹೆಕ್ಟರ್‌ಗಳಷ್ಟು ಭೂಮಿಗೆ ನೀರು ಪೂರೈಕೆಯಾಗುತ್ತಿದೆ. ಈ ನೀರಿನ ಸಹಾಯದಿಂದ ಬಾಳೆ, ತೆಂಗು, ವಿಳ್ಯದೆಲೆ, ನಿಂಬೆ, ಕಬ್ಬು, ಕಾಯಿಪಲ್ಲೆ ಇನ್ನೂ ಮೊದಲಾವುಗಳನ್ನು ಬೆಳೆಯನ್ನು ಬೆಳೆಯುತ್ತಾರೆ. ಬಾಗಲಕೋಟೆ ಜಿಲ್ಲೆಯು ಬರಗಾಲದ ತವರು ಮನೆಯಾಗಿದ್ದರೂ ಕೂಡ ಈ ಕ್ಷೇತ್ರದಲ್ಲಿ ಇವತ್ತಿಗೂ ನೀರಿನ ಕೊರತೆಯಾಗದೆ. ಉತ್ತಮ ಬೆಳೆಗಳಿಗೆ ಸರಸ್ವತಿ ಹಳ್ಳವು ಸಹಕಾರಿಯಾಗಿದೆ. ಹಳ್ಳವು ಮಳೆಗಾಲದಲ್ಲಿ ತುಂಬಿ ಹರಿಯುವುದು, ಉಳಿದ ದಿನಗಳಲ್ಲಿ ಹಳ್ಳದ ನೀರು ಸಣ್ಣದಾಗಿ ನಿರಂತರವಾಗಿ ಹರಿಯುತ್ತಲೇ ಇರುತ್ತದೆ.

**೨. ಹರಿದ್ರಾತೀರ್ಥ**

ಪೂರ್ವಾಭಿಮುಖವಾಗಿರುವ ಹರಿದ್ರಾತೀರ್ಥವು ಬನಶಂಕರಿಗುಡಿಯ ಎದುರು ಇದೆ. ಹರಿದ್ರಾತೀರ್ಥವನ್ನು ಬನಶಂಕರಿ ಹೊಂಡ, ಹರಿಶ್ಚಂದ್ರ ತೀರ್ಥ ಎಂದು

ಕರೆಯಲಾಗುವುದು. ಚಚ್ಚೌಕು ಇರುವ ಈ ಹೊಂಡವು ೩೬೦ ಅಡಿ ಇದ್ದು, ಇದರ ಪರಮಾವಧಿ ಆಳವು ೨೫ ಅಡಿ. ಹೊಂಡಕ್ಕೆ ನಾಲ್ಕು ದಿಕ್ಕುಗಳಲ್ಲಿ ಭದ್ರವಾದ ಕಲ್ಲಿನ ಗೋಡೆಗಳನ್ನು ಶಂಕರಶೆಟ್ಟಿ, ಮತ್ತು ಚಂದ್ರಶೆಟ್ಟಿಯೆಂಬವರಿಬ್ಬರು ಜೈನ ಭಕ್ತರು ಸುಮಾರು ಸನ್ ೧೬೮೦ರಲ್ಲಿ ಕಟ್ಟಿಸಿದರು ಎಂದು ಹೇಳುತ್ತಾರೆ.[೧೪] ಪೂರ್ವದಿಕ್ಕಿನ ಗೋಡೆಯಲ್ಲಿ ಹೆಚ್ಚಿನ ನೀರು ಹರಿದು ಹೋಗಲಿಕ್ಕೆ ಮೂರು ಮಾರ್ಗಗಳನ್ನು ಮಾಡಿದ್ದಾರೆ. ಪೂರ್ವದಲ್ಲಿ ಹೊಂಡದ ಹೆಚ್ಚುವರಿ ನೀರು ಕ್ಷೇತ್ರದ ಪರಿಸರದಲ್ಲಿರುವ ತೋಟಗಳಿಗೆ ಪೂರೈಕೆ ಆಗುತ್ತಿತ್ತು. ಪ್ರಸ್ತುತ ನೀರಿನ ಪ್ರಮಾಣ ಕಡಿಮೆಯಿರುವುದರಿಂದ ನೀರಿನ ಪೂರೈಕೆ ಆಗುತ್ತಿಲ್ಲ. ಇದೇ ಭಾಗದಲ್ಲಿ ಸತ್ಯವ್ವನ ಪಾದಗಟ್ಟೆಯನ್ನು ಕಾಣಬಹುದು.

ತೀರ್ಥದ ಕಲ್ಲಿನ ಕಟ್ಟಡವು ವಿಜಯನಗರ ಶೈಲಿಯಲ್ಲಿದೆ. ಪ್ರಾಕೃತಿಕವಾದ ನೀರಿನ ಶಲಿಯನ್ನು ಹೊಂದಿರುವ ಪ್ರದೇಶದಲ್ಲಿ ಕಲ್ಯಾಣಿಯನ್ನು ನಿರ್ಮಿಸಲಾಗಿದ್ದು, ಅಲ್ಲಲ್ಲಿ ನೀರಿನ ಬುಗ್ಗೆಗಳಿದ್ದವು ಎಂದು ಸ್ಥಳೀಯರು ಹೇಳುತ್ತಾರೆ. ಕಲ್ಯಾಣಿಗೆ ಯಾವುದೇ ಋತುಮಾನಗಳಲ್ಲಿಯೂ ನೀರಿನ ಬರ ಇರಲಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಕೃತಕ ಬೋರವೆಲ್‌ಗಳಿಂದಾಗಿ ಅಂತರ್ಜಲ ಸಂಪೂರ್ಣವಾಗಿ ಬತ್ತಿ ಹೋಗಿ ಕಲ್ಯಾಣಿಯಲ್ಲಿ ನೀರು ಇರಲಿಲ್ಲ. ಈ ತೀರ್ಥವು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯಿಂದ ಸಂರಕ್ಷಿಸಲ್ಪಟ್ಟಿದೆ. ಇಲಾಖೆಯು ೧೯೯೨ರಲ್ಲಿ ತೀರ್ಥದಲ್ಲಿದ್ದ ಹೂಳನ್ನು ತೆಗೆಸಿ, ಸ್ವಚ್ಛಗೊಳಿಸಿತ್ತು. ಹಾಗೆಯೇ ತೀರ್ಥದ ಪಕ್ಕದಲ್ಲಿರುವ ಸರಸ್ವತಿ ಹಳ್ಳದಿಂದ ಕೊಳವೆಗಳ ಮೂಲಕ ತೀರ್ಥದಲ್ಲಿ ನೀರು ಬರುವಂತೆ ಮಾಡಿದರು. ಈಗ ತೀರ್ಥದ ನೀರನ್ನು ಬಳಸಲಾಗುತ್ತಿದೆ.

ಪುಷ್ಕರಣಿಗೆ ಬರಲು ಆಯತಾಕಾರದ ಮಂಟಪವಿದೆ. ತೀರ್ಥದ ಸುತ್ತಲಿರುವ ಕಂಬಗಳು ೫ ೧/೨ ಅಡಿ ಎತ್ತರ, ೧೦ ಇಂಚು ದಪ್ಪ, ಚೌಕಾಕಾರದ ೪೦೦ ಕಂಬಗಳಿವೆ. ಕಲ್ಲಿನ ಈ ಮಂಟಪವು ೮ ಅಡಿ ಎತ್ತರ, ೪ ೧/೨ ಅಡಿ ಅಗಲವಾಗಿದೆ. ಮಂಟಪವನ್ನು ಅಡ್ಡ ಕಂಬಗಳಿಂದ ಮೇಲ್ಛಾವಣಿಯನ್ನು ನಿರ್ಮಿಸಲಾಗಿರುವುದನ್ನು ಕಾಣಬಹುದು. ಮಂಟಪವು ಕಟಾಂಜನವನ್ನು ಒಳಗೊಂಡಿದೆ. ಕಲ್ಯಾಣಿಯಲ್ಲಿ ಮೇಲ್ಭಾಗದಿಂದ ತಳಭಾಗದವರೆ ಇಳಿದು ಬರಲು ಸಹಾಯಕವಾಗುವಂತೆ ನಾಲ್ಕು ದಿಕ್ಕುಗಳಲ್ಲಿ ೧೧ ಸಾಲು ಮೆಟ್ಟಲುಗಳಿವೆ. ತೀರ್ಥದಲ್ಲಿ ಪೂಜಾವಿಧಿ-ವಿಧಾನಗಳನ್ನು ತೆಪೋತ್ಸವ, ಗಂಗಾಪೂಜೆ, ಇನ್ನಿತರ ಪೂಜಾಕಾರ್ಯಗಳನ್ನು ಮಾಡಲಾಗುತ್ತದೆ.

**ಹರಿದ್ರಾತೀರ್ಥಕ್ಕೆ ಸಂಬಂಧಿಸಿದ ನಂಬಿಕೆಗಳು**

ಹರಿದ್ರಾತೀರ್ಥವನ್ನು ಸ್ವತಃ ಬನಶಂಕರಿ ದೇವಿಯೇ ಜಗತ್ತಿನ ಜನರ ಕಲ್ಯಾಣಕ್ಕಾಗಿಯೇ ನಿರ್ಮಿಸಿದ್ದಾಳೆ ಎಂದು ಸ್ಕಂದ ಪುರಾಣದಲ್ಲಿ ಉಲ್ಲೇಖವಿದೆ. ತೀರ್ಥದ ಬಗ್ಗೆ ಅನೇಕ ದಂತ ಕಥೆಗಳು ಜಾನಪದ ವಿಡಂಬನೆಗಳು ಅಲ್ಲದೆ ಇನ್ನೂ ಅನೇಕ ವಿಷಯಗಳು ಜನರ

ಮನದಾಳದಲ್ಲಿವೆ. ಅವುಗಳಲ್ಲಿ ಕೆಲವೊಂದನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ. ಪೂರ್ವದಲ್ಲಿ ಒಂದು ನೂರು ವರ್ಷ ಮಳೆ ಆಗದಿದ್ದರಿಂದ ಜೀವನಕ್ಕೆ ಆಧಾರವಾಗಿದ್ದ ನೀರು ಇಲ್ಲದೆ ಜಗತ್ತಿನಲ್ಲಿ ಪ್ರಾಣಿಗಳು ತಲ್ಲಣಿಸಿದವು. ಆಗ ಎಲ್ಲ ದೇವತೆಗಳು ಬನಶಂಕರಿಯನ್ನು ಪ್ರಾರ್ಥಿಸಲು ದೇವಿಯು ತನ್ನ ಶರೀರದಿಂದ ಪಲ್ಲೆಯನ್ನು (ಸಸ್ಯಗಳು) ಉತ್ಪನ್ನ ಮಾಡಿ ಜನರ ಹಸಿವನ್ನು ನೀಗಿಸಿದಳು. ಇದರಿಂದ ಬನಶಂಕರಿಗೆ ಶಾಕಂಭರೀ ಎಂಬ ಹೆಸರು ಬಂದಿತು. ದೇವಿಯ ದೇಹದ ಶಾಖದಿಂದ ನೀರು ಹರಿದು ಬಂದು ಇಲ್ಲಿ ಸಂಗ್ರಹವಾಯಿತು. ಆದ್ದರಿಂದ ಈ ಹೊಂಡಕ್ಕೆ ಹರಿದ್ರಾತೀರ್ಥವೆಂದು ಹೆಸರು ಬಂದಿದೆ ಎನ್ನುತ್ತಾರೆ.

ಮತ್ತೊಂದು ದಂತಕಥೆಯ ಪ್ರಕಾರ ಈ ತೀರ್ಥಕ್ಕೆ ಪಾತಾಳದಿಂದ ನೀರನ್ನು ತರಿಸಿದಳು. ಮತ್ತು ಎಷ್ಟೇ ವರ್ಷ ಮಳೆ ಬರದಿದ್ದರೂ ಇದರಲ್ಲಿಯ ನೀರು ಕಿಂಚಿತ್ತೂ ಕೂಡ ಕಡಿಮೆ ಆಗುವುದಿಲ್ಲ. ಹಾಗಾಗಿ ಈ ನೀರಿನಿಂದ ಬೇಕಾದ ಬೆಳೆಯನ್ನು ಬೆಳೆಸಿಕೊಳ್ಳಿ ಎಂದು ಹೇಳಿ ಅದೃಶ್ಯಳಾದಳು ಎಂಬುವ ಪ್ರತೀತಿಯಿದೆ.[೧೫] ಸಸ್ಯಪ್ರಪಂಚಕ್ಕೆ ಅಭಿಮಾನಿ ದೇವತೆಯೆನಿಸಿದ ಶಾಖಾಂಭರಿಯಾಗಿರುವುದನ್ನು ಈ ಮೊದಲೇ ಗಮನಿಸಿದ್ದೇವೆ. ಒಂಬತ್ತು ಬಗೆಯ ಸಸ್ಯಗಳನ್ನು ನವ ದುರ್ಗೆಯರೆಂದು ಹೇಳುವ ವಾಡಿಕೆಯಿದೆ. ಬಾಳೆ (ರಂಭಾ, ಬ್ರಹ್ಮಿಣೀ), ಕಚ್ವಿ (ಕಾಲಿಕಾ), ಅರಿಸಿಣ (ಹರಿದ್ರಾ, ದುರ್ಗಾ), ಜಯಂತಿ (ಕಾರ್ತಿಕೀ), ಬೇಲ (ಶಿವಾ), ದಾಳಿಂಬೆ (ರಕ್ತದಂತಿಕಾ), ಅಶೋಕ (ಶೋಕರಹಿತಾ), ಕುಂಬಳಕಾಯಿ (ಚಾಮುಂಡಾ), ಭತ್ತ (ಲಕ್ಷ್ಮೀ)[೧೬]

ಹೀಗೆ ಬನಶಂಕರಿಗೆ ವಿವಿಧ ನಾಮಗಳಿಂದ ಕರೆಯುವುದನ್ನು ಗಮನಿಸಿರುತ್ತೇವೆ. ತಿಲಕಾರಣ್ಯದಲ್ಲಿ ದೇವಿಯು ಸ್ಥಾಪಿಸಿದಳು ಎನ್ನಲಾದ ತೀರ್ಥಕ್ಕೆ, ದೇವಿಯ ನವದುರ್ಗಿಯರ ಹೆಸರಿನಲ್ಲಿ ಒಂದಾದ ಹರಿದ್ರಾ ಎಂಬುವ ಹೆಸರು ಇಟ್ಟಿರಬಹುದಾದ ಸಾಧ್ಯತೆ ಹೆಚ್ಚಿದೆ. ಹರಿದ್ರತೀರ್ಥದಲ್ಲಿ ಸ್ನಾನ ಮಾಡಿ ನಂತರ ದೇವಿಯ ದರ್ಶನವನ್ನು ಮಾಡಿದರೆ ಉತ್ತಮ ಫಲ ಸಿಗುತ್ತದೆ. ಅಲ್ಲದೆ ಎಲ್ಲ ಪಾಪಕರ್ಮಗಳು, ರೋಗಗಳು ನಿವಾರಣೆ ಆಗುತ್ತವೆ ಎಂಬ ನಂಬಿಕೆಯಿದೆ.

**೩. ತೈಲತೀರ್ಥ**

ಮೂಲ ಬನಶಂಕರಿ ಗುಡಿಯ ಎಡಭಾಗದಲ್ಲಿ ತೈಲತೀರ್ಥವಿದೆ. ಈಶಾನ್ಯ ದಿಕ್ಕಿನಲ್ಲಿರುವ ಈ ತೀರ್ಥವನ್ನು ಪ್ರವೇಶಿಸಲು ಸುತ್ತಲೂ ಮೆಟ್ಟಿಲುಗಳ ವ್ಯವಸ್ಥೆಯನ್ನು ಕಾಣಬಹುದು. ಸ್ಥಳೀಯವಾಗಿ ಈ ಹೊಂಡಕ್ಕೆ ಮುಸುರಿ ಹೊಂಡ ಎಂದು ಕರೆಯುತ್ತಾರೆ. ಕ್ಷೇತ್ರಕ್ಕೆ ಬಂದರು ತಾವು ತಂದ ಮೀಸಲು ಬುತ್ತಿಯ ಅಲ್ಪ ಪ್ರಮಾಣವನ್ನು ಈ ಹೊಂಡದಲ್ಲಿ ಹಾಕಿ, ನಂತರ ತಾವು ಸೇವಿಸುವ ಪದ್ಧತಿ ಇದೆ. ಈ ಹಿನ್ನೆಲೆಯಿಂದ ಹೊಂಡಕ್ಕೆ ಮುಸರಿ ಹೊಂಡ ಎಂದು ಹೆಸರು ಬಂದಿರಬಹುದು ಎಂದು ಹೇಳಲಾಗುವುದು. ಇದು ೪೮ ಅಡಿ

ಅಗಲ, ೪೦ ಅಡಿ ಉದ್ದವಾದ ವ್ಯಾಪ್ತಿಯನ್ನು ಒಳಗೊಂಡಿರುವುದು. ಅತ್ಯಂತ ಕಲಾತ್ಮಕವಾದ ಹೊಂಡ ಇದಾಗಿದೆ. ಹೊಂಡದ ಪಶ್ಚಿಮ ಭಾಗದ ಭಿತ್ತಿಯಯಲ್ಲಿ ತೀರ್ಥ ಪವಿತ್ರವೆಂದು ಭಾವಿಸಲು ಶಿವನ ಉಬ್ಬುಶಿಲ್ಪವನ್ನು ರಚನೆ ಮಾಡಿದ್ದಾರೆ. ರಾಟಿಯ ಸಹಾಯದಿಂದ ಹೊಂಡದ ನೀರನ್ನು ಮೇಲೆ ಎತ್ತುವ ವ್ಯವಸ್ಥೆಯನ್ನು ಮಾಡಲಾಗಿದೆ. ಪ್ರಸ್ತುತದಲ್ಲಿ ಈ ಹೊಂಡದ ನೀರನ್ನು ಉಪಯೋಗಿಸಲಾಗುತ್ತಿಲ್ಲ. ಹೊಂಡದ ನಿರ್ಮಾಣದ ಬಗೆಗೆ ಯಾವುದೇ ದಾಖಲಾತಿಗಳು ಈವರೆಗೂ ಸಿಕ್ಕಿಲ್ಲ.

**ತೈಲ ತೀರ್ಥಕ್ಕೆ ಸಂಬಂಧಿಸಿದ ನಂಬಿಕೆಗಳು**

ದುರ್ಗಮಾಸುರನೆಂಬ ರಾಕ್ಷಸನು ಈ ತೀರ್ಥದ ಸ್ಥಳದಲ್ಲಿ ಬ್ರಹ್ಮದೇವರನ್ನು ಕುರಿತು ತಪಸ್ಸನ್ನು ಮಾಡಿದನು. ಅವನ ತಪಸ್ಸಿಗೆ ಮೆಚ್ಚಿದ ಬ್ರಹ್ಮದೇವನು ಏನು ವರಬೇಕೆಂದು ಕೇಳಿದಾಗ ದುರ್ಗಮಾಸುರನು ನನಗೆ ಮನುಷ್ಯರಿಂದ ಮರಣವಾಗಾಬರದೆಂದು ಬೇಡಿದ. ಅದಕ್ಕೆ ಬ್ರಹ್ಮದೇವ ತಥಾಸ್ತು ಎಂದನು. ಹೀಗೆ ವರ ಪಡೆದ ದುರ್ಗಮಾಸುರನು ಎಲ್ಲರನ್ನು ಪೀಡಿಸತೊಡಗಿದನು. ಈ ಸಮಸ್ಯೆಯ ಪರಿಹಾರಕ್ಕೆ ಬನಶಂಕರಿ ಸಲಹೆಯಂತೆ ಬ್ರಹ್ಮದೇವ, ಇತರ ದೇವಾನುದೇವತೆಗಳು ಈ ಸ್ಥಳದಲ್ಲಿ ಯಜ್ಞವನ್ನು ಆರಂಭಿಸಿದರು. ದುರ್ಗಮಾಸುರನು ಸ್ತ್ರೀದೇವತೆಗಳನ್ನು ಕಂಡು ಮೋಹಿತನಾಗಿ ಅವರ ವಶಕ್ಕಾಗಿ ಸೇನಾಸಮೇತನಾಗಿ ಬಂದನು. ಆ ಸಂದರ್ಭದಲ್ಲಿ ಬನಶಂಕರಿಯು ನವಕೋಟಿ ಸಖಿಯರನ್ನು ಕೂಡಿ ದುರ್ಗಮಾಸರ ಮತ್ತು ಅವನ ಸೈನ್ಯವನ್ನು ಸೋಲಿಸಿದಳು. ನಂತರ ಆ ರಾಕ್ಷಸನನ್ನು ಸಂಹರಿಸುವಾಗ ನಿನ್ನ ಕೊನೆಯ ಇಚ್ಛೆಯನ್ನು ಹೇಳು ಎಂದಾಗ, ದುರ್ಗಾಮಾಸುರನು ಈ ಸ್ಥಳದಲ್ಲಿ ತೀರ್ಥವನ್ನು ಸೃಷ್ಟಿಸಿ ಆ ತೀರ್ಥಕ್ಕೆ ತೈಲ ತೀರ್ಥವೆಂತಲೂ, ಇಲ್ಲಿರುವ ವನಕ್ಕೆ ತಿಲಕವನವೆಂತಲೂ ಹೆಸರು ಉಂಟಾಗಲಿ, ತೀರ್ಥದಲ್ಲಿ ಸ್ನಾನ ಮಾಡಿದವರನ್ನು ಉದ್ಧರಿಸು ಎಂದು ಬೇಡಿಕೊಂಡನೆಂಬ ಪ್ರತೀತಿ ಇದೆ.[೧೭]

**೪. ಪದ್ಮತೀರ್ಥ**

ಬನಶಂಕರಿ ಗುಡಿಯ ಒಳ ಆವರಣದ ನೈರುತ್ಯ ದಿಕ್ಕಿನಲ್ಲಿ ಪದ್ಮತೀರ್ಥವಿದೆ. ಇದಕ್ಕೆ ಗಡಿಗಿ ಬಾವಿ ಎಂದು ಸ್ಥಳೀಯವಾಗಿ ಕರೆಯುತ್ತಾರೆ. ತೀರ್ಥವು ತಳಭಾಗದಲ್ಲಿ ಚೌಕಾಕಾರವಾಗಿದ್ದು, ತಳಭಾಗದಿಂದ ಮೇಲೆರುವಾಗ ಕಿರಿದಾಗಿ ಸಾಗಿ ಗಡಗಿ ಆಕಾರದಲ್ಲಿದೆ. ಆದ್ದರಿಂದ ಇದನ್ನು ಗಡಗಿ ಬಾವಿ ಎಂದು ಸ್ಥಳೀಯರು ಕರೆಯುತ್ತಾರೆ. ಚೌಕಾಕಾರದ ಈ ತೀರ್ಥವು ೮ ಅಡಿ ಅಗಲ, ೮ ಅಡಿ ಉದ್ದವಾಗಿದೆ. ತೀರ್ಥವು ಗುಡಿಯ ಒಳ ಆವರಣದಲ್ಲಿರುವುದರಿಂದ ರಕ್ಷಣಾ ದೃಷ್ಟಿಯಿಂದಾಗಿ ತೀರ್ಥದ ಸುತ್ತಲೂ ಇತ್ತೀಚೆಗೆ ಸುಮಾರು ೫ ಅಡಿ ಎತ್ತರದ ಗೋಡೆಯನ್ನು ರಚಿಸಿರುವುದನ್ನು ಕಾಣಬಹುದು. ತೀರ್ಥವನ್ನು

ಪ್ರವೇಶಿಸಲು ಕಿರಿದಾದ ದ್ವಾರವಿದ್ದು, ಅದಕ್ಕೆ ಮೆಟ್ಟಿಲುಗಳ ವ್ಯವಸ್ಥೆಯನ್ನು ಮಾಡಲಾಗಿದೆ. ದ್ವಾರದ ಬಾಗಿಲವಾಡದಲ್ಲಿ ನಾಲ್ಕು ಶಾಖೆಗಳನ್ನು ಹೊಂದಿದೆ. ಶಾಖೆಗಳಲ್ಲಿ ಲತಾ ಅಲಂಕರಣಗಳನ್ನು ಕಾಣುತ್ತೇವೆ. ಲಲಾಟದಲ್ಲಿ ಗಣೇಶ, ಇದರ ಇಕ್ಕಲಗಳಲ್ಲಿ ಪದ್ಮದಳ ಮತ್ತು ಲಕ್ಷ್ಮೀಯ ಉಬ್ಬುಶಿಲ್ಪಗಳಿವೆ. ಈ ತೀರ್ಥದ ವಿಶೇಷವೆಂದರೆ ಇಂದಿಗೂ ತೀರ್ಥದ ನೀರನ್ನು ದೇವಿಯ ಪೂಜೆಗೆ ಬಳಸುತ್ತಿರುವುದು ಹಾಗೂ ಮೋಟರ್ ಬಳಸಿ ತೀರ್ಥದ ನೀರನ್ನು ಗುಡಿಯ ಅಗತ್ಯ ಕಾರ್ಯಗಳಿಗೆ ಉಪಯೋಗಿಸಲಾಗುತ್ತಿದೆ.

**ಪದ್ಮತೀರ್ಥಕ್ಕೆ ಸಂಬಂಧಿಸಿದ ನಂಬಿಕೆಗಳು**

ವಿಂಧ್ಯಾಪರ್ವತದ ದಕ್ಷಿಣ ದಿಕ್ಕಿನಲ್ಲಿ ನಿರ್ಮಲ ಎಂಬ ಹೆಸರಿನ ಪಟ್ಟಣವಿತ್ತು. ಅಲ್ಲಿ ಪದ್ಮರಾಜನು ಆಳ್ವಿಕೆ ಮಾಡುತ್ತಿದ್ದನು. ಈತನು ಒಬ್ಬ ಋಷಿಯ ಅಪ್ಪಣೆಯ ಮೇರೆಗೆ ತನ್ನೆಲ್ಲ ಪಾಪಕರ್ಮಗಳನ್ನು ಹೋಗಲಾಡಿಸಿಕೊಳ್ಳಲು ಮತ್ತು ತನಗೆ ಪುತ್ರ ಪ್ರಾಪ್ತಿಯಾಗಲೆಂದು ಬನಶಂಕರಿ ಕ್ಷೇತ್ರಕ್ಕೆ ಬಂದ. ಈತನು ದೇವಿಯ ದರ್ಶನದಿಂದ ಪುನಿತನಾಗಿ, ದಿನವು ಭಕ್ತಿಯಿಂದ ಆಗಮ ವಿಧಿಗಳಿಂದ ದೇವಿಯನ್ನು ಪೂಜಿಸುತ್ತ ಅಲ್ಲಿಯೇ ವಾಸ್ತವ್ಯ ಹೂಡಿದನು. ಆದರೆ ಆತನ ರಾಜ್ಯದಲ್ಲಿ ಅರಾಜಕತೆಯು ತಲೆದೂರಿದ್ದ ವಿಷಯವನ್ನು ಪದ್ಮರಾಜನಿಗೆ ಆತನ ಮಂತ್ರಿಯು ತಿಳಿಸುತ್ತಾನೆ.

ಆ ಸಂದರ್ಭದಲ್ಲಿ ದೇವಿಯ ಮಂದಿರಕ್ಕೆ ಬಂದು ಅಲ್ಲಿ ಭಕ್ತಿಯಿಂದ ರಾಜನು ಬೇಡಿಕೊಂಡನು. ಆತನ ಭಕ್ತಿಗೆ ಮೆಚ್ಚಿದ ದೇವಿಯು ನಿನ್ನ ಕಷ್ಟಗಳೆಲ್ಲ ತಾವೇ ಪರಿಹಾರವಾಗುವುದೆಂದು ನುಡಿದಳು. ಹಾಗೆಯೇ ಅಲ್ಲಿಯವರೆಗೆ ರಾಜನು ಶ್ರೀ ಕ್ಷೇತ್ರದಲ್ಲಿ ದೇವಿಯ ಸೇವೆಯನ್ನು ಮಾಡುವಂತೆ ಆಜ್ಞಾಪಿಸಿದಳು. ಆ ಪ್ರಕಾರ ರಾಜನು ನಿತ್ಯದೇವಿಯ ಸೇವೆಯನ್ನು ಮಾಡಿದನು. ಕೆಲದಿನಗಳ ನಂತರ ರಾಜನ ಕಷ್ಟಗಳು ಪರಿಹಾರವಾಗಿ ಅವನಿಗೆ ಗಂಡು ಮಗು ಹುಟ್ಟಿತು. ಇದರಿಂದ ರಾಜನು ದೇವಿಯ ಮಂದಿರಕ್ಕೆ ಬಂದು ಮಂಗಳಾರತಿ ಹಾಡಿ ಪ್ರದಕ್ಷಣೆ ಹಾಕಿ ನಮಸ್ಕಾರ ಮಾಡಿದನು. ಕೆಲವು ದಿನಗಳ ನಂತರ ರಾಜನು ದೇವಿಯ ಅಪ್ಪಣೆಯ ಪ್ರಕಾರ ಪತ್ನಿ ಮತ್ತು ಪುತ್ರನ ಸಮೇತ ರಾಜಧಾನಿಗೆ ತೆರಳಿದನು. ಈತನ ಭಕ್ತಿಗೆ ಮೆಚ್ಚಿದ ದೇವಿಯು ಗುಡಿಯ ಆವರಣದಲ್ಲಿ ತೀರ್ಥಕ್ಕೆ ಪದ್ಮತೀರ್ಥ ಎಂದು ರಾಜನ ಹೆಸರನ್ನು ಇಟ್ಟಳು ಎಂಬುವ ಪದ್ಮರಾಜನ ಕಥೆಯನ್ನು ಅಗಸ್ತ್ಯ ಮುನಿಗಳು ಪತ್ನಿಲೋಪ ಮುದ್ರೆಗೆ ತಿಳಿಸಿದರು ಎಂದು ಹೇಳಲಾಗುತ್ತದೆ.[೧೮]

**೫. ಭಾನುತೀರ್ಥ**

ಬನಶಂಕರಿ ಗುಡಿಯ ಹಿಂಭಾಗದಲ್ಲಿರುವ ತೋಟದಲ್ಲಿ ಚೌಕಾಕಾರದ ಭಾನು ತೀರ್ಥವಿದೆ. ಕ್ಷೇತ್ರದ ಪಶ್ಚಿಮ ಭಾಗದಲ್ಲಿರುವ ಈ ಹೊಂಡ ೨೦ ಅಡಿ ಉದ್ದ, ೨೦ ಅಡಿ ಅಗಲವಾದ ಸುಮಾರು ೪೦ ಅಡಿ ಆಳವನ್ನು ಒಳಗೊಂಡಿರುವುದನ್ನು ಕಾಣಬಹುದು.

ಈ ಹೊಂಡಕ್ಕೆ ಸುಮಾರು ೫ ಅಡಿ ಎತ್ತರವಾದ ಭದ್ರವಾದ ಗೋಡೆಯನ್ನು ಮಣ್ಣು, ಕಲ್ಲುಗಳನ್ನು ಬಳಸಿ ಕಟ್ಟಲಾಗಿದೆ. ಬಾವಿಯಲ್ಲಿನ ನೀರನ್ನು ಮೇಲೆ ಎತ್ತಲು ರಾಟಿಗಳನ್ನು ನಿರ್ಮಿಸಲಾಗಿದೆ. ಪ್ರಸ್ತುತ ರಾಟಿಯ ಬದಲಿಗೆ ಮೋಟರ್‌ನ್ನು ಬಳಸಿ ನೀರನ್ನು ಮೇಲೆತ್ತಿ ಕೊಳವೆಗಳ ಮೂಲಕ ತೋಟಗಳಿಗೆ ಬಳಸಲಾಗುತ್ತಿದೆ. ಹೊಂಡದ ನೀರನ್ನು ತರಲು ಇಳಿಯಲಿಕ್ಕೆ ಮೆಟ್ಟಿಲುಗಳ ವ್ಯವಸ್ಥೆ ಮಾಡಿರುವರು. ಈ ಹೊಂಡವನ್ನು ೧೮೫೭ರಲ್ಲಿ ಜೀರ್ಣೋದ್ಧಾರ ಮಾಡಿದ್ದಾರೆ. ಹೊಂಡಕ್ಕೆ ಮಲೆಯಮ್ಮನ ಬಾವಿ ಎಂದು ಸ್ಥಳೀಯರು ಕರೆಯುತ್ತಾರೆ. ಹೊಂಡದ ಹಿಂಭಾಗದಲ್ಲಿ ತೋಟಗಳ ಮಧ್ಯ ಮಲೆಯಮ್ಮನ ದೇವಾಲಯವಿದ್ದು, ಆ ಗುಡಿಯ ನಿತ್ಯ ನಿರ್ವಹಣೆಗಾಗಿ ಈ ಹೊಂಡದ ನೀರನ್ನು ಉಪಯೋಗಿಸಲಾಗುತ್ತಿದೆ. ಆ ಕಾರಣಕ್ಕಾಗಿಯೇ ಈ ಹೊಂಡಕ್ಕೆ ಮಲೆಯಮ್ಮನ ಬಾವಿ ಎಂದೂ ಸಹ ಕರೆಯುತ್ತಾರೆ.

**ಭಾನುತೀರ್ಥಕ್ಕೆ ಸಂಬಂಧಿಸಿದ ನಂಬಿಕೆಗಳು**

ಭಾನು ಎಂಬ ಹೆಸರಿನ ಬ್ರಾಹ್ಮಣನಿದ್ದನು. ಈತನು ಹುಟ್ಟು ಕುರುಡನಾಗಿದ್ದರೂ ಸಹ ಸಕಲ ವೇದಶಾಸ್ತ್ರಗಳಲ್ಲಿ ಪರಿಣಿತನಾಗಿದ್ದ. ಆದರೆ ಬಡತನ ಅವನನ್ನು ಕಾಡುತ್ತಿತ್ತು. ಇದರಿಂದ ತನ್ನ ದಾರಿದ್ರ್ಯವನ್ನು ಹೋಗಲಾಡಿಸಿಕೊಳ್ಳಲು ತಿಲಕಾರಣ್ಯದಲ್ಲಿರುವ ಶ್ರೀ ಬನಶಂಕರಿ ಕ್ಷೇತ್ರಕ್ಕೆ ಬಂದು ತಪಸ್ಸನ್ನು ಮಾಡಿದ. ಪ್ರಸನ್ನಳಾದ ದೇವಿಯು ಆತನಿಗೆ ವರವನ್ನು ನೀಡಿ, ಅಂಧತ್ವವನ್ನು ದೂರ ಮಾಡಿದಳು. ಅಲ್ಲದೆ ಆತನನ್ನು ಸಿರಿವಂತನ್ನಾಗಿಸಿದಳು ಎಂಬ ನಂಬಿಕೆಯಿದೆ. ದೇವಿಯು ಈತನ ತಪಸ್ಸನ್ನು ಮೆಚ್ಚಿ ಕ್ಷೇತ್ರದಲ್ಲಿರುವ ತೀರ್ಥಕ್ಕೆ ಆತನ ಹೆಸರನ್ನು ಇಟ್ಟಳು ಎಂಬ ಪ್ರತೀತಿಯುಂಟು. ಈ ತೀರ್ಥದಲ್ಲಿ ಸ್ನಾನ ಮಾಡುವವರಿಗೆ ಸಕಲ ಮನೋರಥಗಳ ಸಿದ್ಧಿ ಮತ್ತು ಸರ್ವ ರೋಗಗಳು ನಿವಾರಣೆಯಾಗುತ್ತವೆ ಎಂಬ ನಂಬಿಕೆಯಿದೆ.[೧೯]

**೪.೫. ಮೂರ್ತಿ ಶಿಲ್ಪ**

ಧಾರ್ಮಿಕ ವಿಧಿಗಳೇನು ನಿನ್ನೆ ಮೊನ್ನೆಯವಲ್ಲ. ಮನುಷ್ಯನು ಭೂಮಿಯ ಮೇಲೆ ವಾಸಿಸಲು ಆರಂಭಿಸಿದ ಹೊಸತರಲ್ಲಿಯೇ, ಎಂದರೆ ಹಳೆಯ ಶಿಲಾಯುಗದಲ್ಲಿಯೇ ಸುಮಾರು ಮೂರು ಲಕ್ಷ ಐವತ್ತು ಸಾವಿರ ವರ್ಷಗಳ ಪೂರ್ವದಲ್ಲಿಯೇ ಧಾರ್ಮಿಕ ವಿಧಿಗಳನ್ನು ಮನುಷ್ಯ ಕಂಡುಕೊಂಡದ್ದು ತಿಳಿದುಬರುತ್ತದೆ.[೨೦] ಮಾನವನು ಧರ್ಮದ ನೆಲೆಯಲ್ಲಿ ತನ್ನ ನೆಮ್ಮದಿಯನ್ನು ಕಂಡುಕೊಂಡಿದ್ದರಿಂದ ದೇವಾಲಯ, ಮೂರ್ತಿ ಶಿಲ್ಪಗಳ ರಚನೆಗೆ ಹೆಚ್ಚು ಆದ್ಯತೆಯನ್ನು ನೀಡಿದ್ದಾನೆ. ದೇವತಾರಾಧನೆ ಹಾಗೂ ವ್ಯವಸ್ಥಿತ ದೇವಾಲಯಗಳ ನಿರ್ಮಾಣ ಎಂದು ಆರಂಭವಾಯಿತೋ ಅಂದಿನಿಂದ ದೇವಾತಾ ಮೂರ್ತಿಗಳ ಪ್ರತಿಷ್ಠಾಪನೆ ಮತ್ತು ಆರಾಧನೆ ನಡೆದೇಯಿದೆ. ಯಾವುದೇ ಪಂಥದ ದೇವಾಲಯವಿರಲಿ ಆ

ದೇವಾಲಯಕ್ಕೊಂದು ದೇವತಾಮೂರ್ತಿ ಇದ್ದೇ ಇರುವುದು. ಈ ರೀತಿಯ ಮೂರ್ತಿಗಳನ್ನು ಕುರಿತು ಶಾಸ್ತ್ರೀಯವಾಗಿ ಅಧ್ಯಯನ ಮಾಡುವ ಶಾಸ್ತ್ರವನ್ನು ಸ್ಥೂಲವಾಗಿ ಮೂರ್ತಿಶಾಸ್ತ್ರ ಎಂದು ಕರೆಯುತ್ತಾರೆ.

ಮೂರ್ತಿ ಶಿಲ್ಪಕ್ಕೆ ಪ್ರಾಗಿತಿಹಾಸಿಕ ಕಾಲದಿಂದಲೂ ಆಧಾರಗಳು ದೊರಕುತ್ತವೆ. ಭಾರತದ ವಿವಿಧ ನೆಲೆಗಳ ಉತ್ಖನನದಿಂದ ಹಲವಾರು ಮಾಹಿತಿಗಳು ದೊರಕಿವೆ. ಬಿಹಾರ ರಾಜ್ಯದ ಚಿರಾಂಡ, ರಾಜಸ್ಥಾನದ ಅಹಾರ್, ಮಧ್ಯಪ್ರದೇಶದ ಕಾಯಥ, ನವದಾತೋಲಿ ಹಾಗೂ ಪ್ರಕಾಶ ಮತ್ತು ಮಹಾರಾಷ್ಟ್ರದ ನೆಸವಾ, ಇನಾಂಗಾಂವ್, ಉತ್ತರ ಪ್ರದೇಶದ ಲಾಲ್‌ಖಿಲಾದಲ್ಲಿ ಪ್ರಾಣಿ ಮತ್ತು ಮಾತೃದೇವತೆಯ ಮಣ್ಮೂರ್ತಿಗಳು ದೊರೆತಿವೆ. ಹಾಗೂ ಗಂಗಾ ಬಯಲಿನ ಪಟ್ಟಣಗಳಾದ ಮಥುರಾ, ಅಹಿಚ್ಛತ್ರ ಮೊದಲಾದ ಪಟ್ಟಣಗಳಲ್ಲಿ ಕ್ರಿ.ಪೂ. ೫ನೇ ಶತಮಾನದಿಂದಲೇ ಮಣ್ಮೂರ್ತಿಗಳನ್ನು ಪತ್ತೆ ಹಚ್ಚಲಾಗಿದೆ. ಇವುಗಳ ನಂತರದ ಭಾರತೀಯ ಮೂರ್ತಿ ಶಿಲ್ಪಗಳ ಲಕ್ಷಣಗಳಿಗೆ ಪ್ರೇರಕವಾಗಿವೆ. ಕರ್ನಾಟಕದ ಕುಪ್ಪಗಲ್, ಪಿಕ್ಲಿಹಾಳ, ಸಂಗನಕಲ್ಲು, ತೆಕ್ಕಲಕೋಟೆ ಮುಂತಾದ ಕಡೆ ನಡೆದ ಉತ್ಖನನಗಳಿಂದ ನೂತನ ಶಿಲಾಯುಗ ಮತ್ತು ಶಿಲಾ ತಾಮ್ರಯುಗಕ್ಕೆ ಸೇರಿದ ಸುಡಾವೆ ಮಣ್ಣಿನ ಗೊಂಬೆಗಳು ದೊರೆತಿವೆ.[೨೧] ಅವುಗಳಲ್ಲಿ ಎತ್ತು, ಕುರಿ, ಪಕ್ಷಿ, ಮನುಷ್ಯನ ಆಕೃತಿಗಳು ಮುಖ್ಯವಾಗಿ ಕಂಡುಬಂದಿರುವುದನ್ನು ಕಾಣಬಹುದು.

ಮೂರ್ತಿಗಳು ಅಂದಿನ ಧಾರ್ಮಿಕ ನಂಬಿಕೆ, ಭಾವನೆ ಮತ್ತು ಪರಂಪರೆಯನ್ನು ಸೂಚಿಸುವ ಆಕರಗಳಾಗಿರುವುದಷ್ಟೇ ಅಲ್ಲದೇ, ಕರ್ನಾಟಕ ಮೂರ್ತಿಶಿಲ್ಪದ ಪೂರ್ವಭಾವಿ ಹಂತವನ್ನು ಸೂಚಿಸುತ್ತವೆ.[೨೨] ಭಾರತೀಯ ಮೂರ್ತಿಶಿಲ್ಪದಲ್ಲಿ ಕರ್ನಾಟಕದ ಮೂರ್ತಿ ಶಿಲ್ಪಕ್ಕೆ ತನ್ನದೇ ಆದ ವಿಶಿಷ್ಟ ಸ್ಥಾನವಿದೆ. ಭಾರತದ ಇತರ ಪ್ರದೇಶಗಳಲ್ಲಿ ದೊರೆಯುವ ಸ್ಮಾರಕ ಶಿಲೆಗಳಿಗಿಂತ ಪ್ರಬುದ್ಧ ನಿರೂಪಣಾ ಶೈಲಿಯು, ಜೀವಂತ ಭಾವಾಭಿವ್ಯಕ್ತಿಯನ್ನು ನಾವು ಕರ್ನಾಟಕದ ಸ್ಮಾರಕ ಶಿಲೆಗಳ ಶಿಲ್ಪದಲ್ಲಿ, ಶಿಲ್ಪ ವಿನ್ಯಾಸ ಕ್ರಮದಲ್ಲಿ ಗುರುತಿಸಬಹುದು. ಕರ್ನಾಟಕದಲ್ಲಿ ಚಾಲುಕ್ಯರ ಕಾಲದಲ್ಲಿ ಶಿಲ್ಪಕಲೆಯು ಉತ್ಕೃಷ್ಟವಾಗಿ ಬೆಳೆಯಿತು ಎನ್ನಬಹುದಾಗಿದೆ.

ಇತಿಹಾಸ ರಚನೆಯಲ್ಲಿ ಶಿಲ್ಪಗಳು ಪ್ರಮುಖ ಆಕರ ಸಾಮಗ್ರಿಗಳಾಗಿವೆ. ಸಾಹಿತ್ಯ, ಶಾಸನಗಳಲ್ಲಿ ಉಲ್ಲೇಖವಾಗದೇ ಇರುವ ಹಲವು ವಿಷಯಗಳನ್ನು ನಾವು ಶಿಲ್ಪಗಳಿಂದ ತಿಳಿಯಬಹುದು. ಅವುಗಳಿಂದ ಅಂದಿನ ಸಾಮಾಜಿಕ, ಧಾರ್ಮಿಕ ಸ್ಥಿತಿಯನ್ನು ಅರಿತುಕೊಳ್ಳಲು ಸಾಧ್ಯವಾಗಿದೆ.

ಬನಶಂಕರಿ ಪರಿಸರದಲ್ಲಿರುವ ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯರ ಹಾಗೂ ಪೇಶ್ವೆಗಳ ಕಾಲಾವಧಿಯ ದೇವಾಲಯಗಳಲ್ಲಿ ಶಿಲ್ಪಗಳ ಅಭಿವ್ಯಕ್ತಿ ಕಡಿಮೆಯಿದೆ. ಲಭ್ಯವಿರುವ ಶಿಲ್ಪಗಳು

ಭಾಗಶಃ ನಶಿಸಿರುವ ಸ್ಥಿತಿಯಲ್ಲೇ ಹೆಚ್ಚು ದೊರಕಿವೆ. ಈ ಪರಿಸರದಲ್ಲಿರುವ ದೀಪಮಹಲ್‌ನಲ್ಲಿ ಅಧಿಕ ಸಂಖ್ಯೆಯ ಉಬ್ಬು ಶಿಲ್ಪಗಳನ್ನು ಕಾಣಬಹುದು. ಬನಶಂಕರಿ ಕ್ಷೇತ್ರದಲ್ಲಿರುವ ಶಿಲ್ಪಗಳನ್ನು ಸ್ಥೂಲವಾಗಿ ಧಾರ್ಮಿಕ ಶಿಲ್ಪಗಳು, ಲೌಕಿಕ ಶಿಲ್ಪಗಳು ಎಂದು ವಿಂಗಡಿಸಬಹುದು.

**I. ಧಾರ್ಮಿಕ ಶಿಲ್ಪಗಳು**

**ಬನಶಂಕರಿ ಮೂರ್ತಿ ಹಿನ್ನೆಲೆ**

ಸೃಷ್ಟಿಕರ್ತೆ ಎಂದು ಭಾವಿಸಿರುವ ಬನಶಂಕರಿಯನ್ನು ಆರಾಧಿಸಲು ದೇವಿಗೆ ಆಕಾರವನ್ನು ನೀಡಿ ಪೂಜಿಸುತ್ತಿರುವುದನ್ನು ಕಾಣುತ್ತೇವೆ. ಆದರೆ ಜಗತ್ತಿನ ಸೃಷ್ಟಿಗೆ ಕಾರಣಳಾದ ಈಕೆಗೆ ನಿರ್ದಿಷ್ಟ ಆಕಾರವನ್ನು ನೀಡಲು ಸಾಧ್ಯವಿದೆಯೇ? ಆಕಾರ ನೀಡುವುದಾದರೆ ಯಾವ ಆಕಾರವನ್ನು ನೀಡುವುದು ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ಪೂರ್ವದಲ್ಲಿ ಆದಿಶಕ್ತಿಯನ್ನು ನಿರಾಕಾರವಾಗಿ ಪೂಜಿಸಲ್ಪಟ್ಟಿರಬಹುದು. ಇದಕ್ಕೆ ನಿದರ್ಶನವಾಗಿ ಅನೇಕ ಗ್ರಾಮಗಳಲ್ಲಿ ಇಂದಿಗೂ ದುಂಡುಕಲ್ಲುಗಳನ್ನು ಪೂಜಿಸುವ ದೇವಾಲಯಗಳಿವೆ. ಆದಿಶಕ್ತಿಯು ನಿರಾಕಾರಳು ಎಂಬುವುದನ್ನು ಇದು ಸೂಚಿಸುತ್ತದೆ. ದೇವಿಯು ಜಗತ್ತಿನ ರಚನೆಗೆ ಕಾರಣ ಎಂಬುವುದನ್ನು ವ್ಯಕ್ತಪಡಿಸಲು ಮೀಸೆ, ಸ್ತನಗಳಿರುವ ವಿಗ್ರಹಗಳನ್ನು ರಚನೆ ಮಾಡಲು ಮುಂದಾದರು. ಅಂದರೆ ಆಕೆಯು ಸ್ತ್ರೀ – ಪುರುಷನ ಸಮೀಕರಣವಾದವಳು ಎಂದು ತಿಳಿಯುತ್ತದೆ. ಇಂತಹ ಲಕ್ಷಣಗಳಿರುವ ಅನೇಕ ವಿಗ್ರಹಗಳು ನಮ್ಮ ನಾಡಿನ ಹಲವು ಭಾಗಗಳಲ್ಲಿ ದೊರೆಯುತ್ತವೆ. ಇನ್ನು ಪುರಾಣಗಳು ರಚನೆಯಾದ ನಂತರ ದೇವಿಗೆ ಜಗದಂಬೆ, ಮಹಾಕಾಳಿ, ಕಾಳಿ, ಮಹಾಮಾಯಿ, ಲಕ್ಷ್ಮೀ, ಸರಸ್ವತಿ, ಆದಿಶಕ್ತಿ, ಚಾಮುಂಡಿ, ಶಾಖಾಂಭರಿ, ಬನಶಂಕರಿ ಎಂಬ ನಾಮರೂಪಗಳನ್ನು ಪಡೆದು ಆರಾಧಿತಳಾಗಿದ್ದಾಳೆ. ಪ್ರಸ್ತುತ ಅಧ್ಯಯನದ ವ್ಯಾಪ್ತಿ, ಅವಧಿಯ ಪರಿಮಿತಿಯಿಂದ ಬನಶಂಕರಿ ಕ್ಷೇತ್ರದಲ್ಲಿರುವ ದೇವಿ ಶಿಲ್ಪಗಳನ್ನು ಮಾತ್ರ ಗಮನಿಸಲಾಗುವುದು. ಬನಶಂಕರಿಯ ಕ್ಷೇತ್ರದಲ್ಲಿ ಇದುವರೆಗೂ ಮೂಲ ಬನಶಂಕರಿಯ ಪ್ರಾಚೀನ ವಿಗ್ರಹವು ಲಭ್ಯವಾಗಿಲ್ಲ. ಆದರೆ ಎರಡನೆಯ ವಿಗ್ರಹವೆಂದು ಹೇಳಬಹುದಾದ ಕಾಳಿ ವಿಗ್ರಹವು ಲಭ್ಯವಾಗಿದೆ.

**೧. ಕಾಳಿ ವಿಗ್ರಹ**

ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯು ೧೯೯೨ರಲ್ಲಿ ಬನಶಂಕರಿ ದೇವಸ್ಥಾನದ ಹರಿದ್ರಾತೀರ್ಥವನ್ನು ಸ್ವಚ್ಛಗೊಳಿಸುವಾಗ ಒಂದು ಮರಳುಗಲ್ಲಿನ ಕಾಳಿ ವಿಗ್ರಹ ದೊರಕಿದೆ. ವಿಗ್ರಹವು ಸುಮಾರು ೪ ಅಡಿ ಎತ್ತರ, ೩ ಅಡಿ ಅಗಲ ೧ ೧/೨ ಅಡಿ ದಪ್ಪವಿದೆ. ಪ್ರಸ್ತುತ ಈ ವಿಗ್ರಹವನ್ನು ಬಾದಾಮಿ ಪುರಾತತ್ವ ವಸ್ತು ಸಂಗ್ರಹಾಲಯದಲ್ಲಿ ನೋಡಬಹುದು. ಕಿರೀಟಧಾರಿ ದೇವಿ ಮೂರ್ತಿಯ ಎರಡು ಕೈಗಳು, ಸ್ತನಗಳು ಹಾಳಾಗಿವೆ. ಮೂರ್ತಿಯ ಬಲಗೈಗಳಲ್ಲಿ ಖಡ್ಗ, ಗಂಟ, ಪಾಶ, ಎಡಗೈಯಲ್ಲಿ ರುಂಡ, ಗುರಾಣಿ,

ಡಮರು ಹಿಡಿದಿರುವಂತೆ ಕೆತ್ತಲಾಗಿದೆ. ಕಾಳಿ ವಿಗ್ರಹವು ಕೋರೆಹಲ್ಲು, ರುಂಡಮಾಲೆಗಳನ್ನು ಧರಿಸಿ, ರುದ್ರ ರೂಪದಲ್ಲಿರುವಂತೆ ಶಿಲ್ಪವನ್ನು ರಚಿಸಿದ್ದಾರೆ. ಮೂರ್ತಿಯು ಭಗ್ನಗೊಂಡ ಕಾರಣಕ್ಕಾಗಿ ಪುಷ್ಕರಣಿಯಲ್ಲಿ ವಿಸರ್ಜಿಸಿರಬಹುದು.

ಮಹಾರಾಜಿಕ (ಮುತ್ತಿಗೆ)ದಿಂದ ಬನದೇವಿಯ ದೇವಾಲಯವು ನಾಶವಾಯಿತೆಂದು ಅಚ್ಚುತರಾಯನ ಶಾಸನದಿಂದ ಸ್ಪಷ್ಟವಾಗುತ್ತದೆ. ಆದರೆ ಶಿಲ್ಪವು ಭಿನ್ನವಾದ ಬಗ್ಗೆ ನಿಶ್ಚಿತವಾಗಿ ತಿಳಿದುಬರುದಿಲ್ಲ. ಆದರೂ ಆ ಬಗ್ಗೆ ಸುಳಿವುಂಟು. ಶಾಸನ ಪಠ್ಯದ ಸಾಲೊಂದು ತ್ರಟಿತವಾಗಿದ್ದು..... ಪ್ರತಿಷ್ಟೆ ಮಾಡ ಹೇಳಿ ಎಂದಿರುವುದರಿಂದ ತ್ರುಟಿತಗೊಂಡ ಭಾಗದಲ್ಲಿ ಶಿಲ್ಪದ ಪ್ರಸ್ತಾಪವೇ ಇರಬಹುದು. ದೇವಾಲಯವನ್ನು ಹಾಳು ಮಾಡಿದ ಧರ್ಮಾಂದರು ಮೂಲ ವಿಗ್ರಹವನ್ನು ಹಾಳು ಮಾಡಿರುವ ಸಾಧ್ಯತೆಗಳಿವೆ ಎಂದಿದ್ದಾರೆ.[೨೩] ಆದ್ದರಿಂದ ಬನಶಂಕರಿ ಮೂಲಗುಡಿಯಲ್ಲಿ ಪೂಜಿಸಲ್ಪಟ್ಟ ಎರಡನೆಯ ವಿಗ್ರಹ ಇದಾಗಿರುವ ಸಾಧ್ಯತೆಗಳಿವೆ.

ಅನಂತರ ಈ ವಿಗ್ರಹವೂ ಕೂಡ ಯಾವುದೋ ಕಾರಣಕ್ಕೆ ಭಗ್ನಗೊಂಡಿರುವುದರಿಂದ ಅದನ್ನು ಪೂಜೆಗೆ ಅನರ್ಹವೆಂದು ಭಾವಿಸಿ, ಹೊಂಡದಲ್ಲಿ ವಿಸರ್ಜಿಸಿರಬಹುದು. ಪುರಾಣ ಕಥೆಯಲ್ಲಿ ಇದರ ಬಗ್ಗೆ ಸೂಚನೆ ಇರುವುದನ್ನು ಕಾಣುತ್ತೇವೆ. ಕಥೆಯಲ್ಲಿ ಹೇಳಿರುವಂತೆ ನೂರು ವರ್ಷಗಳ ಕಾಲ ಬರಗಾಲವಿದ್ದ ಸಂಗತಿಯು[೩೪] ಹಲವಾರು ವರ್ಷಗಳವರೆಗೆ ಈ ಗುಡಿಯಲ್ಲಿ ಯಾವುದೇ ಪೂಜಾ ವಿಧಿಗಳು ನಡೆದಿಲ್ಲವೆಂದು ಸೂಚಿಸುತ್ತದೆ. ಮತ್ತೊಂದು ದಂತಕಥೆಯ ಪ್ರಕಾರ ಪೂರ್ವದಲ್ಲಿ ದೇವಿಗೆ ನೈವೇದ್ಯವಾಗಿ ಅರ್ಪಿಸಿದ ಫಲ ಕಾಣಿಕೆಯನ್ನು ಅರ್ಚಕರ ಮಗುವೊಂದು ತಿಂದುಬಿಟ್ಟಿತಂತೆ. ಇದರಿಂದ ಕುಪಿತಗೊಂಡ ಬನದೇವಿಯು ಆ ಮಗುವನ್ನು ನುಂಗತೊಡಗಿದಳು. ಆಗ ಬಂದ ಅರ್ಚಕರು ಆ ದೃಶ್ಯಯವನ್ನು ನೋಡಿದಾಗ ಮಗುವಿನ ಕಾಲಲ್ಲಿಯ ಕಾಲ್ಗಡಗಗಳು ದೇವಿಯ ಬಾಯಿಯ ಹೊರಗೆ ಉಳಿದಿದ್ದು, ದೇಹದ ಉಳಿದ ಭಾಗವನ್ನು ನುಂಗಿದ್ದಳು. ಹೀಗೆ ದೇವಿಯ ಉಗ್ರ ಸ್ವರೂಪವನ್ನು ಕಂಡು ಭಯಬೀತಗೊಂಡ ಅರ್ಚಕರು ಹಾಗೂ ಭಕ್ತರೆಲ್ಲರೂ ಭಕ್ತಿಪೂರ್ವಕರಾಗಿ ಪ್ರಾರ್ಥಿಸಿದರಿಂದ ದೇವಿಯು ಮಗುವನ್ನು ಸಜೀವವಾಗಿ ಹಿಂತಿರುಗಿಸಿದಳು ಎಂಬ ಪ್ರತೀತಿ ಇದೆ.

ಹಾಗೆಯೇ ದೇವಿಯ ಆ ಉಗ್ರ ಸ್ವರೂಪವು ಅನೇಕ ದಿನಗಳವರೆಗೂ ಮುಂದುವರೆಯಿತು. ಅದನ್ನು ನೋಡಿ ದೇವತೆಗಳು ದೇವಿಯ ಅನುಗ್ರಹಕ್ಕೆ ಪಾತ್ರನಾದ 'ತ್ರಿದಂಡಿ' ಮುನಿಯನ್ನು ಕೇಳಿಕೊಂಡರು. ಆಗ ಮುನಿಯು ಅನನ್ಯವಾಗಿ ಪ್ರಾರ್ಥಿಸಿದರಿಂದ ಸೌಮ್ಯ ರೂಪವನ್ನು ತಾಳಿದಳೆಂದು ಹೇಳಲಾಗುತ್ತದೆ.[೨೫] ಹೀಗೆ ದೇವಿಯ ಉಗ್ರ ಸ್ವರೂಪದ ವಿಗ್ರಹವನ್ನು ಹೊಂಡದಲ್ಲಿ ವಿಸರ್ಜಿಸಿ, ಶಾಂತ ಸ್ವರೂಪಿ ದೇವಿಯ ವಿಗ್ರಹದ ರಚನೆ ಮಾಡಿರಬಹುದಾದ ಸಾಧ್ಯತೆಗಳಿವೆ.

ಮತ್ತೊಂದು ಅಭಿಪ್ರಾಯದಂತೆ ೧೬, ೧೭ನೇ ಶತಮಾನದಲ್ಲಿ ಈ ಪರಿಸರದಲ್ಲಿ ವಿಜಯನಗರ, ಮರಾಠಾ ಹಾಗೂ ಆದಿಲ್‌ಶಾಹಿ ರಾಜರ ನಡುವೆ ಪರಸ್ಪರ ವೈರತ್ವದಿಂದ ಘರ್ಷಣೆಗಳು ಆರಂಭಗೊಂಡಿತ್ತು. ಇದರಿಂದ ಊರಿನಿಂದ ಬಹುದೂರವಿದ್ದ, ಕಾಡಿನ ಮಧ್ಯದಲ್ಲಿದ್ದ ದೇವಿಯ ದೇವಾಲಯದ ಮೇಲೆ ಧರ್ಮಾಂದರು ಹಲವು ಬಾರಿ ದಾಳಿ ಮಾಡಿರಬಹುದು. ಗುಡಿಯನ್ನು ಹಾಳು ಮಾಡಿದವರು ಮೂರ್ತಿಯನ್ನು ಭಗ್ನಗೊಳಿಸಿರಬಹುದು. ಈ ಕಾರಣಕ್ಕಾಗಿ ವಿಜಯನಗರದ ಅರಸ ಅಚ್ಚುತರಾಯನು ಬಾದಾಮಿ ಕೋಟೆ, ಬನದದೇವಿಯ ಗುಡಿಯ ಜೀರ್ಣೋದ್ಧಾರ ಮಾಡಿಸಿದ ಬಗ್ಗೆ ಶಾಸನ ಉಲ್ಲೇಖಿಸುತ್ತದೆ. ಹೀಗೆ ದಾಳಿಗೆ ತುತ್ತಾಗಿರಬಹುದಾದ ಎರಡನೆಯ ದೇವಿಯ ವಿಗ್ರಹವು ಭಗ್ನಗೊಂಡಿದ್ದರಿಂದ ಹೊಸ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಿರಬಹುದು.

ಹೀಗೆ ಮೂರನೆಯ ಬಾರಿ ಪ್ರತಿಷ್ಠಾಪನೆಗೊಂಡು ಇಂದು ಪೂಜೆಗೊಳ್ಳುತ್ತಿರುವ ಬನಶಂಕರಿ ದೇವಿಯ ವಿಗ್ರಹವಾಗಿದೆ. ಜೇಮ್ಸ್ ಕ್ಯಾಂಪ್‌ಬೆಲ್‌ರವರ ಗ್ಯಾಸೆಟಿಯರ್‌ನಲ್ಲಿರುವಂತೆ "About 1750 one Parashuram naik Anagale of Satara Came to pay his Devotions to the Goddess and Finding her Temple ruinonus, built a new temple at the request of the Goddess in Which he placed her image, repaired the lake and built the great door of the temple enclosure"[೨೬] ಹೀಗೆ ಪ್ರಸ್ತುತ ಪೂಜೆಗೊಳ್ಳುತ್ತಿರುವ ದೇವಿಯ ಗುಡಿ ಹಾಗೂ ವಿಗ್ರಹವನ್ನು ಕ್ರಿ.ಶ. ೧೭೫೦ರಲ್ಲಿ ಸತಾರೆಯ ಪರುಷರಾಮ ನಾಯಕ ಅನಗಳೆ ಎಂಬಾತನು ಕಟ್ಟಿಸಿರುವ ಬಗ್ಗೆ ತಿಳಿಸುತ್ತದೆ. ಹಾಗೆಯೇ ದೇವಿಯ ಪೀಠದ ಮೇಲಿರುವ ಶಾಸನ ಆಧಾರದ ಮೇಲೆ ಇದನ್ನು ೧೭ನೇ ಶತಮಾನದಲ್ಲಿ ಪ್ರತಿಷ್ಠಾಪಿಸಿದೆ ಎಂದು ಗ್ಯಾಸೆಟಿಯರ್ ದಾಖಲಿಸುತ್ತದೆ.[೨೭]

**೨. ಪ್ರಸ್ತುತ ಪೂಜೆಗೊಳ್ಳುತ್ತಿರುವ ಬನಶಂಕರಿ ಶಿಲ್ಪ**

ದೇವಾಲಯದ ಗರ್ಭಗೃಹದಲ್ಲಿ ಸುಮಾರು ३ ಅಡಿ ಎತ್ತರದ ಪೀಠದ ಮೇಲೆ ಈ ಮೂರ್ತಿಯು ೫ ಅಡಿ ಎತ್ತರ, ३ ಅಡಿ ಅಗಲ ಹಾಗೂ ೧ ೧/೨ ಅಡಿ ದಪ್ಪವಿದ್ದು, ಕಪ್ಪು ಶಿಲೆಯಲ್ಲಿ ರಚಿಸಲಾಗಿದೆ. ಬನಶಂಕರಿಯು ಶಾಂತರೂಪದಲ್ಲಿ ಸಿಂಹರೂಢಿಯಾಗಿರುವ ವಿಗ್ರಹವು ಆಕರ್ಷಕವಾಗಿದೆ. ಅಷ್ಟಬಾಹುಗಳನ್ನು ಹೊಂದಿದ್ದು, ಮುಂದಿನ ಬಲ ಹಸ್ತದಲ್ಲಿ ಪುಸ್ತಕ, ಎಡ ಹಸ್ತದಲ್ಲಿ ಪಾಣಿಬಟ್ಟಲನ್ನು ಹೊಂದಿರುವಳು. ಹಿಂದಿನ ಬಲ ಹಸ್ತಗಳಲ್ಲಿ ತ್ರಿಶೂಲ, ಘಂಟೆ, ಕತ್ತಿಯನ್ನು ಹಾಗೂ ಎಡ ಹಸ್ತಗಳಲ್ಲಿ ರುಂಡ, ಗುರಾಣಿ, ಡಮರು ಹಿಡಿದಿದ್ದಾಳೆ. ವಿವಿಧ ಹಾರಗಳನ್ನು ಧರಿಸಿ, ಕೈಗಳಿಗೆ ಬಳೆಗಳನ್ನು ತೊಡಿಸಿರುವಂತೆ ಕೆತ್ತಲಾಗಿದೆ.

ಕಿರೀಟ ಮುಕುಟ ಧರಿಸಿರುವ ಶ್ರೀದೇವಿಯ ವಿಗ್ರಹದ ಇಕ್ಕಲಗಳಲ್ಲಿ ಸಂಗೀತ ತಂಡದವರು (ವೀಣೆ, ತಬಲ), ಚಾಮರಧಾರಣಿಯರು ಹಾಗೂ ಗಾಯನ ಮಾಡುತ್ತಿರುವ ಸೇವಕರುಗಳ ಸುಂದರ ಕಿರುಶಿಲ್ಪಗಳಿವೆ. ಬನಶಂಕರಿಯ ವಾಹನವಾಗಿರುವ ಸಿಂಹವು

ಉಗ್ರರೂಪದಲ್ಲಿದ್ದು, ಅದು ಆನೆಗಳ ಮೇಲೆ ನಿಂತಿರುವಂತೆ ಕಾಣುವುದು. ಸಿಂಹವು ನಾಲಿಗೆಯನ್ನು ಹೊರಚಾಚಿದ್ದು ಕಾಣುತ್ತದೆ. ಹಿಂದಿನ ಪ್ರಭಾವಳಿ ಅನೇಕ ಸುರುಳಿಗಳಿಂದ ಕೂಡಿದ್ದು, ಕೀರ್ತಿಮುಖವನ್ನು ರಚಿಸಲಾಗಿದೆ. ಸಾಮಾನ್ಯವಾಗಿ ವಿಗ್ರಹದ ಹಿಂಭಾಗದಲ್ಲಿರುವ ಪ್ರಭಾವಳಿಯಲ್ಲಿ ಕೀರ್ತಿಮುಖವನ್ನು ಕಾಣುತ್ತವೆ. ಆದರೆ ಈ ವಿಗ್ರಹದಲ್ಲಿ ಪ್ರಭಾವಳಿಯ ಇಕ್ಕಲಗಳಲ್ಲಿ ಕೀರ್ತಿಮುಖಗಳ ರಚನೆಯಿರುವುದು ವಿಶೇಷ. ಕೀರ್ತಿಮುಖದ ಬದಲಿಗೆ ಈ ವಿಗ್ರಹದಲ್ಲಿ ಕಮಲದ ಪುಷ್ಪವನ್ನು ಕೆತ್ತಿರುವುದನ್ನು ಕಾಣಬಹುದು.

**೩. ದೇವಿ ಶಿಲ್ಪ**

ಬನಶಂಕರಿ ಕ್ಷೇತ್ರದ ಈಶಾನ್ಯ ದಿಕ್ಕಿನಲ್ಲಿ ರಾಮಲಿಂಗ ದೇವಾಲಯವಿದೆ. ದೇವಾಲಯದ ಹೊರಗೆ ಇಡಲಾಗಿರುವ ಉಸುಕು ಕಲ್ಲಿನ ೩ ಅಡಿ ಎತ್ತರ, ೨ ಅಡಿ ಅಗಲವಾದ ಭಗ್ನಗೊಂಡಿರುವ ಕಾಳಿದೇವಿಯ ಶಿಲ್ಪವನ್ನು ಕಾಣಬಹುದು. ಪದ್ಮಾಸನದಲ್ಲಿರುವ ಶಿಲ್ಪವು ಚತುರ್ಭುಜಗಳನ್ನು ಹೊಂದಿದ್ದು, ಮುಂದಿನ ಹಸ್ತಗಳಲ್ಲಿ ಕಮಂಡಲ, ಭಿಕ್ಷಾಪಾತ್ರೆ, ಹಿಂಭಾಗದ ಹಸ್ತಗಳಲ್ಲಿ ತ್ರಿಶೂಲ, ಡಮರು ಇದೆ. ಕಿರೀಟ ಮುಕುಟಧಾರಿ ದೇವಿಯ ಮೂರ್ತಿ ರಚನೆಯಲ್ಲಿ ಉಗ್ರವಾದ ಮುಖ, ಚಪ್ಪಟೆ ಮೂಗು, ಕಿರಿದಾದ ದಪ್ಪ ತುಟಿಗಳು, ವಿವಿಧ ಹಾರಗಳು, ವಸ್ತ್ರಾಲಂಕಾರ ಇರುವಂತೆ ಶಿಲ್ಪವನ್ನು ರಚಿಸಲಾಗಿದೆ. ವಿಗ್ರಹವು ಒರಟು ಶಿಲೆಯಲ್ಲಿ ರಚನೆಯಾಗಿದ್ದು, ಅಪೂರ್ಣವಾಗಿ ಕಂಡುಬರುತ್ತದೆ. ವಿಗ್ರಹದ ಸುತ್ತಲೂ ಪ್ರಭಾವಳಿ ಇರುವುದನ್ನು ಕಾಣಬಹುದು. ಶಿಲ್ಪದ ಲಕ್ಷಣಗಳನ್ನು ಗಮನಿಸಿದರೆ ಸುಮಾರು ೧೭, ೧೮ನೆಯ ಶತಮಾನದ ರಚನೆಯೆಂದು ಹೇಳಬಹುದು.

**೪. ಪ್ರವೇಶ ದ್ವಾರದ ಜಗಲಿಯ ಮೇಲಿರುವ ಗಣೇಶನ ಮೂರ್ತಿ**

ಮುಖ್ಯ ಪ್ರವೇಶ ದ್ವಾರದ ಬಲಭಾಗದ ಜಗಲಿಯ ಮೇಲೆ ಈ ಮೂರ್ತಿಯಿದೆ. ಬಾದಾಮಿ ಚಾಲುಕ್ಯರ ಕಾಲದ ವಿಶಿಷ್ಟ ಶೈಲಿಯುಲ್ಲಿರುವ ಗಣೇಶನ ಶಿಲ್ಪವು ಮಹತ್ವಪೂರ್ಣವಾದ ವಿಗ್ರಹಗಳಲ್ಲಿ ಒಂದು. ಶಿಲ್ಪವು ನಿಂತ ಭಂಗಿಯಲ್ಲಿದ್ದು, ದ್ವಿಭುಜವನ್ನು ಹೊಂದಿದೆ. ಬಲಗೈಯಲ್ಲಿ ದಂತ, ಎಡಗೈಯಲ್ಲಿ ಫಲವನ್ನು ಹೊಂದಿ, ವಸ್ತ್ರಾಲಂಕಾರದಿಂದ ಕೂಡಿದೆ. ಶಿರಭಾಗವು ದುಂಡಾಗಿದ್ದು, ಸೊಂಡಿಲಿನ ತುದಿ ಭಾಗವು ಎಡಭಾಗಕ್ಕೆ ತಿರುಗಿದೆ. ಕಂಠದಲ್ಲಿ ಚಿಕ್ಕ ಮಾಲೆಯನ್ನು ಧರಿಸಿ, ಹೊಟ್ಟೆಯ ಭಾಗದಲ್ಲಿ ಸರ್ಪವು ಸುತ್ತುವರಿದಿದೆ. ಬನಶಂಕರಿ ಕ್ಷೇತ್ರದಲ್ಲಿ ದೊರೆತ ಇತರೆ ಗಣೇಶನ ಮೂರ್ತಿಗಳಿಗಿಂತ ಭಿನ್ನವಾಗಿದೆ. ಈ ಮೂರ್ತಿಯನ್ನು ಮರಳುಗಲ್ಲಿನಲ್ಲಿ ರಚಿಸಲಾಗಿದೆ. ಈ ಶಿಲ್ಪವು ಇಡಗುಂಜಿ ಶಿಲ್ಪದಂತೆ ಕಂಡುಬರುತ್ತದೆ.

**೫. ಕಾಲಭೈರವ**

ಕಾಲಭೈರವನ ಈ ಶಿಲ್ಪವನ್ನು ಮರಳುಗಲ್ಲಿನಲ್ಲಿ ರಚಿಸಲಾಗಿದೆ. ಮುಖ್ಯ ಪ್ರವೇಶದ್ವಾರದ ಎಡಭಾಗದ ಜಗಲಿಯ ಮೇಲೆ ಕಾಲಭೈರವನ ವಿಗ್ರಹವನ್ನು ಕಾಣಬಹುದು. ಈ ಶಿಲ್ಪವು

ಸುಮಾರು ೩ ಅಡಿ ಎತ್ತರ, ೨ ಅಡಿ ಅಗಲವಿದೆ. ಪೀಠದ ಮೇಲೆ ಕುಳಿತಿರುವ ಹಾಗೆ ಇದನ್ನು ರಚನೆ ಮಾಡಿದ್ದಾರೆ. ಚತುರ್ಭುಜಗಳನ್ನು ಹೊಂದಿರುವ ಕಾಲಭೈರವನ ಬಲಹಸ್ತಗಳಲ್ಲಿ ತ್ರಿಶೂಲ, ಕತ್ತಿ, ಎಡಗೈಯಲ್ಲಿ ಡಮರು, ಕಪಾಲ ಹಿಡಿದಿದ್ದಾನೆ. ಶಿಲ್ಪ ರಚನೆಯಲ್ಲಿ ಕಿರೀಟಧಾರಿ, ಅಗಲ ಕಿವಿಗಳು, ವಿವಿಧ ಹಾರ, ಹೊಟ್ಟೆಗೆ ಉದರ ಬಂಧವನ್ನು ರಚಿಸಿದ್ದಾರೆ.

**೬. ನವರಂಗದ ಭಿತ್ತಿಯಲ್ಲಿರುವ ಗಣೇಶ**

ಬನಶಂಕರಿ ದೇವಾಲಯದ ನವರಂಗ ಮಂಟಪದ ಭಿತ್ತಿಯ ಎಡಭಾಗದ ಕಪ್ಪುಕಲ್ಲಿನ ಈ ಶಿಲ್ಪವನ್ನು ಇತ್ತೀಚಿಗೆ ಪ್ರತಿಷ್ಠಾಪಿಸಲಾಗಿದೆ. ಶಿಲ್ಪವು ಸುಮಾರು ೨ ಅಡಿ ಎತ್ತರ, ಅಗಲ ೧ ೧/೨ ಅಡಿ, ಪೀಠದ ಮೇಲೆ ಸುಖಾಸನದಲ್ಲಿ ಕುಳಿತಿರುವ ಗಣೇಶನು ಚತುರ್ಬಾಹುಗಳನ್ನು ಹೊಂದಿದ್ದು, ಮುಂದಿನ ಹಸ್ತಗಳಲ್ಲಿ ಅಭಯ ಹಸ್ತ, ಫಲವನ್ನು, ಹಿಂಭಾಗದ ಹಸ್ತಗಳಲ್ಲಿ ಅಂಕುಶ, ಪಾಶವನ್ನು ಹಿಡಿದಿದ್ದಾನೆ. ಅಲ್ಲದೆ ಕಿರೀಟ ಮುಕುಟನಾಗಿದ್ದು, ಉದರಕ್ಕೆ ಸರ್ಪವು ಸುತ್ತಿರುವುದು, ಕೊರಳಲ್ಲಿ ಹಾರವನ್ನು ಧರಿಸಿದ್ದಾನೆ. ಹಿಂದಿನ ಪ್ರಭಾವಳಿಯಲ್ಲಿ ಸುರುಳಿಗಳ ವಿನ್ಯಾಸವನ್ನು ಕಾಣಬಹುದು.

**೭. ನವರಂಗದ ಭಿತ್ತಿಯಲ್ಲಿರುವ ಕಾಲಭೈರವ**

ಬನಶಂಕರಿ ಕ್ಷೇತ್ರದಲ್ಲಿ ಕ್ಷೇತ್ರಪಾಲಕನಾದ ಭೈರವನ ಶಿಲ್ಪಗಳು ಹೆಚ್ಚಾಗಿ ಕಂಡುಬಂದಿವೆ. ನವರಂಗದ ಎಡಭಾಗದ ಭಿತ್ತಿಯಲ್ಲಿ ಕಪ್ಪು ಕಲ್ಲಿನಲ್ಲಿ ರಚನೆಯಾದ ಕಾಲಭೈರವನ ಶಿಲ್ಪವನ್ನು ಕಾಣಬಹುದು. ಚತುರ್ಭುಜಗಳನ್ನು ಹೊಂದಿದ್ದು, ಬಲಹಸ್ತಗಳಲ್ಲಿ ತ್ರಿಶೂಲ, ಖಡ್ಗ, ಎಡಹಸ್ತಗಳಲ್ಲಿ ಡಮರು, ಕಪಾಲವನ್ನು ಹೊಂದಿದೆ. ಈ ಶಿಲ್ಪದ ಪ್ರತಿಮಾ ಲಕ್ಷಣಗಳನ್ನು ಆಧರಿಸಿ ಕಲ್ಯಾಣ ಚಾಲುಕ್ಯರಿಗಿಂತ ಪೂರ್ವದಲ್ಲಿ ದೊರಕಿರುವ ಬೈರವ ಶಿಲ್ಪಗಳಿಗಿಂತ ಭಿನ್ನವಾದ ರೀತಿಯಲ್ಲಿ ಈ ಮೂರ್ತಿಯನ್ನು ರಚಿಸಿದ್ದಾರೆ ಎನ್ನಬಹುದು.

**೮. ಸರಸ್ವತಿ ಹಳ್ಳದ ಪಕ್ಕದಲ್ಲಿರುವ ಕಾಲಭೈರವ**

ಸರಸ್ವತಿ ಹಳ್ಳದ ಎಡಭಾಗದಲ್ಲಿರುವ ಕಾಲಭೈರವ ದೇವಾಲಯದ ಮುಂಭಾಗದಲ್ಲಿ ಕಾಲಭೈರವನ ಪ್ರಾಚೀನವಾದ ಭಗ್ನ ಶಿಲ್ಪವಿದೆ. ಶಿಲ್ಪವು ೨ ಅಡಿ ಎತ್ತರ ಹಾಗೂ ೧ ೧/೨ ಅಡಿ ಅಗಲವಾಗಿದ್ದು, ಚತುರ್ಭುಜಗಳನ್ನು ಹೊಂದಿರುವುದು. ದ್ವಿಭಂಗಿಯಲ್ಲಿರುವ ಶಿಲ್ಪದ ಮುಖವು ಸಂಪೂರ್ಣ ಹಾಳಾದ ಸ್ಥಿತಿಯಲ್ಲಿದ್ದು, ಮುಂಭಾಗದ ಹಸ್ತಗಳಲ್ಲಿ ಖಡ್ಗ, ರುಂಡ, ಹಿಂಭಾಗದ ಹಸ್ತಗಳಲ್ಲಿ ತ್ರಿಶೂಲ, ಡಮರು ಹಿಡಿದಿರುವಂತೆ ಶಿಲ್ಪವು ಕಂಡುಬರುತ್ತದೆ. ಹಾಗೇಯೇ ಶಿಲ್ಪದಲ್ಲಿ ವಸ್ತ್ರಾಲಂಕಾರವನ್ನು ಕಾಣಬಹುದು. ಶಿಲ್ಪದ ಎಡಗಾಲು ಓರೆ ಮಾಡಿ ನಿಂತಿರುವಂತೆ ಕೆತ್ತನೆ ಮಾಡಿದ್ದಾರೆ. ವಿಗ್ರಹದ ಹಿಂಭಾಗದಲ್ಲಿ ಭೈರವನ ವಾಹನವಾದ ಶ್ವಾನವಿದ್ದು, ಭೈರವನು ಹಿಡಿದಿರುವ ರುಂಡಕ್ಕೆ ಶ್ವಾನ ಬಾಯಿಯನ್ನು

ಹಾಕಿರುವಂತೆ ರಚನೆ ಮಾಡಿದ್ದಾರೆ. ಶಿಲ್ಪವು ಮುಕ್ಕಾದ ಕಾರಣ ಕಾಲಭೈರವನ ಈ ಶಿಲ್ಪದ ಬದಲು ದೇವಾಲಯದಲ್ಲಿ ನವೀನ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ.

**೯. ವಿಠೋಬ**

ಕಪ್ಪು ಕಲ್ಲಿನ ಈ ಶಿಲ್ಪವು ನವರಂಗದ ಎಡಭಾಗದ ಭಿತ್ತಿಯಲ್ಲಿದೆ. ಶಾಕ್ತಪಂಥ ದೇವಾಲಯದಲ್ಲಿ ವೈಷ್ಣವ ಪಂಥದ ವಿಠೋಬನ ಶಿಲ್ಪವಿರುವುದು ವಿಶೇಷ. ಇದರ ರಚನೆಯ ಬಗ್ಗೆ ಖಚಿತವಾದ ಮಾಹಿತಿಯಿಲ್ಲ. ಆದರೆ ೧೭ನೇ ಶತಮಾನದಲ್ಲಿ ಪೇಶ್ವೆಗಳು ದೇವಾಲಯವನ್ನು ರಚಿಸುವಾಗ ಶಿಲ್ಪವನ್ನು ಪ್ರತಿಷ್ಠಾಪಿಸಲ್ಪಟ್ಟಿರಬಹುದು. ಈ ಶಿಲ್ಪವು ಸಮಭಂಗಿಯಲ್ಲಿ ನಿಂತು, ಎರಡು ಕೈಗಳನ್ನು ಸೊಂಟದ ಮೇಲೆ ಇಟ್ಟಿದ್ದು, ಬಲಗೈಯಲ್ಲಿ ಚೂರಿಯನ್ನು ಹಿಡಿದಿರುವಂತೆ ರಚಿಸಲಾಗಿದೆ. ೨ ಅಡಿ ಎತ್ತರ, ೧ ೧/೨ ಅಡಿ ಅಗಲವಾಗಿದ್ದು, ಮೂರ್ತಿಯ ತಲೆಗೆ ಟೊಪ್ಪಿಗೆಯನ್ನು, ಕೈ, ಕಾಲುಗಳಿಗೆ ಕಡಗಗಳನ್ನು ಧರಿಸಿರುವಂತೆ ಕೆತ್ತಿದ್ದಾರೆ. ಒಟ್ಟಾರೆ ಶಿಲ್ಪಕಲೆಗೆ ಎಲ್ಲಿಯೂ ಲೋಪವೆಸಗದಂತೆ ಶಿಲ್ಪಿಯು ತಾಳ್ಮೆವಹಿಸಿದ್ದಾನೆ.

**೧೦. ವ್ಯಾಘ್ರಪಾದ**

ಬನಶಂಕರಿ ಗುಡಿಯ ಒಳ ಆವರಣದ ಪೌಳಿಯ ಭಿತ್ತಿಯ ಮೇಲೆ ವ್ಯಾಘ್ರಪಾದನ ಉಬ್ಬು ಶಿಲ್ಪವಿದೆ. ವ್ಯಾಘ್ರಪಾದನ ಬಲಹಸ್ತದಲ್ಲಿ ಧೂಪಕುಂಡವನ್ನು, ಎಡಹಸ್ತದಲ್ಲಿ ಗಂಟೆಯನ್ನು ಹಿಡಿದಿರುವುದನ್ನು ಕಾಣಬಹುದು. ಶಿಲ್ಪದ ಕೆಳಭಾಗದಲ್ಲಿ ನಂದಿಯ ಕಿರು ಶಿಲ್ಪ ಹಾಗೂ ಶಿವಲಿಂಗವನ್ನು ರಚಿಸಲಾಗಿದೆ.

**೧೧. ಪಟ್ಟಿಕೆಯಲ್ಲಿರುವ ದೇವಿಯರ ಶಿಲ್ಪಗಳು**

ಕ್ಷೇತ್ರದ ದಕ್ಷಿಣ ಭಾಗದಲ್ಲಿರುವ ಸರಸ್ವತಿ ಹಳ್ಳದ ಎಡ ದಂಡೆಯಲ್ಲಿರುವ ಒಂದು ಪಟ್ಟಿಕೆಯಲ್ಲಿ ದೇವಿಯ ಮೂರು ಶಿಲ್ಪಗಳಿವೆ. ಈ ಪಟ್ಟಿಕೆಯು ೪ ಅಡಿ ಉದ್ದ, ೧ ೧/೨ ಎತ್ತರವನ್ನು ಹೊಂದಿದೆ. ಪಟ್ಟಿಕೆಯಲ್ಲಿ ಬಲಭಾಗದಲ್ಲಿರುವ ಕಿರೀಟಧಾರಿ ದೇವಿಯ ಶಿಲ್ಪವು ಸುಖಾಸನದಲ್ಲಿದ್ದು, ಚತುರ್ಭುಜಗಳನ್ನು ಹೊಂದಿರುವುದು. ಮುಂದಿನ ಹಸ್ತಗಳಲ್ಲಿ ರುಂಡ, ಬಟ್ಟಲು ಹಾಗೂ ಮುಂಭಾಗದ ಹಸ್ತಗಳಲ್ಲಿ ಪಾಶ, ಪುಷ್ಪವನ್ನು ಕಾಣುತ್ತೇವೆ. ಶಿಲ್ಪ ರಚನೆಯಲ್ಲಿ ದುಂಡದಾದ ಮುಖ, ಓಲೆಗಳು, ಕೊರಳಲ್ಲಿ ಉದ್ದನೆಯ ಹಾರ, ಕೈಗಳಲ್ಲಿ ಬಳೆಗಳು, ವಸ್ತ್ರಾಲಂಕಾರವನ್ನು ಕಾಣಬಹುದು. ಪಟ್ಟಿಕೆಯ ಮಧ್ಯಭಾಗದಲ್ಲಿರುವ ಕಿರೀಟಧಾರಿ ದೇವಿಯ ಶಿಲ್ಪವು ದ್ವಿಬಾಹುಗಳನ್ನು ಹೊಂದಿರುವುದು. ಬಲ ಹಸ್ತದಲ್ಲಿ ರುಂಡ, ಎಡ ಹಸ್ತದಲ್ಲಿ ಬಟ್ಟಲಿನ ರಚನೆಯಿದೆ. ಸುಖಾಸನದಲ್ಲಿರುವ ದೇವಿಯ ಶಿಲ್ಪ ರಚನೆಯಲ್ಲಿ ಓಲೆಗಗಳು, ಹಾರ, ಬಳೆಗಳು, ವಸ್ತ್ರಾಲಂಕಾರವನ್ನು ಕಾಣಬಹುದು. ಪಟ್ಟಿಕೆಯಲ್ಲಿ ಎಡ

ಭಾಗದಲ್ಲಿ ದೇವಿಯ ಸುಖಾಸನದಲ್ಲಿರುವ ಶಿಲ್ಪವನ್ನು ಕಾಣುತ್ತೇವೆ. ಕಿರೀಟಧಾರಿ ದೇವಿಯ ಶಿಲ್ಪವು ಚತುರ್ಭುಜಗಳನ್ನು ಹೊಂದಿದ್ದು, ಮುಂದಿನ ಹಸ್ತಗಳಲ್ಲಿ ರುಂಡ, ಬಟ್ಟಲು ಹಾಗೂ ಹಿಂಭಾಗದ ಹಸ್ತಗಳಲ್ಲಿ ತ್ರಿಶೂಲ ಮತ್ತು ಪುಷ್ಪವನ್ನು ಕಾಣಬಹುದು. ಶಿಲ್ಪ ರಚನೆಯಲ್ಲಿ ಓಲೆ, ಹಾರ, ಬಳೆಗಳನ್ನು ಹಾಗೂ ವಸ್ತ್ರಾಲಂಕಾರದ ರಚನೆಯಿದೆ. ಈ ಪಟ್ಟಿಕೆಯಲ್ಲಿರುವ ದೇವಿಯ ಶಿಲ್ಪಗಳನ್ನು ಯಾವ ದೇವಿಯರ ಶಿಲ್ಪಗಳೆಂದು ಗುರುತಿಸಲು ಸಾಧ್ಯವಾಗುವುದಿಲ್ಲ. ಏಕೆಂದರೆ ಶಿಲ್ಪಗಳು ಹಿಡಿದಿರುವ ಆಯುಧಗಳು ನಿರ್ದಿಷ್ಟವಾಗಿಲ್ಲ. ಈ ಶಿಲ್ಪಗಳ ರಚನೆಯನ್ನು ಗಮನಿಸಿದರೆ ಇವು ಸುಮಾರು ಕ್ರಿ.ಶ. ೧೭, ೧೮ನೆಯ ಶತಮಾನದ ರಚನೆಯಾಗಿರಬಹುದು ಎಂದು ಹೇಳಬಹುದು.

### ೧೨. ಗಜಲಕ್ಷ್ಮೀ

ಬನಶಂಕರಿ ಮೂಲ ಗುಡಿಯ ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ಲಕ್ಷ್ಮಿಯು ಪದ್ಮಾಸನದಲ್ಲಿ ಕುಳಿತಿದ್ದಾಳೆ. ಲಕ್ಷ್ಮೀ ಶಿಲ್ಪದ ಇಕ್ಕಲಗಳಲ್ಲಿ ಎರಡು ಆನೆಗಳನ್ನು ಕೆತ್ತಲಾಗಿದೆ. ಆನೆಗಳು ಕುಂಭಗಳಿಂದ ದೇವಿಗೆ ಅಭಿಷೇಕ ಮಾಡುತ್ತಿವೆ.

### ೧೩. ಶ್ರೀಚಕ್ರ

ಶ್ರೀಚಕ್ರವು ಶಿವಶಕ್ತಿಯ ಉಪಾಸನಾ ಪ್ರತೀಕವಾಗಿದೆ. ಇದು ಸಂಕೀರ್ಣ ಪ್ರತಿಭಾ ಸಂಕೇತವಾಗಿ ಶಕ್ತಿಯ ತಾಂತ್ರಿಕ ನೆಲೆಯನ್ನು ನಿದರ್ಶಿಸುವುದು. ಶ್ರೀಚಕ್ರ ಸಂಪ್ರದಾಯದ ಬೇರು ಸೈಂಧವ ಸಂಸ್ಕೃತಿಯಿಂದ ಉಗಮವಾಗಿರುವಂತೆ ಕಾಣುತ್ತದೆ. ಆ ಸಂಸ್ಕೃತಿಯಲ್ಲಿದ್ದ ಮಾತೃ ಆರಾಧನ ಪದ್ಧತಿಯು, ಲಭ್ಯಮಾತೃಕಾ ಅವಶೇಷಗಳಿಂದ ತಿಳಿಯುವುದು. ಶಕ್ತಿಯ ಆರಾಧನೆಯು ಮಾತೃದೇವತಾ ಪೂಜಾ ಪದ್ಧತಿಯ ವಿಕಸಿತ ರೂಪವಾಗಿದೆ. ಶಿವಶಕ್ತಿಯ ಅವಿಭಾಜ್ಯ ಸಂಬಂಧವನ್ನು ಶ್ರೀಚಕ್ರವು ಸೂಚಿಸುವುದು ಗಮನಾರ್ಹ. ಶಕ್ತಿಶಿವನ ಮಹತ್ವವನ್ನು ನಿರ್ದೇಶಿಸಿದ್ದು, ಜಗತ್ತು ಶಕ್ತಿಮಯವಾಗಿ, ಶಿವನಿಗೂ ಪ್ರೇರಕ ಶಕ್ತಿ ಎಂದೇ ಸೂಚಿತವಾಗಿದೆ. ಮಾನವ ಚೈತನ್ಯ, ದೈವಿಕ ಚೈತನ್ಯದಲ್ಲಿ ಲೀನವಾಗಬೇಕಾದರೆ ಅವನು ಈ ಮೂಲಾಧಾರ ಶಕ್ತಿಯನ್ನು ಜಾಗ್ರತಗೊಳಿಸಬೇಕು. ಅದಕ್ಕಾಗಿ ಅವನು ಮಂತ್ರ, ತಂತ್ರಗಳು ಪ್ರಾಚೀನ ನೆಲೆಯಿಂದ ಉದಯಿಸಿದವು.

ಶಿವನನ್ನು ಆರಾಧ್ಯವಾಗಿ ಭಾವಿಸುವ ಆಗಮಗಳು ಶೈವಾಗಮಗಳು, ಶಕ್ತಿಯನ್ನು ಆರಾಧ್ಯವಾಗಿ ಭಾವಿಸುವ ಆಗಮಗಳು ಶಾಕ್ತಾಗಮಗಳು ಅಥವಾ ತಂತ್ರಗಳು ಆಗಿವೆ. ಸಾಮಾನ್ಯವಾಗಿ ಶೈವಾಗಮಗಳನ್ನು ಆಗಮಗಳೆಂದು, ಶಾಕ್ತಾಗಮಗಳನ್ನು ತಂತ್ರಗಳೆಂದು ಕರೆಯುವ ವಾಡಿಕೆಯಿದೆ.[೨೮] ಹಾಗಾದರೆ ಈ ಮಂತ್ರ, ತಂತ್ರಗಳ ಸ್ವರೂಪವೇನು? ಉಗಮ ಹೇಗೆ ಎಂದು ಚಿಂತಿಸಬೇಕಿದೆ. ತಂತ್ರಗಳು ಆಚಾರವಿಧಿಗಳನ್ನು, ಪೂಜಾ ವಿಧಾನಗಳ

ವಿವರಗಳನ್ನು ಅಳವಡಿಸಿಕೊಂಡ ಸಾಹಿತ್ಯವಾದರೆ, ಮಂತ್ರಕ್ಕೆ ರೂಪ ಕೊಟ್ಟಾಗ ದೈವಿಕ ಸ್ವರೂಪವನ್ನು ನಿದರ್ಶಿಸುತ್ತದೆ. ಆದ ಕಾರಣಕ್ಕಾಗಿ ಶಕ್ತಿ ದೇವತೆಗಳ ದೇವಾಲಯದಲ್ಲಿ ಸಾಮಾನ್ಯವಾಗಿ ಶ್ರೀಚಕ್ರವನ್ನು ಗಮನಿಸುತ್ತೇವೆ.

ಶ್ರೀಚಕ್ರದ ಕುರಿತಂತೆ ಸಾಧಕರು ರೂಪಿಸಿಕೊಂಡಿರುವ ಸ್ವರೂಪಗಳನ್ನು ಹೀಗೆ ನೀಡಬಹುದು. ಮಂತ್ರಗಳಲ್ಲಿ ಭೀಜಾಕ್ಷರಗಳ ಪ್ರಯೋಗ ಮುಖ್ಯವಾದುದು. ಓಂ, ಹೀಂ, ಗಂ, ಶ್ರೀ, ಏಕಾಕ್ಷರ ಮಂತ್ರಗಳಿಂದ ಇಡೀ ಮಂತ್ರವೇ ಹೊರಡುತ್ತದೆ. ಈ ಮಂತ್ರಕ್ಕೆ ರೂಪ ನೀಡಿದಾಗ ಮಂಡಲವಾಗುವುದು. ಆ ರೂಪರೇಖೆ, ತ್ರಿಕೋನ, ವೃತ್ತಗಳಂತಹ ರೇಖಾಗಣಿತ ಚಿತ್ರವಾಗಿರುತ್ತದೆ. ಅದನ್ನೇ ಶ್ರೀಚಕ್ರ ಅಥವಾ ಮಂಡಲವನ್ನೆವುದು. ಈ ಸಂಬಂಧ ಒದಗುವ ಶ್ರೀಚಕ್ರವು ಲಲಿತಾ ಪರಮೇಶ್ವರಿ ದೇವಿಯ ರೂಪವೆಂದು ಕಲ್ಪಿಸಲಾಗಿದೆ. ಇಲ್ಲಿನ ಆಧ್ಯಾತ್ಮಿಕ ನಿಲುವನ್ನು ನಿದರ್ಶಿಸುವುದು ಶ್ರೀವಿದ್ಯೆ, ಕಲ್ಲು, ಮರ, ತಾಮ್ರದ ತಗಡು, ಬಂಗಾರದ ತಟ್ಟೆಯ ಮೇಲೆ ಶ್ರೀಚಕ್ರವನ್ನು ರೂಪಿಸಿರುತ್ತಾರೆ. ಬರಿಯ ಮೂರ್ತಿ ಪೂಜೆಗಿಂತ ಮಂಡಲ ಅಥವಾ ಯಂತ್ರಗಳ ಜೊತೆಗೆ ಮೂರ್ತಿ ಇಟ್ಟಾಗ ಪೂಜಿಸುವುದು ಹೆಚ್ಚು ಫಲಕಾರಿ ಎನ್ನುವ ನಂಬಿಕೆಯಿದೆ.[೨೯]

ಪ್ರಸ್ತುತ ಬನಶಂಕರಿ ಗುಡಿಯ ಬಲಭಾಗದಲ್ಲಿ ಸಹದೇವಿಯ ಗುಡಿಯಿದೆ. ಸಹದೇವಿ ಮೂರ್ತಿಯ ಹಿಂಭಾಗದಲ್ಲಿ ಚೌಕಾಕಾರದ ಸುಮಾರು ೧ ೧/೨ ಅಡಿ ಉದ್ದ, ೧ ೧/೨ ಅಡಿ ಅಗಲ, ೬ ಇಂಚು ದಪ್ಪ ಶ್ರೀಚಕ್ರ ನಕ್ಷತ್ರ ಚಕ್ರವಾಗಿದೆ. ಇದರ ಸುತ್ತ ಏಕ ಕೇಂದ್ರೀಯ ತ್ರಿವೃತ್ತಗಳಿಂದ ಆವೃತ್ತವಾಗಿ ಅಡ್ಡ ಹಾಗೂ ಲಂಬ ವ್ಯಾಸ ಪಟ್ಟಿಕೆಗಳನ್ನು ಹೊಂದಿದೆ. ಇವುಗಳ ಸಂಧಿ ಕೇಂದ್ರದಲ್ಲಿ ಅಂದರೆ ವೃತ್ತ ಕೇಂದ್ರ ೮ ಹಾಗೂ ೧೬ ಪದ್ಮಗಳು ಏಕಕೇಂದ್ರೀಯ ಬಿಡಾವಣೆ ಅಚ್ಚುಕಟ್ಟಾಗಿದೆ. ಶ್ರೀಚಕ್ರದ ಸುತ್ತಲೂ ಬಂಧ ರೇಖೆಗಳನ್ನು ಕಾಣುತ್ತೇವೆ. ಇದಕ್ಕೆ ಕಾರಣ ಶ್ರೀಚಕ್ರದಿಂದ ಉದ್ಭವವಾಗುವ ಶಕ್ತಿಯು ಹೊರ ಹೋಗದಂತೆ ತಡೆಯಲು ಇದನ್ನು ರಚಿಸಲಾಗಿರುತ್ತದೆ ಎಂಬ ನಂಬಿಕೆಯಿದೆ.

**೧೪. ರಥ ಶಿಲ್ಪ**

ಬನಶಂಕರಿ ದೇವಿಯ ರಥವು ಶಾಸ್ತ್ರೋಕ್ತ ವಿಧಿ-ವಿಧಾನಗಳಿಂದ ಕೆತ್ತಲ್ಪಟ್ಟಿದೆ. ರಥ ನಿರ್ಮಾಣ, ಇತಿಹಾಸದ ಬಗೆಗೆ ದಾಖಲೆಗಳಿಲ್ಲ. ಸುಮಾರು ೨೫೦ ವರ್ಷಗಳ ಇತಿಹಾಸವಿದೆಯೆಂದು ಸ್ಥಳೀಯರು ಅಭಿಪ್ರಾಯಪಡುತ್ತಾರೆ. ರಥವನ್ನು ಜಾಲಿಹಾಳದ ದೇಸಾಯಿಗಳು ರಚಿಸಿದ್ದಾರೆ ಎಂಬುವ ಪ್ರತೀತಿಯಿದೆ. ಮುತ್ತಾಲಿ ಮತ್ತು ಕರಿಮತ್ತಿಯ ಕಟ್ಟಿಗೆಯನ್ನು ಬಳಸಿ ರಥವನ್ನು ನಿರ್ಮಿಸಿರುವರು.

ಬೃಹದಾಕಾರವಾದ ಬನಶಂಕರಿ ದೇವಿಯ ರಥದ ತಳಪಾಯ ಚೌಕಾಕಾರವಾಗಿದ್ದು, ಕೆಳ ಭಾಗದಲ್ಲಿ ರಥದ ಗಾತ್ರಕ್ಕೆ ತಕ್ಕಂತೆ ೫ ದಪ್ಪವಾದ ತೊಲೆಗಳನ್ನು ಜೋಡಿಸಿದ್ದಾರೆ.

ತೊಲೆಗಳ ಎರಡೂ ತುದಿಯಲ್ಲಿ ಸಿಂಹ ಹಾಗೂ ಅದರ ಕೆಳಗೆ ಹೊಂದಿಕೊಂಡೆ ಓಡುವ ಭಂಗಿಯಲ್ಲಿದ್ದು, ಆನೆಯನ್ನು ಸೂಕ್ಷ್ಮವಾಗಿ ಕೆತ್ತಲಾಗಿದೆ. ರಥಕ್ಕೆ ನಾಲ್ಕು ಗಾಲಿಗಳಿದ್ದು, ಅವು ಸುಮಾರು ೯ ಅಡಿ ಎತ್ತರವಾಗಿವೆ. ರಥದ ಗಾಲಿಗಳ ಮೇಲೆ ಅಲಂಕಾರವಿರುವುದನ್ನು ಗಮನಿಸಬಹುದು. ಈ ರಥವು ಐದು ಅಂಕಣಗಳನ್ನು ಹೊಂದಿದ್ದು, ಜಾತ್ರೆ ವೇಳೆಯಲ್ಲಿ ಇನ್ನುಳಿದ ಐದು ಅಂಕಣಗಳನ್ನು ಕಟ್ಟುತ್ತಾರೆ.

ರಥದ ಗಡ್ಡಿಯ ಭಾಗ ಕಲಾತ್ಮಕವಾಗಿದ್ದು, ಬಹುಕೋನಗಳನ್ನು ಹೊಂದಿದೆ. ದೂರದಿಂದ ನೋಡಿದಾಗ ಈ ಗಡ್ಡಿ ವರ್ತುಲಾಕಾರವಾಗಿ ಕಾಣುವುದು. ಗಡ್ಡಿಯ ಆರಂಭದ ಹಂತದಲ್ಲಿ ದೇವತಾಕೃತಿಗಳನ್ನು ಹೊಂದಿರುವ ಪಟ್ಟಿಕೆಗಳನ್ನು ಗಮನಿಸಬಹುದು. ಪ್ರಾಣಿ, ದೇವ-ದೇವತೆಗಳ ಶಿಲ್ಪಗಳನ್ನು ಗಡ್ಡಿ ಭಾಗದಲ್ಲಿ ರಚನೆಮಾಡಲಾಗಿದೆ. ನಕ್ಷತ್ರಾಕಾರದಲ್ಲಿ ರಚನೆಗೊಂಡ ಈ ರಥ ನಾಲ್ಕು ದ್ವಾರಗಳನ್ನು ಹೊಂದಿರುವುದನ್ನು ನೋಡಬಹುದಾಗಿದೆ. ಮಂಟಪದ ಒಳಭಾಗವು ವಿಶಾಲವಾಗಿದ್ದು, ಸುಂದರ ಕೆತ್ತನೆ ಕೆಲಸವನ್ನು ಮಂಟಪದ ವಿವಿಧ ಕಡೆ ಕಾಣಬಹುದು. ಚಿಕ್ಕ ಚಿಕ್ಕ ಕಲಾತ್ಮಕ ಕಂಬಗಳನ್ನು ಬಳಸಿ ಚಿಕ್ಕ ಕಟಾಂಜನವನ್ನು ಮಂಟಪದ ಸುತ್ತಲೂ ನಿರ್ಮಿಸಲಾಗಿದೆ.[೩೦] ರಥವನ್ನು ಕೀಟಗಳಿಂದ ರಕ್ಷಿಸಲು ಎಣ್ಣೆಯನ್ನು ಹಾಕಲಾಗುತ್ತದೆ. ಆದರೆ ಇದರಿಂದ ರಥದ ಮೇಲಿರುವ ಶಿಲ್ಪಗಳಲ್ಲೆವು ಸ್ಪಷ್ಟವಾಗಿ ಕಾಣುವುದಿಲ್ಲ.

**ದೀಪಸ್ತಂಭದಲ್ಲಿರುವ ಉಬ್ಬುಶಿಲ್ಪಗಳು**

ಹರಿದ್ರಾತೀರ್ಥಕ್ಕೆ ಹೊಂದಿಕೊಂಡಂತೆ ಇರುವ ದೀಪಸ್ತಂಭದ ಅಧಿಷ್ಠಾನದ ಮೊದಲನೆಯ ಪಟ್ಟಿಕೆಯಲ್ಲಿ ಇರುವ ಉಬ್ಬು ಶಿಲ್ಪಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

**೧. ಗರುಡ**

ಗರುಡನ ಉಬ್ಬು ಶಿಲ್ಪದಲ್ಲಿ ರೆಕ್ಕೆಗಳನ್ನು ಬಿಚ್ಚಿ ತನ್ನ ಎರಡು ಕೈಗಳನ್ನು ಜೋಡಿಸಿ ನಮಸ್ಕರಿಸುತ್ತಿರುಂತಿದೆ. ಶಿಲ್ಪ ರಚನೆಯಲ್ಲಿ ಗರುಡನು ಕಿರೀಟಧಾರಿಯಾಗಿದ್ದು, ಕಿವಿಗಳಲ್ಲಿ ಜೋತುಬಿದ್ದಿರುವ ಓಲೆಗಳು, ಕಂಠದಲ್ಲಿ ಮುತ್ತಿನ ಹಾರವನ್ನು ಗಮನಿಸಬಹುದು.

**೨. ಗಣೇಶ**

ಕಿರೀಟಧಾರಿ ಗಣೇಶನ ಶಿಲ್ಪದ ಸುತ್ತಲೂ ಸುಂದರ ಅಲಂಕರಣಗೊಂಡ ಪ್ರಭಾವಳಿಯಿದೆ. ಪ್ರಭಾವಳಿಯಲ್ಲಿ ಸುರುಳಿ, ಕೀರ್ತಿಮುಖ ಅಲಂಕರಣವಿದೆ. ಪೀಠದ ಮೇಲೆ ಕುಳಿತಿರುವ ಗಣೇಶನು ಚಾತುರ್ಭಜಗಳನ್ನು ಹೊಂದಿದ್ದಾನೆ. ಬಲಹಸ್ತಗಳಲ್ಲಿ ಖಡ್ಗ, ಪಾಶ, ಎಡಹಸ್ತಗಳಲ್ಲಿ ಫಲ, ಪುಷ್ಪವನ್ನು ಹಿಡಿದಿರುವನು. ಶಿಲ್ಪ ರಚನೆಯಲ್ಲಿ ಅಗಲವಾದ ಕಿವಿಗಳು, ಸೊಂಡಿಲನ್ನು ಎಡಭಾಗಕ್ಕೆ ತಿರುಗಿಸಿರುವಂತೆ ರಚಿಸಿದ್ದಾರೆ.

೩. ಆಂಜನೇಯ

ಆಂಜನೇಯನ ಉಬ್ಬು ಶಿಲ್ಪವು ದ್ವಿಬಾಹುವನ್ನು ಹೊಂದಿದೆ. ಎಡ ಭಾಗಕ್ಕೆ ಮುಖಮಾಡಿ ನಿಂತಿರುವ ಶಿಲ್ಪವು, ಬಲಗಾಲನ್ನು ಹಿಂದಕ್ಕೆ ಸರಿಸಿ, ಎಡಗಾಲನ್ನು ಮುಂದೆ ಮಾಡಿರುವಂತೆ ಕೆತ್ತಿರುವುದನ್ನು ಕಾಣಬಹುದು. ಬಲಗೈಯನ್ನು ಎತ್ತರಿಸಿ ಅಭಯ ಹಸ್ತ ಹೊಂದಿದ್ದು, ಎಡಗೈಯನ್ನು ತೊಡೆಯ ಮೇಲೆ ಇಟ್ಟಿದ್ದು, ಅದೇ ಕೈಯಲ್ಲಿ ಚಿಕ್ಕದಾದ ಗಧೆಯನ್ನು ಕಾಣಬಹುದು. ಆಂಜನೇಯನ ಬಾಲವು ಬಲಭಾಗದಿಂದ ಎಡಭಾಗದವರೆಗೆ ಎತ್ತರಿಸಿ, ಬಾಲದ ತುದಿಯು ಸುರುಳಿಯಾಗಿರುವಂತೆ ಕಾಣುತ್ತದೆ. ಶಿಲ್ಪ ರಚನೆಯಲ್ಲಿ ಓಲೆ, ಹಾರ, ಭುಜಬಂಧಿ, ಸೊಂಟದಲ್ಲಿ ನಡುಪಟ್ಟಿ ಇರುವಂತೆ ರಚಿಸಿದ್ದಾರೆ. ಆಂಜನೇಯನ ಶಿಲ್ಪದ ಪಾದದಡಿಯಲ್ಲಿರುವ ಅಪಸ್ಮಾರನ ಕಿರು ಶಿಲ್ಪವಿದೆ. ಹಾಗೂ ಆಂಜನೇಯನ ಎದುರಲ್ಲಿ ಭಕ್ತಿಯಿಂದ ಕೈಮುಗಿದು ನಿಂತಿರುವ ಮತ್ತೊಂದು ಶಿಲ್ಪವಿದೆ.

೪. ಬ್ರಹ್ಮ

ಬ್ರಹ್ಮನ ಶಿಲ್ಪವು ನಿಂತ ಭಂಗಿಯಲ್ಲಿದ್ದು, ಕಿರೀಟಧಾರಿಯಾಗಿ ಇರುವುದನ್ನು ಕಾಣಬಹುದು. ಈ ಶಿಲ್ಪದ ಭುಜಗಳು ಹಾಳಾಗಿದ್ದರಿಂದ ಯಾವ ಆಯುಧಗಳನ್ನು ಗುರುತಿಸಲಾಗಿಲ್ಲ. ಶಿಲ್ಪ ರಚನೆಯಲ್ಲಿ ಹಾರ, ಜನಿವಾರ ಹಾಗೂ ವಸ್ತ್ರಾಲಂಕಾರವನ್ನು ನೋಡಬಹುದು. ಈ ಶಿಲ್ಪವನ್ನು ಗಮನಿಸಿದರೆ ಅಂದಿನ ಕಾಲದಲ್ಲಿ ಹೊಸತನವನ್ನು ರಚಿಸಲು ಶಿಲ್ಪಿಯು ಆಲೋಚಿಸಿದ್ದ ಬಗ್ಗೆ ಅರ್ಥವಾಗುತ್ತದೆ.

೫. ಶೇಷಶಯನ ವಿಷ್ಣು

ಶಿಲ್ಪ ರಚನೆಯಲ್ಲಿ ಏಳು ಹೆಡೆಯ ಸರ್ಪದ ಮೇಲೆ ವಿಷ್ಣು ಮಲಗಿದ್ದು, ವಿಷ್ಣುವಿನ ಉದರದಿಂದ ಕಮಲದ ಹೂವು ಹೊರಬಂದಂತೆ ರಚಿಸಲಾಗಿದೆ. ವಿಷ್ಣುವಿನ ಪಾದಗಳ ಬಳಿಯಲ್ಲಿ ಲಕ್ಷ್ಮೀಯ ಕಿರು ಶಿಲ್ಪವಿದೆ. ವಿಷ್ಣುವಿನ ಬಲಬದಿಯಲ್ಲಿ ಭಕ್ತಿಯಿಂದ ಕೈಜೋಡಿಸಿ ಕುಳಿತಿರುವ ಶಿಲ್ಪವನ್ನು ನೋಡಬಹುದು. ಶಿಲ್ಪವು ಬಹುತೇಕ ಹಾಳಾಗಿದ್ದರಿಂದ ಹೆಚ್ಚಿನ ಲಕ್ಷಣಗಳನ್ನು ಗುರುತಿಸಲು ಸಾಧ್ಯವಾಗುವುದಿಲ್ಲ.

೬. ಲಕ್ಷ್ಮೀ ನಹಸಿಂಹ

ಸಾಮಾನ್ಯವಾಗಿ ನರಸಿಂಹನು ಹಿರಣ್ಯಕಶ್ಯಪುವನ್ನು ಸಂಹರಿಸುತ್ತಿರುವಂತೆ ಶಿಲ್ಪತನಾಗಿರುತ್ತಾನೆ. ದೀಪಮಹಲನ ಅಧಿಷ್ಠಾನದ ಭಾಗದಲ್ಲಿ ನರಸಿಂಹನ ಎರಡು ಉಬ್ಬು ಶಿಲ್ಪಗಳಿವೆ. ಈ ಎರಡು ಶಿಲ್ಪಗಳು ಬಹುತೇಕ ಹಾಳಾಗಿರುವ ಸ್ಥಿತಿಯಲ್ಲಿವೆ. ಆದರೂ ಸಾಧ್ಯವಾದಷ್ಟು ಮಟ್ಟಿಗೆ ಅವುಗಳ ಲಕ್ಷಣಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ನರಸಿಂಹನು ತನ್ನ ಎರಡು ಕಾಲುಗಳನ್ನು ಅಗಲಿಸಿ ಸುಖಾಸನದಲ್ಲಿ ಕುಳಿತಿರುವ ಶಿಲ್ಪವನ್ನು

ಕಾಣಬಹುದು. ಈ ಶಿಲ್ಪವು ಉಗ್ರ ಮುಖವನ್ನು ಹೊಂದಿದ್ದು, ತನ್ನ ತೊಡೆಯ ಮೇಲೆ ಕೈ ಇಟ್ಟಿರುವಂತೆ ಕಾಣುತ್ತದೆ. ಎಡಗಾಲನ್ನು ಮಡಚಿದ್ದು, ತೊಡೆಯ ಮೇಲೆ ಕುಳಿತಿರುವ ಲಕ್ಷ್ಮೀಯ ಶಿಲ್ಪವಿದ್ದು, ದೇವಿಯ ಶಿಲ್ಪವು ಭಗ್ನವಾಗಿದೆ. ಇದರಿಂದ ದೇವಿಯ ಶಿಲ್ಪ ಲಕ್ಷಣಗಳನ್ನು ಗುರುತಿಸಲಾಗುವುದಿಲ್ಲ.

**೭. ಉಗ್ರನರಸಿಂಹ**

ನರಸಿಂಹನ ಶಿಲ್ಪದಲ್ಲಿ ಉಗ್ರಮುಖ ಹಾಗೂ ಚತುರ್ಭುಜಗಳ ರಚನೆಯನ್ನು ಕಾಣಬಹುದು. ಉಗ್ರನರಸಿಂಹನು ಕುಳಿತುಕೊಂಡು ತನ್ನ ತೊಡೆಯ ಮೇಲೆ ಹಿರಣ್ಯಕಶ್ಯಪು ಅಸುರನನ್ನು ಇಟ್ಟುಕೊಂಡು ಆತನ ಹೊಟ್ಟೆಯನ್ನು ಸೀಳುತ್ತಿದ್ದಾನೆ. ಶಿಲ್ಪದ ಹಿಂಭಾಗದ ಬಲಹಸ್ತದಲ್ಲಿ ಶಂಖವನ್ನು, ಎಡಹಸ್ತದಲ್ಲಿ ಪುಷ್ಪವನ್ನು ಹಿಡಿದಿರುವಂತೆ ರಚಿಸಲಾಗಿದೆ.

**೮. ಮತ್ಸ್ಯಾವತಾರದ ವಿಷ್ಣು**

ವಿಷ್ಣುವಿನ ದಶಾವತಾರದಲ್ಲಿ ಒಂದಾದ ಮತ್ಸ್ಯಾವತಾರದ ವಿಷ್ಣುವಿನ ಶಿಲ್ಪವನ್ನು ಇಲ್ಲಿ ಕಾಣಬಹುದು. ಈ ಶಿಲ್ಪವು ಬಹುತೇಕ ಹಾಳಾಗಿದೆ. ಶಿಲ್ಪ ರಚನೆಯಲ್ಲಿ ಬಾಯಿಯನ್ನು ತೆರೆದು ಮಲಗಿರುವ ಮತ್ಸ್ಯದ ಮೇಲೆ ಪದ್ಮಾಸನದಲ್ಲಿ ಕುಳಿತಿರುವ ದ್ವಿಬಾಹು ವಿಷ್ಣುವಿನ ಶಿಲ್ಪವನ್ನು ಗಮನಿಸಬಹುದು. ಶಿಲ್ಪ ಇರುವ ಪಟ್ಟಿಕೆಯಲ್ಲಿ ಸ್ಥಳದ ಅಭಾವದಿಂದಾಗಿ ಮತ್ಸ್ಯದ ಮುಖಭಾಗವನ್ನು ಮಾತ್ರ ಕೆತ್ತಲಾಗಿದೆ. ಮುಕುಟಾಧಾರಿ ವಿಷ್ಣು ಶಿಲ್ಪದಲ್ಲಿ ಅಗಲವಾದ ಕಿವಿಗಳಿದ್ದು, ಹಾರ, ವಸ್ತ್ರಾಲಂಕಾರವನ್ನು ಕಾಣಬಹುದು.

**೯. ಸುಖಾಸನದಲ್ಲಿರುವ ಶಿವ**

ಸುಖಾಸನದಲ್ಲಿರುವ ಶಿವನ ಉಬ್ಬು ಶಿಲ್ಪವನ್ನು ಇಲ್ಲಿ ಕಾಣಬಹುದು. ಈ ಶಿಲ್ಪವು ದ್ವಿಬಾಹುಗಳನ್ನು ಹೊಂದಿದ್ದು, ಬಲಗೈಯಲ್ಲಿ ತ್ರಿಶೂಲ, ಎಡಗೈಯಲ್ಲಿ ಡಮರು ಹಿಡಿದಿದೆ. ಕಿರೀಟಧಾರಿ ಶಿವನ ಶಿಲ್ಪ ರಚನೆಯಲ್ಲಿ ಓಲೆಗಳು, ಮುತ್ತಿನ ಹಾರವನ್ನು ಕಾಣಬಹುದು. ಶಿಲ್ಪದ ಇಕ್ಕಲಗಳಲ್ಲಿ ಭಕ್ತಿಯಿಂದ ಎರಡೂ ಕೈಗಳನ್ನು ಜೋಡಿಸಿ ಕುಳಿತಿರುವ ಕಿರು ಶಿಲ್ಪಗಳನ್ನು ಗಮನಿಸಬಹುದು. ಈ ಕಿರುಶಿಲ್ಪಗಳ ತಲೆಯ ಮೇಲೆ ಹಂಸ ಶಿಲ್ಪಗಳ ರಚನೆಯನ್ನು ಮಾಡಲಾಗಿದೆ.

**೧೦. ಶಿವ**

ಅದೇ ಪಟ್ಟಿಕೆಯಲ್ಲಿ ಮತ್ತೊಂದು ಶಿವನ ಉಬ್ಬು ಶಿಲ್ಪವನ್ನು ಕಾಣಬಹುದು. ನಿಂತಭಂಗಿಯಲ್ಲಿರುವ ಶಿವನು ದ್ವಿಬಾಹುಗಳನ್ನು ಹೊಂದಿದ್ದಾನೆ. ಬಲಗೈಯಲ್ಲಿ ತ್ರಿಶೂಲ, ಎಡಗೈಯಲ್ಲಿ ಡಮರು ಹಿಡಿದಿರುವನು. ಶಿಲ್ಪ ರಚನೆಯಲ್ಲಿ ಶಿವನು ಕಿರೀಟಧಾರಿಯಾಗಿದ್ದು, ಓಲೆ, ಮುತ್ತಿಹಾರ ಮತ್ತು ವಸ್ತ್ರಾಲಂಕಾರವನ್ನು ಕಾಣಬಹುದಾಗಿದೆ.

೧೧. ಸರಸ್ವತಿ ದೇವಿ

ದೇವಿಯ ಶಿಲ್ಪವು ಪದ್ಮಾಸನದಲ್ಲಿದ್ದು, ಚತುರ್ಭುಜಗಳನ್ನು ಹೊಂದಿದೆ. ಬಲಹಸ್ತಗಳಲ್ಲಿ ಕಮಂಡಲ, ಪಾಶವನ್ನು ಹಾಗೂ ಎಡಹಸ್ತಗಳಲ್ಲಿ ಪುಸ್ತಕ, ಪದ್ಮವನ್ನು ಕಾಣಬಹುದು. ಸರಸ್ವತಿ ಶಿಲ್ಪ ರಚನೆಯಲ್ಲಿ ಉದ್ದನೆಯ ಹಾರ, ನಡುಪಟ್ಟಿ, ವಸ್ತ್ರಾಲಂಕಾರವು ಕಂಡುಬರುತ್ತದೆ.

೧೨. ಭೈರವ

ಕುಳಿತಿರುವ ಭೈರವನ ಉಬ್ಬುಶಿಲ್ಪದ ಸುತ್ತ ಅಲಂಕೃತ ಪ್ರಭಾವಳಿ ಇದೆ. ಭೈರವನು ಚತುರ್ಭುಗಳನ್ನು ಹೊಂದಿದ್ದು, ಬಲಹಸ್ತಗಳಲ್ಲಿ ಖಡ್ಗ, ತ್ರಿಶೂಲ ಹಾಗೂ ಎಡಹಸ್ತಗಳಲ್ಲಿ ರುಂಡ, ಪಾಶವನ್ನು ಹೊಂದಿದ್ದಾನೆ. ಕಿರೀಟಧಾರಿಯಾದ ಭೈರವನ ಶಿಲ್ಪದಲ್ಲಿ ಓಲೆ, ವಿವಿಧ ಹಾರಗಳು, ವಸ್ತ್ರಾಲಂಕಾರ ಕಾಣಬಹದು. ಭೈರವನು ಕುಳಿತಿರುವ ಪೀಠದ ಕೆಳಭಾಗದಲ್ಲಿ ಚೇಳಿನ ಕಿರು ಶಿಲ್ಪವಿದೆ. ಭೈರವ ಶಿಲ್ಪದ ಇಕ್ಕಲಗಳಲ್ಲಿ ಹಂಸಪಕ್ಷಿಗಳಿವೆ. ಶಿಲ್ಪದ ಮೇಲ್ಭಾಗದ ಇಕ್ಕಲಗಳಲ್ಲಿ ಸಿಂಹಗಳ ರಚನೆಯನ್ನು ಕಾಣಬಹುದು.

೧೩. ವ್ಯಾಘ್ರಪಾದ

ಕಿರೀಟ ಮುಕುಟಧಾರಿ ವ್ಯಾಘ್ರಪಾದವು ಬಲಗೈಯಲ್ಲಿ ಧೂಪಕುಂಡವನ್ನು, ಎಡಗೈಯಲ್ಲಿ ಘಂಟೆಯನ್ನು ಹಿಡಿದಿದ್ದಾನೆ. ಈ ಶಿಲ್ಪದ ಎದುರಿಗೆ ಶಿವಲಿಂಗವನ್ನು ಕಾಣಬಹುದು. ವ್ಯಾಘ್ರಪಾದನು ಶಿವನನ್ನು ಆರಾಧಿಸುತ್ತಿರುವಂತೆ ರಚಿಸಿದ್ದಾರೆ. ಈ ಶಿಲ್ಪವು ಹಾಳಾಗಿರುವ ಸ್ಥಿತಿಯಲ್ಲಿದ್ದರಿಂದ ಹೆಚ್ಚಿನ ಅಂಶಗಳನ್ನು ಗುರುತಿಸಲು ಸಾಧ್ಯವಾಗುವುದಿಲ್ಲ.

೧೪. ಕೃಷ್ಣ ಮತ್ತು ಗೋಪಿಕೆ

ಕಿರೀಟಮುಕುಟಧಾರಿ ಕೃಷ್ಣನು ಕೈಗಳಲ್ಲಿ ಕೊಳಲನ್ನು ಹಿಡಿದಿದ್ದಾನೆ. ಈ ಶಿಲ್ಪದ ಬಲಬದಿಯಲ್ಲಿ ಗೋಪಿಕೆ ಹಾಗೂ ಗೋವಿನ ಶಿಲ್ಪಗಳನ್ನು ಕಾಣಬಹುದು. ಗೋಪಿಕೆಯು ಮಡಿಕೆಯನ್ನು ತಲೆಯ ಮೇಲೆ ಹೊತ್ತುಕೊಂಡು ನಿಂತಿದ್ದು, ಎಡಗೈಯನ್ನು ಮಡಿಕೆಯ ಮೇಲೆ ಇಟ್ಟಿರುವಳು. ಹಾಗೆಯೇ ಬಲಗೈಯನ್ನು ಗೋವಿನ ತಲೆಯ ಮೇಲೆ ಇಟ್ಟಿರುವಂತೆ ಶಿಲ್ಪವನ್ನು ರಚಿಸಿದ್ದಾರೆ. ಕೃಷ್ಣನ ಕೊಳಲಿನ ನಾದಕ್ಕೆ ಗೋಪಿಕೆ ಮತ್ತು ಗೋವು ಆಲಿಸುವಂತೆ ಕಂಡುಬರುವ ದೃಶವನ್ನು ಈ ಪಟ್ಟಿಕೆಯ ಶಿಲ್ಪಗಳು ಪ್ರಕಟಿಸುತ್ತವೆ.

೧೫. ಅರ್ಧನಾರೀಶ್ವರ

ಅರ್ಧನಾರೀಶ್ವರನ ಈ ಶಿಲ್ಪವು ತ್ರಿಭಂಗಿಯಲ್ಲಿರುವಂತೆ ರಚನೆ ಮಾಡಿದ್ದಾರೆ. ಶಿಲ್ಪ ರಚನೆಯಲ್ಲಿ ಓಲೆ, ವಿವಿಧ ಹಾರಗಳು, ನಡುಪಟ್ಟಿ, ವಸ್ತ್ರಾಲಂಕಾರವನ್ನು ಕಾಣಬಹುದು. ಈ ಶಿಲ್ಪವು ಭಗ್ನವಾಗಿದ್ದರಿಂದ ಹೆಚ್ಚಿನ ಅಂಶಗಳನ್ನು ಗುರುತಿಸಲು ಸಾಧ್ಯವಾಗುದಿಲ್ಲ.

**ಲೋಹ ಮಾಧ್ಯಮದ ಶಿಲ್ಪಗಳು**

ಬನಶಂಕರಿ ದೇವಾಲಯದಲ್ಲಿ ಒಂದೇ ಆಕೃತಿಯ ವಿವಿಧ ಮಾಧ್ಯಮದ ಶಿಲ್ಪಗಳನ್ನು ಕಾಣಬಹುದು. ಅವುಗಳಲ್ಲಿ ಬೆಳ್ಳಿ, ಪಂಚಲೋಹದ ಐದು ಕಿರು ಉತ್ಸವ ಶಿಲ್ಪಗಳಿವೆ. ಅದರಲ್ಲಿ ಮೂರು ಬೆಳ್ಳಿಯ, ಎರಡು ಪಂಚಲೋಹದ್ದಾಗಿದೆ. ಅವುಗಳಲ್ಲಿ ಪ್ರಮುಖವಾಗಿರುವ ಎರಡು ಬೆಳ್ಳಿ ಶಿಲ್ಪಗಳನ್ನು ಇಲ್ಲಿ ವಿವರಿಸಲಾಗಿದೆ.

ಬೆಳ್ಳಿ ಶಿಲ್ಪಗಳಲ್ಲಿ ಲೋಹ ಪೀಠದ ಮೇಲೆ ಸಿಂಹವಾಹಿನಿಯಾಗಿರುವ ಬನಶಂಕರಿಯ ಶಿಲ್ಪವಿದ್ದು, ಶಿಲ್ಪದ ಸುತ್ತಲೂ ಅಲಂಕೃತ ಪ್ರಭಾವಳಿಯಿದೆ. ಪ್ರಭಾವಳಿಯ ಮಧ್ಯಭಾಗದಲ್ಲಿ ಕೀರ್ತಿ ಮುಖವನ್ನು ರಚಿಸಿದ್ದಾರೆ. ಕಿರೀಟ ಮುಕುಟಧಾರಿ ದೇವಿಯ ಶಿಲ್ಪದಲ್ಲಿ ವಿವಿಧ ಹಾರಗಳು, ತೋಳ್ಬಂಧಿ, ಕಡಗಗಳನ್ನು ಧರಿಸಿದ್ದಾಳೆ. ಪ್ರಸನ್ನ ಮುಖವನ್ನು ಹೊಂದಿರುವ ದೇವಿಯ ಶಿಲ್ಪದಲ್ಲಿ ಅಷ್ಟಬಾಹುಗಳಿದ್ದು, ಬಲಹಸ್ತಗಳಲ್ಲಿ ಅಭಯಹಸ್ತ, ತ್ರಿಶೂಲ, ಗಂಟೆ, ಖಡ್ಗ, ಎಡಹಸ್ತಗಳಲ್ಲಿ ಪಾಣಿಬಟ್ಟಲು, ಡಮರು, ಗುರಾಣಿ, ರುಂಡವನ್ನು ಹಿಡಿದಿರುವಂತೆ ತೋರಿಸಲಾಗಿದೆ. ದೇವಿ ಶಿಲ್ಪದ ಇಕ್ಕಲಗಳಲ್ಲಿ ಹಂಸ ಕಿರು ಶಿಲ್ಪಗಳಿವೆ.

ಮೇಲೆ ವಿವರಿಸಿದ ಶಿಲ್ಪಕ್ಕಿಂತ ಗಾತ್ರದಲ್ಲಿ ಕಿರಿದಾಗಿರುವ ಮತ್ತೊಂದು ಬನಶಂಕರಿ ಶಿಲ್ಪವನ್ನು ಬೆಳ್ಳಿಯ ಮಾಧ್ಯಮದಲ್ಲಿ ರಚಿಸಿದ್ದಾರೆ. ಈ ಶಿಲ್ಪವು ಅಷ್ಟಬಾಹುಗಳನ್ನು ಹೊಂದಿದ್ದು, ಬಲಹಸ್ತಗಳಲ್ಲಿ ಪುಸ್ತಕ, ಗಧೆ, ತ್ರಿಶೂಲ, ಖಡ್ಗಗಳಿದ್ದು, ಎಡಹಸ್ತಗಳಲ್ಲಿ ಪಾಣಿಬಟ್ಟಲು, ರುಂಡ, ಗುರಾಣಿ, ಡಮರುವನ್ನು ಹೊಂದಿದೆ. ಕಿರೀಟ ಮುಕುಟಧಾರಿ ದೇವಿ ಶಿಲ್ಪ ಪ್ರಸನ್ನ ಮುಖವನ್ನು ಹೊಂದಿರುವುದು. ಶಿಲ್ಪವು ವಿವಿಧ ಹಾರಗಳು, ತೋಳ್ಬಂಧಿ, ಕಡಗಗಳನ್ನು ಧರಿಸಿರುವಳು. ಸಿಂಹವಾಹಿನಿ ದೇವಿಯು ಮತ್ತು ಈಕೆಯ ವಾಹನವಾದ ಸಿಂಹವು ಶಾಂತರೂಪದಲ್ಲಿರುವುದನ್ನು ಕಾಣಬಹುದು. ಇವೆರಡು ಶಿಲ್ಪಗಳನ್ನು ಅತ್ಯಂತ ಕಲಾತ್ಮಕವಾಗಿ ಶಿಲ್ಪಿಯು ರಚಿಸಿದ್ದಾನೆ. ಈ ಶಿಲ್ಪಗಳನ್ನು ಪ್ರತಿ ಮಂಗಳವಾರ, ಶುಕ್ರವಾರ ಹಾಗೂ ವಿಶೇಷವಾದ ಸಂದರ್ಭಗಳಲ್ಲಿ ಪಲ್ಲಕ್ಕಿಯಲ್ಲಿಟ್ಟು ಉತ್ಸವವನ್ನು ಮಾಡುತ್ತಾರೆ.

**II. ಲೌಕಿಕ ಶಿಲ್ಪಗಳು**

ಬನಶಂಕರಿ ಕ್ಷೇತ್ರದಲ್ಲಿರುವ ಲೌಕಿಕ ಶಿಲ್ಪಗಳು ಬನಶಂಕರಿಯ ಗುಡಿಯ ಪೌಳಿಯಲ್ಲಿ, ಕಂಬಗಳಲ್ಲಿ, ಮೇಲ್ಚಾವಣಿಯಲ್ಲಿ ಕಂಡುಬರುತ್ತವೆ. ಆದರೆ ಅವುಗಳ ಪ್ರಮಾಣ ಕಡಿಮೆ. ಹರಿದ್ರಾತೀರ್ಥದ ಬದಿಯಲ್ಲಿರುವ ದೀಪಸ್ತಂಭದ ಅಧಿಷ್ಠಾನ, ಭಿತ್ತಿಭಾಗ, ಕಂಬಗಳ ಮೇಲೆ ಹೆಚ್ಚಿನ ಸಂಖ್ಯೆಯ ಲೌಕಿಕ ಶಿಲ್ಪಗಳುನ್ನು ಕಾಣಬಹುದು. ಆ ಶಿಲ್ಪಗಳು ಚೌಕಾಕಾರ, ವೃತ್ತಾಕಾರ, ಇಲ್ಲವೆ ಅರ್ಧ ವೃತ್ತಾಕಾರದ ಉಬ್ಬು ಶಿಲ್ಪಗಳಾಗಿರುವುದು ವಿಶೇಷ. ಶಿಲ್ಪಗಳಲ್ಲಿ ಸಾಮಾನ್ಯವಾಗಿ ಮಿಥುನಶಿಲ್ಪ, ವಿಭಿನ್ನ ಪ್ರಕಾರದ ಪ್ರಾಣಿಗಳು, ಪಕ್ಷಿಗಳು, ಗಿಡಬಳ್ಳಿಗಳು, ಜ್ಯಾಮಿತಿ ನಕ್ಷೆಗಳು, ಪುಷ್ಪವಿನ್ಯಾಸ, ಭಕ್ತರು, ಅರಸು, ದಂಪತಿಗಳು, ವಿನೋದ, ಸಂಗೀತ ಶಿಲ್ಪಗಳನ್ನು ಕಾಣಬಹುದು. ಈ ಶಿಲ್ಪಗಳಿಂದ ಅಂದಿನ ವೇಷಭೂಷಣ, ಕೇಶಶೈಲಿ, ವಾದ್ಯ ಮಾಧ್ಯಮ ಮುಂತಾದ ವಿಷಯಗಳನ್ನು ತಿಳಿದುಕೊಳ್ಳಬಹುದಾಗಿದೆ.

ಬನಶಂಕರಿ ಕ್ಷೇತ್ರದಲ್ಲಿ ದೈವ ಶಿಲ್ಪಗಳಂತೆ ಭಕ್ತ ಶಿಲ್ಪಗಳು ಹೆಚ್ಚಿನ ಸಂಖ್ಯೆಯಲ್ಲಿ ದೊರಕಿವೆ. ದೇವಾಲಯಗಳಲ್ಲಿ ಭಕ್ತರ ವಿಗ್ರಹಗಳನ್ನು ರೂಪಿಸಿ, ಪ್ರತಿಷ್ಠಾಪಿಸಿ ಪೂಜಿಸುವ ಆಚಾರವು ದಕ್ಷಿಣ ಭಾರತದಲ್ಲಿ ಬಹು ಪ್ರಾಚೀನವಾದುದು. ಈ ಭಕ್ತರಲ್ಲಿ ಜಾತಿಯ ಅಂತರವಾಗಲಿ, ವೃತ್ತಿ ಭೇದಗಳಾಗಲಿ ಪರಿಗಣಿಸುವುದಿಲ್ಲ. ಅವರು ಭಕ್ತರು ಎಂಬುವುದೇ ಮುಖ್ಯ. ಈ ಭಕ್ತರು ಹೆಣ್ಣಾಗಿರಬಹುದು, ಗಂಡಾಗಿರಬಹುದು, ಅರಸನಾಗಿರಬಹುದು, ಆಳಾಗಿರಬಹುದು. ಇಂತಹ ಭಕ್ತ ಮೂರ್ತಿಗಳನ್ನು ದೇವಾಲಯದ ಪೂಜೆಗಾಗಿ ಹೂಮಾಲೆಗಳನ್ನು ಕಟ್ಟುವ ಸ್ಥಳಗಳಲ್ಲಿ ಹೆಚ್ಚಾಗಿ ಪ್ರತಿಷ್ಠಾಪಿಸಲಾಗುತ್ತದೆ ಎಂದು ಹೇಳುತ್ತಾರೆ.[೩೧] ಅಂದರೆ ಬೇರೆ ಸ್ಥಳಗಳಲ್ಲಿ ಭಕ್ತ ಶಿಲ್ಪಗಳು ಇರುವುದಿಲ್ಲ ಎಂದು ಹೇಳಲು ಸಾಧ್ಯವಿಲ್ಲ. ದೇವಾಲಯದ ಒಳಭಾಗದಲ್ಲಿಯೂ ಇರಬಹುದು.

ಬನಶಂಕರಿ ಪರಿಸರದಲ್ಲಿ ಭಕ್ತ ಶಿಲ್ಪಗಳನ್ನು ದೀಪಮಹಲ್‌ನಲ್ಲಿ ಮಾತ್ರ ಕಾಣುತ್ತೇವೆ. ದೀಪಮಹಲ್‌ನ ಅಧಿಷ್ಠಾನ ಮತ್ತು ಕಂಬಗಳಲ್ಲಿ ಭಕ್ತರ ಶಿಲ್ಪಗಳನ್ನು ರಚಿಸಲಾಗಿದೆ. ಸುಮಾರು ೨೦ಕ್ಕಿಂತ ಹೆಚ್ಚು ಭಕ್ತ ಶಿಲ್ಪಗಳಿವೆ. ಆದರೆ ಎಲ್ಲ ಶಿಲ್ಪಗಳು ಬಹುತೇಕ ಹಾಳಾಗಿರುವ ಸ್ಥಿತಿಯಲ್ಲಿರುವುದರಿಂದ ಶಿಲ್ಪಗಳ ಎಲ್ಲಾ ಲಕ್ಷಣಗಳನ್ನು ಗುರುತಿಸಲು ಕಷ್ಟಕರವಾಗಿದೆ. ದೀಪಮಹಲ್‌ನ ಒಳಭಾಗದ ಕಂಬದ ಮೇಲಿರುವ ಭಕ್ತಶಿಲ್ಪಗಳು ತಕ್ಕಮಟ್ಟಿಗೆ ಉತ್ತಮ ಸ್ಥಿತಿಯಲ್ಲಿವೆ. ಅವುಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಲಾಗಿದೆ.

**೧. ಅಂಜಲಿ ಮುದ್ರೆಯಲ್ಲಿರುವ ಭಕ್ತ ಶಿಲ್ಪ**

ದೀಪಸ್ತಂಭದ ಅಧಿಷ್ಠಾನದ ಎರಡನೆಯ ಪಟ್ಟಿಕೆಯ ಹಿಂಭಾಗದಲ್ಲಿ ಅಂಜಲಿ ಮುದ್ರೆಯಲ್ಲಿರುವ ಶಿಲ್ಪವಿದೆ. ಶಿಲ್ಪದ ತಲೆ, ಮುಖದ ಭಾಗ ನಶಿಸಿದೆ. ಶಿಲ್ಪವು ಪದ್ಮಾಸನದಲ್ಲಿದ್ದು, ಕೈಗಳನ್ನು ಜೋಡಿಸಿ ನಮಸ್ಕರಿಸಿರುವಂತೆ ರಚಿಸಿದ್ದಾರೆ.

**೨. ಮೊದಲನೆಯ ಅಂತಸ್ತಿನಲ್ಲಿರುವ ದಂಪತಿಯರ ಭಕ್ತ ಶಿಲ್ಪ**

ದೀಪಸ್ತಂಭದ ಮೊದಲನೆಯ ಅಂತಸ್ತಿನ ಒಳಗಿರುವ ಮುಂಭಾಗದ ಕಂಬದ ಮೇಲೆ ನಿಂತ ಭಂಗಿಯಲ್ಲಿರುವ ದಂಪತಿಯರ ಭಕ್ತ ಶಿಲ್ಪಗಳಿವೆ. ಶಿಲ್ಪ ರಚನೆಯಲ್ಲಿ ಬಲಭಾಗದಲ್ಲಿ ಪುರುಷ, ಎಡಭಾಗದಲ್ಲಿ ಸ್ತ್ರೀ ಶಿಲ್ಪವಿದೆ. ಪುರುಷ ಶಿಲ್ಪವು ದುಂಡು ಮುಖವನ್ನು ಹೊಂದಿದ್ದು, ಅಗಲವಾದ ಹಣೆ, ಹಣೆಯ ಮೇಲೆ ಮೂರು ಅಡ್ಡನಾಮಗಳಿವೆ. ಹಿಂದಕ್ಕೆ ಬಾಚಿದ ಕೂದಲನ್ನು ಎಡಭಾಗದಲ್ಲಿ ಮುಡಿಕಟ್ಟಿದಂತೆ ಇದೆ. ಕಮಾನಿನ ಆಕಾರದ ಹುಬ್ಬುಗಳು, ಮೂಗು, ತುಟಿಗಳ ಭಾಗ ಹಾಳಾಗಿವೆ. ಕಿವಿಗೆ ವೃತ್ತಾಕಾರದ ಓಲೆ, ಕೊರಳಲ್ಲಿ ವಿವಿಧ ಹಾರಗಳನ್ನು ಕೆತ್ತಲಾಗಿದೆ. ಈ ಶಿಲ್ಪಗಳ ಕೈಗಳಲ್ಲಿ ಲಿಂಗವನ್ನು ಹಿಡಿದಿರುವಂತೆ ಕಾಣುವುದು. ಪುರುಷ ಶಿಲ್ಪದ ರಚನೆಯಲ್ಲಿ ಧೋತ್ರವನ್ನು ಸುಂದರವಾಗಿ ನೆರಿಗೆ ಬರುವಂತೆ ರಚಿಸಿದ್ದಾರೆ.

ಈ ಶಿಲ್ಪದ ಬಲಭಾಗದಲ್ಲಿ ಸ್ತ್ರೀ ಶಿಲ್ಪವಿದೆ. ಶಿಲ್ಪದಲ್ಲಿ ಕೂದಲುಗಳನ್ನು ಹಿಂದಕ್ಕೆ ಬಾಚಿ, ದುಂಡಾದ ಮುಖ, ಅಗಲವಾದ ಹಣೆ ಮೇಲೆ ತಿಲಕ, ಕಮಾನಿನ ಆಕಾರದ ಹುಬ್ಬುಗಳ ರಚನೆ ಮಾಡಿದವರು. ದಪ್ಪಮೂಗು, ದಪ್ಪದಾದ ತುಟಿಗಳನ್ನು ರಚಿಸಿದ್ದಾರೆ. ಕಿವಿಗಳಿಗೆ ವೃತ್ತಾಕಾರದ ಓಲೆಗಳನ್ನು ಹಾಕಿಕೊಂಡಿದ್ದಾಳೆ. ಕೊರಳಲ್ಲಿ ಹಾರವನ್ನು ಹೊಂದಿದ್ದು, ತನ್ನ ಎರಡು ಕೈಗಳಲ್ಲಿ ಲಿಂಗವನ್ನು ಹಿಡಿದುರುವಂತೆ ರಚನೆ ಮಾಡಿದ್ದಾರೆ. ಶಿಲ್ಪವು ಧರಿಸಿರುವ ಕೆಳ ಭಾಗದ ವಸ್ತ್ರದಲ್ಲಿ ನೆರಿಗೆಗಳನ್ನು ರಚಿಸಿದ್ದಾರೆ.

**೩. ಎರಡನೆಯ ಅಂತಸ್ತಿನಲ್ಲಿರುವ ದಂಪತಿಯರ ಭಕ್ತ ಶಿಲ್ಪಗಳು**

ದೀಪಮಹಲನ ಎರಡನೆಯ ಅಂತಸ್ತಿನ ಕಂಬದಲ್ಲಿ ದಂಪತಿಯರ ಭಕ್ತ ಶಿಲ್ಪಗಳಿರುವುದನ್ನು ಕಾಣಬಹುದು. ಮಧ್ಯದಲ್ಲಿ ಪುರುಷ, ಪುರುಷ ಶಿಲ್ಪದ ಬಲ, ಎಡ ಭಾಗಗಳಲ್ಲಿ ಸ್ತ್ರೀ ಶಿಲ್ಪಗಳಿವೆ. ಶಿಲ್ಪಗಳಲ್ಲಿರುವ ವೇಷಭೂಷಣಗಳನ್ನು ಗಮನಿಸಿದರೆ ರಾಜಕುಟುಂಬದವರು ಎನ್ನಿಸುತ್ತದೆ.

ಕಂಬಕ್ಕೆ ಹೊಂದಿಕೊಂಡಿರುವ ಪೀಠದ ಮೇಲೆ ಈ ಶಿಲ್ಪಗಳನ್ನು ನೋಡಬಹುದು. ಅರಸನ ಶಿಲ್ಪದಲ್ಲಿ ಆತನು ಪೇಟವನ್ನು ಧರಿಸಿದ್ದು, ಹಣೆಯ ಮೇಲೆ ಮೂರು ಅಡ್ಡನಾಮಗಳಿವೆ. ಶಿಲ್ಪ ರಚನೆಯಲ್ಲಿ ಕೂಡಿದಂತಿರುವ ಕಮಾನಿನ ಆಕಾರದ ಹುಬ್ಬುಗಳು, ಉದ್ದವಾದ ಮುಖ, ಮೂಗು ಇದ್ದು, ಸಣ್ಣ ಕಡಗ, ನಡುಪಟ್ಟಿಯನ್ನು ರಚಿಸಲಾಗಿದೆ. ಕೈಗಳನ್ನು ಜೋಡಿಸಿದ್ದು, ಕೈಗಳಲ್ಲಿ ಲಿಂಗವನ್ನು ಹಿಡಿದಿದ್ದಾನೆ. ಅರಸನ ಶಿಲ್ಪದ ಧೋತ್ರದಲ್ಲಿ ಉದ್ದವಾದ ನೆರಿಗೆಗಳ ರಚನೆಯನ್ನು ಕಾಣಬಹುದು.

ಅರಸನ ಬಲಭಾಗದಲ್ಲಿರುವ ರಾಣಿ ಶಿಲ್ಪದಲ್ಲಿ ಕೇಶವನ್ನು ಹಿಂದಕ್ಕೆ ಬಾಚಿ, ಬಲಭಾಗದ ತೊಡೆಯವರೆಗೆ ಕೇಶರಾಶಿಯಿದೆ. ಶಿಲ್ಪ ರಚನೆಯಲ್ಲಿ ದುಂಡು ಮುಖ, ಹಣೆಯಲ್ಲಿ ಅಡ್ಡ ನಾಮಗಳು, ಕೂಡಿರುವ ಕಮಾನಿನ ಆಕಾರದ ಹುಬ್ಬುಗಳು, ಉದ್ದಮೂಗು, ದಪ್ಪ ತುಟಿಯಿರುವಂತೆ ಕೆತ್ತನೆ ಮಾಡಿರುವರು. ಕಿವಿಗಳಲ್ಲಿ ವೃತ್ತಾಕಾರದ ಓಲೆಗಳು, ಕೊರಳಲ್ಲಿ ವಿವಿಧ ಹಾರಗಳು, ಕೈಗಳಲ್ಲಿ ಮುತ್ತಿನ ಬಳೆಗಳಿವೆ. ಎರಡು ಕೈಗಳನ್ನು ಜೋಡಿಸಿ ಲಿಂಗವನ್ನು ಹಿಡಿದಿರುವ ರೀತಿಯಲ್ಲಿದೆ. ಶಿಲ್ಪದ ವಸ್ತ್ರದಲ್ಲಿ ನೆರಿಗೆಗಳು ಆಕರ್ಷಕವಾಗಿ ಮೂಡಿಬಂದಿವೆ.

ಅರಸನ ಎಡಭಾಗದಲ್ಲಿರುವ ರಾಣಿಯ ಶಿಲ್ಪದಲ್ಲಿ ಕೂದಲನ್ನು ಹಿಂಭಾಗಕ್ಕೆ ಹಾಕಿ ಸೊಂಟದವರೆಗೆ ಕೇಶರಾಶಿಯಿರುವಂತೆ ಕೆತ್ತಿರುವರು. ಅಗಲವಾದ ಹಣೆಯ ಮೇಲೆ ಅಡ್ಡನಾಮಗಳಿವೆ. ಕಮಾನಿನ ಆಕಾರದ ಹುಬ್ಬುಗಳು ಕೂಡಿಕೊಂಡಂತೆ ಮಾಡಲಾಗಿದೆ. ಶಿಲ್ಪವು ಚಪ್ಪಟೆ ಮೂಗು, ಚಿಕ್ಕ ತುಟಿಗಳನ್ನು ಹೊಂದಿರುವುದನ್ನು ಕಾಣಬಹುದು. ಶಿಲ್ಪ ರಚನೆಯಲ್ಲಿ ಕೊರಳಲ್ಲಿ ವಿವಿಧ ಹಾರಗಳು, ಕೈಗಳಲ್ಲಿ ಮುತ್ತಿ ಬಳೆಗಳ ರಚನೆಯಿದೆ. ಶಿಲ್ಪದಲ್ಲಿರುವ ವಸ್ತ್ರದ ನೆರಿಗೆಗಳನ್ನು ನೋಡಬಹುದು. ಅರಸರ ಇಬ್ಬರು ಪತ್ನಿಯ

ವೇಷಭೂಷಗಳು ಒಂದೇ ರೀತಿಯಲ್ಲಿವೆ. ಆದರೆ ಬಲಭಾಗ ರಾಣಿ ಶಿಲ್ಪಕ್ಕಿಂತ ಎಡಭಾಗದ ರಾಣಿಯ ಶಿಲ್ಪವು ಗಾತ್ರದಲ್ಲಿ ಸ್ವಲ್ಪ ಕಿರಿದಾಗಿದೆ.

**೪. ಮೂರನೆಯ ಅಂತಸ್ತಿನಲ್ಲಿರುವ ದಂಪತಿಯರ ಭಕ್ತ ಶಿಲ್ಪಗಳು**

ದೀಪಮಹಲನ ಮೂರನೆಯ ಅಂತಸ್ತಿನಲ್ಲಿ ಅರಸ ಮತ್ತು ಆತನ ಪತ್ನಿಯು ನಿಂತಿರುವ ಉಬ್ಬು ಶಿಲ್ಪಗಳಿವೆ. ಈ ಮೊದಲೇ ವಿವರಿಸಿದ ಶಿಲ್ಪಗಳಿಂದ ಈ ಶಿಲ್ಪಗಳು ಹೆಚ್ಚು ಅಲಂಕೃತವಾಗಿದ್ದು ಕಂಡುಬರುತ್ತದೆ. ಶಿಲ್ಪಗಳ ವಸ್ತ್ರಾಭರಣಗಳನ್ನು ಗಮನಿಸಿದರೆ ರಾಜ ಪರಿವಾರದವರು ಎಂದು ಅನಿಸುವುದು. ಅರಸನ ಶಿಲ್ಪ ರಚನೆಯಲ್ಲಿ ಅರಸನು ಉದ್ದನೆಯ ಪೇಟಾವನ್ನು ಧರಿಸಿದ್ದಾನೆ. ಅಗಲವಾದ ಮುಖವನ್ನು ಹೊಂದಿದ್ದು, ಹಣೆಗೆ ಅಡ್ಡ ನಾಮ, ನಾಮದ ಮಧ್ಯದಲ್ಲಿ ತಿಲಕ ಇಟ್ಟಿರುವಂತೆ ಮಾಡಲಾಗಿದೆ. ಶಿಲ್ಪದಲ್ಲಿ ಹುಬ್ಬುಗಳು ಕೂಡಿರುವಂತೆ ಮಾಡಲಾಗಿದ್ದು, ಮಂದಹಾಸ ಮುಖವನ್ನು ಹೊಂದಿದ್ದಾನೆ. ಶಿಲ್ಪವು ಉದ್ದವಾದ ಮೂಗು, ಮೀಸೆ, ಸಣ್ಣ ತುಟಿಗಳನ್ನು ಹೊಂದಿದೆ. ಕೊರಳಲ್ಲಿ ವಿವಿಧ ಹಾರಗಳು, ಕೈಗಳಲ್ಲಿ ಕಡಗಗಳು, ಸೊಂಟದಲ್ಲಿ ನಡುಪಟ್ಟಿಯಿದೆ. ಅರಸನು ಎರಡು ಕೈಗಳನ್ನು ಜೋಡಿಸಿದ್ದು ಕೈಗಳಲ್ಲಿ ಲಿಂಗವನ್ನು ಹಿಡಿದಿದ್ದಾನೆ. ಅರಸನು ತೊಟ್ಟಿರುವ ಮೇಲ್ ಹೊದಿಕೆ (ಶಲ್ಯ) ಹಿಂದಕ್ಕೆ ಹೋಗಿರುವಂತಹ ರಚನೆಯನ್ನು ಮಾಡಲಾಗಿದೆ. ಕೆಳಭಾಗ ವಸ್ತ್ರವಾದ ಧೋತ್ರದಲ್ಲಿ ನೆರಿಗೆಗಳನ್ನು ರಚಿಸಿದ್ದಾರೆ.

ಅರಸನ ಎಡಭಾಗದಲ್ಲಿರುವ ರಾಣಿಯ ಶಿಲ್ಪವು ಮಂದಹಾಸ ಮುಖವನ್ನು ಹೊಂದಿದೆ. ಈ ರಾಣಿಯು ಕಿರೀಟವನ್ನು ಧರಿಸಿದ್ದಾಳೆ. ಹಣೆಯಲ್ಲಿ ಅಡ್ಡನಾಮಗಳು, ಕಮಾನಿನ ಆಕಾರದಲ್ಲಿ ಕೂಡಿದ ಹುಬ್ಬುಗಳಿದ್ದು, ಉದ್ದಮೂಗು, ತೆರೆದ ಕಣ್ಣುಗಳು, ಚಿಕ್ಕದಾದ ತುಟಿಗಳಿರುವಂತೆ ಶಿಲ್ಪವನ್ನು ಕಂಡಿರಿಸಲಾಗಿದೆ. ಶಿಲ್ಪದಲ್ಲಿ ಓಲೆ, ವಿವಿಧ ಹಾರಗಳು, ಮುತ್ತಿನ ಬಳೆಗಳು, ಸೊಂಟದ ಪಟ್ಟಿಯನ್ನು ರಚಿಸಿದ್ದಾರೆ. ಈಕೆಯು ಧರಿಸಿರುವ ಸೀರೆಯಲ್ಲಿ ನೆರಿಗೆಗಳು ಸುಂದರವಾಗಿ ಮೂಡಿಬಂದಿವೆ. ಈ ಮೊದಲೇ ವಿವರಿಸಿದ ರಾಣಿಯರಿಗಿಂತ ಭಿನ್ನವಾದ ಮುಖ ಲಕ್ಷಣಗಳು ಈ ರಾಣಿಯ ಶಿಲ್ಪ ರಚನೆಯಲ್ಲಿ ಕಾಣಬಹುದು.

**೫. ಮೊದಲನೆಯ ಅಂತಸ್ತಿನಲ್ಲಿರುವ ಸ್ತ್ರೀ ಭಕ್ತ ಶಿಲ್ಪಗಳು**

ಮೊದಲನೆಯ ಅಂತಸ್ತಿನ ಹಿಂಭಾಗದ ಕಂಬದಲ್ಲಿ ಎರಡು ಭಕ್ತ ಸ್ತ್ರೀ ಶಿಲ್ಪಗಳಿವೆ. ಕಂಬದ ಬಲ ಭಾಗದಲ್ಲಿರುವ ಶಿಲ್ಪದಲ್ಲಿ ಕೇಶವನ್ನು ಹಿಂದಕ್ಕೆ ಬಾಚಿ, ಎಡಭಾಗಕ್ಕೆ ಮುಡಿಕಟ್ಟಿ ಮುಡಿಯಿಂದ ಸೊಂಟದವರೆಗೆ ಕೇಶ ಇಳಿಬಿಟ್ಟಿರುವ ಹಾಗೆ ರಚನೆ ಮಾಡಿದ್ದಾರೆ. ಶಿಲ್ಪ ರಚನೆಯಲ್ಲಿ ಅಗಲವಾದ ಮುಖ, ಹಣೆಗೆ ತಿಲಕ, ಕಮಾನಿನ ಆಕಾರದ ಹುಬ್ಬುಗಳನ್ನು ಕೂಡಿಸಲಾಗಿದೆ. ಉದ್ದನೆಯ ಮೂಗು, ಸಣ್ಣ ತುಟಿಗಳಿವೆ. ಕಿವಿಯಲ್ಲಿರುವ ಓಲೆ

ವೃತ್ತಾಕಾರವಾಗಿದ್ದು, ಕೊರಳಲ್ಲಿ ವಿವಿಧ ಹಾರಗಳನ್ನು ಧರಿಸಿ, ಕೈಗಳಲ್ಲಿ ಬಳೆಗಳನ್ನು ರಚಿಸಿದ್ದಾರೆ. ಎರಡು ಕೈಗಳಲ್ಲಿ ಲಿಂಗವನ್ನು ಹಿಡಿದಿರುವಂತೆ ಕೆತ್ತಲಾಗಿದೆ. ಶಿಲ್ಪದ ಕೆಳಭಾಗದ ವಸ್ತ್ರದಲ್ಲಿ ಅಡ್ಡ, ಉದ್ದವಾದ ನೆರಿಗೆಗಳನ್ನು ರಚಿಸಿದ್ದಾರೆ.

ಎಡಭಾಗದಲ್ಲಿರುವ ಇನ್ನೊಂದು ಶಿಲ್ಪ ರಚನೆಯಲ್ಲಿ ದುಂಡು ಮುಖ, ಕೇಶವನ್ನು ಹಿಂದಕ್ಕೆ ಬಾಚಿದ್ದು, ಕಮಾನಿನ ಆಕಾರದ ಹುಬ್ಬುಗಳನ್ನು ಕೂಡಿಸಿದ್ದು, ಅಗಲವಾದ ತಿಲಕ, ಕಿವಿಗೆ ವೃತ್ತಾಕಾರದ ಓಲೆಗಳು, ಕಂಠದಲ್ಲಿ ವಿವಿಧ ಹಾರಗಳು, ಕೈಗಳಿಗೆ ಬಳೆಗಳು, ಕಾಲುಗಳಲ್ಲಿ ಕಡಗಗಳನ್ನು ಶಿಲ್ಪದಲ್ಲಿ ತೋರಿಸಲಾಗಿದೆ. ಶಿಲ್ಪದ ಅಂಗೈಗಳಲ್ಲಿ ಲಿಂಗವನ್ನು ಹಿಡಿದಿರುವಂತೆ ರಚಿಸಿದ್ದು, ಸೊಂಟದಲ್ಲಿರುವ ವಸ್ತ್ರದಲ್ಲಿ ನೆರಿಗೆಗಳನ್ನು ನೋಡಬಹುದು.

**೬. ಮೂರನೆಯ ಅಂತಸ್ತಿನಲ್ಲಿರುವ ಸ್ತ್ರೀ ಭಕ್ತ ಶಿಲ್ಪ**

ದೀಪಸ್ತಂಭದ ಮೂರನೆಯ ಅಂತಸ್ತಿನ ಕಂಬದ ಮುಂಭಾಗದಲ್ಲಿ ಭಕ್ತ ಸ್ತ್ರೀ ಶಿಲ್ಪವಿದೆ. ಶಿಲ್ಪದಲ್ಲಿ ತನ್ನ ಎರಡು ಕೈಗಳನ್ನು ಜೋಡಿಸಿ ನಿಂತಿರುವಂತೆ ಇರುವುದನ್ನು ಕಾಣಬಹುದು. ಶಿಲ್ಪದ ಕೇಶವನ್ನು ಸುಂದರವಾಗಿ ರಚಿಸಿದ್ದಾರೆ. ಕೇಶರಾಶಿಯನ್ನು ತನ್ನ ಎಡ ಬದಿಯಲ್ಲಿ ಮುಡಿಯನ್ನು ಕಟ್ಟಿರುವಂತೆ ತೋರಿಸಲಾಗಿದೆ. ಕಮಾನಿನಾಕಾರದ ಕೂಡಿದ ಹುಬ್ಬುಗಳಿದ್ದು, ಹಣೆಗೆ ದೊಡ್ಡ ತಿಲಕ, ವೃತ್ತಾಕಾರದ ಓಲೆಗಳು, ವಿವಿಧ ಹಾರಗಳು, ವಸ್ತ್ರಾಲಂಕಾರವಿರುವ ಶಿಲ್ಪವನ್ನು ನೋಡಬಹುದು.

**೭. ಋಷಿ ಶಿಲ್ಪಗಳು**

ಮೂರನೆಯ ಅಂತಸ್ತಿನ ಮುಂಭಾಗ ಮತ್ತು ಹಿಂಭಾಗದ ಕಂಬಗಳಲ್ಲಿ ಎರಡು ಋಷಿ ಶಿಲ್ಪಗಳಿವೆ. ಮುಂಭಾಗದ ಕಂಬದ ಕೆಳಭಾಗದಲ್ಲಿ ಋಷಿ ಶಿಲ್ಪ ನಿಂತ ಭಂಗಿಯಲ್ಲಿದೆ. ದುಂಡು ಮುಖ, ಕಿವಿಯಲ್ಲಿ ಓಲೆ, ಕೊರಳಲ್ಲಿ ರುದ್ರಾಕ್ಷಿ ಮಾಲೆ, ಕೈಗಳಲ್ಲಿ ಕಡಗಳಿವೆ. ಕೇಶವನ್ನು ಹಿಂದಕ್ಕೆ ಬಾಚಿ ಸೊಂಟದ ಭಾಗದವರೆಗೂ ಇಳಿಬಿಟ್ಟಿರುವ ಹಾಗೆ ಇರುವ ಉದ್ದನೆಯ ಕೇಶರಾಶಿಯನ್ನು ನೋಡಬಹುದು. ಬಲಗೈಯಲ್ಲಿ ದಂಡ, ಎಡಗೈಯಲ್ಲಿ ಕಮಂಡಲ, ಹೆಗಲ ಮೇಲೆ ಜೋಳಿಗೆಯನ್ನು ಕಾಣಬಹುದು.

ಹಿಂಭಾಗದ ಕಂಬದಲ್ಲಿ ಮತ್ತೊಂದು ನಿಂತಿರುವ ಋಷಿ ಶಿಲ್ಪವಿದೆ. ಇದು ದುಂಡು ಶಿಲ್ಪವಾಗಿರುವುದು, ಉದ್ದನೆಯ ಕೇಶರಾಶಿಯನ್ನು ಹಿಂದಕ್ಕೆ ಬಾಚಿ ಎಡಭಾಗದ ಸೊಂಟದವರೆಗೆ ಇಳಿಬಿಡಲಾಗಿದೆ. ಕಿವಿಗಳಲ್ಲಿ ಓಲೆ, ಚಪ್ಪಟೆ ಮೂಗು, ಕೊರಳಲ್ಲಿ ರುದ್ರಾಕ್ಷಿ ಮಾಲೆ, ಕೈಗಳಲ್ಲಿ ಕಡಗಗಳಿವೆ. ಕೈಗಳಲ್ಲಿ ಲಿಂಗವನ್ನು ಹಿಡಿದಿರುವಂತೆ ಶಿಲ್ಪವನ್ನು ರಚನೆ ಮಾಡಿದ್ದಾರೆ.

## ೮. ಶೈವ ಸಂತನ ಶಿಲ್ಪ

ಪದ್ಮಾಸನದಲ್ಲಿರುವ ಭಕ್ತನ ಉಬ್ಬು ಶಿಲ್ಪವನ್ನು ದೀಪಸ್ತಂಭದ ಅಧಿಷ್ಠಾನದ ಭಾಗದಲ್ಲಿ ಕಾಣಬಹುದು. ಶಿಲ್ಪದ ಹಿಂದೆ ಅಲಂಕೃತ ಪ್ರಭಾವಳಿಯ ರಚನೆಯಿದೆ. ಶಿಲ್ಪದ ರಚನೆಯಲ್ಲಿ ಪೇಟಧಾರಿಯಾದ ಭಕ್ತನ ಹಣೆಯಲ್ಲಿ ನಾಮಗಳಿದ್ದು, ಓಲೆ, ಗುಂಡಗಡಗಿ (ಲಿಂಗ) ಇರುವ ಎರಡು ಹಾರಗಳು, ತೋಳ್ಬಂದಿ, ನಡುಪಟ್ಟಿಯನ್ನು ಕಾಣಬಹುದು. ಅಲ್ಲದೆ ಶಿಲ್ಪದ ಇಕ್ಕಲಗಳಲ್ಲಿ ಕಿರು ಭಕ್ತಶಿಲ್ಪಗಳಿವೆ.

ಇದುವರೆಗೂ ಗಮನಿಸಿದ ಭಕ್ತ ಶಿಲ್ಪಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಲಕ್ಷಣವೆಂದರೆ ನಮಸ್ಕರಿಸುತ್ತಿರುವ ಭಂಗಿ, ಕಣ್ಣು, ಹುಬ್ಬುಗಳು, ಉಡುಗೆ ಎಲ್ಲ ಶಿಲ್ಪಗಳಲ್ಲಿ ಇವುಗಳನ್ನು ಗಮನಿಸಬಹುದು. ಹಾಗೆಯೇ ವಿಶೇಷವಾದ ಭಕ್ತ ಶಿಲ್ಪಗಳೆಂದರೆ ಮೂರನೆಯ ಅಂತಸ್ತಿನಲ್ಲಿರುವ ದಂಪತಿಯರ ಭಕ್ತ ಶಿಲ್ಪಗಳು. ಈ ಶಿಲ್ಪಗಳಲ್ಲಿ ಮಂದಹಾಸ ಹಾಗೂ ಹೆಚ್ಚು ಅಲಂಕಾರ ಇರುವುದನ್ನು ಕಾಣಬಹುದು.

## ವಾದ್ಯ ಶಿಲ್ಪಗಳು

ಅತ್ಯಂತ ಪ್ರಾಚೀನವಾದ ಮತ್ತು ಪ್ರಭಾವಶಾಲಿ ಕಲೆಯೆಂದರೆ ಸಂಗೀತ. ಮನುಷ್ಯನು ಭೂಮಿಯ ಮೇಲೆ ಕಾಣಿಸಿಕೊಳ್ಳುವುದಕ್ಕೆ ಮೊದಲೇ ಸಂಗೀತದ ಪ್ರಭಾವ ಪ್ರಕೃತಿಯ ಪರಿಸರದಲ್ಲಿ ಹಬ್ಬಿದೆ ಎಂದು ಹೇಳಲಾಗುತ್ತದೆ. ಪ್ರಕೃತಿಯ ಪ್ರತಿಯೊಂದು ಘಟನೆಗಳಲ್ಲಿ ಸಂಗೀತವನ್ನು ಕಾಣಬಹುದು. ಪ್ರಕೃತಿಯ ನೂರಾರು ಬಗೆಯ ಲಯಬದ್ಧವಾದ ನಾದಗಳ ಏರಿಳಿತವನ್ನು ಪುನರಾವರ್ತನೆಯನ್ನು ಕಾಣಬಹುದಾಗಿದೆ. ಹಕ್ಕಿಗಳ ಕೂಜನ, ದುಂಬಿಗಳ ಝೇಂಕಾರ, ಬೀಸುವ ಗಾಳಿ, ಬಾಗುವ ಮರಗಿಡಗಳ ಮರ್ಮರ, ಹರಿಯುವ ನೀರಿನ ತರಂಗಿತ ನಿನಾದ ಇವೆಲ್ಲವೂ ನಾದಬ್ರಹ್ಮನಿಂದ ರೂಪಿತವಾಗಿವೆ. ಪ್ರಕೃತಿಯ ಮಡಿಲಿನಲ್ಲಿರುವ ಮಾನವ ತನ್ನ ಭಾವನೆಗಳನ್ನು ಹೇಳಲು ನಾದವನ್ನೇ ಅವಲಂಬಿಸಿದ್ದಾನೆ.[೩]

ವೇದಕಾಲದಿಂದ ಬಂದಿರುವ ಸಂಗೀತ ಕಲೆಯ ಬಗ್ಗೆ ಅನೇಕ ಕಾವ್ಯಗಳು ಉಲ್ಲೇಖಿಸುತ್ತವೆ. ಅವು ಶಿಲಪ್ಪದಿಗಾರಂ, ಗಾಥಾಸ್ತಪಶತಿ, ಮಾನಸೊಲ್ಲಾಸ ಮೊದಲಾದ ಕೃತಿಗಳಲ್ಲಿ ಸಂಗೀತದ ಶಾಸ್ತ್ರದ ಬಗ್ಗೆ ತಿಳಿಸಿಕೊಡುತ್ತವೆ. ದಕ್ಷಿಣ ಭಾರತದಲ್ಲಿ ಬಾದಾಮಿ ಚಾಲುಕ್ಯರಿಂದ ಹೆಚ್ಚು ಸಂಗೀತ ಕಲೆಯು ಅಭಿವೃದ್ಧಿಯನ್ನು ಹೊಂದಿತು ಎಂದು ಹೇಳಲಾಗುತ್ತದೆ.

ಮಾನವನು ಸಂಗೀತದ ಮೂಲಕ ದೈವವನ್ನು ಒಲಿಸಿಕೊಳ್ಳುವ ಪ್ರಯತ್ನ ಮಾಡುತ್ತಾನೆ. ಮಾವನಷ್ಟೇ ಅಲ್ಲದೇ ದೈವಗಳಿಗೂ ಸಂಗೀತವೆಂದರೆ ಅಚ್ಚುಮೆಚ್ಚು. ಆದಕಾರಣ ದೇವಾಲಯಗಳಲ್ಲಿ ಸುಪ್ರಭಾತ, ಜೋಗುಳ, ಭಜನೆ, ಕೀರ್ತನೆ ಇತ್ಯಾದಿಗಳನ್ನು ಗಮನಿಸುತ್ತೇವೆ. ಸಂಗೀತದಿಂದ ದೈವವು ಪ್ರಸನ್ನವಾಗುದೆಂಬ ನಂಬಿಕೆಯಿದೆ. ಬನಶಂಕರಿ ಕ್ಷೇತ್ರದಲ್ಲಿರುವ ದೀಪ ಮಹಲ್‌ನ ಅದಿಷ್ಠಾನ ಭಾಗದಲ್ಲಿ ಸಂಗೀತಗಾರರ ಮೇಳಗಳು, ಸಂಗೀತ ವಾದ್ಯಗಳನ್ನು ಗಮನಿಸಬಹುದು.

**೯. ಮೃದಂಗ ನುಡಿಸುತ್ತಿರುವ ಶಿಲ್ಪಗಳು**

ದೀಪಮಹಲನ ಅಧಿಷ್ಠಾನದ ಎರಡನೆಯ ಪಟ್ಟಿಕೆಯಲ್ಲಿ ಮೂರು ಮೃದಂಗ ನುಡಿಸುತ್ತಿರುವ ಶಿಲ್ಪಗಳಿವೆ. ಆ ಮೃದಂಗಗಳು ದ್ವಿಮುಖವುಳ್ಳವುಗಳಾಗಿವೆ. ಮೂರು ಶಿಲ್ಪಗಳಲ್ಲಿ ನುಡಿಸುತ್ತಿರುವ ಮೃದಂಗಗಳ ಗಾತ್ರ ಬೇರೆ ಬೇರೆಯಾಗಿರುವುದು ಕಂಡುಬರುತ್ತದೆ.

* **ಚಿಕ್ಕ ಮೃದಂಗ ಹಿಡಿದಿರುವ ಶಿಲ್ಪ :** ಈ ಶಿಲ್ಪ ರಚನೆಯಲ್ಲಿ ದುಂಡು ಮುಖವನ್ನು ಹೊಂದಿದ್ದು, ವಾದ್ಯಗಾರನು ತಲೆಗೆ ಟೊಪ್ಪಿಗೆಯನ್ನು ಧರಿಸಿದ್ದಾನೆ. ದಪ್ಪದಾದ ಗಿಡ್ಡ ಮೂಗು, ಕಿರು ತುಟಿಗಳು, ಕೊರಳಲ್ಲಿ ಚಿಕ್ಕ ಹಾರವಿದೆ. ವಾದ್ಯಗಾರನು ಧೋತ್ರವನ್ನು ಧರಿಸಿದ್ದು, ಧೋತ್ರದಲ್ಲಿ ನೆರಿಗೆಯ ರಚನೆಯನ್ನು ಕಾಣಬಹುದು. ವಾದ್ಯಗಾರನು ಕೈಗಳಿಂದ ಮೃದಂಗವನ್ನು ನುಡಿಸುತ್ತಿರುವ ಹಾಗೆ ರಚಿಸಿದ್ದಾರೆ. ಶಿಲ್ಪವು ಹಾಳಾಗಿರುವ ಸ್ಥಿತಿಯಲ್ಲಿರುವುದರಿಂದ ಹೆಚ್ಚಿನ ಲಕ್ಷಣಗಳನ್ನು ಗುರುತಿಸಲು ಸಾಧ್ಯವಾಗುವುದಿಲ್ಲ.

* **ದೊಡ್ಡ ಮೃದಂಗವನ್ನು ಹಿಡಿದು ನಿಂತಿರುವ ಶಿಲ್ಪ :** ಈ ಶಿಲ್ಪವು ಕೂಡ ಹಾಳಾಗಿರುವ ಸ್ಥಿತಿಯಲ್ಲಿದೆ. ಆದರೂ ಕೆಲವೊಂದು ಲಕ್ಷಣಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿರುವುದು. ಉದ್ದ ಮುಖವುಳ್ಳ ಶಿಲ್ಪವಾಗಿದ್ದು, ಕೊರಳಿನಲ್ಲಿ ಹಾರವಿದೆ. ತನ್ನ ಎರಡು ಕಾಲುಗಳನ್ನು ಅಗಲಿಸಿ ನಿಂತಿದ್ದು, ಕೈಗಳಿಂದ ಮೃದಂಗವನ್ನು ನುಡಿಸುತ್ತಿದ್ದಾನೆ. ಶಿಲ್ಪದಲ್ಲಿರುವ ಮೃದಂಗವು ಮೊದಲು ವಿವರಿಸಿದ ಮೃದಂಗಕ್ಕಿಂತ ದೊಡ್ಡದಾಗಿದ್ದು, ಮೃದಂಗದ ಮಧ್ಯಭಾಗದಲ್ಲಿ ಅಲಂಕಾರಕ್ಕಾಗಿ ರೇಖೆಗಳನ್ನು ಮಾಡಿರುವಂತೆ ಕಾಣುತ್ತದೆ.

* **ತೊಡೆಯ ಮೇಲೆ ಮೃದಂಗವನ್ನು ಇಟ್ಟುಕೊಂಡು ನುಡಿಸುತ್ತಿರುವ ಶಿಲ್ಪ :** ಈ ಮೊದಲ ವಿವರಿಸಿದ ಶಿಲ್ಪಗಳಿಗಿಂತ ಗಾತ್ರದಲ್ಲಿ ಕಿರಿದಾಗಿದೆ. ಶಿಲ್ಪವು ಹಾಳಾಗಿರುವ ಸ್ಥಿತಿಯಲ್ಲಿದ್ದು, ಕೆಲವೊಂದು ಲಕ್ಷಣಗಳನ್ನು ಮಾತ್ರ ಗಮನಿಸಬಹುದು. ಉದ್ದವಾದ ಮುಖವನ್ನು ಹೊಂದಿದ್ದು, ತಲೆಗೆ ಟೊಪ್ಪಿಗೆಯನ್ನು ಧರಿಸಿದ್ದಾನೆ. ದೇಹವನ್ನು ಭಾಗಿಸಿ ತನ್ನ ತೊಡೆಗಳ ಮೇಲೆ ಇಟ್ಟುಕೊಂಡಿರುವ ಮೃದಂಗವನ್ನು ನುಡಿಸುತ್ತಿರುವ ರೀತಿಯಲ್ಲಿ ಈ ಶಿಲ್ಪವನ್ನು ರಚಿಸಿದ್ದಾರೆ.

**೧೦. ಶಹನಾಯಿ ವಾದ್ಯ ನುಡಿಸುತ್ತಿರುವ ಶಿಲ್ಪ**

ದೀಪಸ್ತಂಭದ ಅದಿಷ್ಠಾನದಲ್ಲಿರುವ ಶಹನಾಯಿ ವಾದ್ಯ ಶಿಲ್ಪವು ಕೂಡು ಹಾಳಾಗಿರುವ ಸ್ಥಿತಿಯಲ್ಲಿದೆ. ನಿಂತ ಭಂಗಿಯಲ್ಲಿರುವ ಶಿಲ್ಪವು ತಲೆಗೆ ಟೊಪ್ಪಿಗೆಯನ್ನು ಧರಿಸಿದ್ದು, ವಾದ್ಯವನ್ನು ನುಡಿಸುತ್ತಿರುವಂತೆ ಕೆತ್ತಲಾಗಿದೆ. ವಾದ್ಯಗಾರರು ಹಿಡಿದಿರುವ ಶಹನಾಯಿಯ ಮೇಲೆ ಅಲಂಕಾರಕ್ಕಾಗಿ ಬಳಸಿದ ರೇಖೆಗಳ ರಚನೆಯನ್ನು ಶಿಲ್ಪದಲ್ಲಿ ಕಾಣಬಹುದು. ಶಿಲ್ಪವು ನಶಿಸಿದ್ದರಿಂದ ಇತರೆ ಲಕ್ಷಣಗಳನ್ನು ಗುರುತಿಸಲು ಸಾಧ್ಯವಾಗುವುದಿಲ್ಲ.

**೧೧. ಕಹಳೆ ಊದುತ್ತಿರುವ ಶಿಲ್ಪ**

ದೀಪಸ್ತಂಭದ ಅಧಿಷ್ಠಾನದ ಮೊದಲನೆಯ ಪಟ್ಟಿಕೆಯಲ್ಲಿ ಕಹಳೆಯನ್ನು ಊದುತ್ತಿರುವಂತೆ ನಿಂತ ಭಂಗಿಯಲ್ಲಿರುವ ಶಿಲ್ಪವನ್ನು ರಚಿಸಲಾಗಿದೆ. ಶಿಲ್ಪವು ಟೊಪ್ಪಿಗೆಯನ್ನು ಧರಿಸಿದ್ದು,

ದುಂಡು ಮುಖ, ದೊಡ್ಡ ಕಣ್ಣುಗಳನ್ನು ಹೊಂದಿರುವಂತೆ ರಚಿಸಲಾಗಿರುವುದು. ವಾದ್ಯಗಾರನು ಕಹಳೆಯನ್ನು ಬಾಯಿಯಲ್ಲಿ ಹಿಡಿದು ಮೇಲೆ ಎತ್ತಿ ಊದುತ್ತಿರುವಂತೆ ಕಾಣುತ್ತದೆ. ಈ ಶಿಲ್ಪದ ಕೆಳಭಾಗದಲ್ಲಿ ಕಿರು ಶಿವಲಿಂಗವನ್ನು ಕಾಣಬಹುದು.

**೧೨. ತಂತಿವಾದ್ಯ ನುಡಿಸುತ್ತಿರುವ ಶಿಲ್ಪ**

ದೀಪಸ್ತಂಭ ಅಧಿಷ್ಠಾನದ ಹಿಂಭಾಗದಲ್ಲಿ ತಂತಿವಾದ್ಯವನ್ನು ನುಡಿಸುತ್ತಾ ಕುಳಿತಿರುವ ಸ್ತ್ರೀ ಶಿಲ್ಪವಿದೆ. ಆಕೆಯು ತನ್ನ ಕಾಲುಗಳನ್ನು ಮಡಚಿರುವಂತೆ ಕಾಣುತ್ತದೆ. ತನ್ನ ತೊಡೆಯ ಮೇಲೆ ತಂತಿ ವಾದ್ಯವನ್ನು ಇಟ್ಟುಕೊಂಡು ನುಡಿಸುತ್ತಿರುವಂತೆ ಶಿಲ್ಪವನ್ನು ಕೆತ್ತಲಾಗಿದೆ. ಶಿಲ್ಪವು ಹಾಳಾಗಿರುವುದರಿಂದ ಹೆಚ್ಚಿನ ಲಕ್ಷಣಗಳನ್ನು ಗುರುತಿಸಲಾಗುವುದಿಲ್ಲ.

**೧೩. ತಾಳ ನುಡಿಸುತ್ತಿರುವ ಶಿಲ್ಪ**

ಅಧಿಷ್ಠಾನದ ಮೊದಲ ಪಟ್ಟಿಕೆಯಲ್ಲಿ ದಂಪತಿಗಳಿಬ್ಬರು ತಾಳವನ್ನು ನುಡಿಸುತ್ತಿರುವ ಶಿಲ್ಪಗಳಿವೆ. ಪಟ್ಟಿಕೆಯ ಬಲಭಾಗದಲ್ಲಿ ಪುರುಷ ಶಿಲ್ಪವಿದ್ದು, ಆತನು ತಲೆಗೆ ಟೊಪ್ಪಿಗೆಯನ್ನು ಧರಿಸಿದ್ದಾನೆ. ಕೊರಳಲ್ಲಿ ಉದ್ದನೆಯ ಹಾರ, ಕಾಲುಗಳನ್ನು ಅಗಲಿಸಿ ನಿಂತಿದ್ದಾನೆ. ಕೈಗಳಿಂದ ಸಣ್ಣ ತಾಳ ಹಿಡಿದು ನುಡಿಸುತ್ತಿರುವಂತೆ ರಚಿಸಿದ್ದಾರೆ. ಈ ಶಿಲ್ಪದ ಬಲಭಾಗದಲ್ಲಿ ಸ್ತ್ರೀ ಶಿಲ್ಪವಿದೆ. ಆಕೆಯು ಕೇಶವನ್ನು ಹಿಂದಕ್ಕೆ ಬಾಚಿ ಎಡಭಾಗದಲ್ಲಿ ತುರುಬು ಕಟ್ಟಿರುವುದನ್ನು ನೋಡಬಹುದು. ಶಿಲ್ಪದ ಕೊರಳಿನಲ್ಲಿ ಹಾರವಿದ್ದು, ಈಕೆಯು ಸಹ ಕೈಗಳಲ್ಲಿ ತಾಳವನ್ನು ಹಿಡಿದು ನುಡಿಸುತ್ತಿರುವಂತೆ ಕೆತ್ತಲಾಗಿದೆ. ಈಕೆಯು ತೊಟ್ಟಿರುವ ಸೀರೆಯಲ್ಲಿನ ನೆರಿಗೆಗಳು ನೈಜತೆಯಿಂದ ಕೂಡಿವೆ. ಶಿಲ್ಪವು ಹಾಳಾಗಿರುವ ಸ್ಥಿತಿಯಲ್ಲಿರುವುದರಿಂದ ಹೆಚ್ಚಿನ ಲಕ್ಷಣಗಳನ್ನು ಗುರುತಿಸಲು ಸಾಧ್ಯವಿಲ್ಲ.

**೧೪. ಕುದುರೆಯನ್ನು ಪಳಗಿಸುವ ಶಿಲ್ಪ**

ಅಧಿಷ್ಠಾನದ ಮೊದಲನೆಯ ಪಟ್ಟಿಕೆಯಲ್ಲಿ ಕಿರೀಟಧಾರಿ ವ್ಯಕ್ತಿಯೊಬ್ಬನು ತನ್ನ ಕಾಲುಗಳನ್ನು ಅಗಲಿಸಿ ನಿಂತಿದ್ದು, ಅಶ್ವದ ಎರಡೂ ಕಾಲಗಳನ್ನು ಹಿಡಿದು ಅಶ್ವವನ್ನು ನಿಯಂತ್ರಿಸುತ್ತಿದ್ದಾನೆ. ಆತನ ಮುಂದೆ ಇರುವ ಅಶ್ವವು ತನ್ನ ಮುಂದಿನ ಕಾಲುಗಳನ್ನು ಎತ್ತಿನಿಂತಿರುವಂತೆ ಕಾಣುತ್ತದೆ. ಈ ಶಿಲ್ಪವು ಹಾಳಾದ ಕಾರಣ ಹೆಚ್ಚಿನ ಅಂಶಗಳು ಕಂಡುಬರುವುದಿಲ್ಲ.

**೧೫. ಸಿಂಹದ ಶಿಲ್ಪ**

ದೀಪಸ್ತಂಭದ ಅಧಿಷ್ಠಾನದ ಬೋಧಿಗೆಯಲ್ಲಿ ಸಿಂಹವೊಂದು ಜಿಗಿಯುತ್ತಿರುವ ಶಿಲ್ಪವನ್ನು ಕಾಣಬಹುದು. ಈ ಶಿಲ್ಪವನ್ನು ಗಮನಿಸಿದರೆ ಬೋಧಿಗೆಯ ಅಲಂಕಾರಕ್ಕೆ ರಚಿಸಿರುವಂತಿದೆ.

**ದ್ವಾರಪಾಲಕರ ಶಿಲ್ಪಗಳು**

ದೀಪಸ್ತಂಭದ ಮೊದಲ ಹಂತದ ಕಟ್ಟಡದ ಸುತ್ತಲಿರುವ ಕಮಾನಿನ ಆಕಾರದ ಮಧ್ಯ ದ್ವಾರದ ಇಕ್ಕಲಗಳಲ್ಲಿ ದ್ವಾರಪಾಲಕರ ಶಿಲ್ಪಗಳನ್ನು ಗಮನಿಸಬಹುದು. ದ್ವಾರಪಾಲಕರ ವೇಷಭೂಷಣಗಳು ಮರಾಠರ ವೇಷಭೂಷಣಗಳನ್ನು ಹೋಲುತ್ತವೆ. ಮುಂಭಾಗದಲ್ಲಿರುವ ಕಮಾನಿನ ದ್ವಾರದ ಇಕ್ಕಲಗಳಲ್ಲಿ ದ್ವಾರಪಾಲಕರ ಶಿಲ್ಪಗಳಿವೆ. ಈ ಕಮಾನಿನ ಬಲಭಾಗದಲ್ಲಿರುವ ದ್ವಾರಪಾಲಕನ ಶಿಲ್ಪದಲ್ಲಿ ಟೊಪ್ಪಿಗೆ ಧರಿಸಿದ್ದು, ದುಂಡು ಮುಖ, ಉದ್ದಮೂಗು ಕಮಾನಿನ ಆಕಾರದ ಹುಬ್ಬು, ಮೀಸೆಯನ್ನು ಹೊಂದಿದೆ. ತನ್ನ ಕೈಯಲ್ಲಿ ದಂಡವನ್ನು ಹಿಡಿದಿದ್ದು, ಧೋತ್ರವನ್ನು ಧರಿಸಿರುವನು. ಆತನು ತನ್ನ ಎಡಗಾಲನ್ನು ಬಲಬದಿಗೆ ಮಡಿಚಿ ನಿಂತಿರುವಂತೆ ರಚನೆ ಮಾಡಿದ್ದಾರೆ. ಈ ಶಿಲ್ಪದ ಎಡಬದಿಯಲ್ಲಿ ಇನ್ನೊಂದು ದ್ವಾರಪಾಲಕನ ಶಿಲ್ಪವಿದೆ. ಈ ಶಿಲ್ಪದಲ್ಲಿ ಟೊಪ್ಪಿಗೆ ಧರಿಸಿದ್ದು, ದುಂಡು ಮುಖ, ಕಮಾನಿನ ಆಕಾರದ ಹುಬ್ಬು, ಉದ್ದಮೂಗು, ಮೀಸೆಯನ್ನು ಹೊಂದಿರುವುದು. ಕೊರಳಿನಲ್ಲಿ ವಿವಿಧ ಹಾರಗಳನ್ನು ಗಮನಿಸಬಹುದು. ಬಲಗೈಯಲ್ಲಿ ದಂಡವನ್ನು, ಎಡಗೈಯಲ್ಲಿ ಚೂರಿಯನ್ನು ಹಿಡಿದಿದ್ದಾನೆ. ಈ ಶಿಲ್ಪದಲ್ಲಿ ದ್ವಾರಪಾಲಕನು ತೊಟ್ಟಿರುವಂತ ಧೋತ್ರದಲ್ಲಿ ನೆರಿಗೆಗಳ ರಚನೆ ಇರುವುದನ್ನು ಕಾಣಬಹುದು. ಈ ಎರಡು ಶಿಲ್ಪಗಳ ಮೇಲ್ಭಾಗದ ಕಮಾನಿನ ಇಕ್ಕಲಗಳಲ್ಲಿ ಎದುರು ಬದುರಾಗಿ ನಿಂತಿರುವ ಸಿಂಹಗಳ ಕಿರು ಶಿಲ್ಪಗಳಿವೆ.

ದೀಪಸ್ತಂಭದ ಹಿಂಭಾಗದ ದ್ವಾರಪಾಲಕರ ಶಿಲ್ಪಗಳಲ್ಲಿ ಬಲಭಾಗದಲ್ಲಿರುವ ದ್ವಾರಪಾಲಕನು ಪೇಟಧಾರಿಯಾಗಿದ್ದು, ದುಂಡು ಮುಖ, ಉದ್ದ ಮೂಗು, ಮೀಸೆಯನ್ನು ಹೊಂದಿದೆ. ಕೊರಳಲ್ಲಿ ವಿವಿಧ ಹಾರಗಳು, ತೋಳ್ಬಂಧಿ, ಕಡಗಗಳನ್ನು ಧರಿಸಿದ್ದಾನೆ. ಈತನು ತನ್ನ ಬಲಗಾಲನ್ನು ಎಡಭಾಗಕ್ಕೆ ಇಟ್ಟಿರುವಂತೆ ರಚಿಸಿದ್ದಾರೆ. ನಡುಪಟ್ಟಿಯ ಬಲಭಾಗದಲ್ಲಿ ಚೂರಿ ಇದ್ದು, ಎಡಭಾಗದಲ್ಲಿರುವ ದಂಡಕ್ಕೆ ಆಧಾರವಾಗಿ ನಿಂತಿದ್ದಾನೆ. ಕೈಗಳಲ್ಲಿ ಸಂಗೀತದ ವಾದ್ಯವನ್ನು ಹಿಡಿದು ನುಡಿಸುತ್ತಿರುವ ಹಾಗೆ ಗೋಚರಿಸುತ್ತದೆ. ಈ ಶಿಲ್ಪದ ಬಲಭಾಗದಲ್ಲಿರುವ ಇನ್ನೊಂದು ದ್ವಾರಪಾಲಕನ ಶಿಲ್ಪವು ಕೂಡ ಪೇಟವನ್ನು ಧರಿಸಿರುವಂತೆ ಕೆತ್ತಲಾಗಿದೆ. ಈ ಮೊದಲೇ ವಿವರಿಸಿದ ಮುಖ ಲಕ್ಷಣ, ಆಭರಣಗಳನ್ನು ಈ ಶಿಲ್ಪದಲ್ಲೂ ಕಾಣಬಹುದು. ಈ ಶಿಲ್ಪದಲ್ಲಿ ತನ್ನ ಎರಡು ಕಾಲುಗಳನ್ನು ಅಗಲಿಸಿ ನಿಂತಿದ್ದು, ಬಲಗೈಯಲ್ಲಿ ದಂಡ, ಎಡಗೈಯಲ್ಲಿ ಚೂರಿಯನ್ನು ಹಿಡಿದಿರುವಂತೆ ಕೆತ್ತಲಾಗಿದೆ. ದೀಪಮಹಲಿನ ಇನ್ನೂ ಉಳಿದ ಎರಡು ಭಾಗಗಳ ದ್ವಾರಗಳಲ್ಲಿ ಇದೇ ರೀತಿಯ ದ್ವಾರಪಾಲಕರ ಉಬ್ಬು ಶಿಲ್ಪಗಳನ್ನು ಕಾಣಬಹುದು.

**ಆನೆ ಸವಾರಿ ಶಿಲ್ಪಗಳು**

ದೀಪಮಹಲನ ನಾಲ್ಕು ದಿಕ್ಕುಗಳಲ್ಲಿ ೪ ಆನೆ ಸವಾರಿ ಶಿಲ್ಪಗಳಿವೆ. ನಾಲ್ಕು ಆನೆಗಳು ಸುಮಾರು ೩ ೧/೨ ಅಡಿ ಎತ್ತರವನ್ನು ಹೊಂದಿರುತ್ತವೆ. ಸಾಮಾನ್ಯವಾಗಿ ನಾಲ್ಕು ಆನೆಗಳಲ್ಲಿ ಗುರುತಿಸಬಹುದಾದ ಅಂಶವೆಂದರೆ ಆನೆಯ ಮೇಲೆ ಕುಳಿತಿರುವ ಸವಾರನ ಶಿಲ್ಪ,

ಆನೆಗಳ ಕಾಲುಗಳಿಗೆ ಸರಪಳಿಯನ್ನು ಹಾಕಿರುವುದು, ಕೊರಳಲ್ಲಿ ಗಂಟೆಗಳ ಹಾರವನ್ನು ಕಾಣಬಹುದು. ದೀಪಸ್ತಂಭ ಮುಂಭಾಗ ಮತ್ತು ಎಡಭಾಗದ ಅಧಿಷ್ಠಾನದಲ್ಲಿರುವ ಶಿಲ್ಪಗಳಲ್ಲಿ ಆನೆಯ ಸೊಂಡಿಲು ಕಿರಿದಾಗಿದ್ದು, ಅರ್ಧ ದಂತಗಳಿರುವುದನ್ನು ಕಾಣುತ್ತೇವೆ. ಆನೆಯ ಮೇಲೆ ಕುಳಿತಿರುವ ಸವಾರಿಯ ಶಿಲ್ಪವು ಹಾಳಾಗಿರುವ ಸ್ಥಿತಿಯಲ್ಲಿದೆ. ಅಧಿಷ್ಠಾನದ ಬಲಭಾಗ ಮತ್ತು ಹಿಂಭಾಗದಲ್ಲಿರುವ ಆನೆಗಳ ಸೊಂಡಿಲು ದೊಡ್ಡದಾಗಿವೆ. ಬಲ ಭಾಗದ ಆನೆ ಗಾತ್ರವು ಉಳಿದ ಮೂರು ಆನೆಯ ಗಾತ್ರಗಳಿಂದ ಕಿರಿದಾಗಿದೆ. ಸ್ಥಳ ಅಭಾವದಿಂದ ಈ ಭಾಗದ ಆನೆಯನ್ನು ಕಿರಿದಾಗಿ ರಚಿಸಬಹುದು. ಹಾಗೆಯೇ ನಾಲ್ಕು ಆನೆಗಳ ತಲೆಯ ಮೇಲೆ ಅಲಂಕಾರವನ್ನು ಮಾಡಿದ್ದಾರೆ. ಮತ್ತೊಂದು ವಿಶೇಷವೆಂದರೆ ಹಿಂಭಾಗದಲ್ಲಿರುವ ಆನೆಯ ಮೇಲೆ ಕುಳಿತಿರುವ ಸವಾರನು ತನ್ನ ಅಂಕುಶದಿಂದ ಆನೆಯನ್ನು ತಿವಿದಿದ್ದರಿಂದ ಆ ಆನೆಯು ತನ್ನ ಬಲಗಾಲನ್ನು ಸಪಾಳಿಯಿಂದ ಬಿಡಿಸಿಕೊಂಡು ಮೇಲೆ ಎತ್ತಿದ್ದಂತೆ ರಚಿಸಿದ್ದಾರೆ. ಈ ನಾಲ್ಕು ಆನೆಗಳು ಇಡೀ ದೀಪ ಮಹಲ್‌ನ್ನು ತಮ್ಮ ಮೇಲೆ ಹೊತ್ತಿರುವಂತೆ ಭಾಸವಾಗುತ್ತದೆ.

**ಮಿಥುನ ಶಿಲ್ಪಗಳು**

ದೇವಾಲಯಗಳಲ್ಲಿ ದೃಷ್ಟಿಗಾಗಿ ಅಥವಾ ಲೈಂಗಿಕ ಶಿಕ್ಷಣವನ್ನು ನೀಡುವ ಸಲುವಾಗಿ ನಗ್ನ ಶಿಲ್ಪಗಳು, ಮಿಥುನ ಲೈಂಗಿಕ ಶಿಲ್ಪಗಳನ್ನು ಕಾಣುತ್ತೇವೆ. ಸಾಮಾನ್ಯವಾಗಿ ದೇವಾಲಯಗಳ ಹೊರ ಆವರಣಗಳಲ್ಲಿ ಜನಪದ ಶೈಲಿಯ ಸಂಯೋಜನೆಯಲ್ಲಿ ಕೆತ್ತಲ್ಪಟ್ಟಿರುವುದನ್ನು ಗಮನಿಸಬಹುದು. ಲೈಂಗಿಕ ಕ್ರಿಯೆ ಭಂಗಿಗಳು ಭಿನ್ನ ಭಿನ್ನವಾದ ರೀತಿಯಲ್ಲಿರುತ್ತವೆ. ಹಾಗೂ ಗುಪ್ತಾಂಗಗಳ ಪ್ರಚೋದನಾತ್ಮಕ ಶೈಲಿಯಲ್ಲಿ ಉದ್ದೇಶಪೂರ್ವಕವಾಗಿ ಅಂಕುಡೊಂಕಾದ ರೇಖಾತ್ಮಕತೆಯಿಂದ ಕೂಡಿದ ರೀತಿಯಲ್ಲಿ ಕೆತ್ತಿರುತ್ತಾರೆ. ಇಲ್ಲಿ ರೂಪಕ್ಕಿಂತ ಶಿಲ್ಪ ಪ್ರಕಟಿಸುವ ಭಂಗಿಗಳ ಪ್ರಚೋದನೆ ಲೈಂಗಿಕ ಉದ್ದೇಶಗಳಲ್ಲಿ ಮುಖ್ಯವಾಗಿರುತ್ತವೆ. ಮಿಥುನ, ನಗ್ನ ಲೈಂಗಿಕ ಕ್ರಿಯೆಗಳ ಶಿಲ್ಪಗಳು ಹೆಚ್ಚಾಗಿ ಹೆಣ್ಣು ದೇವತೆಗಳ ದೇವಾಲಯಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ. ಬಹುಶಃ ಫಲವಂತಿಕೆಯ ಸಂಕೇತದ ಸಲುವಾಗಿ ಇವುಗಳ ರಚನೆಯಾಗಿರಬಹುದು. ಇಲ್ಲವೇ ನಗ್ನವು ಮಾನವನ ಲೋಪಗಳನ್ನು ಎತ್ತಿತೋರಿಸಿ, ಲೈಂಗಿಕತೆಯ ಬಗ್ಗೆ ಸರಳವಾದ, ನಿಷ್ಕಲ್ಮಶ ಭಾವನೆಯನ್ನು ಹೊಂದಿ, ಭಕ್ತಿಯನ್ನು ಗರ್ಭಗುಡಿ ದೇವತೆಯಲ್ಲಿ ಕೇಂದ್ರೀಕರಿಸಲು ಈ ರೀತಿಯ ಶಿಲ್ಪಗಳನ್ನು ಕೆತ್ತಲ್ಪಟ್ಟಿರಬಹುದಾಗಿದೆ.

ಬನಶಂಕರಿ ಗುಡಿಯ ಮುಖಮಂಟಪದ ಕಂಬಗಳಲ್ಲಿ ಮತ್ತು ಪೌಳಿ ಭಿತ್ತಿಯಲ್ಲಿ ರತಿ ಕ್ರೀಡೆಯಲ್ಲಿ ನಿರತರಾಗಿರುವ ಉಬ್ಬುಶಿಲ್ಪ ಮತ್ತು ಸ್ತ್ರೀಯೊಬ್ಬಳು ತನ್ನ ಗುಪ್ತಾಂಗವನ್ನು ಪ್ರದರ್ಶಿಸುತ್ತಿರುವಂತೆ ಇರುವ ಶಿಲ್ಪವನ್ನು ಕಾಣಬಹುದು. ದೇವಸ್ಥಾನದ ಆವರಣದಲ್ಲಿ ಕಂಡುಬರುವಂತಹ ಮಿಥುನ ಶಿಲ್ಪಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಲಾಗಿದೆ.

೧. ಕಂಬದಲ್ಲಿನ ಸ್ತ್ರೀ ಶಿಲ್ಪ

ಈ ಶಿಲ್ಪವು ದೇವಸ್ಥಾನದ ಮುಖಮಂಟಪದ ಎಡಭಾಗದ ಕಂಬದ ಮೇಲೆ ಸ್ತ್ರೀಯು ತನ್ನ ಗುಪ್ತಾಂಗವನ್ನು ಪ್ರದರ್ಶಿಸುತ್ತಿರುವ ಉಬ್ಬುಶಿಲ್ಪವಿದೆ. ಇದು ಸುಮಾರು ೧ ಅಡಿ ಎತ್ತರ, ೧ ಅಡಿ ಅಗಲವಾಗಿರುವ ಚೌಕಾಕೃತಿಯಲ್ಲಿ ರಚನೆಯಾದ ಶಿಲ್ಪವನ್ನು ಕಾಣಬಹುದು. ಈ ಶಿಲ್ಪದ ಅಂಗ ವಿನ್ಯಾಸ ಸಂಪೂರ್ಣ ನಗ್ನವಾಗಿದ್ದು, ಎರಡು ಕಾಲುಗಳನ್ನು ಅಗಲಿಸಿ ಕುಳಿತಂತೆ ಕಾಣುತ್ತದೆ. ತನ್ನ ಕೈಗಳನ್ನು ಅಗಲಿಸಿ ಮೊಣಕಾಲಿನ ಮೇಲೆ ಇಟ್ಟಿದ್ದಾಳೆ. ತಲೆಯ ಕೂದಲನ್ನು ಹಿಂದಕ್ಕೆ ಬಾಚಿ ಎಡಭಾಗಕ್ಕೆ ತುರುಬನ್ನು ಕಟ್ಟಿದ್ದಾಳೆ. ಪ್ರಸ್ತುತದಲ್ಲಿ ಈ ಶಿಲ್ಪಕ್ಕೆ ಬಣ್ಣ ಲೇಪನವಾದ್ದರಿಂದ ಸ್ಪಷ್ಟವಾಗಿ ಕಂಡುಬರುವುದಿಲ್ಲ.

೨. ಭಿತ್ತಿಯಲ್ಲಿರುವ ಮಿಥುನ ಶಿಲ್ಪ

ದೇವಸ್ಥಾನದ ಮುಖಮಂಟಪದ ಎಡಭಾಗದ ಭಿತ್ತಿಯ ಮೇಲೆ ಈ ಮಿಥುನ ಶಿಲ್ಪವನ್ನು ಕಾಣಬಹುದು. ಸುಮಾರು ೧ ಅಡಿ ಎತ್ತರ, ೧ ೧/೨ ಅಡಿ ಅಗಲವಾದ ಶಿಲ್ಪವಾಗಿದೆ. ಪುರುಷನ ಶಿಲ್ಪವು ನಿಂತುಕೊಂಡು ತನ್ನ ಬಲಗೈಯನ್ನ ಮೇಲಕ್ಕೆ ಎತ್ತರಿಸಿ ಮುಷ್ಟಿ ಕಟ್ಟಿದ್ದಾನೆ. ಇದನ್ನು ಗಮನಿಸಿದರೆ ಪುರುಷನು ಬಲಶಾಲಿಯಾಗಿರುವನು ಎಂದು ಸೂಚಿಸುತ್ತದೆ. ಎಡಗೈಯಲ್ಲಿ ತನ್ನ ಶಿಶ್ನವನ್ನು ಹಿಡಿದುಕೊಂಡಿದ್ದು, ಸ್ತ್ರೀ ಯೋನಿಯಲ್ಲಿ ಸೇರಿಸುವಂತೆ ಶಿಲ್ಪವನ್ನು ರಚಿಸಿದ್ದಾರೆ. ಸ್ತ್ರೀ ಶಿಲ್ಪ ರಚನೆಯಲ್ಲಿ ಆಕೆ ಎರಡು ಕಾಲುಗಳನ್ನು ಅಗಲಿಸಿ ಕುಳಿತಿರುವ ಭಂಗಿಯಲ್ಲಿದೆ. ಹಾಗೆ ತನ್ನ ಬಲಗೈಯನ್ನು ಪುರುಷನ ತಲೆಯ ಮೇಲಿಟ್ಟು, ಎಡಗೈಯನ್ನು ತೊಡೆಯ ಮೇಲಿಟ್ಟಿರುವಂತೆ ಕಾಣುತ್ತದೆ.

೩. ಪೌಳಿಯ ಭಿತ್ತಿಯಲ್ಲಿರುವ ಮಿಥುನ ಶಿಲ್ಪ

ದೇವಾಲಯದ ಒಳ ಆವರಣದ ಪೌಳಿಯ ಭಿತ್ತಿಯ ಮೇಲೆ ಈ ಮಿಥುನ ಶಿಲ್ಪವು ಕಂಡುಬರುತ್ತದೆ. ೧ ಅಡಿ ಎತ್ತರ, ೧ ಅಡಿ ಅಗಲವಾದ ಶಿಲ್ಪವಾಗಿದ್ದು, ಈ ಶಿಲ್ಪವು ಮೇಲೆ ಹೇಳಿದ ಶಿಲ್ಪಕ್ಕಿಂತ ಭಿನ್ನ ರೂಪದಲ್ಲಿ ರಚನೆಯಾಗಿರುವುದು ಕಾಣುತ್ತೇವೆ. ಪುರುಷ ಮತ್ತು ಸ್ತ್ರೀಯು ಒಬ್ಬರನ್ನೊಬ್ಬರು ತಬ್ಬಿಕೊಂಡು ಲೈಂಗಿಕ ಕ್ರಿಯೆಯಲ್ಲಿ ತೊಡಗಿರುವಂತೆ ಶಿಲ್ಪವನ್ನು ರಚಿಸಿದ್ದಾರೆ.

೪. ಗಂಧರ್ವ ಮಿಥುನ ಶಿಲ್ಪ

ಪೌಳಿಯ ಭಿತ್ತಿಯ ಮೇಲೆ ಈ ಮಿಥುನ ಶಿಲ್ಪವು ಕಂಡುಬಂದಿದ್ದು, ೧ ಅಡಿ ಎತ್ತರ, ೧ ೧/೨ ಅಡಿ ಅಗಲವಾಗಿದೆ. ಈ ಶಿಲ್ಪವನ್ನು ನೋಡಿದರೆ ಗಂಧರ್ವರು ಆಕಾಶದಲ್ಲಿ ತೇಲಾಡುತ್ತಿರುವ ದೃಶ್ಯ ನೆನಪಿಗೆ ಬರುತ್ತದೆ. ಆದರೆ ಇಲ್ಲಿರು ಲೈಂಗಿಕ ಶಿಲ್ಪವು ಗಂಧರ್ವರ ಹಾಗೆ ಆಕಾಶದಲ್ಲಿ ಲೈಂಗಿಕ ಕ್ರಿಯೆಯಲ್ಲಿ ನಿರತರಾಗಿರುವಂತೆ ರಚಿಸಿದ್ದಾರೆ. ಸ್ತ್ರೀ ಶಿಲ್ಪ

ರಚನೆಯಲ್ಲಿ ಕಿವಿಯ ಓಲೆಗಳು ಭುಜದವರೆಗೆ ಇಳಿಬಿಟ್ಟಂತಿವೆ. ಹಾಗೆಯೇ ಕೊರಳಲ್ಲಿ ಹಾರವಿದ್ದು, ಹಿರಿದಾದ ಸ್ತನಗಳ ರಚನೆಯಿದೆ. ಪುರುಷನು ಸ್ತ್ರೀಯನ್ನು ಹಿಂಬದಿಯಿಂದ ತಬ್ಬಿಕೊಂಡು ಲೈಂಗಿಕ ಕ್ರಿಯೆಯಲ್ಲಿ ತೊಡಗಿರುವಂತ ರಚನೆಯನ್ನು ನೋಡಬಹುದು.

**೫. ದಂಪತಿಯ ಶಿಲ್ಪ**

ದೀಪಸ್ತಂಭದ ಹಿಂಭಾಗದ ಅಧಿಷ್ಠಾನದಲ್ಲಿ ದಂಪತಿ ಶಿಲ್ಪಗಳಿವೆ. ಪಟ್ಟಿಕೆಯಲ್ಲಿನ ಶಿಲ್ಪಗಳು ನಿಂತಿರುವ ರಚನೆಯನ್ನು ಕಾಣಬಹುದು. ಬಲಭಾಗದಲ್ಲಿರುವ ಪುರುಷ ಶಿಲ್ಪವು ದುಂಡುಮುಖ ಹೊಂದಿದ್ದು, ತಲೆ ಕೂದುಲನ್ನು ತುರುಬು ಕಟ್ಟಿರುವಂತೆ ರಚಿಸಿದ್ದಾರೆ. ಶಿಲ್ಪದ ಬಲಗೈಯಲ್ಲಿ ಚೂರಿಯನ್ನು ಹಿಡಿದು, ಎಡಗೈಯನ್ನು ತನ್ನ ಪತ್ನಿಯ ಹೆಗಲ ಮೇಲೆ ಇಟ್ಟಿರುವಂತೆ ಕಾಣುವುದು. ಶಿಲ್ಪ ರಚನೆಯಲ್ಲಿ ಕಮಾನಿನ ಆಕಾರದ ಹುಬ್ಬುಗಳಿದ್ದು, ಮೀಸೆಯನ್ನು ಹೊಂದಿದ್ದಾನೆ. ಸೊಂಟದಲ್ಲಿ ವಸ್ತ್ರದ ಪಟ್ಟಿಯಿದೆ. ಈ ಶಿಲ್ಪದ ಎಡಬದಿಯಲ್ಲಿ ಸ್ತ್ರೀ ಶಿಲ್ಪವಿದ್ದು, ಅದು ದುಂಡು ಮುಖವನ್ನು ಹೊಂದಿದೆ. ಆಕೆಯು ತುರುಬನ್ನು ಕಟ್ಟಿರುವ ಹಾಗೆ ಕಾಣುವುದು. ಶಿಲ್ಪ ರಚನೆಯಲ್ಲಿ ಅಗಲವಾದ ಹಣೆ, ಕಮಾನಿನ ಆಕಾರದ ಹುಬ್ಬು, ಗಿಡ್ಡ ಮೂಗು, ದಪ್ಪ ತುಟಿಗಳನ್ನು ಹೊಂದಿದೆ. ಶಿಲ್ಪದಲ್ಲಿ ವಿವಿಧ ಹಾರಗಳು, ಕೈಬಳೆಗಳನ್ನು ಕಾಣಬಹುದು. ಆಕೆಯು ತನ್ನ ಬಲಗೈಯಿಂದ ತನ್ನ ಪತಿಗೆ ಯಾವುದೋ ಪದಾರ್ಥವನ್ನು ತಿನ್ನಿಸುತ್ತಿರುವಂತೆ ಶಿಲ್ಪವನ್ನು ರಚಿಸಲಾಗಿದೆ.

**೪.೬. ಇತರೆ ಸ್ಮಾರಕಗಳು**

**I. ಪಾದಗಟ್ಟೆಗಳು**

ಸಾಮಾನ್ಯವಾಗಿ ಎಲ್ಲಾ ದೇವಾಲಯಗಳಲ್ಲಿ ಒಂದು ಅಥವಾ ಎರಡು ಪಾದಗಟ್ಟೆಗಳನ್ನು ಗಮನಿಸುತ್ತೇವೆ. ಆದರೆ ಬನಶಂಕರಿ ಕ್ಷೇತ್ರದಲ್ಲಿ ನಾಲ್ಕು ಪಾದಗಟ್ಟೆಗಳನ್ನು ನೋಡಬಹುದು. ಅವುಗಳಲ್ಲಿ ಎರಡು ಪಾದಗಟ್ಟೆಗಳು ಪ್ರಾಚೀನವಾಗಿವೆ. ಇನ್ನೂ ಉಳಿದ ಪಾದಗಟ್ಟೆಗಳು ಇತ್ತೀಚಿನ ರಚನೆಗಳಾಗಿವೆ ಎನ್ನಬಹುದು.

**೧. ಬನಶಂಕರಿ ಗುಡಿಯ ಎದುರು ಇರುವ ಪಾದಗಟ್ಟೆ**

ಪೂರ್ವಾಭಿಮುಖವಾಗಿರುವ ಈ ಪಾದಗಟ್ಟೆ ಬನಶಂಕರಿ ಗುಡಿಯ ಎದುರು ಇದೆ. ಸುಮಾರು ೧೫ ಅಡಿ ಎತ್ತರ, ೮ ಅಡಿ ಆಗಲ, ೮ ಅಡಿ ಉದ್ದವಾಗಿದ್ದು, ನಾಲ್ಕು ಕಂಬಗಳನ್ನು ಹೊಂದಿರುವುದು. ಕಂಬಗಳ ರಚನೆಯಲ್ಲಿ ಪೀಠ, ಕಾಂಡದಲ್ಲಿ ಚೌಕಾಕಾರ, ಸರಳವಾದ ಬೋಧಿಗೆಯನ್ನು ಹೊಂದಿವೆ. ಇತ್ತೀಚಿಗೆ ರಚಿಸಿದ ಪಾದಗಟ್ಟೆ ಇದಾಗಿದೆ. ಕಂಬಗಳ ಮೇಲೆ ಮೇಲ್ಛಾವಣಿಯಿದ್ದು, ಅದರ ಮೇಲೆ ಶಿಖರ, ಕಳಶ ಹಾಗೂ ನಾಲ್ಕು ದಿಕ್ಕುಗಳಲ್ಲಿ ಸ್ತೂಪಿಗಳನ್ನು ಕಾಣಬಹುದು. ಪಾದಗಟ್ಟೆಯ ಒಳಭಾಗದಲ್ಲಿ ಒಂದು ಅಡಿ ಸುತ್ತಳತೆಯ ಪಾದ ಪೀಠವಿವೆ. ಪಾದಗಟ್ಟೆಯನ್ನು ಕಲ್ಲು, ಸೀಮೆಂಟ್ ಬಳಸಿ ರಚಿಸಲಾಗಿದೆ. ಪಾದಗಟ್ಟೆಗೆ ಬಣ್ಣವನ್ನು ಲೇಪಿಸಲಾಗಿರುವುದನ್ನು ನೋಡಬಹುದು.

**೨. ಉತ್ತರ ದಿಕ್ಕಿನಲ್ಲಿರುವ ಪಾದಗಟ್ಟೆ**

ಬನಶಂಕರಿ ಕ್ಷೇತ್ರದ ಉತ್ತರ ಭಾಗದಲ್ಲಿ ಈ ಪಾದಗಟ್ಟೆಯಿದೆ. ಪ್ರಾಚೀನ ಕಟ್ಟಡವಾದ ಇದು ೮ ಅಡಿ ಉದ್ದ, ೮ ಅಡಿ ಅಗಲ, ೧೨ ಅಡಿ ಎತ್ತರವಾಗಿದೆ. ೧ ೧/೨ ಅಡಿ ಎತ್ತರದ ಕಟ್ಟೆಯ ಮೇಲೆ ೪ ಕಂಬಗಳ ಆಸರೆಯನ್ನು ಪಾದಗಟ್ಟೆ ಹೊಂದಿದೆ. ಕಂಬಗಳು ೬ ಅಡಿ ಎತ್ತರ, ೧ ಅಡಿ ದಪ್ಪದ್ದಾಗಿವೆ. ಪಾದಗಟ್ಟೆಯ ಕಂಬಗಳು ಈ ಮೊದಲೇ ವಿವರದ ಪಾದಗಟ್ಟೆಯ ರಚನೆಯನ್ನು ಹೊಂದಿರುವುದನ್ನು ಕಾಣಬಹುದು.

ಪಾದಗಟ್ಟೆಯ ಮೇಲ್ಛಾವಣಿಯನ್ನು ಕಲ್ಲುಗಳಿಂದ ರಚಿಸಲಾಗಿದೆ. ಪಾದಗಟ್ಟೆಗೆ ಇಳಿಜಾರಾದ ಸಜ್ಜಾವುಂಟು. ಕಟ್ಟಡದ ಮೇಲ್ಛಾವಣಿಯ ಮೇಲೆ ಚೌಕಾಕಾರ ಕಟ್ಟೆಯಿದ್ದು, ನಾಲ್ಕು ದಿಕ್ಕುಗಳಲ್ಲಿ ಸ್ತೂಪಿಗಳಿವೆ. ಪಾದಗಟ್ಟೆಯ ಒಳಭಾಗದಲ್ಲಿ ದೂಪಕುಂಡ, ಪಾದಪೀಠವಿದೆ. ಪಾದಗಟ್ಟೆಗೆ ಸುಣ್ಣವನ್ನು ಹಚ್ಚಲಾಗಿದೆ.

**೩. ದಕ್ಷಿಣ ದಿಕ್ಕಿನಲ್ಲಿರುವ ಪಾದಗಟ್ಟೆ**

ಕ್ಷೇತ್ರದ ದಕ್ಷಿಣ ಭಾಗದಲ್ಲಿ ಈ ಪಾದಗಟ್ಟೆಯಿದೆ. ಪ್ರಾಚೀನ ಸ್ಮಾರಕವಾದ ಇದು ೧೧ ಅಡಿ ಎತ್ತರ, ೬ ಅಡಿ ಅಗಲವಾಗಿದ್ದು, ೩ ೧/೨ ಅಡಿ ಎತ್ತರವಾದ ಕಟ್ಟೆಯನ್ನು ರಚಿಸಿರುವರು. ಕಟ್ಟೆಯ ಮೇಲೆ ನಾಲ್ಕು ಕಂಬಗಳಿದ್ದು, ೫ ಅಡಿ ಎತ್ತರ, ೧೦ ಇಂಚು ದಪ್ಪವಾದ ಕಂಬಗಳಿವೆ. ಕಂಬಗಳ ರಚನೆಯಲ್ಲಿ ಚೌಕಾಕಾರ, ವೃತ್ತಾಕಾರ, ಸರಳ ಬೋಧಿಗೆಯನ್ನು ಕಾಣಬಹುದು. ಪಾದಗಟ್ಟೆಯ ಒಳಭಾಗದಲ್ಲಿ ಎರಡು ನಾಗಬಂಧ ಇರುವ ೩ ಅಡಿ ಎತ್ತರವಾದ ಕಂಬಗಳು, ಪಾದಪೀಠ, ದೂಪಕುಂಡ ಕಂಡುಬರುತ್ತವೆ. ಪಾದಗಟ್ಟೆಯನ್ನು ಮರಳು ಕಲ್ಲುಗಳಿಂದ ರಚಿಸಲಾಗಿದ್ದು, ಮೇಲ್ಛಾವಣೆಗೆ ಇಳಿಜಾರಾದ ಸಜ್ಜಾಯಿದೆ. ಮೇಲ್ಛಾವಣಿಯಲ್ಲಿ ಸ್ತೂಪಿಗಳಿವೆ. ಪಾದಗಟ್ಟೆಯ ಕಂಬಗಳು ಚೌಕಾಕಾರ, ವೃತ್ತಾಕಾರದ ಕಂಠ, ಸರಳ ಬೋಧಿಗೆಯನ್ನು ಒಳಗೊಂಡಿವೆ. ಪಾದಗಟ್ಟೆಗೆ ಸುಣ್ಣವನ್ನು ಹಚ್ಚಲಾಗಿದೆ.

**೪. ಚೊಳಚಗುಡ್ಡ ಗ್ರಾಮದ ಮುಂದಿನ ಪಾದಗಟ್ಟೆ**

ಚೊಳಚುಗಡ್ಡ ಗ್ರಾಮದ ಮುಂಭಾಗದಲ್ಲಿ ಇತ್ತೀಚೆಗೆ ಕಟ್ಟಲಾದ ಪಾದಗಟ್ಟೆಯಿದೆ. ೧೨ ಅಡಿ ಎತ್ತರ, ೪ ೧/೨ ಅಡಿ ಅಗಲವಾದ ವ್ಯಾಪ್ತಿಯನ್ನು ಹೊಂದಿದೆ. ಪಾದಗಟ್ಟೆಗೆ ೪ ಕಂಬಗಳ ಆಸರೆಯಿದ್ದು, ಅವು ೫ ೧/೨ ಅಡಿ ಎತ್ತರ, ೧ ಅಡಿ ದಪ್ಪವಾಗಿವೆ. ಈ ಕಟ್ಟಡವನ್ನು ಕಲ್ಲು ಮತ್ತು ಸಿಮೆಂಟ್ ಬಳಸಿ ಕಟ್ಟಲಾಗಿದೆ. ಕಟ್ಟಡದ ಮೇಲ್ಭಾಗದಲ್ಲಿ ಗುಮ್ಮಟವನ್ನು ಕಾಣಬಹುದು. ಪಾದಗಟ್ಟೆಯ ಒಳ ಭಾಗದಲ್ಲಿ ಶಿವಲಿಂಗ, ಬಸವನನ್ನು ಸ್ಥಾಪಿಸಲಾಗಿದೆ. ಪಾದಗಟ್ಟೆಯ ಹೊರಭಾಗದಲ್ಲಿ ಪಾದಪೀಠವನ್ನು ಗಮನಿಸಬಹುದು. ಈ ಪಾದಗಟ್ಟೆಯ ಬಲ ಭಾಗದಲ್ಲಿ ಕಿರಿದಾದ ಗಣೇಶನ ಮಂದಿರವಿದೆ.

## II. ಪ್ರವೇಶ ದ್ವಾರಗಳು

ಬನಶಂಕರಿ ಕ್ಷೇತ್ರದ ಉತ್ತರ ಮತ್ತು ದಕ್ಷಿಣ ದಿಕ್ಕುಗಳಲ್ಲಿ ಎರಡು ಪ್ರವೇಶ ದ್ವಾರಗಳನ್ನು ಕಾಣಬಹುದು. ಈ ದ್ವಾರಗಳು ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯಿಂದ ಸಂರಕ್ಷಿಸಲ್ಪಟ್ಟಿವೆ.

### ೧. ಉತ್ತರ ಭಾಗದ ಪ್ರವೇಶ ದ್ವಾರ

ಬನಶಂಕರಿ ಕ್ಷೇತ್ರದ ಉತ್ತರ ದಿಕ್ಕಿನಲ್ಲಿ ಈ ದ್ವಾರವನ್ನು ನೋಡಬಹುದು. ದ್ವಾರವನ್ನು ಸ್ಥಳೀಯವಾಗಿ ತೇರಿನ ಮನಿ ಎಂದು ಕರೆಯುತ್ತಾರೆ. ಪೂರ್ವದಲ್ಲಿ ದ್ವಾರದ ಒಳಭಾಗದಲ್ಲಿ ರಥವನ್ನು ನಿಲ್ಲಿಸುತ್ತಿದ್ದರಿಂದ ದ್ವಾರಕ್ಕೆ ತೇರಿನ ಮನಿ ಎಂದು ಕರೆಯುತ್ತಿದ್ದರು ಎಂದು ಸ್ಥಳೀಯರು ಹೇಳುತ್ತಾರೆ. ಆದರೆ ಈಗಿನ ಬನಶಂಕರಿ ರಥವು ಸುಮಾರು ೫೦ ಅಡಿಗಳಷ್ಟು ಎತ್ತರವಾಗಿದ್ದರಿಂದ ರಥವು ಒಳ ಪ್ರವೇಶಿಸಲು ಸಾಧ್ಯವಿಲ್ಲ. ರಥ ನಿಲ್ಲುವ ಸ್ಥಳದ ಸಮೀಪದಲ್ಲೇ ಈ ದ್ವಾರ ಇರುವುದರಿಂದ ಇದಕ್ಕೆ ತೇರಿನ ಮನಿ ಎಂದು ಕರೆದಿರಬಹುದಾದ ಸಾಧ್ಯತೆಗಳಿವೆ.

ಮರಳುಗಲ್ಲಿನಿಂದ ರಚಿಸಿರುವ ಪ್ರವೇಶ ದ್ವಾರವು ೨೧ ಅಡಿ ಉದ್ದ, ೧೮ ಅಡಿ ಅಗಲ, ೧೪ ಅಡಿ ಎತ್ತರವಾಗಿದೆ. ದ್ವಾರದಲ್ಲಿ ೬ ಅಡಿ ಎತ್ತರವಾದ, ೬ ಕಂಬಳಿಗಳಿವೆ. ಅವುಗಳ ದಪ್ಪ ೧ ಅಡಿ. ಕಂಬಗಳ ರಚನೆಯಲ್ಲಿ ಪೀಠ, ಕಾಂಡಭಾಗ ಚೌಕಾಕಾರವಾಗಿದ್ದು, ಸರಳ ಬೋಧಿಗೆಯನ್ನು ಗಮನಿಸಬಹುದು. ಈ ದ್ವಾರದ ವಿಶೇಷತೆಯೆಂದರೆ ದ್ವಾರದ ಬಲಭಾಗದ ಹೊರಭಿತ್ತಿಯಲ್ಲಿ ಕಿರಿದಾದ ಮೆಟ್ಟಿಲುಗಳನ್ನು ರಚಿಸಿ, ಮೇಲೆ ಹತ್ತಲು ವ್ಯವಸ್ಥೆ ಮಾಡಿದ್ದಾರೆ. ದ್ವಾರವು ಕುಸಿಯುತ್ತಿದ್ದ ಕಾರಣಕ್ಕಾಗಿ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯವರು ಸಂಪೂರ್ಣವಾಗಿ ದ್ವಾರವನ್ನು ಕೆಡವಿ, ಹೊಸದಾಗಿ ಮೊದಲು ಇದ್ದಂತೆ ಪುನರ್‌ರಚನೆ ಮಾಡಿ ಸಂರಕ್ಷಿಸಿದ್ದಾರೆ.

### ೨. ದಕ್ಷಿಣ ದಿಕ್ಕಿನ ಪ್ರವೇಶ ದ್ವಾರ

ಕ್ಷೇತ್ರದ ದಕ್ಷಿಣ ಭಾಗದಲ್ಲಿರುವ ಈ ಪ್ರವೇಶ ದ್ವಾರವು ೧೫ ಅಡಿ ಎತ್ತರ, ೨೦ ಅಡಿ ಅಗಲ ಆಯತಾಕಾರ ದ್ವಾರವಾಗಿದೆ. ದ್ವಾರಕ್ಕೆ ೩ ೧/೨ ಅಡಿ ಎತ್ತರವಾದ ಜಗಲಿಯನ್ನು ರಚಿಸಿರುವರು. ಜಗಲಿಯ ಮೇಲೆ ೧೮ ಕಂಬಗಳಿವೆ. ೭ ಅಡಿ ಎತ್ತರ, ೧೨ ಇಂಚು ದಪ್ಪ ಕಂಬಗಳನ್ನು ಕಾಣಬಹುದು. ಕಂಬಗಳ ರಚನೆಯಲ್ಲಿ ಪಾದ, ಕಾಂಡದಲ್ಲಿ ಚೌಕಾಕಾರ, ಸಾಧಾರಣವಾದ ಬೋಧಿಗೆಯನ್ನು ಹೊಂದಿವೆ. ದ್ವಾರದ ಮೇಲ್ಭಾವಣಿಯನ್ನು ಕಲ್ಲುಗಳಿಂದ ರಚಿಸಿದ್ದಾರೆ. ಮೇಲ್ಭಾವಣಿಗೆ ಇಳಿಜಾರಾದ ಸಜ್ಜಾವನ್ನು ಕಟ್ಟಲಾಗಿರುವುದನ್ನು ಗಮನಿಸಬಹುದು.

## III. ವೀರಗಲ್ಲುಗಳು

ಚರಿತ್ರೆಯ ಪ್ರಮುಖ ಆಕರಗಳಲ್ಲಿ ಒಂದಾದ ವೀರಗಲ್ಲುಗಳು ಇತಿಹಾಸ ರಚನೆಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ವೀರಗಲ್ಲುಗಳಿಂದ ತಿಳಿದುಬರುವ ಮಾಹಿತಿಯನ್ನು ವಿಶ್ಲೇಷಿಸಿದಾಗ

ನಮ್ಮ ನಾಡಿನ ಜನರ ಹಲವಾರು ಮನೋಧರ್ಮಗಳ ಪರಿಚಯ ನಮಗಾಗುತ್ತದೆ. ವೀರಗಲ್ಲು ಪ್ರತಿನಿಧಿಸುವ ವೀರನ ಸಾವಿಗೆ ಕಾರಣವಾದ ಹೋರಾಟವನ್ನು ಪರಿಚಯಿಸಿಕೊಟ್ಟಿರುವುದು ಗಮನಾರ್ಹ. ಮಡಿದವರ ಜೀವನ ಮೌಲ್ಯಗಳನ್ನು ತಿಳಿಯುವಲ್ಲಿ ಸಹಕಾರಿಯಾಗಿವೆ. ಜೀವದ ಹಂಗನ್ನು ತೊರೆದು ಹೋರಾಡಿದ ಅವನ ಧೀಮಂತಿಕೆಯನ್ನು ಮೆಚ್ಚತಕ್ಕದ್ದಾಗಿದೆ.[೩೩]

ವೀರಗಲ್ಲುಗಳಿಂದ ಸಾಮಾಜಿಕ ನಿಷ್ಠೆ, ಸ್ವಾಮಿ ಭಕ್ತಿ, ಸ್ವಾಭಿಮಾನ, ಎದೆಗಾರಿಕೆ ಪರಿಚಯವಾಗುವುದು. ಇದಲ್ಲದೆ ಇವುಗಳಿಂದ ಅಸಹಾಯಕ ಸ್ತ್ರೀಯರ ಮೇಲೆ ಕಾಮುಕರ ದೌರ್ಜನ್ಯ, ಆಡಳಿತ ವರ್ಗದ ಧೋರಣೆಗಳು ಮೊದಲಾದ ಸಮಾಜ ವಿರೋಧಿ ಮನೋಭಾವನೆಗಳ ನಡವಳಿಕೆಗಳ ಮಾಹಿತಿಯು ಲಭ್ಯವಾಗುವುದು. ಇಂತಹ ವಿವಿಧ ಆಯಾಮಗಳನ್ನು, ಪೂರ್ವಜಕ ಮನೋಭಾವನೆಗಳನ್ನು ತಿಳಿದುಕೊಳ್ಳುವಲ್ಲಿ ವೀರಗಲ್ಲುಗಳ ಪಾಠ ಮತ್ತು ಶಿಲ್ಪಗಳೆರಡೂ ನೆರವಾಗುತ್ತಿರುವುದು ವಿಶೇಷ. ಅಲ್ಲದೆ ಇವುಗಳ ಅಧ್ಯಯನದಿಂದ ಅಂದಿನ ಜನರ ಆರ್ಥಿಕ ಸ್ಥಿತಿಗತಿಗಳನ್ನು ಹಾಗೂ ಸಾಮಾಜಿಕ, ರಾಜಕೀಯ ಸ್ವರೂಪವನ್ನು ಅರ್ಥೈಸಬಹುದು.

ಚೊಳಚಗುಡ್ಡ ಗ್ರಾಮದಲ್ಲಿರುವ ವೀರಗಲ್ಲು ಬರವಣಿಗೆ ಸಹಿತವಾಗಿದ್ದು, ಅವು ಅಸ್ಪಷ್ಟವಾಗಿವೆ. ವೀರನ ಹೆಸರಾಗಲಿ, ಸ್ಥಳವಾಗಲಿ, ಕಾಲ, ಯಾರೊಡನೆ ಹೋರಾಡಿದರೆಂಬ ವಿವರಗಳು ಈ ವೀರಗಲ್ಲುಗಳಿಂದ ತಿಳಿದುಬರುವುದಿಲ್ಲ. ಆದ್ದರಿಂದ ಶಿಲ್ಪಗಳು ಮತ್ತು ಕಲ್ಲಿನ ಸ್ವರೂಪದ ಮೇಲೆ ಆ ವೀರಗಲ್ಲುಗಳ ಕಾಲವನ್ನು ಹಾಗೂ ಅದರ ಉದ್ದೇಶವನ್ನು ತಿಳಿಯಬಹುದು. ಮೇಲೆ ವಿವರಿಸಿದ ಹಾಗೆ ಒಂದು ವೀರಗಲ್ಲು ಚೊಳಚಗುಡ್ಡ ಗ್ರಾಮದಲ್ಲಿದ್ದು, ಮತ್ತೊಂದು ಬನಶಂಕರಿ ಕ್ಷೇತ್ರದಲ್ಲಿದೆ.

**೧. ಚೊಳಚಗುಡ್ಡ ಗ್ರಾಮದ ವೀರಗಲ್ಲು**

ಗ್ರಾಮದ ವಾಯುವ್ಯ ಭಾಗದಲ್ಲಿರುವ ಕಲ್ಮೇಶ್ವರ ದೇವಾಲಯದ ಮುಂಭಾಗದಲ್ಲಿ ಒಂದು ವೀರಗಲ್ಲನ್ನು ಕಾಣಬಹುದು. ಅದು ೩ ಅಡಿ ಎತ್ತರ, ೨ ಅಡಿ ಅಗಲ, ೧೦ ಇಂಚು ದಪ್ಪವಿದೆ. ಈ ವೀರಗಲ್ಲನ್ನು ಮರಳುಗಲ್ಲಿನಿಂದ ರಚಿಸಲಾಗಿದೆ.

**ವೀರಗಲ್ಲಿನ ಶಾಸನ ಪಾಠ.**

ವೀರಗಲ್ಲು ಮೂರು ಪಟ್ಟಿಕೆಗಳನ್ನು ಒಳಗೊಂಡಿದ್ದು, ಮೊದಲನೆಯ ಮತ್ತು ಮೂರನೆಯ ಪಟ್ಟಿಕೆಯಲ್ಲಿ ಬರವಣಿಗೆ ಇದೆ. ಮೇಲಿನ ಪಟ್ಟಿಕೆಯಲ್ಲಿ ಎರಡು ಸಾಲುಗಳಿವೆ.

೧. ಸ್ವಸ್ತಿ ಶ್ರೀಮತು ಚತುರ್ದ್ದೇಸುಭುವನಾಧೀ

೨. ಸ್ವ(ರಿ) ದೇವಿಯ ಮೂರು ಗೊ(ರ)ವರು

ಕೆಳಗಿನ ಪಟ್ಟಿಕೆಯಲ್ಲಿ ಎರಡು ಸಾಲುಗಳಿವೆ.

೩. ಜಂಗಮಯವೋಜಂಗಳು ಕೊಂಡ (ದೀ) ಕಾಡಿನ

೪. ಅಡಿಕೆ (ಫ)ಲ ಬ್ರಯ ಸಿದ್ಧಾಯ ಸರ್ವ್ವಮಾ[೪]

ಶಾಸನವು ಕ್ರಿ.ಶ. ೧೪ನೇ ಶತಮಾನಕ್ಕೆ ಸೇರಿದ ಗೋಕಾಳಗದಲ್ಲಿ ಮಡಿದವನಿಗಾಗಿ ರಚಿಸಿದ ವೀರಗಲ್ಲಾಗಿದೆ. ಶಾಸನದ ಮೊದಲನೆಯ ಸಾಲಿನಲ್ಲಿ ಸ್ವಸ್ತಿ ಶ್ರೀ ಭುವನಾಧೀಶ್ವರಿ ಎಂದು ಹೆಸರಿಸಿದೆ. ಭುವನಾಧೀಶ್ವರಿ ಎಂದರೆ ಕ್ಷೇತ್ರದ ಅಧಿದೇವತೆಯಾದ ಬನಶಂಕರಿ ಇರಬಹುದು. ಶಾಸನದಲ್ಲಿ ದೇವಿಯನ್ನು ಸ್ಮರಿಸುತ್ತಾ, ಎರಡನೆಯ ಸಾಲಿನಲ್ಲಿ ದೇವಿ ಮೂರು ಗೊರವರು ಎಂದು ಉಲ್ಲೇಖಿಸಿದೆ.

ಮೂರನೆಯ ಮತ್ತು ನಾಲ್ಕನೆಯ ಸಾಲಿನಲ್ಲಿ ಜಂಗಮಯ ವೋಜಗಳು ಅಡಿಕೆ ಫಲವನ್ನು ಕೊಂಡು ಯಾರಿಗೊ ದಾನ ನೀಡಿದ ವಿಷಯವಿದೆ. ಬಹುಶಃ ಈ ದಾನವನ್ನು ಗೋಕಾಳಗದಲ್ಲಿ ಮಡಿದ ವೀರನ ಪರಿವಾರಕ್ಕೆ ನೀಡಿರಬಹುದು. ಈ ವೀರಗಲ್ಲು ಮೂರು ಹಂತದ ಶಿಲ್ಪವನ್ನು ಹೊಂದಿದೆ. ಮೊದಲ ಹಂತದ ಬಲಭಾಗದಲ್ಲಿ ದನಗಳನ್ನು, ಎಡ ಭಾಗದಲ್ಲಿ ಶತ್ರುವಿನೊಂದಿಗೆ ಹೋರಾಡುತ್ತಿರುವ ವೀರನನ್ನು ಚಿತ್ರಿಸಲಾಗಿದೆ. ಇಲ್ಲಿ ವೀರನು ಬಿಲ್ಲು ಮತ್ತು ಬಾಣವನ್ನು ಹಿಡಿದಿರುವನು ಹಾಗೂ ಶತ್ರುವು ಸಹ ಅದೇ ರೀತಿಯ ಆಯುಧಗಳನ್ನು ಹಿಡಿದು ಹೋರಾಡುತ್ತಿರುವ ದೃಶ್ಯ ಸೊಗಸಾಗಿರುವುದು ಕಂಡುಬಂದಿದೆ. ಇಲ್ಲಿ ವೀರನ ಶಿಲ್ಪದ ಗಾತ್ರ ದೊಡ್ಡದಾಗಿದ್ದು, ಶತ್ರುವಿನ ಶಿಲ್ಪದ ಗಾತ್ರ ಚಿಕ್ಕದಾಗಿದೆ. ಈ ಹಂತದಲ್ಲಿರುವ ಶಿಲ್ಪಗಳಲ್ಲಿ ಉಡುಪು, ಆಯುಧಗಳು, ಆಭರಣಗಳನ್ನು ಸ್ಪಷ್ಟವಾಗಿ ಕಾಣುವಂತೆ ಚಿತ್ರಿಸಲಾಗಿದೆ.

ಎರಡನೆಯ ಹಂತದಲ್ಲಿ ವೀರನನ್ನು ಪಲ್ಲಕ್ಕಿಯಲ್ಲಿ ಇಬ್ಬರು ಅಪ್ಸರೆಯರು ಒಯ್ಯುತ್ತಿರುವಂತೆ ಕೆತ್ತಲಾಗಿದೆ. ಅಪ್ಸರೆಯರು ಎಡಗೈಯಲ್ಲಿ ಪಲ್ಲಕ್ಕಿಯ ಹಿಡಿದು, ಬಲಗೈಯಲ್ಲಿ ಚಾಮರವನ್ನು ಹಿಡಿದಿದ್ದಾರೆ. ಮೂರನೆಯ ಹಾಗೂ ಕೊನೆಯ ಹಂತದಲ್ಲಿ ಶಿವಲಿಂಗವು ಮಧ್ಯದಲ್ಲಿದ್ದು, ಲಿಂಗದ ಬಲಭಾಗದಲ್ಲಿ ಚಂದ್ರ, ಎಡಬದಿಯಲ್ಲಿ ಸೂರ್ಯನ ಚಿಹ್ನೆಗಳಿವೆ. ಶಿವಲಿಂಗದ ಬಲ ಬದಿಯಲ್ಲಿ ನಂದಿಯಿದೆ. ವೀರನು ಲಿಂಗವನ್ನು ಮುಟ್ಟುತ್ತಿರುವ ಶಿಲ್ಪ, ಎಡಬದಿಯಲ್ಲಿ ವೀರನು ಕುಳಿತ್ತಿರುವಂತೆ ಚಿತ್ರಿಸಲಾಗಿದೆ. ಹೀಗೆ ಈ ವೀರಗಲ್ಲು ಸುಂದರವಾದ ಶಿಲ್ಪವಿನ್ಯಾಸದಿಂದ ಕೂಡಿದೆ.

**೨. ಬನಶಂಕರಿ ಕ್ಷೇತ್ರದಲ್ಲಿರುವ ವೀರಗಲ್ಲು**

ಬನಶಂಕರಿಗುಡಿಯ ಎಡಭಾಗದಲ್ಲಿ ಕೇದಾರೇಶ್ವರ ದೇವಾಲಯವಿದೆ. ಕೇದಾರೇಶ್ವರ ಗುಡಿಯ ಒಳಭಾಗ ಭಿತ್ತಿಯಲ್ಲಿ ಈ ವೀರಗಲ್ಲು ಇದೆ. ೪ ಅಡಿ ಎತ್ತರ, ೨ ಅಡಿ ಅಗಲವಾಗಿರುವುದು. ಇದಕ್ಕೆ ಬಳಸಿದ ಕಲ್ಲು ಮರಳುಗಲ್ಲು. ವೀರಗಲ್ಲಿನಲ್ಲಿ ಯಾವುದೇ

ಬರವಣಿಗೆಯಿಲ್ಲ. ಮೂರು ಹಂತಗಳ ಶಿಲ್ಪಗಳನ್ನೊಳಗೊಂಡಿದೆ. ಈ ವೀರಗಲ್ಲಿನಲ್ಲಿರುವ ಶಿಲ್ಪಗಳು ಹೆಚ್ಚು ಶಿಥಿಲಗೊಂಡಿರುವುದರಿಂದ ಅವುಗಳ ನಿಖರ ಸ್ವರೂಪ ತಿಳಿಯುವುದು ದುಸ್ತರ.

ಮೊದಲನೆಯ ಹಂತದ ಬಲ ಮತ್ತು ಎಡ ಭಾಗಗಳಲ್ಲಿ ಆಯುಧ ಹಿಡಿದು ಕುದುರೆ ಮೇಲೆ ಕುಳಿತಿರುವುಂತೆ ಇರುವ ಶಿಲ್ಪಗಳಿದ್ದು, ಕುದುರೆಗಳ ಮುಂದೆ ಸ್ತ್ರೀಯರ ಶಿಲ್ಪಗಳಿವೆ. ಬಹುಶಃ ಸ್ತ್ರೀಯರ ಮಾನ ರಕ್ಷಣೆಗಾಗಿ ಹೋರಾಡುತ್ತಿರುವ ದೃಶ್ಯವಿರಬಹುದು.

ಎರಡನೆಯ ಹಂತದಲ್ಲಿ ವೀರನನ್ನು ಇಬ್ಬರು ಅಪ್ಸರೆಯರು ತಮ್ಮ ತೋಳುಗಳನ್ನು ಬಳಸಿ ಒಯ್ಯುತ್ತಿರುವುದನ್ನು ಕೆತ್ತಲಾಗಿದೆ. ಅಪಸ್ಸರೆಯ ಬಲಗೈಯಲ್ಲಿ ಚಾಮರವಿದೆ.

ಮೂರನೆಯ ಹಂತದ ಪಟ್ಟಿಕೆಯ ಮೇಲೆ ಶಿವಲಿಂಗದ ಚಿಹ್ನೆಯಿದೆ. ಪಟ್ಟಿಕೆಯ ಎಡ ಮತ್ತು ಬಲ ಬದಿಯಲ್ಲಿ ಅಪ್ಸರೆಯರು ಚಾಮರವನ್ನು ಹಿಡಿದು ನಿಂತಿರುವ ಶಿಲ್ಪಗಳಿದ್ದು, ಅಪ್ಸರೆಯ ಮಧ್ಯ ಭಾಗದಲ್ಲಿ ಕುಳಿತಿರುವ ವೀರನ ಶಿಲ್ಪವಿದೆ. ಈ ವೀರಗಲ್ಲು ಸ್ತ್ರೀಯರ ಮಾನರಕ್ಷಣೆಗಾಗಿ ಹೋರಾಟ ಮಾಡಿದ ವೀರನಿಗೆ ಸಂಬಂಧಿಸಿದ್ದು ಎಂದು ಹೇಳಬಹುದು.

**IV. ಕೆರೆಗಳು**

ನೀರು ಮನುಷ್ಯನ ಅತಿ ಅವಶ್ಯಕ ವಸ್ತುಗಳಲ್ಲಿ ಒಂದಾಗಿದೆ. ಆದಕಾರಣ ಪ್ರಾಗಿತಿಹಾಸ ಕಾಲದ ಮಾನವನು ನೀರು ಸಿಗುವ ಸ್ಥಳಗಳ ಹತ್ತಿರದಲ್ಲಿಯೇ ತನ್ನ ವಾಸಸ್ಥಳವನ್ನಾಗಿ ಮಾಡಿಕೊಂಡಿದ್ದನು. ನಂತರ ಮನುಷ್ಯನ ಬುದ್ಧಿಯು ವಿಕಾಸವಾಗತೊಡಗಿದಂತೆ ಒಂದು ಕಡೆ ನೆಲೆನಿಂತು, ಕೃಷಿಯನ್ನು ತನ್ನ ಮೂಲ ವೃತ್ತಿಯಾಗಿಸಿಕೊಂಡನು. ಕೃಷಿಗೆ ನೀರನ್ನು ಪೂರೈಸಲು ಮಳೆ ನೀರನ್ನು ಅವಲಂಬಿಸಿದನು. ಆದರೆ ಸಕಾಲದ ಮಳೆಯ ವೈಫಲ್ಯತೆಯು ಅವನನ್ನು ಕೃತಕ ನೀರಿನ ಸಂಗ್ರಹಕ್ಕಾಗಿ ಕೆರೆಕಟ್ಟೆ, ಬಾವಿಗಳನ್ನು ರಚಿಸಲು ಆರಂಭಿಸಿದನು. ಇವು ಪೂರ್ವದಲ್ಲಿ ನೀರಾವರಿಯ ಮೂಲಗಳಾಗಿದ್ದವು.

ಪ್ರಾಚೀನ ಸಾಹಿತ್ಯಾಧಾರಗಳಲ್ಲಿ ಜಲ ಸಂಗ್ರಹ ವಿಧಾನಗಳ ಮಹತ್ವವನ್ನು ಕುರಿತು ಹೇಳಲಾಗಿದೆ. ಅವುಗಳಲ್ಲಿ ಮುಖ್ಯವಾಗಿ ರಾಮಾಯಣ, ಮಹಾಭಾರತ, ಕೌಟಿಲನ್ಯ ಅರ್ಥಶಾಸ್ತ್ರ, ಪದ್ಮಪುರಾಣ, ಜಾತಕ ಕಥೆಗಳು, ಶುಕ್ರನ ನೀತಿಸಾರ, ಸಂಗಮ ಸಾಹಿತ್ಯಗಳು, ಕೆರೆ ನೀರಾವರಿ ಬಗ್ಗೆ ಅನೇಕ ಉಪಯುಕ್ತ ಮಾಹಿತಿ ನೀಡುತ್ತವೆ.

ನಮ್ಮಲ್ಲಿ ಕೆರೆಗಳ ನಿರ್ಮಾಣವು ಪುಣ್ಯದ ಕಾರ್ಯ ಎಂದು ಭಾವಿಸಲಾಗುತ್ತದೆ. ಕೆರೆಗಳು ಸಮಾಜದ ಅಭ್ಯುದಯಕ್ಕೆ ಅತ್ಯಗತ್ಯ. ಕೆರೆಗಳು ಪ್ರಾಚೀನ ಕರ್ನಾಟಕದ ನೀರಾವರಿ ಸಾಧನಗಳಲ್ಲಿ ಅತ್ಯಂತ ಪ್ರಮುಖವಾದದ್ದು. ಕೆರೆಕಟ್ಟೆಗಳು ಕೇವಲ ಕಲ್ಲು ಮಣ್ಣಿನ ರಚನೆಗಳಲ್ಲ, ಅವು ನಾಡಿನ ಜೀವನಾಧಾರಗಳೆನ್ನಬಹುದು. ನಮ್ಮ ಕೆರೆಗಳ ಇತಿಹಾಸ ಅಧ್ಯಯನಕ್ಕೆ

ಶಾಸನಗಳು ಸಹಕಾರಿಯಾಗಿವೆ. ಶಾಸನಗಳು ಕ್ರಿ.ಪೂ. ೩೦೦ ರಿಂದ ಕ್ರಿ.ಶ. ೧೮೦೦ರವರೆಗೆ ಅಸಂಖ್ಯಾತ ಕೆರೆಗಳ ಬಗ್ಗೆ ಬೆಳಕು ಚೆಲ್ಲುತ್ತವೆ. ಕ್ರಿ.ಶ. ೧೫೦ರ ರುದ್ರಾಧಾಮನ ಜುನಾಘಡ ಶಾಸನವು ನಿರ್ಮಿತವಾದ ಶತಮಾನಗಳ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಅಂದರೆ ಕ್ರಿ.ಪೂ. ೩೨೦ರಲ್ಲಿ ಮೌರ್ಯ ಕಾಲದ ಸುದರ್ಶನ ಜಲಾಶಯವು ಚಂಡಮಾರುತದಿಂದ ನಾಶಗೊಂಡ ಬಗ್ಗೆ ಹಾಗೂ ಅದರ ಪುನರ್‌ನಿರ್ಮಾಣದ ಬಗ್ಗೆ ಮಾಹಿತಿ ನೀಡುತ್ತವೆ. ಮೌರ್ಯರು ಮಧ್ಯ ಕರ್ನಾಟಕದವರೆಗೂ ತಮ್ಮ ಅಧಿಪತ್ಯವನ್ನು ಸ್ಥಾಪಿಸಿದ್ದರಿಂದ ಕರ್ನಾಟಕ ಜನತೆ ಕೆರೆಗಳ ನಿರ್ಮಾಣ ಮತ್ತು ಸಂರಕ್ಷಣೆಯ ಬಗ್ಗೆ ತಿಳಿವಳಿಕೆಯನ್ನು ಮೌರ್ಯರಿಂದ ಕಲಿತಿರಬಹುದು.[೩೫] ಕರ್ನಾಟಕದಲ್ಲಿ ಜಲಾಶಯಗಳ ಪ್ರಾಚೀನತೆಯ ಬಗ್ಗೆ ಮಾಹಿತಿ ನೀಡುವ ಚಂದ್ರವಳ್ಳಿ ಶಾಸನದಿಂದ ಕದಂಬರ ಮೂಲ ಪುರುಷನಾದ ಮಯೂರವರ್ಮನು ಚಿತ್ರದುರ್ಗದಲ್ಲಿ ಮೊಟ್ಟಮೊದಲಿಗೆ ಒಂದು ಕೆರೆಯನ್ನು ನಿರ್ಮಿಸಿದನೆಂದು ತಿಳಿಯುತ್ತದೆ. ಕದಂಬರಿಂದ ಆರಂಭವಾಗಿ ವಿಜಯನಗರ ಅರಸರವರೆಗೂ ಕೆರೆ ನೀರಾವರಿ ಕಾರ್ಯವು ಉತ್ತಮವಾಗಿ ಸಾಗಿತ್ತು. ಆದರೆ ಕರ್ನಾಟಕದಲ್ಲಿ ಬ್ರಿಟಿಷರ ಆಳ್ವಿಕೆ ಆರಂಭದ ನಂತರ ಕೆರೆ ನೀರಾವರಿ ವ್ಯವಸ್ಥೆ ಮತ್ತು ಕೆರೆಗಳು ಅವನತಿಯ ಹಂತವನ್ನು ತಲುಪಿದವು.

ಗ್ರಾಮಗಳ ಅವಿಭಾಜ್ಯ ಅಂಗವಾಗಿ ಕೆರೆಗಳು ಪೂರ್ವದಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ಕೆರೆಗಳು ಗ್ರಾಮಗಳ ಸ್ವತ್ತಾಗಿತ್ತು. ಕೆರೆಗಳ ಮಹತ್ವವನ್ನು ಕೆರೆಗೆ ಹಾರ ಎಂಬ ಜನಪದ ಕಥನಗಳು ತಿಳಿಸುತ್ತವೆ. ಗ್ರಾಮಗಳ ಹಿತಕ್ಕಾಗಿ ಕೆರೆಗೆ ಆಹುತಿಯಾದ ಅನೇಕ ತ್ಯಾಗ ಜೀವಿಗಳನ್ನು ಜನಪದ ಕಥೆಗಳಲ್ಲಿ ಕಾಣುತ್ತೇವೆ.

ಚೊಳಚಗುಡ್ಡ ಗ್ರಾಮದಲ್ಲಿ ಎರಡು ಕೆರೆಗಳಿವೆ. ಅವುಗಳನ್ನು ಚಿಕ್ಕ ಕೆರೆ (ಈಣ್ಣನ ಕೆರೆ), ದೊಡ್ಡಕೆರೆ ಎಂದು ಕರೆಯುತ್ತಾರೆ. ಈ ರೀತಿಯಲ್ಲಿ ಹೆಸರಿನಿಂದ ಕರೆಯುವ ಪದ್ಧತಿ ಅಲ್ಲಿಯ ಜನರಲ್ಲಿ ಇಂದಿಗೂ ಪ್ರಚಲಿತದಲ್ಲಿದೆ. 'ಫ್ರಾನ್ಸಿಸ್ ಬೂಕನ್' ಕೆರೆ ಮತ್ತು ಕಟ್ಟೆಗಳನ್ನು ಹೀಗೆ ಗುರುತಿಸಿದ್ದಾನೆ. ಜಾನುವಾರುಗಳಿಗೆ ಕುಡಿಯುವ ನೀರಿಗಾಗಿ ನಿರ್ಮಿಸಲ್ಪಟ್ಟ ಚಿಕ್ಕ ಸರೋವರವನ್ನು ಕಟ್ಟೆ ಎಂದು, ಕೃಷಿ ಭೂಮಿಗೆ ನೀರುಣಿಸುವ ದೊಡ್ಡ ಸರೋವರವನ್ನು ಕೆರೆ ಎಂದು ಕರೆದಿದ್ದಾನೆ.[೩೬]

ಮಲಪ್ರಭ ನದಿಯ ಸಂಪರ್ಕವಿರುವ ಸರಸ್ವತಿ ಹಳ್ಳವು ಗ್ರಾಮದ ಒಂದೇ ನದಿ ಮೂಲವಾಗಿದೆ. ಆದ್ದರಂದ ಇಲ್ಲಿಯ ಕೆರೆಗಳು ಪ್ರಮುಖ ಪಾತ್ರವಹಿಸಿವೆ. ಗ್ರಾಮದಲ್ಲಿರುವ ಕೆರೆಗಳು ಮಳೆ ನೀರನ್ನು ಆಶ್ರಿತವಾಗಿವೆ. ಇಂದು ಎರಡು ಕೆರೆಗಳ ನೀರು ಬಳಕೆಯಾಗುತ್ತಿವೆ.

**೧. ಚಿಕ್ಕಕೆರೆ ಅಥವಾ ಕಟ್ಟೆ**

ಈ ಕೆರೆಯು ಗ್ರಾಮದ ವಾಯುವ್ಯ ಭಾಗದಲ್ಲಿದೆ. ಕೆರೆಯ ಪಕ್ಕದಲ್ಲಿ ಈರಣ್ಣನ ಗುಡಿಯಿರುವುದರಿಂದ ಇದಕ್ಕೆ ಈರಣ್ಣನ ಕೆರೆ ಎಂದು ಕರೆಯುತ್ತಾರೆ. ಸುಮಾರು ೧.೫

ಅಡಿ ಉದ್ದ, ೧೦೦ ಅಡಿ ಅಗಲವಾಗಿರುವ ತಗ್ಗು ಪ್ರದೇಶದಲ್ಲಿ ಜಲ ಆವೃತವಾಗಿದೆ. ಈ ಸರೋವರದ ನೀರನ್ನು ಜಾನುವಾರುಗಳಿಗೆ ಮಾತ್ರ ಉಪಯೋಗವಾಗುತ್ತಿದೆ.

**೨. ದೊಡ್ಡಕೆರೆ**

ಈ ಕೆರೆಯು ಗ್ರಾಮದ ಈಶಾನ್ಯ ದಿಕ್ಕಿನಲ್ಲಿದೆ. ಕೆರೆಯು ಮಳೆ ಆಶ್ರಿತವಾಗಿದ್ದು, ನೈಸರ್ಗಿಕವಾಗಿ ಬೆಟ್ಟಗಳ ಪ್ರದೇಶದಲ್ಲಿ ಸುಮಾರು ೫೦೦ ಅಡಿ ಸುತ್ತಳತೆಯ ತಗ್ಗಿದ್ದ ಪ್ರದೇಶದಲ್ಲಿ ಜಲ ಆವೃತವಾಗಿರುವುದನ್ನು ಕಾಣಬಹುದು. ಗ್ರಾಮದ ದೊಡ್ಡ ಕೆರೆ ಇದಾಗಿದೆ. ಈ ಕೆರೆಯ ನೀರೂ ಕೂಡ ಜಾನುವಾರುಗಳಿಗೆ ಮಾತ್ರ ಉಪಯೋಗವಾಗುತ್ತಿದೆ. ಗ್ರಾಮದಲ್ಲಿರುವ ಇವೆರಡು ಕೆರೆಗಳು ಸೀಮಿತ ವ್ಯಾಪ್ತಿ ಹೊಂದಿರುವುದರಿಂದ ಇವುಗಳನ್ನು ಕೆರೆ ಎಂದು ಕರೆಯುವ ಬದಲು ಕಟ್ಟೆಗಳು ಎಂದು ಕರೆಯುವುದು ಸೂಕ್ತವೆನಿಸುತ್ತದೆ. ಗ್ರಾಮದ ಕೆರೆಗಳಲ್ಲಿರುವ ಹೂಳು ತೆಗೆದು, ಅವುಗಳ ಆಳವನ್ನು ಹೆಚ್ಚಿಸಿದರೆ ಈ ಕೆರೆಗಳ ನೀರು ವಿವಿಧ ಉದ್ದೇಶಗಳಿಗೆ ಬಳಕೆಯಾಗುತ್ತದೆ. ಆದ್ದರಿಂದ ಕೆರೆಗಳ ಅಭಿವೃದ್ಧಿಗೆ ಆದ್ಯತೆ ನೀಡಬೇಕಿದೆ. ಇದರಿಂದ ಗ್ರಾಮದಲ್ಲಿ ನೀರಿನ ಕೊರತೆಯನ್ನು ಅಲ್ಪಮಟ್ಟಿಗೆ ಕಡಿಮೆ ಮಾಡಬಹುದು.

ಕೆರೆಗಳ ಪುನರುಜ್ಜೀವನ ಅತ್ಯಗತ್ಯ. ಆಧುನಿಕ ಕಾಲದಲ್ಲಿ ಸಣ್ಣ, ಮಾಧ್ಯಮ ಹಾಗೂ ಬೃಹತ್ ನೀರಾವರಿ ಯೋಜನೆಗಳು ಪ್ರಾರಂಭವಾದಂತೆ ಗ್ರಾಮೀಣ ಜನರ ಮೂಲಭೂತ ಅವಶ್ಯಕತೆಗಳನ್ನು ಪೂರೈಸುತ್ತಿದ್ದ ಕೆರೆಗಳು ಕಣ್ಮರೆಯಾಗತೊಡಗಿವೆ. ಕೆಲವು ಕೆರೆಗಳು ಬತ್ತಿ ಹೋದರೆ, ಇನ್ನುಳಿದ ಕೆರೆಗಳು ಒತ್ತುವರಿಯಾದರೆ, ಮತ್ತೆ ಕೆಲವು ಕೆರೆಗಳು ಹೂಳಿನಿಂದ ಮುಚ್ಚಿ ಹೋಗುತ್ತಿರುವುದನ್ನು ಕಾಣಬಹುದು. ನಗರ ಪ್ರದೇಶಗಳಲ್ಲಿ ಕೆರೆಗಳನ್ನು ಒಣಗಿಸಿ ಸೈಟುಗಳನ್ನಾಗಿ ಪರಿವರ್ತಿಸಲಾಗುತ್ತಿದೆ. ಕೆರೆಗಳು ಬಹುಕಾಲ ಉಳಿಯಬೇಕಾದರೆ ಆಗಾಗ್ಗೆ ಅವುಗಳ ಸಂರಕ್ಷಣೆಗೆ ಗಮನವನ್ನು ನೀಡಬೇಕು.

**V. ಬಾವಿಗಳು**

ನದಿಗಳು ಮತ್ತು ಸರೋವರಗಳು ಮಾನವನಿಗೆ ನೀರನ್ನು ಒದಗಿಸುವ ಪ್ರಾಥಮಿಕ ಮೂಲಗಳೆಂದರೆ ತಪ್ಪಾಗಲಾರದು. ಮಳೆಯ ಪ್ರಮಾಣದ ಏರುಪೇರಿನಿಂದ ನೀರಿನ ಸಮಸ್ಯೆಯು ಉಲ್ಬಣವಾಗುವುದು. ನಮಗೆ ಅಗತ್ಯವಾಗಿಲ್ಲದಿದ್ದಾಗ ಅತಿಯಾಗಿ, ಅಗತ್ಯ ಇದ್ದಾಗ ಅತಿ ಕಡಿಮೆ ಪ್ರಮಾಣದ ನೀರು ಲಭ್ಯವಾಗುತ್ತದೆ. ನೆರೆ ಮತ್ತು ಬರ ಎಂದಿನಿಂದಲೂ ಇರುವ ದೊಡ್ಡ ಸಮಸ್ಯೆಗಳಾಗಿವೆ. ಇತ್ತೀಚಿನ ವರ್ಷಗಳಲ್ಲಿ ಜನಸಂಖ್ಯೆ ಹೆಚ್ಚಳದಿಂದ ಹಾಗೂ ಅರಣ್ಯ ನಾಶದಿಂದ ಸಮಸ್ಯೆಗಳು ತೀವ್ರವಾಗಿದೆ. ಈ ಸಮಸ್ಯೆಯ ತೀವ್ರತೆಯನ್ನು ಕಡಿಮೆ ಮಾಡಲು ಇರುವ ಮಾರ್ಗ ಎಂದರೆ ಅಂತರ್ಜಲವನ್ನು ಕಾಪಾಡುವುದು. ಇಂತಹ

ಸಂಗ್ರಹಣೆಯ ಮಾರ್ಗವೆಂದರೆ ಬಾವಿಗಳನ್ನು ನಿರ್ಮಿಸುವುದು. ಗೌಡರ ಬಾವಿಯನ್ನು ಹೊರತುಪಡಿಸಿ ಗ್ರಾಮದಲ್ಲಿನ ಇತರೆ ಬಾವಿಗಳ ಪ್ರಸ್ತಾಪವಿರುವ ಯಾವುದೇ ಶಾಸನ ದೊರೆಕಿಲ್ಲ. ಕ್ಷೇತ್ರಕಾರ್ಯ ಸಂದರ್ಭದಲ್ಲಿ ಅನೇಕ ಬಾವಿಗಳ ಕುರಿತು ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಗ್ರಾಮದಲ್ಲಿರುವ ಕೆಲವು ಬಾವಿಗಳ ನೀರು ಸಂಪೂರ್ಣ ಬತ್ತಿ ಹೋಗಿವೆ. ಇನ್ನೂ ಕೆಲವೊಂದು ಬಾವಿಗಳಲ್ಲಿ ನೀರು ಇದ್ದರೂ ಆ ನೀರು ಬಳಕೆಯಲ್ಲಿಲ್ಲ.

**೧. ದೇವಾಂಗ ಬಾವಿ**

ಬನಶಂಕರಿ ಕ್ಷೇತ್ರದಲ್ಲಿರುವ ದೇವಾಂಗ ಬಾವಿಯು ೭೧ ಅಡಿ ಸುತ್ತಾಳತೆಯನ್ನು ಹೊಂದಿದ್ದು, ವೃತ್ತಾಕಾರವಾಗಿದೆ. ಈ ಬಾವಿಯು ಸುಮಾರು ೬೦ ಅಡಿ ಆಳವನ್ನು ಹೊಂದಿರಬಹುದು. ಈ ಕ್ಷೇತ್ರದ ಅತಿ ದೊಡ್ಡ ಬಾವಿ ಇದಾಗಿರುವುದು ವಿಶೇಷ. ದೇವಾಂಗ ಸಮುದಾಯದವರು ಇದನ್ನು ಕಟ್ಟಿಸಿದ್ದರಿಂದ ಇದಕ್ಕೆ ದೇವಾಂಗ ಬಾವಿ ಎಂದು ಕರೆಯುತ್ತಾರೆ. ಬಾವಿಯ ಒಳಗೋಡೆಯನ್ನು ಮರಳುಗಲ್ಲಿನಿಂದ ಭದ್ರವಾಗಿ ಕಟ್ಟಲಾಗಿದೆ. ಬಾವಿಯಲ್ಲಿನ ನೀರನ್ನು ಮೇಲೆ ಎತ್ತಲು ನಾಲ್ಕು ಭಾಗಗಳಲ್ಲಿ ರಾಟಿಗಳನ್ನು ನಿರ್ಮಿಸಲಾಗಿದೆ. ಏಕಕಾಲಕ್ಕೆ ನಾಲ್ಕು ಕಡೆ ನೀರನ್ನು ಸೇದುವ ವ್ಯವಸ್ಥೆ ಮಾಡಿರುವುದು ವಿಶೇಷ.

**೨. ನಮಾಜ್ ಬಾವಿ**

ಚೊಳಚಗುಡ್ಡ ಗ್ರಾಮದ ಹೊರವಲಯದಲ್ಲಿ ಈದ್ಗಾ ಇದೆ. ಈದ್ಗಾದ ಬಲಬದಿಯಲ್ಲಿ ನಮಾಜ್ ಬಾವಿಯಿದೆ. ಇಲ್ಲಿರುವ ಈದ್ಗಾಕ್ಕೆ ಬರುವ ಜನರು ಪ್ರಾರ್ಥನೆ ಸಲ್ಲಿಸುವ ಮೊದಲು ಈ ಬಾವಿಯ ನೀರನ್ನು ಕೈಕಾಲು ಮುಖವನ್ನು ತೊಳೆಯಲು ಬಳಸಿದ್ದರಿಂದ ಮತ್ತು ನಮಾಜ್ (ಪ್ರಾರ್ಥನಾ ಸ್ಥಳ) ಸ್ಥಳದಲ್ಲಿ ಬಾವಿಯು ಇರುವುದರಿಂದ ಇದಕ್ಕೆ ನಮಾಜ್ ಬಾವಿ ಎಂದು ಸ್ಥಳೀಯರು ಕರೆಯುತ್ತಾರೆ. ಆದರೆ ಮೂಲತಃ ಕೃಷಿಗಾಗಿ ರಚಿಸಿರುವ ಪ್ರಾಚೀನ ಬಾವಿ ಇದಾಗಿದೆ.

೧೮ ಅಡಿ ಉದ್ದ, ೧೮ ಅಡಿ ಅಗಲ, ಚೌಕಾಕಾರದ ಈ ಬಾವಿಯನ್ನು ಮರಳು ಕಲ್ಲಿನಲ್ಲಿ ನಿರ್ಮಿಸಲಾಗಿದೆ. ಇದರ ಆಳ ಸುಮಾರು ೪೫ ಅಡಿಗಳು. ಒಳಗೋಡೆಯನ್ನು ಕಲ್ಲಿನಿಂದ ಭದ್ರವಾಗಿ ಕಟ್ಟಿದ್ದಾರೆ. ಬಾವಿಯ ಕಟ್ಟೆಯ ಮೇಲ್ಭಾಗದಲ್ಲಿ ಸುತ್ತಲೂ ಗಾರೆಯ ಅವಶೇಷಗಳನ್ನು ಕಾಣಬಹುದು. ಬಾವಿಯಿಂದ ನೀರನ್ನು ಮೇಲಕ್ಕೆತ್ತಲು ಏತನ್ನು ನಿರ್ಮಿಸಲಾಗಿದೆ. ಹಾಗೆಯೇ ಬಾವಿಯ ನೀರಿನ ತಗ್ಗಿನವರೆಗೆ ಅಂದರೆ ೪೫ ಅಡಿ ಉದ್ದದವರೆಗೆ ಮೆಟ್ಟಿಲುಗಳನ್ನು ಜೋಡಿಸಿದ್ದಾರೆ. ಈ ಮೆಟ್ಟಿಲುಗಳನ್ನು ಇಳಿಯುತ್ತಾ ಬಾವಿಯನ್ನು ಪ್ರವೇಶಿಸಬಹುದು. ಮೆಟ್ಟಿಲುಗಳ ಇಕ್ಕಲಗಳಲ್ಲಿ ಕಲ್ಲಿನ ಗೋಡೆಯನ್ನು ಕಟ್ಟಿ, ಗೋಡೆಯ ಮೇಲ್ಭಾಗದಲ್ಲಿ ಗಚ್ಚು, ಗಾರೆಯ ಅವಶೇಷವನ್ನು ಕಾಣಬಹುದು. ಈ ಬಾವಿಗೆ

ಏತವನ್ನು ರಚಿಸಿದ್ದರಿಂದ ಭೂಮಿಗೆ ನೀರುಣಿಸುವ ಕಾರ್ಯವನ್ನು ಪೂರ್ವದಲ್ಲಿ ಮಾಡುತ್ತಿತ್ತೆಂದು ತಿಳಿದುಬರುತ್ತದೆ. ಇಂದು ಈ ಬಾವಿಯ ನೀರನ್ನು ಬಳಸುತ್ತಿಲ್ಲ. ಬಾವಿಯ ಎಡ ಭಾಗದಲ್ಲಿ ಒಂದು ತೆರೆದ ಮಂಟಪವನ್ನು ಕಾಣಬಹುದು. ಬಾವಿಯ ನಿರ್ಮಾಣ ಹಾಗೂ ಚರಿತ್ರೆಯ ಬಗೆಗೆ ಯಾವ ದಾಖಲಾತಿಗಳು ಈವರೆಗೂ ಸಿಕ್ಕಿಲ್ಲ. ಗ್ರಾಮದಲ್ಲಿ ಏತ ನೀರಾವರಿಗೆ ಬಳಸಿದ ಪ್ರಾಚೀನ ಬಾವಿ ಇದಾಗಿದೆ.

**೩. ಮಠದ ಬಾವಿ**

ಮಠದ ಪಕ್ಕದಲ್ಲಿ ಬಾವಿಯಿರುವುದರಿಂದ ಈ ಬಾವಿಗೆ ಮಠದ ಬಾವಿ ಎಂದು ಕರೆಯುವರು. ವೃತ್ತಾಕಾರವಾದ ಈ ಬಾವಿಯನ್ನು ಮರಳುಕಲ್ಲುಗಳಿಂದ ನಿರ್ಮಿಸಲಾಗಿದೆ. ೪೯ ಅಡಿ ಸುತ್ತಳತೆಯನ್ನು ಹೊಂದಿದ್ದು, ಇದರ ಆಳ ಸುಮಾರು ೬೫ ಅಡಿಗಳು. ನಾಲ್ಕು ಭಾಗಗಳಲ್ಲಿ ಬಾವಿಯಲ್ಲಿನ ನೀರನ್ನು ಮೇಲೆ ಎತ್ತಲು ರಾಟಿಗಳನ್ನು ರಚಿಸಿದ್ದಾರೆ. ಬಾವಿಯ ಒಳಗೋಡೆಯನ್ನು ಕಲ್ಲಿನಿಂದ ಭದ್ರವಾಗಿ ಕಟ್ಟಿದ್ದಾರೆ. ಬಾವಿಯ ಒಳಗೋಡೆಯ ಮೇಲೆ ಕ್ರಿ.ಶ. ೧೯೭೭ ಎಂದು ನಮೂದಿಸಲಾಗಿದೆ. ಆದ್ದರಿಂದ ಈ ಬಾವಿಯು ಅದೇ ಅವಧಿಯಲ್ಲಿ ರಚನೆಯಾಗಿರಬಹುದೆಂದು ಊಹಿಸಬಹುದು. ಇದನ್ನು ಹೊರತುಪಡಿಸಿದರೆ, ಗೃಹ ಉಪಯೋಗಕ್ಕಾಗಿ ರಚಿಸಿದ ಬಾವಿಯಾಗಿದ್ದು, ಈಗ ಈ ಬಾವಿಯ ನೀರನ್ನು ಬಳಸುತ್ತಿಲ್ಲ.

**೪. ಮಲ್ಹಾರಭಟ್ಟರ ಬಾವಿ**

ಬ್ರಾಹ್ಮಣರ ಬೀದಿಯಲ್ಲಿ ಈ ಬಾವಿಯುಂಟು. ಮಲ್ಹಾರಭಟ್ಟರು ಬನಶಂಕರಿ ದೇವಿಯ ಅರ್ಚಕರಾಗಿದ್ದರು. ಭಟ್ಟರು ಸಾರ್ವಜನಿಕರಿಗಾಗಿ ಬಾವಿಯನ್ನು ಕ್ರಿ.ಶ. ೧೯೬೦ರಲ್ಲಿ ನಿರ್ಮಿಸಿದ್ದಾರೆ. ವೃತ್ತಾಕಾರವಾದ ಬಾವಿಯನ್ನು ಮರಳುಕಲ್ಲುಗಳನ್ನು ಬಳಸಿ ರಚಿಸಿರುವರು. ೩೦ ಅಡಿ ಸುತ್ತಳತೆಯನ್ನು ಹೊಂದಿದ್ದು, ಸುಮಾರು ೪೫ ಅಡಿ ಆಳವನ್ನು ಹೊಂದಿರಬಹುದು. ಬಾವಿಯ ಒಳಗೋಡೆಯನ್ನು ಕಲ್ಲುಗಳಿಂದ ಭದ್ರವಾಗಿ ಕಟ್ಟಲಾಗಿದೆ. ಬಾವಿಗೆ ಜೋಡಿಸಿರುವ ಕಬ್ಬಿಣದ ಅಡ್ಡ ಸಲಾಕೆಯಲ್ಲಿರುವ ರಾಟಿಯಿಂದ ಬಾವಿಯ ನೀರನ್ನು ಮೇಲೆ ಎತ್ತುವ ವ್ಯವಸ್ಥೆ ಮಾಡಿದ್ದಾರೆ.

**೫. ಲಕ್ಷ್ಮೀಗುಡಿಯ ಬಾವಿ**

ಚೊಳಚಗುಡ್ಡದಲ್ಲಿರುವ ಲಕ್ಷ್ಮೀ ಗುಡಿಯ ಮುಂಭಾಗದಲ್ಲಿ ಈ ಬಾವಿಯಿರುವುದರಿಂದ ಈ ಬಾವಿಗೆ ಲಕ್ಷ್ಮೀಗುಡಿಯು ಬಾವಿ ಎಂದು ಸ್ಥಳೀಯುವಾಗಿ ಕರೆಯುತ್ತಾರೆ. ವೃತ್ತಾಕಾರವಾಗಿರುವ ಬಾವಿಯನ್ನು ಮರಳುಕಲ್ಲುಗಳಿಂದ ರಚಿಸಿಯವರು. ೩೪ ಅಡಿ ಸುತ್ತಾಳತೆ ಹೊಂದಿದೆ. ಇದರ ಆಳ ಸುಮಾರು ೪೫ ಅಡಿಗಳು. ೧೫.೮.೧೯೫೬ರಲ್ಲಿ

ಬಾವಿಯನ್ನು ರಚಿಸಲಾಗಿದೆ. ಬಾವಿಯ ಒಳಗೋಡೆ ಮತ್ತು ಮೇಲ್ಭಾಗದ ಕಟ್ಟೆಯನ್ನು ಕಲ್ಲುಗಳಿಂದ ಭದ್ರವಾಗಿ ಕಟ್ಟಲಾಗಿದೆ. ಬಾವಿಗೆ ಜೋಡಿಸಿರುವ ಕಬ್ಬಿಣದ ಅಡ್ಡ ಸಲಾಕೆಯಲ್ಲಿರುವ ರಾಟಿಯಿಂದ ಬಾವಿಯ ನೀರನ್ನು ಮೇಲೆ ಎತ್ತುವ ವ್ಯವಸ್ಥೆ ಮಾಡಿದ್ದಾರೆ. ಎರಡು ಕಡೆ ಏಕಕಾಲದಲ್ಲಿ ನೀರು ಸೇದುವ ವ್ಯವಸ್ಥೆಯಿದ್ದು, ಪ್ರಸ್ತುತವಾಗಿ ಈ ಬಾವಿಯ ನೀರನ್ನು ಬಳಸುತ್ತಿಲ್ಲ.

**೬. ಗೌಡರ ಬಾವಿ**

ಚೊಳಚಗುಡ್ಡದಲ್ಲಿನ ಜಾಮಿ ಮಸೀದಿಯ ಎಡ ಭಾಗದಲ್ಲಿ ಈ ಬಾವಿಯಿದೆ. ಕ್ರಿ.ಶ. ೧೯೦೮ರಲ್ಲಿ ಮೊಹಿನೂದ್ದೀನ್ ಪಟೇಲ್ ಎಂಬುವವರು ಇದನ್ನು ಕಟ್ಟಿಸಿದ್ದಾರೆ. ಇವರು ಮುಸ್ಲಿಂ ಸಮುದಾಯದ ಮುಖಂಡ(ಗೌಡ)ನಾಗಿದ್ದಾನೆ. ಈತನಿಗೆ ಇಬ್ಬರು ಹೆಂಡತಿಯರಿದ್ದರೂ ಸಹ ಅವರಿಗೆ ಮಕ್ಕಳಿರಲಿಲ್ಲ. ಹಾಗಾಗಿ ಗೌಡರು ತನ್ನ ಹೆಂಡತಿಯರ ಬಂಗಾರದ ಬೆಳೆಗಳನ್ನು ಮಾರಾಟ ಮಾಡಿ ಬಂದ ಹಣದಿಂದ ಸಾರ್ವಜನಿಕರಿಗೆ ಅನುಕೂಲವಾಗಲು ಈ ಬಾವಿಯನ್ನು ಕಟ್ಟಿಸಿದ್ದಾರೆ ಎಂದು ಸ್ಥಳೀಯರು ಹೇಳುತ್ತಾರೆ. ಆದ್ದರಿಂದ ಈ ಬಾವಿಗೆ ಗೌಡರ ಬಾವಿ ಎಂದು ಹೆಸರು ಬಂದಿದೆ. ವೃತ್ತಾಕಾರದ ಬಾವಿಯನ್ನು ಮರಳು ಕಲ್ಲುಗಳಿಂದ ಕಟ್ಟಲಾಗಿದೆ. ೪೨ ಅಡಿ ಸುತ್ತಳತೆಯನ್ನು ಹೊಂದಿದ್ದು, ಇದರ ಆಳ ೪೫ ಅಡಿಗಳು. ಬಾವಿಯ ಒಳಗೋಡೆಯನ್ನು ಕಲ್ಲುಗಳಿಂದ ಭದ್ರವಾಗಿ ಕಟ್ಟಲಾಗಿದೆ. ಬಾವಿಗೆ ಜೋಡಿಸಿರುವ ಕಬ್ಬಿಣದ ಅಡ್ಡ ಸಲಾಕೆಯಲ್ಲಿರುವ ರಾಟಿಯಿಂದ ಬಾವಿಯ ನೀರನ್ನು ಮೇಲೆ ಎತ್ತುವ ವ್ಯವಸ್ಥೆ ಮಾಡಿದ್ದಾರೆ. ನಾಲ್ಕು ಭಾಗಗಳಲ್ಲಿ ನೀರು ಸೇದುವ ವ್ಯವಸ್ಥೆಯಿರುವುದನ್ನು ಕಾಣಬಹುದು. ಬಾವಿಯಲ್ಲಿ ನೀರು ಇದ್ದರೂ ಸಹ ಈಗ ಬಳಸುತ್ತಿಲ್ಲ.

**೭. ಈರಣ್ಣನ ಬಾವಿ**


ಚೊಳಚಗುಡ್ಡದ ಹೊರವಲಯದಲ್ಲಿರುವ ಈರಣ್ಣನ ಗುಡಿಯ ಎಡ ಭಾಗದಲ್ಲಿ ಈ ಬಾವಿಯಿರುವುದರಿಂದ ಇದಕ್ಕೆ ಈರಣ್ಣನ ಬಾವಿ ಎನ್ನುವರು. ವೃತ್ತಾಕಾರ ಬಾವಿಯನ್ನು ಮರಳು ಕಲ್ಲುಗಳಿಂದ ರಚಿಸಿದ್ದಾರೆ. ೫೮ ಅಡಿ ಸುತ್ತಳತೆಯನ್ನು ಹೊಂದಿದೆ. ಇದರ ಆಳ ಸುಮಾರು ೫೦ ಅಡಿಗಳು. ಬಾವಿಯ ಒಳಭಾಗದ ಗೋಡೆಯನ್ನು ಮತ್ತು ಮೇಲ್ಭಾಗದ ಕಟ್ಟೆಯನ್ನು ಭದ್ರವಾಗಿ ಕಲ್ಲುಗಳಿಂದ ಕಟ್ಟಿದ್ದಾರೆ. ಬಾವಿಗೆ ಜೋಡಿಸಿರುವ ಕಬ್ಬಿಣದ ಅಡ್ಡ ಸಲಾಕೆಯಲ್ಲಿರುವ ರಾಟಿಯಿಂದ ಬಾವಿಯ ನೀರನ್ನು ಮೇಲೆ ಎತ್ತುವ ವ್ಯವಸ್ಥೆ ಮಾಡಿದ್ದಾರೆ. ಬಾವಿಯನ್ನು ಕ್ರಿ.ಶ. ೧೯೬೯ರಲ್ಲಿ ರಚಿಸಿದ್ದು, ಈ ಬಾವಿಯ ನೀರನ್ನು ಗುಡಿಯ ನಿತ್ಯ ನಿರ್ವಹಣೆಗಾಗಿ ಬಳಸಲಾಗುತ್ತಿದೆ.


ಈರಣ್ಣನ ಬಾವಿಯ ನೀರನ್ನು ಬಿಟ್ಟರೆ ಉಳಿದ ಯಾವ ಬಾವಿಯ ನೀರನ್ನು ಬಳಸುತ್ತಿಲ್ಲದಿರುವುದು ವಿಷಾದದ ಸಂಗತಿಯಾಗಿದೆ. ಬಾವಿಯ ಹೂಳ ತೆಗೆದು ಸ್ವಚ್ಛಗೊಳಿಸಿ, ಆ ನೀರನ್ನು ನಿತ್ಯ ಬಳಸುವುದರಿಂದ ಬಾವಿಯ ನೀರು ಸ್ವಚ್ಛವಾಗಿರುವುದಲ್ಲದೆ, ಬಾವಿಯ ನಿರ್ವಹಣೆಯನ್ನು ಸರಿಯಾಗಿ ಮಾಡುವುದರಿಂದ ಅಂತರ್ಜಲ ಮಟ್ಟ ಹೆಚ್ಚಾಗಿ ಸದಾ ನೀರು ಇರುವಂತೆ ಆಗುತ್ತದೆ. ಇದರಿಂದ ನೀರಿನ ಸಮಸ್ಯೆಯನ್ನು ಹೋಗಲಾಡಿಸಬಹುದು. ಇಂದು ಗ್ರಾಮಗಳಿಗೂ ನಾಲೆಗಳಿಂದ ಕೊಳವೆ ಮಾರ್ಗವಾಗಿ ಸುಲಭವಾಗಿ ನೀರು ದೊರಕುವುದರಿಂದ ಮತ್ತು ಕೃತಕ ಬೋರ್‌ವೆಲ್‌ಗಳಿಂದಾಗಿ ಬಾವಿಯ ನೀರನ್ನು ನಿರ್ಲಕ್ಷಿಸಿದ್ದಾರೆ. ಬೋರವೇಲ್‌ಗಳ ಸಂಖ್ಯೆ ಹೆಚ್ಚಿದಂತೆ ಅಂತರ್ಜಲ ಮಟ್ಟ ಕುಸಿದು ನೀರಿನ ಸಮಸ್ಯೆ ಉಂಟಾಗಿದೆ. ಆದ್ದರಿಂದ ಸಾಧ್ಯವಾದಷ್ಟು ಪ್ರಯತ್ನ ಮಾಡಿ ಬಾವಿಗಳನ್ನು ಸ್ವಚ್ಛಗೊಳಿಸಿ, ಆ ನೀರಿನ್ನು ನಿತ್ಯಬಳಸಿ ಅಂತರ್ಜಲ ಸಂರಕ್ಷಿಸುವ ಅಗತ್ಯವಿದೆ.

* * * * *

ಚೊಳಚಗುಡ್ಡ ಗ್ರಾಮದಲ್ಲಿರುವ ಪ್ರಾಚೀನ ಜಾಮಿಯಾ ಮಸೀದಿ







ಮಸೀದಿಯ ಭಿತ್ತಿಯಲ್ಲಿರುವ ಉರ್ದು ಮತ್ತು ಮರಾಠಿ ಭಾಷೆಯ ಶಾಸನಗಳು

ಬನಶಂಕರಿ ಗುಡಿ





ಸಹದೇವಿ ಗುಡಿ

ಮೂಲವೆಂದು ಕರೆಯಲ್ಪಡುವ ಬನಶಂಕರಿ ದೇವಾಲಯ





ಮಲೆಯಮ್ಮನ ಗುಡಿ

ಚೊಳಚಗುಡ್ಡದಲ್ಲಿರುವ ಬನಶಂಕರಿ ಗುಡಿ





ಕೇದಾರೇಶ್ವರ ಗುಡಿ

ಈಶ್ವರನ ಗುಡಿ





ರಾಮಲಿಂಗ ಗುಡಿ

ಚಂಡಭೈರವನ ಗುಡಿ






ಕಾಲಭೈರವನ ಗುಡಿ

ಕಲ್ಮೇಶ್ವರ ಗುಡಿ





ನಾರಾಯಣ ಗುಡಿ

ಹನುಮಂತನ ಗುಡಿ





ಗಣೇಶನ ಗುಡಿ

ಬನಶಂಕರಿ ಗುಡಿಯ ಒಳ ಆವರಣದಲ್ಲಿರುವ ದೀಪಸ್ತಂಭಗಳು







ಬನಶಂಕರಿ ಗುಡಿಯ ಹೊರ ಆವರಣದಲ್ಲಿರುವ ದೀಪಸ್ತಂಭಗಳು

ನಗಾರಿ ಮಂಟಪ






ಬನಶಂಕರಿ ಕ್ಷೇತ್ರದಲ್ಲಿರುವ ದೇಸಾಯಿ ಮಂಟಪ

ಕಲ್ಯಾಣ ಮಂಟಪ





ಚೊಳಚಗುಡ್ಡದಲ್ಲಿರುವ ಬಾವಿ ಮಂಟಪ

ದೀಪಸ್ತಂಭಕ್ಕೆ ಹೊಂದಿಕೊಂಡಿರುವ ಮಂಟಪ





ಯಾಗ ಮಂಟಪ

ಸರಸ್ವತಿ ತೀರ್ಥ





ಹರಿದ್ರಾ ತೀರ್ಥ

ತೈಲತೀರ್ಥ






ಪದ್ಮತೀರ್ಥ



ಭಾನುತೀರ್ಥ

ಕಾಳಿವಿಗ್ರಹ








ಪ್ರಸ್ತುತ ಪೂಜೆಗೊಳ್ಳುತ್ತಿರುವ ಬನಶಂಕರಿ ವಿಗ್ರಹ

ದೇವಿ ಶಿಲ್ಪ



ಜಗಲಿಯ ಮೇಲಿರುವ ಗಣೇಶ





ಜಗಲಿಯ ಮೇಲಿರುವ ಕಾಲಭೈರವ



ನವರಂಗದ ಭಿತ್ತಿಯಲ್ಲಿರುವ ಗಣೇಶ

ನವರಂಗದ ಭಿತ್ತಿಯಲ್ಲಿರುವ
ಕಾಲಭೈರವ



ಸರಸ್ವತಿ ಹಳ್ಳದ ಪಕ್ಕದಲ್ಲಿರುವ
ಕಾಲಭೈರವ





ವಿಠೋಬ



ವ್ಯಾಗ್ರಪಾದ

ಪಟ್ಟಿಕೆಯಲ್ಲಿರುವ ದೇವಿಯರ ಶಿಲ್ಪಗಳು





ಗಜಲಕ್ಷ್ಮೀ



ಶ್ರೀಚಕ್ರ

ರಥಶಿಲ್ಪ



ಗರುಡ





ಗಣೇಶ

ಆಂಜನೇಯ



ಬ್ರಹ್ಮ






ಶೇಷಶಯನ ವಿಷ್ಣು



ಲಕ್ಷ್ಮೀನರಸಿಂಹ

ಉಗ್ರನರಸಿಂಹ



ಮತ್ಸ್ಯಾವತಾರದ ವಿಷ್ಣು






ಸುಖಾಸನದಲ್ಲಿರುವ ಶಿವ




ಶಿವ

ಸರಸ್ವತಿ



ಭೈರವ





ವ್ಯಾಗ್ರಪಾದ




ಕೃಷ್ಣ ಮತ್ತು ಗೋಪಿಕೆ

ಅರ್ಧನಾರೀಶ್ವರ








ಲೋಹ ಮಾಧ್ಯಮದ ಶಿಲ್ಪಗಳು

ಅಂಜಲಿ ಮುದ್ರೆಯಲ್ಲಿರುವ
ಭಕ್ತ ಶಿಲ್ಪ




ಮೊದಲನೆಯ ಅಂತಸ್ತಿನಲ್ಲಿರುವ
ದಂಪತಿಯರ ಭಕ್ತ ಶಿಲ್ಪಗಳು





ಎರಡನೆಯ ಅಂತಸ್ತಿನಲ್ಲಿರುವ
ದಂಪತಿಯರ ಭಕ್ತ ಶಿಲ್ಪಗಳು



ಮೂರನೆಯ ಅಂತಸ್ತಿನಲ್ಲಿರುವ
ದಂಪತಿಯರ ಭಕ್ತ ಶಿಲ್ಪಗಳು


ಮೊದಲನೆಯ ಅಂತಸ್ತಿನಲ್ಲಿರುವ
ಸ್ತ್ರೀ ಭಕ್ತ ಶಿಲ್ಪಗಳು



ಮೂರನೆಯ ಅಂತಸ್ತಿನಲ್ಲಿರುವ
ಸ್ತ್ರೀ ಭಕ್ತ ಶಿಲ್ಪ







ಋಷಿ ಶಿಲ್ಪಗಳು

ಶೈವ ಸಂತ ಶಿಲ್ಪ





ಚಿಕ್ಕ ಮೃದಂಗ ಹಿಡಿದಿರುವ ಶಿಲ್ಪ




ದೊಡ್ಡ ಮೃದಂಗ ಹಿಡಿದಿರುವ ಶಿಲ್ಪ

ಮೃದಂಗ ನುಡಿಸುತ್ತಿರುವ ಶಿಲ್ಪ



ಶಹನಾಯಿ ನುಡಿಸುತ್ತಿರುವ ಶಿಲ್ಪ





ಕಹಳೆ ಊದುತ್ತಿರುವ ಶಿಲ್ಪ



ತಂತಿವಾದ್ಯ ನುಡಿಸುತ್ತಿರುವ ಶಿಲ್ಪ

ತಾಳ ನುಡಿಸುತ್ತಿರುವ ಶಿಲ್ಪಗಳು



ಕುದುರೆಯನ್ನು ಪಳಗಿಸುವ ಶಿಲ್ಪ





ಸಿಂಹದ ಶಿಲ್ಪ

# ದ್ವಾರಪಾಲಕರು







# ಆನೆ ಸವಾರಿ ಶಿಲ್ಪಗಳು










ಕಂಬದಲ್ಲಿರುವ ಸ್ತ್ರೀ ಶಿಲ್ಪ

ಪೌಳಿಯ ಭಿತ್ತಿಯಲ್ಲಿರುವ ಮಿಥುನ ಶಿಲ್ಪ







ಭಿತ್ತಿಯಲ್ಲಿರುವ ಮಿಥುನ ಶಿಲ್ಪ



ಗಂಧರ್ವ ಮಿಥುನ ಶಿಲ್ಪ



ದಂಪತಿಯು ಶಿಲ್ಪ

# ಬನಶಂಕರಿ ಕ್ಷೇತ್ರದಲ್ಲಿರುವ ಪಾದಗಟ್ಟೆಗಳು









ಉತ್ತರ ಭಾಗದ ಪ್ರವೇಶದ್ವಾರ



ದಕ್ಷಿಣ ಭಾಗದ ಪ್ರವೇಶದ್ವಾರ



ಚೊಳಚಗುಡ್ಡ ಗ್ರಾಮದಲ್ಲಿರುವ ವೀರಗಲ್ಲು





ಬನಶಂಕರಿ ಕ್ಷೇತ್ರದಲ್ಲಿರುವ ವೀರಗಲ್ಲು

ಚಿಕ್ಕ ಕೆರೆ ಅಥವಾ ಕಟ್ಟೆ





ದೊಡ್ಡ ಕೆರೆ

ದೇವಾಂಗ ಬಾವಿ





ನವಾಬ್ ಬಾವಿ

ಮಠದ ಬಾವಿ





ಮಲ್ಹಾರಭಟ್ಟರ ಬಾವಿ

ಲಕ್ಷ್ಮೀಗುಡಿಯ ಬಾವಿ





ಗೌಡರ ಬಾವಿ



ಈರಣ್ಣನ ಬಾವಿ

**ಅಡಿ ಟಿಪ್ಪಣಿಗಳು**

೧. ಅಪರ್ಣ ಕೂ.ಸ., ೧೯೯೯, ದೇವಾಲಯ ವಾಸ್ತು ಪರಿಚಯ, ಪುಟ - ೧, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ

೨. ಶಿವರಾಮ ಕಾರಂತ, ೧೯೭೫, ಭಾರತೀಯ ಶಿಲ್ಪ, ಪುಟ - ೧೫, ಬೆಂಗಳೂರು ವಿ.ವಿ. ಬೆಂಗಳೂರು

೩. ಚಿದಾನಂದಮೂರ್ತಿ ಎಂ., ೧೯೬೬, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ - ೧೭೪, ೧೭೫, ಸ್ವಪ್ನ ಬುಕ್‌ಹೌಸ್, ಬೆಂಗಳೂರು

೪. ಶಿವರಾಮ ಕಾರಂತ ಕೆ., ೧೯೭೫, ಅದೇ, ಪುಟ - ೨೯

೫. ರಾಮಚಂದ್ರರಾವ್ ಎಸ್.ಕೆ., ೨೦೧೦, ಭಾರತದ ದೇವಾಲಯ ನೆಲೆ, ಹಿನ್ನೆಲೆ, ಪುಟ - ೨೩, ಐ.ಬಿ.ಎಚ್ ಪ್ರಕಾಶನ, ಬೆಂಗಳೂರು

೬. ದೇವರಕೊಂಡಾರೆಡ್ಡಿ, ೨೦೦೬, ಕನ್ನಡ ಶಾಸನಗಳ ಸಂಪುಟ ೯, ಬಾಗಲಕೋಟೆ ಜಿಲ್ಲೆ, ಪುಟ - ೩೩೬, ೩೩೭, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ

೭. ವೆಂಕಟ ರಂಗೋಕಟ್ಟಿ ೧೮೮೩, (ಅನು), ಪುಟ - ೫೫೬, ಧಾರವಾಡ, ಬೆಳಗಾವಿ, ವಿಜಾಪುರ, ಕಾನಡಾ ಈ ನಾಲ್ಕು ಜಿಲ್ಲೆಗಳ ಗ್ಯಾಸೆಟಿಯರ್, ಏಷಿಯನ್ ಎಜುಕೇಶನಲ್ ಸರ್ವಿಸಿಸ್, ನವ ದೆಹಲಿ

೮. George Michell, 2011, Badami, Aihole, Pattadakall, Page - 74, London

೯. ದೇವರಕೊಂಡಾರೆಡ್ಡಿ, ೨೦೦೬, ಅದೇ, ಪುಟ ೩೩೬

೧೦. ಶಂಕ್ರಪ್ಪ ಬಸಪ್ಪ ತೊಂಡಿಹಾಳ, ೨೦೦೧, ಶ್ರೀ ಬನಶಂಕರಿ ಮಹಾತ್ಮೆ, ಪುಟ - ೨೭, ಪಾರು ಪ್ರಕಾಶನ, ಗದಗ

೧೧. ರಾಮಚಂದ್ರರಾವ್ ಎಸ್.ಕೆ., ೨೦೧೦, ಅದೇ, ಪುಟ - ೨೯

೧೨. ಶ್ರೀಶೇಷ ದೀಕ್ಷಿತ್ ಹಿಂಡಸಗಿರಿ, (ಮೂ), ಮಾರ್ತಂಡ ಚಿದಂಬರ ದೀಕ್ಷಿತ್. ಬಡ್ಲಿ, (ಅ) ೧೯೯೮, ಶೀ ಬನಶಂಕರಿ (ಶಾಕಂಭರಿ) ಮಹಾತ್ಮ್ಯಂ, ಪುಟ - ೧೨೫, ಪೂಜಾರ ಬಂಧುಗಳು, ಅರ್ಚಕರು, ಬನಶಂಕರಿ ಕ್ಷೇತ್ರ, ಬಾದಾಮಿ

೧೩. ಮುನಿಸ್ವಾಮಿ ಆರ್., ೧೯೯೯, (ಪ್ರ.ಸಂ), ವಿಜಾಪುರ ಜಿಲ್ಲಾ ಗ್ಯಾಸೆಟಿಯರ್, ಪುಟ - ೨೩, ೨೪, ಕರ್ನಾಟಕ ರಾಜ್ಯ ಸರ್ಕಾರ, ಬೆಂಗಳೂರು

೧೪. ವೆಂಕಟರಂಗೋಕಟ್ಟಿ, ೧೮೮೩, (ಅನು), ಅದೇ, ಪುಟ - ೫೫೭

೧೫. ಮಲ್ಹಾರಭಟ್ಟ ಬನಂಭಟ್ಟ ಪೂಜಾರ, ವೇ. ಮೂ., ಶ್ರೀ ಬನಶಂಕರಿ ಲಘು ಚರಿತ್ರೆ, ಪುಟ - ೮, ಪೂಜಾರ ಬಂಧುಗಳು, ಚೊಳಚಗುಡ್ಡ, ಬಾದಾಮಿ

೧೬. ರಾಮಚಂದ್ರರಾವ್ ಎಸ್.ಕೆ., ೧೯೭೫, ಮೂರ್ತಿಶಿಲ್ಪ ನೆಲೆ ಹಿನ್ನೆಲೆ, ಪುಟ – ೧೭೫, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು

೧೭. ಮಲ್ಹಾರಭಟ್ಟ ಬನಂಭಟ್ಟ ಪೂಜಾರ, ವೇ, ಮೂ, ಅದೇ, ಪುಟ – ೧೩

೧೮. ಶಂಕ್ರಪ್ಪ ಬಸಪ್ಪ ತೊಂಡಿಹಾಳ್, ೨೦೦೧, ಪೂರ್ವೋಕ್ತ, ಪುಟ – ೪೧

೧೯. ಮಲ್ಹಾರಭಟ್ಟ ಬನಂಭಟ್ಟ ಪೂಜಾರ, ವೇ, ಮೂ, ಪೂರ್ವೋಕ್ತ, ಪುಟ – ೩೪, ೩೫

೨೦. ರಾಮಚಂದ್ರರಾವ್ ಎಸ್.ಕೆ., ೧೯೭೫, ಪೂರ್ವೋಕ್ತ, ಪುಟ - ೪

೨೧. ರಾಮಚಂದ್ರರಾವ್ ಎಸ್.ಕೆ. ೧೯೯೨, ಪ್ರತಿಮಾ ಕೋಶ, ಸಂಪುಟ - VI, ಪುಟ – ೨೧೩

೨೨. ಸುಂದರ ಅ., (ಲೇ), ೧೯೯೮, ಪ್ರಾಗಿತಿಹಾಸ ಕಾಲದ ನಿರ್ಮಿತಿ ಮತ್ತು ಚಿತ್ರಕಲೆ, ಕರ್ನಾಟಕ ಚರಿತ್ರೆ ಸಂಪುಟ ೧, ಪುಟ – ೨೪೧-೨೪೨, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ

೨೩. ಶೀಲಾಕಾಂತ ಪತ್ತಾರ, (ಲೇ), ೨೦೧೦, ಬನದದೇವಿ, ಬನದ ಮಾಹಾಮಾಯಿ ಮತ್ತು ಬನಶಂಕರಿ, ಇತಿಹಾಸ ದರ್ಶನ ಸಂಪುಟ – ೨೫, ಪುಟ – ೧೧೧, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು

೨೪. ಮಲ್ಹಾರಭಟ್ಟ ಬನಂಭಟ್ಟ ಪೂಜಾರ, ವೆ, ಮೂ, ಪೂರ್ವೋಕ್ತ, ಪುಟ – ೭.

೨೫. ಮಲ್ಹಾರಭಟ್ಟ ಬನಂಭಟ್ಟ ಪೂಜಾರ, ವೆ, ಮೂ, ಪೂರ್ವೋಕ್ತ, ಪುಟ – ೩೬

೨೬. James Campbell, Vol. XXIII, 1884 (Reprint - 2001), Bijapur Gazettere, P - 679, Asian educational Services, New Delhi

೨೭. ಮುನಿಸ್ವಾಮಿ ಆರ್., ೧೯೯೯, (ಪ್ರ.ಸಂ), ಪೂರ್ವೋಕ್ತ, ಪುಟ – ೧೧೦೪

೨೮. ಚಿದಾನಂದ ಮೂರ್ತಿ ಎಂ., ೧೯೬೬, ಪೂರ್ವೋಕ್ತ, ಪುಟ – ೧೨೭

೨೯. ರಾಮಚಂದ್ರರಾವ್ ಎಸ್.ಕೆ., ೧೯೭೫, ಪೂರ್ವೋಕ್ತ, ಪುಟ – ೧೧೪

೩೦. ಧೃವರಾಜ, ನಾ ಗದಗಕರ, ೧೯೯೯, ದೇಗುಲ ರಥಶಿಲ್ಪ, ಪುಟ – ೧೦೯, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ

೩೧. ಜ್ಞಾನನಂದ ಜಿ., ೧೯೯೮, ಶ್ರೀ ಕಾಶ್ಯಪ ಶಿಲ್ಪಶಾಸ್ತ್ರ (ಉತ್ತರಾರ್ಧ), ಪುಟ - ೬೭೭, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು

೩೨. ತಿಪ್ಪೇರುದ್ರಸ್ವಾಮಿ ಎಚ್., ೨೦೦೩, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪುಟ - ೬೪೩, ಡಿ.ವಿ.ಕೆ ಮೂರ್ತಿ, ಮೈಸೂರು

೩೩. ಶೇಷಶಾಸ್ತ್ರಿ ಆರ್., ೨೦೦೪, ಕರ್ನಾಟಕದ ವೀರಗಲ್ಲುಗಳು, ಪುಟ - ೫, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೩೪. ದೇವರಕೊಂಡಾರೆಡ್ಡಿ, ೨೦೦೬, ಪೂರ್ವೋಕ್ತ, ಪುಟ - ೧೮೪

೩೫. ನೀಲತ್ತಹಳ್ಳಿ ಕಸ್ತೂರಿ, ೨೦೦೦, (ಅನು), ಕರ್ನಾಟಕದಲ್ಲಿ ಕೆರೆ ನೀರಾವರಿ, ಪುಟ - ೭, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ

೩೬. Buchana Francis, 1807; Journey From Madras through contries of mysore, cunnra & malabar, page 95, Vol,III, London

# ಅಧ್ಯಾಯ : ಐದು

## ನಂಬಿಕೆ ಮತ್ತು ಆಚರಣೆಗಳು

೫. ೧. ನಂಬಿಕೆ ಮತ್ತು ಆಚರಣೆಗಳ ಹಿನ್ನೆಲೆ

೫. ೨. ದೇವಿಯ ಕುರಿತಾದ ನಂಬಿಕೆಗಳು

೫. ೩. ದೇವಿಯ ಕುರಿತಾದ ಸಂಪ್ರದಾಯಗಳು

೫. ೪. ದೇವಿಯ ಕುರಿತಾದ ಐತಿಹ್ಯಗಳು

೫. ೫. ದೇವಿಯ ಕುರಿತಾದ ಆಚರಣೆಗಳು

ಜಗತ್ತಿನ ಪ್ರತಿಯೊಂದು ಸಂಸ್ಕೃತಿಯ ಪೂರ್ವ ಹಿನ್ನೆಲೆಯನ್ನು ಜಾನಪದ ಸಂಸ್ಕೃತಿಯಿಂದ ಗುರುತಿಸಲಾಗುತ್ತದೆ. ಅಂದರೆ ಜಾನಪದವು ಮಾನವನ ಸಂಸ್ಕೃತಿಯ ಆರಂಭಿಕ ಹಂತವೆನ್ನಬಹುದು. ಅಂದು ರೂಪಗೊಂಡಿರಬಹುದಾದ ಜನಪದರ ನಂಬಿಕೆ ಮತ್ತು ಆಚರಣೆಗಳು ಆಯಾ ಸಂಸ್ಕೃತಿಯ ಜನರ ಬದುಕಿನ ಆತ್ಮವಾಗಿ, ಜೀವವಾಗಿ, ಜೀವಂತ ಅಸ್ತಿತ್ವವನ್ನು ಪಡೆದಿವೆ. ಅಲ್ಲದೆ ಅವು ಜನಪದರ ಬದುಕಿನೊಡನೆ ಅರ್ಥಪೂರ್ಣ ಸಂಬಂಧವನ್ನು ಹೊಂದಿರುವುದು ಗಮನಾರ್ಹ. ಅವರ ಆಚಾರ ವಿಚಾರ, ರೀತಿ ನೀತಿ, ನಂಬಿಕೆ ಸಂಪ್ರದಾಯವಾಗಿ ಹಲವಾರು ಸ್ಥಿತ್ಯಂತರಗಳೊಂದಿಗೆ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿವೆ.

ಜನಪದ ನಂಬಿಕೆಗಳು ಪಾರಂಪರಿಕವಾಗಿ ಅಂಗೀಕೃತವಾದ ಒಂದು ಪರಿಕಲ್ಪನೆ. ಹೀಗೆ ಅಂಗೀಕೃತವಾಗುವಲ್ಲಿ ಪುನರಾವರ್ತನೆ ಹಾಗೂ ಸಾಮೂಹಿಕ ನಿರೀಕ್ಷಣೆಗಳು ಮುಖ್ಯವಾಗುತ್ತವೆ. ನಂಬಿಕೆಗಳು ಜನಪದರ ಜೀವನಾನುಭವ ಉತ್ಪನ್ನಗಳು. ಹೀಗಾಗಿ ಮಾನವ ಬದುಕಿಗೂ, ನಂಬಿಕೆಗಳಿಗೂ ಬೇರ್ಪಡಿಸಲಾಗದ ಸಂಬಂಧವಿದೆ. ಅದು ಸೂಚನೆ, ನಿಯಮ, ವಿಧಿನಿಷೇಧ, ನಿರ್ದೇಶನ, ಆಗ್ರಹ, ಆದೇಶ ಮತ್ತು ಆಜ್ಞೆಗಳ ರೂಪದಲ್ಲಿ ನಿತ್ಯಬದುಕಿನೊಂದಿಗೆ ಸಂಬಧವನ್ನು ಕಂಡುಕೊಂಡಿವೆ. ಜನಪದರ ಕೆಲಸ, ಆಲೋಚನೆ, ರೂಢಿ, ಜೀವನ ಕ್ರಮ, ಸಂಪ್ರದಾಯ ಆಚರಣೆಗಳೆಲ್ಲವೂ ನಂಬಿಕೆಗಳಿಂದ ಪ್ರೇರಿತವಾದವು. ನಂಬಿಕೆ ಸಂಪ್ರದಾಯ, ಆಚರಣೆಗಳೊಂದಿಗೆ ಅಂತರ್ ಸಂಬಂಧವನ್ನು ಹೊಂದಿದ್ದು, ಆ ಮೂಲಕ ಕ್ರಿಯಾರೂಪವನ್ನು ತಾಳುತ್ತದೆ. ಅದು ಜನಪದ ಪ್ರಕಾರಗಳಾದ ಗಾದೆ, ಜನಪದ ವೈದ್ಯ, ಜನಪದ ಕಥೆ, ಜನಪದ ಐತಿಹ್ಯ, ಜನಪದ ಪುರಾಣ, ಜನಪದ ಮಂತ್ರವಿದ್ಯೆ, ಜನಪದ ಧರ್ಮ ಇವುಗಳೊಂದಿಗೆ ಒಳಸಂಬಂಧವನ್ನು ಹೊಂದಿದ್ದು, ಸಂಕೀರ್ಣ ಸ್ವರೂಪದ್ದಾಗಿದೆ.[೧]

ನಂಬಿಕೆ, ಸಂಪ್ರದಾಯ, ಆಚರಣೆಗಳನ್ನು ಮೂಢನಂಬಿಕೆ, ಅಂಧಶ್ರದ್ಧೆ ಎಂದು ತಿರಸ್ಕರಿಸಲು ಸಾಧ್ಯವಿಲ್ಲ. ಏಕೆಂದರೆ ಲಿಖಿತ ಆಧಾರಗಳಿಲ್ಲದ ಸಂಸ್ಕೃತಿಯ ಅಧ್ಯಯನಕ್ಕೆ ನಂಬಿಕೆ, ಸಂಪ್ರದಾಯ, ಆಚರಣೆಗಳೇ ಪ್ರಮುಖ ಆಕರಗಳಾಗಿವೆ. ಅಲ್ಲದೆ ಇವುಗಳಿಂದ ಜನರು ತಮ್ಮ ಬದುಕಿನ ಚೈತನ್ಯವನ್ನು ಕಂಡುಕೊಳ್ಳುತ್ತಾರೆ. ಅಲ್ಲದೆ ಅವು ಹೊಸ ಬದುಕಿನ ಭರವಸೆಯನ್ನು ಮೂಡಿಸುತ್ತವೆ. ಹಾಗೂ ತಮ್ಮ ಬದುಕಿನ ಅನೇಕ ಕಷ್ಟಗಳಿಗೆ ಪರಿಹಾರವನ್ನು ಕಂಡುಕೊಂಡಿದ್ದಾರೆ. ಆದ್ದರಿಂದ ನಂಬಿಕೆ, ಆಚರಣೆಗಳು ಸಂಸ್ಕೃತಿಯ ಕಥನವನ್ನು ತನ್ನ ಒಡಲೊಳಗಿಟ್ಟುಕೊಂಡೇ ಮುಂದೆ ಸಾಗಿವೆ. ಈ ಹಿನ್ನೆಲೆಯಲ್ಲಿ ನಂಬಿಕೆ, ಸಂಪ್ರದಾಯ, ಆಚರಣಾಲೋಕವನ್ನು ವಿಶ್ಲೇಷಿಸಲಾಗಿದೆ.

**೫. ೧. ನಂಬಿಕೆ ಮತ್ತು ಆಚರಣೆಗಳ ಹಿನ್ನೆಲೆ**

ಸಂಗಜೀವಿಯಾದ ಮಾನವನು ಬದುಕಿನಲ್ಲಿ ಅನೇಕ ನಂಬಿಕೆ, ಆಚರಣೆಗಳನ್ನು ಮೇಳೈಸಿಕೊಂಡು ಬಂದಿದ್ದಾನೆ. ಮಾನವನ ಜೀವನದಲ್ಲಿ ನಂಬಿಕೆಗಳು ಗಾಢ ಪ್ರಭಾವವನ್ನು ಬೀರಿರುವುದು ಗಮನಾರ್ಹ. ನಂಬಿಕೆ, ಸಂಪ್ರದಾಯ, ಆಚರಣೆಗಳು ಪರಸ್ಪರ ಸೋದರ ಸಂಬಂಧಿಯಾದವುಗಳು. ಇವು ಸಂಸ್ಕೃತಿ ಎಂಬುದರ ವಿಶಾಲ ಸಮುದ್ರದೊಳಗೆ ಅಡಕವಾಗಿವೆ. ಧಾರ್ಮಿಕ ಲೋಕದಲ್ಲಿ ನಂಬಿಕೆಯ ಪಾತ್ರ ಅನನ್ಯ. ನಂಬಿಕೆಗಳಿಗೆ ವೈಚಾರಿಕ ದೃಷ್ಟಿ ಇಲ್ಲದಿದ್ದರೂ ಕೂಡ, ಮಾನವನ ಮನಸ್ಸಿನ ಮೇಲೆ ತನ್ನದೇ ಆದ ಪ್ರಭಾವವನ್ನು ಮೂಡಿಸಿವೆ. ಪ್ರಕೃತಿಯ ರಹಸ್ಯವನ್ನು ಭೇದಿಸುವಲ್ಲಿ ಆದಿಮಾನವನ ವಿಫಲತೆ, ಹುಟ್ಟು – ಬದುಕು – ಸಾವಿನ ನಿಗೂಢತೆಯನ್ನು ಅರ್ಥೈಸಲಾಗದ ಆತಂಕ, ಜಾತಿ ಮತ್ತು ಧರ್ಮ ತಮ್ಮ ಅಸ್ತಿತ್ವಕ್ಕಾಗಿ ನಡೆಸಿದ ಹೋರಾಟ ಈ ಹಿನ್ನೆಲೆಯಲ್ಲಿ ನಂಬಿಕೆಗಳು ಹುಟ್ಟಿಕೊಳ್ಳುತ್ತವೆ. ದೈವದ ಮೂಲ ನಂಬಿಕೆ, ದೈವದ ಬಗೆಗೆ ನಂಬಿಕೆ ಇಲ್ಲದಿದ್ದಲ್ಲಿ ದೈವದ ಅಸ್ತಿತ್ವವೇ ಇರುತ್ತಿರಲಿಲ್ಲ. ಹಾಗಾಗಿ ದೈವತ್ವವನ್ನು ಕುರಿತಂತೆ ನಂಬಿಕೆಯು ಅತೀ ಮಹತ್ವದ್ದಾಗಿದೆ.

ಪ್ರೊ. ದೇ.ಜೆ.ಗೌ ಅವರು ನಂಬಿಕೆಯನ್ನು ಕುರಿತು "ದೇಶ ಕಾಲಗಳ ಹಿನ್ನೆಲೆಯಲ್ಲಿ ಪರಂಪರಾನುಗತವಾದ ಜ್ಞಾನ, ದೀರ್ಘಾನುಭವ, ಕಾಲ್ಪನಿಕ ಆಲೋಚನೆ ಹಾಗೂ ಅತೀಂದ್ರಿಯ ವ್ಯಾಪಾರದ ಫಲವಾಗಿ ಮೂಡಿದ ಶ್ರದ್ಧೆಯೇ ನಂಬಿಕೆ" ಎಂದಿದ್ದಾರೆ. ನಂಬಿಕೆ ಮಾತಿನ ಮೂಲಕ ವ್ಯಕ್ತಿಗೆ ಚೈತನ್ಯವನ್ನು ನೀಡುತ್ತದೆ. ಆಚರಣೆಗಳು ಕ್ರಿಯೆಯ ಮೂಲಕ ವಿಶಿಷ್ಟ ಸ್ಥಾನವನ್ನು ಪಡೆದುಕೊಳ್ಳುತ್ತವೆ. ಮಾನವ ಮನಸ್ಸಿನ ಭಯ ಮತ್ತು ಆತಂಕಗಳು ಧಾರ್ಮಿಕ ನಂಬಿಕೆಗಳಿಗೆ ಮೂಲ. ಮಾನವನು ನಿಸರ್ಗದಲ್ಲಿ ಪ್ರತಿಯೊಂದನ್ನು ದೈವದ ಕೊಡುಗೆಯೆಂದು ಭಾವಿಸಿ ಅವುಗಳನ್ನು ವಾಸ್ತವವಾಗಿ ಉಪಾಸನೆಯನ್ನು ಮಾಡುತ್ತಿದ್ದಾನೆ. ಅಲ್ಲದೆ ಜನಸಾಮಾನ್ಯರು ಹೆಚ್ಚಾಗಿ ನಂಬಿಕೆಗಳ ಮೂಲ ಸತ್ಯಾಸತ್ಯತೆಯನ್ನು ಪರೀಕ್ಷಿಸಲು ಹೋಗುವುದಿಲ್ಲ. ಬದಲಾಗಿ ಅವುಗಳು ತಮ್ಮ ವಾಸ್ತವದ ಬದುಕಿಗೆ ಅನುಕೂಲವಾಗುವ ರೀತಿಯಲ್ಲಿದ್ದರೆ, ಅವುಗಳಿಗೆ ಹೆಚ್ಚು ಒತ್ತುನೀಡುತ್ತಾನೆ.

ಜನಪದ ನಂಬಿಕೆಯು ಸಂಪ್ರದಾಯಕವಾಗಿ ಅಂಗೀಕೃತವಾದ ಒಂದು ಪರಿಕಲ್ಪನೆ. ನಂಬಿಕೆಯು ಪರಂಪರೆಯೊದ್ದಕ್ಕೂ ಚಲನಶೀಲ ಪ್ರಕ್ರಿಯೆಯಲ್ಲಿರುತ್ತದೆ. ನಂಬಿಕೆಗಳು ಸಂಪ್ರದಾಯ ಉಳಿಯಲು ಸಹಕರಿಸುತ್ತವೆ. ಇವಿಲ್ಲದಿದ್ದಲ್ಲಿ ಸಂಸ್ಕೃತಿಯೂ ಇರುತ್ತಿರಲಿಲ್ಲ.[೨]

**೫. ೨. ದೇವಿಯ ಕುರಿತು ನಂಬಿಕೆಗಳು**

೧. ಬನಶಂಕರಿ ದೇವಿಯ ದರ್ಶನಕ್ಕೆ ಹೋಗುವ ಮೊದಲು ಗಂಟೆಯನ್ನು ಭಾರಿಸಬೇಕು. ನಂತರ ಗರ್ಭಗುಡಿಯ ಮುಂದಿರುವ ಲೋಹದ ಆಮೆಯ ಶಿಲ್ಪವನ್ನು ನೋಡಿ ಅದಕ್ಕೆ ನಮಸ್ಕರಿಸುವುದು. ನಂತರ ದೇವಿಯ ದರ್ಶನ ಮಾಡಿ ತಮ್ಮ ಪ್ರಾರ್ಥನೆ, ಮನವಿ ಬೇಡಿಕೆಗಳಿದ್ದರೆ ದೇವಿಯ ಮುಂದೆ ನಿವೇದಿಸಿಕೊಂಡರೆ ಈಡೇರುತ್ತವೆ ಎಂಬ ನಂಬಿಕೆ.

೨. ಮಕ್ಕಳಾಗದವರು ದೇವಿಗೆ ಪ್ರಾರ್ಥಿಸಿ, ಮಡಿ ಉಡಿಯಿಂದ ಪೂಜಿಸಿದರೆ ಮಕ್ಕಳಾಗುತ್ತವೆ ಎಂದು ಹೇಳುತ್ತಾರೆ.

೩. ತೊಟ್ಟಿಲು ಸೇವೆಯನ್ನು ಮಾಡುವುದರಿಂದ ಮಕ್ಕಳಾಗುತ್ತವೆಂಬ ನಂಬಿಕೆ.

೪. ಸಾಂಕ್ರಾಮಿಕ ರೋಗಗಳು ಬಂದಾಗ ದೇವಿಯನ್ನು ಬೇಡುವುದರಿಂದ ಪರಿಹಾರವಾಗುತ್ತದೆ ಎಂಬ ನಂಬಿಕೆಯಿದೆ.

೫. ಕಾಲದಿಂದ ಕಾಲಕ್ಕೆ ಸರಿಯಾಗಿ ಮಳೆ – ಬೆಳೆಯಾಗದೇ ಹೋದಾಗ ದೇವಿಯನ್ನು ಪೂಜಿಸಿದರೆ ಮಳೆ – ಬೆಳೆಯು ಸಮೃದ್ಧವಾಗಿ ಬೆಳೆಯುದೆಂಬ ನಂಬಿಕೆ.

೬. ಬನಶಂಕರಿಯ ಗುಡಿಯ ಒಳಗೆ ರೊಟ್ಟಿಯನ್ನು ಸುಡುವುದು, ಬೀಸುವುದು ಹಾಗೂ ಕುಟ್ಟುವಂತಹ ಕೆಲಸಗಳನ್ನು ನಿರ್ಬಂಧಿಸಲಾಗಿದೆ.

೭. ಬ್ರಾಹ್ಮಣ ಅರ್ಚಕ ವರ್ಗದವರ ಹೆಣ್ಣುಮಕ್ಕಳು ಕಾಲಿಗೆ ಗೆಜ್ಜೆಯನ್ನು ಹಾಕುವಂತಿಲ್ಲ. ಹಾಗೂ ಅವರ ಜಾನುವಾರಗಳ ಕೊರಳಿಗೆ ಶಬ್ಧ ಬರುವಂತಹ ಯಾವುದೇ ವಸ್ತುವನ್ನು ಬಳಸಬಾರದೆಂಬ ನಂಬಿಕೆ.

೮. ಗುಡಿಯ ಒಳಗೆ ವಾಸ್ತವ್ಯವಿರುವ ಪೂಜಾರಿ ಮನೆತನದವರು ಅಥವಾ ಭಕ್ತರು ಅಲ್ಲಿ ತಂಗಿದ್ದಾಗ ಗಂಡ, ಹೆಂಡತಿ ದೈಹಿಕ ಸಂಬಂಧವನ್ನು ಹೊಂದುವಂತಿಲ್ಲ.

೯. ಅರ್ಚಕರು ಯಾವುದೇ ಕಾರಣಕ್ಕೂ ಮಡಿ ಇಲ್ಲದೇ ದೇವಿಯ ವಿಗ್ರಹವನ್ನು ಮುಟ್ಟಬಾರದು.

೧೦. ದೇವಿಯ ಅರ್ಚಕರು ಹಬ್ಬ ಮತ್ತು ಹುಣ್ಣಿಮೆಯ ದಿನ ಕ್ಷೌರ ಮಾಡಿಸುವಂತಿಲ್ಲ.

೧೧. ಸ್ತ್ರೀಯರು ದೇವಿಯ ವಿಗ್ರಹವನ್ನು ಮುಟ್ಟಬಾರದು ಎಂಬ ನಂಬಿಕೆ.

೧೨. ವೈಶಾಖ ಹುಣ್ಣಿಮೆಯ ದಿನದಂದು ಹರಿದ್ರಾತೀರ್ಥದಲ್ಲಿ ಮಿಂದು ದೇವಿಯ ದರ್ಶನ ಮಾಡುವವರಿಗೆ ಪಾಪದಿಂದ ಮುಕ್ತಿ ಸಿಗುತ್ತದೆಂಬ ನಂಬಿಕೆ ಇಂದಿಗೂ ಇದೆ.

೧೩. ಮಾಡಲಗೇರಿ ಗ್ರಾಮವು ಬನಶಂಕರಿ ದೇವಿಯ ತವರೂರು ಎಂದು ಹೇಳುತ್ತಾರೆ.

೧೪. ಮಾಡಲಗೇರಿ ಗ್ರಾಮದಿಂದ ತರುವ ಹಗ್ಗದಿಂದ ದೇವಿಯ ರಥವನ್ನು ಎಳೆಸಬೇಕು ಎಂಬ ನಂಬಿಕೆಯುಂಟು.

೧೫. ಬನಶಂಕರಿಯ ಮೂಲ ನೆಲೆ ಬಾದಾಮಿ ಎನ್ನುವುದು ನಂಬಿಕೆ.

೧೬. ಪ್ರತಿ ಮಂಗಳವಾರ, ಶುಕ್ರವಾರ ಉಡಿತುಂಬುವುದು, ಉಪವಾಸ ಮಾಡುವುದು, ದೇವಸ್ಥಾನಕ್ಕೆ ಹೋಗುವುದು ಉತ್ತಮ ಎಂಬ ನಂಬಿಕೆ.

೧೭. ಶ್ರೀಚಕ್ರವೇ ಶಕ್ತಿಯ ಮೂಲ ಆದ್ದರಿಂದಲೇ ದೇವಿಯ ಎಲ್ಲ ಚಟುವಟಿಕೆಗಳು ಸಾಗುವವು ಎಂಬ ನಂಬಿಕೆ ಜನರಲ್ಲಿದೆ.

೧೮. ಜಗತ್ತಿನ ಸೃಷ್ಟಿಕರ್ತೆ ಎಂಬ ನಂಬಿಕೆಯಿಂದಾಗಿ ಆಕೆಯನ್ನು ಜಗದಂಬೆಯೆಂದು ಕರೆಯುವುದು.

೧೯ ರಥೋತ್ಸವದ ಸಮಯದಲ್ಲಿ ರಥದ ಮೇಲೆ ಎರಡು ಹದ್ದುಗಳು ಎದುರಾಗಿ ಹಾರಾಡುತ್ತ ಬರುತ್ತವೆ. ಅವು ಬಂದು ರಥದ ಸುತ್ತಲೂ ಸುತ್ತು ಹಾಕಿದಾಗ ರಥವನ್ನು ಎಳೆಯಲಾಗುತ್ತದೆ ಎಂದು ಹೇಳುತ್ತಾರೆ.

ಹೀಗೆ ನಂಬಿಕೆಗಳು ಮಾನವನ ಜೀವನದಲ್ಲಿ ಬಹುಮುಖ್ಯ ಪಾತ್ರವಹಿಸುತ್ತವೆ. ನಂಬಿಕೆಗಳಿಲ್ಲದೆ ಇರಲು ಸಾಧ್ಯವಿಲ್ಲ ಎಂದು ಭಾವಿಸಿಕೊಂಡು ಮನುಷ್ಯ ತನ್ನ ಜೀವನವನ್ನು ರೂಢಿಸಿಕೊಂಡಿದ್ದಾನೆ. ಅಂದರೆ ನಂಬಿಕೆಯು ಬದುಕಿನ ಅವಿಭಾಜ್ಯ ಅಂಶವೆಂಬಂತೆ ಕಾರ್ಯ ನಿರ್ವಹಿಸಿರುತ್ತದೆ.[೩]

ಧರ್ಮ ಸಂಸ್ಕೃತಿಯ ಸಂದರ್ಭದಲ್ಲಿ ನಂಬಿಕೆಗಳು ವಂಶಪಾರಂಪರಿಕವಾಗಿ ಹರಿದುಬಂದು ಚಲನಶೀಲತೆಯ ಗುಣವನ್ನು ಪಡೆದುಕೊಂಡಿವೆ. ಅಲ್ಲದೆ ಈ ನಂಬಿಕೆಗಳು ಸಾರ್ವತ್ರಿಕ ಮುದ್ರೆಯನ್ನು ಧರಿಸಿಕೊಂಡಿರುವುದು ವಿಶೇಷ. ಇವುಗಳು ನಿತ್ಯವೂ ಕಾಣಿಸಿಕೊಂಡು ಕಾಲದ ಫಲಿತಾಂಶ ನೀಡುವ ಕಲ್ಪನೆಗಳಾಗಿವೆ ಎನ್ನಬಹುದು.[೪] ಮಾನವನು ಆಹಾರ ಸಂಗ್ರಹಣೆ, ಪಶುಪಾಲನೆ, ಕೃಷಿ, ಕೈಗಾರಿಕಾ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದ್ದರೂ ಕೂಡ ನಂಬಿಕೆಗಳು ಇನ್ನೂ ತನ್ನ ಪ್ರಭಾವವನ್ನು ಬೀರುತ್ತಿವೆ. ಪ್ರಸ್ತುತ ಜಗತ್ತು ಎಷ್ಟೇ ಆಧುನಿಕರಣಗೊಂಡಿದ್ದರೂ ಕೂಡ ನಂಬಿಕೆಗಳು ತಮ್ಮಲ್ಲಿ ಇನ್ನೂ ಉಳಿದುಕೊಂಡು ಬಂದಿದ್ದನ್ನು ಕಾಣಬಹುದು. ಇವೆಲ್ಲವೂ ವಿಪರ್ಯಾಸವೇ ಸರಿ. ಇದರಿಂದ ನಂಬಿಕೆಗಳು ಮನುಷ್ಯನ ಜೀವನದಲ್ಲಿ ಬೆರೆತು, ಅವನ ಮನಸ್ಸಿನಲ್ಲಿ ಆಳವಾಗಿ ಬೇರೂರಿರುವ ಸಂಗತಿಯಾಗಿರುವುದು ಗಮನಾರ್ಹ.

## ೫. ೩. ದೇವಿಯ ಕುರಿತಾದ ಸಂಪ್ರದಾಯ

ಸಂಪ್ರದಾಯ ಎಂಬುವುದು ಪರಂಪರಾನುಗತವಾಗಿ ನಡೆಸಿಕೊಂಡು ಬಂದ ಪ್ರಕ್ರೀಯೆ. ಸಂಪ್ರದಾಯದ ಬೀಜರೂಪದಲ್ಲಿ ಒಂದು ನಂಬಿಕೆ ಇದ್ದೇ ಇರುತ್ತದೆ. ಅಂದರೆ ಸಂಪ್ರದಾಯಗಳೆಲ್ಲವೂ ನಂಬಿಕೆಗಳಾಗಿರುತ್ತವೆ. ಆದರೆ ಎಲ್ಲ ನಂಬಿಕೆಗಳು ಸಂಪ್ರದಾಯಗಳಲ್ಲ. ನಂಬಿಕೆಯೊಂದು ಐತಿಹ್ಯ, ಪುರಾಣ, ಧರ್ಮಗಳೊಂದಿಗೆ ಸಂಬಂಧವನ್ನು ಪಡೆದುಕೊಂಡು ಸಮುದಾಯದ ಶ್ರದ್ಧೆಯೊಂದಿಗೆ ರೂಢಿಸಿಕೊಂಡಾಗ ಸಂಪ್ರದಾಯವಾಗುತ್ತದೆ. ಇಂತಹ ಸಂಪ್ರದಾಯದ ಪ್ರಾಯೋಗಿಕ ಅಥವಾ ಕ್ರಿಯಾರೂಪಗಳೇ ಆಚರಣೆಗಳು. ಹೀಗಾಗಿ ನಂಬಿಕೆಗಿಂತ ಸಂಪ್ರದಾಯ, ಆಚರಣೆಗಳಿಗೆ ಹೆಚ್ಚಿನ ವ್ಯಾಪ್ತಿಯಿದೆ. ಸಂಪ್ರದಾಯಗಳು ಒಂದು ಸಮಾಜದ ಸಾಮೂಹಿಕತೆಯಲ್ಲಿ ವಿಕಾಸಗೊಳ್ಳುವುದರಿಂದ ಅಲಿಖಿತ ಕಾನೂನುಗಳಾಗಿ, ನೀತಿಶಾಸ್ತ್ರಗಳಾಗಿ ಕಾರ್ಯ ನಿರ್ದೇಶಿಸುತ್ತವೆ. ಒಂದು ಸಮಾಜದ ಸಾಂಸ್ಕೃತಿಕ ಮೌಲ್ಯಗಳೇ ಈ ಸಂಪ್ರದಾಯ ಎನ್ನಬಹುದು.

"ಸಂಪ್ರದಾಯಗಳು ಪ್ರಾಚೀನ ಕಾಲದಿಂದಲೂ ಮೌಖಿಕವಾಗಿ ಪರಂಪರಾಗತವಾಗಿ ಚಲನಶೀಲವಾಗಿರುವುದನ್ನು ಕಾಣುತ್ತೇವೆ". ಸಂಪ್ರದಾಯಗಳು ಜಾನಪದ ಮೂಕ ಸಾಹಿತ್ಯವಿದ್ದಂತೆ. ಅವುಗಳನ್ನು ಹಳ್ಳಿಗರು ಅರಿಯದೇ ಆಚರಿಸಿಕೊಂಡು ಬಂದಿರುತ್ತಾರೆ. ಆದರೆ ಅವರ ಸಂಪ್ರದಾಯ, ಅನಿಸಿಕೆ, ಆಚಾರ, ವಿಚಾರಗಳು ಅದ್ಭುತವಾಗಿರುತ್ತವೆ.[೫]

ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಜನರ ಜೀವನ ಬಹುಮಟ್ಟಿಗೆ ಮತಧರ್ಮಗಳ ಪ್ರಭಾವದಿಂದ ಸಂಪ್ರದಾಯಗಳು ಜೀವನದ ನಡವಳಿಕೆಯೇ ಆಗಿದೆ. ಆದರೆ ಕೆಲವು ಸಂಪ್ರದಾಯಗಳು ನಿರ್ದಿಷ್ಟ ದೈವಗಳನ್ನು ಪ್ರಚಾರ ಮಾಡುವ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿವೆ. ಇಂತಹ ಸಂಪ್ರದಾಯಗಳು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿ ಕಂಡರು ಕೂಡ ಆಚರಣೆಗಳಲ್ಲಿ ಸಾಮ್ಯತೆಯನ್ನು ಹೊಂದಿರುವುದು ಗುರುತಿಸಬಹುದು. ದೈವ ಸಂಬಂಧಿ ಹಿನ್ನೆಲೆಯಲ್ಲಿ ಜನಸಾಮಾನ್ಯ ಕಟ್ಟುನಿಟ್ಟಾದ ಕ್ರಮವನ್ನು ಅನುಸರಿಸುತ್ತಾ ಬಂದಿದ್ದಾರೆ. ಬಹುಮುಖ್ಯವಾಗಿ ಈ ಸಂಪ್ರದಾಯಗಳು ಸಮಷ್ಠಿ ರೂಪವನ್ನು ಹೊಂದಿವೆ. ಉದಾಹರಣೆಗೆ ಬ್ರಾಹ್ಮಣರು ಮದುವೆಯಾದ ಹೊಸತರಲ್ಲಿ ಗಂಡ ಹೆಂಡತಿ ಇಬ್ಬರೂ ಬನಶಂಕರಿ ದೇವಿಯ ದರ್ಶನ ಪಡೆಯಲೇಬೇಕು ಎನ್ನುವ ಸಂಪ್ರದಾಯವಿದೆ. ಇದನ್ನು ಕೆಲವರು ಚಾಚೂ ತಪ್ಪದೇ ಅನುಸರಿಸುತ್ತಾರೆ. ಹೀಗೆ "ಪೂರ್ವಜರು ನಡೆದುಕೊಂಡು ಬಂದಂತೆ ತಾವು ನಡೆಯುವುದು ಮುಖ್ಯವಾಗಿರುತ್ತದೆ. ಯಾವುದೇ ಸಂಪ್ರದಾಯಕ್ಕೆ ಧಕ್ಕೆಯಾಗದಂತೆ ಆಚರಿಸಿಕೊಂಡು ಬರುವಾಗ ಹಿರಿಯರು ಮಾಡಿದ್ದು ಎಂಬ ಶ್ರದ್ಧೆಯ ಜೊತೆಗೆ, ಧಾರ್ಮಿಕ ಪ್ರಜ್ಞೆ, ದೈವ ಭಯಗಳು ಇಲ್ಲಿ ಕೆಲಸ ಮಾಡುತ್ತವೆ".[೬]

ಒಂದು ಸಂಸ್ಕೃತಿ ಬೆಳೆದುಬಂದ ರೀತಿ. ಅಂದರೆ ಅಂತರಂಗವನ್ನು ಸಮರ್ಥವಾಗಿ ಸಂಪ್ರದಾಯಗಳು ಬಿಂಬಿಸುತ್ತವೆ. ದೈವ ಸಂಸ್ಕೃತಿಗೆ ಸಂಬಂಧಿಸಿದಂತೆ ಶಿಷ್ಟ ಮತ್ತು ಪರಿಶಿಷ್ಟ ಎಂದು ವಿಂಗಡಣೆಯನ್ನು ಮಾಡಲಾಗುತ್ತದೆ. ಆದರೂ ಕೂಡ ಜನಪದ ಮಾತೃ ದೈವವನ್ನು ಒಂದೇ ಎಂದು ಭಾವಿಸಿ ಆರಾಧಿಸುತ್ತಾರೆ. ಮಾತೃ ಆರಾಧನೆಯ ಕೇಂದ್ರಭೂಮಿಯಾಗಿರುವ ಈ ಪ್ರದೇಶವು ಹಲವಾರು ಸ್ತ್ರೀ ದೈವಗಳನ್ನು ಹೊಂದಿದೆ. ಇವುಗಳಲ್ಲಿ ದ್ಯಾಮವ್ವ, ಮಾರಮ್ಮ, ಬನದದೇವಿ, ಕಾಳಮ್ಮ, ದುರ್ಗವ್ವ, ಬೆತ್ತಲೆಗೌರಿಯ ಸಂಪ್ರದಾಯಗಳು ಹೆಚ್ಚಾಗಿ ಕಂಡುಬರುತ್ತವೆ. ಈ ಎಲ್ಲ ಸಂಪ್ರದಾಯದ ದೈವಗಳಿಗೆ ದಿನನಿತ್ಯದ ಪೂಜೆ ಇಲ್ಲವೆಂದು ಹೇಳಬಹುದು. ಶುಕ್ರವಾರ ಮತ್ತು ಮಂಗಳವಾರ ಈ ದೇವಿಯರ ಪ್ರಮುಖ ವಾರಗಳಾಗಿವೆ. ಆದರೆ ಸಂಸ್ಕೃತೀಕರಣಗೊಂಡು ಬ್ರಾಹ್ಮಣರ ಪೂಜಾ ವಿಧಾನಗಳನ್ನು ಅಳವಡಿಸಿಕೊಂಡು ಪ್ರಭಾವಿ ದೇವಿಯಾದ ಬನಶಂಕರಿಗೆ ಮಾತ್ರ ದಿನನಿತ್ಯದ ಪೂಜೆ ನಡೆಯುತ್ತಿದೆ. ಆಕೆಯು ಈಗ ಸಸ್ಯಹಾರಿ ದೇವತೆಯಾಗಿ ಬ್ರಾಹ್ಮಣರಿಂದ ಪೂಜಿಸಲ್ಪಡುತ್ತಿದ್ದಾಳೆ. ವೈದಿಕ ಸಂಪ್ರದಾಯದ ಪೂಜೆ ಪುನಸ್ಕಾರ, ಹೋಮ ಮುಂತಾದ ಕಾರ್ಯಕ್ರಮಗಳು ನಡೆಯುತ್ತವೆ. ಪ್ರತಿ ಅಮವಾಸ್ಯೆ, ಹುಣ್ಣಿಮೆಯ ದಿನದಂದು ಅಭಿಷೇಕ ಇತರೆ ವಿಶೇಷ ಪೂಜೆಯನ್ನು ಮಾಡಲಾಗುತ್ತದೆ.

ಹೀಗೆ ದೈವ ಸಂಸ್ಕೃತಿಯಲ್ಲಿ ಹಲವಾರು ಸಂಪ್ರದಾಯಗಳನ್ನು ಕಾಣಬಹುದು. ಗ್ರಾಮದೇವತೆಗಳು ಆಧುನಿಕತೆಯ ಸ್ವರೂಪ ಪಡೆದುಕೊಂಡಿದ್ದರೂ ಸಂಪ್ರದಾಯ ಆಚರಣೆಗೆ ವಿಧಿ - ವಿಧಾನಗಳಲ್ಲಿ ತಮ್ಮ ಮೂಲ ಆಶಯವನ್ನು ಬಿಟ್ಟುಕೊಡಲಿಲ್ಲ. ಬನಶಂಕರಿಯ ಜಾತ್ರೆಯಲ್ಲಿ ಪ್ರತಿಯೊಬ್ಬರು ಶಕ್ತಿಯಾನುಸಾರವಾಗಿ ದೇವಿಗೆ ಕಾಣಿಕೆಯನ್ನು, ದವಸಧಾನ್ಯಗಳನ್ನು ಇತರೆ ಕಾಣಿಕೆಗಳನ್ನು ನೀಡಿ ತಮ್ಮ ಸೇವೆಯನ್ನು ಸಲ್ಲಿಸುವ ಪದ್ಧತಿಯು ಕಂಡುಬರುತ್ತದೆ. ದೇವಿಯನ್ನು ಪೂಜಿಸಿದ ನಂತರ ತಾವು ತಂದ ಆಹಾರವನ್ನು ನೈವೇದ್ಯ ಮಾಡಿ ನಂತರ ಹಂಚಿ ತಿನ್ನುವುದನ್ನು ಗಮನಿಸಬಹುದು. ಅಲ್ಲದೆ ದೇವಿಯ ರಥೋತ್ಸವ ದಿನದಂದು ರಥಕ್ಕೆ ಕಲ್ಲುಸಕ್ಕರೆ, ಬಾಳೆಹಣ್ಣು, ಅಡಿಕೆ, ನಿಂಬೆಹಣ್ಣು, ನೆಲಗಡಲೆ, ಉತ್ತತ್ತಿಯನ್ನು ಎಸೆಯುತ್ತಾರೆ. ಹೀಗೆ ಅನೇಕ ಸಂಪ್ರದಾಯಗಳು ಚಾಲ್ತಿಯಲ್ಲಿದ್ದು ಪ್ರಧಾನವಾಗಿ ಕೃಷಿ ಸಂಸ್ಕೃತಿಯನ್ನು ಬಿಂಬಿಸುತ್ತವೆ. ಪ್ರತಿವರ್ಷ ಬನಶಂಕರಿಯ ಜಾತ್ರೆಯಲ್ಲಿ ನಡೆಯುವ ರಥೋತ್ಸವವನ್ನು ನವವಿವಾಹಿತರು ನೋಡಲೇಬೇಕೆಂಬ ಸಂಪ್ರದಾಯವು ಈ ಭಾಗದಲ್ಲಿ ಹೆಚ್ಚು ಪ್ರಚಲಿತವಾಗಿದೆ.

**೫. ೪. ದೇವಿಯ ಕುರಿತಾದ ಐತಿಹ್ಯಗಳು**

"ಐತಿಹ್ಯ ಎಂಬ ಪದವು ಪರಂಪರೆಯಿಂದ ಬಂದದ್ದು" ಎಂಬ ವಿಶಾಲಾರ್ಥದಲ್ಲಿ ಬಳಕೆಯಾಗಿದೆ.[೭] ವಾಸ್ತವ ಸಂಗತಿಯೊಂದರ ಆಚಾರದಿಂದ ಕಲ್ಪನಾ ವಿಚಾರಗಳನ್ನು ಬೆಳೆಸಿಕೊಳ್ಳುತ್ತಾ ತಲತಲಾಂತರದಿಂದ ನಂಬಿಕೊಂಡ ಸಂಗತಿಯೇ ಐತಿಹ್ಯ. ಐತಿಹ್ಯ ಈ

ಪದದ ಮೂಲ ಲ್ಯಾಟಿನ್ ಪದ ಲೆಜೆಂಡ್‌ದಿಂದ ಬಂದಿದೆ. ಕಿಟಲ್ ನಿಘಂಟಿನಲ್ಲಿ ಈ ಪದದ ಅರ್ಥವು ಹೀಗಿದೆ. "Oral tradition a Legend"[೮] ಎಂಬುದನ್ನು ಸಮಾನಾರ್ಥವಾಗಿ ಬಳಸಿದ್ದಲ್ಲದೇ ಕನ್ನಡದಲ್ಲಿ ಐತಿಹ್ಯ ಎಂಬ ಪದವಿರುವುದನ್ನು ಗಮನಿಸಬಹುದು.

ಐತಿಹ್ಯಗಳು ಐತಿಹಾಸಿಕ ಘಟನೆಗಳ ಪುರಾವೆಗಳು ಎಂದು ಕಂಡುಬಂದರೂ ಪೌರಾಣಿಕ ಮತ್ತು ಕಾಲ್ಪನಿಕ ಅಂಶಗಳ ಕಡೆ ಇವು ತಮ್ಮ ಬೆಳಕು ಚೆಲ್ಲುತ್ತವೆ. ಸ್ವರೂಪದಲ್ಲಿ ಐತಿಹ್ಯಗಳು ಬಹಳ ಚಿಕ್ಕದಾಗಿ ತೋರಿದರೂ ಅನೇಕ ವಿವರಣಾತ್ಮಕ ಸಂಗತಿಗಳನ್ನು ತಮ್ಮ ಗರ್ಭದಲ್ಲಿ ಅಡಗಿಸಿಕೊಂಡಿವೆ. ಒಟ್ಟಿನಲ್ಲಿ ಐತಿಹ್ಯ ಎಂಬುದು ಪರಂಪರೆಯಿಂದ ಬಂದಿರಬಹುದು. ಅಥವಾ ಪರಂಪಾರಾಗತ ವೃತ್ತಾಂತ, ಇತಿಹಾಸಕ್ಕೆ ಸಂಬಂಧಿಸಿದ ಚರಿತ್ರೆ, ಇಲ್ಲವೆ ಐತಿಹ್ಯವು ಇತಿಹಾಸಕ್ಕೆ ಸಮೀಪವರ್ತಿಯಾದುದು ಎಂದು ಅನೇಕ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಎಲ್ಲೋ ಯಾವಾಗಲೋ ಘಟಿಸಿದ ಒಂದು ಘಟನೆ ಅಥವಾ ಒಂದು ಸ್ಥಳ ಅಥವಾ ವ್ಯಕ್ತಿಗೆ ತನ್ನ ಕಲ್ಪನೆಯ ವೈಭವೀಕರಣದ ಅಂಶಗಳನ್ನು ಸೇರಿಸಿಬಿಡುತ್ತಾನೆ. ಆ ಪರಿಷ್ಕೃತ ಅಂಶಗಳನ್ನು ಹರಡುತ್ತಾನೆ. ಹೀಗೆ ಒಂದು ಘಟನೆಗೆ ಅಥವಾ ಸ್ಥಳಕ್ಕೆ ಅಥವಾ ವ್ಯಕ್ತಿಗೆ ಸಂಬಂಧಿಸಿದ ಐತಿಹ್ಯ ಉಂಟಾಗುತ್ತದೆ. ಇಂತಹ ಐತಿಹ್ಯದ ಸೃಷ್ಟಿಯಲ್ಲಿ ಉಪಲಬ್ಧ ದಾಖಲೆಗಳನ್ನು ಬಳಸಿಕೊಳ್ಳಲಾಗುವುದು. ಆದರೆ ಇವು ನೈಜ ಚರಿತ್ರೆಯಾಗಲು ಬೇಕಾದ ವಸ್ತುನಿಷ್ಠತೆಯಿಂದ, ವೈಜ್ಞಾನಿಕ ದೃಷ್ಟಿಕೋನದಿಂದ ದೂರಸರಿದು ಕಲ್ಪನೆಯ ಆಶ್ರಯವನ್ನು ಪಡೆದು ಕಾವ್ಯ ಧಾಟಿಯಲ್ಲಿ ಸಾಗುತ್ತವೆ. ಇಲ್ಲಿ ಭಾವುಕಥೆ ವಿಜೃಂಭಿಸುತ್ತದೆ. ಕೆಲವು ಆ ಐತಿಹ್ಯದ ಸ್ವರೂಪ ಬದಲಾಗಬಹುದು. ಮತ್ತೆ ಕೆಲವು ಹೊಸ ಅಂಶಗಳು ಅದರಲ್ಲಿ ಸೇರಬಹುದಾಗಿದೆ. ಆದರೆ ಮೂಲ ಅಂಶ ಸಂಪೂರ್ಣ ನಾಶವಾಗುವುದಿಲ್ಲ.

ಹೀಗೆ ಪೂರ್ವದ ಚಾರಿತ್ರಿಕ ಸಂಗತಿಯನ್ನು ಕ್ರಮೇಣ ಅಪೂರ್ವವೂ, ಅದ್ಭುತವೂ ಆದ ಸನ್ನಿವೇಶಗಳನ್ನು ಒಳಗೊಂಡಿರುತ್ತದೆ. ತಲೆಮಾರುಗಳ ಮೂಲಕ ಹರಿದು ಬರುವಾಗ ಒಂದು ಹಂತದಲ್ಲಿ ಐತಿಹ್ಯ ನಿಧಾನವಾಗಿ ರೂಪುಗೊಳ್ಳುತ್ತ ಸಾಗಿ ಕೊನೆಗೆ ನಿರ್ದಿಷ್ಟ ಆಕೃತಿಯನ್ನು ಪಡೆದು ಗಟ್ಟಿಯಾಗುತ್ತವೆ. ಈಗಾಗಲೇ ಸ್ಪಷ್ಟಪಡಿಸಿದಂತೆ ಚರಿತ್ರೆಗೂ, ಐತಿಹ್ಯಕ್ಕೂ ಇರುವ ಸಂಬಂಧವನ್ನು ಖಚಿತವಾಗಿ ಗುರುತಿಸಲಾಗದು. ಭೌತಿಕ ಆಧಾರವೊಂದನ್ನು ಆಧರಿಸಿ ಹುಟ್ಟಿದ ಕಥೆಗಳು ಐತಿಹ್ಯಗಳಾದರೆ, ಅದೇ ಆಧಾರವನ್ನಾಧರಿಸಿ ವಸ್ತುನಿಷ್ಠ ವೈಜ್ಞಾನಿಕ ನಿರೂಪಣೆ ಚರಿತ್ರೆಯಾಗಬಹುದಾಗಿದೆ. ಜನಪದರ ಮಟ್ಟಿಗೆ ಐತಿಹ್ಯಗಳ ಶೈಕ್ಷಣಿಕ ಪ್ರವೃತ್ತಿ, ಐತಿಹ್ಯಗಳಲ್ಲಿ ಗಾಢವಾಗಿ ಹುದುಗಿರುವ ಅದರ ಶೈಕ್ಷಣಿಕ ಪ್ರವೃತ್ತಿಯು ಅದನ್ನು ಮನೋರಂಜನಾ ದೃಷ್ಟಿಯಿಂದ ಬೇರ್ಪಡಿಸಿದೆ. ಜನರಿಗೆ ತಿಳುವಳಿಕೆ ನೀಡ ಬಯಸುವ ಐತಿಹ್ಯದ ಶೈಕ್ಷಣಿಕ

ಪ್ರವೃತ್ತಿಯೇ ಅದರ ವಿವರಣಾತ್ಮಕ ಭಾಗವನ್ನು ನಿಯಂತ್ರಿಸಿದೆ. ಆದರೆ ಐತಿಹ್ಯಗಳು ಸತ್ಯವೆಂಬ ಭಾವದಲ್ಲಿ ಸಂಕ್ಷಿಪ್ತವಾಗಿರುತ್ತವೆ.

ಐತಿಹ್ಯಗಳು ಜನಪದ ಕಥೆಗಳಿಗಿಂತ ಭಿನ್ನವಾಗುತ್ತವೆ. ಒಬ್ಬಾತನು ಸತ್ಯ ಅಥವಾ ನಿಜವನ್ನು ನಿರೂಪಿಸುವ ಬಗೆಯಲ್ಲಿಯೇ ಚರಿತ್ರೆ ಅಥವಾ ಐತಿಹ್ಯ ಅಥವಾ ಕಥೆ ಅಥವಾ ಪುರಾಣ ಸೃಷ್ಟಿಯಾಗುತ್ತದೆ. ಇವುಗಳೆಲ್ಲದರ ಹುಟ್ಟಿಗೆ ವ್ಯಕ್ತಿಯೊಬ್ಬನ ಪ್ರತಿಭೆ ಮಾತ್ರ ಸಾಲದು. ಆ ಪ್ರತಿಭೆ ಅರಳುವುದಕ್ಕೆ ಪೋಷಕವಾದ ಸಾಮಗ್ರಿಯೊಂದು ಭೌತಿಕ ಜಗತ್ತಿನಲ್ಲಿರಬೇಕು. ಇದರ ಸಹಾಯದಿಂದ ಅನಂತರ ನಿರೂಪಣ ಕವಿ ಪ್ರತಿಭೆ ಪ್ರಾಚೀನ ಸತ್ಯಗಳನ್ನು ಸಾಕ್ಷತ್ಕರಿಸಬಹುದು. ಐತಿಹ್ಯದ ಗರ್ಭದೊಳಗಿರುವ ಭೌತಿಕ ಸತ್ಯವು ಮಾನವವರ್ಗ, ಪ್ರಾಣಿವರ್ಗ, ಸಸ್ಯವರ್ಗದ ಯಾವುದೇ ವಿಷಯಗಳನ್ನು ಕುರಿತಾಗಿರಬಹುದು. ಅಥವಾ ಈ ಮೂರರ ಬಳಕೆಯಲ್ಲಿಯೇ ಹುಟ್ಟಬಹುದು.[೮]

ಹೀಗಿರುವಾಗ ಭೌತಿಕ ಸತ್ಯದ ಅಥವಾ ಆಧಾರದ ನಿರೂಪಣೆ ವೈಜ್ಞಾನಿಕವಾಗಿ ಮೇಲ್ನೋಟಕ್ಕೆ ತೋರಿದರೂ ಐತಿಹ್ಯದಲ್ಲಿ ಹಾಗಿರುವುದಿಲ್ಲ. ಅದು ನಾಟಕೀಯ ಅತಿಮಾನುಷತೆಯನ್ನು ಹೊಂದಿರುತ್ತದೆ. ಇಲ್ಲವೇ ವಿಮರ್ಶಕವಲ್ಲದ ತಿಳುವಳಿಕೆಯಿಂದಲೂ ಹೊಸ ರೂಪ ಪಡೆಯಬಹುದು. ಈ ರೀತಿ ಆದಾಗಲೂ ಐತಿಹ್ಯದ ನಿರೂಪಕ ಕೊಡುವ ಭೌತಿಕ ಆಧಾರವು ಕಣ್ಣೆದುರೆ ಇರುತ್ತದೆ. ಈ ಆಧಾರಕ್ಕೂ, ನಿರೂಪಣೆಗೂ ವೈಜ್ಞಾನಿಕ ಸಂಬಂಧ ಇರುವುದಿಲ್ಲ. ಸುಸಂಬಂಧ ತರ್ಕ ಮಾತ್ರ ಉಳಿಯುವುದು. ಜನರ ನಂಬಿಕೆ, ಶ್ರದ್ಧೆ, ನಡವಳಿಕೆ, ಮೌಲ್ಯವ್ಯವಸ್ಥೆ, ಆದರ್ಶಗಳು ಪುರಾಣಗಳನ್ನು ಸೃಷ್ಟಿಸುತ್ತವೆ. ಹಾಗೆಂದು ಭೌತಿಕ ವಸ್ತುಗಳ ವಾರ್ತತೆಯ ಅವಲಂಬನೆ ಅವಕ್ಕೆ ಬೇಡ. ಕಥೆಗಳಿಗಾದರೂ ಅಷ್ಟು ಮೂಲ ವಸ್ತುಗಳು ಹೊಸ ಆಕೃತಿಯೊಂದನ್ನು ಪಡೆದುಕೊಂಡು ನಿರ್ದಿಷ್ಟ ಸಾತ್ವಿಕತೆಯೊಂದನ್ನು ಅಲ್ಲಿ ಪ್ರಕಟಪಡಿಸುತ್ತವೆ. ಈ ದೃಷ್ಟಿಯಿಂದ ಕಥೆಗಳು ಐತಿಹ್ಯದತ್ತ ಸುಳಿದಾಡಿದರೆ, ಐತಿಹ್ಯಗಳು ಚರಿತ್ರೆಯತ್ತ ವಾಲುತ್ತವೆ. ಚರಿತ್ರೆ ಬದುಕಿನ ವಾಸ್ತವತೆಯ ಅಧಿಕೃತ ನಿರೂಪಣೆಯಾಗಿದೆ.

ಭೌತಿಕ ಆಧಾರ ಅಥವಾ ಸತ್ಯಗಳೆಲ್ಲವೂ ಐತಿಹ್ಯಕ್ಕೆ ವಸ್ತುವಾಗಲಾರವು. ಅವು ಸಾಮಾನ್ಯ ಜೀವನ ಶಿಷ್ಟಕ್ಕಿಂತ ಭಿನ್ನವಾಗಿದ್ದು, ವಿಶಿಷ್ಟವಾಗಿರಬೇಕು. ಅಥವಾ ಸಾಮಾನ್ಯ ವಿಶಿಷ್ಟಗಳಿಗಿಂತ ಅಸಮಾನ್ಯವಾಗಿರುವುದು. ಇದರಿಂದ ಯಾವುದೇ ಆದರೂ ತನ್ನ ಇರುವಿಕೆಯ ಸ್ಥಿತಿಯಲ್ಲಿಯೇ ಜನರ ಮೇಲೆ ಪ್ರಭಾವ ಬೀರಲು ಸಮರ್ಥವಾಗಿರುತ್ತದೆ. ಪುರಾಣ ವ್ಯಕ್ತಿಗಳೆಲ್ಲರೂ ಸಾಮಾನ್ಯ ಮನುಷ್ಯರಿಗಿಂತ ವಿಶಿಷ್ಟರು. ಅಸಮಾನ್ಯರಾದುದರಿಂದ ಅವರಿಗೆ ಐತಿಹ್ಯದಲ್ಲಿ ವಿಶೇಷ ಸ್ಥಾನವಿದೆ. ಈ ಹಿನ್ನೆಲೆ ಬನಶಂಕರಿ ದೇವಿಗೆ ಸಂಬಂಧಿಸಿದಂತಹ

ಐತಿಹ್ಯಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗಿದೆ. ಈ ದೇವಿಗೆ ಸಂಬಂಧಿಸಿದ ಅಸಂಖ್ಯಾತ ಐತಿಹ್ಯಗಳಿವೆ. ಅವುಗಳಲ್ಲಿ ಬಹುಮುಖ್ಯವಾಗಿರುವಂತಹ ಐತಿಹ್ಯಗಳನ್ನು ಮಾತ್ರ ಅಧ್ಯಯನದ ಮಿತಿಯನ್ನಾಗಿಸಿಕೊಂಡು ಪಟ್ಟಿ ಮಾಡಲಾಗಿದೆ.

೧. ಶ್ರೀರಾಮಚಂದ್ರ ಸೀತೆಯನ್ನು ಹುಡುಕಿಕೊಂಡು ಉತ್ತರದ ವನದಿಂದ ದಕ್ಷಿಣದ ಈ ಬಾದಾಮಿ ವನದತ್ತ (ದಂಡಾರಣ್ಯ) ಬರುತ್ತಾನೆ. ಈ ಸಂದರ್ಭದಲ್ಲಿ ಶ್ರೀರಾಮನನ್ನು ಪರೀಕ್ಷಿಸಲೆಂದು ಇಲ್ಲಿಗೆ ಬರುವ ಶ್ರೀ ಗೌರಿಯೇ ಆತನ ಸತ್‌ಚರಿತ್ರ್ಯಕ್ಕೆ ಮನಸೋಲುತ್ತಾಳೆ. ಆತನ ಅಪೇಕ್ಷೆಯಂತೆ ದಂಡಕಾರಣ್ಯದಲ್ಲಿ ಬನಶಂಕರಿಯಾಗಿ ನೆಲೆನಿಲ್ಲುತ್ತಾಳೆ ಎಂಬ ಐತಿಹ್ಯವಿದೆ.

೨. ಉತ್ತರ ಭಾರತದಲ್ಲಿ ನೂರು ವರ್ಷಗಳಿಗೂ ಅಧಿಕ ಕಾಲ ಭೀಕರ ಕ್ಷಾಮ ಸಂಭವಿಸಿದಾಗ ಮುನಿಗಳು ಮತ್ತು ಬ್ರಾಹ್ಮಣರು ದಕ್ಷಿಣದತ್ತ ಬೃಹತ್ ಸಂಖ್ಯೆಯಲ್ಲಿ ವಲಸೆ ಬಂದರು. ಬಾದಾಮಿ ಸಮೀಪದ ಮಲಪ್ರಭ ನದಿಯ ಗೊಂಡಾರಣ್ಯವನ್ನು ತಲುಪಿದಾಗ ಅವರು ಬನಶಂಕರಿ ದೇವಿಯನ್ನು ಪ್ರಾರ್ಥಿಸಿ ಪರಿಸ್ಥಿತಿ ಸುಧಾರಿಸುವವರೆಗೂ ತಮ್ಮ ವಾಸವನ್ನು ಅನುಮತಿಸಬೇಕೆಂದು ಕೇಳಿಕೊಂಡರು. ಆಗ ಕ್ಷಾಮ ನಿವಾರಿಸಲು ಆದಿಮಾಯಿ ಬನಶಂಕರಿಯು ತನ್ನ ಶರೀರದಿಂದ ಉತ್ಪನ್ನವಾದ ಶಾಕಗಳಿಂದ ಸಕಲ ಪ್ರಾಣಿಗಳನ್ನು ರಕ್ಷಿಸಿದಳು. ಆ ಕಾರಣದಿಂದ ಜಗನ್ಮಾತೆಯಾದ ಬನಶಂಕರಿಯು ಶಾಖಾಂಭರಿ ಎಂದು ಪ್ರಸಿದ್ಧಳಾದಳು.[೧೦] ಇದರ ಕುರುಹಾಗಿ ದೇವಿಗೆ ಪುಷ್ಯಶುದ್ಧ ಚತುರ್ದಶಿಯ ದಿನ ಸುಮಾರು ೧೦೮ ಪ್ರಕಾರದ ತರಕಾರಿಗಳಿಂದ ತಯಾರಿಸಿದ ಪಲ್ಲೆಯನ್ನು ನೈವೇಧ್ಯ ಮಾಡುತ್ತಾರೆ. ಇದನ್ನು ಸ್ಥಳೀಯವಾಗಿ ಪಲ್ಲೆದ ಹಬ್ಬ ಎಂದು ಕರೆಯುತ್ತಾರೆ.

೩. ಅಗಸ್ತ್ಯ ಮುನಿಗಳು ಶ್ರೀ ಬನದ ದೇವಿಯನ್ನು ಪೂಜಿಸಿದರೆಂದು ಹೇಳಲಾಗಿದೆ.[೧೧] ಅಗಸ್ತ್ಯರು ತಿಲಕಾರಣ್ಯಕ್ಕೆ ಭೇಟಿ ನೀಡಿದರು ಎಂಬುವುದನ್ನು ನೆನಪಿಸಿಕೊಳ್ಳಲು ಬಾದಾಮಿ ಗುಹೆಗಳ ಮುಂದಿರುವ ಹೊಂಡಕ್ಕೆ ಅಗಸ್ತ್ಯ ಹೊಂಡ ಎಂದು ಹೆಸರನ್ನು ಇಟ್ಟಿರುವುದನ್ನು ಗಮನಿಸಬಹುದು.

೪. ಶರಣರು ಬಾಳಿ ಬೆಳಗಿದ, ಪಂಚನದಿಗಳ ಬೀಡು, ಪುಣ್ಯ ಕ್ಷೇತ್ರದ ನಾಡು ಬಾದಾಮಿ ಚಾಲುಕ್ಯ ನಗರ, ಏನ ಚಂದೈತೆ. ಚಾಲುಕ್ಯರ ಕುಲದೇವತೆ, ನಾಡ ದೇವಿ ಬನಶಂಕರಿ ತಾಯಿಯ ಉಡಿಯೋಳು ತುಂಬೈತೆ. ಜನಪದರು ಹೇಳುವ ಹಾಡು ಸೊಗಸಾಗಿದೆ. ಈ ಹಾಡಿನಲ್ಲಿ ಬನಶಂಕರಿಯು ಚಾಲುಕ್ಯರ ಕುಲದೇವತೆ ಎಂದು ವರ್ಣಿಸಲಾಗಿದೆ. ಆದರೆ ಚಾಲುಕ್ಯರ ಕುಲದೇವತೆಯಾಗಿದ್ದಳು ಎಂಬುದನ್ನು ಪುಷ್ಟೀಕರಿಸಲು ಆಧಾರಗಳು ಲಭ್ಯವಾಗಿಲ್ಲ.

೫. ಮಾಡಲಗೇರಿಯು ಬನಶಂಕರಿ ದೇವಿಯ ತವರೂರು ಎಂದು ಜನಪದರು ಹೇಳುತ್ತಾರೆ. ಈ ಗ್ರಾಮವು ಗದಗ ಜಿಲ್ಲೆ, ರೋಣ ತಾಲೂಕಿಗೆ ಸೇರುತ್ತದೆ. ಇದು ಬನಶಂಕರಿಯಿಂದ ೧೫ ಕಿ.ಮೀ. ದೂರದಲ್ಲಿರುವುದು. ದೇವಿಯ ತವರೂರು ಎಂಬ ಹಿನ್ನೆಲೆಯಿಂದಾಗಿ ಪೂರ್ವದಿಂದಲೂ ದೇವಿಯ ತೇರನ್ನು ಎಳೆಯಲು ಈ ಗ್ರಾಮದಿಂದ ಹಗ್ಗವನ್ನು ತರಲಾಗುತ್ತದೆ.

೬. ಬನಶಂಕರಿ ದೇವಿಗೆ ನೀಡಿದ ಫಲಕಾಣಿಕೆಯನ್ನು ಅರ್ಚಕರ ಮಗುವೊಂದು ತಿಂದುಬಿಟ್ಟಿತು. ಸಿಟ್ಟಿಗೆದ್ದ ವನದೇವಿಯು ಆ ಮಗುವನ್ನು ನುಂಗತೊಡಗಿದ್ದಳು. ಈ ದೃಶ್ಯವನ್ನು ಅರ್ಚಕರು ನೋಡಿದರು. ಆ ವೇಳೆಗೆ ದೇವಿಯು ಮಗುವಿನ ಸಂಪೂರ್ಣ ದೇಹವನ್ನು ನುಂಗಿದ್ದಳು. ಆದರೆ ಮಗುವಿನ ಕಾಲ್ಗೆಜ್ಜೆಗಳು ಮಾತ್ರ ಬಾಯಿಯ ಹೊರಗೆ ಉಳಿದಿದ್ದವು. ಇದನ್ನು ಕಂಡ ಅರ್ಚಕರು, ದೇವಿಯ ಭಕ್ತರೆಲ್ಲರೂ ದೇವಿಯನ್ನು ಅನನ್ಯವಾಗಿ ಪ್ರಾರ್ಥಿಸಿದ್ದರಿಂದ ಮಗುವನ್ನು ಸಜೀವವಾಗಿ ಹಿಂತಿರುಗಿಸಿದಳು ಎಂದು ಜನಪದರು ಹೇಳುತ್ತಾರೆ. ಈ ಹಿನ್ನೆಲೆಯಿಂದಾಗಿ ತಮ್ಮ ಮಕ್ಕಳಿಗೆ ಗೆಜ್ಜೆಯನ್ನು ಹಾಕಬಾರದೆಂಬ ನಿಯಮವಿತ್ತು. ಆದರೆ ಪ್ರಸ್ತುತ ಈ ನಿಯಮವನ್ನು ಅನುಸರಿಸುತ್ತಿಲ್ಲ.

೭. ಮಕ್ಕಳಾಗದವರು ಸಂತಾನ ಭಾಗ್ಯಕ್ಕಾಗಿ ದೇವಿಯನ್ನು ಪೂಜಿಸುವುದುಂಟು. ಹಿಂದೊಮ್ಮೆ ಒಬ್ಬ ಮಹಿಳೆಗೆ ಬಹುದಿನಗಳವರೆಗೆ ತನಗೆ ಮಕ್ಕಳಾಗದೆ ಇದ್ದುದ್ದರಿಂದ ದೇವಿಗೆ ಪ್ರಾರ್ಥಸಿ, ನನಗೆ ಮಗುವನ್ನು ಕರುಣಿಸಿದರೆ ನಾನು ಜಾತ್ರೆ ನಡೆಯುವಾಗ ತೇರಿನ ಗಾಲಿ ಬಾಯಿಗೆ ಹಾಕುತ್ತೇನೆಂದು ಹರಕೆ ಮಾಡಿಕೊಂಡಳು. ಹೀಗೆ ಪ್ರಾರ್ಥಿಸಿದ ನಂತರ ಆ ಮಹಿಳೆಗೆ ಮಗುವಾಯಿತು. ಅನೇಕ ದಿನಗಳು ಕಳೆದವು. ಹಾಗೆಯೇ ಬನಶಂಕರಿ ದೇವಿಯ ಜಾತ್ರೆಯು ಬಂದಿತು. ಪ್ರತಿವರ್ಷದಂತೆ ಆಕೆಯು ಕುಟುಂಬ ಸಹಿತ ಜಾತ್ರೆಗೆ ಬಂದಳು. ಸಮಯಕ್ಕೆ ಸರಿಯಾಗಿ ತೇರನ್ನು ಎಳೆಯಲು ಪ್ರಾರಂಭಿಸಿದರು. ಆದರೆ ಆಕೆ ತೇರಿನ ಗಾಲಿಗೆ ತನ್ನ ಮಗುವನ್ನು ಹಾಕಿದರೆ ಮಗು ಉಳಿಯುವುದಿಲ್ಲವೆಂದು ತಿಳಿದು ಮಗುವನ್ನು ಎತ್ತಿಕೊಂಡು ದೂರ ಹೋದಳು. ಆದರೆ ತೇರು ಎಷ್ಟು ಎಳೆದರು ಕೂಡ ಮುಂದೆ ಸಾಗಲಿಲ್ಲ. ಆಗ ಎಲ್ಲರಿಗೂ ಆಶ್ಚರ್ಯವಾಯಿತು. ಕೊನೆಗೆ ದೇವಸ್ಥಾನದವರು ಡಂಗುರವನ್ನು ಸಾರಿದರು. ಯಾರಾದರೂ ಬೇಡಿಕೊಂಡ ಭಕ್ತಾದಿಗಳು ಇದ್ದರೆ ಅವರು ಮುಂದಕ್ಕೆ ಬಂದು ತಮ್ಮ ಹರಕೆಗಳನ್ನು ತೀರಿಸಿ, ತೇರು ಮುಂದೆ ಹೋಗಲು ಅವಕಾಶ ಮಾಡಿಕೊಡಿ ಎಂದರು. ಆಗಲು ಆಕೆಯು ಮುಂದೆ ಬರಲಿಲ್ಲ.

ಆಗ ಸ್ವತಃ ಬನಶಂಕರಿ ದೇವಿಯೇ ಒಬ್ಬ ಮುದುಕಿಯ ವೇಷಧರಿಸಿ, ತನ್ನನ್ನು ಬೇಡಿಕೊಂಡ ಭಕ್ತಳ ಹತ್ತಿರ ಬಂದು "ಏನವ್ವ ಇಲ್ಯಾಕ ಕುಂತಿ" ಎಂದಳು. ಆಗ ಅವಳು ನನಗೆ ಲಗ್ನವಾಗಿ ಐದು ವರ್ಷವಾದರೂ ಮಕ್ಕಳಾಗಿದ್ದಿಲ್ಲ. ನನಗೆ ಮಗುವನ್ನು ಕರುಣಿಸು,

ಆ ಮಗುವನ್ನು ನಿನ್ನ ತೇರಿನ ಗಾಲಿ ಬಾಯಿಗೆ ಹಾಕ್ತಿನಿ ಅಂತ ದೇವಿಗೆ ಬೇಡಿಕೊಂಡಿದ್ದೆ. ಆದ್ರ ಇಂಥ ಗಂಡು ಕೂಸನ್ನು ತೇರಿನ ಗಾಲಿ ಬಾಯಿಗೆ ಹಾಕಿದ್ರೆ ಉಳಿಯುವುದಿಲ್ಲವಂತ ಹೆದರಿ ಇಲ್ಲೇ ಕುಂತೆನವ್ವಾ ಎಂದಳು. ಆಗ ಮುದುಕಿಯು 'ಏ ಹುಚ್ಚೀ ಎಲ್ಲಿ ಐತಿ ನಿನ್ನ ಬುದ್ಧಿ, ಕೊಟ್ಟಾಕಿ ಎಂದೂ ಕಸಗೊಳ್ಳುವುದಿಲ್ಲ'. ನಿನ್ನ ಸಲುವಾಗಿ ತೇರು ಹಂಗ ನಿಂತೈತಿ. ಈಗ ಸದ್ಯಕ್ಕ ಎದ್ದು ಬಾ. ನಿನ್ನ ಕೂಸನ್ನು ತೇರಿನ ಗಾಲಿ ಬಾಯಿಗೆ ಹಾಕು. ನನ್ನ ಮಾತರ ನಂಬು ಎಂದು ಹೇಳಿದಾಗ ಆಕೆಯು ಒಪ್ಪಿದಳು. ಆಗ ಮುದುಕಿಯು ಜನರನ್ನು ಸರಿಸುತ್ತಾ ಆಕೆಯನ್ನು ಕರೆದುಕೊಂಡು ತೇರಿನೆಡೆಗೆ ಬಂದು ಈಗ ಕೂಸನ್ನು ಇಲ್ಲಿ ಮಲಗಿಸು ಎಂದಳು. ಆಗ ಮುದುಕಿಯು ದೊಡ್ಡ ಧ್ವನಿಯಿಂದ ಎಳೆಯಿರಿ ಎಳೆಯಿರಿ ತೇರನ್ನು ಎಂದು ಕೂಗಿದಳು. ಅಪಾರ ಸಂಖ್ಯೆಯಲ್ಲಿ ಕೂಡಿದ ಜನರು ಜೋರಾಗಿ ತೇರನ್ನು ಎಳೆದರು. ಆಗ ತೇರು ಮುಂದೆ ಸಾಗಿತು. ಆಗ ತೇರಿನ ಗಾಲಿಗಳು ಮಗುವಿನ ಹತ್ತಿರ ಬಂದಂತೆಯೇ ಪುಟಿದು ಮುಂದೆ ಸಾಗಿದವು. ಆದರೆ ಆ ಮಗುವಿಗೆ ಏನು ಆಗಲಿಲ್ಲ.

ಆಗ ತಾಯಿಯು ಆ ಮಗುವನ್ನು ಎತ್ತಿಕೊಂಡು ದೇವಿಯೇ ನಿನ್ನ ಮಹಿಮೆ ಅಪಾರ. ನಿನ್ನ ಶಕ್ತಿಯನ್ನು ತಿಳಿಯದೇ ಹೋದೆನು ಎಂದು ತನ್ನ ತಪ್ಪನ್ನು ಒಪ್ಪಿ ದೇವಿಯನ್ನು ನಾನಾ ವಿಧದಿಂದ ಪ್ರಾರ್ಥಿಸಿದಳು. ನಂಬಿದವರನ್ನು ದೇವಿಯು ಎಂದಿಗೂ ಕೈಬಿಡುವುದಿಲ್ಲ ಎಂಬುದು ಜನಪದರ ನಂಬಿಕೆಯಾಗಿದೆ. ಪ್ರಸ್ತುತದಲ್ಲಿ ಇಂತಹ ಆಚರಣೆಗಳು ಕಂಡುಬರುವುದಿಲ್ಲ.

೮. ಬನಶಂಕರಿ ಕ್ಷೇತ್ರದಲ್ಲಿರುವ ಮಲೆಯಮ್ಮನನ್ನು ಬನಶಂಕರಿಯ ಅಕ್ಕನೆಂದು, ಸತ್ಯವ್ವಳನ್ನು ತಂಗಿಯಂದು ಜನಪದರು ಭಾವಿಸುತ್ತಾರೆ. ಇದಕ್ಕೆ ಪೂರಕವಾಗಿರುವಂತೆ ದೇವಿಯ ಗುಡಿಯ ಹಿಂಭಾಗದಲ್ಲಿ ಮಲೆಯಮ್ಮ, ಮುಂದಿನ ಭಾಗದಲ್ಲಿ ಸತ್ಯವ್ವ ನೆಲೆಸಿರುವುದನ್ನು ಗಮನಿಸಬಹುದು. ಈ ಸಹೋದರಿಯರು ಬನಶಂಕರಿಯ ಕ್ಷೇತ್ರ ರಕ್ಷಕರು ಎಂಬ ಪ್ರತೀತಿ ಇದೆ.

**೫. ೫. ಆಚರಣೆಗಳು**

ಮತಧರ್ಮಗಳಿಗೆ ಸಂಬಂಧಿಸಿದಂತೆ ನಡೆಸುವ ಕ್ರಿಯೆ ಹಾಗೂ ವಿಧಿಗಳಿಗೆ ನಾವು ಆಚರಣೆ ಎನ್ನಬಹುದು. ಆಚರಣೆ ಒಂದು ಸಂಸ್ಕೃತಿಯ ಪ್ರತಿಬಿಂಬ. ಒಂದು ಸಂಸ್ಕೃತಿಯನ್ನು ಅರಿತುಕೊಳ್ಳಬೇಕಾದರೆ ಆ ಸಂಸ್ಕೃತಿಗೆ ಸಂಬಂಧಿಸಿದ ಆಚರಣೆಗಳನ್ನು ಕುಲಂಕಷವಾಗಿ ತಿಳಿದುಕೊಳ್ಳುವ ಅಗತ್ಯವಿದೆ. ಮಾನವನು ತನ್ನ ಜೀವನ ಸಂಸ್ಕೃತಿಯಲ್ಲಿ ಆಚರಣೆಗಳಿಗೆ ಹೆಚ್ಚಿನ ಮಹತ್ವವನ್ನು ನೀಡುತ್ತಾ ಬಂದಿದ್ದಾನೆ. ದೈವಾಚರಣೆಯ ಸಂದರ್ಭದಲ್ಲಿ ಎಲ್ಲ

ಸಮೂದಾಯದವರು ಒಂದಾಗಿ ಅನೇಕ ಆಚರಣೆಗಳನ್ನು ಚಾಚೂತಪ್ಪದೇ ನಡೆಸಿಕೊಂಡು ಬರುತ್ತಿರುವರು. ಈ ಆಚರಣೆ ವಿಧಿ – ವಿಧಾನಗಳು ಸಮಾಜವನ್ನು ಒಂದುಗೂಡಿಸುವ, ತಿದ್ದುವ ಹಾಗೂ ವ್ಯಕ್ತಿಯು ಅಡ್ಡ ದಾರಿಗೆ ಹೋಗದಂತೆ ನಿಯಂತ್ರಿಸುವ ಸಾಮರ್ಥ್ಯವನ್ನು ಪಡೆದಿವೆ. ಪ್ರಮುಖವಾಗಿ ಈ ಆಚರಣೆಗಳು ಸಮಾಜದ ಉನ್ನತ ಬೆಳವಣಿಗೆಗೆ ಸಹಕಾರಿಯಾಗಿ ನಿಲ್ಲುತ್ತವೆ. ಇಂದು ಆಧುನಿಕತೆ ನಮ್ಮನ್ನು ಎಷ್ಟೆ ಆವರಿಸಿದ್ದರೂ ಕೂಡ ಈ ಸಂಪ್ರದಾಯ, ಆಚರಣೆ, ವಿಧಿ – ವಿಧಾನಗಳಿಂದ ಹೊರಬರಲಾಗಿಲ್ಲ. ಸಾಂಕೇತಿಕವಾಗಿಯಾದರೂ ನಾವು ಈ ಆಚರಣೆಗಳನ್ನು ಮುಂದುವರೆಸುತ್ತಾ ಬರುತ್ತಿದ್ದೇವೆ.

ನಮ್ಮಲ್ಲಿ ಪುರುಷ ದೈವಗಳಿಗಿಂತ ಸ್ತ್ರೀ ದೈವಗಳ ಆಚರಣೆಗಳು ಹೆಚ್ಚು ಪ್ರಚಲಿತವಾಗಿವೆ. ಕರ್ನಾಟಕ, ಆಂಧ್ರ, ತಮಿಳುನಾಡು, ಕೇರಳಗಳಲ್ಲಿ ಮಾತೃ ಆರಾಧನೆ ಇಂದಿಗೂ ಜನಪ್ರಿಯವಾಗಿದೆ. ಹಿಂದೂ ಧರ್ಮದ ಮುಖ್ಯ ದೇವತೆಗಳಿಗಿಂತ ಗ್ರಾಮದೇವತೆಗಳು ಜನರಿಗೆ ಹೆಚ್ಚು ಹತ್ತಿರವಾಗಿವೆ. ಜನರ ಕಷ್ಟ, ಸುಖಗಳಿಗೆ ಕಿವಿಗೊಡುತ್ತವೆ ಎಂಬ ನಂಬಿಕೆ ಇದೆ. ಜನಪದರ ಧರ್ಮದ ಮೂಲ ಧಾತುವನ್ನು ನಿರ್ಮಿಸಿದವರು ಈ ಗ್ರಾಮದೇವತೆಗಳೇ ಆಗಿದ್ದಾರೆ.[೨] ಮಾತೃದೇವತಾ ಆರಾಧನೆ ಮೂಲದಿಂದ ಜನ್ಮತಾಳಿದ ಗ್ರಾಮದೈವವು ಇಂದಿಗೂ ತನ್ನದೇ ಆದ ವಿಶಿಷ್ಟತೆಯನ್ನು ಹೊಂದಿವೆ.

ಭಾರತವು ಶಕ್ತಿ ಉಪಾಸನಾ ಕೇಂದ್ರವಾಗಿ ಪುರಾತನ ಇತಿಹಾಸವನ್ನು ಹೊಂದಿದೆ. ಪ್ರಸ್ತುತ ಅಧ್ಯಯನಕ್ಕೆ ಬಳಸಿರುವ ಬನಶಂಕರಿ ಕ್ಷೇತ್ರ ಕೂಡ ಶಕ್ತಿ ಉಪಾಸನಾ ಕೇಂದ್ರಭೂಮಿ. ಶಕ್ತಿ ದೇವತೆಗಳ ಕುರಿತ ಆಚರಣೆಗಳು ಬಹುಪಾಲು ಕೃಷಿ ಸಂಸ್ಕೃತಿಯನ್ನು, ಮಾನವ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ಈ ಆಚರಣೆಗಳು ಪ್ರಮುಖವಾಗಿ ಮಾನವನ ಅಗೋಚರ ಶಕ್ತಿಗಳಿಗೆ ಶರಣಾಗಿ ಅವುಗಳನ್ನು ತೃಪ್ತಿಪಡಿಸಲೆಂದು ಹೆಣಗಾಡಿರುವ ಪ್ರಸಂಗಗಳ ಚಾರಿತ್ರಿಕ ದಾಖಲೆಗಳಾಗಿ ಚಲನಶೀಲವಾಗಿವೆ. ಹಾಗಾಗಿ ಮಾನವ ಜೀವನದಲ್ಲಿ ದೈನಂದಿನ ಆಚರಣೆಗಳನ್ನು ಮತ್ತು ವಾರ್ಷಿಕ ಆಚರಣೆಗಳನ್ನು ಕಾಣಬಹುದು. ಒಂದು ದಿನದ ಹಬ್ಬ, ಮೂರು ಅಥವಾ ಹೆಚ್ಚು ದಿನಗಳವರೆಗೆ ಹಾಡು, ಕುಣಿತ, ಎಲ್ಲರು ಸೇರಿಕೊಂಡು ಪಟಾಕಿಗಳು ಹೊಡೆಯುವುದು, ಆಕರ್ಷಕವಾಗಿ ಅಂಗಡಿ ಮುಗ್ಗಟ್ಟುಗಳು ಮತ್ತು ಜಾನುವಾರುಗಳು ಸೇರಿರುತ್ತವೆ. ಅದಕ್ಕೆ ಜನರು ಮರುಳಾಗಿ ಜನರ ಪರಿಷೆ ಸೇರಿದಾಗ ಅದು ಜಾತ್ರೆ ಎಂಬ ನಾಮಕರಣಕ್ಕೆ ಯೋಗ್ಯವಾಯಿತು. ಕೊನೆಗೆ ರೈತರ ಜೀವನಾಡಿಯಂತಿರುವ ದನಗಳು ಸೇರುವಿಕೆ ಮತ್ತು ಕೊಳ್ಳುವಿಕೆಯಲ್ಲಿ ಸಂಘಟನೆಗೊಂಡಾಗ ಆ ಪದದ ಅರ್ಥ ವಿಶಾಲವಾಯಿತು. ಧಾರ್ಮಿಕ ಸ್ವರೂಪದ ಹಬ್ಬ ಕ್ರಮೇಣ ಸಾಂಸ್ಕೃತಿಕ ಮಹತ್ವವನ್ನು ಪಡೆದು ಕೊನೆಗೆ ವಾಣಿಜ್ಯ ಮುಖವನ್ನು ರೂಪಿಸಿಕೊಂಡಾಗ ಜಾತ್ರೆಯಾಯಿತು.

ಹೀಗೆ ರೂಪುಗೊಂಡ ಜಾತ್ರೆ, ಆಚರಣೆಗಳು ಗ್ರಾಮದೈವಗಳ ಅಧ್ಯಯನಕ್ಕೆ ತುಂಬಾ ಸಹಕಾರಿಯಾಗುತ್ತವೆ. ಭಯ, ಭಕ್ತಿಯಿಂದ ನಡೆಯುವ ಆಚರಣೆಗಳು ಜೀವಂತ ಹಾಗೂ ಅರ್ಥಪೂರ್ಣವಾಗಿ ಕಂಡುಬರುತ್ತವೆ. ಬಹುಪಾಲು ಆಚರಣೆಗಳ ಮೂಲ ಆಶಯ ಧಾನ್ಯ ಸಂಪತ್ತು, ಪಶು ಸಂಪತ್ತು ಸಮೃದ್ಧಿಯಾಗಿ, ಜನ, ದನ, ಬೆಳೆಗಳು ರೋಗಮುಕ್ತವಾಗಿರಬೇಕು. ದುಷ್ಟಶಕ್ತಿಗಳಿಂದ ತಮಗೆ ರಕ್ಷಣೆ ದೊರಕಿ, ಕೌಟುಂಬಿಕ ಜೀವನ ಸುಖ ಸಂತೋಷದಿಂದ ತುಂಬಿರಬೇಕೆಂದು ಇಂತಹ ವಾಸ್ತವವಾದ ಆಶಯಗಳನ್ನು ಇಟ್ಟುಕೊಂಡು ಬಹುಪಾಲು ದೈವಗಳ ಆಚರಣೆಗಳು ನಡೆಯುತ್ತಿವೆ.

ಜನಪದ ದೈವಗಳಿಗೆ ಸಂಬಂಧಿಸಿದ ಆಚರಣೆ ಮತ್ತು ಆರಾಧನೆಗಳಲ್ಲಿ ಅನೇಕ ವಿಸ್ಮಯಕಾರಿ ಅಂಶಗಳು ದೊರಕುತ್ತವೆ. ಪ್ರತಿಯೊಂದು ದೇವರಿಗೂ ವರ್ಷಕ್ಕೊಂದು ಹಬ್ಬ ಜರಗುತ್ತದೆ. ಇಡೀ ವರ್ಷದಲ್ಲಿ ನಡೆಯುವ ಸಾಮಾನ್ಯ ಪೂಜೆಯ ಜೊತೆಗೆ ಹಬ್ಬದ ಸಂದರ್ಭದಲ್ಲಿ ವಿಶೇಷ ಆರಾಧನೆಗಳು ಕಂಡುಬರುತ್ತವೆ. ಉದಾಹರಣೆಗೆ ಲಕ್ಷ ದೀಪೋತ್ಸವ, ತೆಪ್ಪೋತ್ಸವ, ಮೆರವಣಿಗೆ ಇತ್ಯಾದಿ. ಈ ಆರಾಧನೆಯ ಭಾಗವಾಗಿ ಅನೇಕ ಆಚರಣೆಗಳನ್ನು ಕಾಣಬಹುದು. ಶಿಷ್ಟ ದೈವಗಳಲ್ಲಿ ಕಂಡುಬರುವಂತೆ ಜನಪದರ ದೈವಗಳಲ್ಲಿ ದಿನನಿತ್ಯ ಪೂಜೆ ನೇಮಗಳು ಕಂಡುಬರುವುದಿಲ್ಲ. ಅಗತ್ಯಕ್ಕೆ ತಕ್ಕಂತೆ ಸ್ತ್ರೀ ದೈವಗಳಿಗೆ ಮಂಗಳವಾರ ಮತ್ತು ಶುಕ್ರವಾರ, ಪುರುಷ ದೈವಗಳಿಗೆ ಶನಿವಾರ, ಸೋಮವಾರ, ಗುರುವಾರ ಪೂಜಾಧಿಕಾರ್ಯಗಳು ನಡೆಯುತ್ತವೆ. ಊರ ಹೊರಗಿನ ದೇವರುಗಳಿಗೆ ಪೂಜೆಗಳು ನಡೆಯುವುದು ಕಡಿಮೆ. ಇದಕ್ಕೆ ಉದಾಹರಣೆ ಬನಶಂಕರಿಯ ಪೆಟ್ಟಿಗೆಗೆ ಶಿವಮೊಗ್ಗಾ ಜಿಲ್ಲೆಯ ಶಿಕಾರಿಪುರದ ಬಂದಳಿಕೆ ಗ್ರಾಮ, ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲೂಕಿನ ಐದು ಗ್ರಾಮಗಳಾದ ನೀತಿಗೇರೆ, ಚಿಕ್ಕಗಂಗೂರು, ಸೋಮಲಾಪುರ, ಜಕ್ಕಲಿ, ಹಿರೇಮಾಡಾಳು ಗ್ರಾಮಗಳು, ಹೊನ್ನಾಳ್ಳಿ ತಾಲೂಕಿನ ಕುಳಗಟ್ಟೆ ಗ್ರಾಮ, ಕೊಡಗಿನ ಮಡಿಕೇರಿ[೧೩] ಮುಂತಾದ ಸ್ಥಳಗಳಲ್ಲಿರುವ ಬನಶಂಕರಿ ಪೆಟ್ಟಿಗೆಗಳಿಗೆ ಪ್ರತಿವರ್ಷ ಪೂಜೆಯನ್ನು ಸಲ್ಲಿಸಲಾಗುತ್ತದೆ.

ಇಲ್ಲಿರುವ ಬನಶಂಕರಿಗೆ ಬಲಿ ಸಂಪ್ರದಾಯ ಆಚರಣೆಗಳು ನಡೆಯುತ್ತವೆ. ಇಂತಹ ಪೆಟ್ಟಿಗೆಯ ಬನಶಂಕರಿಯನ್ನು ಸೀಮೆದೇವತೆ ಎಂದು ಸಹ ಕರೆಯಲಾಗುತ್ತದೆ. ಸಾಮೂಹಿಕ ನೆಲೆಯಲ್ಲಿ ನಡೆಯುವ ಆಚರಣೆಗಳು ಬಹುಪಾಲು ಹಬ್ಬ ಹರಿದಿನಗಳಲ್ಲಿ, ಅಮಾವಾಸ್ಯೆ, ಹುಣ್ಣಿಮೆಯಂತಹ ಸಂದರ್ಭಗಳಲ್ಲಿ ನಡೆಯುತ್ತವೆ. ಪ್ರತಿಯೊಂದು ಆರಾಧನೆ, ಆಚರಣೆ ಕೂಡ ಆಯಾ ಕಾಲದಲ್ಲಿ ಸಂದರ್ಭದ ಹಿನ್ನೆಲೆಯಲ್ಲಿ ಅರ್ಥಪೂರ್ಣತೆಯನ್ನು ಪಡೆದಿವೆ. ಒಂದೊಂದು ಸಂದರ್ಭದಲ್ಲಿ ವಿಶಿಷ್ಟವಾದ ಅರ್ಥಪೂರ್ಣತೆಯನ್ನು ಪಡೆಯುವ ಆಚರಣೆಗಳು ಇನ್ನೊಂದು ಸಂದರ್ಭದಲ್ಲಿ ಹೀನಾಯವಾಗಿ ಕಾಣಬಹುದು. ಹಬ್ಬ ಪ್ರಮುಖವಾಗಿ ಪ್ರತಿ ಜನಪದ ಕುಲದೇವತೆಯ ವಲಯಕ್ಕೆ ಸೀಮಿತವಾಗುವಂತಹದು. ಆದರೆ ಜಾತ್ರೆ ಕುಲದೇವತೆ,

ಗ್ರಾಮದೇವತೆಗಳ ಉತ್ಸವವಾಗಿದ್ದು, ಕೌಟುಂಬಿಕ ಪರಧಿಯನ್ನು ದಾಟಿ ಸಾಮಾಜಿಕ ವಲಯದಲ್ಲಿ ವ್ಯವಹರಿಸುವಂತಹವು.[೧೪] ಎನ್ನುವ ಮಾತು ಅರ್ಥಪೂರ್ಣವೆನಿಸುತ್ತವೆ.

ಪ್ರಮುಖವಾಗಿ ಈ ಆಚರಣೆಗಳು ಆಯಾ ದೈವಗಳನ್ನು ಆಗಾಗ ಜಾಗೃತಾವಸ್ಥೆಗೆ ತರುವ ಪ್ರಯತ್ನಗಳೇ ಆಗಿವೆ. ಅಭಿಷೇಕ, ಎಲೆಪೂಜೆ, ಹೂ ಅಲಂಕಾರ, ಕುಂಕುಮ ಅಲಂಕಾರ ಮುಂತಾದ ಆರಾಧನೆಯ ವಿಧಿ – ವಿಧಾನಗಳು ಮಾಡಲಾಗುತ್ತದೆ. ಆಧುನಿಕ ಸಂದರ್ಭದಲ್ಲಿ ಪ್ರತಿಷ್ಠೆಯ ಪ್ರತೀಕವಾಗಿ ಈ ವಿಧಿ – ವಿಧಾನಗಳು ನಡೆಯುತ್ತವೆ. ಉದಾಹರಣೆಗೆ ಬನಶಂಕರಿಗೆ ಆಗಾಗ ಹೋಮ, ಹವನ, ಪೂಜೆ, ಅಭಿಷೇಕ ನಡೆಯುತ್ತವೆ. ಇಂತಹ ಪೂಜಾಕಾರ್ಯಗಳನ್ನು ಹೆಚ್ಚಾಗಿ ಶ್ರೀಮಂತ ವರ್ಗ, ಬ್ರಾಹ್ಮಣರು ಏರ್ಪಡಿಸುತ್ತಾರೆ. ಸಾಮೂಹಿಕ ನೆಲೆಯಲ್ಲಿ ಆಚರಣೆಗೊಳಪಡುವ ವಿಧಿ – ವಿಧಾಗಳು ಜನರ ಮನಸನ್ನು ಕ್ರಿಯಾಶೀಲವಾಗಿರುವಂತೆ ಮತ್ತು ಮನುಷ್ಯ ಸಂಬಂಧಗಳನ್ನು ಪುನರ್ ಪ್ರತಿಷ್ಠಾಪಿಸುವ ಕೆಲಸವನ್ನು ಮಾಡುವ ಸಂಗತಿಗಳೇ ಆಗಿವೆ.

ಆಚರಣೆಗಳ ಬಗ್ಗೆ ವಿವರಿಸುವಾಗ ಮತಧರ್ಮಗಳಿಗೆ ಸಂಬಂಧಿಸಿದಂತೆ ಅಗೋಚರ ದೈವ ಶಕ್ತಿಗಳ ಪ್ರೀತ್ಯರ್ಥವಾಗಿ ಮಾನವ ನಡೆಸುತ್ತಾ ಬಂದಿರುವ ಮತಾಚಾರಣೆಗಳಿಗೆ, ಕರ್ಮವಿಧಿಗಳಿಗೆ ಆಚರಣೆ ಎಂಬ ಹೆಸರಿದೆ. ಒಂದು ಸಮುದಾಯದ ಜನರು ಪಾರಂಪರಿಕವಾಗಿ ಒಪ್ಪಿಕೊಂಡು ಬಂದಿರುವ ಮನುಷ್ಯನು ಕ್ರಿಯಾವಿನ್ಯಾಸವನ್ನು ಸಂಪ್ರದಾಯ ಎಂದು ಕರೆಯಬಹುದು. ಬನಶಂಕರಿ ಕ್ಷೇತ್ರದಲ್ಲಿ ವಿಶಿಷ್ಟ ಆಚರಣೆಗಳು ಕಂಡುಬರುತ್ತವೆ. ಇಲ್ಲಿ ಮಕ್ಕಳ ಜವಳ ತೆಗೆಸುವುದು, ದೀಡನಮಸ್ಕಾರ, ಉರುಳಿಸೇವೆ, ಹರಕೆ, ಕಾಣಿಕೆಗಳನ್ನು ಸಲ್ಲಿಸುವುದು. ಹೀಗೆ ಅನೇಕ ಆಚರಣೆಗಳು ನಡೆಯುವುದು ಕಂಡುಬರುತ್ತವೆ.

ಗ್ರಾಮದೇವತೆಗಳ ಬಗ್ಗೆ ಅಧ್ಯಯನ ಮಾಡಲು ಆಚರಣೆಗಳೇ ಆಧಾರ. ಹರಕೆಗಳು ಆಚರಣೆಗಳನ್ನು ಪೂಜಿಸುತ್ತಾರೆ. ಆಚರಣೆ ಕಡ್ಡಾಯವಾದರೆ ಹರಕೆಯನ್ನು ಹರಸಿಕೊಂಡವರು ಮಾತ್ರ ಒಳಗೊಳ್ಳುತ್ತವೆ. ಆಚರಣೆ ಸಾಮೂಹಿಕವಾದರೆ ಹರಕೆ ವೈಯಕ್ತಿಕವಾದುದು. ಹರಕೆ ಬಹಳ ಸಲ ಆಚರಣೆ ರೂಪದಲ್ಲೇ ನಡೆಯುತ್ತವೆ.

ಬಾದಾಮಿ ಬನಶಂಕರಿಗೆ ನವರಾತ್ರಿ ಉತ್ಸವ ವಿಶೇಷವಾಗಿ ನಡೆಯುತ್ತವೆ. ಒಂಬತ್ತು ದಿನಗಳ ಕಾಲ ನವಗ್ರಹ, ಕಲಶ ಸ್ಥಾಪನೆ, ದೇವಿ ಪುರಾಣ, ಮಹಾನವಮಿ ದಿನ ಚಂಡಿ ಹವನ, ವಿಜಯದಶಮಿ ದಿನ ಬನ್ನಿ ಉತ್ಸವ, ಕಾರ್ತಿಕ ಮಾಸದಲ್ಲಿ ದೀಪೋತ್ಸವ ಕಾರ್ಯಕ್ರಮಗಳು ನಡೆಯುತ್ತವೆ. ಇದು ಸಾಮಾನ್ಯವಾಗಿ ಎಲ್ಲ ದೇವತೆಗಳಿಗೆ ನಡೆಯುತ್ತವಾದರೂ ಇಲ್ಲಿ ಹೆಚ್ಚಿನ ಜನ ಸಮೂಹ ನೆರೆಯುವುದು.

ಬನಶಂಕರಿಯ ರಥೋತ್ಸವಕ್ಕೆ ನೆರೆಹೊರೆ ರಾಜ್ಯಗಳಿಂದ ಜನರು ಆಗಮಿಸುತ್ತಾರೆ. ಇಲ್ಲಿ ನಡೆಯುವ ಪೂಜಾ ಉತ್ಸವಗಳು, ಎಡೆ ಪದ್ಧತಿ, ಕಲಶ ಸಂಸ್ಕೃತಿಗೆ ಮತ್ತು ಪಶುಪಾಲನಾ

ಸಂಸ್ಕೃತಿಗಳಿಗೆ ಪ್ರತೀಕವಾಗಿದೆ. ಈ ದೇವಿಗೆ ಇಂದಿಗೂ ಮರದಲ್ಲಿ ಹಸಿರು ಬಳೆ, ತೆಂಗಿನಕಾಯಿ, ಬೆಲ್ಲ, ಅಕ್ಕಿ, ಬಾಳೆಹಣ್ಣು, ಉತ್ತತ್ತಿ, ಸೀರೆ, ಕುಪ್ಪಸ ಮುಂತಾದವುಗಳನ್ನು ಸೇರಿಸಿ ಅರ್ಪಿಸುತ್ತಾರೆ. ಹಾಗೂ ಎಲ್ಲ ತರಕಾರಿಗಳನ್ನು ಸೇರಿಸಿ ಪಲ್ಲೇಯನ್ನು ತಯಾರಿಸಿ ದೇವಿಗೆ ನೈವೇಧ್ಯವನ್ನು ಅರ್ಪಿಸುತ್ತಾರೆ. ಈ ಹಿನ್ನೆಲೆಯಲ್ಲಿ ದೇವಿಯು ಸಸ್ಯ ಸಂಬಂಧಿ ದೇವಿ ಎಂಬುದು ಗಮನಾರ್ಹ.

ಜನಪದ ಸಂಸ್ಕೃತಿಗೆ ಆಚರಣೆಯೇ ಬೆನ್ನೆಲುಬು. ಆಚರಣೆಯಿಲ್ಲದೇ ಯಾವ ದೈವದ ಅಸ್ತಿತ್ವವೂ ಇರಲು ಸಾಧ್ಯವಿಲ್ಲ. ಆ ಆಚರಣೆ ನಿರ್ಧಿಷ್ಟ ಕಾಲದಲ್ಲಿ ನಿರ್ಧಿಷ್ಟ ಭಕ್ತಿಯಿಂದಲೇ ಆಗಬೇಕಾದುದು. ದೇವತೆಗೂ, ಸಮಾಜಕ್ಕೂ ಇರುವ ಸಂಬಂಧ ಅಭಿನಯಗೊಳ್ಳುವ ಕ್ರಮದ ವಿವರಗಳೇ ಆಚರಣೆಗಳು. ಸಂಪ್ರದಾಯ ಅಂಗೀಕರಿಸಿದ ಧಾರ್ಮಿಕ ಮತ್ತು ಮಾಂತ್ರಿಕ ಆಚರಣೆಗಳ ಮೊತ್ತವೇ ಆಚರಣೆ. ನಂಬಿಕೆಯು ಆಚರಣೆಯನ್ನು ಮುಂದುವರಿಸಿಕೊಂಡು ಹೋಗುವಂತೆ ಮಾಡುತ್ತದೆ. ಆಚರಣೆ ಹುಟ್ಟುವ ಮುನ್ನ ಅಥವಾ ನಂತರ ಪುರಾಣಗಳು ಹುಟ್ಟಿಕೊಳ್ಳುತ್ತವೆ. ಪುರಾಣಕಥೆ ಮರೆತು ಹೋದ ಸಂದರ್ಭದಲ್ಲಿ ಯಾವುದೇ ಆತಂಕವಿಲ್ಲದೆ ಆಚರಣೆ ಮುಂದುವರೆಯುತ್ತಾ ಹೋಗುವುದನ್ನು ಕಾಣಬಹುದು.[೧೫] ಹೀಗೆ ಆಚರಣೆಗಳು ಮಾನವನ ಮಾನಸಿಕ, ಭೌತಿಕ ಅಗತ್ಯವಾಗಿ ಬೆಳೆದು ಉಳಿದುಕೊಂಡಿವೆ. ಹಾಗೂ ದೇವತೆಗಳ ಪ್ರತಿಷ್ಟೆಯನ್ನು ಹೆಚ್ಚಿಸುವಲ್ಲಿ ಶ್ರೇಷ್ಠ ಪಾತ್ರವಹಿಸುತ್ತವೆ.

ಬನಶಂಕರಿಗೆ ಗ್ರಾಮ್ಯ ಮತ್ತು ಶಿಷ್ಟ ಆಚರಣೆಗಳೆರಡನ್ನು ಮಾಡಲಾಗುವುದು. ಆದ್ದರಿಂದ ಅವೆರಡನ್ನೂ ಇಲ್ಲಿ ವಿವೇಚಿಸುವುದು ಸೂಕ್ತವಾಗಿದೆ. ಈ ದೇವಿಯ ಕುರಿತಾಗಿ ಹಲವು ಆಚರಣೆಗಳಿವೆ. ಆದರೆ ಬಹುಮುಖ್ಯವಾದ ಆಚರಣೆಗಳನ್ನು ಮಾತ್ರ ಇಲ್ಲಿ ವಿವರಿಸಲಾಗಿದೆ.

**ಉರುಳು ಸೇವೆ**

ವೈಯಕ್ತಿಕ, ಕೌಟುಂಬಿಕ ಇಲ್ಲವೆ ಸಾಮಾಜಿಕ ಕಾರಣಗಳಿಂದಾಗಿ ವ್ಯಕ್ತಿ ಕಟ್ಟಿಕೊಂಡ ಹರಿಕೆಯ ಫಲವೇ ಉರುಳು ಸೇವೆ. ಇದು ಗ್ರಾಮ್ಯ ಮತ್ತು ಶಿಷ್ಟ ಆಚರಣೆ ಎರಡರಲ್ಲೂ ನೋಡಬಹುದು. ಹರಿಕೆ ಹೊರುವವರು ಬನಶಂಕರಿ ಗುಡಿಯ ಮುಂಭಾಗದಲ್ಲಿರುವ ಹರಿದ್ರಾತೀರ್ಥದಲ್ಲಿ ಸ್ನಾನವನ್ನು ಮಾಡಿ, ಮಡಿಯಿಂದ ಒದ್ದೆ ಬಟ್ಟೆ ಉಟ್ಟು, ಆ ತೀರ್ಥದಿಂದ ಉರುಳು ಸೇವೆ ಆರಂಭಿಸಿ ದೇವಿಯ ದೇವಾಲಯದೊಳಗಿನ ಪ್ರಾಕಾರದೊಳಗೆ ಸೂತ್ತಲೂ ಉರುಳು ಸೇವೆಯನ್ನು ಮಾಡುತ್ತಾರೆ. ಈ ಸೇವೆಯನ್ನು ಮೂರು ಸುತ್ತು, ಐದು ಸುತ್ತು ಬರುವ ಸಂಕಲ್ಪವನ್ನು ಹೊರುತ್ತಾರೆ. ಹೀಗೆ ಸಂಕಲ್ಪ ಮಾಡಿ ಹರಿಕೆಯನ್ನು ಸಲ್ಲಿಸುವ ಅನೇಕರು ಈ ಉರುಳು ಸೇವೆ ನಡೆಸಿ ನಂತರ ಹೊಸ ಬಟ್ಟೆಯನ್ನು ಉಟ್ಟು ಪೂಜೆ ಮಾಡುವರು. ಇದನ್ನು ಹರಿಕೆ ಹೊತ್ತಾಗ ಇಲ್ಲವೇ ಈಡೇರಿದ ನಂತರ ಮಾಡುತ್ತಾರೆ. ಹೀಗೆ ಮಾಡುವುದರಿಂದ ತಮ್ಮ ಇಷ್ಟಾರ್ಥಗಳು ಈಡೇರುವುದೆಂಬ ನಂಬಿಕೆ ಜನಪದರಲ್ಲಿದೆ.

### ದೀಡನಮಸ್ಕಾರ

ಈ ಆಚರಣೆಯನ್ನು ಕೂಡ ವೈಯಕ್ತಿಕ, ಕೌಟುಂಬಿಕ ಕಾರಣಗಳಿಂದಾಗಿ ಮಾಡಲಾಗುತ್ತದೆ. ಈ ಮೊದಲೇ ವಿವರಿಸಿದ ರೀತಿಯಲ್ಲೇ ಗುಡಿಯ ಮುಂಭಾಗದ ಹೊಂಡದಲ್ಲಿ ಮಿಂದು ಒದ್ದೆ ಬಟ್ಟೆಯಲ್ಲಿಯೇ ಮುಂದೆ ಸಾಗಿ ಕೈಯಲ್ಲಿ ಬೆತ್ತದ ಕೋಲು ಅಥವಾ ದಂಟನ್ನು ಹಿಡಿದುಕೊಳ್ಳಲಾಗುವುದು. ಆ ಕೋಲಿಗೆ ಎಲೆಯನ್ನು ಜೋಡಿಸಲಾಗುತ್ತದೆ. ಈ ಕೋಲನ್ನು ಹಿಡಿದುಕೊಂಡು ಹರಿಕೆ ಒಪ್ಪಿಸುವವರು ಗುಡಿಯ ಸುತ್ತಲೂ ದೀಡನಮಸ್ಕಾರವನ್ನು ಮಾಡುತ್ತಾರೆ. ಈ ಸೇವೆಯನ್ನು ಮೂರು ಅಥವಾ ಐದು ಸುತ್ತು ಮಾಡಲಾಗುತ್ತದೆ. ಸೇವೆಯನ್ನು ಸಲ್ಲಿಸಿದ ವ್ಯಕ್ತಿಯು ಒದ್ದೆ ಬಟ್ಟೆಯನ್ನು ಬಿಟ್ಟು ಹೊಸ ಬಟ್ಟೆಯನ್ನು ತೊಟ್ಟು ದೇವಿಗೆ ಪೂಜೆಯನ್ನು ಸಲ್ಲಿಸುವ ಪದ್ಧತಿಯಿರುವುದನ್ನು ಕಾಣಬಹುದು.

### ಹೂಮುಡಿಸುವುದು

ಚರ್ಮರೋಗ ನಿವಾರಣೆಗಾಗಿ ಪ್ರಾರ್ಥಿಸಿ ಎಲ್ಲ ರೀತಿಯ ಹೂವುಗಳನ್ನು ಒಟ್ಟು ಸೇರಿಸುತ್ತಾರೆ. ಅದರಲ್ಲಿ ಅರಿಸಿಣ, ಕುಂಕುಮ ಕೂಡಿಸಿಕೊಂಡು ಚರ್ಮರೋಗ ಇರುವವರಿಗೆ ದೃಷ್ಟಿ ತೆಗೆದು ನಂತರ ಆ ಹೂವುಗಳನ್ನು ದೇವಿಯ ಗುಡಿಯ ಸುತ್ತಲೂ ಹಾಕುತ್ತಾರೆ. ಈ ರೀತಿ ಮಾಡುವುದರಿಂದ ಚರ್ಮರೋಗ ನಿವಾರಣೆಯಾಗುತ್ತದೆ ಎಂಬ ನಂಬಿಕೆ ಕೂಡ ಇದೆ.

### ಮೀಸಲು ಬುತ್ತಿಯನ್ನು ಅರ್ಪಿಸುವುದು

ದೇವಿಯ ಭಕ್ತರು ತಮ್ಮ ಮನೆಗಳಿಂದ ತಂದ ಮೀಸಲು ಬುತ್ತಿಯಲ್ಲಿನ ಅಲ್ಪ ಭಾಗವನ್ನು ಹರಿದ್ರಾತೀರ್ಥದಲ್ಲಿ ಅರ್ಪಿಸುವರು. ನಂತರ ತಾವು ಸೇವಿಸುವ ಪದ್ಧತಿಯೂ ಇಂದಿಗೂ ರೂಢಿಯಲ್ಲಿರುವುದನ್ನು ಕಾಣಬಹುದು.

### ಕುಮಾರಿಕಾ ಪೂಜೆ

ಪ್ರತಿನಿತ್ಯವೂ ಬನಶಂಕರಿಯ ಗುಡಿಯಲ್ಲಿ ಕುಮಾರಿಕಾ ಪೂಜೆಯನ್ನು ಮಾಡಲಾಗುತ್ತದೆ. ಕುಮಾರಿ ಪೂಜೆ ಎಂದರೆ ಐದು ವರ್ಷದಿಂದ ಎಂಟು ವರ್ಷದೊಳಗಿರುವ ಬಾಲಕಿಗೆ ದೇವಿಗೆ ಸಲ್ಲಿಸುವ ಎಲ್ಲ ವಿಧದ ಪೂಜೆಯನ್ನು ಮಾಡುವುದು ಎಂದರ್ಥ. ದೇವಿಯ ಅರ್ಚಕರು ಕುಮಾರಿ ಪೂಜೆಯನ್ನು ಮಾಡಿದ ಬಾಲಕಿಯ ಪಾದಗಳಿಗೆ ನಮಸ್ಕರಿಸುವ ಪದ್ಧತಿ ಇದೆ. ಈ ಪೂಜಾ ಪದ್ಧತಿಯಲ್ಲಿ ಯಾವುದೇ ವರ್ಗಬೇಧವಿಲ್ಲದ ಪೂಜಾ ವೇಳೆಗೆ ಬಂದಂತಹ ಬಾಲಕಿಯನ್ನು ಪೂಜಿಸುತ್ತಾರೆ. ಕುಮಾರಿ ಪೂಜೆಯನ್ನು ಮಾಡುವುದರಿಂದ ಪ್ರತ್ಯಕ್ಷವಾಗಿ ದೇವಿಗೇ ಸಲ್ಲಿಸಿದ ಪೂಜೆ ಎಂದು ಭಾವಿಸುತ್ತಾರೆ. ಕುಮಾರಿ ಪೂಜೆ ಮಾಡುವುದರ ಹಿನ್ನೆಲೆ ಏನೆಂದರೆ ಬನಶಂಕರಿಯ ಅವತಾರದಲ್ಲಿ ದೇವಿಯು ಕನ್ಯೆಯಾಗಿ ಉಳಿದಿದ್ದರಿಂದ

ದೇವಿಗೆ ಪ್ರತಿನಿತ್ಯವೂ ದೇವಿಯ ಗುಡಿಯಲ್ಲಿ ಕುಮಾರಿ ಪೂಜೆಯನ್ನು ಮಾಡಲಾಗುತ್ತದೆ ಎಂಬುದು ಅರ್ಚಕರ ಅಭಿಪ್ರಾಯವಾಗಿದೆ. ಇದು ಶಿಷ್ಠ ಆಚರಣೆಯಾಗಿರುವುದು ವಿಶೇಷ. ನೇಪಾಳದ ಕಠ್ಮಂಡುವಿನಲ್ಲಿ ಇಂದಿಗೂ ಕುಮಾರಿ ಪೂಜೆ ನಡೆಯುತ್ತಿರುವುದನ್ನು ಇಲ್ಲಿ ಸ್ಮರೀಸಬಹುದು.

**ಎಡೆ ಹಾಕುವುದು**

ಬನದ ಹುಣ್ಣಿಮೆಯ ದಿನ ಅಥವಾ ಹಬ್ಬದ ದಿನದಂದು ದೇವಿಗೆ ಎಡೆ ಹಾಕಿ ಆನಂತರ ಅದನ್ನು ಪ್ರಸಾದವಾಗಿ ಸ್ವೀಕರಿಸುವ ಪದ್ಧತಿ ಇದೆ. ಕೆಲವು ಮನೆಗಳಲ್ಲಿ ಹಾಲು, ಹಣ್ಣು, ಸಿಹಿ ಹೀಗೆ ಸಸ್ಯಹಾರ ಎಡೆ ಮಾಡಿ ಸ್ವೀಕರಿಸುತ್ತಾರೆ. ಉತ್ತರ ಕರ್ನಾಟಕದ ಎಲ್ಲ ಭಾಗಗಳಲ್ಲಿ ಬನಶಂಕರಿಯನ್ನು ಶಿಷ್ಟ ರೂಪದಲ್ಲಿ ಪೂಜಿಸುತ್ತಿರುವುದರಿಂದ ಇಲ್ಲಿ ಸಸ್ಯಹಾರ ಮಾತ್ರ ಎಡೆ ಮಾಡುತ್ತಾರೆ. ಆದರೆ ದಕ್ಷಿಣ ಕರ್ನಾಟಕದ ಅನೇಕ ಭಾಗಗಳಲ್ಲಿ ಮತ್ತು ದಕ್ಷಿಣ ಕನ್ನಡದ ಹಲವು ಪ್ರದೇಶಗಳಲ್ಲಿ ಉದಾಹರಣೆಗೆ ಈಗಾಗಲೇ ತಿಳಿದಿರುವಂತೆ ಶಿವಮೊಗ್ಗಾ ಜಿಲ್ಲೆಯ ಶಿಕಾರಿಪುರ, ಬಂದಳಿಕೆ ಗ್ರಾಮ, ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲೂಕಿನ ಐದು ಗ್ರಾಮಗಳಾದ ನೀತಿಗೆರೆ, ಚಿಕ್ಕಗಂಗೂರು, ಸೋಮಲಾಪುರ, ಜಕ್ಕಲಿ, ಹಿರೇಮಾಡಾಳು ಗ್ರಾಮ, ಹೊನ್ನಾಳಿ ತಾಲೂಕಿನ ಕುಳಗಟ್ಟೆ ಗ್ರಾಮ, ತುಮಕೂರಿನ ಚಿಕ್ಕನಾಯಕನಹಳ್ಳಿಯ ಸಾಸಲ ಗ್ರಾಮ, ಮಡಿಕೇರಿ ಇನ್ನು ಮುಂತಾದ ಪ್ರದೇಶಗಳಲ್ಲಿ ಬನಶಂಕರಿಗೆ ಬಲಿಯನ್ನು ನೀಡುವ ಪದ್ಧತಿಯಿದೆ. ಈ ಭಾಗಗಳಲ್ಲಿ ದೇವಿಗೆ ಮಾಂಸಹಾರವನ್ನು ಎಡೆ ಹಾಕುವ ಆಚರಣೆಯುಂಟು. ಒಟ್ಟಿನಲ್ಲಿ ದೇವರ ಹೆಸರಿನಲ್ಲಿ ಅಡುಗೆ ಮಾಡಿ ದೇವಿಗೆ ನೈವೇಧ್ಯವನ್ನು ಮಾಡಲಾಗುತ್ತದೆ.

**ಹೆಜ್ಜೆ ನಮಸ್ಕಾರ**

ಯಾವುದಾದರೂ ಕಾರಣಕ್ಕೆ ಅಂದರೆ ವೈಯಕ್ತಿಕ, ಕೌಟುಂಬಿಕ ಇಲ್ಲವೇ ಸಾಮೂಹಿಕ ಕಾರಣಕ್ಕೆ ಸಂಕಲ್ಪ ಹೊತ್ತು ನೆರವೇರಿಸುವ ಆಚರಣೆಯೇ ಹೆಜ್ಜೆ ನಮಸ್ಕಾರವೆನ್ನುವರು. ರೋಗಗಳಿಂದ, ಕಷ್ಟ ಕಾರ್ಪಣ್ಯಗಳ ರಕ್ಷಣೆಗಾಗಿ ಅಥವಾ ಮನದ ಯಾವುದೇ ಕೋರಿಕೆಯನ್ನು ನೆರವೇರಿಸುವ ಸಲುವಾಗಿ ಮಾಡುವ ಆಚರಣೆಯೇ ಹೆಜ್ಜೆ ನಮಸ್ಕಾರ. ದೇವಾಲಯದ ಪ್ರಾಂಗಣದ ಅಥವಾ ಗರ್ಭಗುಡಿಯ ಸುತ್ತಲೂ ಪ್ರತಿ ಹೆಜ್ಜೆ ಇಡುವಾಗಲೂ ಬಗ್ಗಿ ನಮಸ್ಕರಿಸುತ್ತಾ ಮೂರು ಅಥವಾ ಒಂಬತ್ತು ಸುತ್ತು ಸುತ್ತಿ ಬರುವ ಮೂಲಕ ಹೆಜ್ಜೆ ನಮಸ್ಕಾರ ಸೇವೆ ಸಲ್ಲಿಸುತ್ತಾರೆ. ಇದು ಶಿಷ್ಟ ಆಚರಣೆಯಾಗಿದೆ.

**ದೀಪಾರತಿ**

ದೀಪಾರತಿಯನ್ನು ಸಾಮಾನ್ಯವಾಗಿ ಹೆಂಗಸರೇ ಬೆಳಗುತ್ತಾ ಬಂದಿದ್ದಾರೆ. ಅದರಲ್ಲೂ ಮನೆಯ ಮಗಳು ದೀಪಗಳನ್ನು ಬೆಳಗಬೇಕೆಂಬ ನಂಬಿಕೆ ಗ್ರಾಮೀಣ ಭಾಗದಲ್ಲಿದೆ. ಮನೆ

ಮಗಳು ಇಲ್ಲದಿದ್ದರೆ ಸೊಸೆ ಅಥವಾ ಮನೆಯ ಹಿರಿಯ ಮುತ್ತೈದೆ ದೀಪಗಳನ್ನು ಬೆಳಗುವುದುಂಟು. ದೇವಿಗೆ ತಂಬಿಟ್ಟಿನಾರತಿ ಮತ್ತು ಬೆಲ್ಲದಾರತಿ ಮಾಡುವ ಆಚರಣೆಯಿದೆ. ಇದನ್ನು ಹೊರತುಪಡಿಸಿ ಬೆಳ್ಳಿದೀಪದಾರತಿ, ಮಣ್ಣಿನ ಹಣತೆಯಾರತಿ, ಏಕಾರತಿ, ಅಲಂಕಾರದ ತಟ್ಟೆಯಾರತಿ, ನಿಂಬೆ ಹಣ್ಣಿನ ದೀಪಾರತಿ ಅಂದರೆ ನಿಂಬೆ ಹಣ್ಣಿನ ಸಿಪ್ಪೆಯ ಭಾಗವನ್ನು ಮೇಲ್ಮುಖಮಾಡಿ ಅದರಲ್ಲಿ ಎಣ್ಣೆ ಹಾಕಿ, ಬತ್ತಿಯನ್ನು ಇಟ್ಟು ದೀಪವನ್ನು ಹಚ್ಚಲಾಗುವುದು. ಅಲ್ಲದೆ ಹರಕೆಯನ್ನು ಹೊತ್ತವರು ಸಕ್ಕರೆಯಲ್ಲಿ ದೇವಿಯ ಗೊಂಬೆಯನ್ನು ತಯಾರಿಸಿ ಅದಕ್ಕೆ ಆರತಿ ಮಾಡುವ ಪದ್ಧತಿಯಿದೆ. ಇದಕ್ಕೆ ಸಕ್ಕರೆಯಾರತಿ ಎನ್ನುವರು. ಈ ಪದ್ಧತಿ ಸಾಮಾನ್ಯವಾಗಿ ಸೀಗಿ ಹುಣ್ಣಿಮೆ, ಗೌರಿ ಹುಣ್ಣಿಮೆ, ನೂಲು ಹುಣ್ಣಿಮೆಯ ದಿನಗಳಲ್ಲಿ ನೋಡಬಹುದು. ಹೀಗೆ ಹದಿನಾರು, ಹದಿನೆಂಟು, ಇಪ್ಪತ್ತೊಂದು, ಮೂವತ್ತೆರಡು ಮುಂತಾದ ಆರತಿ ಪದ್ಧತಿಗಳನ್ನು ಕಾಣಬಹುದು. ಈ ಆಚರಣೆಗಳನ್ನು ಶಿಷ್ಟ ಮತ್ತು ಪರಿಶಿಷ್ಟ ಎರಡು ಪದ್ಧತಿಗಳಲ್ಲಿ ಕಾಣಬಹುದು.

**ಪಲ್ಲಕ್ಕಿ ಸೇವೆ**

ದೇವಿಯ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಕೂರಿಸಿ ಉತ್ಸವ ನಡೆಸಲಾಗುತ್ತದೆ. ಸಾಮಾನ್ಯವಾಗಿ ಪೂರ್ವದಲ್ಲಿ ವಿವಿಧ ಹೂಗಳಿಂದ ಅಲಂಕೃತಗೊಂಡಿರುತ್ತಿದ್ದ ಪಲ್ಲಕ್ಕಿಗಳು ಹೆಚ್ಚಾಗಿ ಕಾಣಸಿಗುತ್ತಿತ್ತು. ಆದರೆ ಇತ್ತೀಚಿಗೆ ಪಲ್ಲಕ್ಕಿಗಳು ವಿವಿಧ ಬಗೆಯ ಅಲಂಕಾರದಿಂದ ಕೂಡಿದ್ದು ಬೇರೆ ಬೇರೆ ಮಾಧ್ಯಮಗಳಲ್ಲಿ, ವಿವಿಧ ವಿನ್ಯಾಸಗಳಲ್ಲಿ ರೂಪುಗೊಳ್ಳುತ್ತಿವೆ. ಪಲ್ಲಕ್ಕಿಯ ಸುತ್ತಲೂ ಜನರ ಸಮೂಹ ನೆರದಿರುತ್ತದೆ. ಬೀದಿಯಲ್ಲಿ ಅಲ್ಲಲ್ಲಿ ತಂಗಿ ಸೇವಾಕರ್ತರಿಂದ ಹಣ್ಣು ಕಾಯಿ ಸೇವೆ ಸ್ವಿಕರಿಸಿ ಹೊರಡುವ ಪಲ್ಲಕ್ಕಿಗಳ ಮುಂದೆ ವಾದ್ಯಗೋಷ್ಟಿಯವರು, ಸಂಗೀತ ವಾದ್ಯಗಳನ್ನು ನುಡಿಸುತ್ತಾ, ಕರಡಿ ಮಜಲು ಮುಂತಾದ ಸಾಂಸ್ಕೃತಿಕ ತಂಡಗಳು ಜೊತೆ ಜೊತೆಗೆ ಭಾಗವಹಿಸಿ ದೇವರ ಸೇವೆ ನಡೆಸಿ ರಂಜಿಸುತ್ತಾರೆ. ರಥೋತ್ಸವದ ಪೂರ್ವದಲ್ಲಿ ಚೊಳಚಗುಡ್ಡದ ಬನಶಂಕರಿ ಗುಡಿಯಲ್ಲಿರುವ ಉತ್ಸವ ಮೂರ್ತಿಯನ್ನು ಬೆಳ್ಳಿಯ ಪಲ್ಲಕ್ಕಿಯಲ್ಲಿಟ್ಟು ಅದನ್ನು ಹೂಗಳಿಂದ ಶೃಂಗರಿಸಿ ಬನಶಂಕರಿ ಕ್ಷೇತ್ರಕ್ಕೆ ತರಲಾಗುತ್ತದೆ. ಪಲ್ಲಕ್ಕಿಯ ಮುಂದೆ ಕರಡಿ ಮಜಲು ತಂಡ ಅವರ ಮುಂದೆ ಪಂಜನ್ನು ಹಿಡಿದಿರುವ ವ್ಯಕ್ತಿಗಳು ಪಲ್ಲಕ್ಕಿಯ ಜೊತೆ ಜೊತೆಗೆ ಸಾಗಿ ಶ್ರೀ ಕ್ಷೇತ್ರಕ್ಕೆ ಬರುವರು. ಹೀಗೆ ಬಂದ ಪಲ್ಲಕ್ಕಿಯನ್ನು ದೇವಿಯ ಅರ್ಚಕ ವರ್ಗವು ಪಲ್ಲಕ್ಕಿಯನ್ನು ಹೊತ್ತವರ ಕಾಲಿಗೆ ನೀರನ್ನು ಹಾಕಿ ಅವರಿಗೆ ನಮಸ್ಕರಿಸಿ ಗುಡಿಯೊಳಗೆ ಬರಮಾಡಿಕೊಳ್ಳುತ್ತಾರೆ. ಹೀಗೆ ಬಂದ ಪಲ್ಲಕ್ಕಿಯು ಗುಡಿಯ ಸುತ್ತಲೂ ಪ್ರದಕ್ಷಿಣೆಯನ್ನು ಹಾಕಿ ನಂತರ ಪಲ್ಲಕ್ಕಿಯಲ್ಲಿದ್ದ ಉತ್ಸವ ಮೂರ್ತಿಯನ್ನು ಗರ್ಭಗೃಹದಲ್ಲಿ ಪ್ರತಿಷ್ಠಾಪಿಸುತ್ತಾರೆ.

ಹಾಗೆಯೇ ದೇವಿಯ ಗುಡಿಯಲ್ಲಿ ಪ್ರತಿ ರಾತ್ರಿ ಎಂಟು ಗಂಟೆಗೆ ಸರಿಯಾಗಿ ದೇವಿಗೆ ನೈವೇಧ್ಯವನ್ನು ಅರ್ಪಿಸಿ, ಮಹಾಮಂಗಳಾರತಿ ಮಾಡಿ ನಂತರ ಜೋಗುಳವನ್ನು

ಹಾಡುತ್ತಾರೆ. ಈ ಸಮಯದಲ್ಲಿ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿಟ್ಟು ಜೋಗುಳ ಪದವನ್ನು ಹಾಡಿ ನಂತರ ಗರ್ಭಗೃಹದ ಬಾಗಿಲನ್ನು ಮುಚ್ಚುತ್ತಾರೆ. ಬಾಗಿಲನ್ನು ಮುಚ್ಚಿದ ನಂತರ ಯಾರಿಗೂ ಗುಡಿಯೊಳಗೆ ಪ್ರವೇಶವಿಲ್ಲ. ಗುಡಿಯ ಬಾಗಿಲನ್ನು ಮರುದಿನ ಬೆಳಗ್ಗೆಯೇ ತೆರೆಯಲಾಗುತ್ತದೆ.

ಬನದ ಹುಣ್ಣಿಮೆಯ ದಿನ ಬೇರೆ ಬೇರೆ ಪ್ರಾಂತ್ಯಗಳಲ್ಲಿರುವ ಬನಶಂಕರಿಯ ಉತ್ಸವ ಮೂರ್ತಿಗಳನ್ನು ಹೊತ್ತ ಪಲ್ಲಕ್ಕಿಗಳನ್ನು ಆ ದಿನದಂದು ಬಾದಾಮಿ ಬನಶಂಕರಿ ಗುಡಿಗೆ ಆಗಮಿಸಿ ಸುತ್ತಲೂ ಪ್ರದಕ್ಷಿಣೆಯನ್ನು ಹಾಕುವ ಪದ್ಧತಿಯಿದೆ. ಈ ರೀತಿ ಮಾಡುವ ಉದ್ದೇಶವೆನೆಂದರೆ ಮೂಲ ಶಕ್ತಿ ಕೇಂದ್ರವಾದ ಬನಶಂಕರಿ ದೇವಿಯ ಕ್ಷೇತ್ರಕ್ಕೆ ತಂದರೆ ತಮ್ಮ ಊರಿನ ದೇವಿ ಶಕ್ತಿ ಹೆಚ್ಚಾಗುತ್ತದೆ ಎಂಬ ನಂಬಿಕೆಯಿದೆ. ಅಲ್ಲದೆ ತಮ್ಮ ಪೂರ್ವಜರು ಮೊದಲಿನಿಂದಲೂ ಇದೇ ರೀತಿ ನಡೆದುಕೊಂಡು ಬಂದಿರುವ ಕಾರಣಕ್ಕಾಗಿ ಇಂತಹ ಆಚರಣೆಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಈ ರೀತಿಯ ಪಲ್ಲಕ್ಕಿಗಳನ್ನು ಬೆಳಗಾವಿ, ಗೋಕಾಕ, ಬಿಜಾಪುರ, ಬಾದಾಮಿ ತಾಲೂಕಿನ ಕೆರೂರು ಅಲ್ಲದೇ ನೆರೆ ರಾಜ್ಯವಾದ ಮಹಾರಾಷ್ಟ್ರದಿಂದಲೂ ಜನರು ತರುವುದನ್ನು ಕಾಣಬಹುದು.

**ಕುಂಕುಮ ಪೂಜೆ**

ಈ ಪೂಜೆಯಲ್ಲಿ ಎರಡು ವಿಧಗಳಿವೆ. ಅದರಲ್ಲೊಂದು ಸಹಸ್ರ (೧೦೦೦) ನಾಮಾಂಕಿತ ಪೂಜೆ ಮತ್ತು ಅಷ್ಟೋಕ್ತಿ (೧೦೮) ನಾಮಾಂಕಿತ ಪೂಜೆ. ಈ ಎರಡು ವಿಧಗಳಲ್ಲಿ ತಮ್ಮ ಹರಕೆಯನ್ನು ತೀರಿಸುತ್ತಾರೆ. ಈ ನಾಮಾಂಕಿತವನ್ನು ಅರ್ಚಕರು ಸ್ಮರಿಸುತ್ತಾರೆ. ಆಗ ಹರಕೆ ಹೊತ್ತ ಭಕ್ತರು ದೇವಿ ಸ್ವರೂಪದ ಮೂರ್ತಿಯ ಮೇಲೆ ಕುಂಕುಮವನ್ನು ಅರ್ಪಿಸುತ್ತಾರೆ. ಈ ಹರಕೆಯನ್ನು ಸಾಮಾನ್ಯವಾಗಿ ಹೆಣ್ಣುಮಕ್ಕಳು ಮಾಡುವುದು ಕಂಡುಬರುತ್ತದೆ.

**ಸೀದಾ ಅಥವಾ ಉಲ್ಪಿ ಕೊಡುವುದು**

ಈ ಹರಕೆಯನ್ನು ಹೊತ್ತ ಭಕ್ತರು ಒಂದು ಹೊಸ ಮರದಲ್ಲಿ ಅಕ್ಕಿ, ಕಡ್ಲೆಬೆಳೆ, ಗೋದಿಹಿಟ್ಟು, ಬೆಲ್ಲ, ಕುಬಸದ ಕಣ, ಬಳೆ ಇತ್ಯಾದಿ ಸಾಮಗ್ರಿಗಳನ್ನಿಟ್ಟು ಅರ್ಚಕರಿಗೆ ಅರ್ಪಿಸುತ್ತಾರೆ. ಬನಶಂಕರಿಗೆ ಪ್ರಿಯವಾದ ನೈವೇಧ್ಯ ಕರಿಗಡಬು. ಅದನ್ನು ಮಡಿಯಿಂದ ಮಾಡಿಕೊಂಡು ಬರುವುದಕ್ಕೆ ಆಗುವುದಿಲ್ಲ. ಆದ್ದರಿಂದ ಅದನ್ನು ಸಿದ್ಧಪಡಿಸಲು ಬೇಕಾದ ಎಲ್ಲ ಸಾಮಗ್ರಿಗಳನ್ನು ಅರ್ಚಕರಿಗೆ ಒಪ್ಪಿಸುತ್ತಾರೆ.

**ಮುಡಿ ಒಪ್ಪಿಸುವುದು**

ಸಾಮಾನ್ಯವಾಗಿ ಮನೆ ದೇವತೆಗೆ ಈ ಮುಡಿ ಒಪ್ಪಿಸುವ ಆಚರಣೆ ನೆರವೇರುತ್ತದೆ. ಈ ಆಚರಣೆ ಮಾಡುವ ಮುನ್ನ ಹುಟ್ಟು ಕೂದಲು ತೆಗೆಸುವ ಎಲ್ಲಾ ಮನೆಯವರು ತಮ್ಮ ತಮ್ಮ ಮನೆಗಳನ್ನು ಶುಚಿಗೊಳಿಸುವುದು ರೂಢಿ. ದೂರದ ಊರುಗಳಿಂದ ತಮ್ಮ

ನೆಂಟರಿಷ್ಟರನ್ನು ಕರೆಸಿ ಮನೆ ದೇವರ ದೇವಾಲಯಕ್ಕೆ ಹೋಗಿ ಅಲ್ಲಿ ಮಕ್ಕಳಿಗೆ ಹುಟ್ಟು ಕೂದಲು ತೆಗೆಯುತ್ತಾರೆ. ನಂತರ ಆ ಮಗುವಿಗೆ ಸ್ನಾನ ಮಾಡಿಸಿ, ಹೊಸ ಬಟ್ಟೆಯನ್ನು ತೊಡಿಸಿ, ದೇವಿಯನ್ನು ಪೂಜಿಸಿ ನಂತರ ತಮ್ಮ ಮನೆಗಳಿಂದ ಅಡಿಗೆ ತಂದು ಅಥವಾ ಅಲ್ಲಿ ಅಡುಗೆ ಮಾಡಿ ಅದನ್ನು ಪ್ರಸಾಧವೆಂದು ಎಲ್ಲರೂ ಸೇವಿಸುವರು. ಈ ಆಚರಣೆಯನ್ನು ಸಾಮಾನ್ಯವಾಗಿ ಬ್ರಾಹ್ಮಣರು, ದೇವಾಂಗ ಸಮಾಜದವರು ಮತ್ತು ಗಾಣಿಗರು, ಅಂಬಿಗರು ಮಾಡುವುದುಂಟು. ಹೀಗೆ ಮುಡಿ ಇಲ್ಲವೆ ತಲೆಗೂದಲನ್ನು ಒಪ್ಪಿಸುವುದು ಅನೇಕ ಶತಮಾನಗಳಿಂದ ಆಚರಣೆಯಲ್ಲಿದೆ. ಇದೊಂದು ಜಾನಪದ ಧಾರ್ಮಿಕ ಆಚರಣೆಗಳಾಗಿರುವ ಇವು ಭಕ್ತರ ಸಮರ್ಪಣೆ ಇಲ್ಲವೆ ಶರಣಾಗತಿ ಅರ್ಥ ಇದೆಯೆಂದು ಸ್ಪಷ್ಟವಾಗುತ್ತದೆ.[೧೬]

**ಬಾದುಬ್ಬೆ ಪರ್ವ**

ದೇವಾಲಯಗಳಲ್ಲಿ ನಡೆಸುವ ಕೆಲವು ವಿಶಿಷ್ಟ ಪೂಜೆಗಳು ಜನರೆಲ್ಲರೂ ತಮ್ಮ ಮನೆಗಳಲ್ಲಿ ಆಚರಿಸುವ ಹಬ್ಬಗಳು ಇವೆ. ಅಂತಹ ಹಬ್ಬಗಳಲ್ಲಿ ಮುಖ್ಯವಾಗಿ ಬಾದುಬ್ಬೆ, ದೀಪಾವಳಿ, ಕಾರಹುಣ್ಣಿಮೆ ಈ ಮೂರು ಹಬ್ಬಗಳು ಇಂದಿಗೂ ಉಳಿದುಕೊಂಡು ಬಂದಿವೆ. ಅವುಗಳಲ್ಲಿ ಬಾದುಬ್ಬೆಯ ಹಬ್ಬವನ್ನು ಇಂದಿಗೂ ಉತ್ತರ ಕರ್ನಾಟಕದ ಭಾಗದಲ್ಲಿ ವೈಶಾಖ ಅಮವಾಸ್ಯೆಯಂದು ಆಚರಿಸುತ್ತಾರೆ. ಈ ಹಬ್ಬದಲ್ಲಿ ಜನರು ತಮ್ಮ ಮನೆಗಳ ದೇವರ ಮನೆಯಲ್ಲಿ ಅಥವಾ ಅನುಕೂಲವಾದ ಸ್ಥಳದಲ್ಲಿ ಒಂದು ಚಿಕ್ಕ ಹಂದರವನ್ನು ಕಟ್ಟುವರು. ಅದನ್ನು ಬೇವಿನ ಸೊಪ್ಪಿನಿಂದ ಅಲಂಕರಿಸುವರು. ನದಿಯಿಂದಾಗಲಿ, ಹೊಲದಿಂದಾಗಲಿ ಐದು ಚಿಕ್ಕ ಕಲ್ಲುಗಳನ್ನು ಆಯ್ದುತಂದು ಅವುಗಳನ್ನು ತೊಳೆದು ಒರೆಸಿ, ಅವುಗಳಿಗೆ ಸುತ್ತಲೂ ಸುಣ್ಣದ ಪಟ್ಟಿಯನ್ನು ಹಚ್ಚಿ, ಹಂದರದೊಳಕ್ಕೆ ರಚಿಸಿದ ಪೀಠದ ಮೇಲೆ ಸಾಲಾಗಿ ಇಡುವರು. ಯಥಾಕ್ರಮ ಮನೆಯ ಯಜಮಾನ ಅವುಗಳನ್ನು ಪೂಜಿಸಿ, ಹೂರಣದ ಹೋಳಿಗೆಯ ನೈವೇದ್ಯ ಮಾಡುವನು. ಈ ನೈವೇದ್ಯವನ್ನು ಬಾದಾಮಿ ನೈವೇದ್ಯ ಎಂದು ಹೇಳುವರು. ಪೂಜೆಯ ನಂತರ ಎಲ್ಲರಿಗೂ ಹಬ್ಬದ ಊಟವಾಗುವುದು. ಇಂತಹ ವಿಶಿಷ್ಟ ಆಚರಣೆ ಬಾದಾಮಿಯ ಪರಿಸರದಲ್ಲಿದೆ. ಈ ಹಬ್ಬದಂದು ಬನಶಂಕರಿ ದೇವಿಗೆ ವಿಶೇಷವಾದ ಪೂಜೆಯಾಗುತ್ತದೆ.[೧೭] ಎಂದು ಹೇಳಬಹುದು.

**ಕ್ಯಾತಪ್ಪನನ್ನು ಕಳಿಸುವುದು**

ಬನಶಂಕರಿ ದೇವಿಯ ಜಾತ್ರೆಗೆ ಹೋಗಿಬಂದ ಯಾತ್ರಿಕರು ಎರಡು ಮೂರು ದಿನಗಳಲ್ಲಿ ಕ್ಯಾತಪ್ಪನನ್ನು ಕಳಿಸುವುದು ಎನ್ನುವ ಆಚರಣೆಯನ್ನು ಮಾಡುತ್ತಾರೆ. ತಾವು ಜಾತ್ರೆಗೆ ಹೋದಾಗ ಚುರುಮರಿ, ಖಾರಾ, ಕರದಂಟು, ಬೆಂಡು, ಬೆತ್ತಾಸು, ಉಂಡಿ, ಕುಂಕುಮ ಇತ್ಯಾದಿ ಸಾಮಗ್ರಿಗಳನ್ನು ಒಂದು ಬಟ್ಟೆಯ ಗಂಟಿನಲ್ಲಿ ಕಟ್ಟಿಸುತ್ತಾರೆ. ಅಥವಾ

ಇಂದಿನ ಆಧುನಿಕ ಪದ್ಧತಿಯಲ್ಲಿ ಚೀಲದಲ್ಲಿ ಹಾಕುವರು. ಇದರ ಜೊತೆಗೆ ತಂದಂಥ ಮಕ್ಕಳ ಆಟಿಕೆಯ ಸಾಮಾನುಗಳು ಮತ್ತು ಇತರೆ ವಸ್ತುಗಳನ್ನು ದೇವರ ಭಾವಚಿತ್ರದ ಮುಂದಿಟ್ಟು ಪೂಜೆ ಮಾಡಿ, ಧೂಪ - ದೀಪಗಳನ್ನು ಅರ್ಪಿಸಿ ನಂತರ ನೈವೇಧ್ಯ ಮಾಡುತ್ತಾರೆ. ಇದನ್ನು ಕ್ಯಾತಪ್ಪ ಆಚರಣೆ ಎನ್ನುವರು. ಕ್ಯಾತಪ್ಪ ಮುಂದಿನ ವರ್ಷವೂ ನಮ್ಮನ್ನು ಜಾತ್ರೆಗೆ ಕರೆಯಲಿಕ್ಕೆ ಬರಬೇಕೆಂದು ಹೇಳಿ ನಮಸ್ಕರಿಸುತ್ತಾರೆ. ಕ್ಯಾತಪ್ಪ (ಭೈರವ) ಎಂದರೆ ಕ್ಷೇತ್ರಪಾಲಕ. ಜಾತ್ರೆಗೆ ಬಂದು ಹೋಗುವ ಯಾತ್ರಿಕರನ್ನು ಸಂರಕ್ಷಿಸಲು ಮತ್ತು ಶ್ರೀಕ್ಷೇತ್ರ ರಕ್ಷಣೆಗಾಗಿ ಕ್ಷೇತ್ರಪಾಲಕನನ್ನು ದೇವಿಯೇ ನೇಮಿಸಿರುವುದನ್ನು ದೇವಿ ಮಹಾತ್ಮೆಯ ಉಲ್ಲೇಖವನ್ನು ಗಮನಿಸಬಹುದಾಗಿದೆ. ಆದ್ದರಿಂದ ಜಾತ್ರೆಗೆ ಬಂದ ಯಾತ್ರಿಕರು ತಮ್ಮನ್ನು ರಕ್ಷಿಸಲೆಂದು ಬಂದ ಕ್ಯಾತಪ್ಪನನ್ನು ಸ್ಮರಿಸಲು ಈ ಆಚರಣೆಯನ್ನು ಇಂದಿಗೂ ನಡೆಸುತ್ತಾ ಬಂದಿದ್ದಾರೆ.

**ಪಲ್ಲೆದ ಹಬ್ಬ**

ಪುಷ್ಯಶುದ್ಧ ಚಥುರ್ದಶಿಯ ದಿನ ಅಂದರೆ ರಥೋತ್ಸವದ ಹಿಂದಿನ ದಿನ ೧೦೮ ಪ್ರಕಾರದ ತರಕಾರಿಗಳಿಂದ ತಯಾರಿಸಿದ ಪಲ್ಲೆಯನ್ನು ದೇವಿಗೆ ನೈವೇದ್ಯವನ್ನು ಮಾಡುತ್ತಾರೆ. ಇದಕ್ಕೆ ಪಲ್ಲೆದ ಹಬ್ಬವೆಂದು ಕರೆಯುತ್ತಾರೆ. ಪ್ರಸ್ತುತ ೧೦೮ ಪ್ರಕಾರದ ಕಾಯಿಪಲ್ಲೆಗಳು ದೊರೆಯದೆಯಿದ್ದ ಕಾರಣಕ್ಕೆ ಸಾಧ್ಯವಾದಷ್ಟು ಸಂಖ್ಯೆಯಲ್ಲಿ ಕಾಯಿಪಲ್ಲೆಗಳನ್ನು ಸಂಗ್ರಹಿಸಿ ಪಲ್ಲೆ ತಯಾರಿಸಿ ನೈವೇದ್ಯ ಮಾಡುವರು. ನಮ್ಮ ನಾಡಿನ ಅನೇಕ ಸ್ತ್ರೀ ದೇವತೆಗಳಿಗೆ ಕೇವಲ ಕಾಯಿಪಲ್ಲೆಯಿಂದಲೇ ಅಲಂಕರಿಸುವುದು, ತರಕಾರಿಯ ಹಾರ ಹಾಕುವುದು, ತರಕಾರಿಗಳನ್ನು ಎಡೆ ಇಡುವ ಪದ್ಧತಿ ಇದೆ. ಬಾದಾಮಿ ಬನಶಂಕರಿಗೆ ಕಾಯಿಪಲ್ಲೆ ಉಡಿಸುವ, ಹಾರ ಹಾಕುವ ಪದ್ಧತಿಯು ನಿಂತುಹೋಗಿ ಅದು ನೈವೇದ್ಯದ ರೂಪದಲ್ಲಿ ಪರಿವರ್ತನೆಗೊಂಡಿರಬಹುದು. ಇದರಲ್ಲಿ ಸಂಸ್ಕೃತಿಕರಣದ ಪ್ರಭಾವವಿದೆ ಎಂದು ಸ್ಪಷ್ಟವಾಗಿದೆ.

ನೂರಾರು ವರ್ಷಗಳ ಹಿಂದೆ ಜಗತ್ತಿನಲ್ಲಿ ಕ್ಷಾಮ, ಬರಗಾಲದಿಂದ ಜನರು ಹಸಿವಿನಿಂದ ಬಳಲುತ್ತಿದ್ದಾಗ ಋಷಿಮುನಿಗಳ ಮತ್ತು ಇತರೆ ಭಕ್ತರ ಪ್ರಾರ್ಥನೆಗೆ ಒಲಿದ ಪಾರ್ವತಿದೇವಿ ಬನಶಂಕರಿಯ ಅವತಾರ ಧಾರಣ ಮಾಡಿದಳು. ದೇವಿಯು ಜನರ ಭವಣೆಯನ್ನು ನೀಗಿಸಲು ತನ್ನ ದೇಹದ ಶಾಖದಿಂದ ಸಸ್ಯ ಸಂಪತನ್ನು ಉತ್ಪತ್ತಿಸಿ ಅವರ ಹಸಿವನ್ನು ತೀರಿಸಿದ್ದಾಳೆ. ಈ ಕಾರಣದಿಂದ ಬನಶಂಕರಿಯನ್ನು ಶಾಖಾಂಭರಿ ಎಂದು ಕರೆದರು. ಇದರ ಕುರುಹಾಗಿ ಇಂದಿಗೂ ಬನಶಂಕರಿಗೆ ಪುಷ್ಯಶುದ್ಧ ಚಥುರ್ದಶಿಯ ದಿನದಂದು ತರಕಾರಿಗಳಿಂದ ತಯಾರಿಸಿದ ಪಲ್ಲೆಯನ್ನು ನೈವೇದ್ಯ ಮಾಡುವ ಪದ್ಧತಿಯು ರೂಢಿಯಲ್ಲಿದೆ. ಈ ಆಚರಣೆಯನ್ನು ಗಮನಿಸಿದರೆ ಸಮೃದ್ಧಿಯ ಹಾಗೂ ಸಸ್ಯ ಸಂಬಂಧಿ ದೇವತೆಯಾಗಿದ್ದಾಳೆ ಎಂದು ಹೇಳಬಹುದು.

**ತೆಪ್ಪದ ಸೇವಾ ಆಚರಣೆ**

ಮಕ್ಕಳಾಗದವರು ದೇವಿಗೆ ಹರಕೆಯನ್ನು ಹೊತ್ತ ನಂತರ ಮಕ್ಕಳಾದರೆ ಅಂತಹ ಮಗುವನ್ನು ತೆಪ್ಪದಲ್ಲಿ ತೇಲಿಬಿಡುವ ಆಚರಣೆಯಿದೆ. ಈ ತೆಪ್ಪವನ್ನು ಬಾಳೆದಿಂಡಿನಿಂದ ತಯಾರಿಸಿರುತ್ತಾರೆ. ಈ ರೀತಿ ತಯಾರಾದ ತೆಪ್ಪದಲ್ಲಿ ಮಗುವನ್ನು ಕೂರಿಸಿ ಹರಿದ್ರಾತೀರ್ಥದ ಒಂದು ದಂಡೆಯಿಂದ ಇನ್ನೊಂದು ದಂಡೆಯವರೆಗೆ ತೆಪ್ಪವನ್ನು ತೇಲಿಬಿಡುವ ಪದ್ಧತಿಯು ಇಂದಿಗೂ ರೂಢಿಯಲ್ಲಿದೆ.

**ಕೃಷಿಗೆ ಸಂಬಂಧಿಸಿದ ಆಚರಣೆಗಳು**

ಉತ್ತರ ಕರ್ನಾಟಕದ ಭಾಗದಲ್ಲಿ ವಿಶೇಷವಾಗಿ ಕೃಷಿಗೆ ಸಂಬಂಧಿಸಿದ ಆಚರಣೆಗಳನ್ನು ಗಮನಿಸಿಬಹುದು. ಈ ಆಚರಣೆಗಳಲ್ಲಿ ಭೂಮಿಯನ್ನು ಮತ್ತು ಬಸವನನ್ನು ಪೂಜಿಸುವಂತಹ ಆಚರಣೆಗಳು ಅಧಿಕವಾಗಿರುತ್ತವೆ. ಅಂತಹ ಆಚರಣೆಗಳಲ್ಲಿ ಮುಖ್ಯವಾಗಿ ಶೀಗಿ ಹುಣ್ಣಿಮೆಯ ದಿನದ ಅರಳೆಲೆ ಬಸವನ, ಮಣ್ಣೆತ್ತಿನ ಅಮವಾಸ್ಯೆಯಂದು ಮಣ್ಣಿನ ಬಸವಣ್ಣನ ಆಚರಣೆ, ಶೀಗಿ ಮತ್ತು ಗೌರಿ ಹುಣ್ಣಿಮೆಗಳಲ್ಲಿ ಭೂತಾಯಿ ಪೂಜೆಯನ್ನು ವಿಶೇಷವಾಗಿ ಕಾಣಬಹುದು. ಇಂತಹ ಆಚರಣೆಗಳು ಇಲ್ಲಿ ಅಧಿಕವಾಗಿ ಜಾರಿಯಲ್ಲಿರುವುದನ್ನು ಗಮನಿಸಬಹುದು. ಬನಶಂಕರಿ ದೇವಿಯು ಇಲ್ಲಿಯ ಆರಾಧ್ಯ ದೇವಿಯಾಗಿರುವುದರಿಂದ ಆಕೆಯನ್ನು ಸಮೃದ್ಧಿ ದೇವತೆಯಂದೆ ಪರಿಗಣಿಸಿದ್ದರಿಂದ ಇಂತಹ ಆಚರಣೆಗಳು ಇಂದಿಗೂ ಜೀವಂತ ಅಸ್ತಿತ್ವವನ್ನು ಕಂಡುಕೊಂಡಿರುವುದನ್ನು ಗಮನಿಸಬಹುದು.

**ಅರಳೆ ಬಸವನ ಆಚರಣೆ**

ಉತ್ತರ ಕರ್ನಾಟಕದ ಹೆಣ್ಣು ಮಕ್ಕಳು ಅರಳೆ ಬಸವನ ಹಬ್ಬವನ್ನು ಆಚರಿಸುತ್ತಾರೆ. ಈ ಭಾಗದಲ್ಲಿ ಇಂತಹದೊಂದು ಹಬ್ಬವು ಕೃಷಿ ಮಹಿಳೆಗೆ ತುಂಬಾ ಪ್ರಮುಖವಾದ ಸಂಪ್ರದಾಯದ ಹಬ್ಬವಾಗಿದೆ. ಭೂಮಿ ತಾಯಿಗೂ, ಬಸವಣ್ಣನಿಗೂ ತಮ್ಮ ಕೃತಜ್ಞತೆಯನ್ನು ಸಲ್ಲಿಸಲು ಉತ್ತರ ಕರ್ನಾಟಕದ ಹೆಣ್ಣುಮಕ್ಕಳು ಅರಳೆ ಬಸವ ಹಬ್ಬವನ್ನು ಮಾಡುವ ಸಂಪ್ರದಾಯ ಈಗಲೂ ಈ ಭಾಗದಲ್ಲಿರುವುದು ವಿಶೇಷ.[೧೮]

ಈ ಆಚರಣೆಯನ್ನು ಶೀಗಿ ಹುಣ್ಣಿಮೆಯ ದಿನ ಮಾಡುತ್ತಾರೆ. ತಮ್ಮ ಹೊಲಗಳ ಮಣ್ಣಿನಿಂದ ಬಸವಣ್ಣನ ಮೂರ್ತಿಯನ್ನು ಮಾಡಿ ಅದನ್ನು ಪುಷ್ಪಗಳಿಂದ, ಕುಂಕುಮದಿಂದ ಅಲಂಕರಿಸಿ ಪೂಜೆಯನ್ನು ಸಲ್ಲಿಸುತ್ತಾರೆ. ನಂತರ ತಮ್ಮ ಮನೆಗಳಿಂದ ಅಡುಗೆಯನ್ನು ತಂದು ಅಥವಾ ಅಲ್ಲಿಯೇ ಅಡುಗೆ ಮಾಡಿ ಹೊಲದಲ್ಲಿ (ಚರಗ ಚಲ್ಲುವುದು) ಚಲ್ಲುತ್ತಾರೆ. ನಂತರ ತಾವು ಸೇವಿಸುತ್ತಾರೆ. ಇದನ್ನು ಚರಗದೂಟ ಎಂದು ಕರೆಯುತ್ತಾರೆ. ಇದೆ ನಂತರ ತಮ್ಮ ಮನೆಗೆ ತೆರಳುವಂತಹ ಸಂಪ್ರದಾಯವಿದೆ.

### ಮಣ್ಣೆತ್ತಿನ ಬಸವಣ್ಣನ ಆಚರಣೆ

ಈ ಆಚರಣೆಯು ಮಣ್ಣೆತ್ತಿನ ಅಮಾವಾಸ್ಯೆಯಂದು ಸಾಮಾನ್ಯವಾಗಿ ಎಲ್ಲ ಹಳ್ಳಿಗಳಲ್ಲಿ ಕಾಣಬಹುದು. ಮಣ್ಣಿನಿಂದ ಮಾಡಿದ ಎತ್ತುಗಳ ಮೂರ್ತಿಶಿಲ್ಪಗಳನ್ನು ಮನೆಯ ಜಗಲಿಯಲ್ಲಿಟ್ಟು ಪೂಜಿಸುವ ಆಚರಣೆ ಸರ್ವೆ ಸಾಮಾನ್ಯವಾಗಿದೆ. ಕುಂಬಾರರು ಮಾಡುವ ಮಣ್ಣಿನ ಕೋಡುಗಳುಳ್ಳ ಜೋಡೆತ್ತುಗಳನ್ನು ತರುತ್ತಾರೆ. ಕುಂಬಾರರು ಮಾಡುವ ಈ ಎತ್ತುಗಳು ಕಲಾವಂತಿಕೆ ವಿಶೇಷವಾಗಿರುವುದು. ಈ ಎತ್ತುಗಳ ಕೋಡುಗಳಿಗೆ ಬಣ್ಣ ಹಚ್ಚಿ, ಕೊರಳಲ್ಲಿ ಗೆಜ್ಜೆ ಮುಂತಾದ ಆಭರಣಗಳನ್ನು ಎತ್ತುಗಳಿಗೆ ಹಾಕಿ ಅಲಂಕಾರ ಮಾಡುತ್ತಾರೆ. ಈ ಆಚರಣೆಯನ್ನು ವಿಶೇಷವಾಗಿ ಪುರುಷರು ಮಾಡುವರು. ಅಲಂಕಾರದ ನಂತರ ಎತ್ತುಗಳಿಗೆ ಪೂಜೆಯನ್ನು ಸಲ್ಲಿಸಲಾಗುತ್ತದೆ. ಮರುದಿನ ಇವುಗಳನ್ನು ಮನೆಯ ಗೂಡುಗಳಲ್ಲಿ ಅಥವಾ ಹೊಲಕ್ಕೆ ತಂದು ಅಲ್ಲಿ ಅವುಗಳಿಗೆ ಪೂಜೆ ಸಲ್ಲಿಸಿ ಅಲ್ಲಿಯೇ ಅವುಗಳನ್ನು ಇಡುತ್ತಾರೆ. ಆ ಸಂದರ್ಭದಲ್ಲಿ ಬನದೂಟ ಮಾಡಿ ಬರುತ್ತಾರೆ. ಒಟ್ಟಾರೆ ಅರಳೆಲೆ ಬಸವ, ಮಣ್ಣೆತ್ತಿನ ಬಸವಣ್ಣ ಇವೆಲ್ಲವೂ ಮಣ್ಣಿನ ಬಸವನ ಮೂರ್ತಿಶಿಲ್ಪದ ಒಂದೇ ಸಂಪ್ರದಾಯದ ಭಿನ್ನ ಭಿನ್ನ ರೂಪಗಳೆಂದು ಹೇಳಬಹುದು.[೧೯]

ಈ ಆಚರಣೆಯಲ್ಲಿ ಬಹು ಮುಖ್ಯವಾಗಿ ಗಮನಿಸಬೇಕಾಗಿರುವುದು ಭೂತಾಯಿಯ ಆರಾಧನೆ. ಹಾಗೂ ಕೃಷಿಗೆ ಅತ್ಯವಶ್ಯಕವಾಗಿರುವ ಬಸವನ ಆರಾಧನೆಯಾಗಿದೆ. ಇವೆರಡನ್ನು ಅವಲೋಕಿಸಿದಾಗ ಈ ಭಾಗದ ಜನರ ಜೀವನದ ಅವಿಭಾಜ್ಯ ಅಂಗವಾಗಿ ಭೂಮಿತಾಯಿಯ ಸ್ಥಾನವನ್ನು ಬನದೇವಿಯು ಪಡೆದುಕೊಂಡಿರುವುದನ್ನು ಗಮನಿಸಬಹುದು.

### ಶೀಗಿ, ಗೌರಿ ಆಚರಣೆ

ಬನಶಂಕರಿಯುನ್ನು ಗೌರಿಯು ಪ್ರತಿರೂಪವೆಂದು ಈ ಆಚರಣೆಯುನ್ನು ಮಾಡುತ್ತಿರುವುದನ್ನು ಕಾಣಬಹುದು. ಅಶ್ವಿನಿ ಶುದ್ಧ ಹುಣ್ಣಿಮೆಯೇ ಶೀಗಿಹುಣ್ಣಿಮೆ. ಈ ಹುಣ್ಣಿಮೆಯಲ್ಲಿ ರೈತರು ಹೊಲದಲ್ಲಿ ಭೂತಾಯಿಗೆ ಪೂಜೆ ಮಾಡಿ ಚರಗಚಲ್ಲುವ ಸಂಪ್ರದಾಯವಿದೆ. ಹೊಲಗಳಲ್ಲಿ ಚರಗ ಚೆಲ್ಲಿದ ಮೇಲೆ ಕೆಲವರು ಶೀಗಿಯನ್ನು ಮಣ್ಣಿನಿಂದ ಮಾಡಿ ಪೂಜಿಸುತ್ತಾರೆ. ಶೀಗಿ ಸಂಸ್ಕೃತದ ಶಿಖಾ ಶಬ್ಧದ ತದ್ಭವವಾಗಿದ್ದು, ಅದು ಶಿಖರ, ಶಿಖ, ಶೀಗಿ ಆಗಿರುವಂತಿದೆ. ಇಲ್ಲಿ ರಚಿಸುವ ಮೂರ್ತಿಶಿಲ್ಪದ ವಿನ್ಯಾಸಗಳು ಶಿಖರದಾಕೃತಿಯಲ್ಲಿಯೇ ರಚನೆಯಾಗಿರುವುದನ್ನು ಕಾಣಬಹುದು.

ಶೀಗಿ ಹುಣ್ಣಿಮೆ ಇನ್ನೂ ಐದು ದಿನವಿದೆಯನ್ನುವಾಗಲೇ ಈ ಶೀಗಿಯನ್ನು ಇಟ್ಟು ಪೂಜೆ ಮಾಡುತ್ತಬರುವ ಸಂಪ್ರದಾಯವಿದೆ. ಹಾಗೆಯೇ ಗೌರಿ ಹುಣ್ಣಿಮೆಯ ದಿನ ಗೌರಿಯ ಆಚರಣೆಯನ್ನು ಮಾಡುತ್ತಾರೆ. ಈ ಆಚರಣೆಯು ಕೂಡ ಶೀಗಿ ಆಚರಣೆಯಂತೆ

ಇರುತ್ತದೆ. ಆದರೆ ಗೌರಿಯ ಆಚರಣೆಯ ಅಲ್ಪಸ್ವಲ್ಪ ವ್ಯತ್ಯಾಸ ವೈವಿಧ್ಯತೆಗಳು ಇವೆ. ಗೌರಿಯ ಪೂಜೆಗಳಲ್ಲಿ ಹಲವು ವಿಧಾನಗಳು ಉಂಟು. ಅಷ್ಟಮಿಯ ಗೌರಿ, ತೊಟ್ಟಿಲಗೌರಿ, ಮಂಗಲಗೌರಿ, ಸಂಪತ್ತುಗೌರಿ, ಗಜಗೌರಿ, ಕುಂಕುಮಗೌರಿ ಹೀಗೆ ಹಲವಾರು ರೀತಿಯ ಗೌರಿ ದೇವಿಯರನ್ನು ಹಳ್ಳಿಯ ಹೆಣ್ಣುಮಕ್ಕಳು ಪೂಜಿಸುವ ಸಂಪ್ರದಾಯ ಕಂಡುಬರುತ್ತದೆ. ಹುಣ್ಣಿಮೆಯು ಐದು ದಿನ ಇರುವಾಗಲೇ ಹೆಣ್ಣುಮಕ್ಕಳು ಗೌರಿಯನ್ನು ಕೂರಿಸಿ ಪೂಜಿಸಿ ಆರತಿಯನ್ನು ಮಾಡುತ್ತಾರೆ. ಹೀಗೆ ಐದು ದಿನಗಳವರೆಗೂ ಮಾಡುತ್ತಾರೆ. ನಂತರ ಗೌರಿಹುಣ್ಣಿಮೆಯ ದಿನದಂದು ಕೆರೆ, ಬಾವಿ, ಹಳ್ಳ, ನದಿಗಳಲ್ಲಿ ಬಿಡುವುದು ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ ಕಂಡುಬರುವ ಸಾಮಾನ್ಯ ದೃಶ್ಯವಾಗಿದೆ. ನಂತರ ತಮ್ಮ ಹೊಲಗಳಲ್ಲಿ ಭೂತಾಯಿ, ರಾಶಿಯ ಪೂಜೆಯನ್ನು ಮಾಡುವ ರೂಢಿಯಿದೆ. ಇದು ಕೂಡ ಸಮೃದ್ಧ ದೇವತೆಯಾದ ಬನಶಂಕರಿಯ ಮತ್ತೊಂದು ಆಚರಣೆಯಾಗಿದೆ.

**ಮೀಸಲಿಡುವುದು**

ಅನಾರೋಗ್ಯದ ಕಾರಣದಿಂದ ದೇವರಿಗೆ ಹರಕೆ ಹೊತ್ತವರು ದೇವರ ಹೆಸರಿನಲ್ಲಿ ಮೀಸಲು ಮಾಡುತ್ತಾರೆ. ಹೀಗೆ ಮೀಸಲಿಡುವುವಾಗ ಮಡಿಯನ್ನು ಅನುಸರಿಸಬೇಕು. ಸಾಮಾನ್ಯವಾಗಿ ಮೀಸಲಿಡುವುದು ಮನೆ ದೇವರಿಗೆ ಮಾತ್ರ. ಯಾವ ದೇವರಿಗೆ ಮೀಸಲಿಡುವ ಹರಕೆ ಹೊತ್ತಿರುತ್ತಾರೋ ಆ ದೇವರನ್ನು ಮನದಲ್ಲಿ ನೆನೆದು ಒಂದು ಬಿಳಿಯ ವಸ್ತ್ರವನ್ನು ತೆಗೆದುಕೊಂಡು ಅದನ್ನು ಒದ್ದೆ ಮಾಡಿ ಅರಿಸಿಣ ಹಚ್ಚಿ ಒಂದು ಇಲ್ಲವೆ ಎರಡು ರೂಪಾಯಿಗಳ ನಾಣ್ಯಗಳನ್ನು ಅದರೊಳಗೆ ಇಟ್ಟು ಮೀಸಲು ಮಾಡುತ್ತಾರೆ. ಹೀಗೆ ಮೀಸಲು ಮಾಡುವುದರಿಂದ ಬಂದ ಅನಾರೋಗ್ಯವನ್ನು ಶೀಘ್ರದಲ್ಲಿ ತಪ್ಪಿಸಬಹುದೆಂಬ ನಂಬುಕೆಯಿದೆ.

**ಅಂಬು ಹಾಕುವುದು**

ಈ ಆಚರಣೆಯನ್ನು ನವರಾತ್ರಿ ಸಂದರ್ಭದಲ್ಲಿ ಬನಶಂಕರಿಯ ಉತ್ಸವ ಮೂರ್ತಿಯ ಹೊತ್ತ ಪಲ್ಲಕ್ಕಿಯು ಶ್ರೀ ಕ್ಷೇತ್ರದಿಂದ ಬಾದಾಮಿಗೆ ಹೋಗುವ ರಸ್ತೆಯ ಎಡ ಭಾಗದಲ್ಲಿರುವ ಬನ್ನಿ ಮರದ ಕೆಳಗೆ ಬಂದು ನಿಲ್ಲುತ್ತದೆ. ಹೀಗೆ ಬಂದ ನಂತರ ಬನ್ನಿ ಮರಕ್ಕೆ ಪೂಜೆಯನ್ನು ಸಲ್ಲಿಸಿ ನಂತರ ಮರಕ್ಕೆ ಖಡ್ಗಗಳಿಂದ ಹೊಡೆಯುತ್ತಾರೆ. ಈ ಆಚರಣೆಯನ್ನು ಅಂಬು ಹಾಕುವ ಆಚರಣೆ ಎನ್ನುವರು. ಬನ್ನಿಯ ಸೊಪ್ಪನ್ನು ತೆಗೆದುಕೊಂಡು ಪಲ್ಲಕ್ಕಿಗೆ ಮುಟ್ಟಿಸಿ ನಂತರ ಬನಶಂಕರಿ ಗುಡಿಯ ಒಳಗೆ ಪ್ರವೇಶ ಮಾಡಲಾಗುತ್ತದೆ.

**ಸಂಕಲ್ಪ**

ಶಿಷ್ಟ ಸಂಪ್ರದಾಯಸ್ಥರು ಹಬ್ಬಗಳು ಹಾಗೂ ಆಚರಣೆಗಳನ್ನು ನೆರವೇರಿಸುವುದು ಸಂಕಲ್ಪವನ್ನು ಹೊತ್ತ ನಂತರವೇ. ಈ ಸಂಕಲ್ಪ ಶಿಷ್ಟ ಆಚರಣೆಯಲ್ಲಿಯೇ ಪ್ರಮುಖ

ಪಾತ್ರವಹಿಸುತ್ತದೆ. ಆಚರಣೆಗಳನ್ನು ನಡೆಸಬಯಸುವ ವ್ಯಕ್ತಿ ಸಂಕಲ್ಪವನ್ನು ಹೊತ್ತು ದೇವರಿಗೆ ಮುಡಿಪನ್ನು ಕಟ್ಟುತ್ತಾರೆ. ಮನದಲ್ಲಿ ಹೊತ್ತ ಈ ಸಂಕಲ್ಪ ಆಚರಣೆಗಳ ಮೂಲ ಬೇರು.

**ರಕ್ಷಾ ಬಂಧನ**

ಸಂಕಲ್ಪವನ್ನು ಮಾಡಿದ ನಂತರ ಆಚರಿಸುವ ಮತ್ತೊಂದು ಆಚರಣೆಯೇ ರಕ್ಷಾ ಬಂಧನ. ಅರ್ಚಕರು ಹಾಗೂ ಪ್ರಮುಖರು ಮಂಗಳ ಸ್ನಾನ ಮಾಡಿ ಮಡಿಯಿಂದ ದೇವರ ಸೇವೆಗೆ ಕಂಕಣವನ್ನು ಕಟ್ಟಿಕೊಳ್ಳುತ್ತಾರೆ. ಅಂದಿನಿಂದ ಶ್ರದ್ಧಾ ಭಕ್ತಿಯಿಂದ ದೇವರ ಸೇವೆಯನ್ನು ಮಾಡಬೇಕು. ಹಾಗೆಯೇ ದೇವರನ್ನು ಸ್ಮರಿಸಿ ಕೈಗೆ ಕೆಂಪುದಾರ, ಕಂಬಳಿದಾರ ಇಲ್ಲವೇ ಕಪ್ಪು ಮಿಶ್ರಿತ ಕೆಂಪುದಾರವನ್ನು ಕಟ್ಟಿಕೊಳ್ಳುತ್ತಾರೆ. ಇದನ್ನು ರಕ್ಷಾಬಂಧನವೆಂದು ಕರೆಯುವರು.

**ಧ್ವಜಾರೋಹಣ**

ದೇವಸ್ಥಾನದ ಗರ್ಭಗುಡಿಯ ಎದುರಿಗೆ ಧ್ವಜಸ್ತಂಭವನ್ನು ಪೂಜಿಸಿದ ನಂತರ ಶಿಷ್ಟ ಸಂಪ್ರದಾಯದೊಳಗೆ ನಡೆಯುವ ಅನೇಕ ರೂಢಿಗಳಿಗೆ ಚಾಲನೆ ನೀಡಲಾಗುತ್ತದೆ. ಜಾತ್ರೆ, ಉತ್ಸವದ ಯಶಸ್ಸಿಗೆ ಇದೆ ಕಾರಣ ಎಂದು ಭಾವಿಸುವುದುಂಟು. ಪ್ರಾರಂಭದಲ್ಲಿ ಮೊದಲಿಗೆ ಈ ಧ್ವಜಸ್ತಂಬಕ್ಕೆ ಅರ್ಚಕರು ಕಂಕಣವನ್ನು ಕಟ್ಟುತ್ತಾರೆ. ಅರಿಸಿಣ, ಕುಂಕುಮವಿಟ್ಟು, ಹೂ, ಹಣ್ಣು ಹಾಗೂ ನವಧಾನ್ಯಗಳಿಂದ ಪೂಜಿಸಲಾಗುತ್ತದೆ. ಜೊತೆಗೆ ಆ ಕಂಬಕ್ಕೆ ಹಾಲು ತುಪ್ಪದಿಂದ ಅಭಿಷೇಕ ಮಾಡುತ್ತಾರೆ. ಈ ಕಂಬದ ತುದಿಗೆ ಕಾವಿ ಬಣ್ಣದ ಧ್ವಜವನ್ನು ಕಟ್ಟಲಾಗುವುದು.

**ಅಂಕುರಾರ್ಪಣ**

ಈ ಆಚರಣೆಯಲ್ಲಿ ದೇವರಿಗೆ ನವಧಾನ್ಯಗಳನ್ನು ಇಟ್ಟು ಪೂಜೆ ಸಲ್ಲಿಸಲಾಗುತ್ತದೆ. ಇಲ್ಲಿ ವಿಷ್ಣು, ಆಂಜನೆಯ, ಗರುಡಾದಿ ದೇವರಿಗೆ ಪೂಜೆ ಸಲ್ಲಿಸಿ ಆಹ್ವಾನೆಯನ್ನು ಮಾಡಿ ಆಚರಣೆಗಳಿಗೆ ಬೇರೆ ಯಾವುದೇ ರೀತಿಯ ತೊಂದರೆಯಾಗದ ಹಾಗೆ ನೋಡಿಕೊಳ್ಳಲು ಪ್ರಾರ್ಥಿಸಲಾಗುತ್ತದೆ.

**ಕಲಶ ಸ್ಥಾಪನೆ**

ಅಂಕುರಾರ್ಪಣ ಮುಗಿದ ನಂತರ ಅದೇ ದಿನವೇ ನೆರವೇರುವ ಮತ್ತೊಂದು ಪ್ರಮುಖ ಆಚರಣೆ ಕಲಶ ಸ್ಥಾಪನೆ. ಇಲ್ಲಿ ನವಗ್ರಹ ಪೂಜೆ ಮಾಡಿ ಅಷ್ಟದಿಕ್ಪಾಲಕರಿಗೆ ಕಲಶವಿಟ್ಟು ಯಾಗಶಾಲೆಯಲ್ಲಿ ಹೋಮ ಮಾಡಲಾಗುತ್ತದೆ. ಹೀಗೆ ಹೋಮ ನಡೆಯುವಾಗ ಗರುಡ ಧ್ವಜಪಟ ಏರಿಸಿ ಪ್ರಮುಖ ದೇವರ ರಥೋತ್ಸವಕ್ಕೆ ಇತರೆ ದೇವತೆಗಳಿಗೆ ಆಹ್ವಾನ ನೀಡಲು ಗರುಡನಿಗೆ ಹೇಳಿ ಕಳಿಸಲಾಗುತ್ತದೆ. ಗರುಡ ಎಲ್ಲಾ ದೇವತೆಗಳಿಗೆ ಆಹ್ವಾನ

ನೀಡುತ್ತಾನೆ ಎಂಬ ನಂಬಿಕೆಯಿದೆ. ಎಲ್ಲಾ ದೇವರುಗಳು ಎಲ್ಲಾ ಆಚರಣೆಗಳಲ್ಲಿ ಒಲಿದುಬಂದು ದೇವಿಯ ಜಾತ್ರೆಯನ್ನು ನಿರ್ವಿಘ್ನವಾಗಿ ನೆರವೇರಿಸಿಕೊಡಬೇಕೆಂಬುದು ಈ ಕಲಶ (ನೀರು ತುಂಬಿದ ಕುಂಭ, ಬಿಂದಿಗೆ, ಕೊಡ) ಸ್ಥಾಪನೆಯ ಉದ್ದೇಶ.

ಹೋಮ ಕುಂಡಕ್ಕೆ ನವಕಲಶಗಳನ್ನು ಇಡಲಾಗುತ್ತದೆ. ಇವು ಮಣ್ಣಿನ ಮಡಿಕೆಗಳಾಗಿದ್ದು, ಅವುಗಳನ್ನು ಕಲಶವೆಂದು ಗುರುತಿಸಲಾಗುವುದು. ಈ ನವಕಲಶಗಳಲ್ಲಿಯೂ ನೀರು ತುಂಬಿರುತ್ತಾರೆ. ಏಲಕ್ಕಿ, ಲವಂಗ, ಪಚ್ಚಕರ್ಪೂರ, ಜಾಕಾಯಿ, ಜಾಪತ್ರೆ, ಕೇಸರಿ ಹೂ, ಕೇಸರಿ ಬಣ್ಣಗಳನ್ನು ಅದರೊಳಗೆ ಹಾಕಲಾಗುತ್ತದೆ. ಇದನ್ನು ತೀರ್ಥ ಪರಿಕರಗಳೆಂದು ಕರೆಯುತ್ತಾರೆ. ಪ್ರಧಾನ ಕಲಶವನ್ನು ಸೀರೆ, ಕುಪ್ಪಸ, ಪಂಚೆ ಹೂವುಗಳಿಂದ ಅಲಂಕರಿಸಲಾಗಿದ್ದು, ಇತರ ಕಲಶಗಳಿಗೆ ಹೂ, ಕುಪ್ಪಸ, ವಸ್ತ್ರಗಳನ್ನು ಇಡಲಾಗುತ್ತದೆ. ಈ ಪ್ರಧಾನ ಕಲಶವನ್ನು ಧ್ವಜಾಅವರೋಹಣದ ದಿನ ವಿಸರ್ಜನೆ ಮಾಡುತ್ತಾರೆ. ೯ ಕಲಶಗಳನ್ನು ಇಡಲಾಗುವ ಈ ಕಲಶ ಶಾಸ್ತ್ರ ಪ್ರಮುಖ ಆಚರಣೆಯಾಗಿದೆ. ಈ ಕಲಶಗಳನ್ನು ಬಹು ಜಾಗರೂಕತೆಯಾಗಿ ಒಂಬತ್ತು ದಿನಗಳವರೆಗೆ ಕಾಯ್ದುಕೊಳ್ಳುತ್ತಾರೆ.

ಇಂತಹ ಆರಣೆಯನ್ನು ಸಾಮಾನ್ಯವಾಗಿ ನವರಾತ್ರಿಯ ಸಂದರ್ಭದಲ್ಲಿ ಮತ್ತು ಬನಶಂಕರಿಯ ಜಾತ್ರೆಯ ಸಂದರ್ಭದಲ್ಲಿ ವಿಶೇಷವಾಗಿ ಮಾಡುವರು. ನವಕಲಶದ ಪಕ್ಕದಲ್ಲಿಯೇ ಮಣ್ಣಿನ ತಟ್ಟೆಗಳಲ್ಲಿ ಮಣ್ಣು ಹಾಕಿ ಅದರಲ್ಲಿ ಗೋಧಿ, ಜೋಳ, ರಾಗಿ, ಸಜ್ಜೆ, ಬತ್ತ ಮುಂತಾದ ಧಾನ್ಯಗಳನ್ನು ಹಾಕಿ ಅವುಗಳಿಗೆ ಒಂಬತ್ತು ದಿನಗಳವೆರೆಗೆ ನೀರನ್ನು ಸಿಂಪಡಿಸಿ ಕಾಳಜಿವಹಿಸಿ ನೋಡಿಕೊಳ್ಳುತ್ತಾರೆ. ಈ ನವ ಮಣ್ಣಿನ ತಟ್ಟೆಗಳಲ್ಲಿ ಹಾಕಿದ ಧಾನ್ಯಗಳು ಸಸಿಗಳಾಗಿ ಬೆಳೆಯುತ್ತವೆ. ಈ ತಟ್ಟೆಗಳಲ್ಲಿ ಯಾವ ಧಾನ್ಯ ಸಮೃದ್ಧವಾಗಿ ಬೇಳೆಯುತ್ತವೆಯೋ ಅದೇ ಬೆಳೆಯು ಈ ಪ್ರದೇಶದಲ್ಲಿ ಆ ವರ್ಷ ಸಮೃದ್ಧವಾದ ಬೆಳೆಯಾಗುತ್ತದೆ ಎಂಬ ನಂಬಿಕೆಯಿದೆ. ಈ ಆಚರಣೆಗಳನ್ನು ಗಮನಿಸಿದರೆ ಬನದ ದೇವಿಯು ಸಸ್ಯ ಸಂಬಂಧಿ ದೇವಿಯಾಗಿರುವುದರಿಂದ ಇಂತಹ ಆಚರಣೆಗಳು ಕಂಡುಬರುತ್ತವೆ.

**ಅಭಿಷೇಕ**

ಶಿಷ್ಟ ದೇವತೆಗಳಿಗೆ ಸಾಮಾನ್ಯವಾಗಿ ನಡೆಸುವ ಆಚರಣೆ ಅಭಿಷೇಕ. ಅಭಿಷೇಕಗಳಲ್ಲಿ ಪ್ರಮುಖವಾಗಿ ಪಂಚಾಮೃತ ಅಭಿಷೇಕ, ಪೂರ್ಣಾಭಿಷೇಕ, ಕ್ಷೀರಾಭಿಷೇಕ ಹೀಗೆ ನಾನಾ ವಿಧಗಳನ್ನು ಕಾಣಬಹುದು. ಹಾಲು, ಮೊಸರು, ತುಪ್ಪ, ಜೇನುತುಪ್ಪ, ಸಕ್ಕರೆ ಹೀಗೆ ಐದು ಪರಿಕರಗಳಿಂದ ನಡೆಸುವ ಅಭಿಷೇಕವೇ ಪಂಚಾಮೃತ ಅಭಿಷೇಕವಾಗಿದೆ. ಈ ಪಂಚಾಮೃತ ಅಭಿಷೇಕದಲ್ಲಿ ಬಳಸುವ ಪರಿಕರಗಳ ಜೊತೆಗೆ ಎಳೆನೀರು, ಹಣ್ಣು, ಚಂದನ, ಅರಿಸಿಣ ಇತ್ಯಾದಿ ಪರಿಕರಗಳನ್ನು ಬಳಸಿ ಮಾಡಿದ ಅಭಿಷೇಕಕ್ಕೆ ಪೂರ್ಣಾಭಿಷೇಕ ಎನ್ನುವರು.

ದೇವಿಗೆ ವಿಶೇಷ ಸಂದರ್ಭಗಳಲ್ಲಿ ಹಾಲು, ಬಾಳೆ ಹಣ್ಣು, ತುಪ್ಪ, ಜೇನುತುಪ್ಪ, ಸಕ್ಕರೆ ಸೇರಿಸಿ ಅಭಿಷೇಕ ಮಾಡುತ್ತಾರೆ ಇದನ್ನು ಕ್ಷೀರಾಭಿಷೇಕವೆನ್ನುವರು.

**ವಾಹನೋತ್ಸವ**

ಬನಶಂಕರಿ ಜಾತ್ರೆಯು ಪ್ರಾರಂಭವಾಗುವ ಒಂಬತ್ತು ದಿನಗಳ ಪೂರ್ವದಿಂದಲೇ ಅನೇಕ ಆಚರಣೆಗಳು ಆರಂಭವಾಗುತ್ತವೆ. ಅಂತಹ ಆಚರಣೆಗಳಲ್ಲಿ ವಾಹನೋತ್ಸವವು ಒಂದು. ದೇವಿಯ ಉತ್ಸವಮೂರ್ತಿಯನ್ನು ಪ್ರತಿನಿತ್ಯವು ಬೇರೆ ಬೇರೆ ವಾಹನದ ಮೇಲೆ ಕೂರಿಸಿ ಮೆರವಣಿಗೆಯನ್ನು ಮಾಡುತ್ತಾರೆ. ಈ ವಾಹನಗಳು ಮರ ಮಾಧ್ಯಮದಲ್ಲಿ ರಚನೆಯಾಗಿವೆ. ಗ್ರಾಮ ದೇವತೆಗಳ ಆಚರಣೆಯಲ್ಲಿ ಸಾಮಾನ್ಯವಾಗಿ ಮೂರ್ತಿ ಮತ್ತು ದೇವಿಯ ವಾಹನಗಳನ್ನು ಮರದಲ್ಲಿಯೇ ಮಾಡುವುದನ್ನು ಕಾಣಬಹುದು. ಆದರೆ ಬನಶಂಕರಿ ಕ್ಷೇತ್ರದಲ್ಲಿ ದೇವಿಯ ವಾಹನಗಳನ್ನು ಮಾತ್ರ ಮರದಲ್ಲಿ ರಚನೆ ಮಾಡಿದ್ದಾರೆ. ಇದು ಪೂರ್ವ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗಬೇಕೆಂಬ ಸಂಪ್ರದಾಯವನ್ನು ಸೂಚಿಸುತ್ತದೆ. ವಾಹನಗಳಲ್ಲಿ ಪ್ರಮುಖವಾಗಿ ಸಿಂಹವಾಹನೋತ್ಸವ, ಮಯೂರವಾಹನೋತ್ಸವ, ಶೇಷವಾಹನೋತ್ಸವ, ನಂದಿವಾಹನೋತ್ಸವ, ಗಜವಾಹನೋತ್ಸವ, ಗರುಡವಾಹನೋತ್ಸವ, ರಥೋತ್ಸವ ಹಾಗೂ ಅಶ್ವವಾಹನೋತ್ಸವಗಳಾಗಿವೆ.

ಪೌಷ್ಯ. ಶು. ಅಷ್ಟಮಿಯ ದಿನ ಸಿಂಹವಾಹನೋತ್ಸವ

ಪೌಷ್ಯ. ಶು. ನವಮಿಯ ದಿನ ಮಯೂರವಾಹನೋತ್ಸವ

ಪೌಷ್ಯ. ಶು. ದಶಮಿಯ ದಿನ ಮತ್ತೊಮ್ಮೆ ಸಿಂಹವಾಹನೋತ್ಸವ

ಪೌಷ್ಯ. ಶು. ಏಕಾದಶಿಯ ದಿನ ಶೇಷವಾಹನೋತ್ಸವ

ಪೌಷ್ಯ. ಶು. ದ್ವಾದಶೀಯಂದು ನಂದಿವಾಹನೋತ್ಸವ

ಪೌಷ್ಯ. ಶು. ತ್ರಯೋದಶೀಯಂದು ಗಜವಾಹನೋತ್ಸವ

ಪೌಷ್ಯ. ಶು. ಚತುರ್ದಶಿಯಂದು ಗರುಡವಾಹನೋತ್ಸವ

ಪೌಷ್ಯ. ಶು. ಪೌರ್ಣಿಮಾ ದಿನದಂದು ರಥೋತ್ಸವ

ಪೌಷ್ಯ. ಕೃ. ಪ್ರತಿಪಾದದಂದು ಅಶ್ವವಾಹನೋತ್ಸವ

ಹೀಗೆ ಒಂಬತ್ತು ದಿನಗಳಲ್ಲೂ ವಿವಿಧ ವಾಹನಗಳಲ್ಲಿ ದೇವಿಯ ಮೆರವಣಿಗೆಯನ್ನು ಕ್ಷೇತ್ರದ ಸುತ್ತಲೂ ಮಾಡುವ ಪದ್ಧತಿಯಿದೆ. ಈ ರೀತಿ ಮೆರವಣಿಗೆ ಹೊರಟ ದೇವಿಯು ಕ್ಷೇತ್ರದ ಅಭಿವೃದ್ಧಿಯನ್ನು ಗಮನಿಸುತ್ತಾಳೆ ಎಂಬ ವಾಡಿಕೆಯಿದೆ.

**ಶಯನೋತ್ಸವ**

ದೇವಾಲಯದಲ್ಲಿ ಪ್ರತಿನಿತ್ಯವೂ ದೇವಿಗೆ ಶಯನೋತ್ಸವವನ್ನು ಮಾಡಲಾಗುತ್ತದೆ. ರಾತ್ರಿ ಎಂಟು ಗಂಟೆಗೆ ಈ ಆಚರಣೆ ನಡೆಯುತ್ತದೆ. ಆದರೆ ಜಾತ್ರೆಯ ಸಮಯದಲ್ಲಿ ರಾತ್ರಿಯ ವೇಳೆ ಎಂಟು ಗಂಟೆಯ ಬದಲಿಗೆ ಹತ್ತು ಅಥವಾ ಹನ್ನೊಂದು ಗಂಟೆಯ ಸಮಯದಲ್ಲಿ ದೇವಿಗೆ ಶಯನೋತ್ಸವವನ್ನು ಮಾಡುತ್ತಾರೆ. ಈ ಆಚರಣೆಯಲ್ಲಿ ವಿಶೇಷವಾಗಿ ಗರ್ಭಗೃಹದಲ್ಲಿ ಹೂಗಳಿಂದ ಅಲಂಕರಿಸಿದ ಪಲ್ಲಕ್ಕಿಯನ್ನು ಸಿದ್ಧಗೊಳಿಸುತ್ತಾರೆ. ಪಲ್ಲಕ್ಕಿಯಲ್ಲಿ ಹಾಸಿಗೆ ಹಾಸಿ, ದಿಂಬಿನ ಮೇಲೆ ದೇವಿಯ ಮೂರ್ತಿಯನ್ನು ಮಲಗಿಸಿ ದೇವಿಗೆ ಜೋಗುಳ ಹಾಡಿದ ನಂತರ ದೇವಾಲಯದ ಬಾಗಿಲನ್ನು ಹಾಕಲಾಗುತ್ತದೆ. ಹೀಗೆ ಶಯನೋತ್ಸವವನ್ನು ನೆರವೇರಿಸಲಾಗುತ್ತದೆ.

**ಸುಪ್ರಭಾತ ಸೇವೆ**

ಸುಪ್ರಭಾತ ಸೇವೆಯಿಂದ ದೇವರಿಗೆ ಬೆಳಗಿನ ಪೂಜೆ ಸಲ್ಲಿಸಲಾಗುವುದು. ಈ ಸೇವೆಯಿಂದ ದೇವಿಯು ಪ್ರಸನ್ನಗೊಳ್ಳುತ್ತಾಳೆ ಎಂಬ ನಂಬಿಕೆಯಿದೆ.

**ಪುಣ್ಯಾರ್ಚನೆ (ಪುಣ್ಯಾಹ)**

ಪುಣ್ಯಾಹದಲ್ಲಿ ಎರಡು ಬಗೆಯನ್ನು ಕಾಣಬಹುದು. ೧. ಶುದ್ಧಿ ಪುಣ್ಯಾಹ ೨. ಕರ್ಮಾಂಗ ಪುಣ್ಯಾಹ. ಶುದ್ಧಿಪುಣ್ಯಾಹವನ್ನು ಸಾಮಾನ್ಯವಾಗಿ ಅಶೌಚದ ಸಂದರ್ಭಗಳಲ್ಲಿ ನಡೆಸಲಾಗುತ್ತದೆ. ಮೈಲಿಗೆ, ಸಾವು ಅಶೌಚದ ಸಂದರ್ಭದಲ್ಲಿ ನಡೆಸುವುದೇ ಶುದ್ಧಿ ಪುಣ್ಯಾಹ. ಕರ್ಮಾಂಗ ಪುಣ್ಯಾಹವನ್ನು ವಿಶೇಷವಾದ ಸಂದರ್ಭಗಳಲ್ಲಿ ನಡೆಸಲಾಗುತ್ತದೆ. ರಥೋತ್ಸವ, ಉಪಾಕಾರ್ಯ ಮುಂತಾದ ಸಂದರ್ಭಗಳಲ್ಲಿ ಆಚರಿಸಲ್ಪಡುವ ಪುಣ್ಯಾಹವಾಚನೆ ಇದಾಗಿದೆ. ಸಾಮಾನ್ಯವಾಗಿ ಮಡಿ, ಮೈಲಿಗೆ, ಹುಟ್ಟು, ಸಾವು ಹಬ್ಬ, ಜಾತ್ರೆ, ಗೃಹಪ್ರವೇಶ ಮುಂತಾದವುಗಳ ಸಂದರ್ಭಗಳಲ್ಲಿ ವಿಶೇಷವಾಗಿ ನಡೆಯುವ ಆಚರಣೆಗಳಾಗಿವೆ. ಪ್ರಮುಖವಾಗಿ ಪುಣ್ಯಾಹವಾಚನೆಗೆ ಬಳಸಲ್ಪಡುವ ಪರಿಕರಗಳೆಂದರೆ ಹಾಲು, ತುಪ್ಪ, ಮೊಸರು, ಗೋಮೂತ್ರ, ಸಗಣಿ ಇತ್ಯಾದಿಗಳು. ಪುಣ್ಯಾಹ, ಪುಣ್ಯಾರ್ಚನೆ ಹೀಗೆ ನಾನಾ ಹೆಸರುಗಳಲ್ಲಿ ಕರೆಯಲ್ಪಡುವ ಪುಣ್ಯಾಹವನ್ನು ಶಿಷ್ಟ ಮತ್ತು ಗ್ರಾಮೀಣ ಆಚರಣೆಗಳೆರಡರಲ್ಲೂ ಕಾಣಬಹುದು. ಶುಭ ಕಾರ್ಯಗಳಲ್ಲಿ ಅಂದರೆ ದೇವರ ಉತ್ಸವ, ಗೃಹಪ್ರವೇಶ, ಮದುವೆ ಇತರೆ ಶುಭ ದಿನಗಳಂದು ಮಾಡುವ ಧಾರ್ಮಿಕ ವಿಧಿ ಇದಾಗಿದೆ. ಹಾಗೆಯೇ ಮಡಿ, ಮೈಲಿಗೆಯಲ್ಲಿ ಇದನ್ನು ಅನುಸರಿಸಲಾಗುತ್ತದೆ.

**ಪೂರ್ಣಾಹುತಿ**

ಧ್ವಜಾ ಅವರೋಹಣಕ್ಕೆ ಮುಂಚಿತವಾಗಿ ನಡೆಯುವ ಆಚರಣೆ 'ಪೂರ್ಣಾಹುತಿ'. ದೇವರ ಕಾರ್ಯಕ್ಕೆ ಕಂಕಣ ಕಟ್ಟಿದವರು ವಾದ್ಯಗಳ ಸಹಿತ ದೇವಾಲಯದ ಮುಂಭಾಗದಲ್ಲಿ ನೆರೆದು ಕಂಕಣ ಬಿಚ್ಚುತ್ತಾರೆ. ಮೊದಲು ಧ್ವಜಕಂಬಕ್ಕೆ ಪೂಜೆ ಮಾಡುತ್ತಾರೆ. ಅರಿಸಿಣವನ್ನು

ಪೂರ್ಣಾಹುತಿಗೆ ಬಳಸಲಾಗುತ್ತದೆ. ಕೆಂಪು – ಹಳದಿ ಈ ಎರಡು ಬಗೆಯ ವಸ್ತುಗಳೊಂದಿಗೆ ಎಲೆ, ಅಡಿಕೆ, ಹೂ, ಒಣಕೊಬ್ಬರಿ, ಕರ್ಜೂರ, ತುಪ್ಪ, ಬಾದಾಮಿ, ಕಲ್ಲುಸಕ್ಕರೆ ಹೀಗೆ ಒಂಬತ್ತು ಬಗೆಯ ಪದಾರ್ಥಗಳನ್ನು ಪೂರ್ಣಾಹುತಿಯ ಕುಂಡದಲ್ಲಿ ಅಂದರೆ ಹೋಮ ಕುಂಡದಲ್ಲಿ ಹಾಕಲಾಗುತ್ತದೆ. ಅನ್ನವನ್ನು ಪ್ರಸಾದವಾಗಿ ನೀಡಲಾಗುತ್ತದೆ. ಹೀಗೆ ದೇವಿಯ ಆಚರಣೆ ಪೂರ್ಣಹುತಿಯಿಂದ ವಿಧಿವತ್ತಾಗಿ ಪೂರ್ಣಗೊಳ್ಳುತ್ತದೆ.

**ಹೋಮ**

ದುಷ್ಟ ಶಕ್ತಿಗಳ ನಿಗ್ರಹಕ್ಕೆ ಪ್ರಮುಖವಾಗಿ ದೇವಿಯ ದೇವಾಲಯದಲ್ಲಿ ನೆರವೇರುವ ಆಚರಣೆಯೇ ಹೋಮ ಆಚರಣೆಯಾಗಿದೆ. ಈ ಹೋಮಗಳನ್ನು ನವರಾತ್ರಿ, ಜಾತ್ರೆಯಂತಹ ವಿಶೇಷ ಸಂದರ್ಭಗಳಲ್ಲಿ ಮಾಡಲಾಗುವುದು. ಹೋಮಗಳಲ್ಲಿ ಗಣಪತಿ ಹೋಮ, ನವಚಂಡಿ ಹೋಮ, ನವಗ್ರಹಶಾಂತಿ ಹೋಮ, ವಾರಾಹಿ ಹೋಮ, ಅನ್ನಪೂರ್ಣಾಂಬಾ ಹೋಮ, ರೇಣುಕಾಂಬಾ ಹೋಮ, ರಾಜಶಾಮಲಾಂಬಾ ಹೋಮ, ಶ್ರೀವನದುರ್ಗಾ ಹೋಮ ಹೀಗೆ ನಾನಾ ಬಗೆಯ ಹೋಮಗಳಿವೆ. ಹೀಗೆ ಹೋಮಗಳಿಗೆ 'ಪಂಚ ಕಜ್ಜಾಯ' ಕರ್ಪೂರ, ಒಣಕೊಬ್ಬರಿ, ಚಂದನ, ಎಕ್ಕೆ ಗಿಡದ ಕಟ್ಟಿಗೆ, ತುಪ್ಪ, ರಾಗಿ, ಭತ್ತ, ಅವಲಕ್ಕಿ, ಕರ್ಜೂರ, ಬಾದಾಮಿ, ಕಲ್ಲುಸಕ್ಕರೆ ಇತರೆ ಹವನ ಸಾಮಗ್ರಿಗಳನ್ನು ಬಳಸುತ್ತಾರೆ.

ನವಗ್ರಹ ಶಾಂತಿಯನ್ನು ಸೂರ್ಯ ಮಂಡಲಶಾಂತಿ ಎಂದು ಕರೆಯುತ್ತಾರೆ. ನವಗ್ರಹಗಳಿಗೆ ನವಧಾನ್ಯಗಳನ್ನು ಕೆಂಪು ವಸ್ತ್ರದಲ್ಲಿ ಇಡಲಾಗುತ್ತದೆ. ಸೂರ್ಯ ಕೆಂಪು ವರ್ಣದವನಾಗಿದ್ದರಿಂದ ಕೆಂಪು ವಸ್ತ್ರವನ್ನು ಇಡುತ್ತಾರೆ. ರಕ್ತವರ್ಣ ಎಂದೂ ಈತನನ್ನು ಕರೆಯುತ್ತಾರೆ. ನವಗ್ರಹ ಶಾಂತಿಗೆ ಹವನ ಸಾಮಗ್ರಿಯಾಗಿ 'ಪಂಚತ್ವಕ್ ಪಂಚಪಲ್ಲವ'ಗಳೆಂಬ ಐದು ಬಗೆಯ ಚಿಗುರು ಹಾಗೂ ಮರದ ತೊಗಟೆಯನ್ನು ಬಳಸಲಾಗುತ್ತದೆ. ಗೃಹಪ್ರವೇಶದ ಹೋಮದಲ್ಲಿ ಐದು ಬಗೆಯ ಫಲಗಳಿಂದ ನಡೆಸುವ ಫಲಹೋಮ ಪ್ರಮುಖವಾದದ್ದು. ಸಾಮಾನ್ಯವಾಗಿ ಬಾಳೆಹಣ್ಣುಗಳನ್ನು ಈ ಹೋಮಕ್ಕೆ ಬಳಸುವುದು ವಿಶೇಷ.

**ಬಲಿಹರಣ**

ಶ್ರೀಕ್ಷೇತ್ರವನ್ನು ರಕ್ಷಿಸಲು ಅಷ್ಟ ದಿಕ್ಕುಗಳ ದೇವತೆಗಳಿಗೆ ಆಹ್ವಾನವನ್ನು ನೀಡಲಾಗುತ್ತದೆ. ರಥೋತ್ಸವ ಪೂರ್ವದ ಒಂಭತ್ತು ದಿನಗಳವರೆಗೆ ಈ ಆಹ್ವಾನವನ್ನು ಕೋರಲಾಗುವುದು. ಹೀಗೆ ಬಂದ ಅಷ್ಟು ದಿಕ್ಕುಗಳ ದೇವತೆಗಳಿಗೆ ಪ್ರತಿನಿತ್ಯ ಅನ್ನದಲ್ಲಿ ಕುಂಕುಮವನ್ನು ಬೆರೆಸಿ, ಉಂಡೆಯನ್ನು ಮಾಡಿ ಅಷ್ಟ ದಿಕ್ಕುಗಳಲ್ಲಿ ಆ ಅನ್ನದ ಉಂಡೆಯನ್ನಿಟ್ಟು, ಅದರ ಮೇಲೆ ಗರಿಕೆ ಹುಲ್ಲುಕಡ್ಡಿಯಿಂದ ನೀರಿನ ಹನಿಗಳನ್ನು ಹಾಕುತ್ತಾರೆ. ಆ ನೈವೇದ್ಯವನ್ನು ಅಷ್ಟದಿಕ್ಕುಗಳ ದೇವತೆಗಳಿಗೆ ಸ್ವೀಕರಿಸುವಂತೆ ಪ್ರಾರ್ಥನೆಯನ್ನು ಮಾಡುವರು. ಇದಕ್ಕೆ ಬಲಿಹರಣ ಎನ್ನುವರು. ಈ ಆಚರಣೆಯು ಶಿಷ್ಟ ಆಚರಣೆಯಾಗಿದೆ. ಆದರೆ ಪೂರ್ವದಲ್ಲಿ ಅಷ್ಟ ದಿಕ್ಪಾಲಕರಿಗೆ

ಪ್ರಾಣಿಯನ್ನು ಬಲಿ ನೀಡುತ್ತಿರಬಹುದು ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ದೇವಿಯು ಶಿಷ್ಟ ಪರಂಪರೆಗೆ ಒಳಪಟ್ಟ ನಂತರ ಪ್ರಾಣಿ ಬಲಿಯ ಬದಲಿಗೆ ಅನ್ನದಲ್ಲಿ ಕುಂಕುಮವನ್ನು ಬೆರೆಸುವ ಪದ್ಧತಿ ರೂಢಿಗೆ ಬಂದಿರಬಹುದು. ಈ ಆಚರಣೆಯನ್ನು ಗಮನಿಸಿದರೆ, ಹಿಂದಿನ ಬಲಿ ಆಚರಣೆಯನ್ನು ಜೀವಂತಗೊಳಿಸುವ ಪ್ರಯತ್ನವನ್ನು ಶಿಷ್ಟ ಪರಂಪರೆಯವರು ಮಾಡುತ್ತಿರುವುದನ್ನು ಕಾಣಬಹುದಾಗಿದೆ.

**ಧ್ವಜಾ ಅವರೋಹಣ**

ದೇವಿಯ ಜಾತ್ರೆಯಲ್ಲಿ ದೇವರ ಸೇವೆಗೆಂದು ಇತರ ದೇವರುಗಳಿಗೆ ಇತ್ತ ಆಹ್ವಾನವನ್ನು ಮನ್ನಿಸಿ ಬಂದ ಎಲ್ಲಾ ದೇವರುಗಳಿಗೂ ಸ್ವಸ್ಥಾನಕ್ಕೆ ಮರಳಿ ಹೋಗಲು ಧ್ವಜವನ್ನು ಇಳಿಸಲಾಗುತ್ತದೆ. ಧ್ವಜಾರೋಹಣದ ದಿನದಂದು ದೇವರ ಕೈಂಕಾರ್ಯಕ್ಕಾಗಿ ಕಟ್ಟಿದ ಕಂಕಣ ಧ್ವಜಾಅವರೋಹಣದ ದಿನ ಬಿಚ್ಚುತ್ತಾರೆ. ಅಲ್ಲಿಗೆ ದೇವರ ಕೈಂಕಾರ್ಯಗಳೆಲ್ಲವೂ ಮುಗಿಯಿತೆಂದು ಅರ್ಥ. ಧ್ವಜಾ ಅವರೋಹಣವನ್ನು ರಥೋತ್ಸವವು ಮುಗಿದ ನಂತರ ಮಾಡುವ ಆಚರಣೆಯಾಗಿದೆ.

**ಅನ್ನಸಂತರ್ಪಣೆ**

ಬನಶಂಕರಿ ಕ್ಷೇತ್ರದಲ್ಲಿ ಪ್ರತಿನಿತ್ಯ, ಜಾತ್ರೆಯ ಸಮಯದಲ್ಲಿ ಅನ್ನಸಂತರ್ಪಣೆ ಇರುವುದಿಲ್ಲ. ಸಾಮಾನ್ಯವಾಗಿ ಪ್ರತಿ ಹುಣ್ಣಿಮೆಯಂದು (ಬನದ ಪೌರ್ಣಿಮೆಯನ್ನು ಹೊರತುಪಡಿಸಿ) ಅನ್ನಸಂತರ್ಪಣೆಯನ್ನು ನೆರವೇರಿಸಲಾಗುತ್ತದೆ. ದೇವರ ಹೆಸರಿನಲ್ಲಿ ಬಹು ದೊಡ್ಡ ಪ್ರಮಾಣದಲ್ಲಿ ನಡೆಯುವ ಆಚರಣೆಯೇ ಅನ್ನಸಂತರ್ಪಣೆ. ಈ ಸೇವೆಯನ್ನು ದೇವಾಲಯದ ಸಮಿತಿಯವರು ಏರ್ಪಡಿಸುತ್ತಾರೆ. ಸಮಿತಿಗೆ ಭಕ್ತಾದಿಗಳು ತಮ್ಮ ಕೈಲಾದ ಸೇವೆಯನ್ನು ಮಾಡುವರು. ಈ ಸೇವೆ ಹಣ, ಧಾನ್ಯ, ತರಕಾರಿ, ಪಾತ್ರೆ, ಉರುವಲು, ಊಟದ ಎಲೆ, ಬೆಳೆ, ಸಕ್ಕರೆ ಮುಂತಾದ ರೂಪದಲ್ಲಿ ಇರುತ್ತದೆ. ಸಾವಿರಾರು ಭಕ್ತರು ದೇವರ ಪ್ರಸಾದವೆಂದು ಅನ್ನಸಂತರ್ಪಣೆಯಲ್ಲಿ ಭಾಗವಹಿಸುವರು. ಅನ್ನಸಂತರ್ಪಣೆಯಲ್ಲಿ ಯಾವ ಜಾತಿಭೇದಗಳ ಅಂತರವಿಲ್ಲದೆ, ಊರು, ಸೀಮೆ ತಾರತಮ್ಯವಿಲ್ಲದೆ ಪಾಲ್ಗೊಳ್ಳುತ್ತಾರೆ.

ಸಾಮಾನ್ಯವಾಗಿ ಸಸ್ಯಾಹಾರವಾಗಿದ್ದು, ಸಿಹಿ ಹಾಗೂ ಖಾರದ ಖಾದ್ಯಗಳನ್ನು ಒಳಗೊಂಡಿರುತ್ತದೆ. ದೇವರ ಪ್ರಸಾದವೆಂದು ಸ್ವೀಕರಿಸುವ ಇದನ್ನು ಬೆಳಗಿನ ಜಾವದ ಪೂಜೆಯಾಗಿ ಮಹಾಮಂಗಳಾರತಿ ಆದ ನಂತರ ನೆರವೇರಿಸಲಾಗುವುದು. ಸುಮಾರು ಬೆಳಗ್ಗೆ ಹನ್ನೊಂದು ಗಂಟೆಯಿಂದ ಸಂಜೆಯವರೆಗೆ ನೆರವೇರುವ ಈ ಮಹಾಪ್ರಸಾದಕ್ಕೆ ಕಾರ್ಯದರ್ಶಿಗಳು, ಧರ್ಮದರ್ಶಿಗಳು, ದೇವಸ್ಥಾನದ ಇತರೆ ಸದಸ್ಯರು ಭಾಗವಹಿಸುತ್ತಾರೆ. ದೇವರ ಸೇವಾಕ್ರಮಗಳಲ್ಲಿ ಮುಖ್ಯವಾಗಿ ಅನ್ನದಾನ ಸೇವೆ ವಿಶೇಷವಾಗಿದೆ. ಜನತೆಯನ್ನು ಅನ್ನದಿಂದ ಸಂತೃಪ್ತಿಪಡಿಸಿದರೆ ದೇವಿಯು ಸಂಪ್ರೀತಳಾಗುತ್ತಾಳೆಂಬ ನಂಬಿಕೆ ಇಂದಿಗೂ

ಬಲವಾಗಿದೆ. ಅನ್ನ ಪರಬ್ರಹ್ಮ ಸ್ವರೂಪವೆಂಬ ನಂಬುವ ಭಕ್ತಸ್ತೋಮ ಅನ್ನದಾನವನ್ನು ಶ್ರೇಷ್ಠದಾನವೆಂದು ಬಗೆದು ಈ ಆಚರಣೆಯನ್ನು ಜೀವಂತವಾಗಿಸಿದೆ.

**ಜಾತ್ರೆ**

ಬನಶಂಕರಿಯ ಜಾತ್ರೆಯಂಥ ವೈಭವಪೂರ್ಣವಾದ ಆಕರ್ಷಕವಾಗಿ ನಡೆಯುವ ಜಾತ್ರೆ ಕರ್ನಾಟಕದಲ್ಲಿ ಇನ್ನೊಂದಿಲ್ಲ ಎಂಬುದು ಭಕ್ತ ಪರಿವಾರದ ನಂಬಿಕೆ. ನಮ್ಮ ನಾಡಿನಲ್ಲಿ ಖ್ಯಾತವೆತ್ತ ಈ ಜಾತ್ರೆಯ ವಿಧಿ – ವಿಧಾನಗಳನ್ನು ಸೂಕ್ಷ್ಮವಾಗಿ ಪರಿಭಾವಿಸಿದಲ್ಲಿ, ಬನಶಂಕರಿಯ ಆರಾಧನೆಯ ಹಿನ್ನೆಲೆಯಲ್ಲಿ ಅಡಕವಾಗಿರುವ ಜಾನಪದ ಮನೋಧರ್ಮದ ಗಡಿರೇಖೆಗಳನ್ನು ಗುರುತಿಸಲು ಸುಲಭವಾಗುವುದು.

ಜಾತ್ರೆಗಳು ಸಾಮಾನ್ಯವಾಗಿ ಶಿಷ್ಟ ಮತ್ತು ಜನಪದ ಸಂಪ್ರದಾಯ ಎರಡರಲ್ಲೂ ಪರಸ್ಪರ ಪೂರಕವಾಗಿ ಕಂಡುಬರುವುದಲ್ಲದೇ ತನ್ನದೇ ಆದ ನೆಲೆಗಳಲ್ಲಿ ಅವು ಅರ್ಥಪೂರ್ಣವೂ, ವಿಶಿಷ್ಟವೂ ಆಗಿದೆ. ಹಿಂದೆ ಜನಪದ ನಂಬಿಕೆಗಳಿಂದ ಹಾಗೂ ಸಂಪ್ರದಾಯಗಳಿಂದ ಗುರುತಿಸಿಕೊಂಡ ಆಚರಣೆಗಳು ಇತ್ತೀಚೆಗೆ ಸಮಾಜ ಬದಲಾದಂತೆಲ್ಲ ಕಾಲದಿಂದ ಕಾಲಕ್ಕೆ ಮತ್ತಷ್ಟು ವಿಭಿನ್ನ ರೀತಿಯಲ್ಲಿ ಕ್ರಿಯಾಶೀಲವಾಗುತ್ತಿದೆ. ಹಾಗೂ ಶಿಷ್ಟ ಕಲ್ಪನೆಗೆ ಒಳಗಾಗುತ್ತಿದೆ. ಆದರೆ ಮೊದಲ ವೈಭವ, ಮೂಲ ನಿಲುವು ಹಾಗೂ ನಂಬಿಕೆಗಳನ್ನು ಕಳೆದುಕೊಳ್ಳುತ್ತಾ ಬರುತ್ತಿರುವುದು ವಿಪರ್ಯಾಸ. ಜಾತ್ರೆ ಎಂದರೆ ಒಂದು ನಿರ್ದಿಷ್ಟ ಪ್ರದೇಶದಲ್ಲಿ, ನಿಗದಿತ ವೇಳೆಯಲ್ಲಿ ಜಾತಿ, ಮತ, ಬೇಧ ಎನ್ನದೇ ಜನರಿಂದ ನೆರೆದ ವ್ಯಾಪಾರ, ವ್ಯವಹಾರಗಳಿಂದ ಕೂಡಿದ, ದೇವರ ಧಾರ್ಮಿಕ ವಿಧಿ – ವಿಧಾನಗಳನ್ನು ಒಳಗೊಂಡ ಒಂದು ಸಂಕೀರ್ಣ ಚಟುವಟಿಕೆ. ಸಾಮಾನ್ಯವಾಗಿ ಜಾತ್ರೆಗಳು, ಜನಪದ ಮೌಲ್ಯಗಳನ್ನು ಜೀವಂತವಾಗಿರಿಸಿಕೊಂಡಿರುವ ಸಾಮಾಜಿಕ ಚಟುವಟಿಕೆಗಳಾಗಿ ಸಕ್ರಿಯವಾಗಿ ಇರುವುದಲ್ಲದೆ, ದೈವಾರಾಧನೆಯ ಜೊತೆ ಜೊತೆಗೆ ಮನರಂಜನೆಯನ್ನೂ ದೊರಕಿಸಿಕೊಡುವ ಸಾಧನಗಳಾಗಿ ಇಂದಿಗೂ ಜೀವಂತಿಕೆಯಿಂದ ಕೂಡಿವೆ.

ಜಾತ್ರೆಯ ಮೂಲ ಉದ್ದೇಶ ಸಮಷ್ಟಿಯ ಹಿತ, ವೈವಿಧ್ಯತೆಯಲ್ಲಿ ಏಕತೆ ಸೃಷ್ಟಿಸುವುದು. ಅನಾದಿಕಾಲದಿಂದಲೂ ಮಾನವನ ಲೌಕಿಕ ಹಾಗೂ ಧಾರ್ಮಿಕ ಬದುಕಿನಲ್ಲಿ ಒಂದು ಬಗೆಯ ಸಾಮರಸ್ಯವಿದೆ. ಈ ಸಾಮರಸ್ಯವನ್ನು ಜಾತ್ರೆಯಲ್ಲೂ ಕಾಣಬಹುದು. ಜಾತ್ರೆಯ ಭಿನ್ನ ಗುಣಸ್ವಭಾವ, ಅಭಿರುಚಿ, ಅಂತಸ್ತು, ವಯೋಮಾನಗಳ ಜನರಲ್ಲಿ ಒಂದೆಡೆ ಕರೆಯಲು ಅವಕಾಶ ಕಲ್ಪಿಸಿ, ಅವರವರ ಇಚ್ಛೆಯನ್ನು ತಣಿಸುವ ಹವಣಿಕೆಯಿಂದ ನಿರ್ಮಿಸಿದ ರಸರಂಗವಾಗಿದೆ[೨೦] ಎಂಬ ಅಭಿಪ್ರಾಯ ಸೂಕ್ತವಾದುದೆಂದೆನಿಸುತ್ತದೆ.

ಯಾತ್ರಾ, ಯಾತ್ರೆ, ಜಾತ್ರೆ, ಪರಿಸೆ, ಪರಿಷ ಮುಂತಾದ ಹೆಸರುಗಳಿಂದ ಗುರುತಿಸಲ್ಪಡುವ ಜಾತ್ರೆ ಬಹಳ ಸಂಕೀರ್ಣ ಸ್ವರೂಪವನ್ನು ಒಳಗೊಂಡಿದೆ. ಅಲ್ಲದೆ ತೀರ್ಥ ಕ್ಷೇತ್ರ ಪ್ರವಾಸ,

ಹಬ್ಬ, ತೇರು, ಮೆರವಣಿಗೆ ಎಂಬ ನಾಮಾರ್ಥಗಳನ್ನು ಒಳಗೊಂಡಿರುವ ಜಾತ್ರೆ, ಬೇರೆ-ಬೇರೆ ಸ್ಥಳಗಳಿಂದ ಯಾತ್ರಾರ್ಥಿಗಳನ್ನು ಆಕರ್ಷಿಸುವ ಊರಹಬ್ಬ ಅಥವಾ ನಾಡಹಬ್ಬ ಹೀಗೆ ಜಾತ್ರೆ ಮತ್ತು ಹಬ್ಬಗಳು ಹಿಂದಿನಿಂದ ಬೆಸೆದುಕೊಂಡು ಬಂದಿವೆ. ಜಾತ್ರೆ ನಡೆಯುವಾಗಲೆಲ್ಲ ಹಬ್ಬವಿರುವುದು ಸಾಮಾನ್ಯ. ಆದರೆ ಹಬ್ಬ ನಡೆಯುವಾಗಲೆಲ್ಲ ಜಾತ್ರೆ ಇರಲೇಬೇಕೆಂದಿಲ್ಲ. ಕೆಲವೊಮ್ಮೆ ಹಬ್ಬವಿಲ್ಲದೆಯೂ ಜಾತ್ರೆ ನಡೆಯುವುದುಂಟು.

ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ ಹಾಗೂ ಔದ್ಯೋಗಿಕ ಸಂಬಂಧಗಳನ್ನು ಉತ್ತಮಗೊಳಿಸುವ ಪ್ರಮುಖ ಸಾಧನವಾಗಿ ಜಾತ್ರೆ ಇತ್ತೀಚಿನ ದಿನಗಳಲ್ಲಿ ರೂಢಿಯಲ್ಲಿದೆ. ಹಿಂದೆ ದೇವರ ಜಾತ್ರೆಗಳನ್ನು ಕಾಣುತ್ತಿದ್ದ ಜನಪದರು ಇತ್ತೀಚಿಗೆ ಜಾನುವಾರು ಜಾತ್ರೆ, ವಸ್ತು ಪ್ರದರ್ಶನ ಜಾತ್ರೆ, ಮೋಜಿನ ಜಾತ್ರೆ ಇತ್ಯಾದಿಗಳನ್ನು ಕಾಣುತ್ತಲಿರುವುದೇ ಇದಕ್ಕೆ ಸಾಕ್ಷಿಯಾಗಿದೆ. ಹಿಂದೆ ಸಾಮಾಜಿಕ ಆಸಕ್ತಿ, ಭಕ್ತಿಯ ಕಾರಣಕ್ಕೆ ವರ್ಷಕ್ಕೊಮ್ಮೆ ಆಚರಿಸಲ್ಪಡುತ್ತಿದ್ದ ಜಾತ್ರೆಗಳು ಇದ್ದವು. ಆದರೆ ಇತ್ತೀಚೆಗೆ ವರ್ಷದ ಪ್ರಾರಂಭದಿಂದ ಮೊದಲುಗೊಂಡು ವರ್ಷ್ಯಾಂತದವರೆಗೂ ನಡೆಯುವುದನ್ನು ಕಾಣಬಹುದು.

ಈ ಹಿನ್ನೆಲೆಯಲ್ಲಿ ಪ್ರಸ್ತುತ ಜಾತ್ರೆಗಳನ್ನು ಕ್ಷೇತ್ರಕಾರ್ಯದ ಮೂಲಕ ಅಧ್ಯಯನ ಮಾಡುವಾಗ ಅನೇಕ ಬದಲಾವಣೆಗಳಿಗೆ ಹೊಂದಿಕ್ಕೊಳತ್ತಿರುವ ಸಂಪ್ರದಾಯ, ನಂಬಿಕೆ, ಪೂಜೆ, ಪುರಸ್ಕಾರ, ರೀತಿ – ನೀತಿಗಳ ಪದ್ಧತಿಗಳಲ್ಲಿ ಆಧುನಿಕತೆಯ ಅಬ್ಬರದಿಂದ ತತ್ತರಿಸುವುದನ್ನು ಪ್ರತ್ಯಕ್ಷವಾಗಿ ಕಾಣಬಹುದು. ಆಧುನಿಕರಣವೆಂಬ ಭೂತವು ಬಿರುಸಾಗಿ ಗ್ರಾಮಾಂತರ ಪ್ರದೇಶಗಳಿಗೆ ಪ್ರವೇಶಿಸುತ್ತಿದ್ದರೂ ಅವರಲ್ಲಿ ಸುಪ್ತವಾಗಿರುವ ಪ್ರಾಚೀನ ಪರಂಪರೆಗಳು, ಪ್ರಗತಿಪರ ಅಭಿವೃದ್ಧಿಯ ದಾರಿಯ ಹುಡುಕಾಟದಲ್ಲಿದ್ದರೂ, ತನ್ನತನವನ್ನು ಬಿಟ್ಟುಕೊಟ್ಟಿಲ್ಲ. ಅದರ ಆಚಾರ, ವ್ಯವಹಾರ, ಮೂಢನಂಬಿಕೆಗಳು, ಶ್ರದ್ಧೆ, ಸ್ನೇಹ–ವಿಶ್ವಾಸ, ಸಂಬಂಧಗಳು, ಕಂದಾಚಾರ ಅಳಿದುಹೊಗಿಲ್ಲವಿರುವುದನ್ನು ಗಮನಿಸಬಹುದು. ಆದರೆ ಎಷ್ಟೇ ಆಧುನೀಕರಣದ ಪ್ರಭಾವ ಇದ್ದರೂ ಕೂಡ ಈ ಪರಿಸರದಲ್ಲಿ ಬದುಕಿರುವ ಜನರು ಆ ನೆಲದ ಸಂಸ್ಕೃತಿಯಲ್ಲಿ ತಮ್ಮ ನೆಲೆಯನ್ನು ರೂಪಿಸಿಕೊಂಡಿದ್ದಾರೆ. ಇವರ ಅವಿನಾಭವ ಸಂಬಂಧಗಳ ಕೊಂಡಿ ಅವರ ಪದ್ಧತಿ, ನೀತಿ, ಭಾವನೆಗಳನ್ನು ಆ ಮಣ್ಣಿನ ಪ್ರೀತಿಯಿಂದ ಬೇರೆ ಮಾಡಲು ಸಾಧ್ಯವಿಲ್ಲ. ಏಕೆಂದರೆ ಅವರ ಮನದಾಳದಲ್ಲಿ ಹುದುಗಿದ ಭಾವನೆಗಳು ಗಟ್ಟಿಯಾಗಿವೆ.

ಗ್ರಾಮದೇವತೆಗಳು ಶೀಘ್ರವಾಗಿ ಕಣ್ಮರೆಯಾಗುತ್ತಿರುವುದನ್ನು ಕೂಡ ನಾಗರಿಕತೆಯ ತರ್ಕದಲ್ಲೇ ನೋಡಬೇಕಾಗಿದೆ. ನಿರ್ದಯವಾಗಿ ಹೊಸಕಿ ಹಾಕುತ್ತಿರುವ ಆಧುನಿಕರಣ ಸಂದರ್ಭದಲ್ಲಿ, ಅದರ ಸೂಚನೆಗಳನ್ನು ಗ್ರಾಮದೇವತೆಗಳ ಜಾತ್ರೆಗಳಲ್ಲೂ ಕಾಣಬಹುದು. ಜಾತ್ರೆಗಳು ಕಾಲಕ್ರಮೇಣ ಜನಪದ ಸಂಸ್ಕೃತಿಯ ಬೆಳವಣಿಗೆಗೆ ಚೈತನ್ಯದಾಯಕವಾಗಿದೆ. ದಿನಕಳೆದಂತೆ ಸಮಾಜದ ರೀತಿ ನೀತಿಗಳು ಬದಲಾವಣೆಗೊಂಡಂತೆ, ದೇವರ ಕಲ್ಪನೆಗಳು

ವ್ಯತ್ಯಾಸವಾದಂತೆ, ಮತೀಯ ತತ್ವಗಳು ವಿಕಾಸವಾದಂತೆ ಧಾರ್ಮಿಕ ಆಚರಣೆಗಳು ಸಂಕೀರ್ಣವಾಗುತ್ತಿರುತ್ತವೆ. ಗ್ರಾಮೀಣ ಜನರ ಜೀವನ ಮಾರ್ಪಟ್ಟಂತೆ ಜಾತ್ರೆಗಳು ಪ್ರಾಚೀನರ ಕಲ್ಪನೆಗೂ ಮೀರಿ ಹೊಸ ಹೊಸ ಕಲ್ಪನಾ ಸಂಗತಿಗಳನ್ನು ಗರ್ಭೀಕರಿಸಿಕೊಂಡು ಅಳತೆಯಿಲ್ಲದೆ ಬೆಳೆಯುತ್ತಲೆ ಇವೆ.[೨೧]

ವಿಶೇಷವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಜರುಗುವ ಜಾತ್ರೆಗಳು ಪ್ರಮುಖವಾಗಿ ರೈತರ ಬಿಡುವಿನ ವೇಳೆಯಾಗಿರುತ್ತವೆ. ವರ್ಷವೀಡಿ ನೊಂದು, ಬೆಂದು ರೈತಾಪಿ ವರ್ಗಕ್ಕೆ ಜಾತ್ರೆಗಳು ಮನೋರಂಜನೆಯನ್ನು ನೀಡುವುದರ ಜೊತೆಗೆ ಉಲ್ಲಾಸ, ಚೈತನ್ಯವನ್ನು ತುಂಬುವ ಸಾಧನವಾಗಿವೆ. ಅಲ್ಲದೆ ರೈತರು ಸಮೃದ್ಧವಾಗಿ ಮಳೆ ಬಿದ್ದು, ಚೆನ್ನಾಗಿ ಬೆಳೆ ಬಂದಾಗ ಸುಗ್ಗಿಯಲ್ಲಿ ಕಣ್ತುಂಬ ಫಲರಾಶಿ ನೋಡಿ ಹರ್ಷಗೊಳ್ಳುತ್ತಾರೆ. ಆಗ ಆ ವರ್ಷದ ಜಾತ್ರೆಯನ್ನು ವೈಭವದಿಂದ ಆಚರಿಸುತ್ತಿರುವುದನ್ನು ಕಾಣಬಹುದು.

ಹೀಗೆ ಜಾತ್ರೆಯೂ ಒಂದು ಸಂಪ್ರದಾಯವಾಗಿ ಬೆಳೆದುಬಂದಿದೆ. ಸಂಪ್ರದಾಯವು ಜನರ ರೂಢಿಯಲ್ಲಿರುವ ವಿಶಿಷ್ಟ ಆಚರಣೆ. ಅದು ಹುಟ್ಟಿಬೆಳೆದು ಬಂದಿದ್ದಲ್ಲ. ಅದರ ಬೇರುಗಳು ಆಳವಾಗಿವೆ. ಒಮ್ಮೊಮ್ಮೆ ಜನರು ಧರ್ಮವನ್ನು ಮರೆಯಬಹುದು, ಆದರೆ ಸಂಪ್ರದಾಯಗಳನ್ನು ಮರೆಯುವುದು ಕಷ್ಟ. ಇನ್ನೊಂದು ವಿಶೇಷವೆಂದರೆ ಜಾತ್ರೆಗಳು ಇಂದು ಸಾಮಾಜಿಕ ಭಾವೈಕ್ಯತೆಯ ಸಂಕೇತಗಳಾಗಿವೆ. ಇದರೊಂದಿಗೆ ಜಾತ್ರೆಯು ಸಾಮಾಜಿಕ ತಿಳುವಳಿಕೆಯನ್ನು ನೀಡುವಲ್ಲಿ ಯಶಸ್ವಿಯಾಗುತ್ತಿದೆ. ಅಲ್ಲದೆ ಆರೋಗ್ಯದ ನೀತಿ, ಮನೆ ಮತ್ತು ಗ್ರಾಮದ ಸ್ವಚ್ಛತೆ, ಮಕ್ಕಳ ಪೋಷಣೆ, ಸಾಂಕ್ರಾಮಿಕ ರೋಗಗಳು ಹರಡದಂತೆ ಮುನ್ನೆಚ್ಚರಿಕೆ, ಹೊಸ ವೈಜ್ಞಾನಿಕ ಬೇಸಾಯ ಪದ್ಧತಿ ಇವುಗಳನ್ನು ತನ್ನೊಳಗೆ ಅಳವಡಿಸಿಕೊಂಡು ಇಂದು ಜಾತ್ರೆ ಬೆಳೆಯುತ್ತಿದೆ. ಕುಸ್ತಿ, ಕಸರತ್ತುಗಳು, ಜಾನುವಾರು ಪ್ರದರ್ಶನ, ರಸಗೊಬ್ಬರ ಬಳಕೆ, ಉತ್ತಮ ಹಣ್ಣು, ತರಕಾರಿಗಳನ್ನು ಬೆಳೆಸುವ ವಿಷಯಗಳು, ಗುಡಿಕೈಗಾರಿಕೆಗಳು ಹೀಗೆ ಅನೇಕ ವಿಷಯಗಳನ್ನು ಪ್ರೋತ್ಸಾಹಿಸುತ್ತ ಆಧುನಿಕತೆಗೆ ಹೊಂದಿಕೊಂಡು ಈ ರೀತಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಸಾಗುತ್ತಿರುವುದು ಗಮನಾರ್ಹ. ಈ ಹಿನ್ನೆಲೆಯಲ್ಲಿ ಬನಶಂಕರಿ ಜಾತ್ರೆ ಗಮನಿಸುವುದು ಸೂಕ್ತ.

ನಾಡಿನ ಶಕ್ತಿ ದೇವತೆಗಳ ಜಾತ್ರೆ, ಉತ್ಸವಗಳು ನವರಾತ್ರಿಯೆಂದು ನಡೆದರೆ, ಬನಶಂಕರಿಯ ಉತ್ಸವವು ಬನದ ಹುಣ್ಣಿಮೆಯಂದು ನಡೆಯುತ್ತದೆ. ಇದು ಪೌಷ್ಯ. ಶು. ಅಷ್ಟಮಿಯಿಂದ ಪೌಷ್ಯ. ಕೃ. ಪ್ರತಿಪಾದದವರೆಗೂ ಮುಂದುವರೆಯುವುದು. ಆದರೆ ಸಸ್ಯಸಂಬಂಧಿ ದೇವಿಯಾದ ಬನದೇವಿಯ ಉತ್ಸವವು ಪೂರ್ವದಲ್ಲಿ ಬಾದಾಮಿಯ ಅಮವಾಸ್ಯೆಯಂದು ಜರಗುತ್ತಿತ್ತು ಎಂದು ಹೇಳಲಾಗುತ್ತದೆ.[೨೨] ಆದರೆ ಕಾಲಾಂತರದಲ್ಲಿ ದೇವಿಯ ಉತ್ಸವವು ಬಾದಾಮಿ ಅಮವಾಸ್ಯೆಯ ಬದಲಿಗೆ ಬನದ ಹುಣ್ಣಿಮೆಯ ದಿನದಂದು ನಡೆಯುತ್ತಿರುವುದನ್ನು ಗಮನಿಸಬಹುದು. ದೇವಿಯ ಉತ್ಸವದ ಸಂದರ್ಭದಲ್ಲಿ ನಡೆಯುವ

ವಿವಿಧ ಆಚರಣೆಗಳು ಒಂದು ಕಾಲಘಟ್ಟ ಪೂರ್ಣಗೊಂಡು ಮತ್ತೊಂದರ ಆಗಮನವನ್ನು ಸೂಚಿಸುತ್ತವೆ. ಅಲ್ಲಿಯ ಭಕ್ತರು ಹೊಸದಾಗಿ ಬೆಳದ ಧಾನ್ಯಗಳನ್ನು ತಂದು ದೇವಿಗೆ ಸಲ್ಲಿಸುವ ಪದ್ಧತಿಯಿದೆ. ತಾವು ಬೆಳೆದುದರ ಧಾನ್ಯಗಳನ್ನು ಕಾಯ್ದಿರಿಸಿ ತಂದು ಸಲ್ಲಿಸುವುದು ಫಲವಂತಿಕೆಯ ಸಂಕೇತವಾಗಿ ತೋರುವುದು. ಅಲ್ಲದೆ ಮುಖ್ಯವಾಗಿ ನಡೆಯುವ ೧೨ ದಿನಗಳ ಉತ್ಸವ ಪೂರ್ಣಗೊಳ್ಳುವವರೆಗೂ ಇವಳ ಭಕ್ತರಾದ ಬಡಿಗೇರರು ತಮ್ಮ ವೃತ್ತಿಗೆ ಸಂಬಂಧಿಸಿದ ಯಾವ ಉಪಕರಣಗಳನ್ನು ಬಳಸುವಂತಿಲ್ಲ. ಅವುಗಳನ್ನು ಬನದ ದೇವಿಯ ಹೆಸರಿನಲ್ಲಿ ಪೂಜೆಗೆ ಇಡುತ್ತಾರೆ. ಉತ್ಸವ ಮುಗಿದ ನಂತರ ಅವುಗಳನ್ನು ಬಳಸುವರು. ಇಂತಹ ಆಚರಣೆಗಳನ್ನು ಆ ವರ್ಗದವರು ಪೂರ್ವದಿಂದಲೂ ನಡೆಸಿಕೊಂಡು ಬಂದಿದ್ದಾರೆ.

ಉತ್ತರ ಕರ್ನಾಟಕದ ಅತ್ಯಂತ ದೊಡ್ಡ ಜಾತ್ರೆಯಂದರೆ ಬನಶಂಕರಿಯ ಜಾತ್ರೆಯಾಗಿದೆ. ಈ ಜಾತ್ರೆಯು ಕೇವಲ ಧಾರ್ಮಿಕ, ಸಾಂಸ್ಕೃತಿಕ ಮಹತ್ವವನ್ನು ಪಡೆಯದೆ ಕೃಷಿ ಕುಟುಂಬದಿಂದ ಬರುವ ಜನರಿಗೆ ತಮಗೆ ಬೇಕಾಗುವ ವಸ್ತುಗಳನ್ನು ಪೂರೈಸುವ ಮಾರುಕಟ್ಟೆಯಾಗಿರುವುದು ಗಮನಾರ್ಹ. ಕೃಷಿ ಉಪಕರಣಗಳಾದ ಹಗ್ಗ, ರಂಟೆ, ಕುಂಟಿ, ನೇಗಿಲು, ಬಾಗಿಲ ಚೌಕಟ್ಟು, ಕಪಾಟು ಮತ್ತು ಅಡಿಗೆ ಮನೆಯ ಉಪರಣಗಳನ್ನು ಜನರು ಖರೀದಿಸುತ್ತಾರೆ. ಉತ್ತರ ಕರ್ನಾಟಕದ ದೇಶಿಯ ಸಂಸ್ಕೃತಿಯ ಸೊಗಡನ್ನು ಪ್ರತಿಬಿಂಬಿಸುವ ಜಾತ್ರೆ ಇದಾಗಿದೆ. ಈ ಜಾತ್ರೆಗೆ ಆಂಧ್ರಪ್ರದೇಶ, ಮಹಾರಾಷ್ಟ್ರ ಇನ್ನಿತರ ರಾಜ್ಯಗಳಿಂದಲೂ ಜನ ತಂಡೋಪತಂಡವಾಗಿ ಬರುವುದನ್ನು ಗಮನಿಸಿದರೆ ಇಲ್ಲಿನ ಧಾರ್ಮಿಕ ಆಚರಣೆಯ ಮಹತ್ವವು ಸ್ಪಷ್ಟವಾಗುವುದು.

ಜಾತ್ರೆಯು ಆರಂಭವಾಗುವ ಸುಮಾರು ಹದಿನೈದು ದಿನಗಳ ಪೂರ್ವದಿಂದಲೇ ಜಾತ್ರೆಯು ಸಿದ್ಧಗೊಳ್ಳಲು ಪ್ರಾರಂಭವಾಗುತ್ತದೆ. ಉದಾಹರಣೆಗೆ ಪೂಜಾ ಸಾಮಗ್ರಿಗಳನ್ನು ಸ್ವಚ್ಛಗೊಳಿಸಿ, ಗುಡಿಯನ್ನು ಸುಣ್ಣ ಬಣ್ಣಗಳಿಂದ ಸಾರಿಸುವರು. ತೇರಿನ ಎಲ್ಲ ಸಾಮಗ್ರಿಗಳನ್ನು ಒಂದು ಕಡೆ ಸೇರಿಸಿಕೊಳ್ಳುವರು. ದೇವಿಯ ಉತ್ಸವ ಮೂರ್ತಿಗಳನ್ನು ಕೂರಿಸುವ ವಾಹನಗಳನ್ನು ತೊಳೆದು ಶುದ್ಧಿಕರಿಸುವುದರ ಜೊತೆಗೆ ಬಣ್ಣಗಳಿಂದ ಅಲಂಕರಿಸುವರು. ಚೊಳಚಗುಡ್ಡದ ಗ್ರಾಮಪಂಚಾಯತಿಯ ಅಧ್ಯಕ್ಷರು ಮತ್ತು ಸದಸ್ಯರು ಜೊತೆಗೂಡಿಕೊಂಡು ತಮ್ಮ ಗ್ರಾಮದ ವ್ಯಾಪ್ತಿಗೆ ಬರುವ ಸ್ಥಳಗಳಲ್ಲಿ ವ್ಯಾಪಾರ ಮಳಿಗೆಗಳಿಗೆ ಸ್ಥಳವನ್ನು ನೀಡುವುದು, ಅವರಿಂದ ತೆರಿಗೆಯನ್ನು ವಸೂಲು ಮಾಡುವ ಕಾರ್ಯವನ್ನು ಮಾಡುತ್ತಾರೆ. ರಕ್ಷಣಾ ದೃಷ್ಠಿಯಿಂದ ಆರಕ್ಷಕರ ಸಹಾಯವನ್ನು ಪಡೆಯಲಾಗುತ್ತದೆ. ಹೀಗೆ ಈ ಸಮಯದಲ್ಲಿ ಜಾತ್ರೆಯು ಯಾವುದೇ ಅಡೆತಡೆಯಿಲ್ಲದೆ ವ್ಯವಸ್ಥಿತವಾಗಿ ನಡೆಯಲು ಬೇಕಾಗಿರುವ ಎಲ್ಲ ಪೂರ್ವ ಸಿದ್ಧತೆಗಳನ್ನು ಕಮೀಟಿಯವರು ಮತ್ತು ಪರಂಪರಾಗತವಾಗಿ ವಿವಿಧ ಸಮುದಾಯಗಳ ಬಾಬುದಾರರು ಮಾಡಿಕೊಳ್ಳುತ್ತಾರೆ.

ಈ ಜಾತ್ರೆಯ ವಿಶೇಷವೆಂದರೆ ಪ್ರತಿಯೊಂದು ವರ್ಗದವರು ಒಂದಿಲ್ಲವೊಂದು ಸೇವೆಯನ್ನು ದೇವಿಗೆ ಸಲ್ಲಿಸುತ್ತಾ ಬಂದಿರುವುದು ವಿಶೇಷ. ಉದಾಹರಣೆಗೆ ದೇವಿಯ ಆಭರಣಗಳನ್ನು ಸ್ವಚ್ಛಗೊಳಿಸಲು ಪತ್ತಾರರು, ದೇವಿಯ ಉತ್ಸವ ವಾಹನಗಳು, ತೇರು ದುರಸ್ತಿಗೆ ಬಡಿಗೇರರು, ರಥಕ್ಕೆ ಎಣ್ಣೆಯನ್ನು ಹಾಕುವವರು ಬೋವಿ ಜನಾಂಗದವರು, ಶಹನಾಯಿ ಸೇವೆ ಭಜಂತ್ರಿಯವರು, ತಲೆಮುಡಿ, ಜವಳ ಇಂತಹ ಸೇವೆಗಳಿಗೆ ಹಡಪದ ಜನಾಂಗದವರು, ಗುಡಿಯನ್ನು ಮತ್ತು ಗುಡಿಯ ಪರಿಸರವನ್ನು ಸ್ವಚ್ಛಗೊಳಿಸುವವರು ಅಂಬಿಗ ಮತ್ತು ಹರಿಜನರು, ಉತ್ಸವದ ಬಟ್ಟೆ ಮತ್ತು ಪಟ ಇತ್ಯಾದಿಗಳನ್ನು ಹೊಲೆಯುವವರು ದರ್ಜಿ ಸಮುದಾಯದವರು, ತೇರನ್ನು ಎಳೆಯಲು ಮಿಣಿ (ಹಗ್ಗ) ತಯಾರಿಸುವವರು ಗಾಣಿಗ ಸಮುದಾಯ. ಹೀಗೆ ಬನಶಂಕರಿಯು ಎಲ್ಲ ಸಮುದಾಯಗಳ ಆರಾಧ್ಯ ದೇವಿಯಾಗಿರುವುದನ್ನು ಕಾಣಬಹುದು. ಅಲ್ಲದೆ ಊರಿನ ಜನರೆಲ್ಲರೂ ಸೇರಿ ಮಾಡುವ ಗ್ರಾಮದೇವಿ ಜಾತ್ರೆಯಲ್ಲಿ ಯಾರ‍್ಯಾರು ಯಾವ ಯಾವ ಕೆಲಸ ಮಾಡುತ್ತಾರೆ ಎಂಬುದನ್ನು ಗಮನಿಸಿದರೆ, ಇಲ್ಲಿನ ಸಾಮಾಜಿಕ ಸಮಾನತೆಯ ತಿರುಳು ತಿಳಿಯುತ್ತದೆ. ಹೀಗೆ ಎಲ್ಲರ ಸಹಾಯದಿಂದ ಜಾತ್ರೆಯು ನೆರವೇರುತ್ತದೆ.

ಜಾತ್ರೆಯು ಆರಂಭವಾಗುವ ಒಂಭತ್ತು ದಿನಗಳ ಪೂರ್ವದಲ್ಲಿ ಚೊಳಚಗುಡ್ಡ ಗ್ರಾಮದಲ್ಲಿರುವ ಬನಶಂಕರಿಯ ಉತ್ಸವ ಮೂರ್ತಿಯನ್ನು ಸರ್ವ ಅಲಂಕಾರಗಳಿಂದ ಶೃಂಗರಿಸಿಕೊಂಡು ಬೆಳ್ಳಿಯ ಪಲ್ಲಕ್ಕಿಯಲ್ಲಿ ಕೂರಿಸಿ, ಛತ್ರಚಾಮರಗಳನ್ನು ಹಿಡಿದು ಮತ್ತು ಸಂಗೀತ ವಾದ್ಯಗಳ ಮುಖಾಂತರ ಉತ್ಸವಮೂರ್ತಿಯನ್ನು ಶ್ರೀಕ್ಷೇತ್ರಕ್ಕೆ ಕರೆತರಲಾಗುತ್ತದೆ. ಸಂಗೀತ ವಾದ್ಯಗಳಲ್ಲಿ ಬಹಳ ವಿಶೇಷವೆಂದರೆ ಕರಡಿ ಮಜಲು. ನಮ್ಮ ನಾಡಿನಲ್ಲಿ ಪ್ರಚಲಿತದಲ್ಲಿರುವ ಈ ಕರಡಿ ಮಜಲು ಜನಪ್ರೀಯ ಮೇಳವಾಗಿದೆ. ಹಾಗೂ ಇದೊಂದು ಜಾನಪದ ಕಲೆಯಾಗಿರುವುದು ವಿಶೇಷ. ಕರಡಿ ಅಥವಾ ಕರಡೆ ಎಂಬ ದ್ವಿಮುಖ ವಾದ್ಯ ಪ್ರಧಾನವಾಗಿದ್ದರಿಂದ ಈ ಮೇಳಕ್ಕೆ ಕರಡಿ ಮಜಲು ಎಂದು ಹೆಸರು ಬಂದಿದೆ. ಈ ಮಜಲಿನಲ್ಲಿ ದಿಮ್ಮು ಎಂದು ಕರೆಯಲಾಗುವ ದ್ವಿಮುಖ ಚರ್ಮವಾದ್ಯಗಳು, ಎರಡು ಜೋಡಿ ಕಂಚಿನ ತಾಳಗಳು, ಚೌಡಗ ಎಂಬ ಏಕಮುಖ ವಾದ್ಯದೊಂದಿಗೆ, ಊದುವ ವಾದ್ಯಗಳಾದ ಜೋಡಿ ಶಹನಾಯಿ ಮತ್ತು ಶೃತಿ ವಾದ್ಯವಿರುತ್ತದೆ. ಒಟ್ಟು ಎಂಟರಿಂದ ಒಂಭತ್ತು ಜನ ಕಲಾವಿದರು ಈ ಮೇಳದಲ್ಲಿರುತ್ತಾರೆ. ಈ ಮೇಳದಲ್ಲಿ ಭಾಗವಹಿಸುವ ಕಲಾವಿದರೆಲ್ಲರೂ ಕಚ್ಚೆಪಂಚೆ, ಜುಬ್ಬ ಧರಿಸಿ, ಸೊಂಟಕ್ಕೆ ನಡುಕಟ್ಟು ಹಾಕುತ್ತಾರೆ. ತಲೆಗೆ ಹಳದಿ ಇಲ್ಲವೆ ಕೇಸರಿ ಬಣ್ಣದ ರೂಮಾಲು ಸುತ್ತಿ, ಹಣೆಗೆ ಬಸ್ಮವನ್ನು ಹಚ್ಚಿ, ಕಾಲಿಗೆ ಗೆಜ್ಜೆಯನ್ನು ಕಟ್ಟಿಕೊಂಡು ವಾದ್ಯಗಳ ತಾಳಬದ್ಧತೆಗೆ ಕುಣಿಯುತ್ತಾ ಹೆಜ್ಜೆ ಹಾಕುತ್ತಾರೆ. ಹೀಗೆ ಸಂಗೀತ ವಾದ್ಯದ ತಂಡದಿಂದ ಉತ್ಸವಕ್ಕೆ ಇನ್ನಷ್ಟು ಮೆರಗು ಬರುತ್ತದೆ.

ಈ ರೀತಿಯಾಗಿ ಚೊಳಚಗುಡ್ಡದಿಂದ ಬನಶಂಕರಿಯವರೆಗೆ ಉತ್ಸವಮೂರ್ತಿಯು ಬರುವಾಗ ಗ್ರಾಮದ ಜನರು ದೇವಿಗೆ ದಾರಿಯುದ್ಧಕ್ಕೂ ನೀರು ಹಾಕುವುದು, ಅರಿಶಿಣ, ಕುಂಕುಮ ಹಚ್ಚಿ, ಆರತಿ ಬೆಳಗುವರು, ದೀವಟಿಗೆಗೆ ಎಣ್ಣೆ ಹಾಕುವರು, ಉಡಿತುಂಬುವುದು

ಮುಂತಾದ ಸೇವೆಯನ್ನು ನೆರವೇರಿಸುವ ಮೂಲಕ ಮೆರವಣಿಗೆಯು ಬನಶಂಕರಿಯ ಕ್ಷೇತ್ರಕ್ಕೆ ಬರುವುದು. ಅನಂತರ ದೇವಿಯ ಅರ್ಚಕರು ಪಲ್ಲಕ್ಕಿಯನ್ನು ಪೂಜಿಸಿ ಗುಡಿಯ ಒಳಗೆ ಬರಮಾಡಿಕೊಳ್ಳುತ್ತಾರೆ. ಹಾಗೆಯೇ ಗುಡಿಯ ಎದುರಿರುವ ಧ್ವಜಸ್ಥಂಬಕ್ಕೆ ಪೂಜಿಸುತ್ತಾರೆ. ಜಾತ್ರೆಯ ಮುನ್ನ ಒಂಭತ್ತು ದಿನಗಳಲ್ಲಿ ಅನೇಕ ಕಾರ್ಯಕ್ರಮಗಳನ್ನು ಮಾಡಲಾಗುತ್ತದೆ. ಅವುಗಳಲ್ಲಿ ಮುಖ್ಯವಾಗಿ ಕೀರ್ತನೆ, ಭಜನೆ, ನಿತ್ಯಹೋಮ, ವಿವಿಧ ಪೂಜಾ ವಿಧಗಳು, ವಾಹನೋತ್ಸವವನ್ನು ಮಾಡಲಾಗುವುದು. ಆ ಒಂಭತ್ತು ದಿನಗಳಲ್ಲಿ ಪ್ರಾತಾಕಾಲ ೪ ಗಂಟೆಗಳಿಂದ ರಾತ್ರಿ ೧೨ ಗಂಟೆಯವರೆಗೆ ದೇವಿಗೆ ವಿವಿಧ ಪೂಜೆಗಳನ್ನು ಮಾಡಲಾಗುತ್ತದೆ.

ಜಾತ್ರೆಗಾಗಿ ಬಾದಾಮಿಯ ಸುತ್ತಮುತ್ತಲಿರುವ ಬೇಲೂರು, ಜಾಲಿಹಾಳ, ಮಾಡಲಗೇರಿ, ಚಿಕ್ಕನಸಿಬಿ, ಹಿರೇನಸಿಬಿ, ನಾಗರಾಳ, ಶಿವಪುರ, ಥಾಣಕಶಿರೂರು, ಚಿಕ್ಕಮುಚ್ಚಳಗುಡ್ಡ, ಹಿರೇಮುಚ್ಚಳಗುಡ್ಡ, ಗುಳ್ಳೇದಗುಡ್ಡ, ಕೆರೂರ, ಬಾಗಲಕೋಟ, ಗದಗ, ರಾಮದುರ್ಗ, ಬೆಳಗಾವಿ, ಗೋಕಾಕ ಇನ್ನು ಮುಂತಾದ ಭಾಗಗಳಿಂದ ಭಕ್ತರು ಪಾದಯಾತ್ರೆಯನ್ನು ಮಾಡುತ್ತಾ ಬನದ ಹುಣ್ಣಿಮೆಯ ದಿನದಂದು ನಡೆಯುವ ರಥೋತ್ಸವದ ದರ್ಶಕ್ಕೆ ಬರುವರು. ಹಾಗೆಂಯೆ ಈ ಜಾತ್ರೆಗೆ ತಮ್ಮ ಊರಿನಲ್ಲಿರುವ ಬನಶಂಕರಿಯು ಉತ್ಸವಮೂರ್ತಿಯನ್ನು ಪಲ್ಲಕ್ಕಿಯಲ್ಲಿಟ್ಟುಕೊಂಡು ತಂದು, ಬಾದಾಮಿ ಬನಶಂಕರಿಯ ಗುಡಿಯಲ್ಲಿ ಆ ಮೂರ್ತಿಗೆ ಪೂಜೆಯನ್ನು ಸಲ್ಲಿಸುವರು. ಈ ರೀತಿ ಮಾಡುವುದರಿಂದ ತಮ್ಮ ಊರಿನ ಬನಶಂಕರಿ ದೇವಿಯ ಶಕ್ತಿಯು ವೃದ್ಧಿಯಾಗುತ್ತದೆಂಬ ನಂಬಿಕೆಯಿದೆ.

ಸುಮಾರು ಒಂದು ತಿಂಗಳ ಕಾಲ ನಡೆಯುವ ಜಾತ್ರೆಯಲ್ಲಿ ಉತ್ತರ ಕರ್ನಾಟಕದ ಜನರ ಸಾಂಸ್ಕೃತಿಕ ವೈವಿಧ್ಯತೆಯ ಪ್ರತೀಕದಂತೆ ಕಾಣುತ್ತದೆ. ವೈವಿಧ್ಯಮಯ ದೋತ್ರ, ನಿಲುವಂಗಿ, ಪಟಗಾ (ಪೇಟ), ಕೈಯಲ್ಲಿ ಹಿಡಿದಿರುವ ಉದ್ದನೆಯ ಬಾರುಕೋಲು ಹಾಗೂ ಹಣೆಗೊಂದು ಕೆಂಪನೆಯ ಉದ್ದವಾದ ನಾಮದ ಗುರುತು ಹೊಂದಿರುವ ಇಂತಹ ನೂರಾರು ವ್ಯಕ್ತಿಗಳನ್ನು ಜಾತ್ರೆಯ ಸಂದರ್ಭದಲ್ಲಿ ನೋಡಲು ಸಿಗುತ್ತಾರೆ. ಗ್ರಾಮಾಂತರ ಪ್ರದೇಶದ ವೈವಿಧ್ಯಮಯ ವೇಷಭೂಷಣಗಳ ಪ್ರದರ್ಶನವು ಜಾತ್ರೆಯಲ್ಲಿ ಇರುತ್ತದೆ. ಆದರೆ ಅಕ್ಷರ ಸಂಸ್ಕೃತಿ ಬೆಳದಂತೆಲ್ಲ ಗ್ರಾಮದೇವತಾ ಸ್ತೋತ್ರಗಳು ಸಂಸ್ಕೃತ ಮಂತ್ರಪಠನೆಗಳಾಗಿವೆ. ವೈದಿಕ ಪ್ರಾಬಲ್ಯದಿಂದ ಜನಪದ ಪೂಜಾ ವಿಧಾನವು ಬದಲಾಗುತ್ತಿದೆ. ಪ್ರಾಣಿ ಬಲಿಗಳ ಬದಲಿಗೆ ತೆಂಗಿನಕಾಯಿ, ಕುಂಬಳಕಾಯಿ, ಬಾಳೆಹಣ್ಣು, ನೈವೇದ್ಯ, ಮೃಷ್ಟಾನ್ನಗಳು ಅವತರಿಸಿವೆ. ವಸ್ತು, ಒಡವೆಗಳಲ್ಲಿ ಆಧುನಿಕತೆಯ ಹೊಸ ವಿನ್ಯಾಸ ರೂಪತಾಳಿದೆ. ಅಂದಿನ ಮಂದಿ ಬೆಳಕಿಗೆ ಪಂಜುಗಳನ್ನು ಹಿಡಿಯುತ್ತಿದ್ದರು. ಇಂದು ವಿದ್ಯುತ್ ದೀಪಗಳ ಬಗೆ ಬಗೆಯ ವಿನ್ಯಾಸಗಳುಳ್ಳ ದೀಪಗಳು ಪಂಜುಗಳ ಸ್ಥಾನವನ್ನು ಆವರಿಸಿವೆ. ಜನರೇಟರ, ಟ್ಯೂಬಲೈಟ್, ಮಣ್ಣಿನ ಮಡಿಕೆ ದೀಪಗಳಿಗೆ ಪರ್ಯಾಯವಾಗಿ ಲೋಹಗಳು ಸೇರಿಕೊಂಡಿವೆ. ಅಲ್ಯೂಮಿನಿಯಂ, ಹಿತ್ತಾಳೆ, ಕಂಚು, ಪ್ಲಾಸ್ಟಿಕ್ ಇತ್ಯಾದಿ ವಸ್ತುಗಳು ಜಾತ್ರೆಯಲ್ಲಿ ಮಾರಾಟವಾಗುತ್ತಿವೆ. ಇದರ

ಜೊತೆಗೆ ಮಕ್ಕಳ ಆಧುನಿಕ ಆಟದ ಸಾಮಗ್ರಿಗಳು, ಹೆಣ್ಣುಮಕ್ಕಳ ಮನಸೆಳೆಯುವ ಅನೇಕ ಬಣ್ಣ ಬಣ್ಣದ ವಸ್ತು, ಒಡವೆ, ಬಟ್ಟೆಗಳು ಜಾತ್ರೆಯಲ್ಲಿ ಪ್ರಮುಖ ಆಕರ್ಷಣೆಯಾಗಿರುತ್ತವೆ. ಸಿನಿಮಾ, ನಾಟಕದ ಟೆಂಟುಗಳ ಭರಾಟೆ ಜೋರಾಗಿರುತ್ತದೆ.

ಬನಶಂಕರಿಯ ಜಾತ್ರೆಯಲ್ಲಿ ಹತ್ತಾರು ನಾಟಕ ಕಂಪನಿಗಳು ಬೀಡು ಬಿಟ್ಟಿರುತ್ತವೆ. ಆ ನಾಟಕ ಕಂಪನಿಗಳಲ್ಲಿ ನಮ್ಮ ನಾಡಿನ ಪ್ರಮುಖ ಸಂತರ ಹೆಸರನ್ನು ಇಟ್ಟುಕೊಂಡಿರುತ್ತವೆ. ಅವುಗಳಲ್ಲಿ ಪ್ರಮುಖವಾಗಿ ಜೇರ್ವರಗಿಯ ಶ್ರೀ ಗುರು ವಿಶ್ವರಾಧ್ಯ ನಾಟ್ಯಸಂಘ, ಗುಡಗೇರಿಯ ಸಂಗಮೇಶ್ವರ ನಾಟ್ಯ ಸಂಘ, ಚಿತ್ತರಗಿಯ ಶ್ರೀಕುಮಾರವಿಜಯ ನಾಟ್ಯ ಸಂಘ, ತಾಳಿಕೋಟೆಯ ಶ್ರೀಗುರು ಖಾಸ್ಗತೇಶ್ವರ ನಾಟ್ಯ ಸಂಘ, ಮಂಡಲಗೇರಿಯ ಶ್ರೀಗುರು ತೋಂಟದಾರ್ಯ ನಾಟ್ಯ ಸಂಘ, ಕುಂಟೋಜಿಯ ಶ್ರೀ ಘನಮಠೇಶ್ವರ ನಾಟ್ಯ ಸಂಘ ಇತ್ಯಾದಿ ನಾಟಕ ಕಂಪನಿಗಳೆಲ್ಲವೂ ಪುರಾಣ ಹಿನ್ನೆಲೆಯ ನಾಟಕಗಳನ್ನು ಆಡಿಸುತ್ತಿಲ್ಲ. ಅವು ಮುಖ್ಯವಾಗಿ ಸಾಮಾಜಿಕ ನಾಟಕಗಳಾಗಿವೆ. ಅಲ್ಲದೆ ಅವುಗಳಲ್ಲಿ ಮುಖ್ಯವಾಗಿ ಮಹಿಳೆಯರನ್ನು ಕಾಮದ ವಸ್ತುವನ್ನಾಗಿ ನೋಡುವ ಪುರುಷರ ದೃಷ್ಟಿಕೋನ, ಸಹೋದರರ ಜಗಳದಿಂದಾಗುವ ಕೊಲೆ, ನೈತಿಕತೆಯನ್ನುಳ್ಳ ನಾಟಕಗಳು, ಹಾಸ್ಯಭರಿತ ನಾಟಕಗಳು ಹೀಗೆ ಈ ನಾಟಕಗಳಲ್ಲಿ ಸಾಮಾಜಿಕ ವಿಡಂಬನೆಗಳನ್ನು ನಟನೆಯ ಮೂಲಕ ತೋರಿಸಿ ಜನರನ್ನು ರಂಜಿಸುತ್ತಿವೆ.

ಪೂರ್ವದಲ್ಲಿ ಧಾರ್ಮಿಕ ಕ್ಷೇತ್ರಗಳಲ್ಲಿ ಜಾತ್ರೆ, ಉತ್ಸವಗಳ ಸಂದರ್ಭದಲ್ಲಿ, ಧರ್ಮ ಜಾಗೃತಿಗಾಗಿ, ಮತ ಪ್ರಚಾರಕ್ಕಾಗಿ ಒಳ್ಳೆಯ ಮಾರ್ಗದಲ್ಲಿ ನಡೆದು ಆದರ್ಶ ವ್ಯಕ್ತಿಯಾಗಿ ರೂಪುಗೊಳ್ಳಲು ಈ ಕೀರ್ತನೆಗಳು, ಭಜನೆ, ಪೌರಾಣಿಕ ನಾಟಕಗಳನ್ನು ಏರ್ಪಡಿಸುತ್ತಿದ್ದರು. ಆದರೆ ನಾಟಕಗಳ ಮೇಲೂ ಆಧುನಿಕತೆಯ ಪ್ರಭಾವ ಗಾಢವಾಗಿ ಬೀರಿದೆ. ಪ್ರಸ್ತುತ ಸಂದರ್ಭದಲ್ಲಿ ಪೌರಾಣಿಕ ನಾಟಕಗಳನ್ನು ನೋಡುವವರ ಸಂಖ್ಯೆ ಕಡಿಮೆಯಾಗಿ ಕಲಾವಿದರು ಒಂದು ಹೊತ್ತಿನ ಊಟಕ್ಕೂ ಇಲ್ಲದೆ, ತಮ್ಮ ಜೀವನ ನಿರ್ವಹಣೆಯು ಕಷ್ಟವಾಗಿಬಿಟ್ಟಿದೆ. ತಮ್ಮ ತುತ್ತಿನ ಚೀಲವನ್ನು ತುಂಬಿಸಬೇಕಾಗಿದ್ದರಿಂದ ಪೌರಾಣಿಕ ನಾಟಕಗಳ ಬದಲಾಗಿ ಜನರ ಅಭಿರುಚಿಯನ್ನು ಒಪ್ಪುವ ನಾಟಕಗಳನ್ನು ಆಡಿಸುತ್ತಿದ್ದಾರೆ. ಈ ಹಿನ್ನೆಲೆಯಿಂದಲೇ ಬನಶಂಕರಿಯ ಜಾತ್ರೆಯನ್ನು ಜಾತ್ರೆಯೋ, ನಾಟಕೋತ್ಸವವೋ[೨೨] ಎಂಬುವ ಅಭಿಪ್ರಾಯ ವ್ಯಕ್ತವಾಗುತ್ತಿದೆ.

ಜಾತ್ರೆಯಲ್ಲಿ ಧಾರ್ಮಿಕ ಉದ್ದೇಶದಿಂದ ಬರುವ ಜನರಿಗಿಂತ ಇಂತಹ ಸಿನಿಮಾ, ನಾಟಕಗಳನ್ನು ನೋಡುವವರ ಸಂಖ್ಯೆಯೇ ಅಧಿಕವಾಗಿರುವುದು. ಜಾತ್ರೆ ಎಂದರೆ ಧಾರ್ಮಿಕ ಸ್ವರೂಪದ ಹಬ್ಬ. ಆದರೆ ಕಾಲಕ್ರಮೇಣ ಸಾಂಸ್ಕೃತಿಕ ವ್ಯಕ್ತಿತ್ವವನ್ನು ಪಡೆದು ಕೊನೆಗೆ ವಾಣಿಜ್ಯಮುಖವನ್ನು ರೂಪಿಸಿಕೊಂಡಾಗ ಜಾತ್ರೆಯಾಯಿತು ಎಂದು ಹೇಳುವುದು ಸೂಕ್ತ. ಅಂದಿನ ಜಾತ್ರೆಯಲ್ಲಿ ಅರವಟ್ಟಿಕೆಗಳು, ದಾಸೋಹಗಳ ಬದಲಿಗೆ ಹೋಟೆಲ್, ಫಾಸ್ಟಫುಡ್‌ನ ವ್ಯವಸ್ಥೆ ಬಂದಿದೆ. ಮಜ್ಜಿಗೆ, ಎಳನೀರು, ಹಣ್ಣಿನ ರಸಗಳ ಜೊತೆಗೆ ತಂಪು ಪಾನೀಯಗಳು

ಸೇರಿಕೊಂಡಿವೆ. ಧಾರ್ಮಿಕ ಕಾರ್ಯಕ್ರಮಗಳಾದ ನಾಟಕ, ಹರಿಕಥೆ, ಜನಪದ ಹಾಡು, ಕಲಾಮೇಳಗಳು ಇಂದು ಬೇರೊಂದು ರೂಪವನ್ನು ಪಡೆಯುತ್ತಿವೆ. ಪ್ರಸ್ತುತ ಚಲನಚಿತ್ರಗಳದ್ದೇ ಕಾರುಬಾರು. ಹಿಂದೆ ದೇಶಿಯ ಉತ್ಪನ್ನಗಳ ಮಾರಾಟಗಾರರು ಪ್ರಚಾರಕ್ಕಾಗಿ ಜನಸೇರುವ ಜಾತ್ರೆಗಳನ್ನು ಆಯ್ದುಕೊಳ್ಳುತ್ತಿದ್ದರು. ಇದು ರೈತರಿಗೆ ಅನುಕೂಲವು ಆಗಿತ್ತು. ಆದರೆ ಇಂದು ರಾಷ್ಟ್ರೀಯ ಕಂಪನಿಗಳ ಉತ್ಪನ್ನಗಳ ಪ್ರದರ್ಶನಕ್ಕೆ ಜಾತ್ರೆಗಳು ಕೇಂದ್ರಸ್ಥಾನವಾಗಿವೆ.

ಬನಶಂಕರಿ ಜಾತ್ರೆಯಲ್ಲಿ ಬಾಳೆಹಣ್ಣು, ಕುಂಕುಮ, ವಿಭೂತಿ, ಬಳೆಗಳು, ಆಟಿಕೆ ಸಾಮಾನುಗಳು, ಫಳಾರ, ಕೃಷಿಯೋಪಕರಣಗಳು, ಸಿಹಿ ತಿನಿಸುಗಳ ಅಂಗಡಿಗಳ ಆಕರ್ಷಣೆ ವಿಶೇಷವಾಗಿರುತ್ತದೆ. ಈ ಜಾತ್ರೆಯಲ್ಲಿ ಜಾನುವಾರುಗಳ ಪ್ರದರ್ಶನ ಮತ್ತು ಮಾರಾಟ ಮಾಡಲಾಗುತ್ತದೆ. ಈ ಆಯೋಜನೆಯನ್ನು ತಾಲೂಕು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಆಶ್ರಯದಲ್ಲಿ ನಡೆಯುತ್ತದೆ. ಇದನ್ನು ಪ್ರತಿವರ್ಷ ಬನಶಂಕರಿ ದೇವಿಯ ಜಾತ್ರೆಯ ರಥೋತ್ಸವ ಮುಗಿದು ಐದು ದಿನಗಳ ನಂತರ ಜಾನುವಾರುಗಳ ಜಾತ್ರೆ ಮಾಡಲಾಗುವುದು. ಜಾತ್ರೆಯಲ್ಲಿ ಜೋಡು ಎತ್ತುಗಳ ಮೌಲ್ಯ ೫೦,೦೦೦ ದಿಂದ ೨,೦೦೦೦೦ ವರೆಗೆ ಇರುತ್ತದೆ. ಜಾನುವಾರು ಪ್ರದರ್ಶನದಲ್ಲಿ ಉತ್ತಮ ತಳಿಯ ಆರೋಗ್ಯವಾದ ಜಾನುವಾರುಗಳಿಗೆ ಪ್ರಶಸ್ತಿಯನ್ನು ನೀಡಲಾಗುವುದು. ಪ್ರಶಸ್ತಿಗಳನ್ನು ಸ್ಥಳೀಯ ಜಾತ್ರಾ ಕಮಿಟಿ, ಜನಪ್ರತಿನಿಧಿಗಳು, ಕೃಷಿ ಮಾರುಕಟ್ಟೆಯವರು ನೀಡುತ್ತಾರೆ. ಇದಲ್ಲದೆ ಈ ಜಾತ್ರೆಯು ಕೃಷಿಗೆ ಸಂಬಂಧಿಸಿದ ವಸ್ತುಗಳು, ಗೃಹ ಉಪಯೋಗಿ ವಸ್ತುಗಳನ್ನು ಪೂರೈಸುವ ಮಾರುಕಟ್ಟೆಯಾಗಿರುವುದು ಗಮನಾರ್ಹ.

ಬನಶಂಕರಿ ಜಾತ್ರೆಯ ಮತ್ತೊಂದು ವಿಶೇಷತೆಯಂದರೆ ಬಂದ ಭಕ್ತರಿಗೆ, ಯಾತ್ರಿಕರಿಗೆ ಅಲ್ಲಿ ಸಿಗುವ ರೊಟ್ಟಿ ಊಟ, ಮೊಸರು ಬಹು ಅಚ್ಚುಮೆಚ್ಚು. ಇಲ್ಲಿ ರೊಟ್ಟಿ, ಮೊಸರು ಮಾರಾಟ ಮಾಡುವವರು ಅವುಗಳನ್ನು ಬುಟ್ಟಿಯಲ್ಲಿ ಇಟ್ಟುಕೊಂಡು ತಲೆಯ ಮೇಲೆ ಹೊತ್ತು ಜಾತ್ರೆಯ ತುಂಬ ಸಾಗುತ್ತಾರೆ. ಈ ವ್ಯಾಪಾರಸ್ಥರು ಬಾದಾಮಿ ತಾಲೂಕಿನ ಡಾಣಕಶಿರೂರು, ಮನ್ನೇರಿ, ಖ್ಯಾಡ, ಕಾತರಕಿ, ಯರಗೊಪ್ಪ, ಶಿವಯೋಗಮಂದಿರ ಮುಂತಾದ ಗ್ರಾಮಗಳ ಹೆಣ್ಣುಮಕ್ಕಳು “ಬರ್ರೀ ಸಾಹೇಬ್ರ, ಬರ್ರೀ ತಂಗಿ ಊಟಾ ಮಾಡಬರ್ರೀ, ರೊಟ್ಟಿ, ಗಟ್ಟಿ ಮೊಸರು ಐತಿ ಬರ್ರೀ. ಹತ್ತು ರೂಪಾಯಿದಾಗ ಹೊಟ್ಟೆ ತುಂಬತೈತಿ ಬರ್ರೀ. ಊಟಾ ಆದಮ್ಯಾಗ ಒಂದು ಚರಗಿ ಮಜ್ಗಿ ಕೊಡತೀವಿ ಬರ್ರೀ ಸಾಹೇಬ್ರ. ಇಲ್ಲಂದ್ರ ಗಟ್ಟಿ ಮೊಸರು ಐತಿ ಸಕ್ರಿ ಕೊಡ್ತಿವಿ ಅಪ್ಪಾರ, ಸಾಹೇಬ್ರ ಹೊಟ್ಟಿ ತಂಪಾಗತೈತಿ ಬರ್ರಿ” ಎಂದು ಹೇಳಿ ಸ್ವಲ್ಪ ಹಣದಲ್ಲಿ ಹೊಟ್ಟೆ ತುಂಬಿಸುವರು.

ಹಿಂದೆ ಬನಶಂಕರಿ ಕ್ಷೇತ್ರಕ್ಕೆ ಬಂದ ಭಕ್ತರಿಗೆ ಇಲ್ಲಿ ಊಟಕ್ಕೆ ಹೊಟಲ್‌ಗಳ ವ್ಯವಸ್ಥೆ ಇರಲಿಲ್ಲ. ಆದ್ದರಿಂದ ಭಕ್ತರಿಗೆ ಊಟ ನೀಡುವುದು ಪುಣ್ಯದ ಕೆಲಸವೆಂದು ತಿಳಿದು ಅಂದು ಸೇವಾ ಭಾವದಿಂದ ಆರಂಭವಾದ ಈ ಪದ್ಧತಿ ಇಂದು ವ್ಯವಹಾರ ದೃಷ್ಟಿಯಿಂದ

ಮಾಡುತ್ತಿದ್ದಾರೆ. ಜಾತ್ರೆಯಂದು ಮಾತ್ರವಲ್ಲದೇ ಉಳಿದ ದಿನಗಳಲ್ಲಿಯೂ ಸಹ ಈ ವ್ಯಾಪಾರವನ್ನು ಮಾಡುವುದನ್ನು ಕಾಣಬಹುದು. ಇದು ಗ್ರಾಮೀಣ ಹೆಣ್ಣುಮಕ್ಕಳು ಆರ್ಥಿಕ ಸ್ವಾವಲಂಭನೆ ಹೊಂದಲು ಸಹಕಾರಿಯಾಗಿದೆ.

ಸಾರಿಗೆ ಸಂಪರ್ಕದ ಪ್ರಭಾವದಿಂದ ಮತ್ತು ಪರಿಣಾಮದಿಂದ ಜಾತ್ರೆಯ ಸ್ಥಿತಿಯು ಬದಲಾದಂತೆ ಗೋಚರಿಸುತ್ತದೆ. ಪೂರ್ವದಲ್ಲಿ ಸುತ್ತಮುತ್ತಲಿನ ಜನರು ಬನದ ಹುಣ್ಣಿಮೆಯ ದಿನದಂದು ಬರೀಗಾಲಿನಲ್ಲಿ ಗುಡಿಗೆ ನಡೆದುಕೊಂಡು ಬರುತ್ತಿದ್ದರು. ಅಲ್ಲದೆ ಜಾತ್ರೆಯ ಸಂದರ್ಭದಲ್ಲಿ ಬಂಡಿ ಕಟ್ಟಿಕೊಂಡು ಬರುತ್ತಿದ್ದಂತಹ ಸಂಗತಿಯು ಸಾಮಾನ್ಯವಾಗಿ ಇತ್ತು. ಹಾಗೆಯೇ ಬಂದವರು ಐದಾರೂ ದಿನಗಳಿದ್ದು ಜಾತ್ರೆಯನ್ನು ಮುಗಿಸಿಕೊಂಡು ಹೋಗುವುದು ರೂಢಿಯಲ್ಲಿತ್ತು. ಪ್ರಸ್ತುತ ಸರಕಾರಿ ಬಸ್ಸುಗಳು, ಇತರೆ ಖಾಸಗಿ ವಾಹನಗಳ ಸೌಲಭ್ಯದಿಂದಾಗಿ ಬೆಳಗ್ಗೆ ಬಂದು ಕತ್ತಾಲದ ನಂತರ ಮರಳಿ ತಮ್ಮ ಸ್ವಸ್ಥಳಕ್ಕೆ ಹೋಗುವವರ ಸಂಖ್ಯೆ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಜಾತ್ರೆಗೆ ಬರುವ ವ್ಯಕ್ತಿಗಳಿಗಿಂತ ವಾಹನಗಳ ಸಂಖ್ಯೆಯೇ ಅಧಿಕವಾಗಿರುತ್ತವೆ. ಇದರಿಂದ ಜನರು ಜಾತ್ರೆಯಲ್ಲಿ ವಾಸ್ತವ್ಯ ಹೂಡಲು ಕಷ್ಟವಾಗುವುದು.

ಈ ಜಾತ್ರೆಯು ಭಕ್ತಿಭಾವ, ಧಾರ್ಮಿಕ ಪ್ರಮುಖ ಆಚರಣೆಯಾಗಿದೆ. ಹಾಗೆಯೇ ಈ ಸಂದರ್ಭದಲ್ಲಿ ಕ್ಷೇತ್ರವು ಅತ್ಯಂತ ಮಾಲಿನ್ಯ, ಸೊಂಕು ರೋಗಗಳ ತಾಣವಾಗುವುದು. ಬಹಳ ಸೀಮಿತವಾದ ಸ್ಥಳವಾದ್ದರಿಂದಾಗಿ ಶ್ರೀ ಕ್ಷೇತ್ರಕ್ಕೆ ಬರುವ ಭಕ್ತರಿಗಾಗಿ ಪ್ರತ್ಯೇಕ ಮನೆಗಳು, ಶೌಚಾಲಯಗಳು, ಕುಡಿಯುವ ನೀರಿನ ವ್ಯವಸ್ಥೆ ಅಭಾವವನ್ನು ಕಾಣಬಹುದು. ಜಾತ್ರೆಯಲ್ಲಿ ತೆರೆದ ತಾತ್ಕಾಲಿಕ ಹೋಟಲ್‌ಗಳ ತ್ಯಾಜ್ಯವಸ್ತುಗಳನ್ನು ಬಿಸಾಕಲು ಸರಿಯಾದ ವ್ಯವಸ್ಥೆ ಇರದ ಕಾರಣದಿಂದಾಗಿ ಸಾಕಷ್ಟು ಮಾಲಿನ್ಯವು ಉಂಟಾಗುತ್ತದೆ. ಜಾತ್ರೆಯು ಮುಗಿದು ತಿಂಗಳಾದರೂ ಕೂಡ ಮಾಲಿನ್ಯ ಮುಕ್ತವಾಗುವುದಿಲ್ಲ. ಉಸಿರುಗಟ್ಟುವಷ್ಟು ದರ್ವಾಸನೆ ಅಲ್ಲಿರುತ್ತದೆ.

**ಬನಶಂಕರಿ ದೇವಿಯ ರಥೋತ್ಸವ**

ಬನಶಂಕರಿ ಜಾತ್ರೆಯ ಅತ್ಯಂತ ಆಕರ್ಷಣೀಯ ಕೇಂದ್ರವೆಂದರೆ ರಥೋತ್ಸವ. ದೇವಿಯ ರಥವನ್ನು ಶಾಸ್ತ್ರೋಕ್ತ ವಿಧಿ – ವಿಧಾನಗಳಿಂದ ರಚಿಸಲಾಗಿದೆ. ಆದರೆ ಇದರ ರಚನಾಕಾರರ ಮಾಹಿತಿ ಲಭ್ಯವಿಲ್ಲ. ಇದನ್ನು ಜಾಲಿಹಾಳದ ದೇಸಾಯಿಯುರು ಮಾಡಿಸಿರಬಹುದೆಂಬ ಪ್ರತೀತಿಯುಂಟು. ಇದಕ್ಕೆ ಸಂಬಂಧಿಸಿದ ಲಿಖಿತ ದಾಖಲೆಗಳಿಲ್ಲ. ರಥಕ್ಕೆ ಐದು ಅಂಕಣಗಳಿದ್ದು, ಜಾತ್ರೆಯ ವೇಳೆಯಲ್ಲಿ ಇನ್ನುಳಿದ ಐದು ಅಂಕಣಗಳನ್ನು ಕಟ್ಟುತ್ತಾರೆ. ಈ ರಥಕ್ಕೆ ನಾಲ್ಕು ದೊಡ್ಡ ದೊಡ್ಡ ಕಲ್ಲಿನ ಗಾಲಿಗಳಿವೆ. ರಥೋತ್ಸವದ ದಿನ ತೇರಿನ ಮುಂದೆ ರಥಾಂಗಹೋವನ್ನು ಮಾಡುವರು. ರಥೋತ್ಸವವು ನಿರ್ವಿಘ್ನನವಾಗಿ ನಡೆಯಬೇಕೆಂಬ ಉದ್ದೇಶದಿಂದ ಈ ಹೋಮವನ್ನು ಮಾಡಲಾಗುತ್ತದೆ. ಪ್ರತಿವರ್ಷ

ಬನದ ಹುಣ್ಣಿಮೆಯ ದಿನದಂದು ರಥೋತ್ಸವವು ಜರಗುವುದು. ರಥೋತ್ಸವವು ಆರಂಭವಾಗುವ ಒಂದು ವಾರ ಪೂರ್ವದಿಂದಲೇ ರಥವನ್ನು ಶುದ್ಧಿಗೊಳಿಸುವ ಕಾರ್ಯವನ್ನು ಆರಂಭಿಸುತ್ತಾರೆ. ರಥಕ್ಕೆ ಕೊಬ್ಬರಿ ಮತ್ತು ಸೆಂಗಾದ ಎಣ್ಣೆಯ ಜೊತೆಗೆ ತಕ್ಕಷ್ಟು ಸುರುಮವನ್ನು ಬೆರೆಸಿ ರಥಕ್ಕೆ ಲೇಪಿಸುವರು. ಈ ಸುರುಮವನ್ನು ಕೆಂಪು ಕಲ್ಲಿನ ಪುಡಿಯಿಂದ ತಯಾರಿಸುತ್ತಾರೆ. ಇಂತಹ ಕಲ್ಲು ಬನಶಂಕರಿ ಕ್ಷೇತ್ರದ ಪರಿಸರದಲ್ಲಿ ಸಿಗುತ್ತದೆ. ಆ ಕಲ್ಲನ್ನು ಪುಡಿಮಾಡಿ ಅದನ್ನು ಹಚ್ಚುತ್ತಿದ್ದರು. ಆದರೆ ಪ್ರಸ್ತುತ ಈ ಪುಡಿಯು ಸಿದ್ಧರೂಪದಲ್ಲಿ ಸಿಗುವುದರಿಂದ ಅದನ್ನು ಕೊಂಡುತಂದು ಹಚ್ಚುತ್ತಿದ್ದಾರೆ. ಕ್ರಿಮಿಕೀಟಗಳ ಹಾವಳಿಯಿಂದ ರಥಕ್ಕೆ ಹಾನಿಯಾಗದೇ ಇರಲಿ ಎಂಬ ಉದ್ದೇಶದಿಂದ ಇದನ್ನು ಲೇಪಿಸುತ್ತಾರೆ.

ಸ್ವಚ್ಛಗೊಳಿಸುವಾಗ ರಥದ ಯಾವುದೇ ಭಾಗವು ಭಗ್ನವಾದರೆ ಅದು ಪೂಜೆಗೆ ಯೋಗ್ಯವಲ್ಲ. ಆದ್ದರಿಂದ ರಥವನ್ನು ಶೃಂಗರಿಸುವಾಗ ಜಾಗರೂಕತೆಯನ್ನು ವಹಿಸುತ್ತಾರೆ. ರಥದ ಅಲಂಕಾರ ಸೇವೆಯನ್ನು ಎಲ್ಲ ಸಮುದಾಯದವರು ಪ್ರತಿವರ್ಷ ನಡೆಸಿಕೊಂಡು ಬರುತ್ತಿದ್ದಾರೆ. ರಥದ ಮಂಟಪ ಭಾಗದವರೆಗೂ ಸ್ಥಾಯಿಯಾಗಿದ್ದು, ಉತ್ಸವದ ಸಮಯದಲ್ಲಿ ಇದರ ಮೇಲ್ಭಾಗದಲ್ಲಿ ಬಿದುರು ಹಾಗೂ ಅಡಿಕೆ ಪಟ್ಟಿಕೆಗಳನ್ನು ಬಳಸಿ ಕಲಾತ್ಮಕವಾದ ಬೃಹದಾಕಾರದ ಗೋಪುರವನ್ನು ನಿರ್ಮಿಸುತ್ತಾರೆ. ಅದನ್ನು ಬಣ್ಣ ಬಣ್ಣದ ಬಟ್ಟೆ, ಕಾಗದಗಳಿಂದ ಶೃಂಗರಿಸುತ್ತಾರೆ. ಗೋಪುರದ ತುದಿಯಲ್ಲಿ ಪಂಚಲೋಹದ ಕಳಸವನ್ನು ಕಟ್ಟುವರು. ಉತ್ಸವದ ಸಮಯದಲ್ಲಿ ರಚನೆಯಾದ ರಥದ ಎತ್ತರ ಸುಮಾರು ೮೦ ಅಡಿಗಳವರೆಗೂ ಆಗಬಹುದು. ಹೀಗೆ ಸಿದ್ಧಗೊಂಡ ರಥದ ಮಂಟಪದಲ್ಲಿ ಬನಶಂಕರಿಯ ಉತ್ಸವ ಮೂರ್ತಿಯನ್ನು ಇಟ್ಟು ಪೂಜಿಸಿ ರಥೋತ್ಸವಕ್ಕೆ ಚಾಲನೆಯನ್ನು ನೀಡುತ್ತಾರೆ.

ರಥವು ಮುಂದೆ ಸಾಗುತ್ತಿದ್ದಂತೆ ಭಕ್ತರ ಉತ್ಸಾಹ ಮುಗಿಲು ಮುಟ್ಟುತ್ತದೆ. ಚಲಿಸುತ್ತಿರುವ ತೇರಿಗೆ ಉತ್ತತ್ತಿ, ಬಾಳೆಹಣ್ಣು, ನಿಂಬೆಹಣ್ಣು, ಶೆಂಗವನ್ನು ಒಗೆಯುತ್ತಾರೆ. ಶಂಭೂಕೋ, ಶಂಭೂಕೋ ಎಂದು ಜಯಘೋಷ ಹಾಕುತ್ತಾ ತೇರು ಎಳೆಯುವ ಜನರ ಸಂಭ್ರಮ ನೋಡಲು ಸೊಗಸಾಗಿರುತ್ತದೆ. ನಂತರ ತೇರು ತನ್ನ ಮೂಲ ಸ್ಥಾನಕ್ಕೆ ಬಂದು ನಿಲ್ಲುವುದು. ಸಾವಿರಾರು ಭಕ್ತರು ರಥೋತ್ಸವದಲ್ಲಿ ಭಾಗವಹಿಸುವ ಮೂಲಕ ವಿಶಿಷ್ಟ ಸಾಂಸ್ಕೃತಿಕ ಹಬ್ಬದ ಪರಿಸರ ಅಲ್ಲಿ ರಚನೆಯಾಗುವುದು ಕಂಡುಬರುತ್ತದೆ.

ರಥವನ್ನು ಎಳೆಯಲು ಪುಂಡಿನಾರಿನಿಂದ ಮಾಡಿದ ಹಗ್ಗವನ್ನು ಮಾಡಲಗೇರಿ ಗ್ರಾಮದಿಂದ ತರಲಾಗುತ್ತದೆ. ಈ ಹಿನ್ನೆಲೆಯಲ್ಲಿ ಒಂದು ಐತಿಹ್ಯವಿದೆ. ಈ ಮೊದಲೇ ತಿಳಿಸಿರುವಂತೆ ಮಾಡಲಗೇರಿ ಗ್ರಾಮವು ಬನಶಂಕರಿಯ ತವರೂರು ಎಂಬುವ ಪ್ರತೀತಿಯುಂಟು. ಆದ್ದರಿಂದ ಪ್ರತಿವರ್ಷವು ಕೂಡ ಈ ಗ್ರಾಮದಿಂದಲೇ ಹಗ್ಗವನ್ನು ತರುತ್ತಾರೆ. ಈ ಹಗ್ಗವನ್ನು ಮಾಡುವ ಜವಾಬ್ದಾರಿಯನ್ನು ಗ್ರಾಮದ ಗಾಣಿಗ ಸಮುದಾಯದವರು ವಹಿಸಿಕೊಂಡಿರುತ್ತಾರೆ. ಇವರಿಗೆ ಗ್ರಾಮಸ್ಥರೆಲ್ಲರೂ ತಮ್ಮ ಸಾಮರ್ಥ್ಯಕ್ಕೆ ಅನುಸಾರವಾಗಿ ಹಣಕಾಸಿನ ನೆರವನ್ನು ನೀಡುವರು. ಈ ಹಗ್ಗವನ್ನು ತಯಾರಿಸಲು

ಸುಮಾರು ಒಂದು ಲಕ್ಷದವರೆಗೂ ವೆಚ್ಚವಾಗುವುದು. ಹಗ್ಗವನ್ನು ಪ್ರತಿವರ್ಷದ ಬದಲಿಗೆ ಅದು ಹರಿದಾಗ ಮಾತ್ರ ಹೊಸದನ್ನು ತಯಾರಿಸುವರು.

ಪ್ರತಿವರ್ಷವೂ ಜಾತ್ರೆಯ ಹಿಂದಿನ ದಿನ ದೇವಸ್ಥಾನದಲ್ಲಿ ಇಟ್ಟಿರುವ ಹಗ್ಗವನ್ನು ತಮ್ಮ ಗ್ರಾಮಕ್ಕೆ ತೆಗೆದುಕೊಂಡು ಹೋಗುತ್ತಾರೆ. ನಂತರ ಗ್ರಾಮಸ್ಥರೆಲ್ಲರೂ ಸೇರಿ ಹದಿನಾರೆತ್ತಿನ ಹಳಿಬಂಡಿಯಲ್ಲಿ ಹಗ್ಗವನ್ನು ಇಟ್ಟು, ಅದಕ್ಕೆ ಪೂಜಿಸಿ, ಎಡೆಯನ್ನು ಅರ್ಪಿಸಿದ ನಂತರ ಬನಶಂಕರಿಗೆ ವಿಜೃಂಭಣೆಯಿಂದ ತರಲಾಗುತ್ತದೆ. ಹಳಿಬಂಡಿಯ ಮುಂದೆ ಗ್ರಾಮದವರು ಕುಣಿಯುತ್ತ, ಸಂಗೀತ ವಾದ್ಯಗಳ ಜೊತೆ ಜೊತೆಗೆ ಹೆಜ್ಜೆಯನ್ನು ಹಾಕಿ, ವಿವಿಧ ರಂಗುಗಳನ್ನು ಚಲ್ಲುತ್ತಾ ಹಬ್ಬದ ರೀತಿಯಲ್ಲಿ ಆಚರಿಸಿಕೊಂಡು ಬರುತ್ತಾರೆ. ಹಗ್ಗವಿರುವ ಬಂಡಿಯನ್ನು ಹೊತ್ತ ಹೋರಿಗಳಿಗೆ ಅಲಂಕಾರದಲ್ಲಿ ಜೂಲ, ತೊಗಲಿನ ಬಾಸಿಂಗ, ಹಣೆಕಟ್ಟು ಇತ್ಯಾದಿ ವಸ್ತುಗಳನ್ನು ಹಾಕಿ ಶೃಂಗರಿಸುವರು. ಹೋರಿಗಳಿಗೂ ಕೂಡ ರಂಗನ್ನು ಹಚ್ಚುತ್ತಾರೆ. ಹೀಗೆ ಶೃಂಗರಿಸಿಕೊಂಡ ಹಳಿಬಂಡಿಯು ಸಡಗರದಿಂದ ಬನಶಂಕರಿಗೆ ಹೊರಡುತ್ತದೆ. ಮೆರವಣಿಗೆಯ ಸಂದರ್ಭದಲ್ಲಿ ಗ್ರಾಮಸ್ಥರು ಹೇಳುವ ಪದಗಳು ಸೊಗಸಾಗಿವೆ.

**ಗ್ರಾಮಸ್ಥರು ಹೇಳುವ ಬನಶಂಕರಿಯ ಹಾಡುಗಳು**

೧. “ಶರಣರು ಬಾಳಿ ಬೆಳಗಿದ ಪಂಚ ನದಿಗಳ ಬೀಡು
ಪುಣ್ಯ ಕ್ಷೇತ್ರದ ನಾಡು ಬಾದಾಮಿ ಚಾಲುಕ್ಯ ನಗರ, ಏನ ಚಂದೈತೆ
ನಾಡ ದೇವಿ ಬನಶಂಕರಿ ತಾಯಿಯ ಉಡಿಯೋಳು ತುಂಬೈತೆ”

೨. “ತವರವರು ತಂದ ಮಡಿಯ ಉಟಗೊಂಡು
ಮಲ್ಲಿಗಿ ದಂಡಿ ಮುಡಕೊಂಡು
ನಕ್ಕೊಂತ ತೇರ ಏರ್‍ಯಾಳ ಬನದವ್ವ
ನಾಡಿನ ಜನರಿಗೆ ಹರಿಸ್ಯಾಳ ಹರುಷವ”

೩. “ಹದಿನಾರೆತ್ತಿನ ಹಳಿಬಂಡಿ ಬೇಡಿದ ಮಹೇಶ್ವರಿ ನಿನ್ನ ವಾಲಗೋ
ಮಾಡಲಗೇರಿ ನಾಗಡಗೌಡರಿಗೆ ವಾಸವಾದ ದೇವಿ ನಿನ್ನ ವಾಲಗೋ”

೪. “ಹತ್ತಿ ಗಿಡದ ಸತ್ಯವ್ವ ನಿನ್ನ ವಾಲಗೋ
ಹೊಂಡದಕಟ್ಟಿ ಕುಂಡ ಭರಮ ನಿನ್ನ ವಾಲಗೋ”

೫. “ಯಂಕಂಚಿ ಎಳೆ ಮಾವು, ಕೆಂದೂರ ಕೆರೆ ಮಾವು
ಬಾ ದೇವಿ ಬಿಳಿ ಮಾವಿನ ತಂಪಿಗೆ ನೆಲೆಸಿದಂತ ತಾಯಿ ನಿನ್ನ ವಾಲಗೋ”

೬. “ಬಾದಾಮಿ ದಾರ್‍ಯಾಗ ಬರಗೊಡದು ಅದು ಏನ?
ಹದಿನಾರೆತ್ತಿನ ಹಳಿಬಂಡಿ ಬರುವಾಗ

ತವರವರು ಬರುವ ದಾರಿಯ ನೋಡಿ
ತಾಯಿ ಬನದವ್ವ ನಗತಾಳೋ"

ಹೀಗೆ ಗ್ರಾಮಸ್ಥರು ಹಳಿಬಂಡಿಯ ಮೆರವಣಿಗೆಯ ಸಂದರ್ಭದಲ್ಲಿ ಮನದುಂಬಿ ಈ ಹಾಡುಗಳನ್ನು ಹಾಡುತ್ತಾ ಬನಶಂಕರಿ ಕ್ಷೇತ್ರಕ್ಕೆ ಬರುತ್ತಾರೆ.

ಮಾಡಲಗೇರಿ ಗ್ರಾಮದಲ್ಲಿ ಹಳಿಬಂಡಿ ಮೆರವಣಿಗೆ ನೋಡಲು ಸುತ್ತಲಿನ ಹಳ್ಳಿಗಳಿಂದ ನೂರಾರು ಜನರು ಬರುವರು. ರಾತ್ರಿಯಿಂದ ಬೆಳಗಿನವರೆಗೆ ಈ ಮೆರವಣಿಗೆಯ ಹಿಂದಿನ ದಿನ ಗ್ರಾಮದಲ್ಲಿ ಕರಡಿಮಜಲು, ಗೀಗೀಪದ, ಡೊಳ್ಳಿನ ಪದ ಮೊದಲಾದ ವೈಭವಪೂರ್ಣ ಕಾರ್ಯಕ್ರಮಗಳು ಪ್ರತಿವರ್ಷವು ಜರಗುತ್ತದೆ. ಹೀಗೆ ಈ ಗ್ರಾಮ ಹಾಗೂ ಬನಶಂಕರಿಯ ಕ್ಷೇತ್ರ ಹೊಂದಿರುವ ಅವಿನಾಭಾವ ಸಂಬಂಧವು ಗಮನಾರ್ಹವಾಗಿದೆ. ಇಂತಹ ವಿಶಿಷ್ಟ ಸಂಪ್ರದಾಯವನ್ನು ಹೊಂದಿರುವ ಮಾಡಲಗೇರಿ ಗ್ರಾಮದ ಇತಿಹಾಸವು ಅಷ್ಟೊಂದು ಪ್ರಚಲಿತವಾಗಿಲ್ಲ. ಗ್ರಾಮದವರು ಸಲ್ಲಿಸುವ ಈ ಸೇವೆಯಿಂದಾಗಿ ದೇವಿಯ ಅರ್ಚಕರು ಇವರಿಂದ ಜಾತ್ರಾ ಸಮಯದಲ್ಲಿ ತಲೆಗಂದಾಯವನ್ನು ವಸೂಲಿ ಮಾಡುವುದಿಲ್ಲ. ಹಾಗೂ ಗಾಣಿಗ ಸಮುದಾಯದ ಗೌಡರಿಗೆ ಜಾತ್ರೆಯಲ್ಲಿ ಉಲ್ಫಿ(ದವಸ ಧಾನ್ಯಗಳು)ಯನ್ನು ಕೊಡುವ ಪದ್ಧತಿ ಇದೆ. ಪುಷ್ಯ ಬಹುಳ ಚೌಥಿಯ ದಿನ (ರಥೋತ್ಸವ ನಡೆದ ಐದನೆಯ ದಿನ)ದಂದು ರಥದ ಕಳಶವನ್ನು ಇಳಿಸುವ ಕಾರ್ಯ ನಡೆಯುವುದು. ಇಲ್ಲಿಗೆ ಜಾತ್ರೆಯ ಕಾರ್ಯವು ಮುಕ್ತಾಯವಾಗುವುದು.

* * * * *

ಹೂ ಮುಡಿಸುವುದು





ಪಲ್ಲಕ್ಕಿ ಸೇವೆ

ಸೀದಾ ಅಥವಾ ಉಲ್ಫಿ ಕೊಡುವುದು





ತೆಪ್ಪದ ಸೇವಾ ಆಚರಣೆ

ಅಂಬು ಹಾಕುವುದು







ಉತ್ಸವದ ವಾಹನಗಳು

## ಬಲಿಹರಣ





ಜಾತ್ರೆಯಲ್ಲಿ ರೊಟ್ಟಿ ಊಟವನ್ನು ನೀಡುತ್ತಿರುವ ಮಹಿಳೆಯರು





ಆಟಿಕೆ ಸಾಮಗ್ರಿಗಳ ಅಂಗಡಿಗಳು



ಜಾತ್ರೆಯಲ್ಲಿ ಸಿನಿಮಾ ಮತ್ತು ನಾಟಕಗಳ ಟೆಂಟುಗಳು

ಅಲಂಕಾರಗೊಂಡ ಬನಶಂಕರಿಯ ರಥ



ಮೂಡಲಗೇರಿಯ ಹದಿನಾರೆತ್ತಿನ ಹಳಿಬಂಡಿ



ರಥದ ಹಗ್ಗ





ಹಳಿಬಂಡಿಯ ಮೆರವಣಿಗೆ

ಮುಖ್ಯ ಪ್ರವೇಶ ದ್ವಾರದಲ್ಲಿರುವ ಘಂಟೆಗಳು





ನವರಂಗದಲ್ಲಿರುವ ಲೋಹದ ಆಮೆಯ ಉಬ್ಬುಶಿಲ್ಪ



ದೇವಿಗೆ ಸಂಬಂಧಿಸಿದ ಬಂಗಾರದ ವಸ್ತುಗಳು

**ಅಡಿ ಟಿಪ್ಪಣಿಗಳು**

೧. ನಾವಡ ಎ.ವಿ., ೧೯೯೯, ಜನಪದ ನಂಬಿಕೆಗಳು – ತಾತ್ವಿಕತೆ, ಜನಪದ ಸಾಹಿತ್ಯ ದರ್ಶನ ಭಾಗ – ೨೩, ಪುಟ – ೧೬, ಪ್ರಸಾರಾಂಗ, ಕರ್ನಾಟಕ ವಿ.ವಿ. ಧಾರವಾಡ

೨. ಮಂಜುನಾಥ ಬೇವಿನಕಟ್ಟಿ, ೧೯೯೬, ಜನಪದ ನಂಬಿಕೆಗಳು, ಪುಟ – ೨೦, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ

೩. ದಾಸೇಗೌಡ. ಜಿ.ವಿ., ೧೯೭೩, ಜಾನಪದ ನಂಬಿಕೆಗಳು, ಪುಟ – ೧೦, ಪ್ರಸಾರಾಂಗ, ಮೈಸೂರು ವಿ.ವಿ. ಮೈಸೂರು

೪. Mariya Leach (ed), 1949, standard Dictanary of Folklore, mythology and legend, page - 146, New Delhi

೫. ಕೊಟ್ರಶೆಟ್ಟಿ ಎಂ.ಬಿ., (ಸಂ), ೧೯೯೦, ಜಾನಪದ ಸಾಹಿತ್ಯ ದರ್ಶನ, ಪುಟ – ೭, ೮, ಪ್ರಸಾರಾಂಗ, ಕರ್ನಾಟಕ ವಿ.ವಿ. ಧಾರವಾಡ

೬. ಚಲುವೇಗೌಡ ತ.ಚಿ., ೧೯೯೮, ಕೆಲವು ಜನಪದ ಸಂಪ್ರದಾಯಗಳು, ಪುಟ – ೩, ತಳಗವಾಡಿ ಪ್ರಕಾಶನ, ಮೈಸೂರು

೭. ವೃಷಬೇಂದ್ರಸ್ವಾಮಿ, ಎಸ್.ಎಂ., ೧೯೯೪, ಜನಪದ ಸಾಹಿತ್ಯ ದರ್ಶನ – ೧೫, ಪುಟ – ೪೪, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿ.ವಿ. ಧಾರವಾಡ

೮. Kittel. R.F., 1894, Kannada - English Dictionary, Page - 295, Bassel Mission press, Mangalore

೯. ಪುರುಷೋತ್ತಮ ಬಿಳಿಮಲೆ, ೧೯೯೪, ಐತಿಹ್ಯ ; ಸ್ವರೂಪ, ಲಕ್ಷಣ – ಪುರಾಣಗಳು, ಜಾನಪದ ಸಾಹಿತ್ಯ ದರ್ಶನ ಭಾಗ – ೧೫, ಪುಟ – ೩೦, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿ.ವಿ. ಧಾರವಾಡ

೧೦. ಶ್ರೀ ಶೇಷ ದೀಕ್ಷಿತ ಹಿಂಡಸಗಿರಿ, (ಮೂ), ಮಾರ್ತಂಡ ಚಿದಂಬರ ದೀಕ್ಷಿತ, ಬಡ್ಲಿ, (ಅನು), ೧೯೯೮, ಶ್ರೀ ಬನಶಂಕರಿ (ಶಾಖಾಂಬರಿ) ಮಹಾತ್ಮ್ಯಂ, ಪುಟ – ೬೧, ಪೂಜಾರ ಬಂಧುಗಳು, ಅರ್ಚಕರು, ಶ್ರೀ ಬನಶಂಕರಿ ಕ್ಷೇತ್ರ, ಬಾದಾಮಿ

೧೧. ಮಲ್ಹಾರಭಟ್ಟ ಪೂಜಾರ, ೧೯೭೨, ಶ್ರೀ ಶಾಕಂಬರೀ ಲಘು ಚರಿತ್ರೆ, ಚೊಳಚಗುಡ್ಡ, ಪುಟ – (i), ಪೂಜಾರ ಬಂಧುಗಳು, ಚೊಳಚಗುಡ್ಡ, ಬಾದಾಮಿ

೧೨. ಜವರೇಗೌಡ. ದೇ, ೧೯೯೧, ಜಾನಪದ ಅಧ್ಯಯನ, ಪುಟ – ೩೪೨, ಕನ್ನಡ ಪುಸ್ತಕ ಪ್ರಾಧಿಕಾರ, ಮೈಸೂರು

೧೩. ಚಿದಾನಂದಮೂರ್ತಿ. ಎಂ, ೨೦೦೨, ಜನ-ಜನಪದ-ಜಾನಪದ, ಪುಟ – ೩೬೮, ೩೬೯, ಸ್ವಪ್ನ ಬುಕ್‌ಹೌಸ್, ಬೆಂಗಳೂರು

೧೪. ಶಿವಕುಮಾರಸ್ವಾಮಿ. ಸಿ.ಎಸ್., ೧೯೮೮, (ಸಂ), ಕರ್ನಾಟಕದ ಜಾತ್ರೆಗಳು, ಪುಟ – ೫೭, ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ, ಬಿ.ಆರ್. ಪ್ರಾಜೆಕ್ಟ್, ಶಿವಮೊಗ್ಗ

೧೫. ಸಿದ್ದಲಿಂಗಯ್ಯ, ೧೯೯೭, ಗ್ರಾಮದೇವತೆಗಳು, ಪುಟ – ೭೧, ಮೂಲಭಾರತಿ ಪ್ರಕಾಶನ, ಬೆಂಗಳೂರು

೧೬. ಕಲಬುರ್ಗಿ ಎಂ.ಎಂ., ೧೯೯೫, ಜಾನಪದ ಮಾರ್ಗ, ಪುಟ – ೫೯, ಲಕ್ಷ್ಮೀ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು

೧೭. ಚಿದಾನಂದಮೂರ್ತಿ. ಎಂ., ೨೦೦೨, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ – ೨೧೪, ೨೧೫, ಸ್ವಪ್ನ ಬುಕ್‌ಹೌಸ್, ಬೆಂಗಳೂರು

೧೮. ಯಮನೂರಪ್ಪ ಅಣ್ಣಿಗೇರಿ, ೨೦೧೦, ಮಹಿಳೆ ಮತ್ತು ಸಮೃದ್ಧಿ ನೆಲೆಗಳು, ಪುಟ – ೧೧, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ

೧೯. ಪಾಟೀಲ ಎಸ್.ಸಿ., ೧೯೯೬, ಆಚರಣೆಯಲ್ಲಿ ಜನಪದ ವಾಸ್ತು, ಶಿಲ್ಪಗಳು, ಪುಟ – ೯, ೧೦, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ

೨೦. ನಾಯಕ್ ಎನ್.ಆರ್., ೧೯೮೮, ಕರ್ನಾಟಕ ಜಾತ್ರೆಗಳು, ಶಿವಕುಮಾರ ಸಿ.ಎಸ್., (ಸಂ), ಪುಟ – ೧೬೨, ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ, ಬಿ.ಆರ್. ಪ್ರಾಜೆಕ್ಟ್, ಶಿವಮೊಗ್ಗ

೨೧. ಜವರೇಗೌಡ ದೇ., ೧೯೯೧, ಪೂರ್ವೋಕ್ತ, ಪುಟ – ೩೭೧, ೩೭೨

೨೨. ಕಲಬುರ್ಗಿ ಎಂ.ಎಂ., ೧೯೮೮, ಮಹಾಮಾರ್ಗ – ೨, ಪುಟ – ೩೧೩, ಕರ್ನಾಟಕ ಬುಕ್ ಏಜನ್ಸಿ, ಬೆಂಗಳೂರು

೨೩. ರಹಮತ ತರಿಕೇರೆ, (ಲೇ), ಬನಶಂಕರಿ ಜಾತ್ರೆಯೊ, ನಾಟಕೋತ್ಸವವೋ?, ಸಾಪ್ತಾಹಿಕ ಪುರವಣಿ, ಪುಟ – ೩, ಪ್ರಾಜಾವಾಣಿ, ೧೩.೦೨.೨೦೧೧

# ಅಧ್ಯಾಯ : ಆರು

## ಸಮಾರೋಪ

ಭಾರತದ ಸಾಂಸ್ಕೃತಿಕ ಇತಿಹಾಸವನ್ನು ಸಮೃದ್ಧಿಗೊಳಿಸುವಲ್ಲಿ ಕರ್ನಾಟಕದ ಪಾತ್ರ ಮುಖ್ಯವಾಗಿದೆ. ಪ್ರಾಗಿತಿಹಾಸ ಕಾಲಘಟ್ಟದಿಂದ ಚರಿತ್ರೆ ಕಾಲದವರೆಗೆ ಈ ನಾಡು ವಿಫಲವಾದ ಐತಿಹಾಸಿಕ ಹಿನ್ನೆಲೆಗಳನ್ನು ಹೊಂದಿರುವುದು ಗಮನಾರ್ಹ. ಆದಿಮಾನವನು ನೆಲೆಸಲು ಯೋಗ್ಯವಾದ ಪರಿಸರವು ಈ ನಾಡಿನಲ್ಲಿ ಇದ್ದ ಕಾರಣ ಅವನು ಬಳಸಿ ಬಿಟ್ಟು ಹೋದ ಅವಶೇಷಗಳು ಸಮೃದ್ಧವಾಗಿ ದೊರೆಯುತ್ತವೆ. ಇವುಗಳಿಂದ ನಾಡಿನ ಇತಿಹಾಸ ಪೂರ್ವ ಚರಿತ್ರೆಯನ್ನು ಕಟ್ಟಲು ಸಾಧ್ಯವಾಗಿದೆ. ಇನ್ನು ಚರಿತ್ರೆ ಕಾಲಕ್ಕೆ ಬಂದರೆ ಅನೇಕ ಅರಸು ಮನೆತನಗಳು ತಮ್ಮದೆ ಆದ ಕೊಡುಗೆಗಳನ್ನು ನೀಡಿ ನಾಡಿನ ಸಾಂಸ್ಕೃತಿಕ ವಿಕಸನಕ್ಕೆ ಕಾರಣರಾದರು. ಈ ಹಿನ್ನೆಲೆಯಿಂದ ಕನ್ನಡ ನಾಡಿನ ಪ್ರಮುಖ ಐತಿಹಾಸಿಕ ಸ್ಥಳಗಳು ವಿಶ್ವಪರಂಪರೆ ತಾಣಗಳ ಪಟ್ಟಿಯಲ್ಲಿ ಸೇರಲು ಸಾಧ್ಯವಾಯಿತು. ನಾಡಿನ ಸಾಂಸ್ಕೃತಿಯ ವಿಕಸನಕ್ಕೆ ಕಾರಣವಾದ ಭೂಪ್ರದೇಶಗಳಲ್ಲಿ ಬಾದಾಮಿ ಪರಿಸರದ ಪಾತ್ರ ಹಿರಿದಾದುದು. ಬಾದಾಮಿ ಚಾಲುಕ್ಯರ ಆಳ್ವಿಕೆಯಿಂದಾಗಿ ಈ ಪ್ರದೇಶ ಪ್ರಸಿದ್ಧಿಯಾಗಲು ಕಾರಣವಾಯಿತು. ಆದ ಕಾರಣ ಬಾದಾಮಿ ಪರಿಸರದ ಚರಿತ್ರೆಯ ಬಗೆಗೆ ಅನೇಕ ವಿದ್ವಾಂಸರು ಕೃತಿ, ಸಂಶೋಧನ ಲೇಖನ, ಶಾಸನ ಸಂಪುಟ ಇತ್ಯಾದಿ ಅಸಂಖ್ಯಾತ ಗ್ರಂಥಗಳನ್ನು ಬರೆದಿದ್ದಾರೆ. ಅಷ್ಟೊಂದು ಆಕರ ಸಾಮಗ್ರಿಯು ಬಾದಾಮಿಯ ಪರಿಸರದಲ್ಲಿದೆ. ಆದರೆ ಪ್ರಸ್ತುತ ಬಾದಾಮಿ ಬನಶಂಕರಿ : ಚಾರಿತ್ರಿಕ ಅಧ್ಯಯನದ ವಿಷಯಕ್ಕೆ ಸಂಬಂಧಿಸಿದಂತೆ ಈವರೆಗೆ ವಿವರವಾದ ಅಧ್ಯಯನಗಳು ನಡೆದಿಲ್ಲ ಎಂದು ಹೇಳಬಹುದು. ಹಾಗಾಗಿ ಈ ಅಧ್ಯಯನದಲ್ಲಿ ಅಂತಹ ಒಂದು ಪ್ರಯತ್ನ ಮಾಡಲಾಗಿದೆ. ಈ ಪ್ರದೇಶದ ಸ್ಥಳೀಯ ಚರಿತ್ರೆಯನ್ನು ವಿಶ್ಲೇಷನಾತ್ಮಕ ಹಾಗೂ ವಿವರಣಾತ್ಮಕವಾಗಿ ಕಟ್ಟಿಕೊಡುವ ಪ್ರಯತ್ನದ ಹಿನ್ನೆಲೆಯಲ್ಲಿ ವ್ಯಾಪಕವಾದ ಕ್ಷೇತ್ರಕಾರ್ಯವನ್ನು ಕೈಗೊಳ್ಳಲಾಯಿತು.

ಕ್ಷೇತ್ರಕಾರ್ಯದ ಮೂಲಕ ಪ್ರದೇಶದಲ್ಲಿನ ಚಾರಿತ್ರಿಕ ಕಾಲಘಟ್ಟದ ದೇವಾಲಯಗಳು, ಮೂರ್ತಿಶಿಲ್ಪ, ಶಾಸನಗಳು, ಮಂಟಪ, ವೀರಗಲ್ಲು, ದೀಪಸ್ತಂಭಗಳು, ಕೆರೆ, ಕಟ್ಟೆ, ಬಾವಿಗಳ

ಕುರಿತು ಅಧ್ಯಯನ ನಡೆಸಲಾಗಿದೆ. ಅಲ್ಲದೆ ಬನಶಂಕರಿ ದೇವಿಯ ಚಾರಿತ್ರಿಕ ಹಿನ್ನೆಲೆ, ನಂಬಿಕೆ, ಆಚರಣೆ ಕುರಿತು ಸಮಗ್ರವಾಗಿ ಅಧ್ಯಯನ ಮಾಡಲಾಗಿದೆ. ಒಟ್ಟಾರೆಯಾಗಿ ಪ್ರಸ್ತುತ ವಿಷಯವನ್ನು ಸಮಗ್ರವಾಗಿ ತಿಳಿಯಲು, ಸೂಕ್ಷ್ಮ ಸಂಗತಿಗಳನ್ನು ಸಂಶೋಧನೆಯ ಮೂಲಕ ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

ಬಾದಾಮಿ ಬನಶಂಕರಿಯ ಚಾರಿತ್ರಿಕ ಹಿನ್ನೆಲೆಯನ್ನು ಗಮನಿಸಲು ವಿರಳವಾದ ದಾಖಲೆಗಳಿವೆ. ಇದುವರೆಗೆ ದೊರೆತ ಆಧಾರಗಳ ಮೂಲಕ ಕಂಡುಕೊಳ್ಳುವ ಅಂಶವೆಂದರೆ ಯಾವ ಅರಸು ಮನೆತನಗಳು ನೇರವಾಗಿ ದೇವಿಗೆ ಸೇವೆಯನ್ನು ಸಲ್ಲಿಸಿಲ್ಲ ಎಂಬುದು ತಿಳಿಯುತ್ತದೆ. ಬದಲಿಗೆ ಅವರ ಮಾಂಡಲಿಕರು ದೇವಿಗೆ ದಾನದತ್ತಿಗಳನ್ನು ನೀಡಿದ್ದಾರೆ. ಈ ದಿಸೆಯಿಂದ ಆಲೋಚಿಸುವುದಾದರೆ ಬನಶಂಕರಿ ದೇವಿಯು ಪೂರ್ವದಲ್ಲಿ ಕೆಳವರ್ಗದವರ ಆರಾಧ್ಯ ದೇವಿಯಾಗಿರಬಹುದು ಎಂಬುವ ಅಭಿಪ್ರಾಯ ವ್ಯಕ್ತವಾಗುತ್ತದೆ. ಬಾದಾಮಿ ಚಾಲುಕ್ಯರ ಬಹುಕಾಲ ಆಳ್ವಿಕೆಗೆ ಒಳಪಟ್ಟ ಈ ಪ್ರದೇಶದಲ್ಲಿ ಬನಶಂಕರಿ ದೇವಿಯ ಉಲ್ಲೇಖಗೊಂಡ ಯಾವುದೇ ದಾಖಲೆಗಳು ಇದುವರೆಗೂ ಲಭ್ಯವಾಗಿಲ್ಲದಿರುವುದು ವಿಷಾದದ ಸಂಗತಿ.

ಕರ್ನಾಟಕದ ಅನೇಕ ಶಕ್ತಿ ದೇವತೆಗಳಾದ ಮೈಸೂರಿನ ಚಾಮುಡೇಶ್ವರಿ, ಶಿರಸಿಯ ಮಾರಿಕಾಂಬೆ, ಶೃಂಗೇರಿಯ ಶಾರದಾಂಬೆ, ಶಿರಸಂಗಿಯ ಕಾಳಮ್ಮ, ಕೊಲ್ಲೂರು ಮೂಕಾಂಬಿಕೆ, ಸವದತ್ತಿಯ ಎಲ್ಲಮ್ಮ ಮೊದಲಾದ ದೇವತೆಗಳಿಗೆ ಸಂಬಂಧಿಸಿದಂತೆ ಹಲವು ಚಾರಿತ್ರಿಕ ದಾಖಲೆಗಳು ಲಭ್ಯವಾಗುತ್ತವೆ. ಆದರೆ ಕರ್ನಾಟಕದ ಪ್ರಸಿದ್ಧ ಶಾಕ್ತ ಕ್ಷೇತ್ರವಾದ ಹಾಗೂ ಐತಿಹಾಸಿಕ ಬಾದಾಮಿ ಪರಿಸರದಲ್ಲಿರುವ ಬನಶಂಕರಿ ದೇವಿಗೆ ಸಂಬಂಧಿದಂತಹ ದಾಖಲೆಗಳು ವಿರಳವಾಗಿರುವುದನ್ನು ಅಧ್ಯಯನದಲ್ಲಿ ಗಮನಿಸಲಾಗಿದೆ.

ಪ್ರಪಂಚದಲ್ಲಿ ದೈವದ ಕಲ್ಪನೆ, ಹುಟ್ಟು, ಬೆಳವಣಿಗೆಯು ಮಾನವನಷ್ಟೇ ಪ್ರಾಚೀನವಾದುದು. ಮಾನವನು ತನ್ನ ಬದುಕಿನ ಬಯಕೆಗಳಿಗೆ, ನೆಮ್ಮದಿಗೆ ದೈವಗಳ ಆರಾಧನೆಗೆ ಮುಂದಾಗಿದ್ದಾನೆ. ಆದಿ ಮಾನವನು ನಿಸರ್ಗದ ಚಟುವಟಿಕೆಗಳನ್ನು ಕಂಡು ಆಶ್ಚರ್ಯಪಟ್ಟು, ನಿಸರ್ಗದ ಶಕ್ತಿಯಿಂದ ತನಗೆ ಅಪಾಯ ಉಂಟಾಗದೇ ಇರಲಿ ಎಂತಲೋ ಅಥವಾ ಅದರಿಂದ ತನ್ನ ರಕ್ಷಣೆಯಾಗಲಿ ಎಂಬ ಉದ್ದೇಶಕ್ಕೆ ಆತ ಪ್ರಕೃತಿಯ ಆರಾಧಕನಾದನು. ಅಂದು ಆತನ ಮನಸ್ಥಿತಿ ಏನೇನು ಹಾದಿಗಳನ್ನು ಸೂಚಿಸಿತೋ ಅವೆಲ್ಲವೂ ಆಚರಣೆಗಳಾಗಿ ರೂಪುಗೊಂಡವು. ಇಂತಹ ನಂಬಿಕೆಗಳೇ ಮುಂದೆ ದೈವಗಳ ಪರಿಕಲ್ಪನೆ ಬೆಳೆಯಲು ಕಾರಣವಾಗಿರಬಹುದು. ಆದಿಮಾನವನ ಕಾಲದಿಂದ ಇಂದಿನವರೆಗೂ ಪ್ರಕೃತಿಯು ವೈಚಿತ್ರ್ಯಗಳಿಗೆ ಯಾವುದೇ ಒಂದು ಶಕ್ತಿ ಕಾರಣವಿರಬೇಕೆಂದು ನಂಬಿ, ಮನುಷ್ಯ ಆ ಶಕ್ತಿಯನ್ನೇ ದೈವವೆಂದು ತಿಳಿದು ಆರಾಧಿಸತೊಡಗಿದನು. ಹೀಗೆ ವ್ಯಕ್ತಿಯಿಂದ ವ್ಯಕ್ತಿಗೆ, ಸಮಾಜದಿಂದ ಸಮಾಜಕ್ಕೆ ದೈವಗಳ ಬಗ್ಗೆ ತಿಳುವಳಿಕೆ ಭಿನ್ನತೆಯ ರೂಪಗಳಲ್ಲಿ ಇರುವ

ಕಾರಣ ಭಿನ್ನ-ಭಿನ್ನ ನಾಮಗಳ ದೈವಗಳ ಉದಯಕ್ಕೆ ಕಾರಣವಾಗಿರಬೇಕು. ಹೀಗೆ ಹುಟ್ಟಿಕೊಂಡ ದೈವಗಳು ಪ್ರಸ್ತುತದಲ್ಲಿ ಅನೇಕ ರೂಪಾಂತರಗಳನ್ನು ಹೊಂದಿರುವುದು ಕಾಣುತ್ತಿದ್ದೇವೆ. ಇವುಗಳಿಂದ ಮಾನವನ ಮನಸ್ಸಿನ ವಿಕಾಸವನ್ನು ಅರಿಯಲು ಸಹಾಯಕವಾಗುತ್ತದೆ.

ನಮ್ಮ ಸಮಾಜವನ್ನು ಸಂಪೂರ್ಣ ಅರಿತುಕೊಳ್ಳಬೇಕಾದರೆ ನಮ್ಮಲ್ಲಿರುವ ಸಾಂಸ್ಕೃತಿಕ ಆಚರಣೆಗಳನ್ನು ಗಮನಿಸಲೇಬೇಕು. ಆಚರಣೆ, ನಂಬಿಕೆಗಳನ್ನು ಮೂಢನಂಬಿಕೆಗಳೆಂದು ನಿರ್ಲಕ್ಷಿಸುವಂತಿಲ್ಲ. ಕಾರಣ ಪ್ರತಿಯೊಂದು ಆಚರಣೆಗಳು ರೂಪುಗೊಳ್ಳುವುದಕ್ಕೆ ತಳಪಾಯವಾಗಿ ಅದರ ಹುಟ್ಟಿನಲ್ಲಿ ಒಂದು ಭೌತಿಕಾವಶ್ಯಕತೆ ಇರುತ್ತದೆ. ಆ ಕಾರಣಕ್ಕಾಗಿಯೇ ಅದರ ಬಗೆಗಿನ ಅಧ್ಯಯನಕ್ಕೆ ಹೆಚ್ಚು ಮಹತ್ವವನ್ನು ನೀಡಲಾಗುತ್ತಿರುವುದನ್ನು ಗಮನಿಸಬಹುದು. ದೈವಕ್ಕೆ ಸಂಬಂಧಿಸಿದ ನಂಬಿಕೆ, ಆಚರಣೆಗಳು ಗ್ರಾಮೀಣ ಜೀವನದಲ್ಲಿ ಅನಾದಿಕಾಲದಿಂದಲೂ ಹಾಸುಹೊಕ್ಕಾಗಿದೆ. ಹೀಗೆ ಬೆರೆತು ಬಂದಿರುವ ಗ್ರಾಮದೇವತೆಗಳು ಜನಪದರ ಬದುಕಿನ ಒಂದು ಅವಿಭಾಜ್ಯ ಅಂಗವಾಗಿವೆ.

ಪೂರ್ವದಿಂದಲೂ ವೇದ, ಪುರಾಣಗಳಲ್ಲಿಯೂ ಸೃಷ್ಟಿಯ ಸಂಕೇತವಾಗಿ ಸ್ತ್ರೀಯನ್ನೇ ಗುರುತಿಸಲಾಗಿದೆ. ಸ್ತ್ರೀಯನ್ನು ಭೂಮಿಗೆ ಸಮಾನವಾದ ದೃಷ್ಟಿಯಲ್ಲಿ ನೋಡುವುದು ಗಮನಾರ್ಹ. ಜಗತ್ತಿನ ಎಲ್ಲಾ ರಚನೆಗಳಿಗೂ ಸ್ತ್ರೀ ಕಾರಣವಾಗುತ್ತಾಳೆ ಎಂಬುವುದು ವಿಶ್ವವ್ಯಾಪಿ ಅಭಿಪ್ರಾಯವಾಗಿದೆ. ಇಂತಹ ಹಲವಾರು ಅಂಶಗಳು ಕುತೂಹಲಕಾರಿಯಾಗಿವೆ. ಬನದೇವಿಯು ತಳಸಮುದಾಯಗಳ ಆರಾಧ್ಯ ದೇವಿಯಾಗಿ ತನ್ನ ಮಹತ್ವವನ್ನು ಉಳಿಸಿಕೊಂಡಿದ್ದಾಳೆ. ಆದರೂ ಕಾಲ ಕ್ರಮೇಣ ಮೇಲ್ವರ್ಗದವರು ತಮ್ಮ ವರ್ಣ, ವರ್ಗ, ಅಧಿಕಾರದ ರಕ್ಷಣೆಗಾಗಿ ದೇವಿಯ ಆರಾಧಕರಾಗಿ ವಿಸ್ತರಿಸಿಕೊಳ್ಳುತ್ತಾ ಹೋಗಿರುವುದು ಪ್ರಸ್ತುತ ಅಧ್ಯಯನದಿಂದ ಸ್ಪಷ್ಟವಾಗುತ್ತದೆ.

ಪೂರ್ವದಿಂದಲೇ ಗ್ರಾಮೀಣ ಕ್ಷೇತ್ರದ ದೇವತೆಯಾಗಿ ಸಮಾಜದ ಕೆಳವರ್ಗದವರಿಂದ, ಮೇಲ್ವರ್ಗದ ಜನರವರೆಗೂ ತನ್ನ ಪ್ರಭಾವ ಹಾಗೂ ಮಹಿಮೆಯನ್ನು ಬೆಳೆಸಿಕೊಳ್ಳುತ್ತಾ ಬಂದಿದ್ದಾಳೆ. ಅಲ್ಲದೆ ಎಲ್ಲಾ ವರ್ಗದ ಜನರಿಗೂ ಆರಾಧ್ಯ ದೈವವಾಗಿ ನಿಂತಿದ್ದಾಳೆ. ದೇವಿಯ ಆಚರಣೆಗಳು, ನಂಬಿಕೆಗಳು ಇಷ್ಟೊಂದು ಮುಂದುವರೆದ ತಾಂತ್ರಿಕ ಯುಗಕ್ಕೆ ಒಳಗಾದರೂ ಸಹ ಜೀವಂತವಾಗಿ ನಿಂತಿವೆ. ಪ್ರಸ್ತುತ ಅಗತ್ಯಗಳಿಗೆ ತಕ್ಕಂತೆ ಬದಲಾಗುತ್ತಿರುವ ಸಂಪ್ರದಾಯಗಳು ಇಂದು ಪಟ್ಟಣಗಳಲ್ಲಿ ತಮ್ಮ ಅಸ್ತಿತ್ವವನ್ನು ಸ್ಥಾಪಿಸಿವೆ. ಆದರೆ ಹಳ್ಳಿಗಳು ಇದರಿಂದ ಹೊರತಾಗಿಲ್ಲ. ಆದಕಾರಣ ನಶಿಸಿ ಹೋಗುತ್ತಿರುವ ಸಂಪ್ರದಾಯಗಳ ಒಳಸತ್ವವನ್ನು ವೈಜ್ಞಾನಿಕ ದೃಷ್ಟಿಯಿಂದ ಅಧ್ಯಯನ ಮಾಡಿ, ಅದರ ಮೌಲ್ಯಗಳನ್ನು ಸಮಾಜದ ಮುಂದಿನ ಪೀಳಿಗೆಗೆ ನೀಡುವ ಅವಶ್ಯಕತೆಯಿದೆ. ಈ ಅಂಶಗಳನ್ನು ಒಳಗೊಂಡಂತೆ ಬಾದಾಮಿ ಬನಶಂಕರಿಯ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ. ಅನೇಕ ಆಚಾರ-ವಿಚಾರಗಳಿಂದ,

ಜಾತಿ, ಧರ್ಮಗಳಿಂದ, ಸಾಂಸ್ಕೃತಿಕ ಹಿರಿಮೆ, ಐತಿಹಾಸಿಕ ಹಿನ್ನೆಲೆಯಿಂದ ಕೂಡಿದ ವಿಸ್ತೃತ ಘಟಕವಾದ ಬಾದಾಮಿ ಬನಶಂಕರಿ ಕ್ಷೇತ್ರದಲ್ಲಿ ವ್ಯಾಪಕ ಕ್ಷೇತ್ರ ಕಾರ್ಯಕೈಗೊಂಡು ಸಾಕಷ್ಟು ಆಕರ ಸಾಮಗ್ರಿಗಳನ್ನು ಕಲೆಹಾಕಲಾಗಿದೆ.

ಗ್ರಾಮೀಣ ದೇವತೆ ಬನದೇವಿಯು ಜನಪದ ಸಾಹಿತ್ಯಕ್ಕೆ ತನ್ನದೇ ಆದ ಕೊಡುಗೆಯನ್ನು ನೀಡಿದ್ದಾಳೆ. ವೇದ ಪುರಾಣಗಳಿಂದ ಆರಂಭವಾಗಿ ಅವಳು ಸ್ತ್ರೀ ದೈವವಾಗಿ ಬಾದಾಮಿಯಲ್ಲಿ ನೆಲೆಸಿದ ಮೇಲೆ ಅವಳ ಕುರಿತಾಗಿ ಹುಟ್ಟಿದ ಕಥೆಗಳು, ಐತಿಹ್ಯಗಳು, ನಂಬಿಕೆಗಳು, ಪವಾಡಗಳು, ಮಹಿಮೆಗಳು ಕಾಲಕ್ರಮೇಣ ಸಾಹಿತ್ಯದ ರೂಪ ಪಡೆದುಕೊಂಡವು. ಅವಳ ಕುರಿತಾಗಿ ಹಾಡುವ ಹಾಡುಗಳಲ್ಲಿ ಅನೇಕ ಗ್ರಾಮ್ಯ ಪದಗಳ ಬಳಕೆಯಿಂದ ನಾವು ಜನಪದ ಸಾಹಿತ್ಯವು ಶ್ರೀಮಂತವಾಗುವುದನ್ನು ನೋಡಬಹುದು.

ಆರ್ಯರ ಸಾಂಸ್ಕೃತಿಕ ಪ್ರಭಾವದಿಂದ ಭಾರತೀಯ ಸಮಾಜವು ಸ್ಥಿತ್ಯಾಂತರಗೊಂಡಿತು. ಇದು ಬುಡಕಟ್ಟು ಮೂಲದ ಸಮಾಜದ ಪರಿವರ್ತನೆಗೂ ಕಾರಣವಾಗಿದೆ. ವೈದಿಕ ಸಂಪ್ರದಾಯಗಳ ಪ್ರಭಾವಕ್ಕೆ ತುತ್ತಾಗಿ ಸಮುದಾಯಿಕ ತಲ್ಲಣಗಳನ್ನು ಬನದೇವಿಯು ಅಭಿವ್ಯಕ್ತಿಸುತ್ತಿದ್ದಾಳೆ. ಮಾತೃಪ್ರಧಾನ ವ್ಯವಸ್ಥೆಯಿಂದ ಪುರುಷ ಪ್ರಧಾನ ವ್ಯವಸ್ಥೆಯ ಸಂಘರ್ಷ ಕಾಲದಲ್ಲಿ ಅದನ್ನು ಪ್ರತಿಭಟಿಸಿ ನಿಂತಿರುವಳು. ಬನಶಂಕರಿಯ ಮಹಿಮೆ ಜನಮಾನಸದಲ್ಲಿ ಭದ್ರವಾಗಿ ಬೇರೂರಿರುವ ರೀತಿ, ಆ ಮೂಲಕ ಭಯದಿಂದಲೂ ಅಥವಾ ಭಕ್ತಿಯಿಂದಲೂ ಸಮಾಜವನ್ನು ಸನ್ಮಾರ್ಗದಲ್ಲಿ ನಡೆಸುತ್ತಿರುವ ಅಂಶವು ಗಮನಾರ್ಹ.

ಬನಶಂಕರಿಯ ಪಂಥದ ಆಚರಣಾತ್ಮಕ ವಿವರಗಳನ್ನು ವಿಶ್ಲೇಷಿಸುವುದರ ಜೊತೆಗೆ ಅವುಗಳ ಹುಟ್ಟು, ಆಚರಣೆಗಳಿಗೆ ಕಾರಣವಾದ ಹಿನ್ನೆಲೆ, ಬೆಳೆದು ಬಂದ ರೀತಿ, ಆಚರಣೆಗಳಲ್ಲಿನ ಪ್ರಾದೇಶಿಕ ಭಿನ್ನತೆಗಳನ್ನು, ಆಚರಣೆಗಳ ಮೂಲ ಸ್ವರೂಪದಲ್ಲಾದ ಬದಲಾವಣೆಗಳನ್ನು ಕಂಡುಕೊಳ್ಳಲು ಪ್ರಯತ್ನಿಸಲಾಗಿದೆ. ಪುರಾಣ ಕಥೆಗಳು ಮತ್ತು ವೈದಿಕ ಪುರೋಹಿತಶಾಹಿಗಳು ಬನದ ದೇವಿಯನ್ನು ಶಿಷ್ಟ ದೇವಿಯನ್ನಾಗಿ ಬಿಂಬಿಸಲು ಪ್ರಯತ್ನಿಸಿದರೂ ಕೂಡ ಅವರ ಚಿಂತನೆಗಳನ್ನು ವಿರೋಧಿಸಿ, ಕೆಳವರ್ಗದ ಆಶಯವನ್ನು ಪ್ರತಿನಿಧಿಸುವ ದೇವಿಯಾಗಿದ್ದಾಳೆ. ಮುಗ್ಧ ಮನಸ್ಸುಗಳಿಗೆ ಸ್ಪಂದಿಸಿ, ರೋಗ ನಿವಾರಣೆ, ಅವರ ಕಷ್ಟಕಾರ್ಪಣ್ಯಗಳನ್ನು ನಿವಾರಿಸಿ ಗ್ರಾಮದೇವತೆ, ಶಕ್ತಿದೇವತೆ ಎನಿಸಿಕೊಂಡಿರುವಳು. ಎಲ್ಲಾ ಸಮುದಾಯಗಳ ಆರಾಧ್ಯ ದೇವಿಯಾದ ಈಕೆ ಸಾಂಸ್ಕೃತಿಕ ಸಮ್ಮಿಳನಕ್ಕೆ ಕಾರಣವಾಗಿದ್ದಾಳೆ ಎಂಬುದನ್ನು ಈ ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ.

ಆಳುವ ವರ್ಗದ ದೇವತೆಯಾಗಿ ಬನಶಂಕರಿ ಗುರುತಿಸಿಕೊಂಡಾಗ ಆರಾಧನಾ ಕ್ರಮಗಳು ವೈದಿಕ ಕ್ರಮವನ್ನು ಅಳವಡಿಸಿಕೊಂಡಿರುವುದನ್ನು ಪ್ರಸ್ತುತ ಅಧ್ಯಯನದಿಂದ ಕಂಡುಬರುತ್ತದೆ. ಕಾಲಾಂತರಗಳಿಂದ ನಡೆದುಕೊಂಡು ಬಂದ ಬನಶಂಕರಿ ದೇವತೆಯ

ಪೂಜಾ ವಿಧಾನಗಳಲ್ಲಿ ಪ್ರಾಣಿ ಬಲಿಗೆ ವಿಶೇಷ ಸ್ಥಾನಮಾನ ಇದ್ದಿರಬಹುದು. ಆದರೆ ಇಂದು ಗುಡಿಯಲ್ಲಿ ಪ್ರಾಣಿಬಲಿಯನ್ನು ನಿಷೇಧಿಸಲಾಗಿದೆ. ಇವಳು ಸಮುದಾಯಿಕ ಆರಾಧನಾ ದೇವತೆಯಾಗಿ ಪರಿವರ್ತನೆಗೊಂಡಾಗ ಪ್ರಸ್ತುತ ಬನಶಂಕರಿ ಗುಡಿಯ ಬದಲಿಗೆ ಶ್ರೀ ಕ್ಷೇತ್ರದ ತೋಟಗಳ ಮಧ್ಯೆ ಇರುವ ಮಲೆಯಮ್ಮನ ಗುಡಿಯಲ್ಲಿ ಅನಿವಾರ್ಯವಾಗಿ ಪ್ರಾಣಿಬಲಿಯನ್ನು ನಡೆಸಿಕೊಂಡು ಬಂದಿದ್ದಾರೆ. ಪ್ರಾಣಿ ಬಲಿಯ ಬದಲಾಗಿ ಕುಂಬಳಕಾಯಿ, ನಿಂಬೆಹಣ್ಣು ಪ್ರವೇಶವನ್ನು ಪಡೆದುಕೊಂಡಿರುವುದು ಗಮನಿಸಬಹುದು. ರಕ್ತ ತರ್ಪಣಕ್ಕೆ ಮಾನ್ಯತೆಯಿರುವ ಸಂದರ್ಭದಲ್ಲಿ ಅನ್ನದಲ್ಲಿ ಕೆಂಪು ಕುಂಕಮ ಬೆರೆಸಿ ಬಲಿಹರಣ ಎಂಬುವ ಆಚರಣೆ ಪ್ರವೇಶ ಪಡೆದುಕೊಂಡಿದೆ. ವಾರ್ಷಿಕವಾಗಿ ನಡೆಯುವ ಜಾತ್ರೆಯ ಮುನ್ನ ಕುಂಕುಮ ಮಿಶ್ರಿತ ಅನ್ನದ ಉಂಡೆಗಳನ್ನು ಮಾಡಿ ಹೋಮಕ್ಕೆ, ಅಷ್ಟದಿಕ್ಕುಗಳ ದೈವಗಳಿಗೆ ಅರ್ಪಿಸಲಾಗುತ್ತದೆ. ಈ ರೀತಿಯ ಆಚರಣೆಗಳನ್ನು ಮಾಡಿ ದೇವತೆಗೆ ಅರ್ಪಿಸುವ ಪರಂಪರೆ ನಡೆದುಕೊಂಡು ಬಂದಿರುವುದನ್ನು ಗಮನಿಸಬಹುದು.

ಬಾದಾಮಿ ಬನಶಂಕರಿ ಜಾತ್ರೆಯ ಸಂದರ್ಭದಲ್ಲಿ ಸಾಮೂಹಿಕ ಭಾಗವಹಿಸುವಿಕೆಯಿದೆ. ದೇವಿಯ ಆಭರಣಗಳನ್ನು ಸ್ವಚ್ಛಗೊಳಿಸಲು ಪತ್ತಾರರು, ದೇವಿಯ ಉತ್ಸಹ ವಾಹನಗಳು, ತೇರು ದುರಸ್ತಿಗೆ ಬಡಿಗೇರರು, ರಥಕ್ಕೆ ಎಣ್ಣೆ ಹಾಕುವವರು ಭೋವಿ ಜನಾಂಗದವರು, ಶಹನಾಯಿ ಸೇವೆಗೆ ಭಜಂತ್ರಿಯವರು, ತಲೆಮುಡಿ, ಜವಳ ಸೇವೆಗೆ ಹಡಪದ ಜನಾಂಗ, ಗುಡಿಯ ಸ್ವಚ್ಛಗೊಳಿಸುವವರು ಅಂಬಿಗರು ಮತ್ತು ಹರಿಜನರು, ಉತ್ಸವದ ಬಟ್ಟೆ ಮತ್ತು ಪಟ ತಯಾರಿಸುವವರು ದರ್ಜಿಗಳು, ತೇರಿನ ಹಗ್ಗವನ್ನು ಗಾಣಿಗರ ಸಮುದಾಯ ಮುಂತಾದ ವರ್ಗದವರು ಜಾತ್ರೆಯಲ್ಲಿ ಪಾಲ್ಗೊಳ್ಳುವುದನ್ನು ಗಮನಿಸಬಹುದು. ವಾರ್ಷಿಕವಾಗಿ ನಡೆಯುವ ಆರಾಧನಾ ವಿಧಿ – ವಿಧಾನಗಳನ್ನು ಕೆಲವು ನಿರ್ದಿಷ್ಟ ಜಾತಿಯವರು ನಿರ್ವಹಿಸುತ್ತಾರೆ. ಅವರಲ್ಲಿ ಪೂಜಾ – ವಿಧಾನಗಳಲ್ಲಿ ಬ್ರಾಹ್ಮಣರ ಪ್ರವೇಶ ಅಧಿಕವಾಗಿದ್ದು, ಶಿಷ್ಟ ಸಂಪ್ರದಾಯದಲ್ಲಿ ಬನಶಂಕರಿಯನ್ನು ಪೂಜಿಸಲಾಗುತ್ತದೆ.

ಉತ್ತರ ಕರ್ನಾಟಕದಲ್ಲಿ ಬನಶಂಕರಿ ಜಾತ್ರೆಯು ಪ್ರಸಿದ್ಧವಾಗಿದೆ. ಕೃಷಿಕರಿಗೆ ಬೇಕಾಗುವ ಎಲ್ಲ ರೀತಿಯ ವಸ್ತುಗಳು ಈ ಜಾತ್ರೆಯಲ್ಲಿ ದೊರಕುತ್ತವೆ. ಆಧುನಿಕತೆಯ ಪ್ರಭಾವನ್ನು ಜಾತ್ರೆಯಲ್ಲಿ ಕಾಣಬಹುದು. ಅಲ್ಲದೆ ಜಾತ್ರೆಯಲ್ಲಿ ದೈವಭಕ್ತಿಯಿಂದ ಬರುವ ಜನರಿಗಿಂತ ಸಿನಿಮಾ, ನಾಟಕಗಳನ್ನು ನೋಡುವವರ ಸಂಖ್ಯೆಯೇ ಹೆಚ್ಚಾಗುತ್ತಿರುವುದು ಕಂಡುಬರುತ್ತದೆ. ಈ ಹಿನ್ನೆಲೆಯಿಂದ ಜಾತ್ರೆಯು ತನ್ನ ಮೂಲ ಸ್ವರೂಪವನ್ನು ಬದಲಾಯಿಸಿಕೊಳ್ಳುತ್ತಿರುವುದನ್ನು ಅಧ್ಯಯನದಲ್ಲಿ ವಿವೇಚಿಸಲಾಗಿದೆ.

ಕರ್ನಾಟಕದ ಇತರೆ ಪ್ರದೇಶಗಳಲ್ಲಿ ಆಗುತ್ತಿರುವ ಬನಶಂಕರಿ ಆರಾಧನೆಗಿಂತ ಬಾದಾಮಿ ಬನಶಂಕರಿಯ ಆರಾಧನೆ ಭಿನ್ನವಾಗಿದೆ. ಅರಕಲಗೂಡು ತಾಲೂಕಿನ ಊರ ಹೊರಗಿರುವ ತೋಪಿನಲ್ಲಿ ಒಂದು ಮರದ ಕೆಳಗೆ ಕಲ್ಲನ್ನಿಟ್ಟು ಅದನ್ನು ಬನದಮ್ಮ ಎಂದು ಪೂಜಿಸುವುದನ್ನು

ಕಾಣುತ್ತೇವೆ. ಭೀಮ ಸಮುದ್ರದ ಬನದಬ್ಬೆ ಅಥವಾ ತೋಟದಮ್ಮ ಆಚರಣೆಯಿದ್ದು, ಅಡಿಕೆ ಮರಕ್ಕೆ ಸೀರೆ, ರವಿಕೆ ಏರಿಸಿ, ರವಿಕೆಯ ಕಣದಿಂದ ಕೈಗಳನ್ನು ಮಾಡಿ ಅದಕ್ಕೆ ಬಳೆಗಳನ್ನು ತೊಡಸಿ, ಅರಿಶಿನ ಕುಂಕುಮದಿಂದ ಆ ಮರವನ್ನು ಶೃಂಗರಿಸಿ, ಅದನ್ನು ದೇವತೆಯ ಆಕೃತಿಯ ಹಾಗೆ ಕಾಣುವಂತೆ ಮಾಡುತ್ತಾರೆ. ಶಿವಮೊಗ್ಗ, ಭದ್ರಾವತಿಯ ಆನವೇರಿ ಗ್ರಾಮ, ಶಿಕಾರಿಪುರದ ಬಂದಳಿಕ ಗ್ರಾಮ, ಹೊಸಪೇಟೆಯ ದರೋಜಿ, ಕರ್ನಾಟಕದ ಇತರೆ ಸ್ಥಳಗಳಲ್ಲಿ ಬನಶಂಕರಿ ವಿಗ್ರಹಗಳು ಕಂಡುಬಂದಿವೆ. ಈ ಶಿಲ್ಪಗಳಲ್ಲಿ ಸ್ತನಗಳು, ಮುಖದ ಮೇಲೆ ಮೀಸೆಯೂ ಇರುವುದನ್ನು ಕಾಣುತ್ತೇವೆ. ಶಿವಮೊಗ್ಗ, ದಾವಣಗೆರೆ, ಮಡಿಕೇರಿಯಲ್ಲಿ ಬನಶಂಕರಿಯ ಪಟ್ಟಿಗೆಗಳನ್ನು ಕಾಣಬಹುದು. ಅಂತಹ ಪೆಟ್ಟಿಗೆಯಲ್ಲಿ ಲಿಂಗಾಕೃತಿಯ ಶಿಲೆಗಳು, ಲೋಹದ ವಿಗ್ರಹ, ಲೋಹದ ಸಣ್ಣ ಕೊಡೆಗಳು, ಲೋಹದ ಕಣ್ಣು, ಮೀಸೆ ಕಂಡುಬಂದಿವೆ. ಆದರೆ ಪ್ರಸ್ತುತ ಪೂಜೆಗೊಳ್ಳುತ್ತಿರುವ ಬನಶಂಕರಿ ಮೂರ್ತಿ ಶಾಂತ ಸ್ವರೂಪಿ, ಸಿಂಹವಾಹಿನಿ ಅಷ್ಟಭುಜಗಳನ್ನು ಹೊಂದಿರುವುದನ್ನು ಗಮನಿಸುತ್ತೇನೆ. ಇಂತಹ ಎಲ್ಲಾ ಆಚರಣೆಗಳ ಹಿಂದೆ ಒಂದು ಅಲೌಕಿಕವಾದ ಮನಸ್ಸು ಅಡಗಿರುವುದು ಗೋಚರಿಸುತ್ತದೆ.

ಬನಶಂಕರಿ ಕ್ಷೇತ್ರದಲ್ಲಿ ದುರ್ಗಾಷ್ಟಮಿ ದಿನದಂದು ದೇವಿಯ ಶ್ರೀಚಕ್ರದ ಮೂಲಾಧಾರ ಬಿಂದುವಿಗೆ ಮದ್ಯವನ್ನು ಅಭಿಷೇಕ ಮಾಡುವ ಆಚರಣೆಯಿದೆ. ದೇವಿಯು ಶಿಷ್ಟ ಪರಂಪರೆಗೆ ಒಳಪಟ್ಟಿದ್ದರೂ ಕೂಡ ಗ್ರಾಮದೇವಿಗೆ ಸಲ್ಲುವ ಅನೇಕ ಆಚರಣೆಗಳು ಇಂದಿಗೂ ಜೀವಂತ ಅಸ್ತಿತ್ವವನ್ನು ಪಡೆದುಕೊಂಡಿವೆ ಎಂಬುವುದು ಗಮನಾರ್ಹ. ಮೂಲತಃ ಗ್ರಾಮದೇವಿಯಾದ ಮಾಹ ಮಾಯೆಯು ಶಿಷ್ಟ ವರ್ಗದವರ ನಿಯಂತ್ರಣಕ್ಕೆ ತೆಗೆದುಕೊಂಡಾಗ ಅದರ ಬದಲಿ ರೂಪದಲ್ಲಿ ಬನಶಂಕರಿಯಾಗಿ ಪ್ರಸ್ತುತ ಆರಾಧಿಸುವುದು ಕಂಡುಬರುತ್ತದೆ. ಒಟ್ಟಾರೆಯಾಗಿ ಉತ್ತರ ಕರ್ನಾಟಕದ ಭಾಗದಲ್ಲಿ ಬನಶಂಕರಿಯು ಸಾಮೂಹಿಕವಾಗಿ ಜನಪದ ಮನೋಧರ್ಮಕ್ಕೆ ಅನುಗುಣವಾಗಿ ಪೂಜೆಗೊಳ್ಳುತ್ತಿರುವುದನ್ನು ಪ್ರಾದೇಶಿಕವಾಗಿ ಗಮನಿಸಬಹುದು. ಹಾಗೆಯೇ ವಾರ್ಷಿಕವಾಗಿ ನಡೆಯುವ ಬನಶಂಕರಿಯ ಜಾತ್ರೆಯು ವೈವಿಧ್ಯಮಯವಾಗಿ ಕಾಣಿಸುತ್ತದೆ.

**ಫಲಿತಗಳು**

೦೧. ಉತ್ತರ ಕರ್ನಾಟಕವು ಮಾತೃ ಆರಾಧನೆಯ ಕೇಂದ್ರ ಸ್ಥಳವಾಗಿದೆ.

೦೨. ಕರ್ನಾಟಕದ ಪ್ರಸಿದ್ಧ ಧಾರ್ಮಿಕ ಯಾತ್ರಾ ಕ್ಷೇತ್ರಗಳಲ್ಲಿ ಬಾದಾಮಿ ಬನಶಂಕರಿ ಕ್ಷೇತ್ರವು ಒಂದು.

೦೩. ಬನಶಂಕರಿ ಕ್ಷೇತ್ರವು ಕರ್ನಾಟಕದ ಪ್ರಮುಖ ಶಾಕ್ತ ಕೇಂದ್ರಗಳಲ್ಲಿ ಒಂದಾಗಿದೆ.

೦೪. ಇತಿಹಾಸದಲ್ಲಾದ ಬದಲಾವಣೆಗಳನ್ನು ಬನಶಂಕರಿ ಕ್ಷೇತ್ರದಲ್ಲೂ ಗುರುತಿಸಲು ಸಾಧ್ಯವಿದೆ.

೦೫. ರೋಗರುಜಿನಗಳನ್ನು ನಾಶ ಮಾಡುವ ವೈದ್ಯಾಲಯವಾಗಿ ಈ ಪ್ರದೇಶದವರಿಗೆ ದೇವಾಲಯ ಕಾರ್ಯ ಪ್ರವೃತ್ತವಾಗಿದೆ.

೦೬. ಭೌಗೋಳಿಕವಾಗಿ ಸುತ್ತಲಿನ ಗ್ರಾಮಗಳಿಗೆ ಪ್ರಸರಣಗೊಂಡು ಸುತ್ತಲಿನ ಗ್ರಾಮಗಳ ಗ್ರಾಮದೇವತೆಗಳ ಜೊತೆ ಸಂಬಂಧ ಇರಿಸಿಕೊಂಡು, ಜನಜೀವನ ಸಂಬಂಧವನ್ನು ಬೆಳೆಸುವ ಕಾರ್ಯ ಮಾಡಿದ ಈ ಪರಿಸರದ ಪ್ರಮುಖ ಗ್ರಾಮದೇವತೆಯಾಗಿದ್ದಾಳೆ.

೦೭. ಮೂಲತಃ ಗ್ರಾಮದೇವಿಯಾಗಿದ್ದು, ಸಂಸ್ಕೃತೀಕರಣ ಪ್ರಭಾವದಿಂದ ಶಿಷ್ಟ ಪರಂಪರೆಗೆ ಒಳಗಾಗಿರುವ ದೇವಿಯಾಗಿದ್ದಾಳೆ.

೦೮. ಶಿಷ್ಟ ಪರಂಪರೆಗೆ ಒಳಪಟ್ಟರೂ ಕೂಡ ಗ್ರಾಮದೇವತೆಗೆ ಸಲ್ಲುವಂತಹ ಆಚರಣೆಗಳು ಇಂದಿಗೂ ಜೀವಂತ ಅಸ್ತಿತ್ವವನ್ನು ಪಡೆದುಕೊಂಡಿವೆ.

೦೯. ಮಾತೃದೇವತೆಯಾದ ಬನಶಂಕರಿಯ ಸ್ವರೂಪ ಮತ್ತು ಆಚರಣೆಗಳಲ್ಲಿ ಕಾಲ – ಕಾಲಕ್ಕೆ ಪರಿವರ್ತನೆಗೊಳ್ಳುತ್ತಾ ಬಂದು ಅಥವಾ ಸೇರ್ಪಡೆಯಾಗುತ್ತಾ ಬಂದಿವೆ.

೧೦. ಗ್ರಾಮದೇವತೆಯಾಗಿ ನಂತರ ಶಿಷ್ಟ ಆಚರಣೆಗೆ ಒಳಪಟ್ಟು ಈಗ ಸಂಕೀರ್ಣ ಸ್ವರೂಪದಲ್ಲಿ ಪೂಜಿತಳಾಗಿದ್ದಾಳೆ.

೧೧. ದೇವಿಗೆ ಸಂಬಂಧಿಸಿದ ಆಚರಣೆಗಳನ್ನು ವಿಧಿ – ವಿಧಾನಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡಿದಾಗ ಫಲವಂತಿಕೆಯ ಸಂಪ್ರದಾಯಕ್ಕೆ ಸೇರಿದ ಕೆಲವು ಆಚರಣೆಗಳು ಇಂದಿಗೂ ಅಸ್ತಿತ್ವದಲ್ಲಿರುವುದನ್ನು ಕಾಣಬಹುದು.

೧೨. ಸಂತಾನಪ್ರಾಪ್ತಿ, ಫಲಸಮೃದ್ಧಿಗೆ ಈ ದೇವತೆ ಆರಾಧಿಸಲ್ಪಡುತ್ತಾಳೆ.

೧೩. ಬಾದಾಮಿ ಚಾಲುಕ್ಯರು ಬಹುಕಾಲ ಆಳ್ವಿಕೆಗೆ ಒಳಪಟ್ಟ ಈ ಪ್ರದೇಶದಲ್ಲಿ ಬನಶಂಕರಿಗೆ ಸಂಬಂಧಿಸಿದ ಬಾದಾಮಿ ಚಾಲುಕ್ಯರ ಯಾವುದೇ ದಾಖಲೆಗಳು ಇದುವರೆಗೂ ಲಭ್ಯವಾಗಿಲ್ಲ.

೧೪. ಬನಶಂಕರಿ ದೇವಾಲಯವು ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ವಿಜಯನಗರ ಅರಸರು, ಪೇಶ್ವೆಗಳ ಕಾಲದಲ್ಲಿ ಜೀರ್ಣೋದ್ಧಾರಗೊಂಡಿರುದನ್ನು ಗಮನಿಸಬಹುದು.

೧೫. ಉತ್ತರ ಕರ್ನಾಟಕ ಭಾಗದ ಹಲವು ದೇಸಗತಿಗಳು ದೇವಿಗೆ ಭೂದಾನ ಹಾಗೂ ಕಾಣಿಕೆ ನೀಡಿರಿವುದನ್ನು ಗಮನಿಸಬಹುದಾಗಿದೆ.

೧೬. ಶೃಂಗೇರಿ ಮಠದ ವತಿಯಿಂದ ದೇವಿಗೆ ವಾರ್ಷಿಕ ಕಾಣಿಕೆಯು ಬರುತ್ತಿದ್ದ ಬಗ್ಗೆ ತಿಳಿಯಬಹುದು.

೧೭. ಮೈಸೂರಿನ ಒಡೆಯರ ಇಷ್ಟ ದೇವತೆಯಾದ ಬನಶಂಕರಿಗೆ ವಾರ್ಷಿಕವಾಗಿ ಶ್ರೀಗಂಧ ಮತ್ತು ಇತರೆ ಕಾಣಿಕೆಗಳನ್ನು ನೀಡಿರಿವುದು ಗಮನಾರ್ಹ.

೧೮. ಈ ಪರಿಸರದಲ್ಲಿರುವ ಅನೇಕ ಮೂರ್ತಿಶಿಲ್ಪಗಳು ಹಾಳಾಗುತ್ತಿರುವ ಸ್ಥಿತಿಯಲ್ಲಿದ್ದು, ಅವುಗಳ ಸಂರಕ್ಷಣೆಯ ಅವಶ್ಯಕತೆಯಿದೆ.

೧೯. ಚೊಳಚಗುಡ್ಡ ಗ್ರಾಮ ಹಾಗೂ ಬನಶಂಕರಿ ಕ್ಷೇತ್ರದಲ್ಲಿ ಅನೇಕ ಬಾವಿಗಳಿದ್ದು, ಅವುಗಳ ನಿರ್ವಹಣೆಯ ಕೊರತೆಯಿಂದಾಗಿ ನೀರು ಬತ್ತಿ ಹೋಗುತ್ತಿದೆ. ಅಲ್ಲದೇ ಈಗಾಗಲೇ ಕೆಲವೊಂದು ಬಾವಿಗಳು ಮುಚ್ಚಲ್ಪಟ್ಟಿವೆ. ಆದ್ದರಿಂದ ಅವುಗಳ ಸಂರಕ್ಷಣೆ ಜರೂರು ಇದೆ.

೨೦. ಉತ್ತರ ಕರ್ನಾಟಕದಲ್ಲಿ ಬನಶಂಕರಿ ಜಾತ್ರೆಯು ಸುಪ್ರಸಿದ್ಧವಾಗಿದೆ. ಜಾತ್ರೆಯಲ್ಲಿ ದೇಶಿಯ ಸೊಗಡನ್ನು ಕಾಣಬಹುದು.

೨೧. ಜಾತ್ರೆಯು ಆಧುನಿಕತೆಯ ಪ್ರಭಾವದಿಂದ ತನ್ನ ಮೂಲ ಸ್ವರೂಪವನ್ನು ಕಳೆದುಕೊಳ್ಳುತ್ತಿರುವುದನ್ನು ಗಮನಿಸಬಹುದು.

೨೨. ಬನಶಂಕರಿ ಕ್ಷೇತ್ರವು ಧಾರ್ಮಿಕ ಕ್ಷೇತ್ರವಾಗಿರುವುದರ ಜೊತೆಗೆ ಸುತ್ತಮುತ್ತಲಿನ ಪ್ರದೇಶದ ಜನರ ಆರ್ಥಿಕ ಮೂಲ ಕೇಂದ್ರವಾಗಿ ಬೆಳೆದಿರುವುದು ಗಮನಾರ್ಹ.

* * * * *

# ಅನುಬಂಧಗಳು

೧. ಗ್ರಂಥ ಋಣ

೨. ಸಂಕ್ಷೇಪಗಳು

೩. ನಕ್ಷೆಗಳು

೪. ತಲ ನಕ್ಷೆಗಳು

೫. ರೇಖಾಚಿತ್ರಗಳು

೬. ಶಾಸನಗಳು

೭. ದಾಖಲೆಗಳು

೮. ಸಂದರ್ಶನ ಸೂಚಿ

## ಗ್ರಂಥಸೂಚಿ


೦೧. ಅಪರ್ಣ ಕೂ.ಸ., ೧೯೯೯, **ದೇವಾಲಯ ವಾಸ್ತುಶಿಲ್ಪ ಪರಿಚಯ**, ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ.

೦೨. ಅಮೃತ ಮಹಾದೇವ ಅಣ್ಣಿಗೇರಿ, ೧೯೭೩, **ಬಾದಾಮಿ ಶಿಲ್ಪಕಲೆ**, ಭವಾನೀ ಪ್ರಕಾಶ,ನ, ಧಾರವಾಡ.

೦೩. ಅನಂತ ರಂಗಚಾರ್ಯ ಎನ್., ೧೯೮೪, **ಭಾರತೀಯ ದೇವಾಲಯಗಳು ಮತ್ತು ಸಂಸ್ಕೃತಿ**, ಸದ್ಭಂದಂ ಪ್ರಕಾಶನ, ಮೈಸೂರು.

೦೪. ಅನಂತರಾಮರಾವ್ ಕೆ., (ಪ್ರ.ಸಂ), ೨೦೦೬, **ಸುವರ್ಣ ಕರ್ನಾಟಕ ದರ್ಶನ** (೫೦ ಸಂವತ್ಸರಗಳು), ವಿದ್ಯಾ ಪಬ್ಲಿಷಿಂಗ್ ಹೌಸ್, ಮಂಗಳೂರು.

೦೫. ಕಲಬುರ್ಗಿ ಎಂ.ಎಂ., ೧೯೮೭, **ಜಾನಪದ ಸಾಹಿತ್ಯ ದರ್ಶನ, ಭಾಗ – ೧೧**, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿ.ವಿ., ಧಾರವಾಡ.

೦೬. ಕಲಬುರ್ಗಿ ಎಂ.ಎಂ., ೧೯೮೮, **ಮಹಾಮಾರ್ಗ – ೨**, ಕರ್ನಾಟಕ ಬುಕ್ ಏಜನ್ಸಿ, ಬೆಂಗಳೂರು.

೦೭. ಕಲಬುರ್ಗಿ ಎಂ.ಎಂ., ೧೯೯೫, **ಜಾನಪದ ಮಾರ್ಗ**, ಲಕ್ಷ್ಮೀ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು.

೦೮. ಕಲಬುರ್ಗಿ ಎಂ.ಎಂ., ೧೯೯೯, **ಹರಿಹರನ ರಗಳೆಗಳು**, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ.

೦೯. ಕಲವೀರ ಮನ್ವಾಚಾರ್, ೨೦೦೨, **ಮಾತೃದೇವತಾ ಆರಾಧನೆ ಉಗಮ ಮತ್ತು ವಿಕಾಸ**, ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪಿಎಚ್.ಡಿ. ಮಹಾಪ್ರಬಂಧ.

೧೦. ಕೃಷ್ಣ ಎಂ.ಎಚ್, ೨೦೦೯, **ಕನ್ನಡ ನಾಡಿನ ಚರಿತ್ರೆ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೧. ಕೊಟ್ರಶೆಟ್ಟಿ ಎಂ.ಬಿ., (ಸಂ), ೧೯೯೦, **ಜಾನಪದ ಸಾಹಿತ್ಯ ದರ್ಶನ**, ಪ್ರಸಾರಾಂಗ, ಕರ್ನಾಟಕ ವಿ.ವಿ. ಧಾರವಾಡ.

೧೨. ಖಂಡೋಬಾ ಪಿ.ಕೆ., ೧೯೯೭, **ಪರಿಸರ ಸಂಬಂಧಿ ದೈವಗಳು**, ಪ್ರಸಾರಾಂಗ ಗುಲ್ಬರ್ಗಾ ವಿ.ವಿ. ಗುಲ್ಬರ್ಗಾ.

೧೩. ಗಂಗಾಧರ ದೈವಜ್ಞ, ೨೦೦೨, **ಶಿರಸಂಗಿ ಕಾಳಮ್ಮ ಸಾಂಸ್ಕೃತಿಕ ಅಧ್ಯಯನ (ಆರಾಧನಾ ಪರಂಪರೆ)**, ಶ್ವೇತ ಭಾಗೀರಥಿ ಪ್ರಕಾಶನ, ಹೊಸಪೇಟ.

೧೪. ಗಣೇಶ ಶಂಕರ ಜ್ಯೋತಿ, ೨೦೦೭, **ಅಥ ಶ್ರೀ ದುರ್ಗಾ ಸಪ್ತಶತೀ**, ಗಣೇಶ ಶಂಕರ ಜ್ಯೋತಿ ಪ್ರಕಾಶನ, ಗೋಕರ್ಣ.

೧೫. ಗೀತಾ ಬಿ.ಎಸ್., ೨೦೦೮, **ಕರ್ನಾಟಕದ ಸಾಂಸ್ಕೃತಿಕ ಸಂಘರ್ಷ : ಒಂದು ಅಧ್ಯಯನ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೬. ಗುರುಮೂರ್ತಿ ಕೆ., ೧೯೭೯, **ಜನಪದ ಸಮಾಜ ಮತ್ತು ಸಂಸ್ಕೃತಿ**, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿ.ವಿ. ಧಾರವಾಡ.

೧೭. ಗೀತಾಂಜಲಿ ಬಿ.ಆರ್., ೨೦೦೯, **ಕರ್ನಾಟಕದ ಐತಿಹಾಸಿಕ ದೀಪಸ್ತಂಭಗಳ ಒಂದು ಅಧ್ಯಯನ**, ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪಿಎಚ್.ಡಿ. ಮಹಾಪ್ರಬಂಧ.

೧೮. ಗುರುಪ್ರಸಾದ ಸಿ.ಬಿ., ೨೦೦೫, **ಏಳೂರಿನ ದೇವತೆಗಳು : ಒಂದು ಅಧ್ಯಯನ**, ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ.

೧೯. ಗೋಪಾಲರಾವ್ ಎಚ್.ಎಸ್., ೧೯೯೬, **ಕರ್ನಾಟಕ ಏಕೀಕರಣ ಇತಿಹಾಸ**, ನವಕರ್ನಾಟಕ ಪ್ರಕಾಶನ, ಬೆಂಗಳೂರು

೨೦. ಗೋಪಾಲ ಬಾ.ರಾ., ೨೦೦೩, **ಕರ್ನಾಟಕದ ಕಲೆಗಳು, ವಾಸ್ತು, ಸಂಪುಟ – ೪**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳುರು.

೨೧. ಗೋಪಾಲರಾವ್ ಎಚ್.ಎಸ್., ೨೦೦೮, **ರಾಷ್ಟ್ರಕೂಟ ಶಿಲ್ಪಕಲೆ**, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು.

೨೨. ಚಂದ್ರಶೇಖರ ದಾವಲ್ಲಿ, ೧೯೯೦, **ಜಾತ್ರೆ**, ಸಮಾಜಶಾಸ್ತ್ರ ಸಂಘ, ನೆಹರು ಮೆಮೋರಿಯಲ್ ಕಾಲೇಜು, ಸುಳ್ಯ, ದಕ್ಷಿಣ ಕನ್ನಡ.

೨೩. ಚಿದಾನಂದ ಮೂರ್ತಿ ಎಂ., ೧೯೭೭, **ಗ್ರಾಮೀಣ**, ಚಿಪ್ಕೋ ಪ್ರಕಾಶನ, ಬೆಂಗಳೂರು.

೨೪. ಚಿದಾನಂದಮೂರ್ತಿ ಎಂ., ೧೯೯೮, **ಹೊಸತು–ಹೊಸತು**, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೨೫. ಚಿದಾನಂದಮೂರ್ತಿ ಎಂ., ೨೦೦೨, **ಜನ – ಜನಪದ – ಜಾನಪದ**, ಸ್ವಪ್ನ ಬುಕ್‌ಹೌಸ್, ಬೆಂಗಳೂರು.

೨೬. ಚಿದಾನಂದಮೂರ್ತಿ ಎಂ., ೨೦೦೨, **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, ಸ್ವಪ್ನ ಬುಕ್‌ಹೌಸ್, ಬೆಂಗಳೂರು.

೨೭. ಚಿದಾನಂದಮೂರ್ತಿ ಎಂ., ೨೦೦೯, **ಕರ್ನಾಟಕ ಸಂಸ್ಕೃತಿ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೨೮. ಚೆನ್ನಬಸಪ್ಪ ಗೂ.ರು., ೧೯೭೭, **ಕರ್ನಾಟಕ ಜಾನಪದ ಕಲೆಗಳು**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೨೯. ಚೆನ್ನಣ್ಣ ವಾಲೀಕಾರ, ೧೯೮೩, **ಹೈದ್ರಾಬಾದ್ ಕರ್ನಾಟಕ ಗ್ರಾಮದೇವತೆಗಳು ಜಾನಪದೀಯ ಅಧ್ಯಯನ**, ವಾಲೀಕಾರಂ ವೀರಸಂ ದಲಿತ ಕೇಂದ್ರ, ಗುಲ್ಬರ್ಗಾ.

೩೦. ಚೆನ್ನಬಸಪ್ಪ ಗೂ.ರು., ೧೯೯೧, **ಜಾನಪದ ದರ್ಶನ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೩೧. ಚೆನ್ನಣ್ಣ ವಾಲೀಕಾರ, ೧೯೯೩, **ಜಾನಪದ ಲೋಕ**, ದಲಿತ ಬಂಡಾಯ ವಿಚಾರ ಪ್ರಚಾರ ಸಮಿತಿ, ಗುಲ್ಬರ್ಗಾ.

೩೨. ಜವರೇಗೌಡ ದೇ., ೧೯೮೬, **ಜಾನಪದ ವಾಹಿನಿ**, ಡಿ.ವಿ.ಕೆ. ಮೂರ್ತಿ, ಮೈಸೂರು.

೩೩. ಜವರೇಗೌಡ ದೇ., ೨೦೦೧, **ಜಾನಪದ ಅಧ್ಯಯನ**, ಕನ್ನಡ ಪುಸ್ತಕ ಪ್ರಾಧಿಕಾರ, ಮೈಸೂರು.

೩೪. ಜ್ಯೋತ್ಸ್ನಾ ಕಾಮತ್, ೧೯೯೯, **ಮಹಿಳೆ ಒಂದು ಅಧ್ಯಯನ**, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೩೫. ತಿಪ್ಪೇರುದ್ರಸ್ವಾಮಿ ಎಚ್., ೧೯೮೫, **ಕರ್ನಾಟಕ ಸಂಸ್ಕೃತಿಕ ಸಮೀಕ್ಷೆ**, ಡಿ.ವಿ.ಕೆ. ಮೂರ್ತಿ, ಮೈಸೂರು.

೩೬. ತಿಪ್ಪೇಸ್ವಾಮಿ ಪಿ.ಆರ್., ೧೯೯೪, **ಕರ್ನಾಟಕದ ಪ್ರಾಗಿತಿಹಾಸ ಕಾಲದ ಕಲೆ**, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.

೩೭. ತಿಪ್ಪೇಸ್ವಾಮಿ ಪಿ.ಆರ್., (ಸಂ), ೧೯೯೪, **ಶಿಲ್ಪಕಲಾ ಪ್ರಪಂಚ**, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.

೩೮. ತಿಪ್ಪೇಸ್ವಾಮಿ ಪಿ.ಆರ್., (ಪ್ರ.ಸಂ), ೧೯೯೪, **ಕಲಾಕೋಶ**, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.

೩೯. ದಾಸೇಗೌಡ ಜಿ.ವಿ., ೧೯೭೩, **ಜಾನಪದ ನಂಬಿಕೆಗಳು**, ಪ್ರಸಾರಾಂಗ, ಮೈಸೂರು ವಿ.ವಿ. ಮೈಸೂರು.

೪೦. ಧೃವರಾಜ ನಾ. ಗದಗಕರ, ೧೯೯೯, **ದೇಗುಲಗಳ ರಥಶಿಲ್ಪ**, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ.

೪೧. ದೇವರಕೊಂಡಾರೆಡ್ಡಿ, (ಪ್ರ.ಸಂ), ೧೯೯೮, **ಬಳ್ಳಾರಿ ಜಿಲ್ಲೆ, ಶಾಸನ ಸಂಪುಟ–೯**, ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ.

೪೨. ದೇವರಕೊಂಡಾರೆಡ್ಡಿ, (ಪ್ರ.ಸಂ), ೧೯೯೯, **ಕೊಪ್ಪಳ ಜಿಲ್ಲೆ, ಶಾಸನ ಸಂಪುಟ-೯**, ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ.

೪೩. ದೇವರಕೊಂಡಾರೆಡ್ಡಿ, (ಪ್ರ.ಸಂ), ೨೦೦೬, **ಬಾಗಲಕೋಟ ಜಿಲ್ಲೆ ಶಾಸನ ಸಂಪುಟ-೯**, ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ.

೪೪. ದೇವರಕೊಂಡಾರೆಡ್ಡಿ, (ಪ್ರ.ಸಂ), ೨೦೦೮, **ಬೀದರ ಜಿಲ್ಲೆ, ಶಾಸನ ಸಂಪುಟ-೯**, ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ.

೪೫. ನರಸಿಂಹಮೂರ್ತಿ ಎ.ವಿ., ೧೯೮೩, **ಕರ್ನಾಟಕದ ಪುರಾತತ್ವ ಶೋಧನೆ**, ಕನ್ನಡ ಮತ್ತು ಸಂಸ್ಕೃತ ನಿರ್ದೇಶನಾಲಯ, ಬೆಂಗಳೂರು.

೪೬. ನರಸಿಂಹಮೂರ್ತಿ ಎ.ವಿ., ೨೦೦೪, (ಅನು), **ಮರಾಠಾರ ಪಾರಮ್ಯ, ಭಾಗ - ೧**, ಭಾರತೀಯ ವಿದ್ಯಾಭವನ, ಬೆಂಗಳೂರು.

೪೭. ನಾಯಕ ಹಾ.ಮಾ., ೧೯೭೧, **ಜಾನಪದ ಸ್ವರೂಪ**, ತ.ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು.

೪೮. ನಾಗೇಶ ಎಚ್.ಬಿ., ೧೯೮೧, **ಗ್ರಾಮ ವ್ಯಾಸಾಂಗ**, ಚಂದ್ರನಾಥ ಪ್ರಕಾಶನ, ಧಾರವಾಡ.

೪೯. ನಾಯಕ ಎನ್.ಆರ್., ೧೯೮೩, **ಕರ್ನಾಟಕದ ಶಕ್ತಿ ದೇವತೆಗಳು**, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

೫೦. ನಾಗಭೂಷಣ ಸ್ವಾಮಿ ಜಿ.ಎಲ್., ೧೯೯೩, **ಪುರಾಣ**, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ.

೫೧. ನಾಯಕ ಎನ್.ಆರ್., ೧೯೯೬, **ಶಿರಸಿ ಶ್ರೀಮಾರಿಕಾಂಬೆ ಮತ್ತು ಜಾತ್ರೆ**, ಕನ್ನಡ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೫೨. ನಾಗೇಶ ರಂಗೋ ಕುಲಕರ್ಣಿ, ೨೦೦೪, (ಅನು), **ಶ್ರೀಮದ ದೇವಿ ಭಾಗವತ್**, ಪ್ರತಿಭಾ ಶಾಂತಮಾಲೆ, ಧಾರವಾಡ.

೫೩. ನಾರಾಯಣ ಪಿ.ವಿ., ೨೦೦೪, **ನಯಸೇನ ಧರ್ಮಾಮೃತ**, ವಸಂತ ಪ್ರಕಾಶನ, ಬೆಂಗಳೂರು.

೫೪. ನಾಗರಾಜ ಡಿ.ಆರ್., ೨೦೦೮, **ಶಕ್ತಿಶಾರದೆಯ ಮೇಳ**, ಅಕ್ಷರ ಪ್ರಕಾಶನ, ಸಾಗರ.

೫೫. ನೇಗಿನಹಾಳ ಎಂ.ಬಿ., ೧೯೯೯, **ಜಾನಪದ ಸಾಹಿತ್ಯ ದರ್ಶನ, ಭಾಗ - ೨೩**, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ.

೫೬. ಪಂಚಮುಖಿ ಆರ್.ಎಸ್., ೧೯೬೭, **ಕರ್ನಾಟಕ ಇತಿಹಾಸ**, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ.

೫೭. ಪರಮಶಿವಯ್ಯ ಜೀ.ಶಂ., ೧೯೮೧, **ಜಾನಪದ ಒಂದು ಅಧ್ಯಯನ**, ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ.

೫೮. ಪಾಟೀಲ ಬಿ.ಪಿ., ೧೯೯೦, **ಉತ್ತರ ಕರ್ನಾಟಕದ ಗ್ರಾಮದೇವತೆಗಳು**, ಅ.ಪ್ರ. ಪಿಎಚ್.ಡಿ. ಮಹಾಪ್ರಬಂಧ, ಕ.ವಿ.ವಿ., ಧಾರವಾಡ

೫೯. ಪಾಟೀಲ ಎಸ್.ಕೆ., ೧೯೯೬, **ಆಚರಣೆಯಲ್ಲಿ ಜನಪದ ವಾಸ್ತುಶಿಲ್ಪಗಳು**, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ.

೬೦. ಪ್ರಭಾಕರ ಎಂ.ಎಸ್., ೨೦೧೧, **ದೇವಾಲಯ ವಾಸ್ತು**, ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ.

೬೧. ಬಸುಪಟ್ಟದ, ೧೯೮೬, **ಬಾದಾಮಿ ತಾಲೂಕು ದರ್ಶನ**, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

೬೨. ಬಸವರಾಜ ಮಲಶೆಟ್ಟಿ, ೧೯೮೭, **ಉತ್ತರ ಕರ್ನಾಟಕದ ಜಾನಪದ ವಾದ್ಯಗಳು**, ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ.

೬೩. ಬಸವರಾಜ ಸಬರದ, ೧೯೯೪, **ಜನಪದ ದೇವತೆಗಳು ಮತ್ತು ಶಿಷ್ಟದೇವತೆಗಳು**, ಮಿತ್ರ ಪ್ರಿಂಟರ್ಸ್, ಮೈಸೂರು.

೬೪. ಬರಗೂರು ರಾಮಚಂದ್ರಪ್ಪ, ೨೦೦೨, **ಕರ್ನಾಟಕ ಸಂಗಾತಿ**, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

೬೫. ಬಸವರಾಜ ಸಬರದ, ೨೦೦೯, **ಜನಪದ ದೈವಗಳು**, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ.

೬೬. ಬಿರಾದಾರ ಮ.ಗು., ೧೯೮೭, **ಜಾನಪದ ಜೀವಾಳ**, ಪುಸ್ತಕ ಅಕಾಡೆಮಿ, ಕಲಬುರ್ಗಿ.

೬೭. ಬೋರಲಿಂಗಯ್ಯ ಹಿ.ಚಿ., ೧೯೭೯, ಉಜ್ಜನಿ **ಚೌಡಮ್ಮ**, ಹಾನಕರ ಪ್ರಕಾಶನ, ಬೆಂಗಳೂರು.

೬೮. ಬೋರಲಿಂಗಯ್ಯ ಹಿ.ಚಿ., ೨೦೦೧, **ವಿಸ್ಮೃತಿ ಮತ್ತು ಸಂಸ್ಕೃತಿ**, ಸಿ.ವಿ.ಜಿ., ಪಬ್ಲಿಕೇಶನ್, ಬೆಂಗಳೂರು.

೬೯. ಮಲ್ಹಾರಭಟ್ಟ ಬನಂಭಟ್ಟ ಪೂಜಾರ, **ಶ್ರೀ ಬನಶಂಕರಿ ಲಘು ಚರಿತ್ರೆ**, ಪೂಜಾರ ಬಂಧುಗಳು, ಚೊಳಚಗುಡ್ಡ, ಬಾದಾಮಿ

೭೦. ಮಂಗಳಾ ಚ.ನಾ., ೧೯೯೪, **ಮಾತೃಪೂಜೆ**, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ.

೭೧. ಮಹಾದೇವಪ್ಪ ಎನ್.ಜಿ., ೧೯೯೫, **ಧಾರ್ಮಿಕ ನಂಬಿಕೆಗಳು ಮತ್ತು ದಾರ್ಶನಿಕ ವಿಶ್ಲೇಷಣೆ**, ಮನೋಹರ ಮುದ್ರಣಾಲಯ, ಧಾರವಾಡ.

೭೨. ಮಹಾಬಲೇಶ್ವರರಾವ್, ೧೯೯೬, **ಸಂಶೋಧನಾ ಮಾರ್ಗ**, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೭೩. ಮಂಜುನಾಥ ಬೇವಿನಕಟ್ಟಿ, ೧೯೯೯, **ಜನಪದ ನಂಬಿಕೆಗಳು**, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ.

೭೪. ಮಂಜುನಾಥ ಬೇವಿನಕಟ್ಟಿ, ೨೦೦೯, **ಕರ್ನಾಟಕ ಜನಪದ ಸ್ತ್ರೀ ದೇವತೆಗಳ ಸಾಂಸ್ಕೃತಿಕ ಪದಕೋಶ**, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ.

೭೫. ಮರಿಶಾಮಾಚಾರ್ ಎನ್., ೨೦೦೦, **ಭಾರತೀಯ ಶಿಲ್ಪಕಲೆ**, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು.

೭೬. ಮುನಿಸ್ವಾಮಿ ಆರ್., (ಪ್ರಸಂ), ೧೯೯೯, **ಕರ್ನಾಟಕ ರಾಜ್ಯ ಗ್ಯಾಝೆಟಿಯರ್, ಬಿಜಾಪುರ ಜಿಲ್ಲೆ**, ಕರ್ನಾಟಕ ರಾಜ್ಯ ಸರಕಾರ, ಬೆಂಗಳೂರು.

೭೭. ಮುರಿಗೆಪ್ಪ ಎ., (ಪ್ರ.ಸಂ), ೨೦೦೯, **ಬಾದಾಮಿ ಚಾಲುಕ್ಯರು ಲೇಖನ ಸಂಪುಟ**, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ

೭೮. ಮೊಗಳ್ಳಿ ಗಣೇಶ, ೨೦೦೨, **ಕರ್ನಾಟಕ ಗ್ರಾಮದೈವಗಳ ಸಾಂಸ್ಕೃತಿಕ ವಿಕಾಸ**, ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪಿಎಚ್.ಡಿ. ಮಹಾಪ್ರಬಂಧ.

೭೯. ಯಮನೂರಪ್ಪ ಅಣ್ಣಿಗೇರಿ, ೨೦೧೦, **ಮಹಿಳೆ ಮತ್ತು ಸಮೃದ್ಧ ನೆಲೆಗಳು**, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ.

೮೦. ರಹಮತ್ ತರೀಕೆರೆ, ೨೦೦೬, **ಕರ್ನಾಟಕ ನಾಥಪಂಥ**, ಕನ್ನಡ ವಿ.ವಿ. ಹಂಪಿ

೮೧. ರಮೇಶ ನಾಯಕ, (ಸಂ), ೨೦೦೭, **ಕರ್ನಾಟಕ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರು ಚಿಂತನೆ**, ಕನ್ನಡ ವಿ.ವಿ. ಹಂಪಿ.

೮೨. ರಾಮಚಂದ್ರರಾವ್ ಎಸ್.ಕೆ., ೧೯೭೫, **ಮೂರ್ತಿಶಿಲ್ಪ ನೆಲೆ – ಹಿನ್ನೆಲೆ**, ಬೆಂಗಳೂರು ವಿ.ವಿ. ಬೆಂಗಳೂರು.

೮೩. ರಾಮಚಂದ್ರರಾವ್ ಎಸ್.ಕೆ., ೧೯೮೦, **ಭಾರತದ ದೇವಾಲಯಗಳ ನೆಲೆ – ಹಿನ್ನೆಲೆ**, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು

೮೪. ರಾಮಚಂದ್ರರಾವ್ ಎಸ್.ಕೆ., ೧೯೮೧, **ಭಾರತದ ದೇವಾಲಯಗಳ ಜಾನಪದ ಮೂಲ**, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು

೮೫. ರಾಜಶೇಖರ ಸಿಂದಗಿ, ೧೯೮೮, **ಕರ್ನಾಟಕ ವಾಸ್ತುಶಿಲ್ಪ ಮತ್ತು ಚಿತ್ರಕಲೆ**, ಸುಜಾತಾ ಪಬ್ಲಿಕೇಷನ್ಸ್ – ಯು.ಬಿ.ಆರ್., ಧಾರವಾಡ.

೮೬. ರಾಜಶೇಖರ ಎಸ್., ೧೯೯೬, **ದಕ್ಷಿಣ ಭಾರತದ ವಾಸ್ತುಶಿಲ್ಪಕ್ಕೆ ಬಾದಾಮಿ ಚಾಲುಕ್ಯರ ಕೊಡುಗೆ**, ಪ್ರಸಾರಾಂಗ, ಮೈಸೂರು ವಿ.ವಿ. ಮೈಸೂರು

೮೭. ಲಕ್ಷ್ಮೀನಾರಾಯಣರಾವ ನೆಲಮಂಗಲ ಮತ್ತು ಪಂಚಮುಖಿ ಆರ್.ಎಸ್., ೧೯೪೬, **ಕರ್ನಾಟಕ ಅರಸು ಮನೆತನಗಳು, ಸಂಪುಟ** – ೧, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ.

೮೮. ಲಲಿತಾ ನಾಯಕ ಬಿ.ಟಿ., ೧೯೯೮, **ಹಬ್ಬ ಮತ್ತು ಬಲಿ**, ಅಂಕಿತ ಪ್ರಕಾಶನ, ಬೆಂಗಳೂರು.

೮೯. ವಾಸುದೇವ ಬಡಿಗೇರ, ೨೦೦೨, **ಶಿರಸಂಗಿ ಕಾಳಮ್ಮ ಸಾಂಸ್ಕೃತಿಕ ಅಧ್ಯಯನ**, ಶ್ವೇತಾ – ಭಾಗೀರತಿ ಪ್ರಕಾಶನ, ಹೊಸಪೇಟೆ.

೯೦. ವೀರೇಶ ಬಡಿಗೇರ, ೧೯೯೯, **ಗುಳ್ಳವ್ವ – ಆಚರಣೆ – ವಿಶ್ಲೇಷಣೆ**, ಮಯ ಪ್ರಕಾಶನ, ಕಮಲಾಪುರ.

೯೧. ವೆಂಕಟರಂಗೋಕಟ್ಟಿ, (ಅನು), ೧೮೮೩, **ಧಾರವಾಡ, ಬೆಳಗಾವಿ, ವಿಜಾಪುರ, ಕಾನಡಾ ಜಿಲ್ಲೆಗಳ ಗ್ಯಾಝಿಟಿಯರ್**, ಏಷಿಯನ್ ಎಜುಕೇಶನಲ್ ಸರ್ವಿಸಿಸ್, ನವದೇಹಲಿ.

೯೨. ವೃಷಭೇಂದ್ರಸ್ವಾಮಿ, ಎಸ್.ಎಂ., (ಸಂ), ೧೯೭೪, **ಜನಪದ ಸಾಹಿತ್ಯ ದರ್ಶನ, ಸಂಪುಟ – ೧೫**, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿ.ವಿ. ಧಾರವಾಡ.

೯೩. ಶಾಸ್ತ್ರೀ ಎ.ಕೆ., ೨೦೦೬, **ಶೃಂಗೇರಿ ಮಠದ ಕಡತಗಳಲ್ಲಿಯ ಆಯ್ದ ಚಾರಿತ್ರಿಕ ದಾಖಲೆಗಳು**, ಕರ್ನಾಟಕ ರಾಜ್ಯ ಪತ್ರಗಾರ ಇಲಾಖೆ, ಬೆಂಗಳೂರು.

೯೪. ಶಿವರಾಮ ಕಾರಂತ, ೧೯೭೨, **ಕರ್ನಾಟಕದಲ್ಲಿ ಚಿತ್ರಕಲೆ**, ಮೈಸೂರು ವಿ.ವಿ., ಮೈಸೂರು.

೯೫. ಶಿವಕುಮಾರಸ್ವಾಮಿ ಸಿ.ಎನ್., ೧೯೮೮, **ಕರ್ನಾಟಕ ಜಾತ್ರೆಗಳು**, ಕನ್ನಡ ವಿಭಾಗ ಸ್ನಾತಕೋತ್ತರ ಕೇಂದ್ರ, ಬಿ.ಆರ್. ಪ್ರೊಜೆಕ್ಟ್, ಶಿವಮೊಗ್ಗ.

೯೬. ಶಿವರಾಮ ಕಾರಂತ, ೧೯೯೧, **ಚಾಲುಕ್ಯ ವಾಸ್ತು ಮತ್ತು ಶಿಲ್ಪ**, ಲಲಿತಕಲಾ ಅಕಾಡೆಮಿ, ಬೆಂಗಳೂರು.

೯೭. ಶಿವತಾರಕ ಕೆ.ಬಿ., ೨೦೦೧, **ಕರ್ನಾಟಕ ಪುರಾತತ್ವ ನೆಲೆಗಳು**, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ.

೯೮. ಶೀಲಾಕಾಂತ ಪತ್ತಾರ, ೧೯೯೮, **ಬಾದಾಮಿ ಒಂದು ಸಾಂಸ್ಕೃತಿಕ ಅಧ್ಯಯನ**, ಕನ್ನಡ ವಿ.ವಿ. ಗೆ ಸಲ್ಲಿಸಿದ ಡಿ.ಲಿಟ್., ಮಹಾಪ್ರಬಂಧ.

೯೯. ಶೇಷಶಾಸ್ತ್ರೀ ಆರ್, ೨೦೦೪, **ಕರ್ನಾಟಕದ ವೀರಗಲ್ಲುಗಳು**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೦೦. ಶೈಲಜ ಹಿರೇಮಠ, ೨೦೦೩, **ಸ್ತ್ರೀ ಕಥನ**, ಭುವನ ಪ್ರಕಾಶನ, ಹೊಸಪೇಟ.

೧೦೧. ಶೈಲಜ ಹಿರೇಮಠ, ೨೦೦೪, **ಮಾತೃಪ್ರಧಾನ ಪರಿಕಲ್ಪನೆ**, ಕನ್ನಡ ವಿ.ವಿ. ಹಂಪಿ.

೧೦೨. ಶ್ರೀಧರಮೂರ್ತಿ ಮ., ೧೯೮೧, **ದೇವತೆಗಳು ಮತ್ತು ಹಬ್ಬಗಳು**, ಪುನರ್ವಸು ಪ್ರಕಾಶನ, ಬೆಂಗಳೂರು.

೧೦೩. ಶ್ರೀಮತಿ ಎಚ್.ಎಸ್., ೨೦೦೩, **ಸ್ತ್ರೀವಾದ ಚಿಂತನೆ ಮಾಲೆ – ೩**, ಪ್ರಸಾರಾಂಗ ಕ.ವಿ.ವಿ. ಹಂಪಿ.

೧೦೪. ಶ್ರೀನಿವಾಸ ರಿತ್ತಿ, ಸುರೇಂದ್ರದಾನಿ, (ಸಂ), ೨೦೦೭, **ಕರ್ನಾಟಕ ಕುಲಪುರೋಹಿತ ಆಲೂರು ವೆಂಕಟರಾಯ ಸಮಗ್ರ ಕೃತಿಗಳು, ಸಂಪುಟ** – ೧, ಆಲೂರು ವೆಂಕಟರಾಯ ಪ್ರತಿಷ್ಠಾನ, ಧಾರವಾಡ.

೧೦೫. ಸಾಲೆತ್ತೊರೆ ಬಿ.ಎ., ದೇಸಾಯಿ ಪಾಂಡುರಂಗರಾಯ, ೨೦೦೮, **ಕನ್ನಡ ನಾಡಿನ ಚರಿತ್ರೆ, ಭಾಗ** – ೧, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೦೬. ಸಿದ್ದಪ್ಪರಾಧ್ಯ ಟಿ.ಜಿ., ೧೯೬೬, **ಶಕ್ತಿ ವಿಕಾಸ**, ಪ್ರಸಾರಾಂಗ, ಮೈಸೂರು ವಿ.ವಿ., ಮೈಸೂರು.

೧೦೭. ಸಿದ್ದಲಿಂಗಯ್ಯ ೧೯೮೭, **ಅವತಾರಗಳು**, ಸ್ನೇಹ ಪ್ರಕಾಶನ, ಬೆಂಗಳೂರು.

೧೦೮. ಸಿದ್ದಲಿಂಗಯ್ಯ ೧೯೯೭, **ಗ್ರಾಮದೇವತೆಗಳು**, ಮೂಲಭಾರತಿ ಪ್ರಕಾಶನ, ಬೆಂಗಳೂರು.

೧೦೯. ಸುಂಕಾಪುರ ಎಂ.ಎಸ್., ೧೯೯೦, **ಜಾನಪದ ಸಾಹಿತ್ಯ ದರ್ಶನ – ೮**, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿ.ವಿ. ಧಾರವಾಡ.

೧೧೦. ಸುಂದರ ಅ., ೧೯೯೪, **ಕರ್ನಾಟಕ ಪ್ರಾಗಿತಿಹಾಸ ಕಾಲದ ಕಲೆ**, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.

೧೧೧. ಸುಭಾಷ ವೈ. ಬೋಗೇರ, ೨೦೦೪, **ಬನಶಂಕರಿ ಜಾನಪದೀಯ ಅಧ್ಯಯನ**, ಅ.ಪ್ರ. ಪಿಎಚ್.ಡಿ ಮಹಾಪ್ರಬಂಧ, ಕ.ವಿ.ವಿ. ಧಾರವಾಡ.

೧೧೨. ಸೂರ್ಯನಾಥ ಕಾಮತ್, ೧೯೯೬, ಕೃಷ್ಣಮೂರ್ತಿ ಪಿ.ಎ., (ಸಂ), **ಇತಿಹಾಸ ದರ್ಶನ, ಸಂಪುಟ – ೧೧**, ಕರ್ನಾಟಕ ಇತಿಹಾಸ ಅಕಾಡೆಮಿ, (ರಿ), ಬೆಂಗಳೂರು.

೧೧೩. ಹಂಪ ನಾಗರಾಜಯ್ಯ, ೧೯೮೨, **ಜಾನಪದ ಅಧ್ಯಯನ ವಿಚಾರ ಸಂಕಿರಣ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೧೪. ಹಂಪ ನಾಗರಾಜಯ್ಯ, ೧೯೮೫, **ಕರ್ನಾಟಕದ ಜಾತ್ರೆಗಳು**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೧೫. ಹಿರೇಮಠ, ಎಸ್.ಎಸ್., ೧೯೯೩, **ಕರ್ನಾಟಕ ದಲಿತ ಸಂಸ್ಕೃತಿ, ಭಾಗ – ೨**, ಸಮತಾ ಪ್ರಕಾಶನ, ಹೊಸಪೇಟೆ.

೧೧೬. ಹಿರೇಮಠ, ಎಸ್.ಎಸ್., ೨೦೦೫, **ಜನಪದ ಸಮಾಜ ಸಂಸ್ಕೃತಿ**, ಸೂರ್ಯ ಪ್ರಕಾಶನ, ಚಿತ್ರದುರ್ಗ.

೧೧೭. ಜ್ಞಾನಾನಂದ ಜಿ., ೧೯೯೮, **ಶ್ರೀ ಕಾಶ್ಯಪ ಶಿಲ್ಪ ಶಾಸ್ತ್ರಂ (ಉತ್ತರಾರ್ಧ)**, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.

೧೧೮. ಜ್ಞಾನಾನಂದ ಜಿ., ೨೦೦೧, **ಶಿಲ್ಪಾದರ್ಶ ಸಂಪುಟ – ೧**, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ.

೧೧೯. ಜ್ಞಾನಾನಂದ ಜಿ., ೨೦೦೨, **ಶಿಲ್ಪಾದರ್ಶ ಸಂಪುಟ – ೨**, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ.

೧೨೦. ಜ್ಞಾನಾನಂದ ಜಿ., ೨೦೦೫, **ಪಾರಂಪರಿಕ ಶಿಲ್ಪ ನಿನ್ನೆ – ನಾಳೆ**, ಸಂಸ್ಕೃತ ಸಾಹಿತ್ಯ ಪ್ರತಿಷ್ಠಾನ, ಬೆಂಗಳೂರು.

೧೨೧. ಜ್ಞಾನಾನಂದ ಜಿ., ೨೦೦೬, **ಶ್ರೀ ಕಾಶ್ಯಪ ಶಿಲ್ಪ ಶಾಸ್ತ್ರಂ (ಪೂರ್ವಾರ್ಧ)**, ದ್ವಿತೀಯ ಸಂಪುಟ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.

## ಲೇಖನಗಳು

೦೧. ಕಲಬುರ್ಗಿ ಎಂ.ಎಂ., ೧೯೮೮, **ಬಾದುಬ್ಬೆ**, ಮಹಾಮಾರ್ಗ – ೨, ಕರ್ನಾಟಕ ಬುಕ್ ಏಜನ್ಸಿ, ಬೆಂಗಳೂರು.

೦೨. ಕಮಲಾಕ್ಷಿ ಕೆ., ೨೦೦೪, **ದೈವಾರಾಧನೆಯಲ್ಲಿ ವೈದಿಕ – ಅವೈದಿಕ ಸಂಘರ್ಷ**, ದ್ರಾವಿಡ ಅಧ್ಯಯನ ಸಂಪುಟ – ೩, ಸಂಚಿಕೆ – ೧, ಜನವರಿ – ಜೂನ್, ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, (ಸಂ), ಪ್ರಸಾರಾಂಗ, ಕನ್ನಡ ವಿ.ವಿ., ಹಂಪಿ.

೦೩. ಚಂದ್ರಶೇಖರ ಟಿ.ಪಿ., ೧೯೮೯, **ಜಾತ್ರೆಗಳು – ಅವುಗಳ ಉಗಮ ಮತ್ತು ವಿಕಾಸ**, ಜಾನಪದ ಜಗತ್ತು, ಸಂಪುಟ – ೧೦, ಸಂಚಿಕೆ – ೫–೬, ಸಪ್ಟೆಂಬರ್ – ಅಕ್ಟೋಬರ್ ಮತ್ತು ನವೆಂಬರ್, ನಾಗೇಗೌಡ ಎಚ್.ಎಲ್., (ಸಂ), ಕರ್ನಾಟಕ ಜಾನಪದ ಟ್ರಸ್ಟ್, ಬೆಂಗಳೂರು.

೦೪. ಚಂದ್ರ ಕಾಳೇನಹಳ್ಳಿ, ೧೯೯೬, **ಗ್ರಾಮದೇವತೆಗಳ ಅಧ್ಯಯನ**, ಜಾನಪದ ವರ್ಷ, ನಾವಡ ಎ.ವಿ., (ಸಂ), ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೦೫. ಚಿದಾನಂದಮೂರ್ತಿ ಎಂ., ೧೯೯೯, **ಸಮಾಜೋ – ಸಾಂಸ್ಕೃತಿಕ ಅಧ್ಯಯನಗಳು**, ಜಾನಪದ ಸಮೀಕ್ಷೆ – ವಿಶ್ಲೇಷಣೆ, ತೀನಂ ಶಂಕರ ನಾರಾಯಣ, (ಸಂ), ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.

೦೬. ಚಿದಾನಂದಮೂರ್ತಿ ಎಂ., ೨೦೦೨, **ಬಾದುಬ್ಬೆ – ಬಾದುಮಯ್ಯ – ಬನಾಶಂಕರಿ ಪೆಟ್ಟಿಗೆ – ಲಜ್ಜಾಗೌರಿ**, ಜನ – ಜನಪದ, ಜಾನಪದ, ಚಿದಾನಂದಮೂರ್ತಿ, (ಸಂ), ಸ್ವಪ್ನ ಬುಕ್‌ಹೌಸ್, ಬೆಂಗಳೂರು.

೦೭. ಜ್ಯೋತ್ಸ್ನಾ ಕಾಮತ್, ೨೦೦೫, **ಲಜ್ಜಾಗೌರಿ : ಜೀವೋತ್ಪತ್ತಿಯ ಪ್ರತೀಕ**, ದೇವರನ್ನು ಕುರಿತು : ಒಂದು ಬಹುಮುಖ ನೋಟ, ಜ್ಯೋತ್ಸ್ನಾ ಕಾಮತ್, (ಸಂ), ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್, ಬೆಂಗಳೂರು.

೦೮. ಜಯಲಕ್ಷ್ಮೀ ಸೀತಾಪುರ, ೧೯೯೧, **ಗ್ರಾಮದೇವತೆಗಳ ಹಬ್ಬಗಳು**, ಜಾನಪದ ಸಂಭಾವನೆ, ರಾಜೇಂದ್ರ ಡಿ.ಕೆ., ಗಿರಿಗೌಡ ನೀ., (ಸಂ), ತಳುಕಿನ ವೆಂಕಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು.

೦೯. ತಿಪ್ಪೇಸ್ವಾಮಿ ಜಿ.ಆರ್., ೧೯೮೨, **ಗ್ರಾಮದೇವತೆಗಳು**, ಸಂಕೀರ್ಣ ಕರ್ನಾಟಕ ಜಾನಪದ ಸಮೀಕ್ಷೆ, ಪಂಪಶಿವಯ್ಯ ಜಿ.ಶಂ., (ಸಂ), ಬೆಂಗಳೂರು.

೧೦. ದೇವೇಂದ್ರ ಕುಮಾರ ಹಕಾರಿ, ೧೯೮೮, **ಆಚರಣೆ ಮತ್ತು ಉಗ್ರ ಆಚರಣೆ**, ಜನಪದ

ಗಂಗೋತ್ರಿ, ಸಂಪುಟ – ೮, ಸಂಚಿಕೆ – ೪, ಜೂನ್, ದೇವೇಂದ್ರ ಕುಮಾರ ಹಕಾರಿ, (ಸಂ), ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೧೧. ಪ್ರಕಾಶಬಾಬು ಕೆ.ಆರ್., ೨೦೧೧, **ಭಾಗ್ಯದೇವತೆ ಬಾದಾಮಿ ಬನಶಂಕರಿ**, ನವೆಂಬರ್ – ೨೦, ಕರ್ಮವೀರ.

೧೨. ಪುರೋಹಿತ ಕಲಾದಗಿ, ೨೦೧೨, **ಇತಿಹಾಸ ಪುಟಗಳಲ್ಲಿ ಬಾದಾಮಿ ಬನಶಂಕರಿ**, ಡಿಸೆಂಬರ್ – ೩೧, ಪ್ರಜಾವಾಣಿ.

೧೩. ಬಿರಾದಾರ ಮ.ಗು., ೧೯೮೬, **ಮಠ ಮತ್ತು ಮೂಢನಂಬಿಕೆ**, ಜಾನಪದ ಗಂಗೋತ್ರಿ, ತ್ರೈಮಾಸಿಕ ಸಂಪುಟ –೧, ಸಂಚಿಕೆ – ೧, ಜನವರಿ, ಫೆಬ್ರವರಿ, ಮಾರ್ಚ್, ನಾಗೇಗೌಡ ಎಚ್.ಎಲ್., (ಸಂ), ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು.

೧೪. ಬೋರಲಿಂಗಯ್ಯ ಹಿ.ಚಿ., ೧೯೮೯, **ಕರ್ನಾಟಕದ ಗ್ರಾಮದೇವತೆಗಳು**, ಕರ್ನಾಟಕ ಜಾನಪದ, ಡಾ. ಕೆ. ಕರೀಂಖಾನ್ (ಸಂ), ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೧೫. ಮಂಜುನಾಥ ಬೇವಿನಕಟ್ಟಿ, ೧೯೯೭, **ಮಾತಂಗಿ**, ಜಾನಪದ ಜಗತ್ತು, ಸಂಪುಟ – ೧೫, ಸಂಚಿಕೆ ೧–೪, ಎಚ್.ಎಲ್., ನಾಗೇಗೌಡ, (ಸಂ), ಕರ್ನಾಟಕ ಜಾನಪದ ಟ್ರಸ್ಟ್, ಬೆಂಗಳೂರು.

೧೬. ಮೋಹನ್ ಎನ್., ೨೦೦೫, **ದೈವಾರಾಧನೆ ಭೌಗೋಳಿಕ, ಸಾಮಾಜಿಕ ಮತ್ತು ರಾಜಕೀಯ ಪ್ರಭಾವಗಳು**, ಜಾನಪದ ಕರ್ನಾಟಕ, ಸಂಪುಟ – ೩, ಸಂಚಿಕೆ – ೨, ರಮೇಶ್ ಸ.ಚಿ., (ಸಂ), ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ,

೧೭. ಮೋಹನ್ ಎನ್., ೨೦೦೫, **ಭೈರವ ಆರಾಧನೆ**, ಜಾನಪದ ಕರ್ನಾಟಕ, ಸಂಪುಟ – ೩, ಸಂಚಿಕೆ – ೨, ರಮೇಶ್ ಸ.ಚಿ., (ಸಂ) ಪ್ರಸಾರಾಂಗ. ಕನ್ನಡ ವಿ.ವಿ. ಹಂಪಿ.

೧೮. ರಹಮತ ತರೀಕೆರೆ., (ಸಂ), ೨೦೦೦, **ಧರ್ಮ**, ಪ್ರಸಾರಾಂಗ. ಕನ್ನಡ ವಿ.ವಿ. ಹಂಪಿ.

೧೯. ರಹಮತ ತರೀಕೆರೆ., ೨೦೧೧, **ಬನಶಂಕರಿ : ಜಾತ್ರೆಯೋ, ನಾಟಕೋತ್ಸವವೋ?**, ಪ್ರಜಾವಾಣಿ, ಫೆಭ್ರವರಿ – ೨.

೨೦. ವಾಸುದೇವ ಬಡಿಗೇರ, ೧೯೯೬, **ಬಾದುಬ್ಬೆ – ಬನಶಂಕರಿ ಶಿಲ್ಪಗಳು**, ಇತಿಹಾಸ ದರ್ಶನ ಸಂಪುಟ – ೧೧, ಸೂರ್ಯನಾಥ ಕಾಮಥ, ಕೃಷ್ಣಮೂರ್ತಿಪಿ.ವಿ., (ಸಂ), ಕರ್ನಾಟಕ ಇತಿಹಾಸ ಅಕಾಡೆಮಿ (ರಿ), ಬೆಂಗಳೂರು.

೨೧. ವಿಲ್ಯಂ ಮಾಡ್ಡಾ, ೧೯೯೦, **ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಮಾತೃದೇವತೆಯ ಕಲ್ಪನೆ,** ಸುಂಕಾಪುರ ಎಂ.ಎಸ್., (ಪ್ರ.ಸಂ), ಜನಪದ ಸಾಹಿತ್ಯ ದರ್ಶನ, ಭಾಗ – ೮, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೨೨. ವೆಂಕನಗೌಡ ಭಿ. ಸಣ್ಣಸಕ್ಕರಗೌಡ್ರ, ೨೦೦೬, **ಬನಶಂಕರಿ ಜಾತ್ರೆ, ಹದಿನಾರು ಎತ್ತಿನ ಹಳಿಬಂಡಿಗಳು,** ಸಂಯುಕ್ತ ಕರ್ನಾಟಕ, ಜನವರಿ – ೩.

೨೩. ವೆಂಕಟಲಕ್ಷ್ಮೀ ಬಿ.ಎಸ್., ೧೯೯೪, **ಪರಂಪರೆ ಮತ್ತು ಮಹಿಳೆ,** ಸ್ತ್ರೀವಾದಿ ಸಾಹಿತ್ಯ ವಿಮರ್ಶೆ, ತೇಜಸ್ವಿನಿ ನಿರಂಜನ, ಸೀಮಂತಿನ ನಿರಂಜನ, (ಸಂ), ಕನ್ನಡ ಸಂಘ, ಬೆಂಗಳೂರು.

೨೪. ವೆಂಕಟೇಶ ಇನಾಮದಾರ, ೨೦೧೨, **ಜನಪದ ಸೊಗಡಿನ ಬನಶಂಕರಿ ಜಾತ್ರೆ,** ಸಂಯುಕ್ತ ಕರ್ನಾಟಕ, ಜನವರಿ – ೩.

೨೫. ಶಾಸ್ತ್ರೀ ಎ.ಕೆ., ೨೦೦೪, **ಶೃಂಗೇರಿ ಕಡತಗಳಲ್ಲಿ ಬಾದಾಮಿ ಬನಶಂಕರೀ ಅಮ್ಮ,** ಇತಿಹಾಸ ದರ್ಶನ, ಸಂಪುಟ – ೧೯,

೨೬. ಶೀಲಾಕಾಂತ ಪತ್ತಾರ, ೨೦೧೦, **ಬನದೇವಿ – ಬನದಮಹಾಮಾಯಿ ಮತ್ತು ಬನಶಂಕರಿ,** ಇತಿಹಾಸ ದರ್ಶನ, ಸಂಪುಟ – ೨೫, ನಾಗರಾಜ್ ಎಂ.ಜಿ., ಕೃಷ್ಣಮೂರ್ತಿ ಪಿ.ವಿ., (ಸಂ), ಕರ್ನಾಟಕ ಇತಿಹಾಸ ಅಕಾಡೆಮಿ (ರಿ), ಬೆಂಗಳೂರು.

೨೭. ಸಿದ್ದಲಿಂಗಯ್ಯ, ೨೦೦೨, **ಗ್ರಾಮ ದೇವತೆಯ ಪರಿಕಲ್ಪನೆ,** ದಲಿತ ಚಿಂತನೆ, ಮೊಗಳ್ಳಿ ಗಣೇಶ, (ಸಂ), ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ.

## REFERENCE ENGLISH BOOKS

01. Altekar, A.S., 1967, **Rashtrakutas and their times**, orientol Book Agency, Poona.

02. Bhattacharya N.N., 1977, **Indian Mother Goddess**, Calcutta Press.

03. Compebell James, (ed), 1884, **Gazetter of the Bombay presidency, voll - XXIII**, Bijapur, Bombay.

04. Dikshit D.P., 1980, **Political History of the Chalukyas of Badami**, Abhinav publication, New Delhi.

05. Desai P.B., (ed), 1981, **A History of Karnataka**, Karnataka University, Dharwad.

06. Devid Kinsley, 1986, **Hindu Goddesses**, Shri jainendra perss, New Delhi.

07. Dhaky M.A., 1996, **Encylopaedia of Indian Temple Architecture**, Merican Institute of Indian Studies, New Delhi.

08. Elmore W.T., 1925, **Dravidian God in modran Hinduism**, madras press.

09. Ethrenfels O.R., 1941, **Mother Right in India**, Hydrabad Press .

10. E. Osborn Martin., 1996, **Gods of India**, Cormos publication, New Delhi.

11. George Mishel, 1975, **Early western Chalukyan temples**, London.

12. George Michel, 2011, **Badami, Aihole, Pattadakal**, Deccan Heritage Roaundation Ltd, London.

13. Gopinath Rao T.a., 1971, **Elements of Hindu Iconography, Voll - IV**, Indological Book press, Varanasi.

14. Gopal B.R., 1981, **The Chalukyas of Kalyana and the Kalachuri's**, Karnataka University, Dharwad.

15. Gopinath Rao T.A., 1914, **Elements of Hindu Iconography, Voll - II**, Motilal banasidarss publisher, private limited, Delhi.

16. Hayadana Rao., (ed), 1930, **Mysore Gezetter**, Bangolore.

17. Henry White head, 1983, **The Villege Gods of South India**, Asian Educational Services, New Delhi.

18. James George Frazar, 1932, **The Goldan Bough**, Macmillan and Co, limited.

19. Jemas Hastings, 1964, **Encylopeadia of Religion and Ethics**, Edinbraug.

20. James Burgess, 1971, **Antiquities of the Belgaum and Kaladagi**, Indological Book House, Varanasi.

21. Kittel R.F., 1894, **Kannada - English Dictionary**, Bassel Mission Press, Mangalore.

22. Kosambi D.D., 1956, **An Introduction to study of Indian History**, Bombay Press.

23. Kosambi D.D., 1962, **Myth and Reality**, Bombay Press.

24. Kosambi D.D., 1965, **Ancient India a History of its Culture and Civilization**, New York.

25. Lakshminarayana Rao N., (ed), 1875, **South Indian Inscripition Voll - xviii**, Director General, Archaeological Survey, New Delhi.

26. Maria Leach, (ed), **Standrad Dictionary of Folklore**, Mythology and legend, New Delhi

27. Mahaligum T.V., 1970, **Studies in the South Indian temple Complex**, Karnataka University, Dharwad.

28. Mitra A.R., 1999, **Indo - Aryans, Voll - II**, Cosmos Publications, India.

29. Nirmal Kumar Bose, 1961, **Culture Anthropology**, New Delhi press.

30. Nihar Ranjan Ray, 1988, **History and cultere of Indian People, Voll - III**, The Classical Age, (ed), R.C. Mujumdar, Bharatiya vidya Bhavana, Bombay.

31. Periyar E.V. Ramasawami, 1983, **God and Man**, Madras press.

32. Paramashivaiah, 1991, **Encyclopaedia of the Folk Culture of Karnataka**, Mysore University, Mysore.

33. Roberft Briffault, 1927, **The mother, Voll - III**, London press.

34. Richard Dorson M., 1972, **Folklore and Folk life Introducation**, University chicago press, chicago.

35. Rocbar A.L., 1976, **Anthropology**, New Delhi press.

36. Ramakrishna H.A., Nagegouda H.L., 1998, **Essentional of Karnataka Folklore**, K.J., Parishat, Bangalore.

37. Sathyum B.N., (ed), 1966, **Gazetter of India, Mysore State Bijapur District**, Bangalore.

38. Saletore, 1981, **Encylopeadia of a Indian Culture, Voll - I and II**, New Delhi press.

39. Suryanath U. Kamath, 1982, **Karnataka state Gazetter, Part - I**, Government of Karnataka.

40. Sundara A., 1975, **The Early chamber tombs of south India**, UniversityPublishers, Delhi.

41. Victor W. Turner, 1969, **The Ritual Process**, London press.

42. Vishwanath R. Hiremath, 2007, **Chalukyas of Kalyanas**, Agam Kala Prakashan, Delhi.

43. Wilkins W.J., 1975, **Hindu Mythology**, Delhi press.

44. Winand M. Callewaert, 2005, **Gods and Temples in South India**, Manohar Piblishers and Distributors, New Delhi.

45. Yazadani G., 1982, **The Early History of the Deccan**, Oriental Books, New Delhi.

46. Ziegen balg, 1986, **Genealogy of South Indian Gods**, Madras press.

**ಸಂಕ್ಷೇಪಗಳು**

01. EI - Epigraphia Indica

02. IAR - Indian Archaeology a Review

03. IA - Indian Antiquary

04. SII - South Indian Inscription

# ಬಾದಾಮಿ ನಕ್ಷೆ



ಸೋಲಾಪೂರ ಮಾರ್ಗ
ಗುಳೇದಗುಡ್ಡ ಮಾರ್ಗ
ಪಟ್ಟದಕಲ್ಲು ಮಾರ್ಗ
ರೇಲ್ವೆ ನಿಲ್ದಾಣ
ಬಸ್ ನಿಲ್ದಾಣ
N
ವಸ್ತು ಸಂಗ್ರಹಾಲಯಕ್ಕೆ ದಾರಿ
ಬಾದಾಮಿ
ಬೆಳಗಾವಿ ಮಾರ್ಗ
ಗುಹಾ ದೇವಾಲಯಕ್ಕೆ ದಾರಿ
ಯರಗೊಪ್ಪ ನಿಲ್ದಾಣ
ಶಿವಯೋಗ ಮಂದಿರಕ್ಕೆ ದಾರಿ
ಗದಗ ಮಾರ್ಗ
ಅಗಸ್ತ್ಯ ತೀರ್ಥ
ಭೂತನಾಥ ದೇವಾಲಯ
ಭೂತನಾಥ ದೇವಾಲಯ
ಗುಹಾ ದೇವಾಲಯಗಳು
ಪಟ್ಟದಕಲ್ಲು ಮಾರ್ಗ
ಮಲಪ್ರಭ ನದಿ
೧. ಗುಹಾ ದೇವಾಲಯಗಳು
೨. ವಸ್ತು ಸಂಗ್ರಹಾಲಯ
೩. ಉತ್ತರದ ಭೂತನಾಥ ದೇವಾಲಯ
೪. ಪೂರ್ವದ ಭೂತನಾಥ ದೇವಾಲಯ
೫. ಮಂಟಪ
೬. ಕೆಳಗಿನ ಶಿವಾಲಯ
೭. ಮಾಲಗಿತ್ತಿ ಶಿವಾಲಯ
೮. ಮೇಲಿನ ಶಿವಾಲಯ
೯. ಟಿಪ್ಪುನ ಖಜಾನೆ
೧೦. ಮಹಾಕೂಟ
೧೧. ಶಿವಯೋಗ ಮಂದಿರ
೧೨. ಪಟ್ಟದಕಲ್ಲ
೧೩. ಐಹೊಳೆ
೧೪. ಬನಶಂಕರಿ


# ಬನಶಂಕರಿ ಕ್ಷೇತ್ರದ ನಕ್ಷೆ



೧. ಬನಶಂಕರಿ ಗುಡಿ
೨. ಕೇದಾರೇಶ್ವ ಗುಡಿ
೩. ಹನುಮಂತನ ಗುಡಿ
೪. ಸಹದೇವಿ ಗುಡಿ
೫. ಕಲ್ಯಾಣ ಮಂಟಪ
೬. ನಾರಾಯಣ ಗುಡಿ
೭. ದೇಸಾಯಿ ಮಂಟಪ
೮. ಮೂಲ ಬನಶಂಕರಿ ಗುಡಿ
೯. ತೈಲತೀರ್ಥ
೧೦ ರಾಮಲಿಂಗ ಗುಡಿ
೧೧. ಉತ್ತರ ಪ್ರವೇಶ ದ್ವಾರ
೧೨. ಈಶ್ವರ ಗುಡಿ
೧೩. ಪಾದಗಟ್ಟೆ
೧೪. ನಗಾರಿ ಮಂಟಪ
೧೫. ದೀಪಸ್ತಂಭ
೧೬. ದಕ್ಷಿಣದ ಪ್ರವೇಶದ್ವಾರ
೧೭. ಕಾಲಭೈರವನ ಗುಡಿ
೧೮. ಸರಸ್ವತಿ ಹಳ್ಳ
೧೯. ಚಂಡಭೈರವನ ಗುಡಿ
೨೦. ಹರಿದ್ರಾತೀರ್ಥ
೨೧. ಮಲೆಯಮ್ಮನ ಗುಡಿ

## ತಲ ನಕ್ಷೆಗಳು


### ಮೂಲವೆಂದು ಕರೆಯಲ್ಪಡುವ ಬನಶಂಕರಿ ದೇವಾಲಯ









ಪ್ರಸ್ತುತ ಬನಶಂಕರಿ ದೇವಸ್ಥಾನ




ನಾರಾಯಣ ದೇವಾಲಯ



ಮೂಲ ಬನಶಂಕರಿ ದೇವಾಲಯದ ಕಂಬ





ನಗಾರಿ ಮಂಟಪದಲ್ಲಿರುವ ಕಂಬ


ಮುಖ್ಯ ಪ್ರವೇಶದ್ವಾರದಲ್ಲಿರುವ ಕಂಬ






ನಾರಾಯಣ ಗುಡಿಯ ಮುಖಮಂಟಪದಲ್ಲಿರುವ ಕಂಬ


ಮುಖಮಂಟಪದಲ್ಲಿರುವ ಕಂಬಗಳು






ನವರಂಗದಲ್ಲಿರುವ ಕಂಬ

ಪಾದಗಟ್ಟೆಯ ಕಂಬ





ಹರಿದ್ರಾತೀರ್ಥದ ಮಂಟಪದಲ್ಲಿರುವ ಕಂಬ

# ಬನಶಂಕರಿಯ ಶಾಸನಗಳು

೧. **ದೊರೆತ ಸ್ಥಳ :** ಬನಶಂಕರಿ ಗುಡಿಯ ಎಡಬದಿಗೆ ಇರುವ ಕೇದಾರೇಶ್ವರ ಗುಡಿಯ ಕಂಬ.
**ಕಾಲ :** ಕ್ರಿ. ಶ. ೧೦೧೯ **ಉಲ್ಲೇಖ :** *BKI*, Vol. I, Part I, 57.

೧. ಸ್ವಸ್ತಿ ಶ್ರೀಪ್ರಿಥ್ವೀವಲ್ಲಭ ಮಹಾರಾಜಾ [ಧಿರಾ]
೨. ಜ ಪರಮೇಸ್ವರ ಪರಮ ಭಟ್ಟಾರಕಂ ಸ
೩. ತ್ಯಾಶ್ರಯ ಕುಳತಿಳಕ ಚಾಳುಕ್ಯಾಭರ
೪. ಣಂ ಶ್ರೀ ಮಜ್ಜಗದೇಕಮಲ್ಲದೇವರ ವಿಜಯ
೫. ರಾಜ್ಯ ಮುತ್ತರೋತ್ತರಾಭಿವ್ರಿದ್ಧಿ ಪ್ರವ
೬. ರ್ದ್ಧಮಾನ ಮಾ ಚನ್ದ್ರಾರ್ಕ್ಕ ತಾರಂಬರಂ ಸಲುತ್ತಮಿ
೭. ರೆ ಸಕನ್ರಿಪ ಕಾಳಾತೀತ ಸಂವತ್ಸರ [ಸ]
೮. ತಂಗ ೯೪೧ ನೆಯ ಸಿದ್ಧಾರ್ತ್ಥಿ ಸಂವತ್ಸರ
೯. . ಸುದ್ಧ ೫ ಆದಿತ್ಯವಾರದಂದು ತತ್ಪಾದ
೧೦. ಪದ್ಮೋಪಜೀವಿ ಸ[ಮ]ಧಿಗತ ಪಂಚ ಮಹಾ
೧೧. ಶಬ್ದ ಮಹಾ ಮ[ಂ]ಣ್ಡಳೇಶ್ವರ ರಾಷ್ಟ್ರಕೂ
೧೨. ಟ ಕುಳ ತಿಳಕ ನಹಿತ ಕೋಳಾಹಳಂ
೧೩. ಶ್ರೀ ಮದಾಹ[ವ]ಮಲ್ಲದೇವ ಪಾದ ಪಂಕಜ ಭ್ರ
೧೪. ಮರಂ ಮಾವನ ಗಂಧ್ದವಾರಣಂ ಭಾವನ ಸಿಂ[ಘಂ]
೧೫. ಪರ ಬಳಾಂಕುಶಂ ಕುಮರ ತಳ ಪ್ರಹಾರಿ
೧೬. ಸಿಂಘನ ಹಣುಮಂ ಸೌರ್ಯ್ಯ ಸೌಪರ್ಣ್ನಂ
೧೭. ಸೌಚ ಗಾಂಗೇಯಂ ಪ್ರತಿಪಕ್ಷ ರಾಕ್ಷಸಂ
೧೮. ಕಲಿಕಾಲ ಸೂದ್ರಕಂ ಪರಿವಾರ [ಗಂಭಂ]
೧೯. ವೀರ ಕ[ಂ]ಣ್ಣೇರವಂ ಸುಭಟರಾಚಾರ್ಯ್ಯ[ಂ] ಸ
೨೦. ತ್ಯ ರತ್ನಾಕರಂ ನಡೆಗೋಟೆ ಮಲ್ಲಂ
೨೧. ಗ[ಂ]ಣ್ಡರ ಗೋವಂ ಮಣ್ಡಳೀಕ ನಾರಾ
೨೨. ಯಣಂ ಶ್ರೀಮತ್ ಭೀಮದೇವಂ ಸು
೨೩. ರಿಗೆ ಗಣ್ಡರ ಗೋವನ [ಬದ್ದ ಪೆಗಡೆ]
೨೪. ಸೇನ ಬೋವಂ ನಾಗವರ್ಮ್ಮಾಯ್ಯಂ ಮಾ
೨೫. ತಿಳ ಚಾವೋಜಂ ಎಡವ ಗೇತೋಜಂ ಅ
೨೬. ಯ್ಯಾವೊಳೆ ಗೇತೋಜಂ ಬನದ ದೇವಿ
೨೭. ಯ ದಾಸಿ ದು[ವ್ವೋ]ಜಂ ಜಿತೇನ ಲ
೨೮. ಭ್ಯತೇ ಲಕ್ಷ್ಮೀ ಮ್ರಿತೇನಾಪಿ ಸುರಾಂ
೨೯. ಗನಾ ಕ್ಷಣ ವಿಧ್ವಂಸಿನಿ ಕಾಯೇ
೩೦. ಕಾ ಚಿಂನ್ತಾ ಮರಣೇ ರಣೇ

೨. **ದೊರೆತ ಸ್ಥಳ :** ಬನಶಂಕರಿ ಗುಡಿಯ ಪ್ರಾಕಾರದಲ್ಲಿಯ ಕಂಬ.

**ಕಾಲ :** ಕ್ರಿ. ಶ. ೧೦೨೪. **ಉಲ್ಲೇಖ :** *BKI*, Vol. I, Part I, 60.

೧. ಸ್ವಸ್ತಿ ಸಮಸ್ತ ಭುವನಾಶ್ರಯ ಶ್ರೀ ಪ್ರಿಥ್ವೀವಲ್ಲಭ ಮಹಾರಾ
೨. ಜಾಧಿರಾಜ ಪರಮೇಶ್ವರ ಪರಮ ಭಟ್ಟಾರಕಂ ಸತ್ಯಾ
೩. ಶ್ರಯ ಕುಳ ತಿಳಕಂ ಚಾಳುಕ್ಯಾಭರಣಂ ಶ್ರೀ ಮ
೪. ಜ್ಜಗದೇಕ ಮಲ್ಲದೇವರ ವಿಜಯರಾಜ್ಯ ಮುತ್ತ
೫. ರೋತ್ತರಾಭಿ ವ್ರಿದ್ಧಿ ಪ್ರವರ್ಧಮಾನ ಮಾ ಚಂದ್ರಾರ್ಕ್ಕ ತಾ
೬. ರಂಬರಂ ಸಲುತ್ತಮಿರೆ ಶ್ರೀ ಮನ್ಮಹಾ ಸಾಮನ್ತಂದಾ
೭. ಸರಸರ ದಿವ್ಯ ಶ್ರೀ ಪಾದ ಪದ್ಮೋಪಜೀವಿ
೮. ಸಮಸ್ತ ರಾಜ್ಯ ಭರ ನಿರೂಪಿತ ಮಹಾಮಾ
೯. ತ್ಯ ಪದವೀ ವಿರಾಜಮಾನ ಮಾನೋನ್ನತ ಪ್ರಭು
೧೦. ಮಂತ್ರೋತ್ಸಾಹ ಶಕ್ತಿ ತ್ರಯ ಸಂಪನ್ನಂ ಪರಿವಾ
೧೧. ರ ಕಂಭ ಕಾರ್ಯ್ಯ ಬ್ರಿಹಸ್ಪತಿ ಸಾಹಸ ಭೀಮ
೧೨. [ನೆಲ]ಗೋಟಿ ಮಲ್ಲಂ ಕೊಣ್ಡೆಯ ತಳ ಪ್ರಹಾರಿ
೧೩. ಯಿಡುವರಾದಿತ್ಯ[ಂ] ಗಿರಿದುರ್ಗ್ಗ ಸಿಂಘಂ
೧೪. ಮೊನೆಯ ಮುಂಕೊಳ್ವರ ಪೆಣ್ಡಿರಗಣ್ಡಂ ಪೆ
೧೫. ಗ್ಗಡೆ ಹೀರದಾಸನ ಸನ್ನಾ ಹಸುಭನಾ
೧೬. ಮಾದಿ ಸಮಸ್ತ ಪ್ರಶಸ್ತಿ ಸಹಿತಂ ಶ್ರೀ
೧೭. ಮನ್ಮನೆ ವೆರ್ಗ್ಗಡೆ ಕೇತಿಮಯ್ಯಂಗಳ್ ಸ
೧೮. ಕ ವರ್ಷ ೯೪೬ ನೆಯ ರಕ್ತಾಕ್ಷಿ ಸಂವ
೧೯. ತ್ಸರದ ವೈಶಾಖ ಬಹುಳ ಅಷ್ಟಮಿ
೨೦. ಯಾದಿತ್ಯವಾರದಂದು ಶ್ರೀ ಬನದ
೨೧. [ದೇ]ವಿಯ ಮುನ್ತೆ ನಿಲಿಸಿದ ಸಾಹಸ
೨೨. ಭೀಮನ ಶಿಳಾಸ್ತಂಭ ಕೇ . . ಭ .
೨೩. . . . ತಂಮ ಮಹೀಶ ಕೊಟ . .
೨೪. . ಪತಿ ಚಲದುತ್ಸಾಹದೊಳ್ ಸಂದ [ಭೀಮ]
೨೫. . ಯೊಳ್ ಪುಷ್ಪಾಯುಧ[ಂ] . . . .
೨೬. . . ಳ್ [ನೆ]ಲ ಸುತಂ ಸೌಚ ದೊ .
೨೭. . . ವಿಕ್ರಮ ದೊ[ಳ್] ಸತ್ವಂ ಮಹಾ
೨೮. . . . ಳ್ದನೊ ನೆಗಟ್ದಿಂ ಕಂ ತನೂದ್ಯ
೨೯. . . ತಂ . ಕು[ಟು]ಗೆರಿ ಕೇತನಿಂದೆ [ಧ]ರ್ಮ್ಮ
೩೦. . . ಜನಿಂದೊಡ ಮದ್ರಿಜೇಶನೊಳ್ ಧರ್ಮ್ಮ
೩೧. . . . ಶನೆಂದೊಡ ಮಿ[ಳಾ]ಧರ [ನೆಂ]ದೊಡಂ . .
೩೨. . . ವೈರಿಯೆಂದೊಡಂ ಮಹಿರಾಜಯು
೩೩. . . . ಗಾಧಿಪನೊಳ್ ಧರ್ಮ್ಮ[ನ್ವಿ]
೩೪. . . ಯದಂ ಧರ್ಮ್ಮಜನನ್ನೊಡಂ ಪ್ರಳೆಯ
೩೫. ಮೊನ್ನದ ಮಾತು ಪೇೞ್ದು ಕುವರ್ನ್ನರ[ಮ್]
೩೬. [ಚ]ಳದಂಕ ಕಾರ್ತ್ತಿ ಪರಸಿದೊಡನೆಘಂ ಶ್ರೀ
೩೭. ದಾಸ ಭೂಪನೆಸೆದೊಡೆ ಕೇತಂ ತನ
೩೮. [ಗಿ]ದು ಕೀರ್ತ್ತಿಗೆ ಲಾಂಚನಮೆನುತಂ ಸ್ತಾ
೩೯. [ಪಿಸಿ] . . ಕೀರ್ತ್ತಿಮೂಳಂ ಸ್ತಂಭಂ ಸು[ಭ್ರಂ]

೩. **ದೊರೆತ ಸ್ಥಳ :** ಬನಶಂಕರಿ ಗುಡಿ ಪ್ರಾಕಾರದ ಕಂಬ.

**ಕಾಲ :** ೧೨ ನೆಯ ಶತಮಾನ. **ಉಲ್ಲೇಖ :** *SII*, XV, 574.

**ಮೊದಲನೆಯ ಭಾಗ**

(೧ ರಿಂದ ೩ ಸಾಲುಗಳು ಹಾಳಾಗಿವೆ.)

೪. ರೊಳ್ ನಿರಂತರ ಧರ್ಮ್ಮಂಗಳ್ವೊದಲ . .

೫. ಳಾ ವಿರಮ ನಿವಾರಿತ ಸತ್ರ ವರ ವಿದ್ಯಾ ದಾ

೬. ನ ಮಿಂತಿವಂ ಮಾಡಿಸಿದಂ ಪ[ಲ]ವ್ರಿಕ್ಷ ಷೋ

೭. ಡಸಾದಿ ದ್ವಿಜ ವೀಥಿಗಳೊಳಂತೆಯ್ದೆ ಮು

೮. ನ್ನಾದ ಧರ್ಮ್ಮಂ ಕುಲಧರ್ಮ್ಮಂ ಕೊಡೆ ಕೊಣ್ಡ

೯. ಸವಸಿಯ ಮಳೆಯಖೇಡಂ ಮಹಾಗ್ರಾಮ

೧೦. ಮೆಂದಡೆಲೆವೊತ್ತು ಬಿಜ್ಜೆ ಸೆಯ್ಬಂ ದೊರೆಕೊ

೧೧. ಳನ ಜುಗುನ್ದಂಗ ಳೊಳ್ತನ್ನ ಪುಣ್ಯಂ ಸಲೆ ಕೀತಿ ಮಾ

೧೨. ಡಿದಂ ತಾರಗೆ ಹಿಮಗಿರಿ ಚಂದ್ರಾರ್ಕ್ಕರುಳ್ಳ

೧೩. ನ್ನ ಮೆನ್ದುಂ ಸಾಯಮ ಪುತ್ರಂ ಧರ್ಮ್ಮದೊ

೧೪. ಳಗಾ . ಕಲಿತನದೊಳೆ ಭಾನುಜನನ್ನಿ

**ಎರಡನೆಯ ಭಾಗ**

೧೫ ರಿಂದ ೨೧ ಹಾಳಾಗಿವೆ.

೨೨. . . . ನಿಜಿಕಿದಾ ಚಂದ್ರಾ

೨೩. . . ಬರಂ ಗೋವಿನ್ದಯ್ಯಂ ಬ

೨೪. . . ಮಂಗಳ ಮಹಾ ಶ್ರೀ

೪. **ದೊರೆತ ಸ್ಥಳ :** ಬನಶಂಕರಿ ಗುಡಿ ಪ್ರಾಕಾರದಲ್ಲಿ.

**ಕಾಲ :** ಕ್ರಿ. ಶ. ೧೫೪೪-೪೫. **ಉಲ್ಲೇಖ :** *IA*, X, 93.

೧. ಸ್ವಸ್ತಿ ಶ್ರೀ ಜ

೨. ಯಾಭ್ಯುದಯ ಶಾಲಿವಾ

೩. ಹನ ಶಕ ವರುಷ ೧೪೬೬

೪. ನೆಯ ಸೋಭಕ್ರು(ಕೃ)ತ್ಸಂವತ್ಸರ

೫. ದ ಆ(ಶ್ವಿಜ ಶು)ಧ(ದ್ಧ) . . . . (ಲ) ೲ ಶ್ರೀ ಮ

೬. ನ್ಮಹಾರಾಜಾಧಿರಾಜ ರಾಜ ಪರ

೭. ಮೇಸ್ವ(ಶ್ವ)ರ ಶ್ರೀ ವೀರ ಪ್ರತಾಪ ಶ್ರೀ ಸದಾಶಿವ

೮. ರಾಯರ ಹಡಪದಟಙು ಕ್ರು(ಕೃ)ಷ್ಣ

೯. ಪ್ಪ ನಾಯಕರೂ ಶ್ರೀ ಮನ್ಮಹಾ ಚತುರ್ದ

೧೦. ಶಾ ಭುವನಾಧಿಪತಿ ಶ್ರೀ ವನಪುರ ಪತಿ

೧೧. ಶ್ರೀ ಬನದ ಮಹಂ ಮಾಯಿ(ಯೆ)ಯ ಅಮ್ರು(ಮೃ)ತ ಪ

೧೨. ಡಿ ಅಂಗರಂಗ ವೈಭವಕೆ(ಕ್ಕೆ) (ಬಿಡಿ)ಸಿದ

೧೩. ಗ್ರಾಮವಂನು ಬಾದಾವಿಯ ಸೀಮೆಗೆ ಸಲುವ

೧೪. ಮಲಾಪಹಾರಿ ತೀರದ ದಾಣಕ ಸಿರಿವೂರ ಗ್ರಾ

೧೫. ಮವ(ಂ)ನು ದಾ(ಧಾ)ರೆಯನರೆದು ಕೊಟ್ಟು ಯಿದ್ದೇವೆ

೧೬. ಯೀ ಗ್ರಾಮಕೆ(ಕ್ಕೆ) ಆರೊಬ(ಬ್ಬ)ರೂ ಅಳಿದವ

೧೭. ರೂ ತಂಮ . . . .

೧೮. . . . . ಸಿ

**ದೊರೆತ ಸ್ಥಳ : ಬನಶಂಕರಿಯಲ್ಲಿದ್ದ ಶಾಸನ (ಈಗ ಬಿಜಾಪುರದ ಪುರಾತತ್ವ ವಸ್ತು ಸಂಗ್ರಹಾಲಯದಲ್ಲಿದೆ)**

**ಕಾಲ : ಕ್ರಿ.ಶ. ೧೫೩೨, ಉಲ್ಲೇಖ : ಜಂಯು ಕರ್ನಾಟಕ ೧.೩.೧೯೨೩; ಬಾ. ಸಾಂ.ಅ.೪೬**

೧ ಶುಭಮಸ್ತು ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೇ ತ್ರೈಲೋಕ್ಯ

೨ ನಗರಾರಂಭ ಮೂಲ . ೦ಭಾಯ ಶಂಭವೇ । ಅಂತರಾಯ ತಿಮಿರ ಗಿಶಾಂತಯೇ

೩ ಶಾಂತ ಪಾವನಮಚಿಂತ್ಯಸ್ಸೆ ಭವಂತಂ ನರಂ ವಸುಧಿ ಕುಂಜರಂ . . ತುಂದಿಲ ಮಹ

೪ ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲಿವಾಹನ ಶಕ ವರುಷ ೧೪೫೫ನೆಯ ನಂದನ

೫ ಸಂವತ್ಸರದ ಜೇಷ್ಟ ಶು ೫ ಗುರುವಾಗದಲೂ ಸಕಲ ಸಾಮಂತ ಚಕ್ರಮಕುಟ

೬ ಮಣಿ ಮರೀಚಿ ಮಂಜರಿ ಪಿರಾಜಿತ ಚರಣಕಮಲ ರಾಜೇಂದ್ರ ಶೇಖರ ಶ್ರೀಮನ

೭ ಮಹಾರಾಜಾಧಿರಾಜ ರಾಜವರ ಪರಮೇಶ್ವರ ಶ್ರೀ ವೀರಪ್ರತಾಪ

೮ ಶ್ರೀ ಅಚ್ಯುತರಾಯ ಮಹಾರಾಯರೂ ಸುಖಸಂಕಥಾ ವಿನೋದದಿಂ ಪೃಥ್ವಿರಾಜ್ಯಂ

೯ ಗೆಯಿಉತಯಿರಲು ಮಹಾರಾಜಕರಿಂದಲೂ ಬಾದಾವಿಯ . . .

೧೦ ಶ್ರೀ ಬನದ ಮಹಾಂಮಾಯಿ ಮೊದಲಾದ ದೇವಸ್ಥಾನಗಳೂ ಖಿಲವಾಗಿ ಇರಲೂ . . .

೧೧ ಅಚ್ಯುತರಾಯರ ಸೇನಾಧಿಪ ಚಿನ್ನಪ್ಪ ನಾಯಕರೂ ಬಾದಾವಿಯ ದುರ್ಗ . . .

೧೨ ಶ್ರೀ ಬನದ ಮಹಾಮಾಯಿ ಮೊದಲಾದ ದೇವಸ್ಥಾನಗಳೂ ಜೀರ್ಣೋದ್ಧಾರವಾಗಿ

೧೩ . . . ಪ್ರತಿಷ್ಠೆ ಮಾಡ ಹೇಳಿ ತಮ್ಮ ಕುಮಾರ ಚಿಕ್ಕಚಿನ್ನಪ್ಪ ನಾಯಕರನು ಕಳುಹಾಗಿ

೧೪ ಆ ಚಿಕ್ಕಚಿನ್ನಪ್ಪ ನಾಯಕರು ತಮ್ಮ ಸ್ವಾಮಿಯ ನಿರೂಪದಿಂದಲೂ ಬಾದಾವಿಯ


೧೫ ಕೋಟೆಯನ್ನು ಯಿಕ್ಕಿಸಿ ಅಚ್ಯುತ ಮಹಾರಾಯರಿಗೂ ತಮ್ಮ ಸ್ವಾಮಿ ಚಿನ್ನಪ್ಪ

೧೬ ನಾಯಕರಿಗೂ ಆಯುರಾರೋಗ್ಯ ಆಯುಶ್ವಯಾಭಿ ಉದ್ಧ್ಯಯಾಗಬೇಕೂ

೧೭ ಯೆಂ . (ಎಂದು) . . . ಮಹಾಂಮಾಯಿ ಚರಣದರ್ಶ ಭುವನಾಧೀಶ್ವರಿ

೧೮ ಉದ್ಭೂತ ರಾಜಕುಲಿ ಸಂ . . ಶ್ರೀ ಬನಪ್ಪುರವತೆ ಶ್ರೀ ಬನದ . . ಜೀರ್ಣೋದ್ಧಾರವಾಗಿ .

# ೧೭೮೧ರ ಭೂದಾನ ಪತ್ರ



# ೧೮೦೪ರಲ್ಲಿ ಮಾಧವರಾವ ಅನಂತರಾವ ಬರೆಸಿದ ಇನಾಮ ಪತ್ರ

[illegible]

# ೧೮೬೦ರ ಇನಾಮ ಪತ್ರ

ಸೂಚನೆ : ಈ [illegible] ಯಾವ ಆಧಾರದ ಕೆಳಗೆ [illegible]
[illegible]

ನಕಲು
ಬದಾಮಿ [illegible]

[illegible] ಜವಾಬಿನ ಬೇಸ್ತಿ

| | ವಯಸ್ಸು | ಜಾತಿ | ಉದ್ಯೋಗ |
|---|---|---|---|
| (1) [illegible]ಭಟ್ಟ ಬಿನ್ ಬಾಳಂಭಟ್ಟ | 18 | [illegible] | ಬನಶಂಕರಿದೇವಿ ಪೂಜಾರಿ ಸಾ: ಶ್ರೀ[illegible] ತಾ: [illegible] |
| (2) [illegible]ಭಟ್ಟ ಬಿನ್ ಬನಭಟ್ಟ ಪೂಜಾರಿ | 52 | | ಸದರ |
| (3) ಶಂಕರಭಟ್ಟ ಬಿನ್ ಬಾಳಂಭಟ್ಟ ಪೂಜಾರಿ | 60 | | ಸದರ |
| (4) ಬಾಪೂಭಟ್ಟ ಬಿನ್ ಗಿರಿಭಟ್ಟ ಪೂಜಾರಿ | 54 | | ಸದರ |
| (5) ಶಂಕರಭಟ್ಟ ಬಿನ್ ದಾದಭಟ್ಟ ಪೂಜಾರಿ | 44 | | ಸದರ |

ತಾಲೂಕ [illegible] ಇವರು ಬರೆದುಕೊಟ್ಟ ವಿನಂತಿ ಜವಾಬ ಏನೆಂದರೆ...

ನಾವು 5 ಜನರು ಮತ್ತು ನೀಲಕಂಠಭಟ್ಟ [illegible] ಈ [illegible] ಶ್ರೀ ಬನಶಂಕರಿ ದೇವಿಯ ಪೂಜಾರಿ[illegible], [illegible] ಮಾಡುತ್ತೇವೆ. ಸದರ [illegible]

[illegible] 163-00 [illegible] ಪ್ರತಿ ವರ್ಷ ಹೊಂದುತ್ತೇವೆ. ಈ [illegible] ಅವರು [illegible] ಅರ್ಜಿನ ವ್ಯವಸ್ಥೆ [illegible] ನಡೆಯುತ್ತದೆ. [illegible] 1267 ಫಸಲೀ ಪಾಳೀದಾರ ಆವರ ಕಡೆಯಿಂದ ಇನಾಂ ಕಮಿಟೀ ನಮೂನೆಯ ಪ್ರಕಾರ ಕೈಫಿಯತ್ ತೆಗೆದುಕೊಂಡು ಕಳುಹಿಸಿಕೊಡುವ ಪದ್ಧತಿ ಇದೆ. ಆದಕ್ಕೆ ಸದರೀ ಸಾಲಿನಲ್ಲಿ ನೀಲಕಂಠಭಟ್ಟ ಬಿನ್ ಶಾಮಭಟ್ಟ ಇವರ ಪಾಳೀ ಇತ್ತು. ಕಾರಣ ಅವರ ಕಡೆಯಿಂದ ನಮೂನೆಯ ಅನ್ವಯ ಕೈಫಿಯತ್ ಮತ್ತು ವಂಶಾವಳಿ ತೆಗೆದುಕೊಳ್ಳಬೇಕು, ಅವರು ಬರೆದುಕೊಡುತ್ತಾರೆ. [illegible] ಇದೆ. [illegible] ಬರೆದುಕೊಟ್ಟ ಜವಾಬ ಸಹಿ [illegible] 1860. [illegible]

ಸಹಿ : [illegible]
: [illegible]
: [illegible]ಭಟ್ಟ ಬಿನ್ ಬಾಳಂಭಟ್ಟ [illegible]
: [illegible]ಭಟ್ಟ ಬಿನ್ ಗಿರಿಭಟ್ಟ [illegible]
: [illegible]ಭಟ್ಟ ಬಿನ್ [illegible]ಭಟ್ಟ [illegible]

ಸಾಕ್ಷಿ
[illegible] ವ. ದೇಶಪಾಂಡೆ.

[illegible]
ತಾ : ಬದಾಮಿ.
[illegible]

ಮೂಲ ಜವಾಬಿನ ಭಾಷಾಂತರ ಮಾಡಿ ನಕಲು ಇರುತ್ತದೆ.

# ಬಿಷ್ಟೋಲಿಂಗೊ ಕಿಲ್ಲೇ ಬರೆಸಿರುವ ದಾನ ಪತ್ರ

[illegible]

[illegible]

[illegible]

[illegible] 72 [illegible]

[illegible]

[illegible]

# ಮೈಸೂರು ಸಂಸ್ಥಾನದ ಇನಾಮ ಪತ್ರ

T. D. No. 14

OFFICE OF THE
DEPUTY CHARITY COMMISSIONER.

No. 1.

TITLE DEED GRANTED TO

*The Pagoda of Bane Santhe*
*at Badami*
*Halladgi [illegible]*
*[illegible]*
*Managers for the time being*
*Harihara Talook*

On behalf of the Chief Commissioner for the Government of the Territories of His Highness the Mahárája of Mysore, I do hereby certify that the *Pagoda of Bane Santhe is entitled to two maunds of 5th class Sandal wood per annum* which will be continued so long as it is kept in good order, and service therein is efficiently rendered.

INAM COMMISSIONER'S OFFICE,
Dated *7th December 1870*

*[illegible]*
*Offg.* Inam Commissioner

Case No. *14*

## ಪೂಜಾರ ಸಂಘದ ಬಿನ್ನವತ್ತಳೆ

॥ ಶ್ರೀಬನಶಂಕರೀ ಪ್ರಸನ್ನ ॥



ಕರ್ನಾಟಕ ರತ್ನಸಿಂಹಾಸನಾಧೀಶ್ವರ

ಶ್ರೀಮನ್ಮಹಿಸೂರ ಮಹಾರಾಜರವರಾದ

# ಶ್ರೀಮಜ್ಜಯಚಾಮರಾಜೇಂದ್ರ ಒಡೆಯರ್ ಬಹಾದ್ದೂರ

ಜಿ. ಸಿ. ಎಸ್. ಆಯ್., ಜಿ. ಸಿ. ಬಿ.

**ಮಹಾಪ್ರಭುಗಳವರ ದಿವ್ಯ ಸನ್ನಿಧಿಯಲ್ಲಿ ಅರ್ಪಿಸಿದ**

# ಬಿನ್ನವತ್ತಳೆ

ಮಹಾರಾಜರೇ,

ಶ್ರೀಬನಶಂಕರಿ ದೇವಸ್ಥಾನದ ಪೂಜಾರ ಸಂಘದ ಅಧ್ಯಕ್ಷ, ಕಾರ್ಯಾಧ್ಯಕ್ಷ, ಕಾರ್ಯದರ್ಶಿ ಹಾಗೂ ಪೂಜಾರಿಗಳಾದ ನಾವು ಕರ್ನಾಟಕ ರತ್ನಸಿಂಹಾಸನಾಧೀಶ್ವರರೂ ಕನ್ನಡ ಜನತೆಯ ಪ್ರೇಮಪಾತ್ರರೂ ಆದ ತಮ್ಮನ್ನು ಅಗಸ್ತ್ಯ ಋಷಿಗಳಿಂದ ಸ್ಥಾಪಿತವಾಗಿ ಚಾಲುಕ್ಯರಾಜರ ಕುಲದೈವತವೂ ಮೈಸೂರ ಅರಸರ ಇಷ್ಟ ದೈವತವೂ ಆದ ಜಗನ್ಮಾತೆ ಶ್ರೀಬನಶಂಕರಿಯ ಈ ಪವಿತ್ರ ದೇವಾಲಯಕ್ಕೆ ಬರಮಾಡಿಕೊಂಡು ತಮಗೆ ಇಂದು ಭಕ್ತಿಪೂರ್ವಕ ಸ್ವಾಗತವನ್ನೀಯುವ ಸದವಕಾಶ ದೊರೆತ ಬಗ್ಗೆ ಅತ್ಯಂತ ಹರ್ಷಪುಲಕಿತರಾಗಿದ್ದೇವೆ. ಮೈಸೂರಿನ ರಾಜ್ಯದ ಆಡಳಿತ ನಿರ್ವಾಹದಲ್ಲಿ ಉತ್ತರ ಕರ್ನಾಟಕದ ಜನತೆಗೆ ತಮ್ಮ ದಿವ್ಯ ದರ್ಶನವನ್ನೀಯಲು ಅವಕಾಶವು ತಮಗೆ ದೊರೆತುದು ಹಾಗೂ ತಾವು ಅವಿರತವಾದ ಕಾರ್ಯಕ್ರಮದಲ್ಲಿಯೂ ಇಷ್ಟದೈವತ ದರ್ಶನಾಪೇಕ್ಷೆಯಿಂದ ಇಲ್ಲಿಯವರೆಗೆ ಚಿತ್ತೈಸಿದ್ದು ನಮ್ಮೆಲ್ಲರ ಮಹದ್ಭಾಗ್ಯವೆಂದೇ ನಾವು ಭಾವಿಸಿರುವೆವು.

ರಾಜಶ್ರೇಷ್ಠರೇ,

ಯದುಕುಲ ಸಂಭೂತರಾದ ತಾವು ಯದುವಂಶಕ್ಕೆ ಕೀರ್ತಿಚಂದ್ರರಂತಿರುವಿರಿ. ರಾಜತ್ವವು ಅನಾಸಕ್ತಿ ಯೋಗವೆಂಬ ಉದಾತ್ತ ತತ್ವವನ್ನು ನಿರಂತರವಾಗಿ ತಮ್ಮ ಅಂತಃಕರಣದಲ್ಲಿಟ್ಟುಕೊಂಡು ಜನಾನುರಾಗ ಪ್ರಭವಾಹಿ ಸಂಪದಃ ಎಂಬ ಮಾತನ್ನು ನಿರಲಸರಾಗಿ ಚಿಂತಿಸುತ್ತ **ರಾಜಾ ಪ್ರಕೃತಿರಂಜನಾತ್** ಎಂದು ಹಗಲಿರುಳು ಧ್ಯಾನಿಸುತ್ತ ಪ್ರಜಾಪಾಲನದಕ್ಷರಾಗಿ ಬಾಳಿದ ತಮ್ಮ ಹಿರಿಯರ ಸಂಪ್ರದಾಯದಲ್ಲಿ ಬೆಳೆದು ಬಂದವರಾದ ತಾವೂ ಪ್ರಜೆಗಳ ಆಶೋತ್ತರಗಳನ್ನು ಗಮನಿಸಿ ಸಂಪೂರ್ಣ ಹೊಣೆಗಾರ ಸರಕಾರವನ್ನು ಪ್ರಜೆಗಳಿಗಿತ್ತು ತೋರಿಸಿದ ನಿಃಸ್ವಾರ್ಥ ಮನೋವೃತ್ತಿಯಿಂದ ಮೈಸೂರ ಸಂಸ್ಥಾನದ ಪ್ರಜೆಗಳಿಗಷ್ಟೇ ಅಲ್ಲದೆ ಸಮಸ್ತ ಕನ್ನಡಿಗರ ಅಂತಃಕರಣದಲ್ಲಿ ಭದ್ರವಾದ ಸ್ಥಾನವನ್ನು ಪಡೆದಿದ್ದೀರಿ.

ಪ್ರಭುಗಳೇ,

ಪರಮೇಶ್ವರನೆಂಬ ಬಿರುದು ಧರಿಸಿದ ಅಭಿನವ [illegible] ಚಾಲುಕ್ಯರ ಪುಲಿಕೇಶಿ ಮೊದಲಾದ ನರೇಂದ್ರರ ಕುಲದೈವತವಾದ ಶ್ರೀಬನಶಂಕರಿಯು ಕರ್ನಾಟಕ ರತ್ನಸಿಂಹಾಸನಾಧೀಶ್ವರರಾದ ತಮ್ಮ ಅರಮನೆತನದ ಇಷ್ಟದೇವತೆಯಾಗಿರುವಳೆಂಬುದನ್ನು ಮಹಾಪ್ರಭುಗಳ ದಿವ್ಯ ಸನ್ನಿಧಿಯಲ್ಲಿ ಅರಿಕೆ ಮಾಡಿಕೊಳ್ಳಲು ನಮಗೆ ಆನಂದವೆನಿಸುತ್ತದೆ. ೧೮೭೦ರ ಡಿಸೆಂಬರ ೨೦ನೆ [illegible] ಇನಾಮು ಕಮೀಶನರರು ಹಾಕಿಕೊಟ್ಟ ನಿರ್ಣಯದಂತೆ ತಮ್ಮ ಘನವಾದ ಸರಕಾರದಿಂದ ಈ ದೇವಸ್ಥಾನಕ್ಕೆ ವರ್ಷಕ್ಕೆ ೫೬ ಪೌಂಡು ಶ್ರೀಗಂಧ, ಹಾಗೂ ನಂದಾದೀಪದ ಬಗ್ಗೆ ಪ್ರತಿ ತಿಂಗಳು ೯ ರೂ. ೯ ಆ. ೨ ಪೈ. ಮಂತೆ ಈಗ ದಾವಣಗೆರೆ ತಾಲೂಕ ಟ್ರೆಝರಿಯಿಂದ ಬರಾಮದ ಮಾಮಲೇದಾರರ ಮುಖಾಂತರ [illegible] ತಾಪೂರ್ವಕವಾಗಿ [illegible] ಮುಂದೆ ನಿವೇದಿಸಲು ಸಂತೋಷವೆನಿಸುತ್ತದೆ.

ರಾಜಪ್ರಮುಖರೇ,

ಕರ್ನಾಟಕ ರತ್ನಸಿಂಹಾಸನಾಧೀಶ್ವರರಾದ ಮಹಾಪ್ರಭುಗಳ ಸನ್ನಿಧಿಯಲ್ಲಿ ಕರ್ನಾಟಕದಲ್ಲಿ ಇತಿಹಾಸ ಪ್ರಸಿದ್ಧವಾದ ಶ್ರೀಬನಶಂಕರಿಯ ದೇವಸ್ಥಾನದ ಬಗ್ಗೆ [illegible] ಐತಿಹಾಸಿಕ ವಿವರಗಳನ್ನು ನಿವೇದಿಸಲು ದೇವಿಯ ಅರ್ಚಕರಾದ ನಾವು ಸಾಹಸಪಡುವದು ಹಾಸ್ಯಾಸ್ಪದವೆನಿಸಬಹುದೆಂಬ ಭೀತಿಯಿಂದ ಆ ಸಾಹಸಕ್ಕೆ ಕೈಹಾಕದೆ ಒಂದು ಮಾತನ್ನು ಮಾತ್ರ ಪ್ರಭುಗಳ ದಿವ್ಯ ಚಿತ್ತಕ್ಕೆ ತರಲು ಅನುಮತಿಯನ್ನು ಅನುಗ್ರಹಿಸಬೇಕಾಗಿ ಕೋರುತ್ತೇವೆ.

ನರೇಂದ್ರರೇ,

ಶ್ರೀ ಬನಶಂಕರಿಯ ದೇವಸ್ಥಾನವು ಪ್ರಾಚೀನವಾದುದಾಗಿರುವದರಿಂದ ಭಕ್ತರ ವೃಂದವೂ ವಿಶಾಲವಾಗಿದೆ. ದೇವಿಯ ನಿತ್ಯ ನೈವೇದ್ಯಕ್ಕಾಗಿ ೮೩೪ ರೂ. ಗಳ ನಕ್ತ ನೇಮಣೂಕಿಯನ್ನು ೧೮೩೪ ರಲ್ಲಿ ಆಗಿನ ಭಾರತ ಮಂತ್ರಿಗಳು ಸನದು ಹಾಕಿಕೊಟ್ಟಿರುವರು. ದೇವಸ್ಥಾನವು ಪೂಜಾರಿಗಳ ಮಾಲ್ಕೀಯದೆಂಬ ಬಗ್ಗೆ ಸನದಿನಲ್ಲಿ ಉಲ್ಲೇಖವಿದೆ. ಶ್ರೀ ದೇವಿಯ ಸೇವಕರಾದ ಪೂಜಾರಿ ಮನೆತನವೂ ದೇವಸ್ಥಾನದಷ್ಟೇ ಪ್ರಾಚೀನ ಕಾಲದಿಂದಲೂ ನಡೆದು ಬಂದಿರುವ ವಿಷಯವನ್ನು ಮಹಾಪ್ರಭುಗಳ ಸನ್ನಿಧಿಗೆ ನಿವೇದಿಸಿಕೊಳ್ಳಲು ಅಭಿಮಾನವೂ ಆನಂದವೂ ಎನಿಸುವದು. ದೇವಸ್ಥಾನದ ಸೇವೆಯಲ್ಲಿರುವ ಪೂಜಾರಿಗಳು ಆ ಬಗ್ಗೆ ಕೊಟ್ಟ ಇನಾಮು ಜಮೀನುಗಳ ಆದಾಯದಿಂದಲೇ ಉಪಜೀವಿಸುವವರಾದುದರಿಂದ ಮಹಾಪ್ರಭುಗಳ ಯೋಗ್ಯತೆಗೆ ತಕ್ಕಂತೆ ರಾಜಮರ್ಯಾದೆಯ ಸತ್ಕಾರವನ್ನು ಮಾಡುವ ಯೋಗ್ಯತೆ ಇಲ್ಲದಿರುವದರಿಂದ ಉದಾರಾಂತಃಕರಣಿಗಳಾದ ಶ್ರೀಮನ್ಮಹಾರಾಜರವರು ಈ ಸೇವಕರ ಸತ್ಕಾರದಲ್ಲಿ ಕಂಡುಬರುವ ನ್ಯೂನತೆಗಳನ್ನು ದುರ್ಲಕ್ಷಿಸಿ ನಮ್ಮ ಅಂತಃಕರಣದಲ್ಲಿ ಮಹಾಪ್ರಭುಗಳ ಬಗ್ಗೆ ಇರುವ ಗೌರವಾದರಗಳನ್ನು ಹಂಸಕ್ಷೀರ ನ್ಯಾಯದಂತೆ ಸ್ವೀಕರಿಸುವರೆಂದು ನಂಬಿರುವೆವು.

ಯದುಕುಲತಿಲಕರೇ,

ಯದುವಂಶದ ರಾಜರಿಗೊಪ್ಪುವಂತೆ ಸತ್ಸಂಪ್ರದಾಯಗಳನ್ನು ಕಾಪಾಡಿ ನಡೆಸಿಕೊಂಡು ಬರುತ್ತಿರುವದನ್ನು ನೋಡಿ ಹರ್ಷಪುಲಕಿತರಾಗಿದ್ದೇವೆ. ಮಹಾಪ್ರಭುಗಳು ಕರ್ನಾಟಕದ ರತ್ನಸಿಂಹಾಸನಾಧೀಶ್ವರರೆಂಬ ಬಿರುದು ಸಾರ್ಥಕವಾಗುವಂತೆ ಮಹಾಕರ್ನಾಟಕದ ಮಹಾರಾಜರಾಗುವ ಕಾಲವನ್ನು ಬೇಗನೇ ಶ್ರೀಬನಶಂಕರಿಯು ತರಲಿ ಎಂದೂ **ಚಿರಮಭಿವರ್ಧತಾಂ ಯದುಸಂತಾನಶ್ರೀಃ** ಎಂದೂ ಪರಮಾತ್ಮನಲ್ಲಿ ಪ್ರಾರ್ಥಿಸುತ್ತೇವಲ್ಲದೆ ದಯಾಘನಳಾದ ಶ್ರೀಬನಶಂಕರಿಯು ತಮಗೆ ದೀರ್ಘವಾದ ಆಯುರಾರೋಗ್ಯ ಸಂತಾನ ಸಂಪದಗಳನ್ನಿತ್ತು ಕಾಪಾಡಲೆಂದು ಅನನ್ಯಭಾವದಿಂದ ಬೇಡಿಕೊಳ್ಳುತ್ತೇವೆ.

ತಮ್ಮ ಕೃಪಾಭಿಲಾಷಿಗಳಾದ,

ಬಾಳಂಭಟ್ಟ ಶಂಕರಭಟ್ಟ ಪೂಜಾರ, ಸಂಘದ ಅಧ್ಯಕ್ಷ
ಮಲ್ಹಾರಭಟ್ಟ ಚಿಕ್ಕಲಭಟ್ಟ ಪೂಜಾರ, ಕಾರ್ಯಾಧ್ಯಕ್ಷ
ದತ್ತಂಭಟ್ಟ ಮಹಾದೇವಭಟ್ಟ ಪೂಜಾರ, ಕಾರ್ಯದರ್ಶಿ
ವಿ. ಎಂ. ಪೂಜಾರ, ಮಾಲಕರಿ ಪೂಜಾರ ಮತ್ತು ಇತರ ಪೂಜಾರರು.


ಶ್ರೀಬನಶಂಕರೀ ದೇವಸ್ಥಾನ
ಚೊಳಚಗುಡ್ಡ
೧[illegible] – ೯ – ೧೯[illegible]

ನವಯುಗ ಕರ್ನಾಟಕ ಮುದ್ರಣಾಲಯ, ಹುಬ್ಬಳ್ಳಿ

# ಬನಶಂಕರಿ ದೇವಿಯ ಅರ್ಚಕರ ವಂಶಾವಳಿ

Annx- A

INAM * COMMISSION * A




According to this Pedigree is written and furnished on 6th April, 1960

Sd/-

...LAKANTABHATT, S/o.Shyam Bhatt Pujari

...Narasimha Hiremath

## ಸಂದರ್ಶನ ಸೂಚಿ

| ಕ್ರಸಂ | ಹೆಸರು | ವಯಸ್ಸು | ಜಾತಿ | ಊರು | ವೃತ್ತಿ |
|---|---|---|---|---|---|
| ೦೧. | ಡಾ. ಶೀಲಾಕಾಂತ ಪತ್ತಾರ | ೬೨ | ವಿಶ್ವಕರ್ಮ | ಬಾದಾಮಿ | ನಿವೃತ್ತ ಪ್ರಾಧ್ಯಾಪಕರು |
| ೦೨. | ಭೀಮನಗೌಡ | ೬೭ | ಗಾಣಿಗರು | ಮಾಡಲಗೇರಿ | ಒಕ್ಕಲುತನ |
| ೦೩. | ಶಂಕ್ರಪ್ಪ ಹನುಮಪ್ಪ | ೫೦ | ಗಾಣಿಗರು | ಮಾಡಲಗೇರಿ | ಒಕ್ಕಲುತನ |
| ೦೪. | ಎಸ್.ಎಸ್. ರಾಯನಗೌಡ | ೫೨ | ಗಾಣಿಗರು | ಮಾಡಲಗೇರಿ | ಒಕ್ಕಲುತನ |
| ೦೫. | ಬಸಲಿಂಗಪ್ಪ | ೬೦ | ಗಾಣಿಗರು | ಮಾಡಲಗೇರಿ | ಒಕ್ಕಲುತನ |
| ೦೬. | ಹನುಮಂತಪ್ಪ ಪಿ.ಬಿ. | ೫೦ | ಗಾಣಿಗರು | ಮಾಡಲಗೇರಿ | ಒಕ್ಕಲುತನ |
| ೦೭. | ಶಂಕರಗೌಡ ಭೀಮನಗೌಡ | ೮೦ | ಗಾಣಿಗರು | ಮಾಡಲಗೇರಿ | ಒಕ್ಕಲುತನ |
| ೦೮. | ತಾರನಗೌಡ ಲಿಂಗನಗೌಡ ಭೀಮನಗೌಡ | ೫೬ | ಗಾಣಿಗರು | ಮಾಡಲಗೇರಿ | ಒಕ್ಕಲುತನ |
| ೦೯. | ಜಿವೂಬಾಯಿ | ೫೨ | ವಿಶ್ವಕರ್ಮ | ಚೊಳಚಗುಡ್ಡ | – |
| ೧೦. | ಮೋಹನ | ೪೫ | ವಿಶ್ವಕರ್ಮ | ಚೊಳಚಗುಡ್ಡ | ಪತ್ತಾರಿಕೆ |

| | | | | | |
|---|---|---|---|---|---|
| ೧೧. | ಮುಕ್ತುಮ್ ಪಟೇಲ್ | ೬೬ | ಮುಸ್ಲಿಂ | ಚೊಳಚಗುಡ್ಡ | ಒಕ್ಕಲುತನ |
| ೧೨. | ನಬೀಬ್ ಪಟೇಲ್ | ೭೫ | ಮುಸ್ಲಿಂ | ಚೊಳಚಗುಡ್ಡ | ಒಕ್ಕಲುತನ |
| ೧೩. | ಡಾ. ಆನಂದ ಪೂಜಾರ | ೪೬ | ಬ್ರಾಹ್ಮಣರು | ಬಾದಾಮಿ | ಮುಖ್ಯ ಶಿಕ್ಷಕರು |
| ೧೪. | ಎಸ್.ಡಿ. ಪೂಜಾರ | ೫೨ | ಬ್ರಾಹ್ಮಣರು | ಬಾದಾಮಿ | ಸಹ ಪ್ರಾಧ್ಯಾಪಕರು |
| ೧೫. | ಗಿರೀಜಾ | ೫೫ | ಲಿಂಗಾಯತ | ಚೊಳಚಗುಡ್ಡ | – |
| ೧೬. | ಅನ್ನಪೂರ್ಣವ್ವ ಪಡಿಯಪ್ಪನವರ | ೬೬ | ಪಂಚಮಸಾಲಿ | ಬನಶಂಕರಿ ಕ್ಷೇತ್ರ | – |
| ೧೭. | ಬಸಮ್ಮ | ೭೬. | ವಿಶ್ವಕರ್ಮ | ಚೊಳಚಗುಡ್ಡ | – |
| ೧೮. | ಈರಮ್ಮ ಹಿರೇಮಠ | ೬೬ | ಹಿಂದೂ ಜಂಗಮ | ಚೊಳಚಗುಡ್ಡ | – |
| ೧೯. | ಸೀತಾಬಾಯಿ | ೮೯ | ಬ್ರಾಹ್ಮಣರು | ಚೊಳಚಗುಡ್ಡ | – |
| ೨೦. | ಪ್ರಭುಲಿಂಗಯ್ಯ ಶಾಸ್ತ್ರೀ | ೫೬ | ಬ್ರಾಹ್ಮಣರು | ಚೊಳಚಗುಡ್ಡ | ಅರ್ಚಕರು |
| ೨೧. | ದ.ರಾ. ಪುರೋಹಿತ ಕಲಾದಗಿ | ೪೫ | ಬ್ರಾಹ್ಮಣರು | ಕಲಾದಗಿ | ವರದಿಗಾರರು |
| ೨೨. | ಚಿದಂಬರ ಭಟ್ಟರು | ೮೦ | ಬ್ರಾಹ್ಮಣರು | ಚೊಳಚಗುಡ್ಡ | ಅರ್ಚಕರು |

| | | | | | |
|---|---|---|---|---|---|
| ೨೩. | ಶಂಕರಭಟ್ಟರು | ೮೫ | ಬ್ರಾಹ್ಮಣರು | ಚೊಳಚಗುಡ್ಡ | ಅರ್ಚಕರು |
| ೨೪. | ಅಪ್ಪಣ್ಣ ಮಲ್ಹಾರಭಟ್ಟರು | ೫೫ | ಬ್ರಾಹ್ಮಣರು | ಚೊಳಚಗುಡ್ಡ | ಅರ್ಚಕರು |
| ೨೫. | ರವೀಂದ್ರ ಸರಗಣಾಚಾರಿ | ೪೫ | ಲಿಂಗಾಯತ | ಚೊಳಚಗುಡ್ಡ | ಫೈನಾನ್ಸ್ ಏಜಂಟ |
| ೨೬. | ಬಿ.ಎಸ್. ಜೋಶಿ | ೬೦ | ಬ್ರಾಹ್ಮಣರು | ಚೊಳಚಗುಡ್ಡ | ಅರ್ಚಕರು |
| ೨೭. | ಶ್ರೀಮತಿ ರೇಣುಕಾ ಜೋಶಿ | ೪೫ | ಬ್ರಾಹ್ಮಣರು | ಚೊಳಚಗುಡ್ಡ | ಅರ್ಚಕರು |
| ೨೮. | ಸಿ.ಆರ್. ಪೂಜಾರ | ೮೦ | ಬ್ರಾಹ್ಮಣರು | ಬಾದಾಮಿ | ಅರ್ಚಕರು |
| ೨೯. | ಸುಧಾಬಾಯಿ | ೭೦ | ಬ್ರಾಹ್ಮಣರು | ಬಾದಾಮಿ | – |
| ೩೦. | ಸುಧೀಂದ್ರ ಕುಲಕರ್ಣಿ | ೫೦ | ಬ್ರಾಹ್ಮಣರು | ಬಾಗಲಕೋಟ | ಅರ್ಚಕರು |
| ೩೧. | ಪಾರ್ವತಮ್ಮ | ೮೦ | ಇಳಗೇರ | ಚೊಳಚಗುಡ್ಡ | ಮಲೆಯಮ್ಮ ಗುಡಿ ಅರ್ಚಕರು |
| ೩೨. | ರಘೋತ್ತಮ ಆಚಾರ್ಯ | ೬೦ | ಬ್ರಾಹ್ಮಣರು | ಬಾಗಲಕೋಟ | ಅರ್ಚಕರು |
| ೩೩. | ಬಸವರಾಜ ಮಲ್ಲಪ್ಪ | ೪೫ | ಅಂಬಿಗ | ಚೊಳಚಗುಡ್ಡ | ಬನಶಂಕರಿ ಗುಡಿಯ ಸ್ವಚ್ಛತೆ |
| ೩೪. | ಸಿದ್ದಪ್ಪ ಅಂಬಿಗೇರ | ೪೫ | ಅಂಬಿಗ | ಚೊಳಚಗುಡ್ಡ | ಬನಶಂಕರಿ ಗುಡಿಯ ಸ್ವಚ್ಛತೆ |

| | | | | | |
|---|---|---|---|---|---|
| ೩೫. | ಬಸಪ್ಪ | ೬೬ | ಅಂಬಿಗ | ಚೊಳಚಗುಡ್ಡ | ಬನಶಂಕರಿ ಗುಡಿಯ ಸ್ವಚ್ಛತೆ |
| ೩೬. | ಅಶೋಕ | ೪೬ | ಅಂಬಿಗ | ಚೊಳಚಗುಡ್ಡ | ಬನಶಂಕರಿ ಗುಡಿಯ ಸ್ವಚ್ಛತೆ |
| ೩೭. | ಪರಶುರಾಮ | ೪೦ | ಅಂಬಿಗ | ಚೊಳಚಗುಡ್ಡ | ಬನಶಂಕರಿ ಗುಡಿಯ ಸ್ವಚ್ಛತೆ |
| ೩೯. | ಹನುಮಂತಪ್ಪ | ೫೫ | ಅಂಬಿಗ | ಚೊಳಚಗುಡ್ಡ | ಬನಶಂಕರಿ ಗುಡಿಯ ಸ್ವಚ್ಛತೆ |
| ೪೦. | ಮಾರುತಿ ಸಾವಂತ | ೪೦ | ಮರಾಠಾ | ಚೊಳಚಗುಡ್ಡ | ದರ್ಜಿ (ಟೇಲರ್) |
| ೪೧. | ಗೋವಿಂದ ಸಾವಂತ | ೪೫ | ಮರಾಠಾ | ಚೊಳಚಗುಡ್ಡ | ದರ್ಜಿ (ಟೇಲರ್) |
| ೪೨. | ಯಮನೂರಪ್ಪ ಗೋಧಳಿ | ೫೫ | ಮರಾಠಾ | ಚೊಳಚಗುಡ್ಡ | ದರ್ಜಿ (ಟೇಲರ್) |
| ೪೩. | ಕುಬೇರ ಗೋಧಳಿ | ೪೦ | ಮರಾಠಾ | ಚೊಳಚಗುಡ್ಡ | ದರ್ಜಿ (ಟೇಲರ್) |
| ೪೪. | ಆರ್.ಎಸ್. ಪಟೇಲ್ | ೪೦ | ಮುಸ್ಲಿಂ | ಚೊಳಚಗುಡ್ಡ | ಗ್ರಾಮ ಪಂಚಾಯತ ಸದಸ್ಯರು |
| ೪೫. | ಹನುಮಂತಪ್ಪ ಮಾದರ | ೭೪ | ಎಸ್.ಸಿ | ಚೊಳಚಗುಡ್ಡ | ಗ್ರಾಮ ಪಂಚಾಯತ ಸದಸ್ಯರು |
| ೪೬. | ಶಂಕ್ರಪ್ಪ ಬೀಳಗಿ | ೬೧ | ಎಸ್.ಸಿ | ಚೊಳಚಗುಡ್ಡ | ಒಕ್ಕಲುತನ |
| ೪೭. | ರಾಜಪ್ಪ ಬಸಪ್ಪ ಹಾದಿಮನಿ | ೬೨ | ಲಿಂಗಾಯತ | ಚೊಳಚಗುಡ್ಡ | ಒಕ್ಕಲುತನ |

| | | | | | |
|---|---|---|---|---|---|
| ೪೮. | ಬಸವ್ವ ಶಾಂತಣ್ಣವರ | ೬೯ | ಲಿಂಗಾಯತ | ಚೊಳಚಗುಡ್ಡ | – |
| ೪೯. | ಕಮಲವ್ವ ಪಾಟೀಲ | ೭೦ | ಲಿಂಗಾಯತ | ಚೊಳಚಗುಡ್ಡ | – |
| ೫೦. | ಬಸವ್ವ ಗಣಾಚಾರಿ | ೭೦ | ಲಿಂಗಾಯತ | ಬನಶಂಕರಿ ಕ್ಷೇತ್ರ | – |
| ೫೧. | ಕಸ್ತೂರಿಬಾಯಿ ದೊಡ್ಡಮನಿ | ೪೦ | ಎಸ್.ಸಿ | ಬನಶಂಕರಿ ಕ್ಷೇತ್ರ | ಒಕ್ಕಲುತನ |
| ೫೨. | ಸಂಗಪ್ಪ ದೊಡ್ಡಮನಿ | ೫೫ | ಎಸ್.ಸಿ | ಬನಶಂಕರಿ ಕ್ಷೇತ್ರ | ಒಕ್ಕಲುತನ |
| ೫೩. | ಬಸವರಾಜ ಎಂ.ಎಂ | ೭೦ | ಒಕ್ಕಲಿಗ | ಮಲೆಬೆನ್ನೂರ | ಒಕ್ಕಲುತನ |
| ೫೪. | ದಂಡಪ್ಪ | ೫೦ | ಅಂಬಿಗರು | ಕೆರೂರ | ಒಕ್ಕಲುತನ |
| ೫೫. | ಆರ್.ಎಸ್. ರಾಜಾಪೂರ | ೫೩ | ಎಸ್.ಸಿ | ಕೆರೂರ | ಶಿಕ್ಷಕರು |
| ೫೬. | ಮೌನೇಶ ಬಡಿಗೇರ | ೪೫ | ವಿಶ್ವಕರ್ಮ | ಬಾದಾಮಿ | ಬಡಿಗತನ |
| ೫೭. | ಈರಮ್ಮ | ೬೫ | ಲಿಂಗಾಯತ | ಬಾದಾಮಿ | – |
| ೫೮. | ತುಕಾರಾಮ ಬಡಿಗೇರ | ೫೧ | ವಿಶ್ವಕರ್ಮ | ಬಾದಾಮಿ | ಬಡಿಗತನ |
| ೫೯. | ಶಿವಾನಂದ ಶಾಸ್ತ್ರೀ ಬಸಪ್ಪ | ೪೮ | ಗಾಣಿಗರು | ಮಾಡಲಗೇರಿ | ನಾಟಕಕಾರರು |

| | | | | | |
|---|---|---|---|---|---|
| ೬೦. | ಡಾ. ಸಣ್ಣಸಕ್ಕರಗೌಡ | ೪೦ | ಗಾಣಿಗರು | ಮಾಡಲಗೇರಿ | ಉಪನ್ಯಾಸಕರು |
| ೬೧. | ವಿ.ಎಸ್. ನರಸಿಂಹನ್ | ೪೭ | ಬ್ರಾಹ್ಮಣರು | ಬಾದಾಮಿ | ಎ.ಎಸ್.ಐ ಇಲಾಖೆ |
| ೬೨. | ವಿ.ಬಿ. ಹಿರೇಮಠ | ೫೬ | ಜಂಗಮ | ಬಾದಾಮಿ | ಗ್ರಾಮ ಲೆಕ್ಕಿಗರು |
| ೬೩. | ದೇವೇಂದ್ರಪ್ಪ ಉಮ್ಮಣ್ಣ ಕಂಠಿ | ೬೦ | ದೇವಾಂಗ | ಗುಳೇದಗುಡ್ಡ | ಅರ್ಚಕರು |
| ೬೪. | ಕುಬೇರಪ್ಪ | ೬೬ | ದೇವಾಂಗ | ಗುಳೇದಗುಡ್ಡ | ಅರ್ಚಕರು |
| ೬೫. | ಶಂಕ್ರಪ್ಪ | ೭೦ | ದೇವಾಂಗ | ಗುಳೇದಗುಡ್ಡ | ಅರ್ಚಕರು |
| ೬೬. | ಪಾರ್ವತವ್ವ | ೭೫ | ದೇವಾಂಗ | ಗುಳೇದಗುಡ್ಡ | – |
| ೬೭. | ಕಾಳಪ್ಪ ಯಂಕಪ್ಪ | ೬೦ | ವಿಶ್ವಕರ್ಮ | ಬಾದಾಮಿ | ಬಡಿಗತನ |
| ೬೮. | ತಿಪ್ಪಣ್ಣ | ೬೫ | ವಿಶ್ವಕರ್ಮ | ಬಾದಾಮಿ | ಬಡಿಗತನ |
| ೬೯. | ಲಕ್ಕಪ್ಪ ಭಜಂತ್ರಿ | ೪೫ | ಎಸ್.ಸಿ | ಚೊಳಚಗುಡ್ಡ | ವಾದ್ಯಗಾರ |
| ೭೦. | ಮಹಾದೇವಪ್ಪ ಬಸಪ್ಪ ಭಜಂತ್ರಿ | ೫೫ | ಎಸ್.ಸಿ | ಚೊಳಚಗುಡ್ಡ | ವಾದ್ಯಗಾರ |
| ೭೧. | ನೀಲಕಂಠಪ್ಪ ಬಾಳಪ್ಪ ಬಡಿಗೇರ | ೬೦ | ವಿಶ್ವಕರ್ಮ | ಬಾದಾಮಿ | ಬಡಿಗತನ |

| | | | | | |
|---|---|---|---|---|---|
| ೭೨. | ಪ್ರಕಾಶ ಬಡಿಗೇರ | ೪೬ | ವಿಶ್ವಕರ್ಮ | ಬಾದಾಮಿ | ಬಡಿಗತನ |
| ೭೩. | ನಾರಾಯಣ ಬಡಿಗೇರ | ೫೧ | ವಿಶ್ವಕರ್ಮ | ಬಾದಾಮಿ | ಬಡಿಗತನ |
| ೭೪. | ಗಂಗಪ್ಪ ಮಾನಪ್ಪ ಪತ್ತಾರ | ೫೫ | ವಿಶ್ವಕರ್ಮ | ಚೊಳಚಗುಡ್ಡ | ಪತ್ತಾರಿಕೆ |
| ೭೫. | ದತ್ತಪ್ಪ ಪತ್ತಾರ | ೫೦ | ವಿಶ್ವಕರ್ಮ | ಚೊಳಚಗುಡ್ಡ | ಪತ್ತಾರಿಕೆ |
| ೭೬. | ಮಲ್ಲಪ್ಪ ಸಂಗಪ್ಪ ಹಡಪದ | ೪೫ | ಎಸ್.ಸಿ | ಚೊಳಚಗುಡ್ಡ | ಕ್ಷೌರಿಕ |
| ೭೭. | ಬಸನಗೌಡಾ ಹನಮಂತಗೌಡ | ೮೬ | ಗಾಣಿಗರು | ಮಾಡಲಗೇರಿ | ಒಕ್ಕಲುತನ |
| ೭೮. | ಕಾಳಮ್ಮ | ೮೮ | ವಿಶ್ವಕರ್ಮ | ಚೊಳಚಗುಡ್ಡ | – |
| ೭೯. | ಹೊಳೆಪ್ಪ ಬಡಿಗೇರ | ೪೯ | ವಿಶ್ವಕರ್ಮ | ಬಾದಾಮಿ | ಬಡಿಗತನ |
| ೮೦. | ಶರಣಪ್ಪ ಗಡಗಿ | ೪೮ | ಎಸ್.ಸಿ. | ಚೊಳಚಗುಡ್ಡ | ಜವಾನ |
| ೮೧. | ಸಂಗವ್ವ ಗಡಗಿ | ೪೦ | ಎಸ್.ಸಿ | ಚೊಳಚಗುಡ್ಡ | – |
| ೮೨. | ಮಾನಪ್ಪ ಬಡಿಗೇರ | ೫೦ | ವಿಶ್ವಕರ್ಮ | ಬಾದಾಮಿ | ಬಡಿಗತನ |
| ೮೩. | ಹುಲಿಗೆವ್ವ ಚಲವಾದಿ | ೫೫ | ಎಸ್.ಸಿ | ಬಾದಾಮಿ | – |

| | | | | | |
|---|---|---|---|---|---|
| ೮೪. | ಮುದ್ದವ್ವ ಚಲವಾದಿ | ೫೫ | ಎಸ್.ಸಿ | ಬಾದಾಮಿ | - |
| ೮೫. | ಯಲ್ಲಪ್ಪ ಚಲವಾದಿ | ೬೦ | ಎಸ್.ಸಿ | ಬಾದಾಮಿ | ಪುರಸಭೆ ಸದಸ್ಯರು |
| ೮೬. | ಮಲ್ಲಪ್ಪ ಬಂಡಿವಡ್ಡರ | ೬೦ | ಎಸ್.ಸಿ | ಬಾದಾಮಿ | ಗುತ್ತಿಗೆದಾರರು |
| ೮೭. | ಕೇಶಪ್ಪ ವಡ್ಡರ | ೫೦ | ಎಸ್.ಸಿ | ಬಾದಾಮಿ | ಗೌಂಡಿ |
| ೮೮. | ರಾಮಣ್ಣ ಬಂಡಿವಡ್ಡರ | ೫೩ | ಎಸ್.ಸಿ | ಬಾದಾಮಿ | ಗುತ್ತಿಗೆದಾರರು |
| ೮೯. | ದುರ್ಗಪ್ಪಾ ಬಂಡಿವಡ್ಡರ | ೫೩ | ಎಸ್.ಸಿ | ಬಾದಾಮಿ | ಮೇಸ್ತ್ರೀ |
| ೯೦. | ಚಂದ್ರವ್ವ ಚಲವಾದಿ | ೬೫ | ಎಸ್.ಸಿ | ಬಾದಾಮಿ | - |

